ಪ್ರಭಾತ

ವಿಶೇಷಾಂಕ

Re.1/-

PRABHAT ANNUAL 19[illegible]5

KARDAR PRODUCTIONS

SANJOG

★ CHARLIE
★ WASTI
★ MEHTAB
★ ULLHAS

★

COMING: KARDAR'S

JEEVAN

★ MEHTAB ★ WASTI

GEET

★ NIRMALA ★ SAHU MODAK

EASTERN PICTURES'

ZEENAT

★ NOORJEHAN
★ YAKUB
★ KARAN DIWAN
★ MANJULA

★

DISTRIBUTORS:

KAPURCHAND & CO.,

PHONE: **2382.** **BANGALORE CITY.** GRAMS: **"KAPURCHAND"**

ON THE

"RAJKAMAL" FRONT

Celebrated SILVER, GOLDEN, DIAMOND & Radium Jubilees

AND

STILL MARCHING AHEAD!



SCREEN'S GREATEST ACHIEVEMENTS

RAJKAMAL'S & V. SHANTARAM'S

SHAKUNTALA

(ALL COLOURED COPY)

Starring: **JAYASHREE.**

STILL RUNNING
TO CAPACITY HOUSES
88th Week

AT **SWASTIK**
(OLD PATHE)

THE UNUSUAL SOCIAL HIT

RAJKAMAL'S & V. SHANTARAM'S

PARBAT-PE-APNA DERA

Starring:— VANMALA & ULLHAS.

Creating New Records All Over.



RAJKAMAL'S—INTERNATIONAL EPIC

NEXT-

THE IMMORTAL STORY OF

DR. KOTNIS

(IN ENGLISH & HINDUSTANI)

Directed by:—**V. SHANTARAM.**

ಆರೋಗ್ಯಕರ
ಜೀವನದ
ಸೂಚನೆ
3


ಅಲಕ್ಷತೆಯಿಂದ ನಿಮಗೆ ಹೆಚ್ಚಿನ ಹಾನಿಯುಂಟಾಗುವುದು.



ಸರ್ವ ಸಾಧಾರಣವಾಗಿ ಕೆಮ್ಮನ್ನು ಅಲಕ್ಷಿಸುವ ಹವ್ಯಾಸವಿರುತ್ತದೆ. ಹೆಚ್ಚಿನ ಪಕ್ಷ ಈ ಹವ್ಯಾಸದಿಂದಾಗಿ ಹೆಚ್ಚಿನ ಹಾನಿಯುಂಟಾಗುವುದು. ಕೆಮ್ಮನ್ನು ಹೆಚ್ಚು ಕಾಲ ಅಲಕ್ಷಿಸಿದರೆ ಅದರಿಂದಾಗಿ ಘನ ರೋಗಗಳು ಅಂಟಿಕೊಳ್ಳುವ ಸಂಭವವಿರುವುದು.

“ಗ್ಲಿಕೊಡಿನ್ ಟರ್ಪ್ ವಸಾಕಾ”ವು ಸಾಮಾನ್ಯ ಕೆಮ್ಮನ್ನು ಪರಿಹರಿಸಲು ಉತ್ತಮ ಔಷದವಾಗಿರುವುದೆಂದು ಡಾಕ್ಟರುಗಳಿಂದ ಹೆಚ್ಚಿನ ಶಿಫಾರಸನ್ನು ಪಡೆದಿದೆ. ಇದು ಕ್ಷಣಮಾತ್ರದಲ್ಲಿ ಕೆಮ್ಮಿನ ಮೂಲವನ್ನು ಕಿತ್ತೊಗೆದು ಅದರಲ್ಲಿರುವ ರಸಾಯನಿಕ ಸತ್ವದಿಂದಾಗಿ ಕೆಮ್ಮನ್ನು ಶಾಂತಪಡಿಸಿ ಸಂಪೂರ್ಣ ಗುಣವನ್ನು ಕೊಡುತ್ತದೆ.

ಇಂದ್ರಿಯಗಳ ಅವ್ಯವಸ್ಥೆಯಿಂದ ಕೆಮ್ಮು ಆರಂಭವಾದೊಡನೆ ನಿಮ್ಮ ಡಾಕ್ಟರರ ಸಲಹೆಯನ್ನು ಪಡೆಯಿರಿ.



ಗ್ಲಿಕೊಡಿನ್ ಟರ್ಪ್ ವಸಾಕಾ

ಕೆಮ್ಮನ್ನು ಶಮನ ಮತ್ತು ನಾಶಪಡಿಸುವಕೆ ಸಹಾಯಮಾಡುತ್ತದೆ

ಅಲೆಂಬಿಕ್ ಡಿಸ್ಟ್ರಿಬ್ಯೂಟರ್ಸ್ ಲಿಮಿಟೆಡ್, ಪೊ. ಬಾಕ್ಸ್ ನಂ. 213A, ಬೊಂಬಾಯಿ, 1

ಅಲೆಂಬಿಕ್ ಕೆಮಿಕಲ್ ವರ್ಕ್ಸ್ ಕಂ. ಲಿ., ಬರೋಡಾ.

A.L. 258 KN



ರೂಪರಾಣಿ ವೀಣಾ

ಮತ್ತು

ಮೋತಿಲಾಲ್

ಬಾಬುರಾವ್ ಪೆಂಢಾರಕರ್‌ರೊಡನೆ

ಮಝರ್ ಆರ್ಟ್ ಪ್ರೊಡಕ್ಷನ್ನಿನ

ಮುಸ್ಲಿಂ ಪೋಷಾಕಿನ ಬೆಡಗಿನ ಚಿತ್ರದಲ್ಲಿ

ಪಹ್ಲಿ ನಝರ್

ಸಹಾಯಕ ನಟವರ್ಗ:

ಮುನ್ನಾವರ್ ಸುಲ್ತಾನಾ ★ ಬಿಬ್ಬೊ ★ ನೇಮೋ (ನ್ಯೂ ಥಿಯೇಟರ್ಸ್) ★ ಬಾಲಕ್ ರಾಮ್ ★ ಬುಧೋ ಅದ್ವಾನಿ ★ ವಿಮಲಾದೇವಿ ★

ಮತ್ತೀ ಹೊಸಕಮಲಮುಖಿ—**ಪರ್ವೀನ್.**

ಉತ್ಪಾದಕ—ದಿಗ್ದರ್ಶಕರು:

ಮಝರ್ ಖಾನ್

ಸಹಾಯಕ ದಿಗ್ದರ್ಶಕರು:

ಅಸ್ಲಾಮ್ ನೂರಿ.

ಕಥೆ, ಸಂವಾದ ಮತ್ತು ಗೀತ:

ಡಿ. ಆರ್. ಸಫದಾರ್ ಆಹ್ ಸೀತಾಪುರಿ

ಸಂಗೀತ:

ಅನಿಲ ವಿಶ್ವಾಸ್.

MAZHAR ART PRODUCTIONS

ಪ್ರಾಂತಿಕ ಹಕ್ಕುಗಳಿಗೆ ಬರೆದುಕೊಳ್ಳಿರಿ:

ಮಝರ್ ಆರ್ಟ್ ಪ್ರೊಡಕ್ಷನ್ಸ್,

ನೈಗಾಮ್ ಕ್ರೊಸ್ ರೋಡ್, ದಾದರ್, ಮುಂಬಯಿ 14.

MAZHAR ART PRODUCTIONS

NAIGAUM CROSS RD., DADAR, BOMBAY 14.

Glorious & Gorgeous Pageant of the Colourful-

—DAYS OF INDIA'S GREATEST MOGHUL EMPEROR WHOSE

LIFE IS A SERIES OF FLAMING ADVENTURES AND GOLDEN DEEDS!



—Brought to the Screen with all the Pulsating Vigour & Realism!

MEHBOOB PRODUCTIONS'
SUPER COLOSSAL

Historical spectacle ever to hit the Screen!

HUMAYUN

Starring:

Ashok Kumar, Nargis, Veena, Chandramohan, Shah Nawaz, Majid, K. N. Singh, Himalaywala, Yusuf Effendi and others.

Director: **MEHBOOB.**

Photography: **FAREDOON IRANI.**

Music: **GULAM HYDER.**

Story & Dialogues: Agha Jani Kasmiri.

Story: Prof. WAQIF.

Shortly coming to Capture The All India Screen!

MEHBOOB PRODUCTIONS : : TARDEO, BOMBAY 7.


Coming
Walt Disney's
Full-length Musical Fiesta in Technicolor
"The THREE CABALLEROS"
"GOOD PALS THOUGH WE MAY BE..."
"WHEN SOME LATIN BABY SAYS YES, NO, OR MAYBE..."
"EACH MAN'S FOR HIMSELF!"
Introducing the most important motion picture advancement since sound!
Imagine, if you can, Donald Duck web-footing through the torrid Samba-Jongo with Brazil's exotic Aurora Miranda—and you get the idea.
It's new Disney magic—the first time on any screen! "The Three Caballeros" play, sing, dance and romance in the same scenes with live and lovely senoritas in the gayest, most colorful settings of the lands south of the border!
Sixteen New Hit Tunes in "THE THREE CABALLEROS"
Among them are these tunes you're already hearing on the air→
"THE THREE CABALLEROS"
"YOU BELONG TO MY HEART"
"BAIA" (by the composer of "Brazil")
Ask when "THE THREE CABALLEROS" will play at your theatre.
as 'The Three Caballeros'
DONALD DUCK · JOE CARIOCA · PANCHITO
That Romantic Heartbreaker
That Jiving Jitterbird
That Cocky Mexican Casanova
and, in the flesh,
AURORA MIRANDA · DORA LUZ · CARMEN MOLINA
Brazil's Great Singing and Dancing Star
Mexico's Glamorous Sweetheart of Song
Dancing Senorita from South of the Border
RELEASED THROUGH RKO RADIO PICTURES


Rajkamals Jubilee Masterpieces



A GOLDEN LEAF
FROM THE EPIC LITERATURE

Shakuntala

Directed by · V. SHANTARAM
Starring · JAYASHREE ★ CHANDRAMOHAN



WORK IS TO PRAY
A MESSAGE WITH A PURPOSE

MALI

Directed by · KESHAVRAO DATEY
Featuring · MASTER KRISHNARAO
BABY NALINI ★ AMIR KARNATAKI



'ANKHEN KHOL KE CHAL'

PARBAT PE APNA DERA

A MOST UNUSUAL SOCIAL
EVER BROUGHT TO THE SCREEN
Directed by · V. SHANTARAM
Featuring VANMALA ★ ULLHAS

AND

THE NEXT –
Immortal Story of

Dr. KOTNIS

(AN INTERNATIONAL EPIC)
Directed by · V. SHANTARAM
Featuring · JAYASHREE ★ V. SHANTARAM

WORLD RIGHTS OF THESE OUTSTANDING HITS CONTROLLED BY

NATIONAL FINANCE OF INDIA LTD.,

CHANDNI CHOWK DELHI



ಡಾ॥ ಟಿ. ಮಾಧವಪೈಯವರು.

ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್, ಲಿಮಿಟೆಡ್. ಇದರ ಚೆಯರ್ಮೇನರು ಮತ್ತು ಇತರ ಹಲವು ಸಂಸ್ಥೆಗಳ ಸ್ಥಾಪಕರು.

ಜನಕೆ ಜಾಗೃತಿಯುದಯ-
ವಿದುವೆ ತಾಮಸ ಜಡತೆ
-ಗಳೆವ ವಿಜಯವ ಸಾರ್ವ
ಮೊದಲ ತೂರ್ಯಂ.

ಪ್ರಭಾತ

ಬಗೆಗೆ ಬಾಹ್ಯಜ್ಞಾನ-
ನೀವಾದ್ಯ ಶಕ್ತಿಯಿಂದ,
ಸದಮಲಾಂತಃಕರಣ
ತರುಣ ಪ್ರಭಾತಂ.

ವಿಶೇಷಾಂಕ ೧೯೪೫ ★ ANNUAL 1945

ಉಡುಪಿಯಲ್ಲಿ ಶ್ರೀ ಕೃಷ್ಣನಿಗೆ

(೨೩ ಸಪ್ಟಂಬರ ೧೯೪೪)



ದೇವ ನೀ ಮನುಜನಾದಿಯೊ, ಮನುಜ ನೀನಂತೆ
ದೇವರಾದಿಯೊ, ಅದರ ಗೊಡವೆ ನಾನೊಲ್ಲೆ;
ಸೃಷ್ಟಿಯಲಿ ಸಗುಣಿಸುವ ವಿಭುವದಂ ನಡಪಂತೆ
ವ್ಯಕ್ತಿಸುವನಾಗೆ ನೀನವನೆಂದು ಬಲ್ಲೆ.
ಆದಡಿದನರಿಯೆ, ನಿನ್ನಯ ಧರ್ಮ ಬಾಳ್ವಂತೆ
ಹಿಂದುಗಳನೊಡೆಯ ನೀನೊಂದಾಗಿಸೇಕೆ?
ಅಂದು ಭಾರತ ಕಾದನಿಂದು ಭಾರತವಿಂತೆ
ಅಳಲುತಿರೆ ಬಳಲುತಿರೆ ಸುಮ್ಮನಿರಬೇಕೆ?
ನೀನ್ನೈಸೆ ನುಡಿದೆ, ಧರ್ಮಗ್ಲಾನಿ ಎಂದೆಂದು
ಆದಪುದಧರ್ಮದುಚ್ಛ್ರಾಯವಂದಂದು
ಸುಜನರನು ಪೊರೆಯೆ ಕುಜನರನರೆಯೆ ಬಹೆನೆಂದು?
ಇಂದಲ್ಲಡಾ ನುಡಿಯ ಸಲ್ಲಿಸುವಿ ಎಂದು?
ಬಡಗೋಳ ಕೇಳೆಮ್ಮ ಕಡಗೋಲ ಕನ್ನ,
ಸಡಗರಿಸೊ ಭಾರತವ ಬಿಡುಗಡಿಸೆ ನಿನ್ನ!

ಗೋವಿಂದ ಪೈ.

ನಮ್ಮ ಮಾತು.

★

ಪ್ರಭಾತದ ಈ ವರುಷದ (೧೯೪೫) ವಿಶೇಷಾಂಕವನ್ನು ಆನಂದದಿಂದ ವಾಚಕರಿಗೊಪ್ಪಿಸುವೆವು. ಕಳೆದ ವರುಷದ ವಿಶೇಷಾಂಕದಲ್ಲಿ ನಮಗೆ ನೆರವಾದ ಲೇಖಕರಲ್ಲದೆ ಮತ್ತೆ ಕೆಲವು ಮಹನೀಯರನ್ನು ಇದರಲ್ಲಿ ಕಾಣಬಹುದು. ಇವರೆಲ್ಲರೂ ಕನ್ನಡಿಗರಿಗೆ ಪರಿಚಿತರಾದವರೇ.

ಲೇಖನವೈವಿಧ್ಯದಲ್ಲಿ ಕಳೆದ ವರುಷಕ್ಕಿಂತ ಮಿಗಿಲಾದುದನ್ನೆ ಈ ಬಾರಿ ಕೊಟ್ಟಿರುವೆವೆಂಬ ಭರವಸೆ ನಮಗಿದೆ. ಸಾಮಾನ್ಯವಾಗಿ ಎಲ್ಲ ವಿಷಯಗಳ ಮೇಲೆ ಇದರಲ್ಲಿ ಲೇಖನಗಳಿವೆ.

ಕಾಗದ ನಿಯಂತ್ರಣ ಶಾಸನದ ಬಿಗುಪಿನಿಂದ ಈ ಬಾರಿ ತ್ರಿವರ್ಣ ಚಿತ್ರಗಳನ್ನು ಕೊಡಲಾಗದುದಕ್ಕೆ ವಿಷಾದಿಸುವೆವು.

ಈ ವಿಶೇಷಾಂಕವನ್ನು, ಆನಂದ-ಅಭಿಮಾನ-ಗೌರವಗಳಿಂದ ಡಾ। ಟಿ. ಮಾಧವ ಪೈಯವರ ಹೆಸರಲ್ಲಿ ಸಮರ್ಪಿಸುವೆವು. ಡಾ। ಪೈಯವರು, ಸ್ವಸಾಮರ್ಥ್ಯದಿಂದ, ಸ್ವಸಹಾಯದಿಂದ ಉನ್ನತಿಗೆ ಬಂದ,—ಜನೋಪಯೋಗೀ ಸಂಘಸಂಸ್ಥೆಗಳನ್ನು ಸ್ಥಾಪಿಸಿದ ನಮ್ಮ ಜಿಲ್ಲೆಯ ಒಬ್ಬ ಪ್ರಸಿದ್ಧ ಪುರುಷರು. ಅವರ ಯತ್ನದಿಂದ ಸ್ಥಾಪನೆಗೊಂಡ ಸಂಸ್ಥೆಗಳಿಂದಲೇ ಇಂದು ೮೦೦ಕ್ಕೂ ಮಿಕ್ಕಿದ ಕುಟುಂಬಗಳು ಜೀವನನಿರ್ವಾಹ ಮಾಡುತ್ತಿವೆ. ಕೇವಲ ಶೂನ್ಯದಿಂದೆಂಬಂತೆ ಎದ್ದುಬಂದು, ಅಸಹಾಯಶೂರರಾಗಿ ಮುಂಬರಿದು, ತಮ್ಮ ವರ್ಚಸ್ಸು ಸುತ್ತುಮುತ್ತಲೂ ಭಾಸವಾಗುವಂತೆ ನವೀನವೂ ಅಭಿವೃದ್ಧಿ ಸಾಧಕವೂ ಆಗಿರುವ ಸಂಘ—ಸಂಸ್ಥೆಗಳನ್ನು ನಿರ್ಮಿಸಿ, ಸರ್ವತ್ರವೂ ಹರಡಿ; ಅದರ ಉಪಯೋಗಿತೆಯನ್ನು ಹಂಚುತ್ತ, ಆರಂಭದಲ್ಲಿ ಸಹಜವಾಗಿ ಎದುರಾಗುವ ಟೀಕಾಟೂಕೆಗಳನ್ನು ಅಲಕ್ಷಿಸಿ ತನ್ನ ಕಾರ್ಯವನ್ನು ಮುಂದುವರಿಸಿ ವಿಜಯಿಯಾದ ಸ್ಥಿತಪ್ರಜ್ಞನೊಬ್ಬನನ್ನು ಈ ಸಮರ್ಪಣೆಯ ಮೂಲಕ ಗೌರವಿಸುವುದು ಸಹಜವಿದೆ.


ವಿಶೇಷಾಂಕವೊಂದನ್ನು ಸಮರ್ಪಿಸುವುದಿದು—ದಕ್ಷಿಣ ಭಾರತದಲ್ಲಿ ಹೊಸದು. ಈ ಗೌರವವು ಮೊದಲನೆಯದಾಗಿ ನಮ್ಮಿಂದ ನಮ್ಮ ಜಿಲ್ಲೆಯ ಮಹನೀಯರೊಬ್ಬರಿಗೇ ಸಲುವುದಕ್ಕಾಗಿ ನಮಗೆ ಆನಂದ; ಅಭಿಮಾನ.

ಈ ವಿಶೇಷಾಂಕದಲ್ಲಿ ನೆರವಾದ ಲೇಖಕವರ್ಗಕ್ಕೂ, ಸ್ನೇಹಿತರಿಗೂ, ಸಿಟಿಪ್ರೆಸ್ ಲಿಮಿಟೆಡ್ ಇದರ ಆಡಳಿತಕ್ಕೂ ಪ್ರಭಾತದ ಕೃತಜ್ಞತಾಪೂರ್ವಕ ವಂದನೆಗಳು.

ಸಂಪಾದಕ.

ಆಧುನಿಕ ವಿಶ್ವಾಮಿತ್ರ ಸೃಷ್ಟಿ

(ಲೇಖಕರು: ಶ್ರೀ ಡಿ. ಕೆ. ಭಾರದ್ವಾಜ, ವೈದ್ಯಗುರು, ಬೆಂಗಳೂರು.)



ಶ್ರೀ ಭಾರದ್ವಾಜರವರು ಕನ್ನಡ-ಇಂಗ್ಲಿಷ್ ಉಭಯ ಸಾಹಿತ್ಯಗಳಲ್ಲೂ ಹೇಗೆ ನಿಷ್ಣಾತರೋ ಹಾಗೆಯೇ ವೈದ್ಯವಿಜ್ಞಾನದಲ್ಲಿಯೂ ನುರಿತವರೆಂದು ಕರ್ಣಾಟಕವು ಬಲ್ಲದು. ಅವರು ಅಮುಕ ಔಷಧಗಳಿಂದ ಅಮುಕ ಗುಣವೆಂಬಿಷ್ಟನ್ನು ಅರಿತು ಹೇಳುವುದರಲ್ಲಿ ತೃಪ್ತರಾಗುವವರಲ್ಲ. ಮಾನವಕೋಟಿಯು ನಿರೋಗವಾಗಿರಲು ಪ್ರಕೃತಿಯಿತ್ತ ಸಹಜವಾದ ಆಹಾರ ವಿಹಾರಗಳೇ ಬೇಕು, ಕೃತಕ ಪದಾರ್ಥಗಳು ವರ್ಜ್ಯ ಎಂಬುದನ್ನು ಸಂಕ್ಷೇಪವಾಗಿ ಆದರೆ ಮನಮುಟ್ಟುವಂತೆ ತಮ್ಮದೇ ಆದ ಒಂದು ಪ್ರತ್ಯೇಕ ಶೈಲಿಯಲ್ಲಿ ಇಲ್ಲಿ ಹೇಳಿರುವರು.

"Our present attitude towards disease is out of date. In ten years' time it will be obsolete. It lacks imagination, it is stereotyped and it is based upon a sense of value which is warped. Today sickness must be physically detectable or mentally beyond the border before it is accepted or recognised as sickness. To-morrow, disease which has advanced sufficiently to be physically detectable will be considered merely as a regrettable misfortune which must, of necessity, be catered for."

"...The brains of my profession, the philanthropy of individuals and of Societies, the whole interest, sympathy and organisation of Medical Science is pre-eminently concerned with established disease and with the terminal symptoms of the disordered mind. This attitude towards disease illustrates a lack of vision and appreciation which is nothing less than a sign of mental deficiency ... Far better that philanthropy should hold its hand than that by its misguided benevolence it should support an attitude which, in truth, encourages the suffering of children and the oppression of humanity" .....

Dr. Macpherson Lawrie, M. A., M. B., (London)

ಇದು ವಿಜ್ಞಾನದ ಯುಗ. ವಿಜ್ಞಾನದಿಂದ ರಚನಾತ್ಮಕಕಾರ್ಯವೂ ಆಗಬಹುದು, ವಿನಾಶಕಕಾರ್ಯವೂ ಆಗಬಹುದು. ಆದರೆ ಕೇವಲ ಲೋಕಹಿತ ದೃಷ್ಟಿಯಿಂದ ವೈಜ್ಞಾನಿಕರು ರಚನಾತ್ಮಕಕಾರ್ಯವನ್ನು ಮಾಡಬಲ್ಲರು. ಅವರಲ್ಲಿ ಸ್ವಾರ್ಥದೃಷ್ಟಿಯು ಮೂಡಿದರೆ, ಅವರು ಬಂಡವಾಳಗಾರರ ಅಥವಾ ವ್ಯಾಪಾರಿಕ ದೃಷ್ಟಿಯ ಪ್ರಭುತ್ವದ ಕೈಗೊಂಬೆಗಳಾಗುವರು. ಆಗ ಅವರಿಂದ ನಡೆಯುವುದು ವಿನಾಶಕ ಕಾರ್ಯವೆ. ಈಗ ನಡೆಯುತ್ತಿರುವ ಯುದ್ಧವು ಇನ್ನೂ ಮುಗಿಯದೆ, ಲೋಕಹಿಂಸಕವಾಗಿರುವುದಕ್ಕೆ ಶತ್ರುಮಿತ್ರಪಕ್ಷಗಳ ವೈಜ್ಞಾನಿಕ ವಿನಾಶಕ ಶಕ್ತಿ ಸ್ಪರ್ಧೆಯೆ ಕಾರಣವಾಗಿದೆ ಎಂದು ಹೇಳಿದರೆ ಅತ್ಯುಕ್ತಿಯಾಗದು. ಇವೆರಡು ಪಕ್ಷಗಳಲ್ಲಿಯೂ ಮಿಲಿಯಗಟ್ಟಲೆ ನಿರಪರಾಧಿಗಳಾದ ಮಕ್ಕಳಾದಿಯಾಗಿ ಪ್ರಜೆಗಳು ಈ ಸ್ಪರ್ಧೆಗೆ ಬಲಿಯಾಗುತ್ತಿರುವರು. ಇಂದು ವೈಜ್ಞಾನಿಕರು, ತಂತಮ್ಮ ಪ್ರಭುತ್ವದವರ ಪಕ್ಷವನ್ನು ವಹಿಸಿ, ಸಂಹಾರಕಾರ್ಯದಲ್ಲಿ, ಪರಸ್ಪರ ಪ್ರಜಾವಿನಾಶಕ ಕಾರ್ಯದಲ್ಲಿ ಸಹಾಯಮಾಡುತ್ತಿರುವರು. ಈ ಯುದ್ಧವಾರಂಭವಾಗುವ ಮೊದಲು ಪಾಶ್ಚಾತ್ಯ ವೈಜ್ಞಾನಿಕರು ಬಂಡವಾಳಶಾಹಿಗಳ ಕೈಗೊಂಬೆಗಳಾಗಿ ಕೃತಕ ಆಹಾರವಸ್ತುಗಳನ್ನು ನಿರ್ಮಿಸಲಾರಂಭಿಸಿ, ಬಂಡವಾಳಶಾಹಿಗಳ ಖಜಾನೆಗಳನ್ನು ತುಂಬಿಸಿ, ತಾವೂ ಬೇಕಾದಷ್ಟು ಧನವನ್ನಾರ್ಜಿಸಿದರು. ಈ ವಿಜ್ಞಾನಯುಗದ ಪರಿಣಾಮವಾಗಿ ನಾವೂ ಇಂದು ಕೃತಕ 'ವನಸ್ಪತಿ' ತುಪ್ಪ, ಎಣ್ಣೆಗಳನ್ನೂ, ವಿಟಮಿನ್ ಎ. ಬಿ. ಸಿ. ಡಿ. ಇ. ಇತ್ಯಾದಿ ಆಹಾರಸತ್ವವನ್ನೂ ಉಪಯೋಗಿಸಿ ಜೀವಿಸಬೇಕಾಗಿದೆ. ಇಂದು ಜನಜೀವನದಿಂದ ನೈಸರ್ಗಿಕ ಆಹಾರ ವಿಹಾರಗಳೂ ದೂರವಾಗಿ, ಕೃತಕ ಆಹಾರ ವಿಹಾರಗಳೂ, ಕೃತಕ ಜೀವನವೂ ನಡೆಯುತ್ತಿವೆ. ಇದೇ ಬಗೆಯು ಮುಂದುವರಿದರೆ ಈಗಿನ ಮಾನವನ ಆರೋಗ್ಯವೂ ಆಯುಸ್ಸೂ ಕ್ರಮೇಣ ಕಡಿಮೆಯಾಗುತ್ತ ಹೋಗುವುದೆಂದು ಡಾ। ಮ್ಯಾಕ್ ಫರ್ಸನ್ ಲಾರಿ ಎಂಬ ಲಂಡನ್ ನಗರದ ಕ್ವೀನ್ ಮೇರಿಸ್ ಆಸ್ಪತ್ರೆ

ಯಲ್ಲಿ 'ಸೈಕಲಾಜಿಕಲ್ ಮೆಡಿಸನ್‌ನಲ್ಲಿ ಫಿಜಿಸಿಯನ್'ರು ತಮ್ಮ "Nature Hits Back" ಎಂಬ ಪುಸ್ತಕದಲ್ಲಿ ಬರೆದಿರುವರು. ಅದು ಅತ್ಯಮೌಲ್ಯವಾದ, ಆರೋಗ್ಯ ಭಾಗ್ಯವನ್ನಪೇಕ್ಷಿಸುವ ಪ್ರತಿಯೊಬ್ಬ ಮಾನವನೂ ಓದಬೇಕಾದ ಗ್ರಂಥ. ಲಂಡನಿನ ಮೆಥ್ಯೂನ್ ಎಂಡ್ ಕಂಪೆನಿ, ಲಿಮಿಟೆಡ್, ಅವರು ಅದರ ಪ್ರಕಾಶಕರು, ಬೆಲೆ ೫ ಶಿಲಿಂಗ್‌ಗಳು.

ಪಾಶ್ಚಾತ್ಯ ನಾಗರಿಕತೆಯು ಇಲ್ಲಿ ಪ್ರವೇಶಿಸುವುದಕ್ಕೆ ಮುಂಚೆ ಇಲ್ಲಿ ಇದ್ದ ಆಯುಃಪ್ರಮಾಣವನ್ನು ಈಗಿನ ಆಯುಃ ಪ್ರಮಾಣದೊಂದಿಗೆ ಹೋಲಿಸಿ ನೋಡಿದರೆ ಅದರಿಂದ ನಾವು ಉನ್ನತಿಯ ಕಡೆಗೆ ಸಾಗಿದ್ದೇವೊ, ಅವನತಿಗಿಳಿಯುತ್ತಿದ್ದೇವೆಯೊ ಎಂಬುದು ತಿಳಿಯುವುದು. ಪ್ರಭುತ್ವದವರು ವಣಿಕ್ಕರಾದ್ದರಿಂದ ಈ ದೇಶವನ್ನು ತಮ್ಮ ವಾಣಿಜ್ಯ ಸಾಧನೆಗಾಗಿ ಉಪಯೋಗಿಸಿಕೊಂಡು, ನಮ್ಮಲ್ಲಿ ರಸಪದಾರ್ಥಗಳನ್ನು ಹೊರ ಸಾಗಿಸಲಾರಂಭಿಸಿದರು. ಹಿಂದಿನವರು ರಸಕವಳವನ್ನು ಹೊಡೆಯುತ್ತ, ಗಟ್ಟಿಮುಟ್ಟಾಗಿ, ದುಡಿಯುತ್ತಿದ್ದರು. ಈಗಿನವರಾದ ನಾವು ಕಸವನ್ನೆ ರಸವನ್ನಾಗಿ ಭಾವಿಸಿ ಉಣ್ಣಬೇಕಾಗಿದೆ. ಅದರಿಂದಾಗಿ ನಮ್ಮಲ್ಲಿ ಈಗ ಅನೇಕ ಬಗೆಯ ರೋಗಗಳೂ ಹರಡಿಕೊಳ್ಳುತ್ತಿವೆ. ಆ ರೋಗಗಳಿಗಾಗಿ ವೈದ್ಯರ, ಡಾಕ್ಟರ ಬಳಿಗೆ ಹೋದರೆ ಅವರೂ 'ಬಿ' ವಿಟಮಿನ್ನು ತೆಗೆದುಕೊಳ್ಳಿ, 'ಸಿ' ವಿಟಮಿನ್ನು ಹೆಚ್ಚಾಯಿತು ಎಂದು ಹೇಳಿಬಿಡುವರು. ಆ ವಿಟಮಿನ್‌ಗಳ ವಿಚಾರ ರಸಾಯನ ಶಾಸ್ತ್ರಜ್ಞರು, ಇಲಿ ಮೊಲಗಳ ಮೇಲೆ ಪ್ರಯೋಗ ಮಾಡಿ ಕಂಡುಹಿಡಿದುದು. ಅವುಗಳ ಪ್ರಕೃತಿಗೂ ಮಾನವ ಪ್ರಕೃತಿಗೂ ಎಷ್ಟೋ ಅಂತರವಿದೆ. ಆದರೆ ಅವರ ಹೇಳಿಕೆಗೆ ಎರಡೊ ಮೂರೊ ಪದವಿಗಳನ್ನು ಧರಿಸಿದ 'ವಿಜ್ಞಾನಿಗಳ' ಮುದ್ರೆ ಬಿದ್ದಿರುವುದು. ಅವರು ಬರೆದ ಪುಸ್ತಕಗಳೇ ವೈದ್ಯಶಿಕ್ಷಣಾಲಯದ ಪಠ್ಯಪುಸ್ತಕಗಳು. ಪಠ್ಯಪುಸ್ತಕಗಳೆಂದರೆ ವೇದಗಳೇ ನಮಗೆ. ಪಾಶ್ಚಾತ್ಯ ದೇಶದ ವೈದ್ಯರಂತೆ ನಮ್ಮ ದೇಶದ 'ಡಾಕ್ಟರುಗಳು' ಪ್ರಯೋಗ ಶಾಲೆಗಳನ್ನಿಟ್ಟು ಅಲ್ಲಿ ತಮ್ಮ ರೋಗಿಗಳ ಮೇಲೆ ಈ 'ವಿಟಮಿನ್' ಆದಿಗಳನ್ನು ಪ್ರಯೋಗಿಸಿ ಪರಿಣಾಮವನ್ನು ನೋಡಲು ಅವರಿಗೆ ಸಮಯವೂ ಇಲ್ಲ, ತಾಳ್ಮೆಯೂ ಇಲ್ಲ, ಮನಸ್ಸೂ ಇಲ್ಲ. ಆದ್ದರಿಂದ ದೊಡ್ಡದೊಡ್ಡ ಪಾಶ್ಚಾತ್ಯ ಕಂಪೆನಿಗಳ ಜಾಹಿರಾತೆ ನಮ್ಮ ವೈದ್ಯರಿಗೆ ಮೂಲಾಧಾರವಾಗಿ ಕುಳಿತಿತು. ನಮ್ಮ ದೇಶದ ಶಿಕ್ಷಣ ಕ್ರಮದಲ್ಲಿ ನಮ್ಮ ದೇಹದ ವಿಚಾರವನ್ನು ತಿಳಿದುಕೊಳ್ಳುವಂತಹ ಸಲಕರಣೆಯನ್ನೆ ಪ್ರಭುತ್ವದವರು ನಮಗೆ ಒದಗಿಸಿಲ್ಲ. ಆದ್ದರಿಂದ ಕಾಲೇಜಿನಿಂದ ಹೊರಬಿದ್ದ ಹಸೀ 'ಡಾಕ್ಟರು'ಗಳ, ನಮ್ಮ ರೋಗಗಳಿಗೆ ಹೇಳಿದ ಸಲಹೆಗಳೇ ವೇದವಾಕ್ಯ. ಅದರಿಂದ ಕೆಟ್ಟದಾದರೆ 'ಡಾಕ್ಟರು' ಬುದ್ಧಿವಂತರಲ್ಲ! ಎಂಬ ಆಪಾದನೆ, ರೋಗಿಯು ಅದೃಷ್ಟದಿಂದ ಒಳ್ಳೆಯದಾದರೆ ಮಾತ್ರ ಡಾಕ್ಟರಿಗೇ 'ಕ್ರೆಡಿಟ್ಟು'!

ಇಂತಹ ವಿಚಾರವು ನಮ್ಮ ದೇಶದಲ್ಲಿ ಮಾತ್ರವಲ್ಲ, ಇಂಗ್ಲೆಂಡಿನಲ್ಲಿಯೂ ಇದೆ ಎಂದು ಕಂಡು ಬರುವುದು. ಆದ್ದರಿಂದ ಅಲ್ಲಿ ಡಾ। ಲಾರಿ ಅವರಂತಹರು ತಮ್ಮ ಪ್ರಯೋಗ ಶಾಲೆಗಳಲ್ಲಿ ಈ 'ವಿಟಮಿನ್' ಮೊದಲಾದ ಆಹಾರ ವಿಧಿಯಂತೆ ಕೆಲವು ಪ್ರಯೋಗಗಳನ್ನು ಮಾಡಿ, ಅದರಿಂದ ಕಂಡುಬಂದ ಪರಿಣಾಮವನ್ನು ಕೆಚ್ಚೆದೆಯಿಂದ 'ಬ್ರಿಟಿಷ್ ಮೆಡಿಕಲ್ ಎಸೋಸಿಯೇಷನ್'ಗೆ ಹೆದರದೆ ಜನತೆಯ ಮುಂದೆ ಇಟ್ಟಿದ್ದಾರೆ. ಅವರು ಹೀಗೆ ಬರೆದಿರುವರು:—

"All these experiments teach us one thing, namely the value of fresh and natural food. In fresh and unrefined food there are probably very many necessary substances without which the body cannot prosper. *These vital but, as yet, unexplained substances have been called in general Vitamins. The investigation of them is in its infancy. At present we know little concerning them.* Experiments have demonstrated their existence and that is all. What they are, how many exist and how they perform their duties remain questions for a very distant future.

"But the mere discovery of Vital elements in food and labelling of them as *Vitamins* was too much altogether for Commercial men. *Scientists were paid to try and isolate these mysterious substances and to concentrate them. Ample advertising based upon the prostitution of Scientific findings aroused an enthusiastic interest in "Vitamins."* The net result of this Commercial enterprise was to render the investigation fruitless, in fact it inflated artificial feeding. *Today it is a spoonful of this concoction or a spoonful of another which is said to work miracles on the human frame.* Such a contention is outrageous and absurd. It is the very opposite to what experiments proclaim. The people thirsting after health and vigour have been disgracefully misled. Balance in diet has been ignored, and natural bulk has been

cast aside *while this tinned, bottled* and *concentrated* rubbish circulates with a strengthening appeal throughout the land.''—PP. 5., ''**Nature Hits Back.**''

ಈ ವಾಕ್ಯಗಳಿಂದ ವೈದ್ಯಕೀಯ ಪ್ರಪಂಚದಲ್ಲಿ, ಜನತೆಗೆ ಆರೋಗ್ಯದಾನ ನೀಡುವ ನೆವದಲ್ಲಿ, ವಿಜ್ಞಾನದ ಮುಸುಕಿನಲ್ಲಿ ಜಾಹೀರಾತುಗಾರರ ಬಂಡವಾಳದ ಪ್ರಭೆಯಿಂದ ಯಾವ ರೀತಿ ನಮ್ಮ ದೇಶದ ಹೊನ್ನಿನ ಹೊಳೆಯು ವಿದೇಶೀಯ ಬಂಡವಾಳ ಶಾಹಿಯವರ ಭಂಡಾರಕ್ಕೆ ಹರಿದು ಹೋಗುತ್ತಿರುವುದೆಂದು ವ್ಯಕ್ತವಾಗದಿರದು. ಈ ವಾಕ್ಯಗಳು ವಿಲಾಯತಿಯ ಜನತೆಯ ವಿಚಾರದಲ್ಲಿ ಹೇಳಿದ್ದು. ಆದರೆ ಅದು ಹೆಚ್ಚಾಗಿ ನಮ್ಮ ದೇಶಕ್ಕೆ ಅನ್ವಯಿಸುವಂತಿದೆ.

ಯುದ್ಧದ ದೆಸೆಯಿಂದ ಹಲವು ವಿದೇಶೀಯ ಸಾಮಗ್ರಿಗಳ ಅಭಾವವುಂಟಾದುದರಿಂದ, ಇಲ್ಲಿಯ ಬಂಡವಾಳಗಾರರೆ 'ವನಸ್ಪತಿ' ತುಪ್ಪ, ಎಣ್ಣೆ ಮೊದಲಾದುವುಗಳನ್ನು ರಸಾಯನಿಕ ಪ್ರಯೋಗಗಳಿಂದ ಸೃಷ್ಟಿಸಿ, ಅದರಲ್ಲಿ ಮನುಷ್ಯನ ಆರೋಗ್ಯಕ್ಕೆ ಬೇಕಾದ ಎಲ್ಲ '**ವಿಟಮಿನ್**' ಮತ್ತು '**ಬಲವರ್ಧಕ**' ವಸ್ತುಗಳಿರುವವೆಂದು, ದೊಡ್ಡ ದೊಡ್ಡ ಅಕ್ಷರಗಳಿಂದ ಜಾಹೀರಾತುಗಳಿಂದ ಜನತೆಯ ಮನಸ್ಸನ್ನೆಳೆಯುತ್ತಿರುವರು. ಈ ಬಗೆಯ ಒಂದು 'ವನಸ್ಪತಿ' ತುಪ್ಪವನ್ನು ನಮ್ಮ ಮನೆಯಲ್ಲಿಯೇ ೧೫ ದಿನಗಳ ಕಾಲ ಬಿಡದೆ ಉಪಯೋಗಿಸಿ ನೋಡಲು, ಅದರಿಂದ ನಮ್ಮ ಮನೆಯಲ್ಲಿ ಮಕ್ಕಳು ಮರಿಗಳ ಗಂಟಲು ಕೆಟ್ಟು, ಶರೀರದಲ್ಲಿ ಉಷ್ಣತೆಯೂ ಹೆಚ್ಚಿ, ಕೆಮ್ಮಿಗೆ ಆರಂಭವಾಯಿತು. ಅನಂತರ ಆ ವನಸ್ಪತಿ ತುಪ್ಪವನ್ನು ನಿಲ್ಲಿಸಿ, ಹಿಂದಿನ ಆರೋಗ್ಯ ಸ್ಥಿತಿಗೆ ಬರಲು ಒಂದು ತಿಂಗಳ ಪ್ರಯತ್ನ ಮಾಡಬೇಕಾಯಿತು. ಇದಕ್ಕೆ ಕಾರಣ ದೂರವಾಗಿಲ್ಲ. ನೈಸರ್ಗಿಕ ತೈಲ, ಬೆಣ್ಣೆ, ಹಾಲು, ತುಪ್ಪಗಳಲ್ಲಿರುವ ಪೋಷಕ, ಬಲವರ್ಧಕ ದ್ರವ್ಯಗಳು ಈ ಕೃತಕ, ರಸಾಯನಿಕ ವಸ್ತುಗಳಲ್ಲಿ ಹೇಗೆ ಬರಬೇಕು. ಆದರೂ ಜಾಹೀರಾತು ಜನರನ್ನು ಹೇಗೆ ಮೋಸಗೊಳಿಸುವುದೆಂಬುದಕ್ಕೆ ಡಾ। ಲಾರಿ ಅವರ ಮಾತುಗಳನ್ನು ಉದಾಹರಿಸಲಾಗಿದೆ:—

''Life must live on life. In our food factories we do not manufacture life but death. With our present limited Knowledge we are not justified in meddling with the food which Nature has provided. . (PP-55-6): Now let us turn to the manufacture of artificial food-stuffs. The mass production of manufactured food-stuffs is of fairly recent origin. To-day its consumption is enormous and, although certain products bear searching investigation with impunity-especially, perhaps, certain whole-grain products, and certain egg and cereal combinations which taken at night with warm milk encourages sleep—*much of the total output is pretentious rubbish. It is in many cases, the wanton product of Commercial quackery*, and it supplies a market which owes its whole existence to reckless advertising. Today food-extracts, concentrated food stuffs and Vitamin concoctions enjoy a gigantic sale simply because false and exciting promises bewitch the public.''

ನೈಸರ್ಗಿಕ ಜೀವನವೇ ಆಯುರ್ವೃದ್ಧಿಗೆ ತಳಹದಿ. ಆ ಮಾರ್ಗವನ್ನು ತ್ಯಜಿಸಿ, ಈಗಿನ ನಾಗರಿಕ, ಕೃತಕ ಜೀವನ, ಆಹಾರ ವಿಹಾರಗಳಿಗೆ ಮನಸೋತವರಿಗೆ ಬರುವ ರೋಗ ರುಜೆಗಳ ಅರಿವಾದರೂ ಯಾವ ಪತ್ಯಪುಸ್ತಕದಿಂದಲೂ ತಿಳಿಯುವಂತಿಲ್ಲ. ಆದ್ದರಿಂದ ಡಾಕ್ಟರು, ವೈದ್ಯರು ಹೇಳಿದ್ದೆ ರೋಗ, ಕೊಟ್ಟದ್ದೆ ಔಷಧಿ. ಅದರಿಂದ ಕೆಲವು ಪುಣ್ಯಶಾಲಿಗಳು ತಮ್ಮ ಅದೃಷ್ಟಬಲದಿಂದ ಗುಣಹೊಂದಬಹುದು. ಹಲವರಿಗೆ ಆ ಭಾಗ್ಯವು ದೊರೆಯದು. ಅದಕ್ಕೆ ಕಾರಣವನ್ನು ಈ ಲೇಖನದ ಆರಂಭದಲ್ಲಿಯೆ ಡಾ। ಲಾರಿಯವರ ಮಾತಿನಲ್ಲಿಯೆ ತಿಳಿಸಲಾಗಿದೆ. ಹಾಗೆ ಗುಣ ಹೊಂದದವರು, 'ಹೊಸ ವೈದ್ಯನಿಗಿಂತ ಹಳೇ ರೋಗಿಯೆ ವಾಸಿ' ಎಂಬಂತೆ ತಂತಮ್ಮ ವೇದನೆಗಳಿಗೆ ತಾವೇ ಔಷಧಗಳನ್ನು ಹುಡುಕಿಕೊಳ್ಳಲಾರಂಭಿಸುವರು. ಅಂತಹರಿಗಾಗಿಯೆ ಎಂಬಂತೆ ಸಾವಿರಾರು ಬಗೆಯ ಆಶೆಗಳನ್ನು ತೋರುವ ಸಾವಿರಾರು ಔಷಧಿಗಳ ಜಾಹೀರಾತುಗಳು ಸಿಕ್ಕುವವು. ಅವುಗಳಿಂದ ಮುಂದಾಗುವ ಪರಿಣಾಮಗಳನ್ನು ಅವರು ಲೆಕ್ಕಿಸುವುದಿಲ್ಲ. ನೂರಾರು ಮಂದಿ ಡಾಕ್ಟರುಗಳೇ ಅಂತಹ ಔಷಧಿಗಳ 'ಪ್ರಿಸ್ಕ್ರಿಪ್‌ಶನ್'. ಕೊಡುವಾಗ, ಉಳಿದವರ ಪಾಡೇನು? ಈ ವಿಚಾರವಾಗಿ ಪ್ರಸ್ತಾವಿಸುತ್ತ ಡಾ। ಲಾರಿ ಅವರು ಹೀಗೆ ಹೇಳಿರುವರು:—

''We find associated with this alteration in nutrition an almost universal consumption of corrective drugs . . . . . Today the people of this country buy purgatives, digestive remedies, nerve sedatives and tonics in quantities sufficient to support great industries which pay large dividends. They buy them in quantities sufficient to place a chemist's shop in almost every street and they do not buy these drugs for fun. They buy them to relieve pain and discomfort, to counteract despondency and lassitude or to overcome their nervousness. The use of

ಲಕ್ಷಣದ ನಾಣ್ಯ

(ಲೇಖಕರು: **ಶ್ರೀ। ಕೆ. ವಾಸುದೇವ ಕಿಣಿ, ಬಿ. ಎ., ಎಲ್. ಟಿ.**)

ಲಕ್ಷಣದ ನಾಣ್ಯ—ಸ್ಪರ್ಶಿಸಿದ ಎರಡೂ ಕಡೆಯುವರಿಗೂ ಒಳ್ಳೆದನ್ನೆ ತಂದಿತು. ಅಗೋಚರವಾದ, ಅಸ್ಪಷ್ಟವಾದ ಒಂದು ವಿಷಯುವನ್ನು ನಂಬಬೇಕೆಂದು ಈ ಕತೆಗಾರರು ವಿನಂತಿಸುತ್ತಿಲ್ಲ. "ಲಕ್ಷಣ"ದ ಒಂದು ನಾಣ್ಯದ ಇಂದಿನ ಸೂಕ್ಷ್ಮ ವಿನೋದವನ್ನು ಒಂದು ಘಟನೆಯ ಮೂಲಕ ವಿವರಿಸುವರು. ನೂರರ ನೋಟಿಗಿಂತ 'ಲಕ್ಷಣ'ದ ಪವನನ್ನು ಅಮೂಲ್ಯವೆಂದು ತಿಳಿದ ವೃದ್ಧನು ಡಾಕ್ಟರರಿಗೆ ಕೃತಜ್ಞತೆ ಸಲಿಸಲು ಪವನಿನ ಮೂರು ಪಾಲು ಹಣ ತೆತ್ತನೊ ಅಥವಾ ಬರೇ ಲಕ್ಷಣಕ್ಕಾಗಿಯೇ ಅದನ್ನು ಹಿಂದಕ್ಕೆ ಪಡೆಯಲು ಇಚ್ಛಿಸಿದನೋ—ಅದನ್ನು ವಾಚಕರೇ ಊಹಿಸಬೇಕು. ಅಂತೂ, ಆ ಲಕ್ಷಣದ ನಾಣ್ಯವು ವೃದ್ಧನಿಗೆ ನೂರರ ನೋಟು ಕೊಡ-ವ ಯೋಗ್ಯತೆ ಕೊಟ್ಟಿತು; ಡಾಕ್ಟರರಿಗೆ ಪವನಿನ ಮೂರುಪಾಲು ದೊರಕಿಸಿಕೊಟ್ಟಿತು.

ಸಾಯಂಕಾಲ ನಾನು, ಆಸ್ಪತ್ರೆಯ ಹಿಂದುಗಡೆ ಇರುವ ನನ್ನ ಮನೆಯಲ್ಲಿ ಒಂದು, ಆರಾಮ ಕುರ್ಚಿಯಲ್ಲಿ ಕುಳಿತುಕೊಂಡಿದ್ದೆ. ಆಸ್ಪತ್ರೆಯ ಡಾಕ್ಟರನಾದುದರಿಂದ, ಆಸ್ಪತ್ರೆಯು ನನ್ನ ತಾಬೆಯಲ್ಲಿತ್ತು. ಒಂದು ಎತ್ತಿನ ಗಾಡಿ ಮನೆಯ ಕಡೆಗೆ ಬಂತು. ಗಾಡಿಯಿಂದ, ವಯೋವೃದ್ಧ ಗೃಹಸ್ಥನೊಬ್ಬನು ಇಳಿದು, ಮನೆಯ ಕಡೆಗೆ ಬಂದನು.

ಆರಾಮ ಕುರ್ಚಿಯಲ್ಲಿ ಕುಳಿತಿದ್ದ ನಾನು ಇದ್ದಲ್ಲಿಂದಲೇ —"ಏನು ಬಂದಿರಿ? ಯಾರೊಡನೆ ಕೆಲಸವಿದೆ?" ಎಂದು ಕೇಳಿದೆ.

"ಡಾಕ್ಟರ್ ಸರ್—ನೀವು ಈಗ ನಮ್ಮ ಮನೆಗೆ ಬರಬೇಕು."

"ಈ ಸಂಧ್ಯಾಕಾಲದಲ್ಲಿ! ತಾವು ಇರುವುದೆಲ್ಲಿ?"

"ಇಲ್ಲಿಂದ ಆರು ಮೈಲು ದೂರ ನಮ್ಮ ಮನೆ."

"ಇರಲಿ—ಏನು ಕಾರಣ ನಾನು ಬರಬೇಕಾಗಿದೆ?"

"ಜರೂರು ಒಂದು ಹೆರಿಗೆಯ ಕೇಸು ಇದೆ. ತಾವು ಬಾರದೇ ಅನ್ಯ ಗತಿಯಿಲ್ಲ."

"ಆಸ್ಪತ್ರೆಯಲ್ಲಿ ನರ್ಸ್ ಇದ್ದಾಳೆ. ಕರಕೊಂಡು ಹೋಗಿರಿ. ನಾನು ರಾತ್ರಿಯಲ್ಲಿ ಮನೆಬಿಟ್ಟು ಹೊರಹೋಗುವ ಕ್ರಮವಿಲ್ಲ."

"ಸ್ವಾಮಿ—ದೊಡ್ಡ ಆಪತ್ತು. ಕಠಿಣ ಕಾಯಿಲೆ. ಒಬ್ಬಳೇ ಮಗಳು. ನೀವು ಬಂದು ಪ್ರಾಣ ಉಳಿಸಬೇಕು. ಪ್ರಸವವೇದನೆ ಆರಂಭವಾಗಿದೆ. ಅದರೊಡನೆ ಅಪಸ್ಮಾರ

(21ನೇ ಪುಟದಿಂದ ಮುಂದುವರಿದುದು.)

drugs proves disorder. Their type and general consumption proves the nature and wide distribution of that disorder. Today, it proves conclusively that we are a constipated people, a dyspeptic and tired people and that we have unstable nerves. (PP. 64-5.) .... It is no use blinking at the fact that the health and vigour of our people lies *in the hands of the food manufacturer and the chemist.* The medical profession takes a second place. The prolonged expectancy of life and the eradication of pestilence owe their appearance essentially to sanitation. *But the true doctors of the race are, to-day, these men of commerce.* They will, in the future, either build up a virile and a vital *people or destroy its stamina.* They are the guardians of man—the masters of his destiny and the captains of his fate". (PP. 68-9-9- Ibid). ಈ ಕೊನೆಯ ಮಾತುಗಳಿಂದ ಡಾ। ಲಾರಿಯಂತಹ ಸುಪ್ರಸಿದ್ಧ ವೈದ್ಯರಲ್ಲಿಯೂ ಎಂತಹ ನಿರಾಶೆಯನ್ನು ಹುಟ್ಟಿಸಿದೆ ಎಂದು ವ್ಯಕ್ತವಾಗದಿರದು. ನಮ್ಮವರು ಲೋಕಹಿತೈಕ ದೃಷ್ಟಿಯಿಂದ ಕೆಲಸ ಮಾಡುತ್ತಿರುವ ಡಾ। ಲಾರಿ ಅವರ ಮಾತುಗಳನ್ನು ಗಮನಿಸಿ, ತಮ್ಮಿಂದ ಸಾಧ್ಯವಾದ ಮಟ್ಟಿಗೆ ಈ ಕೃತಕ ಆಹಾರ ವಿಹಾರ, ವಿಟಮಿನ್ನು, ವಿಟಮಿನ್ ವನಸ್ಪತಿಗಳು, ಬಾಜಾರಿನ ಟಾನಿಕ್‌ಗಳು, ವಾಜೀಕರಣಗಳು, ಗಂಡಸುತನದ ಗುಟಿಕೆಗಳು, ಮುಂತಾದುವುಗಳಿಂದ ಮುಂದಾಗುವ ದುಷ್ಪರಿಣಾಮಗಳ ಕಡೆ ಗಮನವಿಟ್ಟು ಅವುಗಳನ್ನು ವರ್ಜಿಸಿ, ಸರಳವಾದ ನೈಸರ್ಗಿಕ ಜೀವನವನ್ನು ನಡೆಸಿದರೆ, ಆಗ ನಾವು ಈಗಿರುವ ವಿಶ್ವಾಮಿತ್ರ ಸೃಷ್ಟಿಯ ತ್ರಿಶಂಕು ಸ್ವರ್ಗವು ತಪ್ಪಿ, ನಿಜವಾದ ದೈವಿಕ ಸ್ವರ್ಗಸುಖವೇ ಇಲ್ಲಿ ಲಭಿಸುವಂತಾಗುವುದು.

ಲೋಕಾಸ್ಸಮಸ್ತಾಃ ಸುಖಿನೋ ಭವಂತು!

ಚೇಷ್ಟೆ. ಮನೆಯಲ್ಲಿ ಎಲ್ಲರೂ ಗಾಬರಿಗೊಂಡಿದ್ದಾರೆ. ನನಗೆ ಹೆದರಿಕೆ. . . . ಏನಾಗುತ್ತದೋ!"

ಗೃಹಸ್ಥನು ಅಪರಿಚಿತನು. ಆದರೂ, ಅವನ ಮಾತುಗಳನ್ನು ಕೇಳಿ ನನ್ನ ಮನಸ್ಸು ಕರಗಿತು. ನಾನು ನರ್ಸನ್ನು ಕರೆದೆ; ಮೂವರೂ ಗಾಡಿಯೇರಿದೆವು. ಸಾಧಾರಣ ರಾತ್ರಿ ಹತ್ತು ಗಂಟೆಗೆ ಅವನ ಮನೆ ಸೇರಿದೆವು.

ಮನೆಯೊಳಗೆ ಎಲ್ಲರ ಮುಖವೂ ಖಿನ್ನವಾಗಿದ್ದಿತು. ಎಲ್ಲರೂ ಚಿಂತೆಯಲ್ಲಿದ್ದರು. ನನ್ನನ್ನು ನೋಡಿ ಅವರಲ್ಲಿ ಆಸೆ ಹುಟ್ಟಿತು. ನಾನು ಹೋದವನೆ ಕಾಯಿಲೆಯ ಹೆಂಗಸನ್ನು ನೋಡಿದೆ. ರೋಗಿಯ ಚಿಹ್ನವು ಆಶಾದಾಯಕವೆಂದು ತೋರಲಿಲ್ಲ. ಪ್ರಾಣ ಉಳಿಸುವುದು – ಅದು ಬರೇ ಆಸೆ. ಆದರೂ ಗೃಹಸ್ಥನು ನನ್ನನ್ನು ಕರೆದುತಂದುದಕ್ಕಾಗಿ ಏನಾದರೂ ಮಾಡಬೇಕು.

ಒಂದು ಇಂಜಕ್ಷನ್ ಕೊಟ್ಟೆ. ಪುನಃ ಪರೀಕ್ಷೆ ಮಾಡಿದೆ. ನರ್ಸನ್ನು ಕರೆದು ರೋಗಿಯ ಬಳಿ ಕುಳ್ಳಿರಿಸಿ, ಹೊರಗೆ ಬಂದೆ. ಒಂದು ಹಾಸಿಗೆಗೆ ಒರಗಿ ಕುಳಿತುಕೊಂಡೆ.

ರಾತ್ರಿ ಮೂರು ಗಂಟೆ ಕಳೆಯಿತು. ರೋಗಿಯ ಕೋಣೆಗೆ ಹೋಗಿ ನೋಡಿದೆ. ಸ್ಥಿತಿಯು ಮೊದಲಿನಂತೇ ಕಠಿಣವಿತ್ತು. ಅಪಸ್ಮಾರದ ಚೇಷ್ಟೆ ಪ್ರಬಲವಾಗಿತ್ತು. ರೋಗಿಗೆ ಈ ಲೋಕದ ಅರಿವಿರಲಿಲ್ಲ. ನಾಡಿಗಳ ಬಡಿದಾಟ ನೋಡಿದೆ. ಇನ್ನೊಂದು ಇಂಜಕ್ಷನ್ ಕೊಟ್ಟೆ. ಗಾಬರಿಗೊಂಡ ಮನೆಯವರಿಗೆಲ್ಲ ಸಮಾಧಾನ ಹೇಳಿದೆ; "ಸ್ವಲ್ಪ ಮಲಗಿಕೊಳ್ಳಿ. ಕೆಲವು ಗಂಟೆಗಳಲ್ಲಿ ಗುಣಹೊಂದುವಳು." ರೋಗಿಯು ಗುಣಹೊಂದುವ ಆಸೆಯು ದೂರ ದೂರವಾಗುತಿತ್ತು. ಈ ನಿಷ್ಫಲ ಯೋಜಕ ಚಿಕಿತ್ಸೆಗೆ ಕುಳಿತುಕೊಳ್ಳಲೇ? . . . ಹೊರಡೋಣವೆನಿಸುತಿತ್ತು.

ಮುಂಜಾನೆ ಕೋಳಿ ಕೂಗು ಕೇಳಿಸಿತು. ಯಜಮಾನನನ್ನು ಕರೆದು, "ಗಾಡಿ ಬೇಕು. ನನಗೆ ಆಸ್ಪತ್ರೆಗೆ ಹೋಗಬೇಕು. ಸಮಯಕ್ಕೆ ಸರಿಯಾಗಿ ತಲಪಬೇಕು" ಎಂದು ತಿಳಿಸಿದೆ. ಯಜಮಾನನು ನನ್ನ ಕಾಲ ಮೇಲೆ ಬಿದ್ದು, ಸದ್ಯಃ ಹೋಗಬಾರದೆಂದು ಬೇಡಿಕೊಂಡನು. ಆದರೆ, ನಿಂತು ಪ್ರಯೋಜನವಿಲ್ಲವೆಂದು ನನಗೆ ತಿಳಿದಿದ್ದಿತು. ನಾನು ಅವನಿಗೆ ಧೈರ್ಯ ಹೇಳಿ, "ಎಲ್ಲಾ ದೇವರ ಕೈಯಲ್ಲಿದೆ. ನನ್ನ ಪ್ರಯತ್ನಗಳನ್ನೆಲ್ಲ ಮಾಡಿಯಾಗಿದೆ. ಗಾಬರಿಗೊಂಡು ಪ್ರಯೋಜನವಿಲ್ಲ. ದೇವರ ದಯೆಯಿಂದ ಸಕಾಲದಲ್ಲಿ ಹೆರಿಗೆಯಾಗುವುದು. ಹೆದರಬೇಡಿ. ನಾವು ಹೇಳಿದಾಕ್ಷಣ ಯಾವ ರೋಗವೂ ನಿಲ್ಲುವುದಿಲ್ಲ. . . . . ಇನ್ನು ಸ್ವಲ್ಪ ಔಷಧಿ ಕಳುಹಿಸಿ ಕೊಡುತ್ತೇನೆ. ನರ್ಸ್ ಇಲ್ಲಿ ಇರಲಿ" ಎಂದು ಹೇಳಿ, ಗಾಡಿ ಹತ್ತಿದೆ. ಅಸಾಧ್ಯ ಸಂಕಟವೆಂದೇ ನಾನು ಬೇಗ ಹೊರಟೆ.

ಆಸ್ಪತ್ರೆಗೆ ಹೋಗಿ ಕೆಲಸಕ್ಕೆ ಕೈ ಹಚ್ಚಿದೆ. ಹತ್ತು ಗಂಟೆ ಸಮಯಕ್ಕೆ ನರ್ಸಿನ ಮುಖ ಕಂಡ ಹಾಗಾಯಿತು. ಬಾಗಿಲಲ್ಲಿ ಅವಳ ಮುಖ ನೋಡಿ, "ಏನು ಸಮಾಚಾರ? ಎಲ್ಲವೂ ಮುಗಿಯಿತೇ?" ಎಂದೆ.

"ಡಾಕ್ಟರ್ ಸಾರ್,—ಅಪಸ್ಮಾರ ಚೇಷ್ಟೆಗಳು ನೀವು ಹೋದ ಅರ್ಧ ತಾಸಿನಲ್ಲಿ ನಿಂತವು. ಒಂದು ಗಂಟೆಯೊಳಗೆ ಹೆರಿಗೆಯಾಯಿತು. ಈಗ ರೋಗಿಯು ಗುಣವಾಗಿರುವಳು. ನಿತ್ರಾಣ ಇದೆ. ಮಗು ಗಂಡು. ನಾನು ಸಂಜೆಗೆ ಹೋಗುತ್ತೇನೆ. ಯಜಮಾನಗೃಹಸ್ಥರು ಸಾಯಂಕಾಲ ಬರುವರು" ಎಂದಳು.

o o o

ಸಂಜೆ ಹೊತ್ತಿಗೆ ಎಂದಿನಂತೆ ಮನೆಯ ಚಾವಡಿಯಲ್ಲಿ ಆರಾಮ ಕುರ್ಚಿಯಲ್ಲಿ ಕುಳಿತಿದ್ದೆ. ಗೃಹಸ್ಥನು ಬಂದು ನಸುನಗುತ್ತ ನಮಸ್ಕರಿಸಿದನು. ಸಂತೋಷ ವಾರ್ತೆ ಹೇಳಿ ನನ್ನ ಕೈಯಲ್ಲಿ ಒಂದು ಪವನು ಇಟ್ಟನು. ಬಳಿಕ ಅವನು ಗಾಡಿಯೇರಿ ಮನೆಕಡೆ ಹೊರಟನು. ನಾನು ಮನೆಯೊಳಕ್ಕೆ ಹೋಗಿ ನನ್ನಾಕೆಯನ್ನು ಕರೆದು, ಅವಳ ಕೈಯಲ್ಲಿ ಪವನಿಟ್ಟೆನು.

o o o

ಕೆಲವು ದಿನ ದಾಟಿದವು. ಒಂದು ದಿನ ಅದೇ ಗೃಹಸ್ಥನು ಪುನಃ ಮನೆಗೆ ಬಂದನು. ಕ್ಷೇಮಸಮಾಚಾರ ವಿಚಾರ ಮುಗಿದಾದ ಬಳಿಕ–"ಸ್ವಾಮಿ–ಸಿಟ್ಟು ಮಾಡಬಾರದು. ನೀವು ನಮ್ಮ ಮನೆಯನ್ನು ಉಳಿಸಿದವರು. ನಾನು ಮೊನ್ನೆ ನಿಮಗೆ ಒಂದು ಪವನು ಕೊಟ್ಟಿದ್ದೆ. ಈ ನೋಟನ್ನು ಸ್ವೀಕರಿಸಿ ಆ ಪವನನ್ನು ನನಗೆ ಮರಳಿ ಕೊಡಿರಿ. ಅದು ಲಕ್ಷಣದ ನಾಣ್ಯ. ಹಿರಿಯರು ಕೊಟ್ಟ ನಾಣ್ಯ. ಬೇರೆ ಉಪಾಯವಿಲ್ಲದೆ ಅಂದು ನಿಮಗೆ ಕೊಟ್ಟೆ" ಎಂದನು.

ಈ ಮಾತುಗಳನ್ನು ಕೇಳಿ ನನಗೆ ಹಿಡಿಯಲಾರದ ಸಿಟ್ಟು ಬಂತು. ಆದರೆ ಅವನ ಮಾತನ್ನು ತಿರಸ್ಕರಿಸಲು ಮನಸ್ಸು ಬರಲಿಲ್ಲ. ಮನನೊಂದು ಒಳಗೆ ಹೋಗಿ ನನ್ನಾಕೆಯನ್ನು ಕರೆದು, ಆ ಪವನು ಕೇಳಿದೆ. ಅವಳು ಸಿಟ್ಟಿನಿಂದ ಕಿಡಿಕಿಡಿಯಾದಳು.

"ಇರಲಿ—ಮನುಷ್ಯನು ಕೃತಘ್ನನು. ಆ ರಾತ್ರೆ ಜಾಗರವಿದ್ದು ಅವನ ಮಗಳ ಪ್ರಾಣ ಉಳಿಸಿದ್ದೆ. ಈಗ ಹತ್ತುರೂಪಾಯಿಯ ನೋಟು ಕೊಡುತ್ತಾನೆ. ಬರೇ ಹತ್ತು, ನನ್ನ ಕಷ್ಟಕ್ಕೆ! ಪವನು ಕೊಡು. ನೋಟು ಒಳಗಿಡು. ಇವರ ಕೆಲಸವಾದ ಬಳಿಕ ಇವರಿಗೆ ಆಸೆ ಹುಟ್ಟುತ್ತದೆ. ಎಲ್ಲವೂ ಮರೆತು ಹೋಗುತ್ತದೆ. ಮುಂದಕ್ಕೆ ಅನುಭವ ದೊರಕಿತು" ಎಂದೆ.

ನನ್ನಾಕೆ ಪವನು ತಂದುಕೊಟ್ಟಳು. ನೋಟನ್ನು ನೋಡಿದಳು. ನನ್ನ ಕಡೆಯೂ ನೋಡಿದಳು. "ನೋಡಿ–ಇದು ಎಷ್ಟರ ನೋಟು? ನೂರು ರೂಪಾಯಿ. ನೀವು ಎಷ್ಟೆಂದು ನೋಡದೆ ಸಿಟ್ಟಾದಿರಿ. ಚಿಂತೆಯಿಲ್ಲ. ಪವನು ಕೊಡಿರಿ, ಒಳ್ಳೇ ಜನ, ಸುಮ್ಮನೆ ಅವರ ಮೇಲೆ ಸಿಟ್ಟು ಮಾಡಿದಿರಿ" ಎಂದಳು.

ಲಕ್ಷಣದ ನಾಣ್ಯವಹುದು! ಹತ್ತು ನೂರಾಯಿತು.

★ ಸ್ತ್ರೀ ಶಿಕ್ಷಣ ★

(ಲೇಖಕರು: ಡಾ। ಎಮ್. ಆರ್. ಭಟ್, ವೈದ್ಯಗುರು.)



ಶ್ರೀ। ಎಮ್. ಆರ್. ಭಟ್‌ರವರು ಅಸಾಧಾರಣ ವಾಗ್ಮಿಗಳು; ಅದರಂತೆ ಲೇಖನ ಕಲೆಯಲ್ಲಿಯೂ ಅವರ ಕೈ ಹಿಂದಿಲ್ಲ. ಅವರೊಡನೆ ಒಂದು ತಾಸು ಸಂಭಾಷಿಸಿದರೆ ಅದೊಂದು ಅಮೂಲ್ಯ ಅನುಭವನಾಗುವುದು; ನೂರಾರು ವಿಚಾರಗಳು ದೊರೆವಷ್ಟು ವಿಚಾರವಾಹಿನಿಯನ್ನು ಹೊರಗೆಡಹುವರು. ಇಲ್ಲಿ, ಶ್ರೀ। ಭಟ್ಟರು ಬರೆದ ಲೇಖನವು ಕೇವಲ ಸೂಚನೆಗಳ ರೂಪದಲ್ಲಿದೆ. ಸ್ತ್ರೀ ಶಿಕ್ಷಣವೆಂತಿರಬೇಕೆಂಬ ಸುದೀರ್ಘ ಉಪನ್ಯಾಸಕ್ಕೆ ತೊಡಗಲು ಇಲ್ಲಿಯ ಸ್ಥಳ ಸಂಕೋಚತೆ-ಸವಯಾಭಾವಗಳು ತೊಡಕಾಗಿವೆಯೆಂಬುದನ್ನರಿತೇ ಶ್ರೀಯುತರು ಇಂಗಿತದ ರೂಪದಲ್ಲಿ ಇದನ್ನು ಬರೆದಿದ್ದಾರೆ. ಇದರಲ್ಲಿನ ಪ್ರತಿಯೊಂದು ಸೂಚನೆಯೂ ಅರ್ಥಗರ್ಭಿತವಾಗಿದೆ.

ಬುದ್ಧಿಯ ಸಮಾಕರ್ಷದಿಂದ ಉಂಟಾಗುವ ಉತ್ಕರ್ಷ ಮತ್ತು ವಿಕಾಸವೇ ನಿಜವಾದ ವಿದ್ಯೆಯು. ಈ ವಿದ್ಯೆಯ ಸಂಪಾದನೆಯೇ ಶಿಕ್ಷಣವು. ಸ್ತ್ರೀ ಸಮಾಜಕ್ಕೆ ಕೊಡಬೇಕಾದ ಶಿಕ್ಷಣವೇ ಸ್ತ್ರೀ ಶಿಕ್ಷಣವು.

ಸ್ತ್ರೀ ಶಿಕ್ಷಣವೇ ಸ್ತ್ರೀ ಸಮಾಜದ ಅಲಂಕಾರ, ಅವರ ಸೊಬಗು. ಸ್ತ್ರೀಯರಿಗೆ ಬೇಕಾದ ದಾಂಪತ್ಯಜೀವನದ ಸುಖದ ಮೂಲ ಹೇತುವು. ಅದೇ ಸಾಮಾಜಿಕ ಸುಖದ ಆಧಾರ ಸ್ತಂಭ.

ಸ್ತ್ರೀ ಶಿಕ್ಷಣವು ಸ್ತ್ರೀಯರಿಗೆ ತಮ್ಮ ದಾಂಪತ್ಯಜೀವನದಲ್ಲಿ ಸುಖಮಯವಾದ ವಿಲಾಸವನ್ನು ಕೊಟ್ಟು, ಸಂಸಾರ ಯಾತ್ರೆಯನ್ನು ಸುಗಮರೀತ್ಯಾ ಒಯ್ಯಬೇಕು; ಮಾತ್ರವಲ್ಲ, ದಾಂಪತ್ಯಜೀವನದಲ್ಲಿ ಸಹಭಾಗಿಗಳಾಗಿ ಮೆರೆಯುವ ಸುಖವೇ ಜನಾಂಗದ ಮೇಲ್ಮೆಗೆ ಕಾರಣಭೂತವು. ದಾಂಪತ್ಯಜೀವನದ ಸುಖಕ್ಕೆ ಬೇಕಾದ ದಾಂಪತ್ಯವಿಜ್ಞಾನ, ಗೃಹಿಣೀ ಧರ್ಮಕ್ಕೆ ಬೇಕಾದ ವೈಜ್ಞಾನಿಕ ಪಾಕಶಾಸ್ತ್ರ, ಸಂಗೀತ ಶಾಸ್ತ್ರ ಮತ್ತು ಸಂಗೀತ ಕಲೆಗಳ ಅರಿವು, ಹಲವು ತರದ ಔದ್ಯೋಗಿಕ ಮನೆಕೈಗಾರಿಕೆಗಳ ವಿದ್ಯೆ— ಇವೇ ಮೊದಲಾದುವುಗಳಲ್ಲಿ ಕೊಡುವ ಶಿಕ್ಷಣವೇ ಸ್ತ್ರೀ ಶಿಕ್ಷಣವು. ಪತಿಯೊಡನೆ ಸಾಂಸಾರಿಕ ಸುಖಗಳಲ್ಲಿ ಸಹಭಾಗಿಗಳಾಗಿ ಮೆರೆಯಲು ಸಮರ್ಥರನ್ನಾಗಿ ಮಾಡುವ ವಿದ್ಯೆಯೇ ಸ್ತ್ರೀ ಶಿಕ್ಷಣವು.


ಇಂದಿನ ಲಲನೆಯು ಪತಿಯ ಭಾವನಾಪ್ರಪಂಚದ ಇಂಗಿತಜ್ಞ (responsive to the husband)ಳಾಗಬೇಕು. ತನ್ನ ದಾಂಪತ್ಯಜೀವನದ ಜವಾಬ್ದಾರಿಯನ್ನು ತಿಳಿದವಳಾಗಬೇಕು. ಇದರಿಂದಲೇ ಪತಿಯ ಮತ್ತು ಸಂತತಿಯ ಆರೈಕೆ ಬಾಳುಗಳನ್ನು ಪ್ರಗತಿಪರವಾಗಿ ನಡಿಸುವರೆ ಸಮರ್ಥಳಾಗುವಳು. ದಾಂಪತ್ಯಜೀವನವನ್ನು ತ್ಯಜಿಸದೆ ಅಥವಾ ಧಿಕ್ಕರಿಸದೆ, ಸನ್ನಿವೇಶ ಸಮಾವೇಶಗಳಿಂದ ಕೂಡಿಕೊಂಡು ಒಮ್ಮನಸ್ಕಳಾಗಿ ದಾಂಪತ್ಯಜೀವನದ ಧರ್ಮಪ[ಥ]ದಲ್ಲಿ ಸತ್ಯಸ್ವರೂಪಿಣಿಯಾಗಿ (a woman of varacity) ನಡೆಯುವವಳಾಗಬೇಕು. ಇದಲ್ಲದೆ, ಚಾತುರ್ಯದಿಂದಲೂ ಹುರುಪಿನಿಂದಲೂ ಉತ್ತೇಜನದಿಂದಲೂ ಗೃಹಿಣೀಧರ್ಮ[ವ]ವನ್ನು ಆಚರಿಸಿ ಗೃಹಸುಖವನ್ನು ಸ್ವರ್ಗಸುಖವನ್ನಾ[ಗಿ] (life of vivacity) ರಚಿಸುವವಳಾಗಬೇಕು. ಈ ಲಲ[ನೆ]ಯಲ್ಲಿ ಈ ಮೇಲಿನ ನಾಲ್ಕು ತತ್ವಗಳ ಅರಿವನ್ನು ಹುಟ್ಟಿಸು[ವ]ವುದೇ ಶಿಕ್ಷಣದ ಧ್ಯೇಯವು. ಈಗಿನ ಲಲನೆಯು ಇಂದಿನ ದಾಂಪತ್ಯಜೀವನದ ವೈಯುಕ್ತಿಕ ದೃಷ್ಟಿಯಿಂದ ಜೀವಿಸು[ವ]ವುದು ಮಾತ್ರವಲ್ಲ. ಸಾಮಾಜಿಕ (ಜಾಗತಿಕ) ಸುಖ ವಿಕಾಸ[]ಗಳಿಗೋಸ್ಕರ ಜೀವಿಸುವುದು ಅತ್ಯಗತ್ಯ. ಸುತ್ತುಮುತ್ತಲಿರುವ ನೆರೆಯವರ ದುಃಖಗಳನ್ನು ಹೋಗಲಾಡಿಸಿ, ಅಂಥವರಿಗೆ ಬೇಕಾದ ಸುಖ ಸೌಕರ್ಯ ಸೌಲಭ್ಯಗಳನ್ನು ಒದಗಿಸಿಕೊಡಲು ತನ್ನ ಧನವನ್ನು ಸಮರ್ಪಿಸಿ ನಿವೇದಿಸಿ ಇರುವ ಲಲನೆಯನ್ನು ಈಗಿನ ಸ್ತ್ರೀ ಶಿಕ್ಷಣವು ದೊರಕಿಸಬೇಕು. ಆರ್ತಜನರ ಸಂಕಷ್ಟವನ್ನು ತನ್ನದೆಂದು ಭಾವಿಸಿ, ತನ್ನ ತನುಮನಧನಗಳನ್ನು ಆರ್ತರಿಗೆ ಸಮರ್ಪಿಸುವವಳಾಗಬೇಕು. ಆರ್ತರ ದುಃಖಮಯ ಪ್ರಪಂಚವನ್ನು ಸುಖಮಯವನ್ನಾಗಿ ಮಾಡುವವಳಾಗಬೇಕು. ಇದೇ ಸ್ತ್ರೀ ಶಿಕ್ಷಣದ ಗಮ್ಯವು. ಈತಳೇ ಸ್ತ್ರೀಯರಿಗೆ ಆದರ್ಶಸ್ವರೂಪಿಯಾಗಬೇಕು. ಇದರಿಂದಲೇ ಜನಾಂಗದ ಮಹಿಮೆಯೂ ಏಳಿಗೆಯೂ ನಮ್ಮ ಕಣ್ಣಮುಂದೆ ಬಂದು ನರ್ತಿಸುವವು.

ಈಗಿನ ಲಲನೆಯು ವಿಜ್ಞಾನ ಪ್ರಜ್ಞಾನ ಕಲಾ ಶಾಸ್ತ್ರಗಳಲ್ಲಿ ವಿಶಾರದೆಯಾಗಿ, ಅದರಲ್ಲಿ ನವೀನ ಪರಿಶೋಧನ ಅನ್ವೇಷಣೆಗಳನ್ನು ಮಾಡಿ, ಅಂತಹ ಪರಿಶೋಧಿಸಿದ ಅನ್ವೇಷಿಸಿದ ಜ್ಞಾನವನ್ನು ಜನತೆಯ ಸುಖ ಸೌಭಾಗ್ಯಗಳಿಗೆ ಧರ್ಮಾರ್ಥವಾಗಿ ಒದಗಿಸಿಕೊಡುವುದೇ ಈ ಶಿಕ್ಷಣದ ಧೋರಣೆಯಾಗಬೇಕು. ಇದರಿಂದ ಜನಾಂಗದ ವೈಜ್ಞಾನಿಕ

(25ನೇ ಪುಟಕ್ಕೆ ಮುಂದುವರಿದಿದೆ)

ಜಿಪುಣ ಶಿಖಾಮಣಿಗಳು

(ಲೇಖಕರು: **ಶ್ರೀ ಕೆ. ವಿಠ್ಠಲ ಶೆಣೈ**, ಬಿ.ಎ., ಎಲ್. ಟಿ., ಉಡುಪಿ.



ಜಿಪುಣರು ಎಲ್ಲ ದೇಶಗಳಲ್ಲೂ ಎಲ್ಲ ಕಾಲಗಳಲ್ಲೂ ನಗೆಯ ವಸ್ತುಗಳಾಗಿರುವರು. ನಗೆ ಬರೆಹಗಾರರು ಜಿಪುಣರನ್ನು ವಿನೋದ ವಾಹನಗಳಾಗಿಯೇ ಗಣಿಸಿರುವರು. ವಿನೋದದಲ್ಲಿ ಇಂಗ್ಲಿಷ್ ಲೇಖಕರು ಸಾಮಾನ್ಯ ಎಲ್ಲ ದೇಶೀಯರನ್ನೂ ಚಿತ್ರಿಸಿರುವರು. ಬಹುಶಃ ಫ್ರೆಂಚರನ್ನು ಬಿಟ್ಟು ಮಿಕ್ಕುಳಿದವರೆಲ್ಲ ಇಂಗ್ಲಿಷ್ ಬರೆಹಗಾರರ ವ್ಯಂಗ್ಯ ಲೇಖನಗಳಿಗೆ ಸಿಲುಕಿರುವರು. ಅವರಲ್ಲಿ ಸ್ಕಾಟ್‌ಲೆಂಡಿನವರೂ ಆಯರ್ಲೆಂಡಿನವರೂ ಹೆಚ್ಚು. ಈ ಲೇಖಕರು ಸ್ಕಾಟರ ಮತ್ತು ಐರಿಷರ ಕುರಿತಾದ ಕೆಲವು ವಿನೋದಕರ ಘಟನೆಗಳನ್ನೆತ್ತಿ ಜೋಡಿಸಿ ಇಲ್ಲಿ ಕೊಟ್ಟಿರುವರು. ಈ ವಿನೋದ ಘಟನೆಗಳು ಸ್ಕಾಟರ ಜಿಪುಣತನದ ವೈಚಿತ್ರ್ಯಗಳನ್ನು ಬಣ್ಣಿಸಿ ವಿನೋದವನ್ನೊದಗಿಸುವಾಗ, ಜಿಪುಣತ್ವದ ಹಿಂದೆ ಅಡಗಿರುವ ಹುಚ್ಚು ಮಿತವ್ಯಯದ ವಿಚಾರವನ್ನೂ ಹೇಳುತ್ತಿವೆ.

ಸ್ಕಾಟ್‌ಲೆಂಡಿನಲ್ಲಿ ಎಬರ್ಡೀನ್ ಎಂಬ ಪಟ್ಟಣವಿದೆ. ಅಲ್ಲಿಯ ಒಬ್ಬ ಕಟುಕನಿಗೆ ಅವನ ಗಿರಾಕಿಯೋರ್ವನಿಂದ ಒಂದು ದಿನ ಬಂದ ಕಾಗದ ಈ ತೆರನಾಗಿತ್ತು:—

—"ಅಯ್ಯಾ ನೀವು ವಾಡಿಕೆಯಂತೆ ನಮ್ಮಲ್ಲಿಗೆ ಕಳುಹಿಸಿ ಕೊಡುತ್ತಿದ್ದ ಪೆನ್ನಿಬೆಲೆಯ ಮಾಂಸವನ್ನು ಇಂದು ಕಳುಹಿಸಿ ಕೊಡುವುದು ಬೇಡ. ಕಾರಣ, ನಮ್ಮಲ್ಲಿ ಒಂದು ಬೆಕ್ಕು ಇಲಿಯನ್ನು ಕೊಂದಿರುತ್ತದೆ." ಅದೇ ಊರಿನ ಜೆಕ್‌ಮೆಕ್‌ಟಾವಿಶ್ ಎಂಬವನು ಯುದ್ಧ ಪ್ರಾರಂಭವಾದಂದಿನಿಂದ ಇಷ್ಟರ ವರೆಗೆ ತನ್ನ ಮನೆಯಿಂದ ಹೊರಬಿದ್ದಿಲ್ಲವಂತೆ. ಏಕೆಂದರೆ, ಮಂದ ದೃಷ್ಟಿಯು ಅವನಿಗೆ ಜನರ ಬಗಲಲ್ಲಿರುವ ಗೇಸ್‌ಮಾಸ್ಕು(ಮುಖವಾಡ)ಗಳು ತೆರಿಗೆ ವಸೂಲಿಯುವನ ಚೀಲಗಳಂತೆ ತೋರಿ ಹೆದರಿಕೆಯುಂಟಾಗುವುದಂತೆ.

ಮೇಲಿನವೆರಡು, ಕೆಲವು ತಿಂಗಳ ಹಿಂದೆ, ಇಂಗ್ಲೆಂಡಿನ ಒಂದು ವಿನೋದ ಪತ್ರಿಕೆಯಲ್ಲಿ ಅಚ್ಚಾದ 'ಗಾಳಿ ವಾರ್ತೆ'ಗಳು ಮತ್ತು ಸ್ಕಾಟ್‌ಲೆಂಡಿನ ಜನರ ಕಡೆಗೆ ಇಂಗ್ಲಿಷರು ಎಸೆದ ನಂಜು ಮಾತುಗಳೆಂದು ನಾವು ತಿಳಿಯತಕ್ಕುದು. ಲೋಕದಲ್ಲಿ ಕೃಪಣರ ದೇಶವೆಂದು ಎಷ್ಟೋ ಕಾಲದಿಂದ ನಿಂದೆಗೆ ಗುರಿಯಾದುದು ಸ್ಕಾಟ್‌ಲೆಂಡ್. ಆ ಸ್ಕಾಟ್‌ಲೆಂಡಿನ ನಿವಾಸಿಗೆ ಜಿಪುಣತನವೆಂಬುದು ಹುಟ್ಟುಗುಣವೆಂದು ಪ್ರತೀತಿಯಿದೆ. ಅದುಕಾರಣ, ಪಾಶ್ಚಾತ್ಯ ದೇಶಗಳಲ್ಲಿ 'ಸ್ಕಾಟ್' ಮತ್ತು 'ಜಿಪುಣ' ಎಂಬಿವು ಸಮಾನ ಅರ್ಥ ಸೂಚಿಸುವ ಪದಗಳಾಗಿವೆಯೆಂದರೂ ತಪ್ಪಾಗದು. ಇಂಗ್ಲಿಷ್ ಪತ್ರಿಕೆಗಳಲ್ಲಂತೂ ಸ್ಕಾಟ್ ಜನರ ಕೃಪಣತ್ವವನ್ನು ಕುರಿತು ಇಷ್ಟರ ವರೆಗೆ ಅಚ್ಚಾದ ಕಾಲ್ಪನಿಕ ವಿನೋದ ಕತೆಗಳಿಗೆ

[24ನೇ ಪುಟದಿಂದ ಮುಂದುವರಿದುದು.]

ಜ್ಞಾನವು ವೃದ್ಧಿಗೊಂಡು, ಜನಾಂಗವು ಜಗತ್ತಿನ ಪ್ರಾಗತಿಕ ಜನಾಂಗಗಳಲ್ಲಿ ಮೆರೆಯುವುದು.

ಈಗಿನ ಪ್ರಪಂಚವು ಔದ್ಯೋಗಿಕವಾಗಿದೆ. ಅನೇಕ ಮನೆಕೈಗಾರಿಕೆಗಳನ್ನು ಹಳ್ಳಿಹಳ್ಳಿಗಳಲ್ಲಿ ನಿರ್ಮಿಸಿ ವೈಯುಕ್ತಿಕ ಮಾತ್ರವಲ್ಲ ಪ್ರಾದೇಶಿಕ ಆರ್ಥಿಕ ಸ್ಥಿತಿಯನ್ನೂ ವೃದ್ಧಿಗೊಳಿಸಲು ಸ್ತ್ರೀಯರು ಕಂಕಣಬದ್ಧರಾಗಿ ಮುಂದೆ ಬರಬೇಕು. ಇದರಿಂದಲೇ ಇಡೀ ಜನಾಂಗದ ಸಾಂಪತ್ತಿಕ ಸ್ಥಿತಿಯು ವೃದ್ಧಿಯಾಗುವುದು. ಯಮರಾಜನಂತೆ ನರ್ತಿಸುವ ಹಿಂದುಸ್ಥಾನದ ದಾರಿದ್ರ್ಯವು ದಹಿಸಲ್ಪಡುವುದು. ಇಂತಹ ಲಲನೆಯನ್ನು ಈಗಿನ ಶಿಕ್ಷಣವು ತಯಾರಿಸಬೇಕು. ವೈಯುಕ್ತಿಕ ಸಂಪತ್ತನ್ನು ಮಾತ್ರ ಅಭಿವೃದ್ಧಿಗೊಳಿಸಿ ಬರೇ ಧನವಂತಳಾಗಿ ಮೆರೆಯುವಂತೆ ಅವಳನ್ನು ಬಿಡದೆ, ಪ್ರಾದೇಶಿಕ ಸಂಪತ್ತಿಯನ್ನು ವೃದ್ಧಿಗೊಳಿಸುವುದು ಸ್ತ್ರೀ ಶಿಕ್ಷಣದ ಮೂಲ ಹೇತುವಾಗಬೇಕು.

ಆಧ್ಯಾತ್ಮಿಕ ಜ್ಞಾನದ ಪ್ರತಿಬಿಂಬ ಸ್ವರೂಪಿಣಿಯನ್ನಾಗಿ ಮಾಡುವುದೂ ಈ ಸ್ತ್ರೀ ಶಿಕ್ಷಣದ ಮುಖ್ಯ ಧ್ಯೇಯವಾಗಬೇಕು. ಸ್ತ್ರೀ ಶಿಕ್ಷಣದಿಂದ ಹಿಂದೆ ಹೇಳಿದ ನಾಲ್ಕು ವರ್ಗಗಳ ಲಲನೆಯರು ಮುಂದೆ ಬಂದು ದೇಶಸೇವಾತತ್ಪರರಾಗಬೇಕು.

ಇದು ಮಾತ್ರವಲ್ಲ ವೈಯುಕ್ತಿಕ, ಕೌಟುಂಬಿಕ, ಸಾಮಾಜಿಕ, ಶಾರೀರಿಕ, ಮಾನಸಿಕ ಮತ್ತು ಆಧ್ಯಾತ್ಮಿಕ ಸಂಪತ್ತುಗಳನ್ನು ಅಭಿವೃದ್ಧಿಗೊಳಿಸಿ, ಇವುಗಳಿಗೋಸ್ಕರ ದುಡಿದು ದೇಶಹಿತಕ್ಕೋಸ್ಕರ ಕಂಕಣಬದ್ಧರಾಗಿ ಜೀವಿಸುವ ಸ್ತ್ರೀಯರು ಈ ಸ್ತ್ರೀ ಶಿಕ್ಷಣದ ಗಮ್ಯಗಳು.

ಇಡೀ ಜಗತ್ತಿನ ಜೀವನವು ವೈಯುಕ್ತಿಕ ಮಾತ್ರವಲ್ಲ ಸಾಮಾಜಿಕ ಮತ್ತು ಜಾಗತಿಕವಾಗಿದೆ. ದೇಶದ ಮಹಿಮೆ. ಏಳಿಗೆ ಮತ್ತು ಪ್ರಗತಿಗೋಸ್ಕರ ದುಡಿಯುವ ಸ್ತ್ರೀಯರನ್ನು ತಯಾರಿಸುವುದೇ ಸ್ತ್ರೀ ಶಿಕ್ಷಣದ ಗಮ್ಯವಾಗಬೇಕು.

ಲೆಕ್ಕವೇ ಇಲ್ಲ. ಅವುಗಳನ್ನು ಕೇಳಿದಾಗ ಹೊಟ್ಟೆ ಹುಣ್ಣಾಗುವಷ್ಟು ನಗದ ರಸಿಕನೂ ಇರಲಾರ. ಅಂತಹ ಕಲ್ಪಿತ ವಿನೋದ ಕತೆಗಳಲ್ಲಿ ಕೆಲವನ್ನು ಈ ಬರೆಹದಲ್ಲಿ ಆಯ್ದು ಕೊಡಲಾಗಿದೆ.

ಸ್ಕಾಟ್ ಜನರನ್ನುದ್ದೇಶಿಸಿ ಬರೆಯಲ್ಪಟ್ಟ ಕಲ್ಪಿತ ಕಥಾನಕಗಳಲ್ಲಿ ಹಲವು ಅವರ ನಿತ್ಯ ಜೀವನದಲ್ಲಿ ತೋರಿ ಬರುವ ಮಿತವ್ಯಯದ ಸಾದೃಶ್ಯಗಳಾಗಿವೆಯಷ್ಟೇ. ಉದಾ: ಮ್ಯಾಕ್ ಎಂಬ ಒಬ್ಬ ಸ್ಕಾಟನು ಒಂದು ದಿನ ಆಫೀಸಿಗೆ ತಡವಾಗಿ ಬಂದನಂತೆ. ಆಗ ಅವನ ಮೇಲಧಿಕಾರಿಯು ಸಿಟ್ಟಾಗಿ 'ಹೀಗೆ ತಡವಾಗಿ ಬರುವುದೆಂದರೇನು!' ಎಂದು ಗದರಿಸಿದನಂತೆ. ಅದಕ್ಕುತ್ತರವಾಗಿ ಮ್ಯಾಕನು, 'ಅಯ್ಯಾ, ಏನು ಮಾಡಲಿ? ನಾನು ಟೂತ್‌ಪೇಸ್ಟಿನ (ಹಲ್ಲುಜ್ಜುವ ಅಂಟಿನ) ನಳಿಗೆಯನ್ನು ಒತ್ತಿದಾಗ ಒಂದಿಷ್ಟು ಹೆಚ್ಚಾಗಿ ಹೋಯಿತು. ಹೊರಗೆ ಬಂದ 'ಪೇಸ್ಟ'ನ್ನು ಪುನಃ ಒಳಗೆ ತುಂಬಿಸಲಿಕ್ಕೆ ಸರಿ ಅರ್ಧ ತಾಸು ಹಿಡಿಯಿತು' ಎಂದನಂತೆ.

ಮತ್ತೊಬ್ಬ ಸ್ಕಾಟನು, ಒಂದು ದಿನ, ಉದ್ಯೋಗದ ನಿಮಿತ್ತ ಮನೆಯಿಂದ ಹೊರಡುವಾಗ ತನ್ನ ಹೆಂಡತಿಯನ್ನು ಉದ್ದೇಶಿಸಿ 'ಅಲ್ಲ ಕಣೆ, ಡೋನಾಲ್ಡನ ವಿಷಯ ಜಾಗರೂಕಳಾಗಿರು. ಅವನೆತ್ತ ಕಡೆಯೂ ನೋಡದಿರುವಾಗ, ಕನ್ನಡಕವನ್ನು ತೆಗೆದಿಡಲು ಮರೆಯಬೇಡ' ಎಂದು ಎಚ್ಚರಿಕೆಯಿತ್ತನಂತೆ. ಹೀಗೆ, ಸ್ಕಾಟರ ಮಿತವ್ಯಯ ಬುದ್ಧಿಯು ಕೆಲವು ಸಲ 'ಹುಚ್ಚಾಟ'ವೆನಿಸುವಷ್ಟು ಮುಂದುವರಿಯುವುದೆಂದು ನಮಗೆ ತೋರುವುದು.

ಕಾಸಿಗೆ ಕಾಸು ಗಂಟಿಕ್ಕುವುದರಲ್ಲಿ ಸ್ಕಾಟು ಜನರಷ್ಟು ಪ್ರವೀಣರು ಮತ್ತಾರೂ ಇಲ್ಲವಂತೆ. ಕಾಸು ಉಳಿಯುವುದೆಂದಾದರೆ ಅವರಿಗೆ ಪ್ರೀತಿಯ ಹೆಂಡತಿಯೂ ಬೇಡ; ಜೀವವೇ ಬೇಡವೆಂದರೂ ತಪ್ಪಾಗದು. ಉದಾ: ಒಬ್ಬ ಕಂಟ್ರಾಕ್ಟುದಾರನ ಕೈಕೆಳಗೆ ಎಳೆ ಪ್ರಾಯದ ಒಬ್ಬ ಸ್ಕಾಟು ಕಲ್ಲು ಕಟ್ಟುವ ಕೆಲಸ ಮಾಡುತಿದ್ದನು. ಒಂದು ಸಲ, ಅಕಸ್ಮಾತ್ತಾಗಿ ಅವನು ಮಾಡಿನಿಂದ ಕೆಳಗೆ ಬಿದ್ದನು. ಆಗ ಅವನ ಮೇಲ್ವಿಚಾರಕನು ಅಲ್ಲಿಗೆ ಬಂದು, 'ಪೆಟ್ಟುಗಿಟ್ಟು ಆಗಲಿಲ್ಲವಷ್ಟೆ! ನಿನ್ನ ಪುಣ್ಯ' ಎನ್ನಲು—'ಪುಣ್ಯ! ಪುಣ್ಯ! ಈ ಪುಣ್ಯಕ್ಕೆ ಬೆಂಕಿ ಬಿತ್ತು. ನನ್ನ ಸೊಂಟಕ್ಕೆ ಬಿಗಿದ ಚರ್ಮದ ಪಟ್ಟೆ ತುಂಡಾದುದು ತೋರುವುದಿಲ್ಲವೇ?' ಎಂದು ಹೇಳುತ್ತ, ಆ ತರುಣ ಸ್ಕಾಟನು ಸಿಟ್ಟಿನಿಂದ ಕೆಂಡವಾದನಂತೆ.

ಅದೇ ಸ್ವಭಾವದ ಮತ್ತೋರ್ವ ಸ್ಕಾಟನು, ಒಂದು ದಿನ, ಜೋಲು ಮೋರೆಯೊಂದಿಗೆ ಮನೆಗೆ ಹಿಂದೆರಳಿದಾಗ, ಹೆಂಡತಿಗೆ ಗಂಡನ ವರ್ತನೆಯ ಅರ್ಥವಾಗಲಿಲ್ಲ.

'ಏನಿದು? ನೀವೇಕೆ ಹೀಗಿದ್ದೀರಿ?' ಎಂದು ಪ್ರಶ್ನಿಸಿದಳು.

'ಅಯ್ಯೋ ದೇವರೆ, ನಮ್ಮಷ್ಟು ದುರದೃಷ್ಟಶಾಲಿಗಳು ಈ ಪ್ರಪಂಚದಲ್ಲಿ ಯಾರೂ ಇಲ್ಲ' ಎಂದು ಗಂಡನು ತನ್ನ ತಲೆ ಬಡಿದುಕೊಂಡನು.

'ಯಾಕೆ! ನೀವೇಕೆ ಹೀಗಾಗಿದ್ದೀರಿ?' ಎಂದು ಪುನ ಆಕೆ ಆಶ್ಚರ್ಯ ಸೂಚಿಸಿದಳು.

'ಆಚೆ ಬೀದಿಯಲ್ಲೊಬ್ಬ ಔಷಧ ವ್ಯಾಪಾರಿಯು ತನ ಔಷಧಗಳನ್ನೆಲ್ಲ ಅರ್ಧ ಬೆಲೆಗೆ ಮಾರುತ್ತಾನೆ. ನಾವೆಲ್ಲ ಹುಶಾರಾಗಿ ಬಂದ ಮೇಲೆ ನಮಗಿದು ಗೊತ್ತಾಗಬೇಕೆ! ಎಂದ ಗಂಡ.

ಎಬರ್ಡೀನಿನ ಒಬ್ಬ ನಿವಾಸಿಕನಿಗೆ ಮಾಗಿಯೆಂಬ ಹೆ ರಿನ ಮಗಳಿದ್ದಳು. ಅವಳಿಗೆ ಆಗಾಗ ಅಜೀರ್ಣವಾಗುವ ದಿತ್ತು. ಕಾರಣ, ಹಲ್ಲುಗಳು ಸವೆಯುತ್ತವೆಂದು ಹೆ ರಿಯೇ ಅವಳು ಆಹಾರವನ್ನು ಜಗಿಯದೆ ನುಂಗುವುದಿತ್ತು ಸ್ವಲ್ಪ ಸಮಯದಲ್ಲಿ ಅವಳ ಹಲ್ಲಿಗೆ ಹುಳುಕು ಹಿಡಿಯಿತು ಆ ಹಲ್ಲನ್ನು ಕಿತ್ತು ತೆಗೆಯಲು ಅವಳು ದಂತವೈದ್ಯರಲ್ಲಿ ಹೋದಳು.

'ಹಲ್ಲು ತೆಗೆದುದಕ್ಕೆ ತಮ್ಮ ಫೀಸೆಷ್ಟು?' ಎಂದು ಆಕೆ ದಂತವೈದ್ಯರೊಡನೆ ಕೇಳಿದಳು.

'ಹಲ್ಲೊಂದಕ್ಕೆ ಅರ್ಧ ಕ್ರೌನು. ಗೇಸ್ ಬಗ್ಗೆ ಐದು ಶಿಲ್ಲಿಂಗುಗಳು' ಎಂದರು ವೈದ್ಯರು.

'ಗೇಸ್ ಯಾಕೆ? ಹಗಲು ಹೊತ್ತಿನಲ್ಲೇ ತೆಗೆಯ ಬಾರದೆ?' ಎಂದಳು ಮಾಗಿ.

ಹಲ್ಲು ಕೀಳುವಾಗ ನೋವಾಗದಂತೆ ಗೇಸ್ ಉಪ ಯೋಗಿಸುವುದೆಂದೂ, ಐದು ಶಿಲ್ಲಿಂಗ್ ಕೊಟ್ಟರೂ ಅದರಿಂದ ಅಷ್ಟೇ ಪ್ರಯೋಜನವಿದೆಯೆಂದೂ ವೈದ್ಯರು ವಿವರಿಸಿದರು.

'ನನಗೆ ನಿಜವಾಗಿ ಒಂದಿಷ್ಟೂ ನೋವಾಗಬಾರದೆಂದು ನಿಮ್ಮ ಅಭಿಪ್ರಾಯವೇ? ಹಾಗಾದರೆ, ನನಗೆ ಪ್ರಜ್ಞೆ ತಪ್ಪಿ ದಾಗ ತಾನೆ ನೀವು ನನ್ನ ಕಿಸೆಯಿಂದ ಹಣ ತೆಗೆಯಬೇಕಾ ಗುವುದು' ಎಂದು ಮಾರ್ನುಡಿದಳು ಮಾಗಿ.

ಮತ್ತೆ ಕೆಲವು ಇಂತಹ ಕಲ್ಪಿತ ಕತೆಗಳನ್ನೋದುವಾಗ, ಸ್ಕಾಟರು ಕೆಲವು ಪುಡಿಕಾಸುಗಳಿಗಾಗಿ, ಇಲ್ಲವೇ ಅಲ್ಪಸ್ವಲ್ಪ ಚಿನ್ನಕ್ಕಾಗಿ ತಮ್ಮ ಹೆಂಡಂದಿರನ್ನು ಯಾ ದಾಂಪತ್ಯ ಸುಖ ವನ್ನೇ ತ್ಯಜಿಸಲು ಸಿದ್ಧರಿರುವರೆಂಬಂತೆ ಭಾಸವಾಗುವುದು. ದೃಷ್ಟಾಂತಕ್ಕಾಗಿ, ಸ್ಕಾಟ್‌ಲೆಂಡಿನಲ್ಲಿ ಒಂದು ಕಡೆ ಒಬ್ಬ ಜಾದುಗಾರನು, ನೆರೆದ ಜನಸಂದಣಿಯ ಮುಂದೆ ತನ್ನ ಜಾದು ವಿದ್ಯೆಯನ್ನು ಪ್ರದರ್ಶಿಸುತಿದ್ದನು.

'ನೋಡಿರಿ! ನನ್ನ ಆಟಗಳಲ್ಲಿ ಅತಿ ಚಮತ್ಕಾರಿಕ ವಾದುದನ್ನೀಗ ತೋರಿಸುತ್ತೇನೆ' ಎಂದು ಹೇಳುತ್ತಾ, ಅವನು ಕಪ್ಪು ಬಣ್ಣದ ಒಂದು ದೊಡ್ಡ ಪೆಟ್ಟಿಗೆಯನ್ನು ತೆರೆದು, ಅದರಲ್ಲಿ ಎಲ್ಲಿಯೂ ತೂತಿಲ್ಲವೆಂಬುದನ್ನು ತೋರಿಸಿ ಅದರಲ್ಲಿ ಓರ್ವ ಹೆಂಗುಸನ್ನು ಮಲಗಿಸಿ, ಬಾಗಿಲನ್ನು ಮುಚ್ಚಿ ದನು. ಕೆಲವು ನಿಮಿಷಗಳ ತರುವಾಯ, ಎಂದರೆ ಜಾದು ಗಾರನು ತನ್ನ ಕೋಲನ್ನು ಪೆಟ್ಟಿಗೆಯ ಸುತ್ತಲೂ ಕೆಲವು ಬಾರಿ ತಿರುಗಿಸಿ, ಪೆಟ್ಟಿಗೆಯನ್ನು ತೆರೆದಾಗ ನೋಡುವುದೇನು! ಅದರಲ್ಲಿ ಎರಡು ಬಿಳಿ ಕುಂದಿಲಿಗಳ ಹೊರತು ಮತ್ತೇನೂ ಇರಲಿಲ್ಲ.

ಪ್ರದರ್ಶನವು ಮುಗಿದ ಬಳಿಕ ಪ್ರೇಕ್ಷಕರಲ್ಲೊಬ್ಬನು ಮೆಲ್ಲಗೆ ಆ ಜಾದುಗಾರನ ಸಮೀಪಕ್ಕೆ ಬಂದು, 'ಅಯ್ಯಾ! ಆ ಹೆಂಗುಸಿನ ಬದಲಿಗೆ ನನ್ನ ಹೆಂಡತಿಯನ್ನು ಮಲಗಿಸಿ ಆ ಆಟವನ್ನು ಮಾಡಿ ತೋರಿಸಲಿಕ್ಕಾದೀತೇ?' ಎಂದು ಪ್ರಶ್ನಿಸಿದನು.

ಅದಕ್ಕೆ, ಜಾದುಗಾರನು ನಕ್ಕು ತಮಾಷೆ ಮಾಡುತ್ತ "ಹುಂ. ಆಗದೆ ಏನು? ಆದರೆ ನಿಮಗೆ ನಿಮ್ಮ ಹೆಂಡತಿಯನ್ನು ಕಳೆದುಕೊಳ್ಳಬೇಕೆಂದು ಅಷ್ಟು ಆತುರವಿದೆಯೆ?" ಎಂದು ಕೇಳಿದನು.

'ಹಾಗೇನೂ ಅಲ್ಲ. ನನ್ನ ಮಗ ಜಾಕ್ ತನ್ನ ಹುಟ್ಟುಹಬ್ಬಕ್ಕೆ ಎರಡು ಬಿಳಿ ಕುಂದಿಲಿಗಳನ್ನು ತಂದುಕೊಡಬೇಕೆಂದು ಹಟ ಹಿಡಿದಾಗ, ನಾನು ಆದೀತೆಂದು ಮಾತು ಕೊಟ್ಟಿದ್ದೆ' ಎಂದು ಆ ಸ್ಕಾಟ್ ಉತ್ತರ ಕೊಟ್ಟ.

ಮಗುದೋರ್ವ ಸ್ಕಾಟನಿಗೆ ವಿವಾಹವಾಗುವುದೆಂದು ನಿಶ್ಚಯವಾಗಿತ್ತು. ಆದರೆ ಹಾಗೆ ನಿಶ್ಚಯವಾದ ಬಳಿಕ ಏನೋ ಕಾರಣದಿಂದ ಅವರಿಬ್ಬರೊಳಗೆ ಮನಸ್ತಾಪವುಂಟಾಯಿತು. ಕೆಲವು ದಿನಗಳ ನಂತರ ಅವನ ಒಬ್ಬ ಮಿತ್ರನು 'ಏನಯ್ಯಾ, ನಿಮ್ಮಿಬ್ಬರೊಳಗಿನ ಜಗಳವು ರಾಜಿಯಾಗಿ, ವಿವಾಹವಾಗುವುದೆಂದು ತೀರ್ಮಾನವಾಯಿತಂತಲ್ಲವೆ?' ಎಂದು ಸ್ಕಾಟನೊಡನೆ ವಿಚಾರಿಸಿದನು. ಅದಕ್ಕೆ ಆ ಸ್ಕಾಟನೆಂದನು: 'ಹೌದು. ಮತ್ತೇನು ಮಾಡಲಿ! ಆಕೆ ಇತ್ತೀಚೆಗೆ ತುಂಬಾ ಅಡ್ಡ ಬೆಳೆದಿದ್ದಾಳೆ. ನಿಶ್ಚಯದ ಸಮಯದಲ್ಲಿ ಅವಳ ಬೆರಳಿಗೆ ತೊಡಿಸಿದ ಚಿನ್ನದ ಉಂಗುರವನ್ನು ಹಿಂದೆ ತೆಗೆಯಲಿಕ್ಕಾಗದುದರಿಂದ ಮದುವೆಗೆ ಒಪ್ಪಲೇಬೇಕಾಯಿತು.'

ಸ್ಕಾಟ್ ಜನರು ತಮ್ಮ ವ್ಯಾಪಾರ ವಹಿವಾಟುಗಳಲ್ಲಿ ಎಷ್ಟು ಕಸಿವಿಸಿ ಮಾಡುತ್ತಾರೆಂಬುದಕ್ಕೂ ಹಲವಾರು ಕತೆಗಳಿವೆ. ಉದಾ: ಎಬರ್ಡೀನಿನ ಒಬ್ಬ ಮಹಾನುಭಾವನು ಒಬ್ಬ ಕಟುಕನ ಅಂಗಡಿಗೆ ಹೋಗಿ ತನಗೊಂದು ಕುರಿಯ ತಲೆ ಬೇಕೆಂದನು. ಕಟುಕನು ತಾನು ಕೊಲ್ಲಲು ಸಾಲು ಸಾಲಾಗಿಟ್ಟಿದ್ದ ಕುರಿಗಳನ್ನು ತೋರಿಸಿ, 'ಇದರಲ್ಲಿ ನಿಮಗೆ ಬೇಕಾದುದನ್ನು ಆರಿಸಿರಿ. ಅದರ ತಲೆಯನ್ನು ಕಡಿದು ಕೊಡುತ್ತೇನೆ' ಎಂದನು. ಗಿರಾಕಿಯು ಬಹಳ ಹೊತ್ತು ಅಂಗಡಿಯ ಮೂಲೆಯಿಂದ ಮೂಲೆಗೆ ಅನೇಕ ಸಲ ಆಚೆ ಈಚೆ ಹೋಗಿ ಯಾವುದೋ ಒಂದು ಕುರಿಯನ್ನು ಆರಿಸಿ, 'ಆ ಕುರಿಯಾದೀತು. ಆದರೆ ನೋಡಿ-ಅದರ ತಲೆಯನ್ನು ಕಡಿಯುವಾಗ ಬಾಲಕ್ಕೆ ಆದಷ್ಟು ಸಮೀಪವಾಗುವಂತೆ ಕಡಿಯಿರಿ' ಎಂದು ಬೇಡಿದ.

ಹಣ ಉಳಿಸುವ, ಯಾ ಲಾಭ ಗಳಿಸುವ ಉಪಾಯಗಳನ್ನು ಶೋಧಿಸುವುದರಲ್ಲಿ ಸ್ಕಾಟರ ಸ್ವಯಂ ಕರ್ತೃತ್ವ ಶಕ್ತಿಯನ್ನು ವರ್ಣಿಸುವ ಕೆಲವು ವಿನೋದ ಕತೆಗಳು ಎಂತಹ ನನ್ನೂ ನಗೆಗಡಲಲ್ಲಿ ತೇಲಿಸದಿರಲಾರವು. ಉದಾ: ಒಬ್ಬ ಸ್ಕಾಟನ ಹತ್ತಿರ ಮಾರಾಟದ ಒಂದು ನಾಯಿ ಇತ್ತು. ಇಂಗ್ಲೆಂಡಿನವನೊಬ್ಬನು ಆ ನಾಯಿಗೆ ೪ ಪೌಂಡುಗಳ ಬೆಲೆ ಕಟ್ಟಿದನು. ಅಮೇರಿಕದವನೊಬ್ಬನು ತಾನು ೫ ಪೌಂಡು ಕೊಡುವೆನೆಂದನು. ಆದರೂ ಸ್ಕಾಟನು ಆ ನಾಯಿಯನ್ನು ಇಂಗ್ಲೆಂಡಿನವನಿಗೇನೇ ಮಾರಿದನೆಂದು ಕೇಳಿದಾಗ ಯಾರಿಗೆ ಆಶ್ಚರ್ಯವಾಗಲಿಕ್ಕಿಲ್ಲ!

'ನಾನು ಒಂದು ಪೌಂಡು ಹೆಚ್ಚಿಗೆ ಕೊಡುತ್ತೇನೆಂದರೂ ನೀನು ಆ ನಾಯಿಯನ್ನು ಅವನಿಗೇಕೆ ಕೊಟ್ಟೆ?' ಎಂದು ಅಮೇರಿಕದವನು ಕೇಳಿದನು.

'ಓಹೊ, ಕಾರಣವಿಲ್ಲವೆಂದು ಯೋಚಿಸಿದಿರಾ? ನಾಯಿಯು ಇಂಗ್ಲೆಂಡಿನಿಂದಾದರೆ ನಡೆದುಕೊಂಡೇ ಪುನಃ ನನ್ನಲ್ಲಿಗೇ ಬಂದೀತೆಂಬ ಆಸೆಯಿದೆ. ಆದರೆ ಅಟ್ಲಾಂಟಿಕ್ ಸಾಗರವನ್ನು ದಾಟಿ ಹಿಂದೆ ಬರಲಾರದಷ್ಟೆ?' ಎಂದು ಆ ಸ್ಕಾಟ್ ಉತ್ತರ ಕೊಟ್ಟನು.

ಒಬ್ಬ ಸ್ಕಾಟನ ಹೆಂಡತಿಗೆ, ಮದುವೆಯಾದ ಕೆಲವು ತಿಂಗಳುಗಳಲ್ಲೇ ಭಯಂಕರವಾದೊಂದು ಉದರ ವ್ಯಾಧಿಯ ಬಗ್ಗೆ ಶಸ್ತ್ರಚಿಕಿತ್ಸೆಯಾಯಿತು. ಚಿಕಿತ್ಸೆಯು ಯಶಸ್ವಿಯಾಗಿ ಕೊನೆಗೊಂಡ ಒಂದೆರಡು ದಿನಗಳಲ್ಲಿ ಡಾಕ್ಟರರು ಅವರ ಮನೆಗೆ ಬಂದರು. ಡಾಕ್ಟರರು ಸಾರಾಯಿ ಕುಡಿದು ಮೈಮರೆತಾಗ, 'ನಾನು ಮಾಡಿದ ಶಸ್ತ್ರಚಿಕಿತ್ಸೆಯು ಎರಡು ಮೂರು ವರ್ಷ ಮುಂಚೆಯೇ ಆಗಬೇಕಾಗಿತ್ತು' ಎಂದರು.

ಇದನ್ನು ಕೇಳಿದ ಸ್ಕಾಟನು ಕೂಡಲೇ ಚಿಕಿತ್ಸೆಯ ಬಗ್ಗೆ ಡಾಕ್ಟರರು ಕೊಟ್ಟಿದ್ದ ಬಿಲ್ಲನ್ನು (ಖರ್ಚಿನ ಪಟ್ಟಿಯನ್ನು) ತನ್ನ ಮಾವನಿಗೆ ಕಳುಹಿಸಿ ಕೊಟ್ಟನಂತೆ.

ಇನ್ನೊಬ್ಬ ಸ್ಕಾಟ್ ಮಹಾಶಯನು ಒಂದು ದಿನ ಒಂದು ತಂತಿ ಕಳುಹಿಸಲಿಕ್ಕೆಂದು ತಂತಿಕಚೇರಿಗೆ (ಟೆಲಿಗ್ರಾಫ್ ಆಫೀಸಿಗೆ) ಹೋದನು. ತಂತಿ ಬಿಡುವವರೊಡನೆ ವಿಚಾರಿಸಿದಾಗ, ಕಳುಹಿಸಬೇಕಾದ ಸಂದೇಶದ ಪ್ರತಿಯೊಂದು ಶಬ್ದಕ್ಕೆ ಹಣ ತೆರಬೇಕಾಗುವುದೆಂದೂ ಕಳುಹಿಸುವವನ ಹೆಸರು ಮಾತ್ರ ಧರ್ಮಾರ್ಥವಾಗಿ ಹೋಗುವುದೆಂದೂ ಅವನಿಗೆ ತಿಳಿಯಿತು. ಸ್ಕಾಟನು ತುಸುಹೊತ್ತು ಆಲೋಚಿಸಿ, "ಹಾಗಾದರೆ ಹೀಗೆ ಮಾಡಿ — ನನ್ನ ಹೆಸರು 'ನಾನು ಶನಿವಾರದ ವರೆಗೆ ಮನೆಗೆ ಬರಲಾರೆ ಎಂದು. ಅಷ್ಟನ್ನೇ ಕಳುಹಿಸಿ ಕೊಟ್ಟರೆ ಬಹಳ ಉಪಕಾರ" ಎಂದು ಹೇಳಿದನು.

ಅಯರ್‌ಲೆಂಡಿನ ಒಂದು ಕಡೆಯಲ್ಲಿ, ಒಬ್ಬ ಸ್ಕಾಟನು ತನ್ನ ಐರಿಶ್ ಗೆಳೆಯನೊಂದಿಗೆ ರಸ್ತೆಯ ಮೇಲೆ ಹೋಗುತ್ತಿದ್ದಾಗ, ಅವನೊಡನೆ 'ಮಿತ್ರಾ, ಜಿಪುಣಜನಾಂಗವೆಂದು ನಮ್ಮನ್ನುದ್ದೇಶಿಸಿ ಹೇಳುವ ಕುಚೇಷ್ಟೆಯ ಕತೆಗಳಿಗೆಲ್ಲ ನನ್ನ ಆಕ್ಷೇಪವಿದೆ. ನಾವು ಸ್ವಲ್ಪ ಮಿತವ್ಯಯಿಗಳಾಗಿರಬಹುದು. ಆದರೆ ಜಿಪುಣರೆಂದು ನಮ್ಮನ್ನು ಹಳಿಯುವುದು ಶುದ್ಧ ತಪ್ಪು' ಎಂದು ವಾದಿಸಿದನು.

ಐರಿಶ್ ಗೆಳೆಯನು ಅದಕ್ಕೆ ತಲೆದೂಗಿದನು.

(28ನೇ ಪುಟಕ್ಕೆ ಮುಂದುವರಿದಿದೆ)



ಯುದ್ಧೋತ್ತರ ವಿದ್ಯಾಪ್ರಚಾರ

(ಶ್ರೀ। ಟಿ. ಶೀನಪ್ಪ ಹೆಗ್ಗಡೆ, ವಿದ್ವಾನ್, ಬಿ. ಓ. ಎಲ್, ಎಲ್. ಟಿ.)

ಭಾರತದ ನಿರಕ್ಷರತೆಗೆ ಬಡತನವು ಮುಖ್ಯ ಕಾರಣವೆಂಬುದರಲ್ಲಿ ಎರಡ ಪ್ರಾಯಗಳಿಲ್ಲ. ಆದರೆ, ಪರತಂತ್ರವೇ ಈ ಬಡತನದ ಮೂಲ ಕಾರಣವೆಂಬುದನು ಅಲ್ಲಗಳೆಯಲಾಗದು. ಒಂದು ಜನಾಂಗದ ಹಿನ್ನಡೆಗೆ ಯಾ ಮುನ್ನಡೆಗೆ ಆ ಜನಾಂಗ ಸರಕಾರ ಪದ್ಧತಿಯೇ ಮೂಲ ಕಾರಣ ಹಾಗೂ ಜವಾಬ್ದಾರವಿದೆ. ಅದು ಹೇಗ ಇರಲಿ. ಶ್ರೀ। ಹೆಗ್ಗಡೆಯವರು ರಾಜಕೀಯಗಳನ್ನು ಚರ್ಚಿಸಲಿಚ್ಛಿಸುವುದಿ "ಸಾರ್ಜಂಟ್ ಯೋಜನೆ"ಯನ್ನು, ಸಾಮಾನ್ಯರಿಗೂ ತಿಳಿವಂತೆ ತಿಳಿ ಅಕ್ಷರಗಳ ಸಂಕ್ಷೇಪವಾಗಿ ಹೇಳುವುದು ಅವರ ಉದ್ದೇಶವಿದೆ. ಬಡತನ-ಮತ್ತು ನಿರಕ್ಷರತೆ ಇ ಒಂದಿನ್ನೊಂದನ್ನು ಬಿಟ್ಟಿಲ್ಲ. ಅನ್ಯ ಸಹಾಯವು ಬಂದರೆ ಒಳ್ಳಿತಾದರೂ, ನವ ಶ್ರೀಮಂತರು ಕೊಡುಗೈಯವರಾದರೆ ಇಂದಿನ ಪರಿಸ್ಥಿತಿಯನ್ನೆಷ್ಟೋ ಸುಧಾರಿಸಲ ಸಾಧ್ಯವಿದೆಯೆಂದೂ ಶ್ರೀ। ಹೆಗ್ಗಡೆಯವರು ಅಭಿಪ್ರಾಯ ಪಡುವದನ್ನು ನಾ ಅನುಮೋದಿಸುತ್ತೇವೆ.

ಈಗ ನಡೆಯುತ್ತಿರುವ ಜಗತ್ತಿನ ಮೊದಲನೆ, ಘೋರ ಯುದ್ಧಾವಸಾನದಲ್ಲಿ ನಮ್ಮ ಹಿಂದೂದೇಶದ ಕೈಗಾರಿಕೆ, ವ್ಯವಸಾಯ, ಆಮದು ರಫ್ತುಗಳ ಅನುಕೂಲತೆ ಇತ್ಯಾದಿಗಳಲ್ಲಿ ಸುಧಾರಣೆ ಮಾಡುವುದರೊಂದಿಗೆ ವಿದ್ಯಾಪ್ರಚಾರ ಕಾರ್ಯದಲ್ಲೂ ಸುಧಾರಣೆ ಮಾಡಬೇಕೆಂದು ಹಿಂದೂದೇಶದ ಕೇಂದ್ರ ಸರಕಾರದವರು ನಿಶ್ಚಯಿಸಿ ಈ ವಿಚಾರದಲ್ಲಿ ಹಿಂದೀ ಸರಕಾರಕ್ಕೆ ವಿದ್ಯಾಪ್ರಚಾರ ವಿಚಾರದಲ್ಲಿ ಸಲಹೆಗಾರರಾದ ಮಿ। ಜೊನ್ ಸಾರ್ಜೆಂಟರು ಒಂದು ಯೋಜನೆಯನ್ನು ಕೂಡ ಕಳೆದ 1944ನೇ ಇಸವಿಯ ಆದಿಯಲ್ಲಿ ಹೊರಡಿಸಿರುವರು. ಇದರ ಮೇಲೆ ದೇಶದ ಅನೇಕ ಶಿಕ್ಷಣ ತಜ್ಞರು ಟೀಕೆ ಟಿಪ್ಪಣಿಗಳನ್ನು ಮಾಡಿ ಮಥನಮಾಡಿರುವರು. ಅಂತೂ ಎಲ್ಲರಿಗೂ ಇಲ್ಲಿನ ನಿರಕ್ಷರತೆಯನ್ನು ಕಂಡು ನಾಚುಗೆಯಾಗಿದೆಯೋ ಎಂಬಂತೆ (ಹೇಗಾದರೂ ಸರಿ) ಯಾರ ಯೋಜನೆಯಿಂದಾದರೂ ಸರಿ ಹಿಂದೂದೇಶದ ಈ ನಾಣೆಲಿತನವು ದೂರವಾಗಲೆಂದು ಆ ಯೋಜನೆಯನ್ನು ಎತ್ತಿ ಹಿಡಿದು, ಪ್ರಯೋಗದಲ್ಲಿ ಹಾಕಲು ಹವಣಿಸಿರುವರು.

ನಮ್ಮ ಮದ್ರಾಸು ಸಂಸ್ಥಾನವೂ ಕೂಡ ಕಳೆದ ಇಸವಿಯಲ್ಲಿ ವಿದ್ಯಾಧಿಕಾರಿಗಳ ಒಂದು ಸಭೆ ಸೇರಿಸಿ ಈ ಯೋಜನೆಯನ್ನು ಪರೀಕ್ಷಾರ್ಥರೂಪದಲ್ಲಾದರೂ ಪ್ರಯೋಗಕ್ಕೆ ತ ಬೇಕೆಂದು ನಿರ್ಧರಿಸಿರುವುದು. ಇದಕ್ಕಾಗಿ ಪ್ರಾಂತಿಕ ಸ ಕಾರವು ಬೇಕಾದ ಹಣವನ್ನು ಬರುವ ವರ್ಷದ (1945–46ರ ವ್ಯಯದ ಅಂದಾಜು ಪಟ್ಟಿಯಲ್ಲಿ ಕೂಡಿಸಿಕೊಂಡಿದೆ. ಎಲ್ಲಾ ಜಿಲ್ಲೆಗಳಲ್ಲಿಯೂ ಕೆಲವು ಕೇಂದ್ರಗಳನ್ನು ಆರಿಸಿಕೊಂಡು ಆ ಕೇಂದ್ರಗಳಲ್ಲಿ ಮಾತ್ರ ಈ ಯೋಜನೆಯ ಮೂಲ ತತ್ವವಾ 'ಖಡ್ಡಾಯ ಶಿಕ್ಷಣ'ವನ್ನು ಜಾರಿಗೆ ತರಲು ಬೇಕಾದ ಪೂರ್ವ ಸನ್ನಾಹಗಳು ನಡೆದಿವೆ. ಇಂತಹ ಕೇಂದ್ರಗಳಲ್ಲಿ ಮಕ್ಕಳಿ ಮಧ್ಯಾಹ್ನದ ಉಚಿತ ಊಟಕ್ಕೂ ತಕ್ಕ ಅನುಕೂಲತೆಗಳನ್ನು ಮಾಡಲಾಗಿದೆ. ಪರೀಕ್ಷಾರ್ಥ ಪ್ರಯೋಗವು ಬರುವ ಜೂನ್ ತಿಂಗಳಲ್ಲೇ ಆರಂಭವಾಗಲಿದೆ. ಇದರ ವಿವರವನ್ನು ತಿಳಿಯಲು ಮಿ। ಸಾರ್ಜಂಟರ ಯೋಜನೆಯ ಮುಖ್ಯ ಹೆಗ್ಗುರುತುಗಳನ್ನು ಮಾತ್ರ ಈ ಕೆಳಗೆ ಕೊಡುತ್ತೇನೆ:—

(1) 5–6 ವರ್ಷದಿಂದ 14 ವರ್ಷದ ಎಲ್ಲಾ ಹುಡುಗ ಹುಡುಗಿಯರಿಗೆ ಧರ್ಮಾರ್ಥ ಖಡ್ಡಾಯ ಶಿಕ್ಷಣ. (ಪ್ರಾಥ ಮಿಕ).

(2) 4–5 ವರ್ಷಗಳ ಮಕ್ಕಳಿಗೆ ಬೇಕಾದ ಶಿಶುವಿಹಾರ ಗಳು 'nursery schools.'

(27ನೇ ಪುಟದಿಂದ ಮುಂದುವರಿದುದು)

ಸ್ವಲ್ಪ ಸಮಯದಲ್ಲೇ ಒಂದು ಚುರುಟಿನ ಅಂಗಡಿಯನ್ನು ಸಮೀಪಿಸಿದಾಗ, ಐಯರ್ಲಾಂಡಿನವನು, 'ಮಿತ್ರಾ ಬಾ. ಒಂದು ಚುರುಟು ಸೇದೋಣ' ಎಂದು ಅವನನ್ನು ಅಂಗಡಿಯ ಒಳಕ್ಕೆ ಕರೆದುಕೊಂಡು ಹೋದನು.

ಚುರುಟು ಸೇದಿ ಮುಗಿದ ಬಳಿಕ, ಅವನು ಕಿಸೆಯೊಳಕ್ಕೆ ಕೈ ತುರುಕಿಸುತ್ತಾನೆ.—ಚೀಲವಿಲ್ಲ. ಅವನಿಗೆ ತಾನು ಹಣದ ಚೀಲವನ್ನು ಮರೆತು ಬಿಟ್ಟುಬಂದೆನೆಂಬ ಅರಿವಾಯಿತು. ಸ್ಕಾಟನ ಜೇಬಿನಲ್ಲಿ ಹಣವಿತ್ತು. ಆದರೂ ಅವನು, 'ಚಿಂತೆಯಿಲ್ಲ, ಮಾರಾಯ. ಹೊತ್ತು ಕಂತಿಲ್ಲ. ಮನೆಗೆ ಹೋಗಿ ಹಣ ತಂದರಾಯಿತು. ಅಗತ್ಯವಿದ್ದರೆ, ನಾನೂ ನಿನ್ನೊಡನೆ ಬರುತ್ತೇನೆ' ಎಂದನಂತೆ!

(3) ಮಾಧ್ಯಮಿಕ ಅಥವಾ ಹೈಸ್ಕೂಲು ವಿದ್ಯಾಭ್ಯಾಸ– ಪ್ರತಿ ಆ ವಿದ್ಯಾಪ್ರಾಯದ ಮಕ್ಕಳಲ್ಲಿ ಶೇಕಡ 20 ಮಂದಿಗೆ.

(4) ನಿಜವಾಗಿ ಜಾಣತನ ತೋರಿಸುವ ತರುಣ ತರುಣಿಯರಿಗೆ ಗ್ರೇಜುವೇಟ್–ಪೋಸ್ಟ್ ಗ್ರೇಜುವೇಟು ವಿದ್ಯಾಭ್ಯಾಸ– ಇದು ಹೈಸ್ಕೂಲ್ ವಿದ್ಯಾರ್ಥಿಗಳಲ್ಲಿ ಸುಮಾರು 15ರಲ್ಲಿ ಒಬ್ಬನಿಗೆ.

(5) ಔದ್ಯೋಗಿಕ, ವಾಣಿಜ್ಯ, ಲಲಿತ ಕಲೆಗಳಲ್ಲಿ ವಿದ್ಯೆ.

(6) ಬಾಲ್ಯದಲ್ಲಿ ವಿದ್ಯೆಯ ಪ್ರಯೋಜನ ದೊರಕದ ಪ್ರಾಯಪ್ರಬುದ್ಧರಿಗೆ ಔದ್ಯೋಗಿಕ ಮತ್ತು ಓದು ಬರಹದ ವಿದ್ಯಾಭ್ಯಾಸ.

(7) ಮೇಲೆ ಹೇಳಿದ ವಿದ್ಯಾಪ್ರಚಾರಕ್ಕೆ ಬೇಕಾದ ಅಧ್ಯಾಪಕರ ದೊಡ್ಡ ಸಮುದಾಯವನ್ನು ತರಬೇತಿ ಮಾಡುವುದು.

(8) ವಿದ್ಯಾರ್ಥಿಗಳಿಗೆ ವೈದ್ಯ ಸಹಾಯ – ಈಗಣಂತೆ ವಿದ್ಯಾರ್ಥಿಗಳ ರೋಗಗಳನ್ನು ಕಂಡು ಹುಡುಕಿ ಹೆತ್ತವರಿಗೆ ಬರೆದು ತಿಳಿಸುವುದು ಮಾತ್ರವಲ್ಲ.

(9) ಮಾನಸಿಕ ಅಥವಾ ದೈಹಿಕ ಬೇನೆಗಳಲ್ಲಿ ಇರುವವರ ವಿದ್ಯಾಭ್ಯಾಸಕ್ಕಾಗಿ ಪ್ರತ್ಯೇಕ ಸಂಸ್ಥೆಗಳು.

(10) ದೈಹಿಕ ಚಟುವಟಿಕೆಗಳನ್ನು ಹೆಚ್ಚಿಸುವ ಆಟಗಳ ಅಭ್ಯಾಸ (ಶಾರೀರಕ ಶಿಕ್ಷಣ.)

(11) ಶಾಲೆ ಮತ್ತು ಕಾಲೇಜು ಬಿಟ್ಟವರಿಗೆ ಯೋಗ್ಯ ಹುದ್ದೆಗಳನ್ನು ಹುಡುಕಿಕೊಡುವುದಕ್ಕಾಗಿ ಒಂದು ಸಂಸ್ಥೆ.

(12) ವಿದ್ಯಾಪ್ರಚಾರದಲ್ಲಿ ಚೆನ್ನಾಗಿ ನುರಿತವರೂ ಈ ವಿಷಯದಲ್ಲಿ ವಿಶೇಷ ಆಸಕ್ತಿ ಇರುವವರೂ ಕೂಡಿರುವ ಆಡಳಿತ ಇಲಾಖೆ.

ಈ ಹನ್ನೆರಡು ಸೂತ್ರಗಳಲ್ಲಿ ಹಿಂದೂದೇಶದ ವಿದ್ಯಾಪ್ರಚಾರವನ್ನು ಮಿ। ಸಾರ್ಜೆಂಟರು ಸೂಚಿಸಿರುವರು. ಇದರಲ್ಲಿ ಮೊದಲನೆಯದು ಪ್ರಾಥಮಿಕ ವಿದ್ಯಾಭ್ಯಾಸವನ್ನು ಪುಕ್ಕಟೆಯಾಗಿಯೂ ಖಡ್ಡಾಯವಾಗಿಯೂ ಎಲ್ಲಾ ಹೆಣ್ಣುಗಂಡು ಮಕ್ಕಳಿಗೆ ಕೊಡುವುದು. ಇದನ್ನೇ ನಮ್ಮ ಪ್ರಾಂತಿಕ ಸರಕಾರವು ಪರೀಕ್ಷಾರ್ಥವಾಗಿ ಕೆಲವು ಕೇಂದ್ರಗಳಲ್ಲಿ ಪ್ರಯೋಗಕ್ಕೆ ಕೂಡಲೇ ತರುವುದರಲ್ಲಿದೆ.

ಈ ಯೋಜನೆಗೆ ನಮ್ಮ ದೇಶದ ಬಡತನ, ಇದಕ್ಕೆ ಬೇಕಾದ ಅಪಾರ ಹಣ ಇತ್ಯಾದಿ ಪ್ರಾಮುಖ್ಯವಾದ ಅಡಚಣೆಗಳು ತುಂಬಾ ಇವೆ ಎಂದು ಎಲ್ಲರಿಗೂ ತಿಳಿದ ವಿಷಯ. ಆದರೆ ಜಗತ್ತಿನ ಹೆಚ್ಚಿನ ಎಲ್ಲಾ ಭಾಗಗಳಲ್ಲೂ ಶೇಕಡ 90ಕ್ಕೆ ಮೇಲೆ ಸಾಕ್ಷರರು ಇರುವಾಗ ನಾವಿನ್ನೂ 20ನ್ನು ಮುಟ್ಟಲ್ಲವೆಂದರೆ ಬಹಳ ನಾಚುಗೆಗೇಡು ವಿಷಯ. ಪರೀಕ್ಷಾರ್ಥವಾಗಿ ಕೆಲವು ಆರಿತ ಕೇಂದ್ರಗಳಲ್ಲಿ ಕೈಕೊಂಡ ಈ ಮೊದಲನೆಯ ಸಾಹಸದಲ್ಲಿ ಸಂಬಂಧಪಟ್ಟ ಜನರೆಲ್ಲಾ ಇದು ನಮ್ಮ ಮುಂದಿನ ಏಳ್ಗೆಯ ಮಾರ್ಗವೆಂದು ತಿಳಿದು, ಇದಕ್ಕೆ ತಮ್ಮ ಕೈಲಾದ ಸಹಾಯ ನೀಡಬೇಕು. ಮುಖ್ಯವಾಗಿ ಧನಿಕರು ತಮ್ಮ ಆಳುಗಳ ಮಕ್ಕಳನ್ನೋ ಒಕ್ಕಲುಗಳ ಮಕ್ಕಳನ್ನೋ ಅಥವಾ ಇನ್ನಿತರ ಹಂಗಿಕರ ಮಕ್ಕಳನ್ನೋ ಶಾಲೆಗೆ ಹೋಗುವಂತೆ ಪ್ರೋತ್ಸಾಹಿಸಬೇಕು. ಹಾಗೆ ಜನತೆಯ ಬೆಂಬಲವಿಲ್ಲದಿದ್ದರೆ ಯಾವ ಯೋಜನೆಯೂ ಕೈಸಾಗದೆಂದು ನಾವು ಸ್ವತಹ ಮನಗಂಡ ವಿಚಾರಗಳು. ಯಾಕಂದರೆ ಅನೇಕ ಮುನಿಸಿಪಾಲಿಟಿಗಳಲ್ಲಿ ಈ ಖಡ್ಡಾಯ ಶಿಕ್ಷಣವನ್ನು ಹಿಂದೆ ಜಾರಿಗೆ ತಂದು ಕೆಲವೇ ವರ್ಷಗಳಲ್ಲಿ ಅದನ್ನು ಬಿಟ್ಟುಬಿಡಬೇಕಾಯಿತು. ಕಾರಣ, ಜನತೆಯ ಬೆಂಬಲ ಇಲ್ಲದಿದ್ದುದು. ಮಿ। ಸಾರ್ಜೆಂಟರು ಈ ಯೋಜನೆಯು ಸಂಪೂರ್ಣ ರೂಪಗೊಳ್ಳಬೇಕಾದರೆ 40 ವರ್ಷ ಬೇಕೆಂದಿರುವರು. ಅದೆಲ್ಲಾ ಕಾಲವಿಚಾರ ಮಾಡುವುದು ಅಗತ್ಯವಿಲ್ಲ. ನನಗೂ ವಿದ್ಯಾಪ್ರಚಾರ ವಿಚಾರದಲ್ಲಿ ಸ್ವಲ್ಪ ಅನುಭವವಿದೆ. ಇದು ಒಂದು ಕೇಂದ್ರದಲ್ಲಿ ಜಯಶಾಲಿಯಾದರೆ ಅದರ ಸುತ್ತಮುತ್ತಲೂ ಜಯಶಾಲಿಯಾಗುತ್ತದೆ. ಹೀಗೆ ಖಡ್ಡಾಯ ಶಿಕ್ಷಣವೆಂಬ ಹೆಸರಿದ್ದರೂ ಅಧಿಕಾರಿಗಳು ಶಿಕ್ಷಣಕ್ಕಾಗಿ ಶಿಕ್ಷಾಕ್ರಮವನ್ನು ಕಾರ್ಯರೂಪಕ್ಕೆ ತರುವ ಅಗತ್ಯ ಬೀಳದೆ ಕೆಲಸವು ಎಲ್ಲಾ ಕೇಂದ್ರಗಳಲ್ಲಿ ಮುಂದೆ ಸಾಗಿದರೆ ಇನ್ನು ಕೆಲವೇ ವರ್ಷದೊಳಗೆ ಪ್ರಾಥಮಿಕ ಶಿಕ್ಷಣವು ಎಲ್ಲಾ ಮಕ್ಕಳಿಗೂ ಸಿಗುವಂತೆ ಆಗುವುದೆಂದು ಭರವಸೆಯಿಂದ ಹೇಳಬಹುದಾಗಿದೆ. ಯಾಕಂದರೆ ವಿದ್ಯಾಭ್ಯಾಸದ ಹುಚ್ಚು ಒಂದು ಸಾಂಕ್ರಾಮಿಕ ರೋಗದಂತೆ ಇದೆ. ಅದು ಒಂದು ಮನೆಯಲ್ಲಿ ಒಂದು ನೆರೆಯಲ್ಲಿ ಒಬ್ಬಿಬ್ಬರಿಗೆ ತಾಗಿದರೆ ಸರಿ, ಕೂಡಲೇ ತಾನಾಗಿ ಮನೆಮಕ್ಕಳಿಗೆಲ್ಲಾ, ನೆರೆಮಕ್ಕಳಿಗೆಲ್ಲಾ ಸೋಂಕುತ್ತದೆ.

ಈ ವಿಚಾರದಲ್ಲಿ ಒಂದು ದೊಡ್ಡ ತಡೆಯೆಂದರೆ ಇಲ್ಲಿನ ಬಡತನ. ಆದರೆ ಈ ತಡೆಯನ್ನು ಬಹುಮಟ್ಟಿಗೆ ನೀಗಿಸಲು ಸ್ಥಳಿಕ ಧನಿಕರು ಸಮರ್ಥರು. ಒಬ್ಬ ಜಮೀನುದಾರ ಅಥವಾ ಧನಿಕನು ತನ್ನ ಆಳುಗಳು ಹಂಗಿಕರ ಮಕ್ಕಳನ್ನು ಶಾಲೆಗೆ ಕಳುಹಿಸಲು ಪ್ರೋತ್ಸಾಹಕೊಟ್ಟರೆ ಆ ಮೇಲೆ ಇಲಾಖೆಯವರು ಕೊಡುವ ಮಧ್ಯಾಹ್ನದ ಊಟ ಇತ್ಯಾದಿ ಸಲಹೆಗಳು ಅದಕ್ಕೆ ಬಲಗೊಟ್ಟು ನಾವು ಈ ವಿದ್ಯಾಪ್ರಚಾರದ ಮೊದಲನೆ ಸೋಪಾನವನ್ನು ಹತ್ತಬಹುದಾಗಿದೆ. ಆದರೆ ಈ ವಿಚಾರದಲ್ಲಿ ಒಂದು ಮಾತನ್ನು ಹೇಳಬಯಸುತ್ತೇನೆ— ನಾನು ಹಳ್ಳಿಗಳಲ್ಲಿ ಸಾಕ್ಷರತೆ ಪ್ರಚಾರ ಮಾಡುತಿದ್ದಾಗ ಕೆಲ ಗೃಹಸ್ಥರು ಅದಕ್ಕೆ ಸಹಾಯಮಾಡುವ ಬದಲು "ನಿಮ್ಮ (ಒಕ್ಕಲ) ಮಕ್ಕಳಿಗೂ ಬರಹ ನನ್ನ ಮಕ್ಕಳಿಗೂ ಬರಹವೊ?" "ಮನೆಯಲ್ಲಿ ಕೆಲಸ ಮಾಡಬೇಕು. ಶಾಲೆಗೆ ಹೋಗ ಕೂಡದು." "ಒಕ್ಕಲುಗಳು ಶಾಲೆಗೆ ಹೋಗಿ ಬರಹ ಕಲಿತರೆ ಗೇಣಿಗೆ ರಶೀದಿ ಕೇಳುತ್ತಾರೆ" ಎಂದಿತ್ಯಾದಿ ಹೇಳಿದವರನ್ನು ಬಲ್ಲೆ. ಇವೆಲ್ಲಾ ಊಹನೆಯ ಮಾತುಗಳಲ್ಲ. ನನ್ನ ಸ್ವಂತ ಅನುಭವ. ಅದೂ ಇತ್ತೀಚೆಗಿನದು. ಆದುದರಿಂದ ಬಡವರು ಬಲ್ಲಿದರೆಂಬ ಭೇದವು ವಿದ್ಯಾಭ್ಯಾಸದಲ್ಲಿಲ್ಲ. ಎಲ್ಲರೂ ವಿದ್ಯಾವಂತರಾದರೆ ನಮ್ಮ ಮನೆ, ನೆರೆ, ಊರು, ತಾಲೂಕು, ಜಿಲ್ಲೆ ಹಾಗೂ ದೇಶವೇ ಉದ್ಧಾರವಾಗಿ ಪ್ರಪಂಚದ ಮುಂದರಿದ ದೇಶಗಳ ಸರಿಗದ್ದುಗೆಯಲ್ಲಿ ನಾವೂ ಕುಳಿತುಕೊಳ್ಳಲು ಸಮರ್ಥರಾಗುವೆವೆಂದೂ, ಇದಕ್ಕೆ ಸಹಾಯ ಮಾಡಿದಷ್ಟು ದೊಡ್ಡ ರಾಷ್ಟ್ರ

[30ನೇ ಪುಟಕ್ಕೆ ಮುಂದುವರಿದಿದೆ]



ವತ್ಸಲೆಯ ಬಳೆಗಳು.

(ಲೇಖಕಿ: ಶ್ರೀಮತಿ ಗಿರಿಜಾಬಾಯಿ ಪೈ.)

ಇದು ಅಪ್ರಾಮಾಣಿಕ ಬರೆಹಗಳ ಅಥವಾ ಬರೆಹಗಾರನ ಮೇಲೊಂದು ಸುಂದರ ವ್ಯಂಗ್ಯಚಿತ್ರವಾಗಿದೆ. ಈ ಲೇಖಕಿ ಓರ್ವ ತತ್ವಜ್ಞಾನಿಯ ಹೃದಯವನ್ನು ಬಿಚ್ಚಿ ನೋಡಿ ಜಗತ್ತಿಗೆ ತೋರಿಸಿ ವಳು; ಪ್ರೇಮಶೂನ್ಯವಾದ ತತ್ವಜ್ಞಾನವು ಜಗತ್ತಿಗೆ ಬೇಡ— ಎಂದು ಹೇಳುವಳು. ನಿಜಪತ್ನಿಯನ್ನರಿಯದೆ, ಸಂಸಾರದಲ್ಲಿದ್ದು ಉಂಡು, ವಿಹರಿಸಿ, ಸ್ವದೇಹ ವಿಚಾರದಲ್ಲಿ ಮಾತ್ರ ಯಾವುದನ್ನೂ ಅಲಕ್ಷಿಸದೆ, ತನ್ನ ಪತ್ನೀ—ಪುತ್ರಿಯರನ್ನು ಕಡೆಗಣ್ಣಿನಿಂದಾದರೂ ಈಕ್ಷಿಸದೆ, ಕೀರ್ತಿಯನ್ನು ಮಾತ್ರ ಲಕ್ಷಿಸಿದ ನರರೂಪೀ ರಾಕ್ಷಸನಿಂದ ನೊಂದು ಜೀವಜ್ಯೋತಿ ನಂದಿಹೋದ ಸ್ತ್ರೀಯೊಬ್ಬಳ ಕರುಣಮಯ ಚಿತ್ರವಿದು.

ಚಾರುದತ್ತನ ವಿವಾಹವಾಗಿ ಆತನು ನೂತನ ಸಂಸಾರ ಸ್ಥಾಪಿಸಿದೊಡನೆ ರಮಾನಂದನು, ತನ್ನ ಇತರ ಅಣ್ಣಂದಿರ ಸಹವಾಸ ಬಿಟ್ಟು ಚಾರುದತ್ತನೊಡನೆ ಉಳಕೊಳ್ಳಲು ಹೋದನು. ಚಾರುದತ್ತನು ತರ್ಕಶಾಸ್ತ್ರ ಮತ್ತು ತತ್ತ್ವಜ್ಞಾನದ ಪ್ರಾಧ್ಯಾಪಕನಾಗಿದ್ದನು. ಅವನ ಪತ್ನಿ ವತ್ಸಲೆಯು ಮೆಟ್ರಿಕ್ ತೇರ್ಗಡೆ ಹೊಂದಿದ್ದಳು. ಅವರಲ್ಲಿ ಈ ವ್ಯತ್ಯಾಸವು ಎರಡು ಧ್ರುವಗಳಂತೆ ಕಂಡುಬಂದರೂ ವ್ಯವಹಾರಜ್ಞಾನದಲ್ಲಿ ಮಾತ್ರ ವತ್ಸಲೆಯು ಚಾರುದತ್ತನಿಗಿಂತಲೂ ಬುದ್ಧಿವಂತಳಾಗಿದ್ದಳು.

ಚಾರುದತ್ತನು ಮಹಾಭಾಗ್ಯವಂತನೆಂದು ಆತನಿಗೆ ಸರ್ವಗುಣ ಸಂಪನ್ನಳಾದ ಪತ್ನಿಯು ದೊರಕಿದ್ದಳು. ಅವನಿಗೆ ಯಾವ ಸುಖಕ್ಕೂ ಕೊರತೆಯಿರಲಿಲ್ಲ. ಆದರೆ, ನಡುನಡುವೆ ಅವನ ಸಂಸಾರನೌಕೆಯು ಅಲ್ಲಲ್ಲಿ ತಡೆಯುತಿತ್ತು. ಇದರ ಪ್ರತ್ಯಕ್ಷ ಅನುಭವವು ವತ್ಸಲೆಯ ಮುಖದಲ್ಲಿ ಒಮ್ಮೊಮ್ಮೆ ಪ್ರತಿಬಿಂಬಿಸುವ ಖಿನ್ನತೆಯಿಂದ ಸ್ಪಷ್ಟವಾಗುತಿತ್ತು. ರಮಾನಂದನು ಒಮ್ಮೊಮ್ಮೆ, ಆಕೆಗೆ ಏನಾಗುತ್ತಿದೆಯೆಂದು ಕೇಳಿದಾಗ, ಏನಿಲ್ಲವೆಂದು ಆಕೆ, ಬೇರೇನಾದರೂ ಮಾತಾಡಿ ತಪ್ಪಿಸುತಿದ್ದಳು. ಆದರೆ, ಇದರಲ್ಲೇನೊ ಗೂಢವಿರಬೇಕೆಂದು ರಮಾನಂದನಿಗೆ ಕಾಣಿಸಹತ್ತಿತ್ತು. ಕುತೂಹಲದಿಂದ ಅವನು ಶೋಧಕ್ಕೆ ಉದ್ಯುಕ್ತನಾದನು. ಒಮ್ಮೆ ಅವನು ತನ್ನ ಅಣ್ಣನಾದ ಚಾರುದತ್ತನಿಗೆ, "ಅತ್ತಿಗೆಯ ಮೇಲೆ ನಿನ್ನ ಪ್ರೇಮವಿದೆಯೇ?" ಎಂದು ಪ್ರಶ್ನಿಸಿಬಿಟ್ಟನು.

"ಪ್ರತಿಯೋರ್ವ ಮನುಷ್ಯನು ತನ್ನ ಪತ್ನಿಯನ್ನು ಪ್ರೀತಿಸಬೇಕು. ಯಾವ ಅರ್ಥದಲ್ಲಿ ನಿನ್ನ ಅತ್ತಿಗೆಯು ನನ್ನ ಪತ್ನಿಯೋ ಅದೇ ಅರ್ಥದಲ್ಲಿ ನನ್ನ ಪ್ರೇಮವು ಆಕೆಯ ಮೇಲೆ ಇರಲೇ ಬೇಕು" ಎಂದು ಚಾರುದತ್ತನು ತರ್ಕಶಾಸ್ತ್ರದ ಪದ್ಧತಿಯಲ್ಲಿ ನುಡಿದನು.

ರಮಾನಂದನು, "ಇರಬೇಕೆಂಬ ಸಂಗತಿಯು ನಿಜ. ಆದರೆ ಇದೆಯೇ?" ಎಂದು ವಿಚಾರಿಸಿದನು.

"ಏಕೆ ಇರಕೂಡದು?"

ಚಾರುದತ್ತನ ವಾಣಿಯು ಕೃತ್ರಿಮವಾಗಿತ್ತು.

ರಮಾನಂದನು, ಆತನು ಯಾವ ಕ್ಲಬ್ಬಿಗೆ ಹೋಗುತ್ತಿದ್ದನೋ ಅಲ್ಲಿಗೆ ಬರುವ ಇತರ ಜನರ ನಡತೆಯ ಕುರಿತು ವಿಚಾರಿಸಿದನು. ಅವರೆಲ್ಲರೂ ಒಳ್ಳೇ ಜನರಾಗಿದ್ದರು. ಅಲ್ಲಿಯ ಸೇವಕರ ಮತವು ಚಾರುದತ್ತನ ವಿಷಯವಾಗಿ ಸಮಾಧಾನಕರವಾಗಿತ್ತು. ಕೊಲೇಜಿನ ಯಾವ ವಿದ್ಯಾರ್ಥಿನಿಯ ವಿಷಯವಾಗಿಯೂ ಅವನ ಮನಸ್ಸಿನಲ್ಲಿ ಅಲ್ಲಸಲ್ಲದ ಕಾವ್ಯಮಯ ವಿಚಾರವು ಹೊಕ್ಕಿರಲಿಲ್ಲ. ಒಮ್ಮೆ ರಮಾನಂದನು ಅವನ ಬೇಂಕ್ ಪುಸ್ತಕವನ್ನು ಕದ್ದು ನೋಡಿದನು. ಆದರೆ, ಅದರಲ್ಲಿ ಪ್ರತೀ ತಿಂಗಳಲ್ಲಿ ಚಾರುದತ್ತನು ಐವತ್ತು ರೂಪಾಯಿ ಕೂಡಿಟ್ಟುದು ಕಂಡುಬಂತು. ಹಾಗಾದರೆ, ಈ ಗೂಢದ ಅರ್ಥವೇನು?

೨.

ವತ್ಸಲೆಯ ಜೀವನದಲ್ಲಿ ಒಂದು ಆಶಾಕಿರಣವು ಮೊಳಗಿತು. ಆಕೆಗೆ ಸಂತಾನಪ್ರಾಪ್ತಿಯೋಗವು ಕಂಡು ಬಂದಿತ್ತು. ಆಗುವ ಊಟೋಪಚಾರ ಸಮಾರಂಭಗಳೆಲ್ಲ ಆಗಿ ಹೋದುವು.

ಮನೆಯಲ್ಲಿ ಇಂತಹ ಆನಂದೋತ್ಸವ ನಡೆಯುತ್ತಿರುವಾಗ ಚಾರುದತ್ತನು ಮಾತ್ರ, "ವಿಶ್ವಬಂಧುತ್ವ" ಎಂಬ

[29ನೇ ಪುಟದಿಂದ ಮುಂದುವರಿದುದು]

ಸೇವೆಯು ಬೇರೆ ಇಲ್ಲವೆಂದೂ, ನಮ್ಮ ಜನಾಂಗವು 100% ವಿದ್ಯಾವಂತವಾದರೆ ಆಗ ನಮಗೆ ವಿಶೇಷವಾದ ನೈತಿಕ ಮತ್ತು ಇನ್ನಿತರ ಭಾಗಗಳಲ್ಲಿ ಬಲ ಬಂದು ನಮ್ಮ ಮುಖ್ಯ ಧ್ಯೇಯ, ಗುರಿಯನ್ನು ಸುಲಭವಾಗಿ ಸಾಧಿಸಲಾಪೆವೆಂದೂ ತಿಳಿದು ಈ ಪರೀಕ್ಷಾರ್ಥ ಖಡ್ಡಾಯ ವಿದ್ಯೆಗೆ ಎರವಾಗಿ ಪುಣ್ಯ ಗಳಿಸಬೇಕೆಂದೂ ವಿದ್ಯಾಭಿಮಾನಿಗಳಲ್ಲಿ ಬೇಡಿಕೊಳ್ಳುತ್ತೇನೆ.

ಒಂದು ಗ್ರಂಥ ಬರೆಯುವ ಉದ್ಯೋಗದಲ್ಲಿ ಮಗ್ನನಾಗಿದ್ದನು. ರಮಾನಂದನು, "ಅಣ್ಣಾ! ನಮ್ಮ ಮನೆಯಲ್ಲಿ ಇಂತಹ ಆನಂದ ಸಮಾರಂಭ ನಡೆಯುತ್ತಿರುವಾಗ, ಗ್ರಂಥಲೇಖನವನ್ನು ಸದ್ಯಃ ನಿಲ್ಲಿಸಿ ಈಕಡೆ ಸ್ವಲ್ಪ ಲಕ್ಷ್ಯ ಕೊಡು" ಎನ್ನುತಿದ್ದನು. ಚಾರುದತ್ತನು ಕದಲದೆ, "ನಿಮ್ಮದೆಲ್ಲಾ ನಡೆಯಲಿ!" ಎಂದು, ನಿರ್ವಿಕಾರದಿಂದ ನುಡಿಯುತಿದ್ದನು.

ಒಮ್ಮೆ ರಮಾನಂದನು, ಅವರಿಬ್ಬರ ಫೊಟೋ ತೆಗೆಯುವ ಇಚ್ಛೆ ಪ್ರಕಟಿಸಿದನು. ಆಗ ಚಾರುದತ್ತನು, "ವತ್ಸಲೆಯನ್ನು ಸ್ಟುಡಿಯೊಕ್ಕೆ ಕರಕೊಂಡುಹೋಗಿ, ಅವಳೊಬ್ಬಳ ಫೊಟೋ ಮಾತ್ರ ತೆಗಿಸಿದರೆ ಸಾಕು" ಎಂದು ಉತ್ತರವಿತ್ತನು.

ಹೀಗೇ ನಡೆದಿರಲು, ಒಂದು ದಿನ ರಮಾನಂದನು ಚಾರುದತ್ತನು ಕುಳಿತಲ್ಲಿಗೆ ಬಂದು, ವತ್ಸಲೆಯು ಹೆಣ್ಣು ಶಿಶುವನ್ನು ಹಡೆದಳು ಎಂದು ತಿಳಿಸಿದನು. ಕೇಳಿ, ಚಾರುದತ್ತನು ಖಿನ್ನನಾದನು. ರಮಾನಂದನು, ಮಗುವು ಮುದ್ದುಮುದ್ದಾಗಿದೆ, ಸುಪುಷ್ಟವಿದೆ ಎಂದನು. ಚಾರುದತ್ತನು ಪತ್ನೀ-ಪುತ್ರಿಯರನ್ನು ನೋಡುವ ಗೊಡವೆಗೆ ಹೋಗಲಿಲ್ಲ.

ಮಗುವಿಗೆ ನಾಮಕರಣಮಾಡುವ ದಿನ ಬಂತು. ರಮಾನಂದನು, "ಅಣ್ಣಾ, ಮಗುವಿಗೆ ಯಾವ ಹೆಸರನ್ನಿಡಲಿ?" ಎಂದು ಪ್ರಶ್ನಿಸಿದನು. ಚಾರುದತ್ತನು ಅಲಕ್ಷ್ಯವಾಗಿ, "ಏನಾದರೂ ಇಡಿ" ಎನ್ನಲು, ರಮಾನಂದನಿಗೆ ಸಿಟ್ಟು ಬಂತು. ಆದರೆ, ಅದನ್ನು ಹೊರಗೆಡಹಲಿಲ್ಲ. ವತ್ಸಲೆಯು ಮಾತ್ರ, ಒಮ್ಮೆಯಾದರೂ ತನ್ನ ಪತಿಯನ್ನು ತಪ್ಪಿಯಾದರೂ ದೂರುತ್ತಿರಲಿಲ್ಲ.

ಮಗುವಿಗೆ 'ಮಾಲಿನಿ' ಎಂದು ಹೆಸರಿಟ್ಟರು.

೩.

ಮಾಲಿನಿಗೆ ಒಂದು ವರ್ಷ ತುಂಬಿತು.

ಅವಳ ಹುಟ್ಟು ಹಬ್ಬವನ್ನು ಸಂಭ್ರಮದಿಂದ ನಡೆಸಿದರು. ಚಾರುದತ್ತನ ಗ್ರಂಥಲೇಖನವು ಆ ದಿನ ಕೂಡ ನಡೆಯುತ್ತಲೇ ಇತ್ತು. ಉಡುಗೊರೆಯಾಗಿ ಬಂದ ವಸ್ತುಗಳನ್ನೆಲ್ಲ ಚಾರುದತ್ತನಿಗೆ ತೋರಿಸಿದರು. ಅವನು ಅವುಗಳನ್ನು ಸರಿಯಾಗಿ ನೋಡಲೇ ಇಲ್ಲ. ಸ್ವಚ್ಛವಿದ್ದ ನಭೋಮಂಡಲದಲ್ಲಿ ವರ್ಷಋತುವಿನ ಪ್ರಾರಂಭದಲ್ಲಿ ತಿರಿಗಿ ಮೇಘಗಳು ಕಂಡುಬರುವಂತೆ, ಪ್ರಸನ್ನವಿದ್ದ ವತ್ಸಲೆಯ ಅಂತಃಕರಣದಲ್ಲಿ ಖಿನ್ನತೆಯ ಗಾಳಿಯು ನುಗ್ಗಿತು.

ಹನ್ನೊಂದು ಗಂಟೆ ರಾತ್ರೆಯ ಸಮಯ. ಒಮ್ಮೆ ಒಂದು ದೀನ ಸ್ವರವು ಕೇಳಬಂತು. ರಮಾನಂದನು ಓಡಿಹೋಗಿ, ಬಾಗಿಲಿನ ಬಳಿ ನಿಂತು ಕಿವಿಗೊಟ್ಟನು.

"ನನ್ನನ್ನೊಮ್ಮೆ ಕೊಂದು ಬಿಡಿ!" ವತ್ಸಲೆಯು ಹೇಳುತಿದ್ದಳು,

"ನಿನ್ನನ್ನು ಕೊಂದು ಬಿಡಲೇ? ಜನನಕ್ಕೆ ಬಂದ ಪ್ರತಿಯೊಂದು ಜೀವಿಗೆ ಬದುಕುವ ಅಧಿಕಾರವಿದೆ" ಚಾರುದತ್ತನು ಉತ್ತರವಿತ್ತನು.

"ಪತ್ನಿಗೆ, ಗಂಡನಿಂದ ಸುಖ ಸಿಗಬೇಕೆಂದು ಅಪೇಕ್ಷೆ ಮಾಡುವ ಅಧಿಕಾರವಿಲ್ಲವೇ?"

"ಸುಖದ ಅಪೇಕ್ಷೆ ಮಾಡಬೇಕಾದರೆ ಮನುಷ್ಯನ ಮನಸ್ಸು ದೊಡ್ಡದಿರಬೇಕು. ಮನಸ್ಸು ದೊಡ್ಡದಾಗ ಬೇಕಾದರೆ ಜ್ಞಾನ ಸಂಪಾದಿಸಬೇಕು. ಜ್ಞಾನಪ್ರಾಪ್ತಿಗೋಸ್ಕರ ಸತ್ಸಂಗ, ಸದ್ಗ್ರಂಥವಾಚನ ಇವುಗಳು ಅತ್ಯಗತ್ಯ!"——ಚಾರುದತ್ತನ ಪ್ರವಚನದಿಂದ ವತ್ಸಲೆಯು ನಿರುತ್ತರಳಾದಳು. ಆಕೆಯ ಚಿತ್ತಕ್ಷೋಭೆಯು ರೂಪಾಂತರವು ಹುಚ್ಚುತನದ ಮಟ್ಟಕ್ಕೆ ಏರುವಂತಿತ್ತು.

೪.

ದಿನಗಳುರುಳಿದುವು.

ಒಂದು ದಿನ ವತ್ಸಲೆಯು ರಮಾನಂದನೊಡನೆ, "ನನಗೆ ಇಂದು ಸೌಖ್ಯವಿಲ್ಲ" ಎಂದು ಹೇಳಿದಳು.

ನಾಲ್ಕು ದಿನಗಳಲ್ಲಿ ಡಾಕ್ಟರರು, ಅದು ವಿಷಮಜ್ವರವೆಂದು ಹೇಳಿದರು. ಐದನೇ ದಿನ ವತ್ಸಲೆಯು ರಮಾನಂದನನ್ನು ಬಳಿಗೆ ಕರೆದು, "ನಾನು ಈ ಕಾಯಿಲೆಯಿಂದ ಇನ್ನು ಏಳುವಂತಿಲ್ಲ!" ಎಂದು ನುಡಿದಳು.

"ಅತ್ತಿಗೆ, ಬೇಡಮ್ಮ! ಹೀಗೆ ಮಾತಾಡದಿರಿ!"

"ರಮಾನಂದ! ಈ ಕಠೋರ ಸತ್ಯ ಬಚ್ಚಿಡಲಾಗದು. ನನಗೆ ಅಂತಿಮಕಾಲದ ವ್ಯವಸ್ಥೆ ಮಾಡಬೇಕಾಗಿದೆ." ವತ್ಸಲೆಯು ತನ್ನ ಪೆಟ್ಟಿಗೆಯಿಂದ ನಾಲ್ಕು ಮುತ್ತಿನ ಬಳೆಗಳನ್ನು ಆತನಿಂದ ತೆಗೆಸಿ, ಆತನ ವಶದಲ್ಲಿ ಕೊಟ್ಟಳು.

"ಇಕೋ, ಇವುಗಳಿಂದ ನನ್ನ ಮಾಲಿನಿಯ ವಿವಾಹವು ಆಗುವಂತಿದೆ. ರಮಾನಂದ! ಇವುಗಳನ್ನು ನನ್ನ ತಂದೆ ನನಗೆ ಕೊಟ್ಟಿದ್ದನು. ಇವುಗಳ ಮೇಲೆ ನನ್ನ ಗಂಡನ ಕಡೆಯವರಿಗೆ ಯಾವ ಹಕ್ಕು ಬಾಧ್ಯತೆಯೂ ಇಲ್ಲ .... ಅವರ ಪ್ರೇಮವು ಮಾಲಿನಿಯ ಮೇಲಿಲ್ಲ. ಆಕೆಯನ್ನು ನಿನ್ನ ಮಡಿಲಲ್ಲಿ ಹಾಕಿರುತ್ತೇನೆ. ಮತ್ತು ...." ಹೀಗೆ ನುಡಿಯುತಿದ್ದಂತೆ ಆಕೆಗೆ ನಿಶ್ಶಕ್ತಿಯಾಯಿತು. ಆ ಸಮಯದಲ್ಲಿ ಅವಳಿಗೆ ೧೦೩ ಡಿಗ್ರಿ ಜ್ವರವಿತ್ತು.

"ಸುದೈವದಿಂದ ನಿನಗೆ ಒಳ್ಳೇ ಉದ್ಯೋಗ ದೊರೆತರೆ, ನೀನು ಸಂಸಾರ ಮಾಡಿದರೆ; ನನ್ನ ಮಾಲಿನಿಯನ್ನು ದೂರ ಮಾಡಬೇಡ. ರಮಾನಂದ! ನನಗೋಸ್ಕರ ಇಷ್ಟು ಶ್ರಮ ತಕ್ಕೊಳ್ಳುವಿಯಾ?"

"ಹೌದಮ್ಮ, ನಾನು ಎಂದಿಗೂ ಆಕೆಯನ್ನು ಬಿಡಲಿಕ್ಕಿಲ್ಲ"– ಎಂದು ರಮಾನಂದನು ವಚನ ಕೊಟ್ಟನು.

ಏಳನೇ ದಿನ ವತ್ಸಲೆಯ ಅಂತಿಮ ಕಾಲವು ಸಮೀಪಿಸಿತು. ರಮಾನಂದನು ಭೋಜನ ಮಾಡಲು ಕುಳಿತಿದ್ದನು. ಅವನಿಗೆ ಕರೆಬಂತು. ಕೂಡಲೇ ಎದ್ದು ಅವಳ ಬಳಿಗೆ ಹೋದನು.

ವತ್ಸಲೆ ಹೇಳಿದಳು: "ರಮಾನಂದ! ನನ್ನನ್ನು ಈ ಕೊಳಕು ಸ್ಥಳದಲ್ಲಿ ಇಡುವಿರಾ? ಸುಗಂಧ ನೀರನ್ನು ನನ್ನ

ಹಾಸಿಗೆ ಮೇಲೆ ಚಿಮುಕಿಸಿ. ಕೆಲಸದವಳನ್ನು ಕರೆದು, ನನ್ನ ಅರಸಿನ ಜೊರ್ಜೆಟ್ ಸೀರೆ ಉಡಿಸಿ 'ಪಫ್‌ಸ್ಲೀವಿ'ನ ಬಿಳಿ ಜೆಕೆಟು ತೊಡಿಸಲು ಹೇಳು. ನಮ್ಮಲ್ಲಿನ ಗುಲಾಬಿ ಹೂಗಳನ್ನು ನನ್ನ ಜೆಡೆಯಲ್ಲಿ ಹಾಕಲು ಹೇಳು. ನನ್ನ ಮಾಲಿನಿ? ನಾನೊಮ್ಮೆ ಆಕೆಯನ್ನು ನೋಡುತ್ತೇನೆ."

ಅಂತ್ಯಕಾಲದ ಆಕೆಯ ಇಚ್ಛೆಗಳನ್ನು ಪೂರೈಸಲಾಯಿತು. ವತ್ಸಲೆಯ ಪ್ರಾಣೋತ್ಕ್ರಮಣವಾಯಿತು.

೫.

ಅದೇ ದಿನ ಚಾರುದತ್ತನ "ವಿಶ್ವಬಂಧುತ್ವ" ಗ್ರಂಥವು ಛಾಪಖಾನೆಯ ಯಂತ್ರದ ಮೇಲೆ ಏರಿತು. ವತ್ಸಲೆಯ ಎಲ್ಲ ಬಂಗಾರ ಮಾರಿಯೂ ಕೂಡ ಅವನಿಗೆ, ಛಾಪಿಸಲು ಹಣವು ಸಾಕಾಗಲಿಲ್ಲ. ಕಾರಣ, ಗ್ರಂಥವು ಬಲು ದೊಡ್ಡದಿತ್ತು. ಅವನು, ತನ್ನ ಮೃತಪತ್ನಿಯ ಮುತ್ತಿನ ಬಳೆಗಳನ್ನು ಬಹಳವಾಗಿ ರಮಾನಂದನೊಡನೆ ಕೇಳಿದನು. ಆದರೆ, ರಮಾನಂದನು, ತನ್ನ ಪ್ರಾಣ ಹೋದರೂ ಬಳೆಗಳನ್ನು ಕೊಡಲಾರೆನೆಂದು ಖಂಡಿತವಾಗಿ ನುಡಿದು ಬಿಟ್ಟನು. ಚಾರುದತ್ತನು ಕೋಪಗೊಂಡು ಬಯ್ದನು; ರಮಾನಂದನು ಕಲ್ಲಿನಂತೆ ನಿಂತು ಅದೆಲ್ಲವನ್ನೂ ಕೇಳಿದನು.

ವತ್ಸಲೆಯ ಸಾಮಾನುಗಳಲ್ಲಿ ಯಾರೋ ಬರೆದ ಒಂದು ಹರಕುಪತ್ರವಿದ್ದುದು ರಮಾನಂದನಿಗೆ ಸಿಕ್ಕಿತು.

"......... ಎಷ್ಟುದಿನ ನಮ್ಮದು ಹೀಗೆನೇ ನಡೆದೀತು? ನಮ್ಮ ವಿವಾಹವನ್ನು ರಿಜಿಸ್ಟರ್ ಪದ್ಧತಿಯಲ್ಲಿ ಮಾಡಿಬಿಡುವ. ಸ್ತ್ರೀಜಾತಿಗೆ ವಂಚಿಸುವ ಹಂಚಿಕೆ ಮಾಡುವುದೆಂಬ ನಿಮ್ಮ ಕಲ್ಪನೆಯು ಶುದ್ಧ ತಪ್ಪು........" —(ಮುಂದಿನ ತುಸುಭಾಗವು ಹರಿದುಹೋಗಿತ್ತು.)

— **ತಮ್ಮ ಕಮಲೆ.**

ಚಾರುದತ್ತನ ಮನೆಯಲ್ಲಿ ಯಾರಿಗೂ ಈ 'ಕಮಲೆ'ಯ ಪತ್ತೆಯಿರಲಿಲ್ಲ. ರಮಾನಂದನು ಬಹಳವಾಗಿ ಆಲೋಚಿಸಿದನು. ಅವನು ಎಂದಿಗೂ ಈ ಹೆಸರನ್ನು ಕೇಳಿರಲಿಲ್ಲ.

೬.

ಒಂದು ದಿನ, ರಮಾನಂದನೊಡನಿದ್ದ ಮುತ್ತಿನ ಬಳೆಗಳು ಕಳವಾಗಿ ಹೋದವು. ಚಾರುದತ್ತನು ಅವುಗಳನ್ನು ಕದ್ದೊಯ್ದಿದ್ದನು. ಪ್ರಶ್ನಿಸಲಾಗಿ ಚಾರುದತ್ತನು, "ಸಾಮೋಪಾಯದಿಂದ ಫಲದೊರೆಯದಿದ್ದರೆ ಕೊನೆಗೆ ಶತ್ರುಗಳ ಮೇಲೆ ಒಂದೇ ಸವನೆ ಬೀಳಬೇಕಾಗುತ್ತದೆ"—ಎಂದು ಉತ್ತರವಿತ್ತನು. ಚತುರ ಮನುಷ್ಯರು, ಕಳ್ಳತನದ ಸಮರ್ಥನೆಯನ್ನು ಬುದ್ಧಿವಂತಿಕೆಯಿಂದಲೇ ಮಾಡುತ್ತಿರುವರು.

ಚಾರುದತ್ತನ "ವಿಶ್ವಬಂಧುತ್ವ" ಗ್ರಂಥವು ವಿಜಯದಶಮಿಯ ಮುಹೂರ್ತದಲ್ಲಿ ಪ್ರಸಿದ್ಧವಾಗುವುದಿತ್ತು. ಗ್ರಂಥವು **ಕೈಲಾಸವಾಸಿ ವತ್ಸಲೆಗೆ** ಅರ್ಪಿಸಲ್ಪಟ್ಟಿತ್ತು.

ಗ್ರಂಥ ಪ್ರಸಿದ್ಧಿಯ ಮುಂಚಿನ ದಿನ, ರಾತ್ರೆ ಒಂದು ಗಂಟೆಯ ತನಕ ರಮಾನಂದನು ಮುದ್ರಣವನ್ನು ಪರಿಶೀಲಿಸುತ್ತಲೇ ಇದ್ದನು. ಪ್ರೂಫುಗಳನ್ನು ನೋಡುವ ಕೆಲಸವನ ಅವನೇ ಮಾಡುತಿದ್ದನು. ಅವನಿಗೆ ಕಣ್ಣು ಕೂರಲು ಆರಂ ವಾಯಿತು. ದೀಪವನ್ನಾರಿಸಿ, ಆರಾಮ ಕುರ್ಚಿಯಲ್ಲಿ ಪವಡಿ ದನು.

ತುಸು ಕಣ್ಣು ತಾಗುವಷ್ಟರಲ್ಲಿ, ಆರಿಸಿದ ದೀಪವನ ಯಾರೋ ಹಚ್ಚಿದಂತೆ ಕಂಡುಬಂತು. ಯಾವುದೊ ಒಂದು ವ್ಯಕ್ತಿಯು ಅತ್ತ ಬಂತು. ಅವನ ಅತ್ತಿಗೆ!

ಆ ದೇವತೆಯ ಪ್ರೇಮಮಯಮೂರ್ತಿಯು ಪ್ರಸ ಆತನಿಗೆ ಕಂಡು ಬಂತು!

ವತ್ಸಲೆಯು ಚಾರುದತ್ತನ "ವಿಶ್ವಬಂಧುತ್ವ" ಗ್ರಂ ದಲ್ಲಿ ಕೈ ಹಾಕಿದಳು; ಮತ್ತು ಅರ್ಪಣ ಪತ್ರಿಕೆಯ ಪುಟವನ್ನು ತೆರೆದಳು.

"ಯಾವಾಕೆಯ ಲೀನತೆ, ಸೌಜನ್ಯ,
ಪ್ರೇಮ, ಸೌಂದರ್ಯ, ಶ್ರದ್ಧೆ,
ನನ್ನ ಮೇಲಿನ ಅನ್ಯೋನ್ಯ ಭಕ್ತಿ,
ನಿರಭಿಮಾನ ಮತ್ತು ಇತರ
ವಿವಿಧ ಗುಣಗಳು ನನ್ನ ಸ್ಫೂರ್ತಿಗೆ
ಕಾರಣವಾದುವೋ ——
ಆ ನನ್ನ ಪ್ರಾಣಪ್ರಿಯಳಾದ
ಕೈಲಾಸವಾಸಿ ವತ್ಸಲೆಯ
ಮಧುರ ಸ್ಮೃತಿಗೆ."

ಲೇಖಕ.

ವತ್ಸಲೆಯು ಆ ಅಕ್ಷರಗಳನ್ನು ಹೊಡೆದು, ತನ್ನ ಸ್ವಹಸ್ತದಿಂದ ಕೆಳಗೆ ಬರೆದಳು:

"ಯಾವಾಕೆಯ ವಿವಿಧ ಗುಣಗಳ
ಮೌಲ್ಯವನ್ನು ನಾನು ಎಂದೂ ಲಕ್ಷಿಸದೆ
ಯಾವಾಕೆಯ ಪ್ರೇಮದ ತಿರಸ್ಕಾರಮಾಡಿ,
ಆಕೆಯ ಮೈಮೇಲಿನ ಬಂಗಾರ — ಮತ್ತು
ವಿಶೇಷವಾಗಿ ಆಕೆಯ ಮುತ್ತಿನ
ಬಳೆಗಳನ್ನು (ಯಾವ ಬಳೆಗಳನ್ನು
ಆಕೆಯು ತನ್ನ ಕೈಯಿಂದ ದೂರಮಾಡು
ತ್ತಿರಲಿಲ್ಲವೋ ಅವನ್ನು) — ಪುಸ್ತಕ
ಪ್ರಕಟಣೆಯ ಉಪಯೋಗಕ್ಕೆ ಬಿದ್ದಾವು
ಎಂದೆಣಿಸಿದೆನೋ ಆಕೆ ಸತ್ತುಹೋದುದು
ಒಳ್ಳೆದಾಯಿತೆಂದು ಸಂತೋಷಿಸಿದೆನೋ—
ನನಗೆ ಎಂದಿಗೂ ಪ್ರಿಯಳಲ್ಲದ
ಆ ನನ್ನ ಅರ್ಧಾಂಗಿಗೆ—
ವಾಚಕರಿಂದ ಸತ್ಯವನ್ನು ಅಡ
ಗಿಸಿಡಲು ಮತ್ತು ಸ್ವತಃ ನನ್ನ
ಒಳ್ಳೇತನವನ್ನು ಮೆರೆಯಿಸಲು
ಈ ಕೃತಿಯನ್ನರ್ಪಿಸುವುದು ಅಗತ್ಯವಿದೆ"

ಲೇಖಕ.

[" ಇನು ಲೇಖಕನ ಅಂತರಂಗ. ಯಾರೂ ಇದನ್ನು ಓದಕೂಡದು."]

ಮರುದಿನ ರಮಾನಂದನು, ಜನರಿಗೆ, ಮೂರ್ಛಾವಸ್ಥೆಯಲ್ಲಿ ಕಂಡುಬಂದನು.



ಯುದ್ಧಾನಂತರದ ಪುನರ್‍ರಚನಾ ಯೋಜನೆಗಳೂ ರೈತನೂ

(ಲೇಖಕರು: ಶ್ರೀ। ಜಿ. ಗೋಪಾಲ ಪೈ, ಮೂಡಬಿದ್ರಿ.

ಯುದ್ಧಾನಂತರದ ಪುನರ್‍ರಚನಾ ಯೋಜನೆಗಳಲ್ಲಿ ಕೃಷಿ ಸುಧಾರಣೆಗೆ ಶ್ರೀ। ಪೈಯವರು ಪ್ರಾಮುಖ್ಯತೆ ಕೊಡುತ್ತಾರೆ. ಭಾರತವು ಕೃಷಿ ಪ್ರಧಾನ ದೇಶ. ಇಲ್ಲಿಯ ಕೃಷಿಕನ ಜೀವನದ ಮಟ್ಟವು ಉತ್ತಮಗೊಳ್ಳಬೇಕು; ಸುಧಾರಿತ ಕೃಷಿ ಬೇಕು; ಬಂಜರು ಪ್ರದೇಶಗಳು ಫಲವತ್ತಾಗಿ ಮಾರ್ಪಡಬೇಕು. ನಮ್ಮ ಕೃಷಿಕನಿಗೆ ಅರೆಯುಣಿಸು; ಅನಕ್ಷರತೆ; ಅನಾರೋಗ್ಯ; ಉತ್ತಮ ಬೀಜವಿಲ್ಲ; ಸುಧಾರಿತ ಕೃಷಿ ಸಾಧನೆಗಳಿಲ್ಲ; ಒಳ್ಳೆ ಧಾರಣೆಗಳ ನಿಶ್ಚಯವಿಲ್ಲ; ಜಾನುವಾರುಗಳಿಲ್ಲ; ಸರಕಾರವೇ ಈ ದುಸ್ಥಿತಿಯನ್ನು ಹೋಗಲಾಡಿಸಬಲ್ಲುದು ಶ್ರೀ। ಪೈಯವರು ಸ್ವತಃ, 68 ಎಕ್ರೆ ಸ್ಥಳ ಪಡೆದು ತಮ್ಮ ಕೆಲವು ಪ್ರಯೋಗಗಳನ್ನಾರಂಭಿಸಿದ್ದಾರೆ; ಅನುಭವದಿಂದ ಬರೆಯುತ್ತಾರೆ.

ನಾಳಿನ, ಅರ್ಥಾತ್ ಜಪಾನು ಸೋಲಿಸಲ್ಪಟ್ಟನಂತರದ, ಭಾರತವನ್ನು ಕಟ್ಟುವ ಯೋಜನೆಗಳು ಬೇಕಷ್ಟು ತಲೆಯೆತ್ತಿವೆ. ಅತ್ತ ಭಂಡವಾಳಗಾರರು ತಮ್ಮ ಯೋಜನೆ ಮಾಡಹತ್ತಿದರು; ಇತ್ತ, ಸರಕಾರ-ಪರಕೀಯವಾದರೂ-ನಮ್ಮ ದೇಶಕ್ಕೆ ತಾನೂ ಅನೇಕ ಯೋಜನೆಗಳನ್ನು ತಯಾರು ಮಾಡಿತು. ಅದಕ್ಕಾಗಿಯೇ ವೈಸರಾಯರ ಕೌನ್ಸಿಲಿನಲ್ಲಿ ಒಬ್ಬ ಸದಸ್ಯರನ್ನೂ ಕೂಡಿಸಿಕೊಳ್ಳಲಾಯಿತು. ಅಂತೂ ಜನತೆಯ ಜೀವನದ ಮಟ್ಟವನ್ನು ಮೇಲಕ್ಕೆತ್ತುವಲ್ಲಿ ಯಾವ ಯೋಜನಾಕಾರರೂ ಭಿನ್ನಾಭಿಪ್ರಾಯವನ್ನಿಟ್ಟುಕೊಂಡಿಲ್ಲ. ನೋಡುವ ದೃಷ್ಟಿಯಲ್ಲಿ ಮಾತ್ರ ಭಿನ್ನತೆ. ಭಂಡವಾಳಗಾರನಿಗೆ ತನ್ನದೇ ಒಂದು ದೃಷ್ಟಿಯಿದೆ: ಅಂತೆಯೇ ಯೋಜನೆ ತಯಾರಿಸದೆ ಉಪಾಯವಿಲ್ಲ. ಸರಕಾರ, ಯಾವ ಯೋಜನೆ ತಯಾರಿಸುವುದಾದರೂ, ತನ್ನ ನೆಲೆಗೆ ಧಕ್ಕೆ ಬಾರದ ರೀತಿಯಲ್ಲಿ ಯೋಜನೆಗಳನ್ನು ತಯಾರಿಸದೆ ಅನ್ಯ ಗತಿ ಅದಕ್ಕಿಲ್ಲ. ನಮ್ಮ ದೇಶ ಕೃಷಿ ರಾಜ್ಯವೆನ್ನುವಲ್ಲಿ ಮತಭೇದವಿರದು. ಶೇಕಡಾ 90ರಷ್ಟು ಮಂದಿ ಕೃಷಿ ಕರ್ಮದಲ್ಲಿ ಜೀವನ ಸಾಗಿಸುತ್ತಿದ್ದಾರೆ. ಆದ್ದರಿಂದ ಯಾವತ್ತೂ ಯೋಜನೆಯು ಜನತೆಯ ಮಾನ್ಯ ಪಡೆಯಬೇಕಾದರೆ, ಅದು ರೈತನ ಏಳಿಗೆಯ ಸಾಧಕವಾಗಿರತಕ್ಕದು.

ನಮ್ಮಲ್ಲಿ ಫಲವತ್ತಾದ ಭೂಮಿಯಿದೆ; ಅದುವೂ ನೈಸರ್ಗಿಕ. ಉತ್ತಲ್ಪಡುವ $\frac{1}{5}$ ಅಂಶಕ್ಕಿಂತ ಮಿಕ್ಕಿ ದಟ್ಟವಾದ ಕಾಡು ಇದೆ. ಪ್ರಪಂಚದ $\frac{1}{3}$ರಷ್ಟು ಜಾನುವಾರು ಇದೆ. ಧನದ ಕೊರತೆಯೆಂಬುದು ಇಲ್ಲ. ರೈತನು ಶ್ರಮಜೀವಿ; ಆ ಗುಣ ಸ್ವಾಭಾವಿಕ ಅಂಟಬಂದಿದೆ. ದಿನವಿಡೀ ಬೆವರು ಸುರಿಸುವನು; ವಿರಾಮವೆಂಬುದೇನೆಂದು ಅರಿಯನು. ಶ್ರಮಕ್ಕೆ ತಕ್ಕ ಫಲದಿಂದ ಮಾತ್ರ ವಂಚಿತನಾಗಿರುವನು. ಮೇಲಾಗಿ ರೋಗರುಜೆ. ವರುಷಂಪ್ರತಿ ಬರಿಯ ಮಲೇರಿಯಾ ಹಾವಳಿಯಿಂದಲೇ ಲಕ್ಷಗಟ್ಲೆ ಸಾಯುತ್ತಿದ್ದಾರೆ. ಪ್ಲೇಗು, ಕೊಲೆರಾದಂತಹ ಮಹಾರೋಗಗಳು ಆಗಿಂದಾಗ ಬೇಕಷ್ಟು ಕೊಚ್ಚಿಕೊಂಡು ಹೋಗುತ್ತಿವೆ. ಸಂಖ್ಯಾತಜ್ಞರ ಅಭಿಪ್ರಾಯದಂತೆ ಮರಣ ಪ್ರಮಾಣ ನಮ್ಮ ದೇಶದಲ್ಲಿ ಏರಿರುವಷ್ಟು ಇನ್ನಾವ ರಾಷ್ಟ್ರದಲ್ಲಿಯೂ ಇಲ್ಲ. ಇಲ್ಲಿ 1000ಕ್ಕೆ 22ರಂತೆ ಮರಣ ಸಂಖ್ಯೆ; ಇಂಗ್ಲೆಂಡಿನಲ್ಲಿ 1000ಕ್ಕೆ 12; ಅಮೇರಿಕಾದಲ್ಲಿ 1000ಕ್ಕೆ 11; ಜಪಾನಿನಲ್ಲಿ 1000ಕ್ಕೆ 17. ಒಂದು ವರ್ಷದ ಮೆಟ್ಟಲನ್ನು ದಾಟುವ ಮೊದಲೆ ವರ್ಷಂಪ್ರತಿ ಸರಾಸರಿ ಒಂದು ಮಿಲಿಯ ಎಳೆ ಹಸುಳೆಗಳು ಸಾಯುತ್ತಿವೆ. ಮಕ್ಕಳ ಮರಣ ಪ್ರಮಾಣ ನಮ್ಮ ದೇಶದಲ್ಲಿ 1000ಕ್ಕೆ 162. ಅಮೇರಿಕದಲ್ಲಿ 1000ಕ್ಕೆ 54. ಜಪಾನಿನಲ್ಲಿ 1000ಕ್ಕೆ 106. ಇಂಗ್ಲೆಂಡಿನಲ್ಲಿ 1000ಕ್ಕೆ 58. ಹೆತ್ತು ಸಾಯುವ ತಾಯಂದಿರ ಸಂಖ್ಯೆಯಾದರೂ ಪ್ರಪಂಚದ ಇತರ ರಾಷ್ಟ್ರಗಳಿಗಿಂತ ಅಧಿಕವಿದೆ. ಸರಾಸರಿ 1000 ಮಕ್ಕಳನ್ನು ಹೆತ್ತಾಗ 24 ತಾಯಂದಿರು ಸಾಯುವರಂತೆ. ಅಂದರೆ ವರ್ಷಂಪ್ರತಿ ಸರಾಸರಿ 200,000 ತಾಯಂದಿರು ಹೆರುವ ಕಾರ್ಯಕ್ರಮ ಪೂರೈಸುವಾಗ, ಸಾಯುತ್ತಿರುವರು. ಜನತೆಯ ಆರೋಗ್ಯದತ್ತ ಸರಕಾರದ ಲಕ್ಷ್ಯ ಎಷ್ಟಕ್ಕೆ ಸೆಳೆಯಲ್ಪಟ್ಟದೆ ಎಂದು ಒಡೆದು ಕಾಣುತ್ತಿದೆ! 1939ರಲ್ಲಿ ನಮ್ಮ ದೇಶದಲ್ಲಿ ಒಟ್ಟಗೆ 5650 ಆಸ್ಪತ್ರೆಗಳಿದ್ದುವು. ಉಪಚಾರ ಪಡೆದಿರುವವರ ಸಂಖ್ಯೆ ಬರಿಯ 79 ಮಿಲಿಯ-400 ಮಿಲಿಯ ಜನಸಂಖ್ಯೆಯಿರುವ ಈ ದೇಶದಲ್ಲಿ!

ರೈತನಿಗೆ ಅಕ್ಷರಜ್ಞಾನವಿಲ್ಲ; ಅದರ ಅವಶ್ಯಕತೆ ಅವನು ತಿಳಿಯನು. ಅದು ತನ್ನ ವ್ಯವಸಾಯಕ್ಕೆ ಸಹಾಯಕವಾಗಲೊಲ್ಲದೆಂಬುದು ಅವನ ಎಣಿಕೆ. ಶಾಸನದಿಂದ ಅವನು-ಕಡ್ಡಾಯ

ವಾಗಿ ದಾಕು ಹಾಕಿಸಿಕೊಳ್ಳುವಂತೆ–ಕಡ್ಡಾಯವಾಗಿ ಕಲಿಯುವಂತಾಗಬಾರದೆಂದಿರಲಿಲ್ಲ; ಆದರೆ ಅಂತಹ ಶಾಸನ ಮಾಡಬೇಕೆಂದು ಇಚ್ಛಿಸುವವರು ಅಧಿಕಾರದಲ್ಲಿಲ್ಲ. ಅಂತೆ ರೈತನು ಇದ್ದಲ್ಲಿಯೇ ಮುದುಡಿಕೊಂಡಿದ್ದಾನೆ. ಪರಿಣಾಮವಾಗಿ ಕೃಷಿ ಕರ್ಮದಲ್ಲಿಯೂ ಯಾವ ಸುಧಾರಣೆಯೂ ಅವನಿಗೆ ಒಗ್ಗದು. ಸುಧಾರಣೆ ಎಂಬುದೇ ಅವನಿಗೆ ಎಟಕಲಾಗದ ಶಬ್ದ. ಉದಾಹರಣೆಗಾಗಿ: ಹಸಿ ಸೊಪ್ಪಿನ ಗೊಬ್ಬರ ತುಂಬಾ ಪರಿಣಾಮಕಾರಿಯಾದ ಗೊಬ್ಬರವೆಂಬುದು ಅವನಿಗೆ ಗೊತ್ತು. ಅದು ವ್ಯವಸ್ಥಿತ ರೀತಿಯಲ್ಲಿ ಜೋಪಾನ ಮಾಡಲ್ಪಟ್ಟರೆ, ಪರದೇಶಗಳಿಂದ ಬರುತ್ತಿರುವ ಕೃತಕ ರಸಾಯನಿಕ ಗೊಬ್ಬರಗಳಿಗಿಂತ ಎಷ್ಟೋ ಪಾಲು ಮಿಗಿಲಾದ ಗೊಬ್ಬರವಾಗಿರುವುದು. ಹಸಿ ಸೊಪ್ಪಿನ ಗೊಬ್ಬರದಲ್ಲಿ ಕೂಡಿರುವಷ್ಟು ನತಜನಿ ವಾಯು ಇತರ ಯಾವತ್ತೂ ಗೊಬ್ಬರದಲ್ಲಿ ಅಷ್ಟು ಪ್ರಮಾಣದಲ್ಲಿ ಇರುವುದಿಲ್ಲ. ಹಟ್ಟಿಯಿಂದ ತೆಗೆಯಲ್ಪಟ್ಟ ಅಂತಹ ಗೊಬ್ಬರವನ್ನು ರೈತನು ದೊಡ್ಡದೊಂದು ಹೊಂಡದಲ್ಲಿ ಜೋಪಾನ ಮಾಡುವನು. ಮಳೆ ಬಿಸಿಲು ಸೋಂಕಿತೆಂದರೆ ಬಹು ಅಂಶ ಸತ್ವ ನಶಿಸಿಹೋಗುವುದೆಂದು ಅಂತಹ ಹೊಂಡಗಳಿಗೆ ಆವರಣ ಮಾಡಿ ತಕ್ಕ ರಕ್ಷಣೆ ಮಾಡುತ್ತಿರುವ ರೈತರು ಅದೆಷ್ಟು ಮಂದಿ ಇರಬಹುದು?

ರೈತನು ಒಳ್ಳೆಯ ದುಡಿಮೆಗಾರ. ದಿನವಿಡಿ ದುಡಿದರೂ ಅರೆಹೊಟ್ಟೆಯಿಂದ ಮೇಲೆ ಅವನೇನು ಮರುಭೂಮಿಯಲ್ಲಿ ಬೀಜವನ್ನು ಬಿತ್ತುತ್ತಿರುವನೇ? ಎಂಬ ಪ್ರಶ್ನೆ ಇತರ ರಾಷ್ಟ್ರದವರು ಆಶ್ಚರ್ಯದಿಂದ ಕೇಳಬಹುದು. ಅದಲ್ಲದಿದ್ದರೂ ಅವನು ಅರೆಹೊಟ್ಟೆಯಿಂದ ಬಳಲುತ್ತಿದ್ದಾನೆಂಬುದು ನಿಜವಿದೆ. ದೇಶದ ಜನನ ಸಂಖ್ಯೆ ಅತೀ ವೇಗದಲ್ಲಿ ವೃದ್ಧಿಯಾಗುತ್ತಿರುವುದು ಈ ಬಡತನಕ್ಕೆ ಒಂದು ಕಾರಣ. ಸಂಖ್ಯಾತಜ್ಞರ ಅಭಿಪ್ರಾಯ ಹೀಗಿದೆ: 1600ರಲ್ಲಿ ಈ ದೇಶದ ಜನಸಂಖ್ಯೆ ಬರಿಯ ನೂರು ಮಿಲಿಯ ಇದ್ದಿತ್ತು. 1700 ಇಸವಿಯಲ್ಲಿ ಅದು 150 ಮಿಲಿಯಕ್ಕೆ ಏರಿತು. 1850ರಲ್ಲಿ ಅದು 206 ಮಿಲಿಯಕ್ಕೆ ಹತ್ತಿತು. 1931ರಲ್ಲಿ 33 ಕೋಟಿಗೆ ಹಾರಿದೆ. ಇಂದು 400 ಮಿಲಿಯಕ್ಕೆ ತಡೆಯಿಲ್ಲದೆ ಬಂದು ನಿಂತಿದೆ. ಆಹಾರದ ಉತ್ಪನ್ನ ಅದೇ ಪ್ರಮಾಣದ ವೇಗದಲ್ಲಿ ಬಾರದೆ–ಇಷ್ಟೊಂದು ಬಡತನಕ್ಕೆ ಇಳಿಯಿತು. ನಮ್ಮ ದೇಶದ ಭೂಮಿ ಸುಮಾರು 1000 ಮಿಲಿಯ ಎಕ್ರೆ. ಅದರಲ್ಲಿ 360 ಮಿಲಿಯ ಎಕ್ರೆಯಲ್ಲಿ ಅಕ್ಕಿ ಗೋದಿಯಂತಹ ಆಹಾರ ಬೆಳೆಸಲ್ಪಡುತ್ತಿದೆ. ಸುಮಾರು 80 ಮಿಲಿಯ ಎಕ್ರೆ ಕೃಷಿ ಆಗುತ್ತಿದೆ. 175 ಮಿಲಿಯ ಎಕ್ರೆ ಬರಿಯ ಬಂಜರು ಸ್ಥಳವಾಗಿದೆ. 240 ಮಿಲಿಯ ಎಕ್ರೆ ಇನ್ನೂ ನೇಗಿಲ ಮೊನೆ ತಾಗದೆ ಉಳಿದಿದೆ. ಕೆಲವಂಶ ಕಾಡು–ಮತ್ತಿಷ್ಟು ಮರುಳು. ಅಂತೂ 6½ ಲಕ್ಷ ಹಳ್ಳಿಗಳಲ್ಲಿಯೂ ಕೆಲವಂಶ ಭೂಮಿ ಬಂಜರುಸ್ಥಳವಾಗಿದೆ. ಅಂತಹದನ್ನು ಹದಕ್ಕೆ ತಂದು ಕೃಷಿ ಮಾಡಲು ಸಾಧ್ಯವಿದೆ. ಬರಿಯ ಮರದ ನೇಗಿಲಿನಿಂದ ಅದು ಸಾಧ್ಯವಾಗದು; ಮಾತ್ರವಲ್ಲ ಸರಕಾರವೇ ಮುಂದುವರಿಯದೆ ರೈತನೇ ಪ್ರಯತ್ನಿಸುವುದೆಂದರೂ ಅಸಾಧ್ಯ. ಬದಲಾಗಿ ಸರಕಾರವು ಕೆಲವೊಂದು ಹಳ್ಳಿಗಳ ಗುಂಪಿಗೆ ಒಂದೊಂದು ಟ್ರೆಕ್ಟರ (Tractor ploughing) ಒದಗಿಸಿಕೊಟ್ಟು, ಸಾಮುದಾಯಿಕವಾಗಿ ರೈತರು ಕೂಡಿಕೊಂಡು ಅಂತಹ ಬಂಜರು ಸ್ಥಳಗಳನ್ನು ಒಡೆದು ಮಣ್ಣು ಫಲವತ್ತಾಗುವಂತೆ ಮಾಡಬೇಕು. ಹೆಚ್ಚುಹೆಚ್ಚು ಆಹಾರ ಪದಾರ್ಥಗಳನ್ನು ಬೆಳೆಯಿಸಿರಿ (Grow More Food) ಎಂದು ಬರಿಯ ಚಳವಳವನ್ನು ಮಾಡಿದೆವೆಂದರೆ, ರೈತನ ಆ ಎರಡು ಕೈಗಳು ಎಷ್ಟು ಮಾಡಬಲ್ಲುವು? ಭೂಮಿ ಇರಬಹುದು, ಕೆಲಸ ಮಾಡುವ ಕೈಗಳ ಕೊರತೆ ಇಲ್ಲದಿರಬಹುದು. ಬಿತ್ತಲ್ಪಡುವ ಬೀಜ ಅದೆಷ್ಟು ಮೆಟ್ಟಲುಗಳನ್ನು ದಾಟಿದ ನಂತರ ಆಹಾರವಾಗಿ ಉಪಯೋಗಿಸಲ್ಪಡುವದು? ಬೀಜ, ಹಿಟ್ಟಾಗಿ ಜನತೆಯ ಬಟ್ಟಲಲ್ಲಿರಬೇಕಾದರೆ ಅದೆಷ್ಟೊ ಪ್ರಯೋಗ ಶಾಲೆಗಳನ್ನು ದಾಟಿ ಬರಬೇಕಾಗಿದೆ. ಇದ್ದ ಜಮೀನನ್ನು ವ್ಯವಸ್ಥಿತ ರೀತಿಯಲ್ಲಿ ಕೃಷಿ ಮಾಡುವಷ್ಟು ಶಕ್ತಿ ರೈತನಿಗಿಲ್ಲ, ಮೇಲಾಗಿ ಗುತ್ತಿಗಳಲ್ಲಿಯೂ ಆಹಾರ ಪದಾರ್ಥಗಳನ್ನು ಬೆಳೆಸಬೇಕಾದರೆ ಸರಕಾರವು ಬೇಕಷ್ಟು ಸವಲತ್ತುಗಳನ್ನು ಕೊಡಬೇಕು. ಮೊದಲಾಗಿ ಸದ್ಯ ಸಾಗುವಳಿ ಆಗುತ್ತಿರುವ ಭೂಮಿಯಲ್ಲಿ ಉತ್ಪನ್ನ ಇಮ್ಮಡಿ ಆಗುವಂತೆ ಯೋಜನೆಗಳನ್ನು ತಯಾರಿಸಬೇಕು. ಇಂದು ಒಂದು ಮುಡಿ ಬೀಜ ಬಿತ್ತಿದ ಭೂಮಿಯಲ್ಲಿ ಸರಾಸರಿ 10 ಮುಡಿ ಅಕ್ಕಿಯಷ್ಟರ

ಭತ್ತ ಬೆಳೆಯುತ್ತಿದೆ. ಉತ್ತಮ ಬೀಜಗಳು ತಯಾರಿಸಲ್ಪಟ್ಟಲ್ಲಿ ಈಗ ಬಳಕೆಯಲ್ಲಿರುವ ಒರಟು ಮರದ ನೇಗಿಲುಗಳ ಬದಲಾಗಿ ಉತ್ತಮ ನೇಗಿಲುಗಳಿಂದ ಮಣ್ಣು ಆಳವಾಗಿ ಉತ್ತಲ್ಪಟ್ಟರೆ, ಉತ್ತಮ ಜಾನುವಾರು ತಯಾರಾಯಿತೆಂದರೆ—ಸದ್ಯ ಇರುವ ಆಹಾರದ ಸಮಸ್ಯೆಯನ್ನು ತುಂಬಾ ಪರಿಹಾರ ಮಾಡಿದಂತಾಗುವುದು.

ಅರೆಹೊಟ್ಟೆಯ ರೈತನಿಗಿಂತಲೂ ಕನಿಷ್ಟ ಸ್ಥಿತಿಯಲ್ಲಿ ನಮ್ಮ ದೇಶದ ಜಾನುವಾರುವಿನ ಮಟ್ಟವಿದೆ. ಅದಕ್ಕೆ ಸಾಕಷ್ಟು ಮೇವು ಇಲ್ಲ; ಹಿಂಡಿ, ಹತ್ತಿಕಾಳಿನಂತಹ ಉತ್ತಮ ತಿನಸು ಅದಕ್ಕೆ ಸಾಕಷ್ಟು ಸಿಗುತ್ತಿಲ್ಲ; ಉತ್ತಮ ಬೀಜದ ಹೋರಿಗಳು ಪ್ರತಿಯೊಂದು ಹಳ್ಳಿಯಲ್ಲಿಯೂ ಇರದೆ, ಜಾನುವಾರುವಿಗೆ ಬೆಳವಣಿಗೆಯೇ ಇಲ್ಲ. ಪರಿಣಾಮವಾಗಿ ಅನ್ನದ ಕೊರತೆಯು ರೈತನಿಗೆ ಹಾಲಿನ ಕೊರತೆಯೂ ಜತೆಗೆ ಇದೆ. ದೇಶಕ್ಕೆ ಬೇಕಾಗುವುದಕ್ಕಿಂತ ಕಾಲು ಪಾಲು ಹಾಲು ಜಾನುವಾರುವಿನಿಂದ ನಮಗೆ ಸಿಗುವುದಿಲ್ಲ. ಸರಾಸರಿ ನಮ್ಮ ದೇಶದ ದನ ದಿನವೊಂದರ 2 ರಾತ್ಲು ಹಾಲು ಕೊಡುತ್ತಿದೆ. ಅಂತೆ ಇಂಗ್ಲೆಂಡಿನ ಒಂದು ದನ ಸರಾಸರಿ 14 ರಾತ್ಲು ಹಾಲು ಕೊಡುತ್ತಿದೆ. ನಮ್ಮ ದೇಶದ 200 ಮಿಲಿಯ ಜಾನುವಾರುಗಳು ಕೊಡುತ್ತಿರುವ ಹಾಲು ಬರಿಯ 25 ಮಿಲಿಯ ಜರ್ಮನಿಯ ಜಾನುವಾರುಗಳು ಕೊಡುತ್ತಿವೆಯಂತೆ.

ಇಂದು ಬೇಕಷ್ಟು ಹಿಟ್ಟು ಸಾಕಷ್ಟು ಹಾಲು ಸಿಗದೆ ರೈತನು ಅರೆಹೊಟ್ಟೆಯಿಂದ, ಅನಾರೋಗ್ಯದಿಂದಲೇ ಇರುವನು. ಆರೋಗ್ಯವಿಲ್ಲ; ದೇಹದಲ್ಲಿ ಉತ್ಸಾಹವಿಲ್ಲ; ವಿದ್ಯೆ ಗಂಧವಿಲ್ಲ; ಯಾವ ಸುಧಾರಣೆಯಾಗಬೇಕಾದರೂ, ಕಾರ್ಯರೂಪಕ್ಕೆ ತರುವ ಆ ಜೀವಕ್ಕೆ ಸ್ಫೂರ್ತಿ ಎಲ್ಲಿಂದ ಬರಬೇಕು? ಇತರ ರಾಷ್ಟ್ರಗಳ ರೈತನಂತೆ ಇವನೂ ಸುಖಿಯಾದನೆಂದರೆ, ನಮ್ಮ ದೇಶದ ರೈತನು ಎಂದೆಂದಿಗೂ ಮಿಗಿಲಾದವನು. ಸೂಕ್ಷ್ಮವಾಗಿ ವಿಚಾರಿಸುವುದಾದರೆ, ಹಳ್ಳಿಯ ರೈತರಲ್ಲಿ ಎಷ್ಟೋ ಮಂದಿ ಯುದ್ಧಕ್ಕೆ ಸೇರಿರುತ್ತಿದ್ದಾರಷ್ಟೆ! ಸೇರುವ ಮೊದಲು-ವಿದ್ಯೆಯ ಗಂಧವಿಲ್ಲ; ಮೈತುಂಬ ಉಟ್ಟು ತಿರುಗಿದವನಲ್ಲ; ನೇರಾಗಿ ನಡೆದು ಬಲ್ಲವನಲ್ಲ; ಅಂತಹ ಹಳ್ಳಿಯ ಮೊದ್ದು, ಯುದ್ಧಕ್ಕೆ ಸೇರಿ ಆರು ತಿಂಗಳಲ್ಲಿಯೇ ರಜೆಯಲ್ಲಿ ಹಳ್ಳಿಗೆ ಬಂದನೆಂದರೆ–ಆರು ತಿಂಗಳ ತರಬೇತಿ, ಹೊಟ್ಟೆ ತುಂಬ ಊಟ; ಬೇಕಷ್ಟು ಉಡುಪು; ಮೇಲಾಗಿ ಶಿಸ್ತು—ಆದರ್ಶ ಯುವಕನಾಗಿ ಬರುವನು. ಎಂದಾದರೂ ಯುದ್ಧರಂಗದಲ್ಲಿ ಭಾರತ ವರ್ಷದ ಸೈನಿಕನು ಹಿಂದೆ ಸರಿದು ಬಲ್ಲನೇ? ಧೈರ್ಯ, ಸಾಹಸ, ದೇಶಾಭಿಮಾನ, ಸ್ವಾಭಿಮಾನ ಅವನಲ್ಲಿ ಸಹಜವಾಗಿ ಅಡಕವಾಗಿದೆ. ಹೊಟ್ಟೆಯ ಪ್ರಶ್ನೆಯೇ ಅವನನ್ನು ಜೀವನ್ಮೃತ ಸ್ಥಿತಿಯಲ್ಲಿಟ್ಟಾಗ, ಅವನಲ್ಲಿರುವ ನೈಸರ್ಗಿಕ ಗುಣ ಹೇಗೆ ತಾನೆ ಬೆಳಕಿಗೆ ಬರಬೇಕು?

ಇಂದು ನಮ್ಮ ದೇಶದ ರೈತನು ಅಪೇಕ್ಷಿಸುವುದಾದರೂ ಏನು? ಉತ್ತಮ ಬೀಜಗಳು; ಒಳ್ಳೆಯ ನೇಗಿಲುಗಳು; ಆದರ್ಶ ಗೋಸಂಪತ್ತು; ಸರಿ ಹಾವಳಿಯಿಂದ ವಿಮೋಚನೆ; ತಾನು ಶ್ರಮಿಸುವ ಭೂಮಿಯ ಮೇಲೆ ಮಮತೆ ಬೀಳುವಷ್ಟು ಸ್ವಾಮಿತ್ವ; ಅವನ ಬೆಳೆಗೆ ಉತ್ತಮ ಮಾರಾಟದ ವ್ಯವಸ್ಥೆ; ಸಾಕಷ್ಟು ಓದುಬರಹದ ಜ್ಞಾನ; ಒಳ್ಳೆಯ ಆರೋಗ್ಯ; ತನ್ನ ಹಳ್ಳಿಗಳಲ್ಲಿ ಉತ್ತಮ ರಸ್ತೆಗಳ ವ್ಯವಸ್ಥೆ; ತನ್ನ ಭೂಮಿಗೆ ಬೇಕಷ್ಟು ನೀರಾವರಿಯ ಪೂರೈಕೆ; ಮತ್ತೆ ಸಾಕಷ್ಟು ವಿರಾಮ. ಈ 800 ಮಿಲಿಯ ಕೈಗಳಿಗೆ ಬೇಕಾದಷ್ಟು ಕೆಲಸ; ಅದಕ್ಕೆ ತಕ್ಕಂತೆ ಫಲ.

ಯುದ್ಧಾನಂತರದ ಪುನರ್ರಚನೆಯ ಯಾವತ್ತೂ ಯೋಜನೆಯ ದೃಷ್ಟಿ ಅಂತಿರಬೇಕು.

ಶ್ಲೋ॥ ತರುಣಂ ಸರ್ಷಪಶಾಕಂ ನವೋದನಂ ಪಿಚ್ಛಲಾನಿ ಚ ದಧೀನಿ
ಅಲ್ಪಪ್ರಯೇಣ ಸುಂದರಿ ಗ್ರಾಮ್ಯಜನೋ ಮೃಷ್ಟಮಶ್ನಾತಿ

ತಾತ್ಪರ್ಯ॥ ಗ್ರಾಮವಾಸಿಗಳು ಎಳತಾದ ಕಾಯಿ ಸೊಪ್ಪುಗಳನ್ನು, ಹೊಸ ಅಕ್ಕಿ ಅನ್ನವನ್ನು, ಹೊಸತಾದ ಕೆನೆ ಮೊಸರನ್ನು ಸಹ ಅಲ್ಪವಾದ ವೆಚ್ಚದಿಂದ ರುಚಿಯಾಗಿ ಭುಂಜಿಸುವರು.



ಕೃಷ್ಣಮೂರ್ತಿ

(ಲೇಖಕರು: ಶ್ರೀ। ಕೆ. ಎಲ್. ಎನ್. ಉಪಾಧ್ಯಾಯ, ವಿದ್ವಾನ್.)

ಬಾಲ್ಯದಲ್ಲಿ ಮೊಳೆತು ಚಿಗುರೊಡೆದ ಕಲಾಭಿರುಚಿಯು ಹಲವರಲ್ಲಿ ಯೌವನಕ್ಕೆ ಪ್ರವೇಶಿಸುವಾಗ ಕಾರಣಾಂತರದಿಂದ ಚಿವುಟಿಹೋಗುವುದು ಅಥವಾ ಬೆಳವಣಿಗೆ ತಡೆಯಲ್ಪಟ್ಟು ಒಳಗೊಳಗೇ ನಶಿಸಹತ್ತುವುದು. ಕೆಲವರಲ್ಲಿ ಆ ಕಲಾಭಿರುಚಿಯನ್ನು ವಾಣಿಜ್ಯಾಭಿರುಚಿಯು ಅಥವಾ ಧನಗಳಿಸುವ ತೃಷ್ಣೆಯು ಅಳಿಸಿಬಿಡುವುದು. ಕಲೆಗೂ ಧನಕ್ಕೂ ಸಂಬಂಧವಿಲ್ಲ—ಎರಡೂ ಒಟ್ಟೊಟ್ಟಿಗೇ ಇರಲಾರವು ಅಥವಾ ನಡೆಯಲಾರವು ಎಂದು ಈ ಲೇಖಕರು ಚಿಕ್ಕದೊಂದು ಚಿತ್ರವನ್ನಿಲ್ಲಿ ಬಿಡಿಸಿ ತೋರುತ್ತಾರೆ. ಇದು ಒಂದು ಕಥೆಯಲ್ಲ, ಮಾನವನ ವಿಚಾರಕ್ಕೆ ವಿನಂತಿಸುವ ಒಂದು ದೃಷ್ಟಾಂತ. ನಮ್ಮಲ್ಲಿಂದು ಹಣದ ಪೆಟ್ಟಿಗೆಗಳಿಗೊರಗಿ ಕುಳಿತ 'ಮೂರ್ತಿ'ಗಳು ಎಷ್ಟಿಲ್ಲ!

ಅದು ಅಂತಹ ಮಧುರ ಕಾಲ. ನೆಲದ ಸೊಗಡು ಗಂಧವನ್ನು ಬೀರಿದ ಬೇಸಿಗೆ ಹೂಮಳೆಗೆ ಬೇಕೆಂದೇ ಅಂಗಳದ ಮಧ್ಯದಲ್ಲಿ ನಿಂತು ತಲೆಯನ್ನೊಡ್ಡಿ ತೋಯಿಸಿಕೊಂಡ ಬಾಲ್ಯ. ಮೊದಲ ಮಳೆಯೊಡನೆ ಬಿದ್ದ ಆಲಿಕಲ್ಲುಗಳನ್ನು ಫಕ್ಕನೆ ಹೆಕ್ಕಿ ಬಾಯಿಗೆ ಹಾಕಿ, ತುದಿ ನಾಲಗೆಯನ್ನು ಮುಂದೆ ಚಾಚಿ ಅಮ್ಮನಿಗೆ ತೋರಿದ ಹುಡುಗಾಟಕೆ ಮೂರ್ತಿಯನ್ನು ಇನ್ನೂ ಬಿಟ್ಟಿಲ್ಲ.

ಆಗ ಮೂರ್ತಿಗೆ ಏಳೆಂಟು ವಯಸ್ಸಿರಬಹುದು. ಮೈಸೂರಿನ ಪ್ರಸಿದ್ಧ ಗವಾಯಿಗಳೊಬ್ಬರು, ಅವನೂರಿಗೆ ಬಂದಿದ್ದರು. ಅವರ ಕಚೇರಿಯಂದು ಕೃಷ್ಣಮಂದಿರದಲ್ಲಿ ಜನ ಕಿಕ್ಕಿರಿದು ಸೇರಿತ್ತು. ಮೂರ್ತಿಗೆ ಬಾಲ್ಯದ ಕುತೂಹಲವೊಂದೆಡೆ; ಸಂಗೀತವನ್ನು ಇತರರಂತೆ ತಾನೂ ಕುಳಿತು ಆಲಿಸಬೇಕೆಂಬಾಸೆ ಮತ್ತೊಂದೆಡೆ. ಮೂರ್ತಿ ತನ್ನಿತರ ಸಂಗಡಿಗರನ್ನು ದೂರ ಉಳಿದು ತಾನು ಮುಂದೊತ್ತಬಹು

ದಾದಷ್ಟು ಮುಂದೊತ್ತಿ ಕುಳಿತನು. ಆರಂಭದಲ್ಲಿ ರಾಗ ಪ್ರಸ್ತಾರ ನಡೆದಾಗಲೇ ಸಂಗೀತದ ತಿರುಳು ತಿಳಿದ ಇತರ ಸಭಿಕರಂತೆ ತಾನೂ ತಲೆದೂಗತೊಡಗಿದನು. ಮೂರ್ತಿಯ ಈ ಮಕ್ಕಳಾಟಿಕೆ ಕಂಡು, ಹತ್ತಿರ ಕುಳಿತಿದ್ದ ಮಂದಿ ಮೋಜಿಗೆಂದು ಮೂರ್ತಿಯನ್ನು ಮುಂದೆ ಕುಳ್ಳಿರಿಸಿದರು. ಕೊನೆಗೆ ಸಹಜವಾಗಿ ಭಾಗವತರ ದೃಷ್ಟಿ ಮೂರ್ತಿಯ ಮೇಲೆ ಬಿತ್ತು. ಅವರೂ ಕೂಡ ಸ್ನೇಹದಿಂದ ಅವನನ್ನು ಬಳಿಗೆಳೆದು ಪಕ್ಕ ವಾದ್ಯದವರ ಬಳಿ ಕೂರಿಸಿಕೊಂಡರು. ಸಂಗೀತ ಮುಗಿದ ಬಳಿಕ ಅವರು ನೆರೆದ ಸಭೆಯಲ್ಲಿ ಮೂರ್ತಿಯನ್ನು ತುಂಬ ಪ್ರಶಂಸಿಸಿ ತನಗೆ ಹಾಕಿದ್ದ ಮಲ್ಲಿಗೆ ದಂಡೆಯನ್ನು ಮೂರ್ತಿಯ ಕೊರಳಿಗೆ ತೊಡಿಸಿ, 'ಚೆನ್ನಾಗಿ ಬಾಳಪ್ಪ' ಎಂದು ಹರಸಿದರು. ಬಾಲ್ಯದಿಂದಲೂ ಮೂರ್ತಿಯ ಸಹಜ ಒಲವು ಸಂಗೀತದತ್ತ ಅನ್ನೋದಕ್ಕೆ ಇಷ್ಟೇ ಸಾಕು.

ಈಗಲೂ, ಅಂದರೆ ಕಾಲವು ತಾನಾಗಿಯೇ ಮೂರ್ತಿಯಲ್ಲಿ ಅನೇಕ ಬದಲಾವಣೆಗಳನ್ನು ತಂದೊಡ್ಡಿದ ಮೇಲೂ, ಮೂರ್ತಿಯಲ್ಲಿ ಅದೇ ರಸದೋಜೆ ಕಂಡುಬರುತ್ತಿದೆ. ಅವನು ಕೊಳಲನ್ನು ತುಟಿಗೆ ಆನಿಸಿ ಬಾರಿಸತೊಡಗಿದರೆ ಬಾಹ್ಯ ಪ್ರಪಂಚವನ್ನೇ ಮರೆತು ತಲ್ಲೀನನಾಗುತ್ತಾನೆ. ಆ ದಿನ ಹುಣ್ಣಿಮೆ ಹತ್ತಿರದ ದಿನದ ಅದಾವುದೋ ಸಂಜೆ. ಮೂರ್ತಿ ತನ್ನ ಅಭ್ಯಾಸದ ಕೋಣೆಯಲ್ಲಿ ಏಕಾಂತವಾಗಿ ಕುಳಿತಿದ್ದನು. ಮೊದಲು ಪೂರ್ವ ದಿಗಂತದುದ್ದಕ್ಕೂ ನೀಡಿಕೊಂಡ ಪಶ್ಚಿಮಘಟ್ಟಗಳೊಂದು ಬದಿಯಲ್ಲಿ ಮುತ್ತಿನ ಚೂರ್ಣ ಚೆಲ್ಲಿದಂತೆ ಇಂದು ಕಿರಣಗಳು ಹೊಗರೊಡೆದು ಕಾಣಿಸಿಕೊಂಡವು. ದಿಗಂತದ ಅಜ್ಞಾತದಿಂದ ಚಂದ್ರಬಿಂಬವು ಕ್ರಮೇಣ ರಕ್ತಛಾಯಾ ಪಿಂಡದಂತೆ ಮೇಲಕ್ಕೇರಿ ಬಂತು. ನೆಲವು ಅಮೃತರಸೋದಧಿಯಲ್ಲಿ ಅದ್ದಿಹೋಯಿತೆಂಬುದಾಗಿ ಮೂರ್ತಿ ಭಾವಿಸಿದನಾಗ. ಚಂದ್ರೋದಯಾನಂದ ನಿರ್ಭರನಾಗಿ ಉನ್ಮತ್ತನಂತಾದನು. ವಿಲಾಸಮಯ-ಪ್ರೀತಿಮಯ ಭಾವಗಳು ಅವನಲ್ಲಿ ಎಚ್ಚೆತ್ತು ರಸಾನಂದ-ಅಂತರಂಗದಲ್ಲಿ ಚಿಮ್ಮಿ, ಅವನು ಬಹಳ ಹೊತ್ತು ಕಣ್ಮುಚ್ಚಿ ಕುಳಿತನು.

ಆ ರಾತ್ರಿ ಎಂದಿನಂತೆ ಮೂರ್ತಿ ತನ್ನ ಕೋಣೆಯ ಮಂಚದ ಮೇಲೆ ಕುಳಿತು ಸ್ವರಲೀಲೆಯಲ್ಲಿ ತೊಡಗಿದನು. ಅವನ ಅಭ್ಯಾಸದ ಕೋಣೆಯ ಸುತ್ತ ಬಳಸಿದ್ದ ಹೊಲಗಳಲ್ಲಿ ತಿಂಗಳು ಸ್ನೇಹರಸದಂತೆ ಚೆಲ್ಲಿತ್ತು. ಘಂಟೆ ಹನ್ನೆರಡು — ಒಂದು–ಎರಡು ಕಳೆದರೂ ಮೂರ್ತಿಯ ರಾಗಾವೇಶ ತಣಿಯಲಿಲ್ಲ. ಆ ದಿನ ಸಾಕ್ಷಾತ್ ವಾಣಿಯೇ ಲಹರಿಯನ್ನು ತನಗೆ ಪ್ರೇರಿಸುತಿದ್ದಂತೆ ಮೂರ್ತಿಗೆ ಕಂಡಿತು. ಚೆಲುವು ಸೂಸುವ ಸೃಷ್ಟಿಯೊಡನೆ ನಾದಲೀಲೆಯೂ ಬೆರೆತು ಮೂರ್ತಿಯ ಹೃದಯವು ಲೀಲಾವಿಹಾರಿಯಾಗಿ ಕುಣಿಕುಣಿದಾಡಿತು. ಮೂರ್ತಿಯು ತನ್ನ ಗಾನವನ್ನು ಕೇಳಿ ಮೋದಗೊಳ್ಳುವ ಜೀವ ಮತ್ತೊಂದಿಲ್ಲದ ಆ ಗಂಭೀರ ರಾತ್ರಿಯಲ್ಲಿ

ತಾನೇತಾನಾಗಿ ಮೈಮರೆತನು. ರಾತ್ರಿ ಬಹಳ ಮೀರಿದುದರಿಂದ ಮಧ್ಯೇ ಮೂರ್ತಿಯ ತಾಯಿ ಕಕ್ಕಿ ಎಚ್ಚೆತ್ತು "ಅಪ್ಪಾ! ರಾತ್ರಿಯೆಲ್ಲ ಕೊಳಲು ಬಾರಿಸುತ್ತ ಕಾಲಕಳೆಯುತಿಯೇನಪ್ಪ! ಹೋದ ಬಾರಿಯಂತೂ ಪಬ್ಲಿಕ್ ಪರೀಕ್ಷೆಯಲ್ಲಿ ನಾಪಾಸಾದೆ. ಈ ಸಲವಾದರೂ.............. ಏನೋ ಅಪ್ಪ ನಿನ್ನಿಷ್ಟ........ ...." ಇನ್ನೂ ಏನೇನೋ ಅರೆನಿದ್ದೆಯಲ್ಲಿ ಗೊಣಗುಟ್ಟಿದಳು. ಮೂರ್ತಿಯೂ ಬಾರಿಸಿ ಬಾರಿಸಿ ದಣಿದುದರಿಂದ ಕೊಳಲನ್ನು ಕೆಳಗಿಟ್ಟು ತುಸು ಹೊತ್ತು ಮೌನವಾಗಿ ಕುಳಿತನು. ಮೇಜಿನ ಮೇಲೆ ಒಪ್ಪವಾಗಿಟ್ಟದ್ದ ಪುಸ್ತಕಗಳನ್ನು ಕಂಡಾಗ ಆಗಲೇ ಬಾಗಿಲ ಬಳಿ ನಿಂದ ಪರೀಕ್ಷೆಯ ಯೋಚನೆ ತಲೆಯಲ್ಲಿ ಹಾಯ್ದು ಒಂದು ತರದ ಭಯವು ಮನಸ್ಸಿನಲ್ಲಿ ಸಂಚಾರವಾಯಿತು. ಆ ಭಯವು ಏನೆಂದು ಪರೀಕ್ಷಾರ್ಥಿ ವಿದ್ಯಾರ್ಥಿಗಳಿಗೇ ಗೊತ್ತು. ಮೂರ್ತಿಯ ಮನದಲ್ಲಿ ಆನಂದದ ಮಹಾಪೂರವು ಬತ್ತಿ, ತಾನು ತನ್ನೊಲವಿನ ದಾರಿಯನ್ನು ಬಿಟ್ಟು ಎಲ್ಲಿಯೋ ಅಜ್ಞಾತದ ಕಡೆಗೆ ಸಾಗುತ್ತಿದ್ದೇನೆಂಬ ಅನಿರ್ವಚನೀಯ ವೇದನೆಯು ಹರಹಿನಿಂತಿತು. ಎರಡು ಹನಿ ಕಣ್ಣೀರು ಕರೆದು ಮೂರ್ತಿ ತನ್ನೊಲವಿನ ಕೊಳಲನ್ನು ಚೀಲದಲ್ಲಿ ಮಡಗಿದನು. ಹೊರಗೆ ಹಾಲುತಿಂಗಳು ಹರಡಿತ್ತು. ಜನ್ಮಾಂತರದ ಆವುದೋ ಸೌಹಾರ್ದವನ್ನು ಮತ್ತೆ ಜ್ಞಾಪಿಸಿಕೊಂಡಂತೆ ಅವನೆದೆ ಕದಡಿ ಕಲಂಕಿತವಾಯಿತು. ತಿಂಗಳ ಒಂದು ಕಿರಣವೂ ಒಳಗೆ ನುಸುಳದಂತೆ ಕಿಟಿಕಿ ಕದ ಮುಚ್ಚಿ ಭದ್ರಪಡಿಸಿ ಮೂರ್ತಿ ಪುಸ್ತಕ ಹಿಡಿದು ಓದಲಾರಂಭಿಸಿದನು. ಓದುತ್ತಿದ್ದಂತೆ ಮೂರ್ತಿ ಮನಸ್ಸಿಗೆ ಹಾಗೆ ಹೊಳೆಯಿತು. "ಈ ಪುಸ್ತಕದ ಒಣ ವಿಷಯಗಳಿಗೂ ತನ್ನೊಲವಿನ ಸಂಗೀತಕ್ಕೂ ಯಾವ ತರದ ಸಂಬಂಧವೂ ಇಲ್ಲ." ತರುವಾಯ ಮೂರ್ತಿಗೆ ಗಾಢ ನಿದ್ದೆ ಹತ್ತಿತು.

ಒಲವು ಒಂದೆಡೆ ಹರಿದರೆ ಓದು ಮತ್ತೊಂದು ರೀತಿಯಲ್ಲಿ ಸಾಗುತ್ತದೆ. ಜೀವನದ ರುದ್ರಲೀಲೆ ಇವೆರಡರಿಂದಲೂ ಬೇರೆಯೆ. ಕುಂಟುತ್ತ ನಡೆದ ಮೂರ್ತಿಯ ವಿದ್ಯಾಭ್ಯಾಸ ಮುಗಿದ ತರುವಾಯ ಮೂರ್ತಿಯ ಬಾಳುವೆಯ ಅಧ್ಯಾಯ ಆರಂಭವಾಗುತ್ತದೆ. ಮನೆಮಂದಿ ನಿರ್ವಾಹದ ಹೊಣೆ ತನ್ನ ಮೇಲೆ ಬಿದ್ದ ತರುವಾಯ ಒಲವು ಹರಿದತ್ತ ನಡೆಯುವ ವಿಚಾರ ಕೊನೆಗೊಳ್ಳುತ್ತದೆ. ಹಲವಾರು ಸಂದರ್ಭಗಳು ಹಾಗೆ ಬಂದೊದಗಿದ ತರುವಾಯ ಮೂರ್ತಿಗೆ ಜೀವನವು ಹೂವಿನ ಹಾಸಿಗೆಯಲ್ಲಿ ಪವಡಿಸಿದಂತಲ್ಲವೆಂಬ ವಿಚಾರ ತಾನಾಗಿ ತಿಳಿಯಿತು. ಅವನೀಗ ಕೊಳ್ಳುವ-ಕೊಡುವ ವ್ಯಾಪಾರದ ಜಂಝಾಟದಲ್ಲಿ ದಿನದ ಬಹುಭಾಗವನ್ನು ಕಳೆಯುತ್ತಾನೆ. ಜನರು ಅವನನ್ನು ಸಾಹುಕಾರರೆಂದು ಸಂಬೋಧಿಸಿ ಕರೆಯುವಷ್ಟು ಅವನ ವ್ಯಾಪಾರ ವಹಿವಾಟು ವಿಸ್ತಾರಗೊಂಡಿದೆ. ತನ್ನೊಲವಿಗೆ ತಕ್ಕಂತೆ ನಡೆಯುವಂತಾದರೆ ಮನುಷ್ಯನ ಆನಂದಕ್ಕೆ ಮಿತಿಯಿಲ್ಲ. ಹೆಚ್ಚು ಗ್ರಂಥಗಳನ್ನು ಓದುವದರಿಂದಲೂ ಒಂದು ತರದ ಆತ್ಮ ಸಂತೋಷವಿದೆ. ಇವೆರಡರಿಂದಲೂ ವ್ಯಾಪಾರಿಯ ಲಾಭಖೋರತನದ ಉತ್ಸಾಹವು ರಾಕ್ಷಸೀ ಎನ್ನುವಿರೇನು? ಹಾಗೆಯೇ ನೀವು ಹೇಳುವದಾಗಿದ್ದರೆ ಮೂರ್ತಿ ನಿಮ್ಮ ನಿರ್ಣಯಕ್ಕೆ ಫಕ್ಕನೆ ಸೈಗುಟ್ಟಲಾರನು. ಔದ್ಯೋಗಿಕ ದೃಷ್ಟಿಯಿಂದ ಅಷ್ಟರಮಟ್ಟಿಗೆ ಆ ವೃತ್ತಿಯು ಅವನ ರಕ್ತದಲ್ಲಿ ಬೆರೆತುಕೊಂಡಿದೆ. "ನಿನ್ನಾ ಕೊಳಲು ಎಲ್ಲಿ? ಚಾರ್ಲಸ್ ಡಿಕನ್ಸ್, ಗೋಲ್ಡ್‌ಸ್ಮಿತ್ ಇವರ ಕೃತಿಗಳೆಲ್ಲಿ?" ಎಂದು ಮೂರ್ತಿಯನ್ನು ಈಗ ದಯವಿಟ್ಟು ಕೇಳಬೇಡಿ. ಅವೆಲ್ಲ ಗತವೈಭವದ ಮಸಣದಡಿ ಮಣ್ಣು ಮುಕ್ಕಿವೆ.

ಅಂಗಡಿಯಲ್ಲಿ ಗಿರಾಕಿಗಳ ಗಲಗಲ ಗದ್ದಲ ಮುಗಿದ ತರುವಾಯ ಮೂರ್ತಿ ಹಣದ ಪೆಟ್ಟಿಗೆಗೆ ಬೆನ್ನು ಆನಿಸಿಕೊಂಡು ಸುಮ್ಮನೆ ಕುಳಿತಿರುವನು. ಆಗ ಅವನಿಗೆ ದೂರದಲ್ಲೊಂದು ವೇಣುನಾದವು ಕೇಳಿಸಿತು. ಓರ್ವ ಭಿಕ್ಷುಕನು ಕೊಳಲೂದುತ್ತ ಅಂಗಡಿಗಾರರಿತ್ತ ಭಿಕ್ಷೆಯನ್ನು ಇಸುಕೊಳ್ಳುತ್ತ ಕ್ರಮೇಣ ಮೂರ್ತಿಯ ಅಂಗಡಿ ಬಳಿಯೇ ಬಂದು ನಿಂತನು. ಮೂರ್ತಿಯು ಭಿಕ್ಷುಕನ ಕೈಯಲ್ಲಿ ಒಂದು ರೂಪಾಯಿ ಇಟ್ಟು, ಇನ್ನು ಈ ಬೀದಿಯಲ್ಲಿ ಕೊಳಲು ಬಾರಿಸಬೇಡವೆಂದು ಹೇಳಿ ಕಳುಹಿಸಿದನು. ಆಗ ಅವನ ಮನಸ್ಸಿನಲ್ಲಿ ಆವ ಕ್ಷೋಭೆಯೆದ್ದಿತ್ತೆಂಬದು ಅವನಿಗೇ ಗೊತ್ತು.

(40ನೇ ಪುಟಕ್ಕೆ ಮುಂದುವರಿದಿದೆ)

ಕನ್ನಡಿಗರು ಮತ್ತು ಕೇರಳೀಯರು

(ಲೇಖಕರು:—ಶ್ರೀ ಕಯ್ಯಾರ ಕಿಞ್ಞಣ್ಣ ರೈ, ವಿದ್ವಾನ್.)

ಕೇರಳೀಯರು ದಕ್ಷಿಣ ಕನ್ನಡದ ದಕ್ಷಿಣ ಭಾಗವನ್ನು ಆಕ್ರಮಿಸಲು ಯತ್ನಿಸಿ, ಚಳವಳ ಹೂಡಿದ ವಿಷಯವು ಇಂದು ನಿನ್ನೆಯ ದ ಇತ್ತೀಚೆಗೆ ಆರೇಳು ವರ್ಷಗಳಿಂದಂತೂ ಇದು ಪ್ರಬಲವಾಗಿದೆ. ಮೊದಮೊದಲು ಅಲಕ್ಷ್ಯಭಾವದಿಂದಿದ್ದ ಕನ್ನಡಿಗರು ಮತ್ತೆ ಕಣ್ಬಿಟ್ಟು ನೋಡಿ, ಪ್ರತಿಭಟನೆ ತೋರಿದರು. ಕೇರಳೀಯರು ತಮ್ಮ ಹಟಸಾಧನೆಯಲ್ಲೇ ಇರುವರು. ಶ್ರೀ ರೈಯವರು, ವಿವಾದಾಸ್ಪದವಾದ ಕಾಸರಗೋಡಿನ ತರುಣರು, ಕನ್ನಡದ ಸೇವಕರು. ಹಾಗೆಯೇ ವಿಶಾಲವಾದ ರಾಷ್ಟ್ರೀಯ ಭಾವನೆಯುಳ್ಳವರೂ ಇದ್ದು ತಮ್ಮ ಉದಾ ಮನೋಭಾವದಲ್ಲಿ ಕೇರಳೀಯರ ಆಕ್ರಮಣಬುದ್ಧಿಯನ್ನು ನಯನುಡಿಗಳಲ್ಲೆ-ಮೃದುತರವಚನಗಳಲ್ಲೆ ಖಂಡಿಸಿ, "ನಾವೆಲ್ಲರೂ ಒಂದ ಭಾರತ ಜನನಿಯ ಮಕ್ಕಳು. ಪ್ರಾಂತಾಭಿಮಾನದಿಂದ ಸಂಕುಚಿತಮತಿಗಳಾಗಬಾರದು. ಏಕೀಕರಣಕ್ಕಾಗಿ ಆಂದೋಲನ ಹೂಡಲೆ ಬೇಕು, ಆ ಆಂದೋಲನವು ಸೌಹಾರ್ದ-ಸಹಕಾರ ಬುದ್ಧಿಗಳಿಂದ ನಡೆಯಬೇಕು"— ಎನ್ನುತ್ತಾರೆ.

ಕೇರಳ ಕನ್ನಡಿಗಳ ಗಡಿನಾಡಿನಲ್ಲಿ, ನಮ್ಮ ದಕ್ಷಿಣ ಕನ್ನಡದಲ್ಲಿ, ಅದರಲ್ಲೂ ವಿಶೇಷವಾಗಿ ಕಾಸರಗೋಡಿನಲ್ಲಿ, ಕೆಲಮಂದಿ ಕೇರಳೀಯರಿಗಿರುವ ಆಕ್ರಮಣ ಬುದ್ಧಿಯ ಕುರಿತು ಒಮ್ಮೊಮ್ಮೆ ಕೆಲವು ಘರ್ಷಣೆಗಳುಂಟಾಗಿವೆ. ೧೯೩೭ರ ಸುಮಾರಿನಲ್ಲಿ ಒಮ್ಮೆ ಈ ವಿಷಯದಲ್ಲಿ ಒಂದು ಚಳವಳವೇ ಉಂಟಾಗಿತ್ತು. ಅದೇ ಸುಮಾರಿಗೆ 'ಪ್ರಭಾತ' ದಿನ ಪತ್ರಿಕೆಯಲ್ಲಿ 'ಕನ್ನಡಿಗ'ರೊಬ್ಬರು 'ಕನ್ನಡದ ಗಡಿನಾಡಿನ ಮೇಲೆ ಕೇರಳೀಯರ ಧಾಳಿ' ಎಂಬ ಉಜ್ವಲ ಲೇಖನವೊಂದನ್ನು ಬರೆದಿದ್ದರು.

ನಾಡಿನ ಅಭಿಮಾನ ಒಳ್ಳೆಯದೆಂಬುದು ಅವಿಚಲ ಸತ್ಯ. ಅಂತೆಯೇ ಪ್ರತಿಯೊಬ್ಬ ವ್ಯಕ್ತಿಯಾದರೂ ತನ್ನ ಕುರಿತು ಆತ್ಮಾಭಿಮಾನವನ್ನು ಇಟ್ಟುಕೊಳ್ಳಬೇಕಲ್ಲದೆ, ತಾನೋರ್ವ ಕೀಳು ಹುಳು ಎಂದು ಬಗೆವ ನೀಚತಾಭಾವ ಪ್ರಾಗತಿಕ ಮನೋಧರ್ಮವಲ್ಲ. ಆದರೆ ಈ ಆತ್ಮಾಭಿಮಾನ, ಪ್ರಾಂತಾಭಿಮಾನ, ರಾಷ್ಟ್ರಾಭಿಮಾನಗಳು ಮನುಷ್ಯನ ಹೃದಯವನ್ನು ಸಂಕುಚಿತತೆಯ ಸೆರೆಯಲ್ಲಿ ಸಿಲುಕಿಸದೆ ವಿಶಾಲವಿಶಾಲವಾಗಿ ರೂಪುಗೊಳಿಸಬೇಕು; ಈ ಎಲ್ಲಾ ಅಭಿಮಾನಗಳೂ ಅನ್ಯೋನ್ಯ ಘರ್ಷಣೆಗೊಂಡು ಎಂದಿಗೂ ದಾವಾಗ್ನಿ ಹುಟ್ಟಿಸಬಾರದು. ಇಂದು ನಾವು ಜಗತ್ತಿನಲ್ಲಿ ಕಾಣುತ್ತಿರುವ ಈ ಧಳ್ಳುರಿ ಎಂದೆಂದಿಗೂ ಮುಂದೆ ಪುನರಾವರ್ತನೆಯಾಗಬಾರದು. ಅದರಿಂದಲೇ ಇಂದು ಕನ್ನಡಿಗರೂ ಕೇರಳೀಯರೂ ತಮ್ಮ ಪ್ರಾಂತದ ಅಭಿಮಾನದಲ್ಲಿ ಸಂಕುಚಿತಮತಿಗಳಾ ಬಾರದು.

ಭಾಷಾಶಾಸ್ತ್ರವನ್ನು ನೋಡಿದರೂ ಕನ್ನಡ ಕೇರಳ ನುಡಿ ಗಳು ಒಂದೇ ಮೂಲಮಾತೃಭಾಷಾಜನನಿಯ ಮಕ್ಕಳು ಸಾಹಿತ್ಯದ ವಿವಿಧ ಮಾರ್ಗಗಳಲ್ಲಿ, ಗದ್ಯ, ಪದ್ಯ, ಛಂದಸ್ಸು ರಸ, ಅಲಂಕಾರಾದಿ ವಿಭಾಗಗಳಲ್ಲಿಯೂ ಕನ್ನಡ ಕೇರಳದ ಹಾದಿಗಳು ಒಮ್ಮುಖವಾಗಿ ಸಾಗುವುದನ್ನು ನಾವು ನೋಡ

(39ನೇ ಪುಟದಿಂದ ಮುಂದುವರಿದುದು)

ಆ ದಿನ ರಾತ್ರೆ ಮೂರ್ತಿ ಮನೆಗೆ ಬಂದವನೇ ಊಟ ತೀರಿಸಿ ಹಿಂದಣ ಆ ದಿನಗಳಲ್ಲಿ ಹೇಗೋ ಹಾಗೆಯೇ ಕೊಳಲೂದಲಾರಂಭಿಸಿದನು. ಎಷ್ಟೋ ಹೊತ್ತು ಹೀಗೆಯೇ ಕಳೆಯಿತು. ಕೊನೆಗೆ ಅವನಂದುಕೊಂಡನು, 'ಇದು ಒಲವಿನಾರಾಧನೆಯಲ್ಲ; ಅಭ್ಯಾಸದ ಪೂಜೆ' ಎಂದು.

ಓಂ ಶಾಂತಿಃ

ಬಹುದು. ಕನ್ನಡಕೇರಳ ನುಡಿಗಳೆರಡನ್ನು ಬಲ್ಲ ವಿದ್ವಾಂಸರಿಂದ ಅನ್ಯೋನ್ಯ ಎರಡು ಭಾಷೆಗಳಿಗೂ ತುಂಬಾ ಪ್ರಯೋಜನವಾಗಿದೆ; ಮುಂದೆಯೂ ಆಗಲಿಕ್ಕಿದೆ.

ಹೀಗೆ ರಾಜಕೀಯ, ಸಾಂಸ್ಕೃತಿಕ, ಸಾಮಾಜಿಕ ದೃಷ್ಟಿಗಳಲ್ಲಿಯೂ ಕನ್ನಡಿಗರೂ ಕೇರಳೀಯರೂ ಒಂದೇ ಅನುಭವವುಳ್ಳವರು; ನಾವೆಲ್ಲರೂ ಒಂದೇ ಭಾರತಜನನಿಯ ಮಕ್ಕಳು; ಬಂಧಿತಳಾದ ಭಾರತಿಯ ಬಂಧಿತರಾದ ಮಕ್ಕಳು. ನಾವು ಪ್ರಾಂತಾಭಿಮಾನದಿಂದ ಸಂಕುಚಿತಮತಿಗಳಾಗುವುದರಲ್ಲಿ ಇಂದು ಅರ್ಥವೇ ಇಲ್ಲ; ಅದಕ್ಕಿಂತ ದೊಡ್ಡ ಅನ್ಯಾಯವು ಬೇರಿಲ್ಲ. ನಮ್ಮೆಲ್ಲರ ಸಂಸ್ಕೃತಿ ಭಾರತ ಸಂಸ್ಕೃತಿ, ವಿಶ್ವವಿಖ್ಯಾತವಾದುದು. ನಯ, ನುಡಿ, ಧರ್ಮ, ನೈರ್ಮಲ್ಯಗಳಿಂದ ನಾವು ಎರಡು ನಾಡಿನ ಜನರು ಒಂದೇ ಆಗಿರುವವರು; ಒಂದೇ ಸಂಕಲೆಯಲ್ಲಿ ಬಿಗಿವಡೆದವರು. ಇಂತಿರಲು ಕನ್ನಡಿಗರೂ ಕೇರಳೀಯರೂ ಅನ್ಯೋನ್ಯ ಘರ್ಷಣೆಗೊಳ್ಳಲು ಏನು ಕಾರಣವಿದೆ? ಪ್ರಾಂತದ ಅಭಿಮಾನ ನಮ್ಮನ್ನು ಅನ್ಯೋನ್ಯ ಸಂಕುಚಿತಮತಿಗಳಾಗಿ ದೂರ ಮಾಡುವುದು ಎಂತಹ ಘೋರ ಅನ್ಯಾಯವಾಗಿದೆ!

ಭಾರತ ರಾಷ್ಟ್ರಸಭೆ ಭಾಷಾವಾರು ಪ್ರಾಂತರಚನೆಯನ್ನು ಒಪ್ಪಿದೆ; ಬುದ್ಧಿಯುಳ್ಳ ಯಾವನೇ ಮನುಷ್ಯನಾದರೂ ಈ ತತ್ವವನ್ನು, ಈ ವ್ಯವಸ್ಥೆಯನ್ನು ಒಪ್ಪಲೇ ಬೇಕು. ಬಹುಮತ ಜನಸಂಖ್ಯೆ ಯಾವ ಅಭಿಪ್ರಾಯ ಪಡುತ್ತದೋ ಅಂತೆಯೇ ಪ್ರಾಂತ ವಿಭಜನೆ ಮಾಡುವುದು ಸರಿಯಾಗಿದೆ. ಗಡಿನಾಡಿನ ಕುರಿತು ಇರುವ ಭಿನ್ನಾಭಿಪ್ರಾಯವನ್ನು ನಿಷ್ಪಕ್ಷಪಾತೀ ವಿಚಾರಣಾಮಂಡಳವನ್ನೊಂದನ್ನೇ ಏರ್ಪಡಿಸಿ ಅದಕ್ಕೆ ನಮ್ಮ ನ್ಯಾಯಗಳನ್ನು ಒಪ್ಪಿಸಿ ಅವರ ತೀರ್ಮಾನಕ್ಕೂ ನಾವು ಬದ್ಧರಾಗಬಹುದು. ಅಂತೂ ಇಷ್ಟಕ್ಕಾಗಿ ನಾವಿಂದು ಅನ್ಯೋನ್ಯ ಕತ್ತಿ ಮಸೆಯುವುದು ನ್ಯಾಯವಲ್ಲ, ಸಂಕುಚಿತಮತಿಗಳಾಗುವುದು ಸರಿಯಲ್ಲ.

ಇಂದು ನಾವು ಕನ್ನಡಿಗರೂ ಕೇರಳೀಯರೂ ಮಾಡತಕ್ಕ ಕರ್ತವ್ಯವುಂಟು. ಕೇರಳದ ಏಕೀಕರಣಕ್ಕಾಗಿ ಕೇರಳೀಯರೂ, ಕನ್ನಡದ ಏಕೀಕರಣಕ್ಕಾಗಿ ಕನ್ನಡಿಗರೂ ಆಂದೋಲನ ಹೂಡಲೇಬೇಕು. ಈ ಆಂದೋಲನ ಅನ್ಯೋನ್ಯ ಸೌಹಾರ್ದ ಸಹಕಾರ ಬುದ್ಧಿಯಿಂದ ನಡೆಯಬೇಕು. ವ್ಯಕ್ತಿ-ವ್ಯಕ್ತಿಗಳು, ಗುಂಪು-ಗುಂಪುಗಳು, ಪ್ರಾಂತ-ಪ್ರಾಂತಗಳು ಸುವ್ಯವಸ್ಥಿತವಾಗಿ ನಾವೆಲ್ಲರೂ ಒಂದು ಪ್ರಬಲರಾಷ್ಟ್ರವನ್ನು ಕಟ್ಟಲೇಬೇಕು. ಈ ಧ್ಯೇಯ ನಮ್ಮ ಕಣ್ಣಮುಂದೆ ಸದಾ ಇದ್ದರೆ ಪ್ರಾಂತದ ಅಭಿಮಾನ ನಮ್ಮನ್ನು ಕುರುಡರನ್ನಾಗಿ ಮಾಡಲಾರದು; ಸಂಕುಚಿತಮತಿಗಳಾಗಗೊಡದು. ಕನ್ನಡಕೇರಳಗಳ ಏಕೀಕರಣ ಕಾರ್ಯದಿಂದ ನಾವು ಭಾರತದ ರಾಷ್ಟ್ರ ನಿರ್ಮಾಣ ಮಾಡ

[42ನೇ ಪುಟಕ್ಕೆ ಮುಂದುವರಿದಿದೆ]

ವಿಶ್ವಶಾಂತಿ

[ಮೂಲ ಲೇಖಕಿ: – **ಉಷಾದೇವಿ**
ಅನುವಾದಕಿ:—ಶ್ರೀಮತಿ **ಲೀಲಾ ಬಾಯಿ ಕಾಮತ್.**]

ಇದೊಂದು ಪ್ರಾಣಿಬಲಿ ನಿಷೇಧ ಸೂಚನಾರ್ಥ ಲೇಖನವಿದೆ. "ಪೂ
ಭಕ್ತಿಗಳು ಮನಸ್ಸಿನ ವಸ್ತುಗಳು, ವಿಧಿ ನಿಯಮಗಳಿಗೆ ಅವು ಸಿಲುಕಲಾರವ
ಎಂಬ ವಿಷಯದ ಮೇಲೆ ಇದೊಂದು, ಸಂವಾದರೂಪವಾದ ವ್ಯಾಖ್ಯಾ
ವೆನ್ನುವೆವು. ಈ ಲೇಖನದಲ್ಲಿ ವಾಹನವಾಗಿ ಉಪಯೋಗಿಸಲ್ಪಟ್ಟ ಮಾ
ವನು, ಮೇಲಿನ ವಿಷಯವನ್ನು ವಿಸ್ತರಿಸುತ್ತ "ಶಾಂತಿ ಸಂದೇಶವಾಹಕವಾ
ಮಾಧವೀ ವೃಕ್ಷಗಳಿಂದಲಂಕೃತವಾದ ವರ್ಣಹೀನ ದುರ್ಗೆಯನ್ನು ಭಾರತ
—ಬಡಭಗಿನಿಯರು ಪೂಜಿಸುವಂತೆ ಆಡಂಬರಹೀನವಾಗಿ, ಆದರೆ ಭ
ಯುಕ್ತವಾಗಿ" ಪೂಜಿಸುತ್ತಾನೆ. ಅಂದಶ್ರದ್ಧೆಯೇ ಎಲ್ಲೆಲ್ಲಿಯೂ ತುಂ
ಕೊಂಡು, ಅರ್ಥವಿಹೀನ—ಅನಾವ್ಯಶ್ಯಕಾರಿ ಮತ್ತು ಅನಾಹುತಕಾರಿ ಪೂ
ಗಳು ನಡೆವ ದೇಶದಲ್ಲಿ ಇಂತಹ ಬೋಧಪ್ರದ ಲೇಖಗಳು ಹೆಚ್ಚೆಚ್ಚು ಬೇಕ



ಬೇಂಡು ವಾದ್ಯವಿಲ್ಲ, ವಾಲಗವಿಲ್ಲ. ಇಂದು ಪ್ರಸಿದ್ಧ ಶ್ರೀಮಂತರಾದ ಮಾಧವ ಪ್ರಸಾದರಲ್ಲಿ ದುರ್ಗಾ ಪೂಜೆ, ಹತ್ತು ಭುಜಗಳಿಂದಲೂ, ಮನೋಹರವಾದ ಮೂರು ಬಣ್ಣಗಳಿಂದಲೂ, ಮಾಧವೀ ಪುಷ್ಪಗಳಿಂದ ಅಲಂಕೃತ ವಾದ, ಆವೆಮಣ್ಣಿನಿಂದ ನಿರ್ಮಿತವಾದ ದುರ್ಗೆಯ ಮೂರ್ತಿಯು ಮಾಧವಪ್ರಸಾದರ ಭವ್ಯ ಭವನದಲ್ಲಿ ಇರಿಸಲ್ಪಟ್ಟಿತ್ತು. ನೈವೇದ್ಯಕ್ಕೆ ಒಳ್ಳೇಯ ಜೇನುತುಪ್ಪದ ಕೊಡಪಾನಗಳು ತುಂಬಿರಿಸಲ್ಪಟ್ಟದ್ದುವು. ಬಲಿಗೊಡಲು ನೂರೆಂಟು ತೆಂಗಿನಕಾಯಿಗಳು ಇರಿಸಲ್ಪಟ್ಟದ್ದುವು. ಒಂದು ಕಡೆಯಲ್ಲಿ ಸುಮಧುರವಾದ ಕೊಳಲು ಗಾಯನವು ನಡೆಯುತ್ತಿತ್ತು. ಇನ್ನೊಂದೆಡೆ ಶಂಖಧ್ವನಿಯಾಗುತ್ತಿತ್ತು.

ಯಾವುದಾದರೊಂದು ವ್ಯಕ್ತಿಯು ಯಾವುದಾದರೊಂದು ಹೊಸ ಕಾರ್ಯವನ್ನು ಆರಂಭಿಸಿದಲ್ಲಿ ಜಗತ್ತೆಲ್ಲವೂ ವಿಸ್ಮಯಸಾಗರದಲ್ಲಿ ತೇಲಾಡುತ್ತದೆ. ಆ ವ್ಯಕ್ತಿಯ ವಿಚಿತ್ರ ವರ್ತನೆಯು ಆಸುಪಾಸಿನ ಜನರ ಮನಸ್ಸಿನಲ್ಲಿ ಒಂದು ಬಗೆಯ ತಿರಸ್ಕಾರವನ್ನು ಉತ್ಪನ್ನ ಮಾಡುತ್ತದೆ. ಪ್ರತಿಯೋರ್ವನು ಆ ಕಾರ್ಯದ ಪರಿಚಯವನ್ನುಂಟುಮಾಡಲು ಹವಣಿಸುತ್ತಾನೆ.

ಧನಮಾನವಂತನಾದ ಮಾಧವನು ನಗುತ್ತಾ ಪೂಜೆಯ ಸಾಹಿತ್ಯವನ್ನು ಅಣಿಮಾಡುತ್ತಲಿದ್ದ. ಮಾಧವನು ತನ್ನ ಮನದಿಚ್ಛೆಯಲ್ಲೇ ತಲ್ಲೀನನಾಗಿದ್ದ .ಕಾರಣ ಅವನ ಇಂದಿನ ದುರ್ಗಾಪೂಜೆಯು ಅವನ ಮನದಿಚ್ಛೆಯಂತೆ ಆಡಂಬರ ಹೀನವಾಗಿತ್ತು.

ಅಸಂಖ್ಯಾತ ವಯೋವೃದ್ಧರು ನೆರೆದಿದ್ದರು. ಪುರೋಹಿತನ ಮುಖಭಾವವು ಅಸಂತುಷ್ಟತೆಯನ್ನು ಸೂಚಿಸುತ್ತಿತ್ತು. "ಇಂದು ರಾವಬಹದ್ದೂರ್ ಸೀತಾನಾಥರಲ್ಲಿಯ ದುರ್ಗಾಪೂಜೆ ಎಂದರೆ ಛೇ! ಎಂಥಾ ಪೂಜೆಯೇ ಅದ ಅಷ್ಟು ಸಂಭ್ರಮದ ಪೂಜೆಯನ್ನು ನಾವೆಂದೂ ಕಂಡಿರಲಿಲ್ಲ ಎಂಬ ಮಾತುಗಳು ವೃದ್ಧರ ಗುಂಪಿನಿಂದ ಕೇಳಿಬರುತ್ತಿದ್ದುವ

"ಅದು ನಿಜ ಅಜ್ಜಯ್ಯನವರೇ! ಆದರೂ ಪೂಜೆಯು ಏನಾದರೊಂದು ನವೀನತೆ ಇರಬೇಕಲ್ಲವೇ?" ಮಾಧವನ ನಗುತ್ತಾ ಹೇಳಿದನು. "ಆದರೆ ಪೂಜಾಪಾಠಗಳಲ್ಲಿ ಹು ಗಾಟಿಕೆ, ಮತ್ತು ಐಶ್ವರ್ಯದ ಮದ ತೋರಿಸಿದಲ್ಲಿ ಒಳ್ಳೆಯ ದಲ್ಲ. ಮಾಧವ! ನೀನಿನ್ನೂ ಎಳೆ ವಯಸ್ಸಿನವನು—ಹೀಗೆಲ್ಲ ಮಾಡಬೇಡ. ಜಗತ್ತು ನಿನ್ನನ್ನು ನಿಂದಿಸುವುದು. ಛಿ ಛಿ! ಎನ್ನುವುದು."

(41 ನೇ ಪುಟದಿಂದ ಮುಂದುವರಿದುದು)

ಬೇಕಾಗಿದೆಯೆಂಬ ಉಚ್ಚಧ್ಯೇಯವೊಂದು ನಮಗೆ ಧ್ರುವ ತಾರೆಯಾಗಿದ್ದರೆ ಅದೇ ಸಾಕು.

ಹಾಗಾಗಿ ನಾವು ಕನ್ನಡಿಗರೂ ಕೇರಳೀಯರೂ ಗಡಿ ನಾಡಿನ ಕುರಿತು ಯಾವುದೇ ಉದ್ರೇಕಪರವಶರಾಗದೆ ಕೆಲಸ ಮಾಡಬೇಕಾಗಿದೆ. ನಮ್ಮೆಲ್ಲರ ನಿಶ್ಚಯವಾದ ಗುರಿ ಯಾವುದೆಂಬುದನ್ನು ದೃಢವಾಗಿ ತಿಳಿದುಕೊಂಡೇ ನಾವು ಪ್ರತಿಯೊಂದು ಹೆಜ್ಜೆಯನ್ನೂ ಇಡಬೇಕಾಗಿರುವುದು. ಕನ್ನಡದ ಏಕೀಕರಣಕ್ಕೆ ಕೇರಳೀಯರೂ, ಕೇರಳದ ಏಕೀಕರಣಕ್ಕೆ ಕನ್ನಡಿಗರೂ ಅನ್ಯೋನ್ಯ ನೆರವಾಗಿ ನಾವೆಲ್ಲರೂ ಒಂದು ಕೂಡಿ ನಮ್ಮ ರಾಷ್ಟ್ರದ ಏಳಿಗೆ ಸಾಧಿಸಬೇಕಾಗಿದೆ.

ಇದಕ್ಕಾಗಿ, ಯಾವುದೇ ಸಂದರ್ಭದಲ್ಲೂ, ಕನ್ನಡಿಗರೂ ಕೇರಳೀಯರೂ ಅನ್ಯೋನ್ಯ ಮಧುರ ಹೃದಯಬಾಂಧವ್ಯ ದಿಂದ ಕೂಡಿ ಕೆಲಸಮಾಡಲಿ ಎಂದು ನಾವು ಹಾರೈಸುವೆವು.

———

“ಆದರೆ ಆದರಿಂದ ನನ್ನ ಮನಸ್ಸು ತೃಪ್ತಿಯಾಗುವು
ದಲ್ಲವೇ” ಎಂದನು ಮಾಧವ.

“ಆ ತೃಪ್ತಿಯು ಎಲ್ಲಿಯತನಕ ಬಾಳಬಹುದು? ಲೋಕ
ನಿಂದೆಯು ನಿನ್ನ ಆ ತೃಪ್ತಿಯನ್ನು ಬೇರು ಸಹಿತವಾಗಿ
ಕಿತ್ತೊಗೆಯುವುದು. ಆಗಲೇ ಅದಕ್ಕೆ ಶಾಂತತೆ ಸಿಕ್ಕೀತು.
ಆಗ ಮಾತ್ರ ನಿನ್ನ ಕಣ್ಣುಗಳು ತೆರೆದಾವು. ತಪ್ಪು ತಿಳಿದ
ಬಳಿಕ ನಿನಗೆಲ್ಲಿಯ ತೃಪ್ತಿ? ಎಳೆತನದ ಉತ್ಸಾಹದಿಂದ....”

“ಹೀಗೆಯೇ ಪೂಜೆಮಾಡಿ ನನ್ನ ಮನಸ್ಸಿಗೆ ತೃಪ್ತಿ
ಯುಂಟಾದಲ್ಲಿ, ನಾನು ಸುಖಿಯಾದಲ್ಲಿ, ಜಗತ್ತು ನನಗೆ
ನನ್ನ ಈ ಕಾರ್ಯದಲ್ಲಿ ವಿಘ್ನ ತಂದೊಡ್ಡೀತೇ?” ಮಾಧವನು
ಮಾತನಾಡುವವನನ್ನು ತಡೆದು ಕೇಳಿದನು.

“ಹೀಗೆ? ಆದರೆ ದೇವದೇವತೆಗಳ ಪೂಜೆಯೆಂದಲ್ಲಿ
ವಿಧಿಪೂರ್ವಕವಾಗಿ ನಡೆಯಬೇಕು. ಮಾನವರಾದ ನಾವು
ಅದನ್ನು ಬದಲಾಯಿಸಲಾರೆವು.”

“ಅದನ್ನು ನಾನು ಮಾನ್ಯಮಾಡುವುದಿಲ್ಲ. ಪೂಜೆ—
ಭಕ್ತಿ ಎಂಬುದು ಮನಸ್ಸಿನ ವಸ್ತುಗಳು—ವಿಧಿ, ನಿಯಮ
ಗಳಿಗೆ ಅವು ನಿಲುಕಲಾರವು.

“ಹಾಗಾದಲ್ಲಿ ನೀನು ವಿದ್ರೋಹ ಮಾಡಲೆಣಿಸು
ತ್ತೀಯಾ?”

“ಹಾಗೆಯೇ ಸರಿ! ಇದು ನಿಯಮಬದ್ಧವಲ್ಲವೆನ್ನುವು
ದಾದರೂ ಹೇಗೆ? ಪೂಜಾದಿಗಳು ನಿಯಮಬಾಹಿರವಾಗ
ಬಾರದೆಂದು ನಾನು ಒಪ್ಪಿದರೂ ಇಂದು ಇಲ್ಲಿ ತೋರುವ
ಪೂಜೆಯು ಸಾಹಿತ್ಯವು ಬರೇ ಮಕ್ಕಳಾಟವಾಗಿದೆ”.

“ಮಕ್ಕಳ ಆಟ?”

“ಹೌದು, ಮಕ್ಕಳ ಆಟ? ಪ್ರಥಮತಃವಾಗಿ ಈ
ಮೂರ್ತಿಗೆ ರೂಪವೂ ಇಲ್ಲ; ಬಣ್ಣವೂ ಇಲ್ಲ. ಇದು ಯಾವ
ನಾದರೊಬ್ಬ ಕಲಾಪಿದನ ಕೃತಿಯಲ್ಲ. ಮೂರ್ತಿಯ
ಮೈಯಲ್ಲಿ ಭಂಗಾರವು ಲವಲೇಶವಿಲ್ಲ. ಬರೇ ಹೂವಿನ
ಆಭರಣಗಳು—ಅದುಕೂಡಾ ಮಾಧವೀ ಹೂಗಳು. ಗುಲಾಬಿ,
ಮಲ್ಲಿಗೆ, ಜಾಜಿ ಹೂವಾದರೂ ಚಿಂತೆಯಿರಲಿಲ್ಲ.”

“ಆದರೆ ಪುರೋಹಿತರೇ! ವಿಶ್ವದ ಇಂಥ ದುರ್ದಿನ
ಗಳಲ್ಲಿ ವಿಶ್ವವ್ಯಾಪಿಗಳಾದ ನಾವು ರೂಪ, ಬಣ್ಣ, ಇತ್ಯಾದಿ
ಗಳ ಮೋಡದಲ್ಲಿ ಸಿಲುಕಿಕೊಳ್ಳುವುದು ಲಜ್ಜಾಸ್ಪದ ಮಾತ್ರವಲ್ಲ
—ಬಹಳ ಪಾಪಪೂರ್ಣವಾದ ಸಂಗತಿಯೂ ಆಗಿದೆ. ಪಶುಗಳ
ಕೆಲಸದಂತಿದೆ. ದುರ್ಗೆಯೆಂದರೆ ಅಸುರನಾಶಿನಿ! ಇದು ನಿಜ
ವಾದಲ್ಲಿ, ನಾವು ಇದನ್ನು ನಂಬಿದಲ್ಲಿ ಈ ದುರ್ಗೆಯನ್ನು
ಆರಾಧಿಸಿ ನಾವು ಅಸುರನಾಶದ ಭಿಕ್ಷೆ ಬೇಡಬಾರದೇಕೆ?
ಸರಿ! ನನ್ನ ಪೂಜೆಯು ಕೇವಲ ಇದಕ್ಕೋಸ್ಕರವೇ ಆಗಿದೆ.
ನಾಲ್ಕು ಕಡೆಗಳಲ್ಲಿಯೂ ರಕ್ತದ ನದಿಗಳು ಹರಿಯುತ್ತಲಿವೆ.
ಆ ರಕ್ತದ ನದಿಗಳ ನಡುವೆ ಕೂತುಕೊಂಡು ಭಾರತವಾಸಿ
ಗಳಾದ ನಾವು ಶಾಂತಿಯ ವರವನ್ನು ಬೇಡಬಾರದೇಕೆ? ಅದ
ಕ್ಕೇನೆ ಶಾಂತಿ—ರಸಪೂರ್ಣವಾದ, ಸುಗಂಧಯುಕ್ತ, ಶಾಂತಿ

ಸಂದೇಶವಾಹಕನಾದ, ಮಾಧವೀ ಪುಷ್ಪಗಳ ಆಭರಣಗಳು. ನನ್ನ ಪೂಜೆಯೆಂದರೆ-ಭಾರತದ ಬಡಭಗಿನಿಯರು ಮಾಡಲು ಅನುಕೂಲವಾಗುವಂತೆ ಆಡಂಬರ ಹೀನ—ಆದರೆ ಭಕ್ತಿ ಯುಕ್ತವಾದ ಪೂಜೆ."

"ನೀವು ಹೇಳಿದಂತೆ ಪೂಜೆಗೋಸ್ಕರ ಅಣಿಮಾಡಿಟ್ಟ ಈ ಸಾಹಿತ್ಯಗಳೆಲ್ಲವೂ—ದುರ್ಗಾಪೂಜೆಗೆ ಹೇಳಿದಂತಹುಗಳಲ್ಲ: ವಾದ್ಯವಿಲ್ಲ. ಧೂಪ, ದೀಪ, ಆರತಿ ಇತ್ಯಾದಿ ವಸ್ತುಗಳಿಲ್ಲವೆಂದರೂ—"

"ಈ ಬಿಳಿ ಪದ್ಮ—ಕಲಶ ತುಂಬ ನೀರು, ಬೇಲಪತ್ರ ಇತ್ಯಾದಿಗಳಿವೆ. ಅಲ್ಲದೆ ನಮ್ಮೆಲ್ಲರ ಮನಸ್ಸಿನಲ್ಲಿಯ ಭಕ್ತಿಯಿದೆ. ಏನು, ದೇವಿ ಪೂಜೆಗೆ ಇಷ್ಟು ಸಾಲದೆ? ಯಾವುದರಲ್ಲಿ, ಉಗ್ರರೂಪ, ರಸ, ಗಂಧಗಳಿವೆಯೋ ಅಂತಹ ವಸ್ತುಗಳು ಇಲ್ಲಿ ವರ್ಜಿಸಲ್ಪಟ್ಟವೆ. ಶಾಂತಿರೂಪವಾದ ರಸ, ಗಂಧಭರಿತ ಈ ಬಿಳಿ ಕಮಲವನ್ನು ತಾವು ನೋಡಿಲ್ಲವೇ? ಗಂಭೀರವಾದ ಶಂಖಧ್ವನಿಯೊಡನೆ ಕರುಣಾಪೂರ್ಣವಾದ ಕೊಳಲು ಗಾನವನ್ನು ತಾವು ಕೇಳುತ್ತಿರಲ್ಲವೇ? ಶ್ವೇತ ಚಂದನದ ಪರಿಮಳವನ್ನು ನೀವು ಆಘ್ರಾಣಿಸಲಿಲ್ಲವೇ? ಇವೆಲ್ಲವೂ ವಿಶ್ವದಲ್ಲಿ ಶಾಂತಿಯ ವಾತಾವರಣವನ್ನುಂಟುಮಾಡುವುವು."

ಮಾಧವನ ವಾಗ್ದತ್ತ ವಧುವಿನ ಪಿತನಾದ ದೇವೇಂದ್ರನು "ಈ ತೆಂಗಿನಕಾಯಿಗಳು ಏತಕ್ಕೆ?" ಎಂದು ಕೋಪದಿಂದ ನಡುಗುತ್ತಾ ಕೇಳಿದನು.

"ಅದೆಲ್ಲವೂ ಬಲಿಗೋಸ್ಕರ."

"ಏನು ತೆಂಗಿನಕಾಯಿಯ ಬಲಿಯೇ?"—ನೆರೆದಿದ್ದ ರೆಲ್ಲ ಬೊಬ್ಬಿಟ್ಟರು.

ಆಸುಪಾಸು ನೆರೆದ ಸ್ತ್ರೀ ಪುರುಷರ ಸಮೂಹದಿಂ "ಏನು? ಬಲಿಗೋಸ್ಕರ ತೆಂಗಿನಕಾಯಿಯೇ?" ಎಂ ಸ್ವರವು ಪ್ರತಿಧ್ವನಿತವಾಯಿತು. ಮಾಧವನು ಮುಖವನ್ನೆ ನಾಲ್ಕು ಕಡೆಗೂ ದೃಷ್ಟಿಯನ್ನು ಬೀರಿದನು. ಮತ್ತೆ ಮುಂಚಿನಂತೆ ಶಾಂತ ಸ್ವರದಿಂದ "ಬಲಿದಾನದ ನಿಯಮ ವನ್ನು ಮನುಷ್ಯರಾದ ನಾವು ಮಾಡಿದ್ದು. ನಿಯಮವನ ಪಾಲಿಸಬೇಕೆಂದು ನೀವೆಲ್ಲರೂ ಈಗ ಹೇಳಿದಿರಷ್ಟೆ!"

"ಅದು ಸರಿ! ಬಲಿ ವಿನಾ ಪೂಜೆಯಾಗುವುದಿಲ್ಲ ಪೂರ್ವದಲ್ಲಿ ನೂರೆಂಟು ಕುರಿಗಳನ್ನು ಬಲಿ ಕೊಡುತ್ತಿದ್ದರ ಈಗ ಅದರ ಬದಲು ಕರಿಕುಂಬಳಕಾಯಿಯ ಬಲಿ. ಆದ ಇದು ಅದ್ಭುತ, ವಿಚಿತ್ರ, ಆಗಬಾರದ ಹೊಸ ಸಂಗತಿ!"

"ಆಗಬಾರದ ಸಂಗತಿಯಲ್ಲ. ಹೊಸ ಸಂಗ ಯಾಗಿರಬಹುದು. ಹೇಗೆ ಪಶುಗಳನ್ನು ಬಲಿಗೊಡುವುದ ಆ ದಿನಗಳ ಪ್ರವೃತ್ತಿ, ಖರ್ಚು, ಆಚಾರ—ವ್ಯವಹಾರ ದ್ಯೋತಕವಾಗಿತ್ತೊ ಹಾಗೆಯೇ ಕುಂಬಳಕಾಯಿ ಇತ್ಯಾ ಗಳಿಗೂ ಕೂಡಾ ಆಯಾ ಕಾಲದ ಸಮಾಜದ, ವ್ಯಕ್ತಿಯ ಖರ್ಚಿನ ಪರಿಚಯವನ್ನುಂಟುಮಾಡಿಕೊಡುತ್ತವೆ. ತೆಂಗಿ

ಕಾಯಿಯ ಬಲಿಯು ಈ ದಿನಗಳ ಮನುಷ್ಯನ ಖರ್ಚಿನ ಪರಿಚಯಕಾರಕವಾಗಿವೆ. ಶಾಸ್ತ್ರಿಗಳೇ, ಇದರಲ್ಲಿ ಆಶ್ಚರ್ಯ ಕಾರಕ ಸಂಗತಿ ಏನಿದೆ?''

''ಇಷ್ಟು ದಿನಗಳ ತನಕ ಹೇಗೂ ಕುಂಬಳಕಾಯಿಯ ಬಲಿಯನ್ನು ಕೊಡುತ್ತಾ ಬಂದಿದ್ದೇನೆ. ಹಿರಿಯರು ಒಂದೇ ಪೆಟ್ಟಿಗೆ ತುಂಡಾಗುವಂತಹ ವಸ್ತುಗಳನ್ನೇ ಹುಡುಕಿ ತೆಗೆದಿದ್ದಾರೆ. ಆದರೆ ತೆಂಗಿನಕಾಯಿ ಒಂದೇಪೆಟ್ಟಿಗೆ ತುಂಡಾಗುವುದು ಕಷ್ಟ. ಇದೊಂದು ಹಟ ಮಾರಿತನವಲ್ಲದೆ ಗುರು ಹಿರಿಯರ, ಶಾಸ್ತ್ರಕ್ಕೆ ಅಪಮಾನ, ಅನಾದರ ಮತ್ತು ವಿದ್ರೋಹವನ್ನು ಸೂಚಿಸುತ್ತದೆ.''

ಮಾಧವನು ಈ ಮಾತಿಗೆ ಪ್ರತ್ಯುತ್ತರವಾಗಿ ''ತೆಂಗಿನ ಕಾಯಿಯನ್ನು ಒಂದೇ ಪೆಟ್ಟಿಗೆ ಕಡಿಯುವ ವ್ಯವಸ್ಥೆ ಮಾಡಿದ್ದೇನೆ'' ಎಂದನು.

''ಆದರೆ ತೆಂಗಿನಕಾಯಿಯನ್ನು ಬಲಿಗೊಡುವ ಆವಶ್ಯಕತೆ ಏನು?''

"ಇದರಲ್ಲೇನೂ ಅರ್ಥವಿಲ್ಲ. ಇದು ಕೇವಲ ಮನುಷ್ಯನ ತಲೆಯಂತಿರುವುದೇನೊ ನಿಜ!"

ಮಾಧವನು ನಿಧಾನವಾಗಿ ''ಇಷ್ಟೊತ್ತಿನ ಮೇಲೆ ತಾವು ಅನುಮಾನಪಟ್ಟುದು ಸರಿ. ಅದಕ್ಕೋಸ್ಕರವೇ ತೆಂಗಿನಕಾಯಿಯನ್ನು ಬಲಿಗೊಡುವ ವ್ಯವಸ್ಥೆ ಮಾಡಿದುದು" ಎಂದನು.

''ಅಂದರೆ ನರಬಲಿದಾನವೇ?'' ನೀನು ಈ ಹೊತ್ತು ಬಲಿಗೊಡುವುದು "ನರಬಲಿದಾನವೇ?" ದೇವೇಂದ್ರನು ತಿರಸ್ಕಾರದಿಂದ ನುಡಿದನು.

''ಈ ತೆಂಗಿನಕಾಯಿಯನ್ನು ನೋಡಿ'' ಮಾಧವನು ಕೈಯಲ್ಲೊಂದು ತೆಂಗಿನಕಾಯಿಯನ್ನು ಹಿಡಕೊಂಡು ಹೇಳತೊಡಗಿದನು. ''ಇದು ಜಟೆ; ಇವೆರಡು ಕಣ್ಣುಗಳು, ನನ್ನನ್ನು ನೋಡಿ, ಈ ತೆಂಗಿನಕಾಯಿಯನ್ನು ನೋಡಿ. ಇದು ಮನುಷ್ಯನ ಪ್ರತಿರೂಪದಂತೆ ತೋರುವುದಿಲ್ಲವೇ? ಇದು ಮನುಷ್ಯನ ಪೂರ್ವಪುರುಷನಾಗಿರಲೂ ಬಹುದು; ನೋಡಿ! ನನ್ನನ್ನೂ ಈ ತೆಂಗಿನಕಾಯಿಯನ್ನೂ ಸರಿಯಾಗಿ ನೋಡಿ''.

''ಇದೆಲ್ಲವನ್ನೂ ನೋಡಿಯೇ ನೀನು ನರಘಾತಕನೆಂದು ಹೇಳುತ್ತಿದ್ದೇನೆ. ನೀನು ನರ ರಕ್ತ ಪಿಪಾಸುವಾಗಿರುವಿ....ಇಂತಹವನ ಮುಖವನ್ನು ಕೂಡಾ ನಾವು ನೋಡಲಿಚ್ಛಿಸುವುದಿಲ್ಲ!"

ಶಾಸ್ತ್ರಿಗಳ ಹಿಂದೆಯೇ ಅನೇಕರು ಹೊರಟುಹೋದರು. ಅದರೆ ಆಶ್ಚರ್ಯದ ಸುಗತಿಯೆಂದರೆ ಮಾಧವನು ಅವರಾರನ್ನೂ ತಡೆಯಲಿಲ್ಲ. ಯಾ ತಾನು ಮಾಡುವುದು ಸರಿಯೆಂದು ಅವನು ಅವರೊಡನೆ ಹೇಳಲು ಬಯಸಲಿಲ್ಲ. ಅವನು ಮೊದಲಿನಂತೇ ಶಾಂತ—ಪ್ರಶಾಂತನಾಗಿದ್ದನು.

ಮತ್ತು ಕೈಯಿಂದ ಜೇನುತುಪ್ಪವನ್ನು ಉರಿಯುವ ಅಗ್ನಿಯಲ್ಲಿ ಆಹುತಿಯಾಗಿ ಅರ್ಪಿಸುತ್ತಲಿದ್ದನು.

ತೀವ್ರ ದೃಷ್ಟಿಯಿಂದ ಅವನ ಮುಖವನ್ನು ನೋಡುತ್ತಾ "ಇದು ನಿಜವೇ?" ಎಂದು ದೇವೇಂದ್ರನು ಪ್ರಶ್ನಿಸಿದನು.

"ಹೌದು".

"ಹಾಗಾದಲ್ಲಿ ಇಂತಹ ನರರುಧಿರ ಪಿಪಾಸುವಿಗೆ ನನ್ನ ಕಮಲೆಯನ್ನು ಒಪ್ಪಿಸಲಿಕ್ಕಿಲ್ಲ. ಓರ್ವ, ರಕ್ತ ಪಿಪಾಸುವಿನ ಸಹಧರ್ಮಿಣಿಯಾಗಲು ಅವಳನ್ನು ವಿದ್ಯಾಬುದ್ಧಿಕೊಟ್ಟು ಬೆಳೆಸಿದ್ದಲ್ಲ."

ಅದೊಂದು ಕ್ಷಣ ಮಾಧವನು ವ್ಯಥಿತ ಕಣ್ಣುಗಳಿಂದ ಕಮಲೆಯನ್ನು ದೃಷ್ಟಿಸಿದನು. ಕಮಲೆಯು ಮುಖವನ್ನು ತಿರುಗಿಸಿದುದನ್ನು ಕಂಡು ಅವನ ಮನಸ್ಸು ಹರ್ಷರೋಧನಗಳಲ್ಲಿ ಮುಳುಗಿ ಮೃತಿಹೊಂದಿತೆಂದು ಹೇಳಲು ಕಠಿಣ. ಯಾವಳ ಕಲ್ಪನೆಯಿಂದ ಮರುಭೂಮಿಯಲ್ಲಿ ನೀರಿನ ಬುಗ್ಗೆಗಳು ಏಳುತ್ತಲಿದ್ದುವೋ ಕಾರ್ಗತ್ತಲೆಯ ರಾಶಿ ಬೆಳದಿಂಗಳು ಹಬ್ಬುತ್ತಿತ್ತೊ, ಸರ್ಪ ವಿಷದಲ್ಲಿ ಅಮೃತವು ತುಂಬುತ್ತಿತ್ತೊ, ಅಂಥವಳು! ಕಾಲೇಜಿನ ಸಹಪಾಠಿಯಾದ ಕಮಲಾ! ಅವನ ಮನಸ್ಸಿನಲ್ಲಿ ನವಚೇತನವನ್ನು ಹುರಿದುಂಬಿಸುವ ಕಮಲಾ! ವಾಗ್ದತ್ತ ವಧುವಾದ ಅವಳ ಮೇಲೆ ಸ್ವಾಮಿತ್ವದ ಅಧಿಕಾರವನ್ನು ನಡೆಸಿ ಕೆಲವು ವರ್ಷಗಳು ಸಂದಿದ್ದುವು. ಅಂತಹ ಕಮಲೆಯು ತನ್ನ ಪತ್ನಿತ್ವವನ್ನು ತಿರಸ್ಕರಿಸಿದುದನ್ನು ಕಂಡೂ ಆಶ್ಚರ್ಯಚಕಿತನಾದ ಮಾಧವನ ಮುಖದ ಮೇಲೆ ಒಂದಿಷ್ಟೂ ಪರಿವರ್ತನವಾಗಲಿಲ್ಲ.

ಕಮಲೆಯ ಅಣ್ಣನು ಮಾಧವನ ಇದಿರು ಬಂದು ನಿಂತು, "ಮಾಧವ, ನೀನು ಹೀಗೇಕೆ ಮಾಡಿದೆ?" ಎಂದು ಕೇಳಿದನು.

ಆ ದುಃಖಿತ ಹಾಗೂ ಸಹಾನುಭೂತಿಪರ ಸ್ವರದಲ್ಲಿ ಏನಿತ್ತೆಂದು ಮಾಧವನೇ ಬಲ್ಲ. ಅವನು ಕಮಲೆಯ ಅಣ್ಣನನ್ನು ಉದ್ದೇಶಿಸಿ—"ನೀನು ತಿಳಿಯಲು ಉತ್ಸುಕನಾದ್ದಲ್ಲಿ ನಾನು ಹೇಳಬಾರದೇಕೆ? ಈ ವಿಶ್ವವ್ಯಾಪಿ ಅಗ್ನಿಸಮವಾದ ಯುದ್ಧವನ್ನು ನೋಡುತ್ತಿಯಲ್ಲವೇ?—ನರನ ರುಧಿರದ ಕಾಲುವೆಗಳು ಹರಿಯುತ್ತವಲ್ಲವೇ? ವಿರಾಟವಾದ ಮಹಾಪ್ರಲಯವಿದು. ವಿಶ್ವದಲ್ಲಿ ಸುಳಿದಾಡುವ ಗಾಳಿ ಕೂಡಾ ಈ ಪ್ರಲಯದಲ್ಲಿ ನಿಶ್ಚಲವಾಗುವುದು. ಆಕಾಶದ ನೀಲವರ್ಣವು ಮಳೆಯಾಗಿ ಆರಿಹೋಗುವುದು. ಆ ಮಹಾ ಪ್ರಳಯದ ಅಂತ್ಯದಲ್ಲಿ ಜೀವದಿಂದಿರುವಳೆಂದರೆ ಕರಾಳವಾದ ತನ್ನ ಸಹಸ್ರ ಸಹಸ್ರವಾದ ಈರ್ಷ್ಯಾಪೂರಿತ ಕಣ್ಣುಗಳನ್ನು ಆಕಾಶ ಪಾತಾಳದಲ್ಲಿ ಸ್ಥಿರಮಾಡಿ, ರಕ್ತ ಪಿಪಾಸುವಾದ ಭಯಂಕರ ಮುಖವನ್ನು ವಿಶ್ವದಲ್ಲಿ ಪಸರಿಸಿದ ಇವಳೇ? ಮಹಾ ಪ್ರಳಯನಾಶಿನಿ ದುರ್ಗೆಯು ಜಗತ್ತಿನಲ್ಲಿಯ ತನ್ನ ಮಕ್ಕಳಿಗೆ ಶುಭಾಶೀರ್ವಾದವನ್ನು ಕೊಡಲು ಬರುವವಳಲ್ಲ, ಪ್ರಳಯದ ಸಂದೇಶವನ್ನು ತೆಗೆದುಕೊಂಡು ಬರುವಳು. ದೇವಿಯು ವರದಾನವನ್ನು ಕೊಡುವಳಾದರೆ ಈ ರಕ್ತದ ಕಾಲುವೆಗಳು ಹರಿಯುವುದೇಕೆ? ದೇವಿಯ ಶುಭಚರಣಗಳ ಸ್ಪರ್ಶದಿಂದ ವಿಶ್ವದ ವಿಪತ್ತು ದೂರವಾಗುವುದಾದರೆ ಅಗ್ನಿಸಮವಾದ ಈ ಸಮರವೇಕೆ? ದೇವಿಯು ಮನುಷ್ಯನ ರಕ್ತದ ಮಳೆಯನ್ನು ಇಚ್ಛಿಸುವವಳಾದಲ್ಲಿ ಈ ತೆಂಗಿನಕಾಯಿಗಳ ಬಲಿಯನ್ನು ಸ್ವೀಕರಿಸಲಿ; ಮನುಷ್ಯಾಕೃತಿಯ ಈ ನೂರೆಂಟು ತೆಂಗಿನಕಾಯಿಗಳ ಬಲಿಯನ್ನು ತೆಗೆದುಕೊಂಡು ತೃಪ್ತಳಾಗಲಿ. ತದನಂತರ ಮಾನವರಾದ ನಾವು—ಮಾನವರ ಹಿತಕ್ಕಾಗಿ ಅವಳೊಡನೆ ವರದಾನವನ್ನು ಬೇಡಬೇಕು. ಈ ಬಾರಿ ವಿಶ್ವಶಾಂತಿಗೋಸ್ಕರ ಸಿಹಿಯಾದ ಈ ಮಧುವಿನ ಆಹುತಿ, ಅದರ ರುಚಿ, ಅದರ ತಂಪು ರಕ್ತ-ರಸ ಗಂಧವಿಹೀನವಾದ ನಿರುದ್ಧ ರುಧಿರವಲ್ಲ. ದೇವಿಯೊಡನೆ—ಆಭರಣವಿಹೀನಳಾದ ನನ್ನ ಈ ದೇವಿಯೊಡನೆ ಕೇವಲ ವಿಶ್ವಶಾಂತಿಯನ್ನು ನಾನು ಬೇಡುತ್ತೇನೆ."

ಮಾಧವನು ಸಂಕೋಚಪೂರ್ಣ ಕಣ್ಣುಗಳನ್ನು ಮೇಲಕ್ಕೆತ್ತಿ———"ತಿಳಿಯಿತೇ, ಇದು ಅಸ್ವಾಭಾವಿಕವಾದ ಮಸ್ತಕದ ಅದೊಂದು ಕಲ್ಪನೆ" ಎಂದನು.

"ಕಲ್ಪನೆಯ ಹಾರಾಟವು ಹೇಗೂ ಇರಲಿ. ಆದರೆ ಇದೊಂದು ವಿಶ್ವದಲ್ಲಿಯ ಓರ್ವ ಮನುಷ್ಯನ ಕಲ್ಪನೆಯಾಗಿದೆಯಲ್ಲವೇ?"

"ಕಲ್ಪನೆಯಲ್ಲ! ಮನದಿಚ್ಛೆ, ಮನಸ್ಸಿನ ಬೇಡಿಕೆ! ಆದುದರಿಂದ ಅದು ವಿಶ್ವದಲ್ಲಿ ಹೇಗೆ ನಿರರ್ಥಕವಾದೀತು? ಮನುಷ್ಯನ ಹಾರ್ದಿಕ ಕೂಗೂ ಎಂದಾದರೂ ವ್ಯರ್ಥವಾಗಿದೆಯೇ ಮತ್ತು ಕಲ್ಪನೆ? ಕಲ್ಪನೆಯಾಗದಿದ್ದಲ್ಲಿ ವಿಶ್ವೋದ್ಯಾನವು ಏತರ ಮೇಲಿದೆ?"

"ಆದರೆ ಮನುಷ್ಯನ ಕಲ್ಪನೆಯು, ಎಂದು ಆತನಿಗೆ ಜಗತ್ತಿನಲ್ಲಿ ಸಂಗಾತಿಗಳು ಸಿಗುತ್ತಾರೊ ಅಂದೇ ಜೀವಿಸಬಲ್ಲುದು. ಅಲ್ಲದೆ ಜಗತ್ತು ಅದನ್ನು ಸ್ವೀಕಾರಮಾಡಿದಲ್ಲಿ ಮಾತ್ರ" ಆದರೆ "ಒಬ್ಬಂಟಿಗನಾದ ನೀನು ನಿನ್ನ ಕಲ್ಪನೆಯೊಡನೆ ಎಷ್ಟು ಹೊತ್ತು ಜೀವಿಸಬಲ್ಲೆ?"

"ನಿಜವಾಗಿಯೂ ಒಬ್ಬಂಟಿಗ! ನಾನು ಧೈರ್ಯದಿಂದ ಹೇಳಬಲ್ಲೆ—ಇಂದು ನಿನ್ನೊಡನೆ ನಮ್ಮವರು ಯಾರೂ ಸೇರಲಿಕ್ಕಿಲ್ಲ."

"ಸೇರದಿದ್ದಲ್ಲಿ ಬೇಡ" ಮಾಧವನು ಉತ್ತೇಜಿತನಾಗಿ ಹೇಳತೊಡಗಿದನು. "ಇದರಲ್ಲಿ ಹಾನಿ ಏತರದು? ನಾನಿದ್ದೇನೆ ಮತ್ತು—ನನ್ನ ವಿಶ್ವಶಾಂತಿಯ ಕೂಗು—ಕರೆ—ಇದೆ ಸರಿ;. ಇಷ್ಟೇ ಸಾಕು."

ಇಷ್ಟರಲ್ಲಿ ಮುಸಲಮಾನ, ಸಮಗಾರ ಮೊದಲಾದವರಿಂದ ಆ ಸ್ಥಾನವು ಕಿಕ್ಕಿರಿದು ತುಂಬಿಹೋಯಿತು.

ನೆರೆದಿದ್ದ ಇತರರು ಎದ್ದುನಿಂತರು. ನಡುಗುವ ಧ್ವನಿಗಳಿಂದ ಮುದುಕರು "ಇದೇನು"? ಎಂದು ಕೂಗಿದರು.

"ಇವರಿಗೆ ನಾನು ದೇವಿಯ ದರ್ಶನಕ್ಕೆ ಬರಲು ಆಮಂತ್ರಣ ಕೊಟ್ಟು ಬಂದಿದ್ದೆ. ನನ್ನ ಈ ಪೂಜೆಯು ವಿಚಾರವಿಹೀನವಾಗಿದೆ. ಅಜ್ಜಯ್ಯನವರೇ, ತಾವು ತಪ್ಪು ಭಾವಿಸಬೇಡಿ. ದೇವಿಯೊಡನೆ ನನ್ನ ಬೇಡಿಕೆಯಾದರೊ—

ವಿಶ್ವಶಾಂತಿಯಾಗಿದೆ. ಆ ವಿಶ್ವಶಾಂತಿಯ ಪ್ರಾಣವೆಂದರೆ ಐಕ್ಯ. -ಬನ್ನಿ ಅಣ್ಣತಮ್ಮಂದಿರೇ, ಬನ್ನಿ, ಕೂತುಕೊಳ್ಳಿ! ನಾವೆಲ್ಲರೂ ಒಟ್ಟುಗೂಡಿ ಒಂದೇ ಸ್ವರದಿಂದ ದೇವಿಯೊಡನೆ — —ಶಾಂತಿಯನ್ನು—ವಿಶ್ವಶಾಂತಿಯನ್ನು ಬೇಡುವಾ!"

ದೇವೇಂದ್ರನು—"ಸರಿ! ನಿನ್ನ ಹುಚ್ಚಾಟ ಮಾಡುತ್ತಾ ವಿಶ್ವಶಾಂತಿಯನ್ನು ಬೇಡುತ್ತಾ ಇರು. ಇಂಥವನ ಕೂಡೆ ನಾವಿರಲಾರೆವು. ಬಂಧುಗಳೆ! ನಡೆಯಿರಿ ಹೋಗುವಾ" ಎಂದನು.

ಪುರೋಹಿತರು ಆಸನದಿಂದ ಎದ್ದು, "ಇಂತಹ ಅನಾಚಾರದ ಪೂಜೆಯನ್ನು ನನ್ನಿಂದ ಮಾಡಲು ಸಾಧ್ಯವಿಲ್ಲ" ಎಂದರು.

ಮಾಧವನು ಮೃದುವಾಗಿ ನಗುತ್ತಾ, "ಇಂದು ದೇವಿಯು ನನ್ನ ಕೈಯ ಪೂಜೆಯನ್ನು ಇಚ್ಛಿಸುತ್ತಾಳೆಂದು ತೋರುತ್ತದೆ. ಆಗ ನಾನು ಪೂಜೆ ಮಾಡದೆ ಇರಲೇಕೆ" ಎಂದನು.

ಜನನಿಬಿಡವಾದ ಮಂಟಪದಲ್ಲಿ, ಖಾಲಿಬಿದ್ದ ಪುರೋಹಿತರ ಆಸನದಲ್ಲಿ ಮಾಧವನು ಆಸೀನನಾದನು.

ವಿಜಯದಶಮಿಯ ಉದಾಸ ಸಮಯ. ದೇವಿಯ ಮೂರ್ತಿ, ಹೋಮಕುಂಡ, ಮತ್ತು ಮಾಧವ. ಪಟ್ಟವಾದ ಎಲ್ಲಾ ಮೂರ್ತಿಗಳು ವಿಸರ್ಜನಕ್ಕೋಸ್ಕರ ಒಯ್ಯಲ್ಪಟ್ಟದ್ದುವು. ಆದರೆ ಮಾಧವನ ದೇವಿಯು ಆಗಲೂ ಅಲ್ಲೇ ಇದ್ದಳು. ಮಾಧವನು ಸುಮ್ಮನೆ ಕುಳಿತುಕೊಂಡು ದೇವಿಯನ್ನು ದೃಷ್ಟಿಸುತ್ತಿದ್ದ. ಒಂದೆರಡು ಬಾರಿ ತನ್ನ ಸುದೃಢವಾದ ಕೈಗಳಿಂದ ಮೂರ್ತಿಯನ್ನೆತ್ತಲು ಅವನು ಪ್ರಯತ್ನಿಸಿದನು. ತದನಂತರ ಸುಮ್ಮನೆ ಎದ್ದು ನಿಂತನು.

ಸಾಯಂಕಾಲದ ಸಮಯ ಕತ್ತಲು ಕವಿದಿತ್ತು. ಅಷ್ಟರಲ್ಲಿ ಆ ರಮಣಿಮಣಿಯು ಬಂದು ತಲ್ಪಿದಳು. ಅಂತೆಯೇ ತನ್ನ ಸುಮಧುರ ಸ್ವರದಿಂದ "ನಿಮ್ಮ ಮಹಾಯಜ್ಞದ ಸಹಚರಿಯಾಗಲು ನಾನು ಕೂಡ ಇದ್ದೇನೆ" ಎಂದಳು.

ಮಾಧವನು ಬೆಚ್ಚಿಬಿದ್ದನು. ಹಿಂತಿರುಗಿ ನೋಡಿದನು. ಸಣ್ಣ ಮಕ್ಕಳ ನಗುವಿನಂತೆ ಸರಲಹಾಸ್ಯವನ್ನು ಬೀರಿ, "ಕಮಲಾ! ನೀನು ಬಂದುಬಿಟ್ಟೆಯಾ?" ಎಂದನು.

"ಕಡೆತನಕ ನಿಮ್ಮೊಡನೆ ಇರಬೇಕು ನಾನೇ ಅಲ್ಲವೇನು? ಆದರೆ ನೀವಿಲ್ಲಿ ನಿಂತು ಏನು ಮಾಡುತ್ತಾ ಇದ್ದಿರಿ?"

"ದೇವಿಯ ವಿಸರ್ಜನೆಯಾಗಬೇಕು. ಇಷ್ಟರ ತನಕ ನಾನು ಮತ್ತೆ ದೇವಿ ಇಬ್ಬರೇ ಇದ್ದೆವು. ಮೂರನೆಯ ವ್ಯಕ್ತಿ ಯಾರೂ ಇರಲಿಲ್ಲ."

"ಇದರ ಆವಶ್ಯಕತೆಯೇನು? ನಾವು ದೇವಿಯನ್ನು ವಿಸರ್ಜನೆ ಮಾಡಲೇಕೆ? ನಮ್ಮ ಭಿಕ್ಷೆಯ ಜೋಳಿಗೆಯನ್ನು ಇವಳು ಎಂದಿನ ತನಕ ತುಂಬಿಸುವುದಿಲ್ಲವೊ ಅಂದಿನ ತನಕ ಇವಳನ್ನು ಬಿಡಬಾರದು. ಇಂದು ನಾನು ಕೂಡಾ ನಿಮ್ಮೊಡನೆ

[48ನೇ ಪುಟಕ್ಕೆ ಮುಂದುವರಿದಿದೆ]

ಆರ್ಯವಾಙ್ಮಯದಲ್ಲಿ

ದುರಂತಕೃತಿಗಳ ಕೊರತೆಯೇಕೆ?



(ಶ್ರೀ ಎಸ್. ಸುಬ್ರಾಯನ್, ವಿದ್ವಾನ್.)

ಸಚ್ಚರಿತೆಗಳಿಂದ ಸದ್ಭಾವವುದ್ಭವಿಸುವುದು. ಒಂದು ಸಂಸ್ಕೃತಿ, ಒಂದು ಸಚ್ಚರಿತೆ, ಒಂದು ಸುಂದರ ವಸ್ತು—ಇದೆಲ್ಲ ಮಾನವನಲ್ಲಿ ಸದಾನಂದಕ್ಕೆ ಕಾರಣವಾಗುವುವು. ಆಂಗ್ಲರ "ಚೆಲುವು ಎಂದೆಂದೂ ನಲವು" ಎಂಬೀ ನಾಣ್ನುಡಿಯಾದರೂ ಅದನ್ನೇ ಪ್ರತಿಪಾದಿಸುತ್ತಿದೆ. ದುಷ್ಟ ವಸ್ತುಗಳು ಮನಸ್ಸನ್ನು ಕಲುಷಿತಗೊಳಿಸುತ್ತವೆ. ಆರ್ಯವಾಙ್ಮಯಕಾರರು ಇದನ್ನರಿತೇ ಆನಂದಾಂತ ಕೃತಿಗಳನ್ನು ಹೆಚ್ಚಿಚ್ಚಾಗಿ ರಚಿಸಿ ಕೃತಾರ್ಥರಾದರು. 'ವಿಷಾದಾಂತ' ಕೃತಿಗಳಿಗೆ ಇಂದಿನ ಸಾಹಿತ್ಯದಲ್ಲಿ ಪ್ರತ್ಯೇಕ ಸ್ಥಾನ ಕೊಡಲಾಗಿದೆಯಾದರೂ, 'ಹರ್ಷಾಂತ' ಕೃತಿಗಳ ಮೌಲ್ಯವನ್ನವು ಎಂದೂ ಸರಿದೂಗಲಾರವು—ಎಂಬುದಿದು ಈ ಲೇಖಕರ ಪ್ರತಿಪಾದನ ಈ ವಿಷಯವು, ವಿವಾದಾಸ್ಪದವಿರಬಹುದು. ಪರಂತು, ಓದಿ ವಿಚಾರಿಸತಕ್ಕುದಾಗಿದೆ.

ಆರ್ಯವಾಙ್ಮಯದಲ್ಲಿ ಆನಂದ ಪರ್ಯವಸಾಯೀ ಕೃತಿಗಳೇ ತುಂಬಿವೆ; ಶೋಕಾಂತಗಳು ವಿರಳ. ನಮ್ಮ ಸಾಹಿತ್ಯಕ್ಕೆ ಇಂತಹ ನೆಲೆಯಿದೆಯೆಂದು ಅನೇಕರಿಗೆ ಅದರಲ್ಲಿ ಆರ್ಯವಾಙ್ಮಯದಲ್ಲಿ ಹೇಯತಾಭಾವನೆಯೊಂದಿದೆ.

ಭಾರತಜನಾಂಗವೂ ಕವಿಗಳೂ ಶೋಕವನ್ನು ಮೆಚ್ಚದವರು, ಸುಖವನ್ನೇ ಎಳಸುವವರು, ಜೀವನಸಂಗ್ರಾಮದಲ್ಲಿ ಅದನ್ನೇ ಮುಂದಿಟ್ಟುಕೊಳ್ಳುವವರು, ಅದಕ್ಕಾಗಿ ದುಡಿಯುವವರು, ಕವಿಗಳು ಅದರೊಂದಿಗೆ ಅಂತಹ ಉದಾತ್ತ ಬಗೆಯಿಂದ ಕೂಡಿದ್ದು ಅಂತಹ ಚರಿತ್ರವನ್ನು ಕಾಣುವವರು, ಇದನ್ನೇ ಜನತೆಗೆ ಒದಕೊಟ್ಟು ಜೀವನಮಾರ್ಗಕ್ಕೆ ಆದರ್ಶಪಥವನ್ನು ಕಡಿದುಕೊಳ್ಳುವಂತೆ ಬೋಧಿಸುತ್ತಿರುವವರು; ಇದರಿಂದ ನಮ್ಮ ಕೃತಿಗಳು ಶೋಕಾಂತಗಳಲ್ಲವೆಂದು ಹಲವರು ಉದ್ಗಾರ ತೆಗೆಯಬಹುದು. ಇಂತಹ ಭಾವನೆಯು ಪಾಶ್ಚಾತ್ಯ ಕೃತಿಗಳನ್ನು ಓದಿದ ಪ್ರಭಾವದಿಂದಲೇ ಹಲವರಲ್ಲಿ ತಲೆಯೂರಿದೆ. ಪಾಶ್ಚಾತ್ಯ ಗ್ರಂಥಕಾರರ ಚರಿತ್ರ ಪುರುಷರು ಭಾರತೀಯ ಗ್ರಂಥ ಚರಿತ್ರ ಪುರುಷರ ಎದುರಿಗೆಂದೂ ಸರಿಹೋಲತಕ್ಕವರಲ್ಲ. ಪಾಶ್ಚಾತ್ಯರ ದುರಂತ ಪುರುಷರ ಚರಿತ್ರೆಯು ಸಮಾಜಕ್ಕೆ ಆದರ್ಶದ ಹಂತಿಯಲ್ಲಿರುವುದಲ್ಲ. ಭಾರತ ಚಾರಿತ್ರಿಕ ಪುರುಷರ ವೀರಚರಿತ್ರೆಯು ಲೋಕದ ಸಮಸ್ತ ಜನಾಂಗಕ್ಕೆ ಆದರ್ಶಪ್ರಾಯವಾದುದು.

ಮಾನವನಲ್ಲಿ ಆಸುರೀ ವೃತ್ತಿಯಿದೆ. ಮನುಷ್ಯನು ಪಶುವೃತ್ತಿಯನ್ನು ತೋರಿದರೆ ಅದಕ್ಕೆ ಶ್ರೇಷ್ಠತೆಯಿಲ್ಲ, ಮನುಷ್ಯನು ಪಶುಭಿನ್ನನೆಂದು ಪ್ರಾಣಿಭಿನ್ನನೆಂದು ಕೃತಿಯಿಂದ ತೋರಿಗೊಡುವುದೇ ಮಾನವತೆ. ಮಾನವಜೀವಿಯು ಪ್ರಾಣಿಗಳಂತೆ ಇಂದ್ರಿಯ ಮತ್ತು ಕಾಮಕ್ರೋಧಾದಿಗಳಿಗೆ ಅಧೀನವೆನಿಸಿ ಉನ್ನತವೃತ್ತಿಗೈಯ್ಯುದು. ಇಂದ್ರಿಯ, ಅರಿಷಡ್ವರ್ಗಗಳನ್ನು ಜಯಿಸಿದಾತನಲ್ಲೇ ಮನುಷ್ಯತೆಯಿದೆ. ಇದನ್ನೇ ಮಹಾಕವಿ ವ್ಯಾಸನು ತನ್ನ ಗ್ರಂಥದಲ್ಲಿ ನಮಗರಿವಂತೆ ಮಾಡಿರುವನು.

"ಕಾಮಕ್ರೋಧ ಸಮಾಯುಕ್ತೋ
ಹಿಂಸಾ ಲೋಭ ಸಮನ್ವಿತಃ ।
ಮನುಷ್ಯತ್ವಾತ್ ಪರಿಭ್ರಷ್ಟಃ
ತಿರ್ಯಗ್ಯೋನೌ ಪ್ರಸೂಯತೇ ॥
ತಿರ್ಯಗ್ಯೋನ್ಯ ಪೃಥಗ್ಭಾವೋ
ಮನುಷ್ಯಾರ್ಥ ವಿಧೀಯತೇ ।

ಮಾನವತೆಯನ್ನು ಮಿಕ್ಕಿದುದಕ್ಕೆ ಭಾರತ ಚರಿತ್ರೆಯ ನಹುಷನು ಉದಾಹರಣಾರ್ಹನು.

ಯೂರೋಪಿನ ಶೋಕಾಂತಗಳಲ್ಲಿ ಇಂತಹ ಚರಿತ್ರೆಯು ಕಂಡು ಬರುತ್ತದೆ. ನಹುಷನು ಇಂದ್ರಾಣಿಯನ್ನು ಕಂಡು ಕಾಮಾಂಧನಾದನು. ಕಾಮಾಂಧನು ಆಗ ಮುನಿಗಳಿಂದ ಪಲ್ಲಕ್ಕಿಯನ್ನು ಹೊರಿಸಿದನು. ಇಂತಹ ಚರಿತ್ರೆಯು ಪಾಶ್ಚಾತ್ಯ ಚರಿತ್ರಾ ಪುರುಷರಲ್ಲಿ ಕಂಡುಬರುವುದು.

ಮಹಾಕವಿ ವಾಲ್ಮೀಕಿಯು ರಾಮನ ಚರಿತ್ರೆಯನ್ನು ಬಾಲ್ಯ ಚರಿತ್ರೆಯಿಂದಲೇ ಬಳೆಸಹತ್ತಿ, ಆದರ್ಶ ಚರಿತ್ರೆಯ ನಾಯಕನನ್ನಾಗಿ ಮಾಡಿ ಸಂತೋಷ ಕೊಡುತ್ತಿರುವನು. ಕವಿ

(47ನೇ ಪುಟದಿಂದ ಮುಂದುವರಿದುದು.)

ಇದ್ದೇನೆ—ಆ ವಿಶ್ವಶಾಂತಿಯ ಬೇಡಿಕೆಯಲ್ಲಿ ನಾನು ನಿಮ್ಮ ಸ್ವರದೊಡನೆ ನನ್ನ ಸ್ವರವನ್ನೂ ಕೂಡಿಸುವೆನು."

"ತಡವೇಕೆ? ಕಮಲಾ! ಬಾ, ನಾವಿಬ್ಬರೂ ನಮ್ಮ ಸ್ವರವನ್ನು ವಿಶ್ವದ ವಾಯುವಿನಲ್ಲಿ ಬೆರಸುವಾ-ಬೆರಸುತ್ತಲಿರುವಾ." ಆ ಪಸರಿಸಿದ ಬಾಹುಗಳಲ್ಲಿ—ಲಜ್ಜಿತಳಾದ ಕಮಲೆಯು ಒಂದೇ ಆಸನದಲ್ಲಿ ಮಾಧವನೊಡನೆ ದೇವಿಯ ಇದಿರು ಕುಳಿತುಕೊಂಡಳು.

ಮಾಧವನೊಡನೆ ಕಮಲೆಯೂ ಹುಚ್ಚಿಯಾದಳೆಂದು ಜನರಾಡಿಕೊಳ್ಳುತ್ತಿದ್ದಾರೆ. ಈ ಸಂಗತಿಯು ಎಷ್ಟರಮಟ್ಟಿಗೆ ನಿಜವೆಂದು ಆಡಿಕೊಳ್ಳುವವರು ಮಾಧವ, ಕಮಲೆಯರ ದೃಷ್ಟಿಯಿಂದ ನೋಡಿಕೊಂಡಲ್ಲಿ ತಿಳಿದುಬಂದೀತು.

ಲಲಾಮ ಕಾಳಿದಾಸನು ವಂಶಾವಳೀ ವೀರರ ಚರಿತ್ರೆಯೆತ್ತಿ ಅಂತ್ಯದಲ್ಲಿ ಮಹಾವೀರನಾದ ರಾಮಚಂದ್ರನನ್ನು ತೋರಿ ಕೊಟ್ಟು ಆನಂದಗೊಡುತ್ತಿರುವನು. ವ್ಯಾಸನು ಅಂತೆಯೇ ಆದರ್ಶವೀರ ಚರಿತ್ರೆಯನ್ನೆತ್ತಿ ಆನಂದಾಂತವನ್ನೇ ಮಾಡುತ್ತಾನೆ.

ಮನುಷ್ಯವಿರೋಧೀ ಶಕ್ತಿಗಳು ಸಾಧ್ಯವಾದಷ್ಟು ಬಲಗೊಂಡು, ಮುಂದೆ ಮನುಷ್ಯನನ್ನು ಎಷ್ಟು ನೀಚತೆಗೆ ತಳ್ಳಬಹುದೋ . ಅದರ ಉದಾಹರಣೆಯು ಯುರೋಪಿಯ ಶೋಕಾಂತಗಳಲ್ಲಿ ಕಾಣಬರುತ್ತಿದೆ. ಪಾಶ್ಚಾತ್ಯರು ಶೋಕಾಂತಕ್ಕೆ ಮರ್ಯಾದೆಯಿತ್ತು, ಅದಕ್ಕೆ ಗೌರವವು ಹೆಚ್ಚಿದೆ, ಜನತೆಯು ಮನಸ್ಸಿನಲ್ಲಿ ಅದೇ ರಸವು ನಾಟಿದೆ. ಜನತೆಯು ನಡತೆಯೂ ಅದರೊಂದಿಗೆ ಬೆರೆತು ಅಸುರೀವೃತ್ತಿಗೆ ಹೋಗ ಹತ್ತಿದೆ. ಇದೇ "ಟ್ರೆಜೆಡಿ"ಗಳ ಸೌಖ್ಯ ಪರಿಣಾಮ. 'ಮೇಕ್‌ಬೆತ್' ಲೋಭದಿಂದ ತುಂಬಿದ ವೀರರಮಣಿ. 'ಒಥೆಲೋ' ಕಾಮದ್ವೇಷ ಸಮರ್ಥನು.

ಯೂರೋಪಿನ ಶೋಕಾಂತವೀರರ ಚರಿತ್ರೆಯು ಅನಾದೃಶ್ಯ. ಇದನ್ನೇ ಹಲವರು ಪ್ರತಿಷ್ಠೆಯಿಂದ ನೋಡುವರು. ಲೋಭಪಿಪಾಸೆಗೊಳಗಾಗಿ ಪರತಂತ್ರರಾಗಿ, ಸರ್ವನಾಶ ಸಾಧಕರಾಗಿ ಲೋಭಕಬಳವನ್ನು ಬಯಸಿ, ಅಹಂಕಾರದಿಂದ ವಿಶ್ವವನ್ನು ಕಡೆಗಣಿಸಿ, ಮಹದುನ್ಮತ್ತತೆಯಿಂದ ಮದಸಾಗರದಲ್ಲಿ ಮುಳುಗೆದ್ದು, ವಿಜಯೋಲ್ಲಾಸೀ ರಣಪ್ರಿಯ ಯಾವ ದಾನವ ಮಾನವ ಪುರುಷರಿಂದ ಭೂಮಂಡಲದಲ್ಲಿ ಆಧಿಪತ್ಯಗೆಯ್ಯಲಾಗಿಡೆಯೋ ಅಂತಹರೇ ಪಾಶ್ಚಾತ್ಯರ ದುರಂತ ಚರಿತ್ರೆಯ ನಾಯಕರು. ಇಂತಹ ನಾಯಕರು ನಮ್ಮ ರಾಷ್ಟ್ರಕ್ಕೆ ಬೇಡ. ಅಲೆಕ್ಸಾಂಡರ, ಜೂಲಿಯಸ್ ಸೀಜರ್, ನೆಪೋಲಿಯನ್, ಹನೀಬಾಲ್ ಅವರ ಚರಿತ್ರೆಯೆಲ್ಲಾ ಇಂತಹ ವೀರರದ್ದಲ್ಲವೇ?

ಆರ್ಯರ ಚರಿತ್ರೆಯಲ್ಲಿ ಆಸುರೀವೀರರ ಚರಿತ್ರೆಯಿದೆ. ಅವರ ನಡತೆಯೇ ಯೂರೋಪಿನ ಶೋಕಾಂತ ನಾಯಕರಲ್ಲಿ ಕಂಡುಬರುವುದು. ಅಡಿಗಡಿಗೆ ಭಾರತದಲ್ಲಿ ರಾಕ್ಷಸರು ಜನ್ಮವೆತ್ತಿ ಸ್ವರ್ಗದಲ್ಲೂ ತಮ್ಮೊಡೆತನವನ್ನು ಸ್ಥಾಪಿಸಿದುದು ಕಂಡುಬರುತ್ತಿದೆ. ಪಾಶ್ಚಾತ್ಯ ಮತ್ತು ಆರ್ಯ ಸಾಹಿತ್ಯದಲ್ಲಿ ಹೀಗಿದ್ದರೂ ಭೇದಗತಿಯಿದೆ. ಅಲ್ಲಿನವರೆಂದೆಂದೂ ಅಧಿಕಾರೀ ದೇವಪುರುಷರಾಗಿ ನಿಂದಂತೆ ಶೋಕಾಂತಗಳು ಹೇಳುತ್ತಿವೆ. ಇಲ್ಲಿನ ಗ್ರಂಥಗಳು ಇವರ ದರ್ಪವನ್ನು ಕೆಡಿಸಿ ಸಮಾಜಾದರ್ಶದ ಕಡೆಗೋಡುತ್ತಿವೆ.

ಆರ್ಯಸಾಹಿತ್ಯದ ಅಸುರರು ಪಾಶ್ಚಾತ್ಯರ "ಟ್ರೆಜಡಿ" ನಾಯಕರು. ಇವರು ಒಂದು ತರಹದ ಚಾರಿತ್ರ ಪುರುಷರು. ಆರ್ಯ ಕವಿಗಳು ತಮ್ಮ ನಾಯಕರನ್ನು ಅನೇಕ ಉಚ್ಚ

(50ನೇ ಪುಟಕ್ಕೆ ಮುಂದುವರಿದಿದೆ)

ತಾರಾಪತನ

(ಲೇಖಕ: ಮಧುಕರ)

ಪರವಿತ್ತವನ್ನಪಹರಿಸುವ ಚೋರನಿಗೂ ಪರಸ್ತ್ರೀಯನ್ನು ಮೋಹಿಸುವ ಜಾರನಿಗೂ ಭೇದವೇನು? ಇಬ್ಬರೂ ಕಳ್ಳರೇ! ವಿವಾಹಿತನಿಗೆ, ಮತ್ತೊರ್ವ ವಿವಾಹಿತ ಸ್ತ್ರೀಯ ಮೇಲೇನು ಅಧಿಕಾರ? ಆಕೆಯನ್ನು ನೆನೆವುದೂ ಪಾಪ. ಪಾಪಿ ಮನಸ್ಸನ್ನು ಒತ್ತಿ ಹಿಡಿದು, ವಿಚಾರ ಮಾಡಿ ಗೆಲ್ಲುವವನೇ ಧನ್ಯನು. ಇಂತಹ ಸಂಯಮನವು ಎಷ್ಟು ಮಂದಿಗಿದೆ? ಆದರೆ, ಅಂತಹ ಸಂಯಮನವಿಲ್ಲದೆ ವಿಚಾರಶಕ್ತಿಯನ್ನು ಮೊಂಡಾಗಿಸಿ ಕೆಡುವುದೇ?... ಈ ಲೇಖಕರು, ಓರ್ವ ಪುರುಷನ ಮನೋವಿಕಾರಗಳನ್ನು, ಅವನ ಮನಸ್ಸಿನಲ್ಲಿ—ಹತೋಟಿಗೆ ಸಿಗದೆ ಓಡುವ ವಿಚಾರಗಳನ್ನು ಇಲ್ಲಿ ವಿವರಿಸುತ್ತಾರೆ. ತಾನು ಪ್ರೇಮಿಸುವಾಕೆಯು ತನ್ನ ಪಾಲಿಗೆ ಪತನವಾದ ತಾರೆಯಂತೆ ಎಂದು ಆ ಪಾತ್ರದ ಬಾಯಿಂದ ಬೋಧಿಸುತ್ತಾರೆ. ಹಲವರ ಜೀವನದಲ್ಲಿ, ಪ್ರೇಮಭಂಗವಾಗಿದ್ದಿರಬಹುದು. 'ಅಸಮದಂಪತಿ'ಗಳು ಹಲವರಿರಬಹುದು; ಆದರೆ, ಇಹದಲ್ಲಿ ತನ್ನ ಕರ್ತವ್ಯಗಳನೇಕವನ್ನು ಪೂರೈಸಲಿರುವ ಮಾನವನು ಅಸಮದಾಂಪತ್ಯವನ್ನೂ ವಿಚಾರಶಕ್ತಿಯಿಂದ ಅನುಕೂಲದಾಂಪತ್ಯವಾಗಿ ಮಾಡಿಕೊಳ್ಳಬೇಕು, ಸಂಯಮಿಯಾಗಿ ಗೆದ್ದು ಮುಂದರಿಯಬೇಕು.

ಇಪ್ಪತ್ತು ವರ್ಷಗಳ ನಂತರ ಆಕೆ, ಆಕಸ್ಮಿಕವಾಗಿ ನನ್ನ ಮುಂದೆ ಬಂದು ನಿಂತಿದ್ದಳು. ಆ ಇಪ್ಪತ್ತು ವರುಷಗಳು! ಕಾಲಚಕ್ರದಲ್ಲಿ ಒಂದು ಪರಮಾಣುವಿನಷ್ಟು; ಆದರೆ, ನನ್ನ ಅಲ್ಪ ಜೀವನದಲ್ಲಿ ಒಂದು ಮನ್ವಂತರ.

"ನೀನು........!" ನಾನು ವಿಸ್ಮಯದಿಂದ ಕೇಳಿದೆ.

"ಹೌದು, ನಾನು! ಸಜೀವಳಿದ್ದೇನೆ!' ಎಂದು ಮುಗುಳ್ನಗುತ್ತ ಹೇಳಿದಳು.

ಎಷ್ಟು ಸಲುಗೆ! ಮತ್ತು ಎಂತಹ ನಿಸ್ಸಂಕೋಚತೆ! ನಾನು ಆಕೆಯನ್ನು ನೋಡಿ ಮೊದಲು ವಿಸ್ಮಯಗೊಂಡೆ; ಬಾಯಿ ಕಟ್ಟಿಹೋಯಿತು. ಮರುಕ್ಷಣದಲ್ಲಿ ನಾನಾ ಭಾವನಾತರಂಗಗಳೆದ್ದುವು. ಆಕೆ ಮಾತ್ರ ಭಾವನಾವಿಹೀನಳಾಗಿದ್ದಂತೆ ತೋರಿತು. ಅಥವಾ ಅದೊಂದು ಮನೋಬಲವೇ?

"ಸೌಖ್ಯವೇ?"

"ಸಂದೇಹವೇನು? ಕಾಣಿಸುತ್ತಿಲ್ಲವೇ?" ಎಂದು, ಪುನಃ ನಸುನಗುತ್ತಲೇ ಉತ್ತರವಿತ್ತಳು.

[49ನೇ ಪುಟದಿಂದ ಮುಂದುವರಿದುದು]

ನಾಯಕರ ಗುಣಗಳನ್ನು ಕಂಡು ಅವರ ಗುಣಪುಂಜದ ವಿಗ್ರಹದಂತೆ ಚಿತ್ರಿಸಿರುವರು. ಇದರಿಂದ ವ್ಯಾಸನ ದುರ್ಯೋಧನನಲ್ಲಿ ಯುರೋಪಿನ ಅನೇಕ "ಟ್ರೆಜಡಿ" ನಾಯಕರ ಗುಣಚಿತ್ರವನ್ನು ಕಾಣಬಹುದಾಗಿದೆ. ಇಂತಹ ಪಾಪ ಚರಿತ್ರೆಗಳನ್ನು ಓದುವುದರಿಂದ ಮನಸ್ಸು ಕಲಂಕಗೊಂಡು, ಜನತೆ ಕೆಡುವುದು. ಇದನ್ನರಿತು ಪಾಪಚರಿತ್ರೆಯ ನಾಯಕರ ಚಿತ್ರವನ್ನು ಆರ್ಯ ಸಾಹಿತ್ಯಕಾರರು ಒಂದೆಡೆ ಚಿತ್ರಿಸಿ ದೇವಚರಿತ್ರೆಯ ಮಾನುಷತೆಯ ಇರವಿಗೆ ದೇವತಾ ಚರಿತೆಯ ಆನಂದಾಂತ ಉಜ್ವಲ ಚಿತ್ರವನ್ನು ಮುಂದೆ ತಂದು ಕೊಟ್ಟಿರುವರು. ಭಾರತದ ದುರ್ಯೋಧನ ಮತ್ತು ರಾಮಾಯಣದ ರಾವಣರ ಚರಿತ್ರೆ ಯುರೋಪಿನ ಹಲವಾರು "ಟ್ರೆಜಡಿ" ನಾಯಕರ ಸಮಸ್ತ ನೀಚ ವೃತ್ತಿ. ಇಂತಹ ಚರಿತ್ರೆಯಿಂದ ನಮ್ಮ ಕಲ್ಪನೆಯು ಕೆಡುವುದು. ಆರ್ಯ ಗ್ರಂಥಗಳನ್ನೋದಿದರೆ ಭಾವನೆ ಕಲಂಕಗೊಳ್ಳುವುದಿಲ್ಲ. ಆರ್ಯರ ಶೋಕಾಂತಗಳಲ್ಲೂ ಧರ್ಮ, ಆದರ್ಶ, ಬೋಧೆಗಳಿವೆ. ಶಿಬಿಚರಿತ್ರೆ, ದಾನಶೂರಕರ್ಣ, ಹರಿಶ್ಚಂದ್ರರ ಕಥೆಗಳು ಆದರ್ಶಬೋಧೆಯಿಂದೊಡಗೂಡಿದ್ದು, ಆನಂದಪರ್ಯವಸಾಯಿಗಳಾಗಿವೆ.

ಅಲೆಕ್ಸಾಂಡರ, ಶಾರ್ಲಮೆನ್, ಜೂಲಿಯಸ್ ಸೀಜರ್, ನೆಪೋಲಿಯನ್, ತೈಮೂರ, ಮಹಮ್ಮದ ಗಜನಿ ಇವರೆಲ್ಲಾ ದಿಗ್ವಿಜಯಿ ನಾಯಕರು; ವೀರರು. ಆರ್ಯ ಸಾಹಿತ್ಯದ ಶ್ರೀ ರಾಮಚಂದ್ರ, ರಘು, ಪಾಂಡವರು ಇವರ ದಿಗ್ವಿಜಯ ಯಜ್ಞಕ್ಕೆ ರಾಜ್ಯಲೋಭದಿಂದ ರಕ್ತಗಂಗೆ ಹರಿಸಲು ಅವರ ದಿಗ್ವಿಜಯ ಉಂಟಾಗಲಿಲ್ಲ. ದಿಗ್ವಿಜಯದ ಸಂಪತ್ತು ಯಜ್ಞಕಾಲದಲ್ಲಿ ದಾನಕ್ಕೆ ಹರಡುತಿತ್ತು. ಆ ಸಂಪತ್ತು ಸರ್ವರಲ್ಲಿ ಸೇರುತಿತ್ತು. ಪಾಶ್ಚಾತ್ಯವೀರರ ಶೋಕಾಂತ ದಿಗ್ವಿಜಯ ಪ್ರಸಂಗವು ಇಂದು ವಿಶ್ವದಲ್ಲಿ ಶೋಕಾಕ್ರಂದನವನ್ನು ಮೊಳಗಿಸ ಹತ್ತಿದೆ. ಆರ್ಯ ವಾಙ್ಮಯವು ಇಂತಹ ಕೊರತೆಗಳುಳ್ಳುದಲ್ಲ. ಆದುದರಿಂದ ಭಾರತವು ಹಿಂದೆ ಇಂತಹ ದುಸ್ಥಿತಿಗೆ ಇಳಿಯದುಳಿಯಿತು. ಇಂದಿನ ಅನುಕರಣೆಯು ಜೀವನದಲ್ಲಿ ಬೇನೆಬೇಸರಿಕೆಗಳನ್ನು ಕೊಟ್ಟುದಲ್ಲದೆ ನಾಶಗರ್ತಕ್ಕೆ ಇನ್ನೂ ತಳ್ಳುತ್ತಿದೆ. ನಮ್ಮ ಸಾಹಿತ್ಯದ ಅಂತವು ನಮ್ಮ ಊರ್ಧ್ವಗತಿಗುಳ್ಳುದಲ್ಲದೆ ವಿಪದ್ಗತಿಯನ್ನು ಕಾಣಿಸಲೇ? ದುರಂತ ಚರಿತ್ರೆಯನ್ನು ಕಂಡು ಅದನ್ನನು ಕರಿಸಲೇ?

ಅಹುದು, ಕಾಣಿಸುತಿತ್ತು! ಇಪ್ಪತ್ತು ವರ್ಷಗಳ ಮೊದಲು ಬಳಕುವ ಜವ್ವನೆಯಾಗಿದ್ದಳು. ಇಂದು ಕಾಲನು ಆಕೆಯ ಮೇಲೆ ವಿಷಾದಕರ ಅದ್ಭುತವನ್ನೆ ತಂದಿದ್ದನು. ಆ ತೀಕ್ಷ್ಣ ನಯನಗಳ ಹೊರತು ಮತ್ತೆಲ್ಲವೂ ಮಾರ್ಪಟ್ಟಿತ್ತು. ನಾನು ಬಹುಶಃ ಆ ಕಣ್ಣುಗಳನ್ನು ನೋಡಿಯೇ ಆಕೆಯನ್ನು ಗುರುತಿಸಿದ್ದಿರಬೇಕು.

"ನೀನೇನು ಬಂದೆ?"

"ಬರಬಾರದಿತ್ತೇ?" ಪುನಃ ಮಂದಸ್ಮಿತ ಬೀರಿಯೇ, ನನ್ನ ಪ್ರಶ್ನೆ ಹೊರಬೀಳುವುದರೊಡನೇ ಉತ್ತರವಿತ್ತಳು.

ಅಹುದು, ಬರಬಾರದಿತ್ತೇ? ನಾನೆಂತಹ ಮೂರ್ಖನು! ಬಹುಶಃ ಅವಳನ್ನು ನೋಡಿ ನನ್ನ ಮತಿಗೆ ತೆರೆ ಬಂದಿರಬೇಕು.

ನನ್ನ ಪ್ರಶ್ನೆ ದೊರಗಾಯಿತೇ? ನಾನು ಶಿಷ್ಟಾಚಾರವನ್ನು ಮೀರಿದೆನೆ? ಇಪ್ಪತ್ತು ವರ್ಷಗಳ ನಂತರ ನಾನೀ ಊರಿಗೆ ಬಂದಿರುವೆ. ಆಕೆ ಅದನ್ನು ಕೇಳಿ ಬಂದಿರಬೇಕು. ಎಂತಹ ಸೌಜನ್ಯ; ಎಂತಹ ಸೌಹಾರ್ದ್ರ!

ಸೌಹಾರ್ದ್ರವೇ? ಅದು ಪ್ರೇಮವಾಗಿರಲಿಕ್ಕಿಲ್ಲವೆ?

ನನ್ನ ಮನಸ್ಸು ಹೀಗೇಕೆ ಕೇಳುತ್ತಿದೆ? ನಾನು ಆಕೆಯನ್ನು ಮರೆತಿಲ್ಲವೆ?

ಎಲ್ಲಿ ಮರೆತಿದ್ದೇನೆ! ಆ ಇಪ್ಪತ್ತು ವರುಷಗಳೂ ನನ್ನ ಹೃದಯವನ್ನು ತುಣುಕುತುಣುಕಾಗಿ ಕೊರೆದುಬಿಟ್ಟಿಲ್ಲವೆ? ಆಕೆಯ ರೂಪವನ್ನು ಹೋಲುವ ಸ್ತ್ರೀಯನ್ನು ದೂರದಿಂದ ಕಂಡಾಗ ನನ್ನಲ್ಲಿ ಪೂರ್ವಸ್ಮರಣೆ ಬಂದು, ಅನೇಕ ರಾತ್ರೆಗಳನ್ನು ವಿಷಾದಕರ ವಿಚಾರಗಳಿಂದ ಕಳೆದು ಸೊರಗಿಲ್ಲವೆ?

ಆಕೆಯೂ ನನಗಾಗಿ ಹೀಗೆ ಕೊರಗಿರುವಳೇ?

ಬಹುಶಃ ಇಲ್ಲ. ನಾನು ಮಾತ್ರ ಒಬ್ಬ ಮರುಳನು. ಚಿಕಿತ್ಸಿಸಲ್ಪಡಲಾರದ ಮರುಳನು.

ಛೀ! ಆಕೆಯ ಹೃದಯವು ಪ್ರೇಮಶೂನ್ಯವಾಗಿದ್ದರೆ, ನಾನು ಬಂದುದನ್ನು ಕೇಳಿದಾಕ್ಷಣ ತಾನು ಬಂದಳೇಕೆ? ಇದ್ದಿರಬೇಕು, ಆಕೆ ನನ್ನ ರೂಪವನ್ನು ತನ್ನ ಹೃದಯದಲ್ಲಿ ಬಚ್ಚಿಟ್ಟಿದ್ದಿರಬೇಕು.

—ಏಕೆ ನಾನೀ ರೀತಿ ಆಲೋಚಿಸುತಿದ್ದೇನೆ? ಆಕೆ ವಿವಾಹಿತಳಲ್ಲವೆ?

ಆ ರಾತ್ರೆಯನ್ನು ಹುಚ್ಚುಹುಚ್ಚು ವಿಚಾರಗಳಿಂದ ಕಳೆದೆ. ಮರೆತುಬಿಡಲು ಯತ್ನಿಸಿ, ಸಾಧ್ಯವಾಗದೆ, ಹೊರಳಾಡಿ, ಹೊರಳಾಡಿ ಅರುಣೋದಯವಾದುದನ್ನು ಕಂಡೆ.

❁ ❁ ❁ ❁

ಆಕೆ ಮರುದಿನವೂ ಬಂದಳು. ಆಕೆ ಬರಬೇಕೆಂದು ನಾನು ಇಚ್ಛಿಸಿದ್ದರೂ ಕೇಳಿಕೊಂಡಿರಲಿಲ್ಲ. ನಾನು ನಗಲು ಯತ್ನಿಸಿ, ತುಟಿಗಳನ್ನು ಬಲಾತ್ಕಾರದಿಂದ ಬಿರಿದು, "ಏನು ಬಂದೆ?" ಎಂದು ಪ್ರಶ್ನಿಸಿದೆ.

"ಏನು, ಬರಬಾರದಿತ್ತೆ?" ಎಂದು, ನಗುತ್ತಲೇ ಕೇಳಿದಳು.

ಏನಿದು! ನಾನು ನಿಜಕ್ಕೂ ಒಬ್ಬ ಹುಚ್ಚ! ಎರಡನೇ ದಿನವೂ ಹುಚ್ಚುಪ್ರಶ್ನೆಯನ್ನೆ ಕೇಳಿದೆನಲ್ಲ! ಆಕೆಯನ್ನು ನೋಡಿ ನನ್ನ ಮಿದುಳು ತಟಸ್ಥವಾಗಿ, ನಾನು ಯಂತ್ರದೋಪಾದಿ ಮಾತಾಡುತಿದ್ದೇನೆ.

ಈ ಬಾರಿ ಸರಿಯಾದ ಉತ್ತರವಿತ್ತೆ: "ಬರಬಾರದಿತ್ತಲ್ಲ, ಬಾರದೆ ಇರಬಾರದಿತ್ತು........ಕೇಳುವ ಒಂದು ಹುಚ್ಚು ಪದ್ಧತಿಯಂತೆ ಕೇಳಿಬಿಟ್ಟೆ. ಬೇಸರವಾಯಿತೇ?"

ಆಕೆ ಈ ಬಾರಿ ನನ್ನೆದುರು ಕುಳಿತಳು. ಮತ್ತು ನಗುತ್ತಲೇ ಹೇಳಿದಳು: "ತುಂಬ ಬೇಸರವಾಯಿತು. ನಿನ್ನ ಮೇಲೆ ಕೋಪವೂ ಉಂಟಾಗಿದೆ. ನೀನೀಗ ಕ್ಷಮಾಯಾಚನೆ ಮಾಡಿದರೆ ನಾನು ಕ್ಷಮಿಸುವ ಬದಲು ಶಪಿಸಲು ಸಾಕು!"

ಪುನಃ ಆ ರಾತ್ರೆ ಅವಳ ಮಾತುಗಳನ್ನು ಮೆಲುಕು ಹಾಕುತ್ತ ಮಲಗಿದೆ. ಆಕೆ ಜಾಣೆ, ಚತುರಭಾಷಿಣಿ!

ಅವಳೇಕೆ ಹಾಗೆ ಪುನಃ ಬಂದಳು?

ಹಾಗೆ ಪ್ರಶ್ನಿಸಿಕೊಳ್ಳಲು ನನಗೇನು ಅಧಿಕಾರ!

ನಾನು ಅಲ್ಪ-ಕೀಳು-ನೀಚ-ಚೋರ! ಮನಸ್ಸಿನಲ್ಲಿ ಬೇಕಾದುದನ್ನಾಲೋಚಿಸಿದರೆ ಯಾರೂ ಕೇಳಲಾರರೆಂದು ಹಾಗೆ ಆಲೋಚಿಸುತಿದ್ದೇನೆ.

ಆಕೆ ವಿವಾಹಿತೆ: ನನ್ನ ಮನಸ್ಸು ಮರ್ಕಟನಂತೆ ಓಡುತ್ತಿದೆ—ಅಷ್ಟು ಮಾತ್ರದಿಂದಲೇ ಪಾಪಮಾಡುತಿದ್ದೇನೆ.

ಪಾಪ? ಪುಣ್ಯ?....ಹಾಯ್! ನನ್ನ ಹೃದಯವು ಕಳವಳಿಸುತ್ತಿದೆ! ಸಂಯಮನವಿಲ್ಲದ ಅಲ್ಪಜೀವಿ ನಾನು!

ಯಾವಾಗಲೂ ನನ್ನ ತಲೆಯ ಮೇಲೆ, ಗೋಡೆಯಲ್ಲಿ ತೂಗಾಡುತಿದ್ದ ಸ್ವಾಮಿ ವಿವೇಕಾನಂದರ ಪಟದ ಕಡೆಗೆ ಬೆಳಕು ಬೀರಿ, ತಲೆಯೆತ್ತಿದೆ. ಅಯ್ಯೋ, ಅದು ಅಲ್ಲಿಲ್ಲ. ನಾನು ಈ ಊರಿಗೆ ಬಂದಾಗ ಆ ಪಟವನ್ನು ತಂದಿರುವೆನೆ?

ನೆರೆಮನೆಯ ಶ್ರಮಜೀವಿ ಎದ್ದು ಕೆಮ್ಮುತ್ತ ಮುಂಜಾನೆಯ ತನ್ನ ಕೆಲಸಕ್ಕೆ ಹೊರಟನು. ಜೀವಚ್ಛವವಾದ ನಾನೂ ಎದ್ದೆ. ನನಗೆ ಮಾತ್ರ ಯಾವ ಕೆಲಸವೂ ಇಲ್ಲ. ಆ ಶ್ರಮಜೀವಿ ಎಷ್ಟು ಧನ್ಯನು! ಅವನಿಗೆಂತಹ ಸುಖನಿದ್ರೆಯಾಗಿದೆ!

ಅವನೂ ಪ್ರೇಮವನ್ನನುಭವಿಸಿರುವನೇ? ....

ಛೀ. ಪುನಃ ನನ್ನ ಮನಸ್ಸು ಹುಚ್ಚುಹುಚ್ಚು ಆಲೋಚನೆಗಳ ಕಡೆಗೋಡುತ್ತಿದೆ. ನಾನಿದನ್ನು ನಿಲ್ಲಿಸಬೇಕು. ಆಕೆಯನ್ನು ನಿರೀಕ್ಷಿಸಿ ಕುಳ್ಳಿರಬಾರದು. ಮರೆಯಬೇಕು, ಮರೆಯಬೇಕು, ಮರೆಯಬೇಕು!

❁ ❁ ❁ ❁

"ಬಂದೆ!"

ಆ ಸ್ವರ! ಅಹುದು, ಆಕೆ! ಪುನಃ ಬಂದಿರುವಳು. ನಾನು ಯತ್ನದಿಂದ ಓದುತಿದ್ದ ಪುಸ್ತಕವನ್ನು ಕೆಳಗಿಟ್ಟು, ನಸುನಗುತ್ತ, "ಸಂತೋಷ! ಇಷ್ಟು ಹೊತ್ತಾಯಿತೇನು?" ಎಂದು ಕೇಳಿದೆ.

"ಹೊತ್ತು? ನಿನ್ನೆಗಿಂತ ನಾಲ್ಕೇ ನಿಮಿಷ ತಡವಾಯಿತು." ಎಂದಳು.

ಏನು ಪ್ರಮಾದ! ನಾಲ್ಕೇ ನಿಮಿಷ ತಡ? ಅದು ನನಗೆ ಬಹಳವಾಯಿತು. ಹಾಗಾದರೆ, ನಾನು ನಿಜಕ್ಕೂ ಪುಸ್ತಕದಲ್ಲಿ ಮನಸ್ಸು ನೆಟ್ಟಿರಲಿಲ್ಲವೆ? ಆಕೆಯ ಮೂರ್ತಿಯನ್ನೆ ಹೃದಯಪಟಲದಲ್ಲಿ ಚಿತ್ರಿಸಿ, ಮನಶ್ಚಕ್ಷುವಿನಿಂದ ನೋಡುತಿದ್ದೆನೆ? ಏನು ನಾಚಿಕೆಗೇಡು!

ನಾಚಿಕೆ? ಏಕೆ? ಆಕೆಯನ್ನು ನೆನೆದ ಮಾತ್ರಕ್ಕೆ ಪಾಪವೇನು?

ಛೇ, ನಾನು ಶತನೀಚ! ನೆನೆವ ಅಧಿಕಾರ ಕೂಡ ನನಗಿಲ್ಲ!

ಆದರೂ ಮನಸ್ಸು ಹತೋಟಿಯಲ್ಲಿ ನಿಲ್ಲಲಾರದಲ್ಲ!

"ಮೌನವೇನು? ಪುಸ್ತಕವು ಬಲು ಸೊಗಸಾಗಿದೆಯೆ?" ಎನ್ನುತ್ತ, ಕೊಂಚ ಬಗ್ಗಿ, ನನ್ನ ಕೈಯಿಂದ ಕಿತ್ತುಕೊಂಡಳು.

ಆಕೆಯ ಕೇಶರಾಶಿಯ ಸುಗಂಧವು ಒಮ್ಮೆ ಬೀಸಿತು. ಆಕೆಯ ಕರಸ್ಪರ್ಶವೂ ಆಯಿತು. ಮೈ ಝುಮ್ಮೆಂದಿತು. ಮನಸ್ಸು ಅವಳ ದೇಹಕ್ಕೋಡಿತು. ದೃಷ್ಟಿಯು ಅವಳ ಕಣ್ಣುಗಳ ಕಡೆಗೆ ಹಾರಿತು.

ಆಕೆಯನ್ನೀಗ ಹಿಡಿದು, ಅಪ್ಪಿ, ಮುತ್ತಿಟ್ಟು, ಅಧರಾಮೃತ ಪಾನಮಾಡುವೆನು! ಗುಪ್ತಸೌಂದರ್ಯವನ್ನು ಸೂರೆಗೊಳ್ಳುವೆನು!

ದೇಹಾಂತ್ಯವೆಲ್ಲ ನಡುಗಿತು.

ದುರಾಲೋಚನೆ, ದುರಾಲೋಚನೆ!

ನಾನು ಪಾಪಿ, ನಾನು ಪಾಪಿ!

ನಾನು ನಿರ್ಬಲ, ನಾನು ನಿರ್ಬಲ!

ಆ ರಾತ್ರೆ, ಜಗುಲಿಯಲ್ಲಿ ಮಲಗಿ, ಆಕಾಶ ನೋಡುತ್ತ ದೇವರನ್ನು ಕಾಣಲು ಯತ್ನಿಸಿದೆ. ಅಲ್ಲಿ ದೇವರಿರುವನೆ? ಆಕೆ ಕಂಡಳು!

ಕಣ್ಣು ಮುಚ್ಚಿದೆ. ಅಯ್ಯೋ, ಮತ್ತೂ ಆಕೆ!

"ಭಗವಂತ! ಅವಳನ್ನು ಮರೆತುಬಿಡುವ ಶಕ್ತಿ ಕೊಡು" ಎಂದು ಮೌನವಾಗಿ ಮೊರೆಯಿಟ್ಟೆ.

ಎರಡು ನಿಮಿಷಗಳ ನಂತರ ಹೊರಳುವಾಗ, ತಲೆಗಿಂಬು ತಣ್ಣಗೆ ಕಂಡಿತು. ನಾನು ಕೂಗಿದ್ದೆನೆ?

ಕಣ್ಣೀರೇಕೆ? ಏಕೆಂದು ಯಾರು ಬಲ್ಲ! ನಾನು ಅಬಲ ಹೇಡಿ! ನನಗಾಗಿಯೇ ನಾನು ಅಳುತಿದ್ದೇನೆ!

❀ ❀ ❀ ❀

"ಈ ದಿನ ನಿದ್ದೆಯೇ?"

ಆಕೆ ಬಂದಿದ್ದಳು.

ನಾನು ತಟ್ಟನೆ ಎದ್ದು ಕುಳಿತೆ. ನಾಲ್ಕು ದಿನಗಳಿಂದ ನಿದ್ದೆಯಿರದ್ದೊಂದು; ಆಕೆ ಬಂದರೆ, ನನಗೆ ನಿದ್ದೆ ಬಂದುದನ್ನು ನೋಡಿ ಹೋಗಲೆಂಬ ಲಘು ಆಸೆ ಮತ್ತೊಂದು. ಹೀಗೆ ಮಲಗಿಕೊಂಡಿದ್ದೆ. ಆದರೆ, ಅವಳ ಮಾತು ಪೂರ್ಣ ಹೊ ಬೀಳುವ ಮೊದಲೇ ಎದ್ದು ಕುಳಿತಿದ್ದೆ.

ಆಕೆ ನನ್ನ ಮಂಚದ ಒಂದು ಬದಿಯಲ್ಲಿ, ಕಾಲುಬ ದಲ್ಲಿ, ಕುಳಿತಳು. ಅಲ್ಲಿ ಬಿದ್ದುಕೊಂಡಿದ್ದ ಒಂದು ಲಕ್ಕೋ ಯನ್ನೆತ್ತಿದಳು. ಒಳಗೆ ಬೆರಳು ತುರುಕಿ ಪತ್ರವನ್ನೆಳೆ ಓದಿದಳು. ಮತ್ತೆ, ನಸುನಗುತ್ತ, "ನಿಮ್ಮ ಹೆಂಡತಿ ಬ ವಳು....?" ಎಂದು ಪ್ರಶ್ನಿಸಿದಳು.

ಅಹುದು, ನನ್ನ ಹೆಂಡತಿ, ತವರುಮನೆಯಿಂದ ಮ ಳೊಡನೆ ಬರುವಳೆಂದು ಪತ್ರ ಬಂದಿತ್ತು. ನಾನು ಅ ಯನ್ನು ಸ್ಟೇಶನಿನಲ್ಲಿ ಎದುರುಗೊಳ್ಳಬೇಕು. ಘಂಟೆ ಏಳಾಯ ತಲ್ಲ! ಇಷ್ಟರೊಳಗೆ ಬಂಡಿ ಬಂದಿರಬಹುದೇ?

"ಏನು ವಿಚಾರ?" ಆಕೆ ಪುನಃ ನಸುನಗುತ್ತ ಕೇಳಿದಳು.

ಎಚ್ಚರವಾದಂತಾಯಿತು. "ಏನಿಲ್ಲ; ನಾನು ರೈಲ ಸ್ಟೇಷನಿಗೆ ಹೋಗಬೇಕಾಗಿತ್ತು."

"ಏಕೆ ನೀವು ಹೋಗದೆ ಬಂಡಿಯಿಂದ ನಿಮ್ಮ ಹೆಂಡ ಯನ್ನು ಕೆಳಗಿಳಿಸಲಾರರೇ?"

"ಇಳಿಸುತ್ತಾರೆ" ಎಂದೆ.

ಏನಿದು, ನನ್ನ ಉತ್ತರದಲ್ಲಿ ಚತುರೋಕ್ತಿ ಕಾಣಿಸುವ ದಿಲ್ಲವೇಕೆ? ಮತ್ತು–

ಆಕೆ ಹಾಗೆ ಹೇಳಿದಳೇಕೆ? ನನ್ನ ಪತ್ನಿಯ ವಿಷಯ ಆಕೆಗೆ ಮತ್ಸರವೇ? ಚತುರಭಾಷಿಗಳೂ ಒಮ್ಮೊಮ್ಮೆ ಹುಚ್ಚು ಮಾತುಗಳನ್ನಾಡುತ್ತಾರೆ?

"ಅಪ್ಪಾ!" ಎನ್ನುತ್ತ ನನ್ನ ಹಿರಿಯ ಮಗು, ನಾಚುತ್ತ ನಾಚುತ್ತ, ಸಂಕೋಚದಿಂದ ಒಳಗೆ ಬಂತು. ಕಿರಿಯ ಮಗು ಹೊಸ್ತಿಲಲ್ಲೆ ನಿಂತು, ನನ್ನನ್ನೂ ಆಕೆಯನ್ನೂ ಏನೋ ಸಂದೇಹದಿಂದ ನೋಡಿತು. ನನ್ನ ಹೆಂಡತಿ ನಸುನಗುತ್ತ ಹಿಂದೆ ಬಂದಳು.

ಮೂರು ವರ್ಷಗಳ ದೀರ್ಘ ಕಾಲ ಅಸ್ವಸ್ಥವಿದ್ದು ನನ್ನ ಹೆಂಡತಿ, ಇಂದು ಗುಣಹೊಂದಿ ಮರಳಿ ಬಂದಿದ್ದಳು.

ನನ್ನನ್ನು ನೋಡಿ ಅವಳಿಗಾದ ಸಂತೋಷವನ್ನು ಮುಖ ದಲ್ಲಿ ಮರೆಮಾಚದೆ—ಚೆನ್ನಾಗಿ ಪ್ರದರ್ಶಿಸಿದ್ದಳು.

ಮೂರು ವರ್ಷಗಳ ಕಾಲ ಅಸ್ವಸ್ಥವಿದ್ದವಳನ್ನು ನಾನು ನೋಡಲು ಹೋಗದಿದ್ದುದಕ್ಕೆ ಕೊಂಚ ಮುನಿಸಿನ ಪತ್ರಗಳನ್ನು ಬರೆದಿದ್ದರೂ, ಮೂರು ವರ್ಷಗಳ ನಂತರ ತಾನು ಸೌಖ್ಯ ಹೊಂದಿದಾಕ್ಷಣ ನಾನಾಗಿ ಅವಳ ತವರು ಮನೆಗೆ ಕರೆಯಹೋಗದಿದ್ದರೂ, ತಾನಾಗಿ ಬಂದಾಗ ರೈಲ್ವೆ ನಿಲ್ದಾಣದಲ್ಲಿ ಎದುರ್ಗೊಳ್ಳಲು ಹೋಗಿರದಿದ್ದರೂ,–ನನ್ನನ್ನು ಕಂಡಾಕ್ಷಣ ಅನಿರ್ವಚನೀಯ ಆನಂದವನ್ನು ವ್ಯಕ್ತಪಡಿಸಿದ್ದಳು.

ಅವಳು (ನನ್ನ ಹೆಂಡತಿ) ತನ್ನ ಭಾವಗಳನ್ನು ಮುಚ್ಚಿಟ್ಟುಕೊಳ್ಳಲಾರದಷ್ಟು ಸರಳೆಯಾಗಿದ್ದಳು.

ಅವಳು, ತನ್ನ ಪತಿಯ ಪ್ರೇಮಶೂನ್ಯ ವರ್ತನೆಯಿಂದ ನೊಂದುಕೊಳ್ಳಲಾರದಷ್ಟು ತೆಳ್ಳಗಿನ ದ್ರಾವಕವಾಗಿದ್ದು,

ಪತಿಯ ಪ್ರತಿಯೊಂದು ಅಪಮಾನಕಾರಕ ಅಥವಾ ನಿರ್ಲಕ್ಷ್ಯದ ತಾಡನದಿಂದ, ಹರಡಿದರೂ ಪುನಃ ಕೂಡುವ ಗುಣವುಳ್ಳವಳಾಗಿದ್ದಳು. ಈಕೆಯೂ ನನ್ನ ಪತ್ನಿಯಷ್ಟು ಸರಳೆಯೆ? ನಿಜಕ್ಕೂ ಅಲ್ಲ; ಎಂದಿಗೂ ಆಗಲಾರಳು!

ಆದರೆ, ಈ ತುಲನೆಯೇಕೆ?

ಹಿರಿಯ ಮಗುವನ್ನು ಒಂದು ಕೈಯಲ್ಲಿ ಹಿಡಿದು, ಕಿರಿಯವನನ್ನು ಮತ್ತೊಂದರಿಂದ ಎತ್ತಿ, ಮುಖವನ್ನು ಮುಂದೆ ಚಾಚಿ ಬಲಾತ್ಕಾರದಿಂದ ವಿನೋದದ ಚರ್ಯೆ ಹಿಡಿದು, ನನ್ನವಳನ್ನು ನೋಡಿದೆ. "ನೀನು ಕೈಹಿಡಿದ ಇವಳಿಗೆ ನ್ಯಾಯ ಮಾಡುತ್ತಿರುವೆಯಾ?" ಎಂದು ಅಂತರಾತ್ಮನು ಕೇಳುತಿದ್ದನು.

ಝಗ್ಗನೆ ಒಂದು ಆನಂದದ ಝಳಕು ಬೀಸಿತು. ಇವಳು ನನ್ನ ರಕ್ಷಣೆಗಾಗಿ ಬಂದಿರುವಳೆ?

ಹಾಗೆ ಎನಿಸಿತು. ಕೊಂಚ ಧೈರ್ಯವುಂಟಾಯಿತು.

ಆಕೆ ನಿಂತು, ಇದೆಲ್ಲವನ್ನೂ ನೋಡುತಿದ್ದಳು. ಅವಳ ಭಾವಗಳಾವುವೋ ನಾನರಿಯೆ. ಒಂದು ಕ್ಷಣಕ್ಕೆ ನನ್ನ ಮನಸ್ಸು ಅವಳನ್ನು ಮರೆತುಬಿಟ್ಟಿತ್ತು.

ನನ್ನ ಹೆಂಡತಿ ಅವಳ ಕಡೆಗೆ ನೋಡಿ, ನನ್ನ ಕಡೆಗೆ ಪ್ರಶ್ನಾರ್ಥಕ ದೃಷ್ಟಿ ತಿರುಗಿಸಿದಳು.

"ಇವಳು.......ಏನು, ನಿನಗೆ ಗುರುತು ಹತ್ತಲಿಲ್ಲವೇ?" ಎಂದು ಕೇಳಿದೆ. ನನ್ನ ಹೆಂಡತಿಗೆ ಮತ್ತೆ ತಿಳಿಯಿತು. ನಗುಮೊಗದಿಂದ ಅವಳನ್ನು ಕುಳ್ಳಿರಹೇಳಿದಳು.

ಹಾಯ್! ಆ ರಾತ್ರೆಯು ನಿದ್ರಾವಿಹೀನವಾಯಿತು. ಪುನಃ ಪುನಃ ಆಕೆಯೇ ಕಾಣುತ್ತಿರುವಳೇಕೆ?

★

"ಊಟವಾಯಿತೇ?"

ಆಕೆಯೇ!

"ಆಯಿತು."

"ಹೇಗೆ ಸಂಸಾರ, ಹೆಂಡತಿಯೊಡನೆ? ಸುಖವೇ?"

ಏನು ಪ್ರಶ್ನೆ! ಇದರರ್ಥವೇನು? ಇದು ನಿಜಕ್ಕೂ ಮತ್ಸರ! "ಸಂಸಾರ" ಮತ್ತು "ಸುಖ" ಈ ಮಾತುಗಳೇಕೆ? ನಾನೀಗ ಅಸ್ವಸ್ಥಚಿತ್ತದಿಂದಿರುವೆನೆಂದು ಆಕೆಗೆ ತಿಳಿದಿದೆಯೆ? ನನ್ನಲ್ಲಿ ಘರ್ಷಣೆಗಾರಂಭವಾದ ಕಾಲವಿದು ಎಂದು ಆಕೆ ತಿಳಿವಷ್ಟು ಜಾಣೆಯಾದ ಮನೋಶಾಸ್ತ್ರಜ್ಞಳೇ?

ಅರ್ಥ ನನಗೇಕೆ! "ಅಹುದು, ಸೌಖ್ಯ!"

"ಸುಖನಿದ್ರೆ ಮಾಡಿದಿರಾ?"

ಸುಖನಿದ್ರೆ? ಪುನಃ ಸುಖದ ಮಾತು! ಇದರಲ್ಲಿ ಗೂಢಾರ್ಥವಿದೆ........ಅಥವಾ ಇಲ್ಲ?

ಮತ್ತೇಕೆ ಹಾಗೆ ಕೇಳಿದಳು?

ನಾನು ಪ್ರಶ್ನಿಸಲೇಕೆ? ನನ್ನ ಹೆಂಡತಿಯಲ್ಲದ ಓರ್ವ ಪರಿಚಿತಳು ಹಾಗೆ ಕೇಳಿದರೆ ನಾನೇಕೆ ಅರ್ಥ ಕಟ್ಟಿಕೊಳ್ಳಬೇಕು!

ಆಕೆ, ನಾನು ಕುಳಿತ ಆಸನದ ಕೈಯಲ್ಲಿ ಕುಳಿತಳು. ಏನು ಧೈರ್ಯ! ನನ್ನ ಹೆಂಡತಿ, ಇದೇ ಮನೆಯಲ್ಲಿರುವಳು. ಅವಳು ಥಕ್ಕನೆ ಬಂದು ನೋಡಿದರೆ ವಿಪರೀತಾರ್ಥ ಮಾಡುವಳೆಂಬ ಅಂಜಿಕೆಯೂ ಇಲ್ಲ!

"ನಿಮಗೆ ಸುಖವಿಲ್ಲ!" ಎನ್ನುತ್ತ, ನನ್ನ ಮುಂಗುರುಳುಗಳನ್ನು ತನ್ನ ಕೈಯಿಂದ ತಿದ್ದಿದಳು!

ಪ್ರಮಾದವಾಯಿತು!

ನಾನು ಅಲ್ಲಿ ಸೋತೆ!

ರೋಮಾಂಚನವಾಯಿತು. ಹೃದಯವು ವೇಗವಾಗಿ ಬಡಿದುಕೊಂಡಿತು. ನೂರಾರು ಆಲೋಚನೆಗಳು ಮಿಂಚಿ ಹೋದುವು. ಕೊನೆಗೆ ಒಂದೇ ಆಲೋಚನೆ ಉಳಿಯಿತು. ಕಣ್ಣುಗಳರಳಿದುವು. ಉನ್ಮಾದಗೊಂಡವನಂತೆ ಆಕೆಯನ್ನು ಹಿಡಿದೆಳೆದು ಚುಂಬಿಸಿಬಿಟ್ಟೆ!

ಮೈಯೆಲ್ಲ ನಡುಗುತಿತ್ತು. ಆಕೆಯೂ ನಡುಗುತಿದ್ದಳು. ಆದರೆ, ಆಕೆ ತಟ್ಟನೆ ಏಳದೆ, ಸಾವಕಾಶವಾಗಿಯೇ ಎದ್ದು ನಿಂತಳು. ಅವಳ ಮುಖದ ಮೇಲಿನ ನಗು ಮಾಯವಾಗಿತ್ತು. ನಾನು ಆಕೆಯನ್ನೆ ನೋಡುತಿದ್ದೆ. ಒಂದರೆಕ್ಷಣ ಹಾಗೆಯೇ ನಿಂತು ಮತ್ತೆ, "ನಾನು ಹೋಗಲೇ?" ಎಂದು ಮೃದುವಾಗಿ ವಿಚಾರಿಸಿದಳು.

ಹಾಗಾದರೆ ಆಕೆ ಕೋಪಿಸಲಿಲ್ಲ? ಅಥವಾ ನನ್ನನ್ನು ಕ್ಷಮಿಸಿರುವಳು?

ಕೋಪ? ಕ್ಷಮೆ? ಯಾರ ಮೇಲೆ, ಯಾರಿಂದ?

ಅಪರಾಧಿ ಯಾರು?

"ನಿಲ್ಲು! ಕೋಪವಿದೆಯೆ?" ಎಂದೆ.

"ಇಲ್ಲ. ಹೋಗುವೆನು!" ಎನ್ನುತ್ತ ಹೊರಟೇ ಹೋದಳು. 'ಇಲ್ಲ' ಎಂಬುದರ ಅರ್ಥವೇನು? ಕೋಪವಿಲ್ಲವೆಂದೇ ಅಥವಾ ನಿಲ್ಲುವುದಿಲ್ಲವೆಂದೆ? ಹಾಗೆ ನಿಂತು, ಥಕ್ಕನೆ ಹೊರಟುಹೋದಳೇಕೆ?

ಜಾಣನಾದ ಪುರುಷನೂ, ತಾನು ಪ್ರೇಮಿಸುವ ಸ್ತ್ರೀಯ ಮುಂದೆ ಒಬ್ಬ ಹುಚ್ಚ. ಜಾಣಳಾದ ಸ್ತ್ರೀಯು ಪುರುಷನ ಮುಂದೆ ಜಾಣಳೇ? ಆದರೂ ಆಕೆ ಕೆಲವೊಮ್ಮೆ ವಿಚಿತ್ರ ಭಾವನೆಗಳನ್ನು ಹೊಂದುವಳೇ? ಆ ಭಾವನೆಗಳನ್ನು ಮರೆಸಲೋಸುಗ, ಮರೆಯನ್ನು ಇಚ್ಛಿಸುವಳೆ? ಯಾರಿಗೆ ಗೊತ್ತು!

ಆಕೆಯಲ್ಲಿ ಹುದುಗಿದ್ದ ಆಸೆಯೊಂದು ಚಿಗುರಿತ್ತೆ? ಆ ಚಿಗುರು ಬೆಳಕು ಕಂಡು ಆನಂದೋನ್ಮಾದದಿಂದ ಒಡೆಯಲು ಸಿದ್ಧವಾಗಿತ್ತೆ? ಅವಳ ತೃಷಿತ ಆತ್ಮಕ್ಕೆ ನಾನು ಉತ್ತರವಿತ್ತೆನೇ?

ಏನು ಭಯಂಕರ! ಎಂತಹ ನೈತಿಕ ಪತನ! ಆಕೆ ಸ್ತ್ರೀ, ವಿವಾಹಿತೆ!

ಅಯ್ಯೋ, ನಾನು ಪಾಪಿ, ನನಗಾ ಚುಂಬನದ ಅಧಿಕಾರವಿರಲಿಲ್ಲ. ಕಾಮನು ನನ್ನನ್ನು ಸುಡುವುದನ್ನು ಸಹಿಸಲಾರದೆ, ನಾನು ಹೇಡಿಯಾಗಿ ಆ ಅಗ್ನಿಯನ್ನಾರಿಸಹೋಗಿ ಅವಳನ್ನು ದಹಿಸಿದ್ದೆ; ನನ್ನನ್ನೂ ಭಸ್ಮಮಾಡಿಕೊಂಡಿದ್ದೆ.

ತಾರುಣ್ಯದ ಅವಿವೇಕದಲ್ಲೂ ನನ್ನಿಂದ ಘಟಿಸದಿದ್ದ ಅಪರಾಧವು ಇಂದು ನಡುವಯಸ್ಸಿನಲ್ಲಿ ಘಟಿಸಿತ್ತು!

ಒಂದು ಕಾಲದಲ್ಲಿ ಮೊಗ್ಗಾಗಿದ್ದಳು. ಆಗ ಪ್ರೇಮಿಸಿದ್ದೆ. ಅವಳು 'ಪರನಾರಿ' ಎನಿಸಿಕೊಂಡಂದು ನನ್ನ ಹೃದಯ ಮುಚ್ಚಿಹೋಗಿತ್ತು.

ಇಪ್ಪತ್ತು ವರ್ಷ ಕಾಲ ಮನದೊಳಗೇ ಅಸಹನೀಯ ಯಾತನೆ ಅನುಭವಿಸಿದ್ದೆ. ಅವಳನ್ನು ಮರೆಯಲು ಸಾಧ್ಯವಾಗಲಿಲ್ಲ. ಲಗ್ನವಾಗೆನೆಂದು ಶಪಥಹಾಕಿಕೊಂಡರೂ, ನನ್ನ ಕೈಮೀರಿದ ಅದೊಂದು ಘಟನೆಯಿಂದೆಂಬಂತೆ ಲಗ್ನವಾಗಿ, ಹದಿನೈದು ವರ್ಷಗಳಿಂದ ದಾಂಪತ್ಯಜೀವನ ನಡೆಸಿಕೊಂಡು ಬಂದಿದ್ದೆ.

ಆಕೆಯೇ ನನ್ನ ಜೀವನವನ್ನು ವಿಕಸಿಸಿದವಳು. ಆಕೆ ನನ್ನನ್ನು ಪ್ರೇಮಿಸಿದರೆ ಜಗತ್ತನ್ನು ಗೆಲ್ಲುವ ಶಕ್ತಿ ನನ್ನಲ್ಲುಂಟಾಗುತಿತ್ತು ಎಂದು ಭಾವಿಸಿಕೊಳ್ಳುತ್ತಿದ್ದೆ.

ಆಕೆಯ ಅಭಿರುಚಿಗಳೂ ನನ್ನವೂ ಒಂದೇ. ದೇವರು ನನ್ನನ್ನು ಅವಳಿಗಾಗಿಯೂ, ಅವಳನ್ನು ನನಗಾಗಿಯೂ ರಚಿಸಿದ್ದನೆಂದು ಭಾವಿಸಿದ್ದೆ. ದೇವರನ್ನು ಮಾನವನು ವಂಚಿಸಿ, ಅಸಮದಂಪತಿಗಳನ್ನು ಜೋಡುಹಾಕುವನು ಎಂದೂ ಎಣಿಸುತಿದ್ದೆ.

ಆಕೆ ಎಂತಹ ಕುಶಲಮತಿ! ನನ್ನ ಹೆಂಡತಿ ಸರಲೆ, ಮುಗುದೆ!

—ಏಕೆ, ಪುನಃ ಈ ತುಲನೆಯೇಕೆ?

ಹಾಯ್, ನನ್ನ ಮೈಯುರಿ ಹೆಚ್ಚುತಿತ್ತು. ಮರೆಯಲಾರೆ. ಆಕೆಯನ್ನು ಬಿಟ್ಟಿರಲಾರೆ! ಒಂದು ನಿಮಿಷವೂ ಅವಳ ವಿರಹವನ್ನು ತಡೆಯಲಾರೆ!

ಇದೇನು ಪುನಃ ಈ ದುರಾಲೋಚನೆಗಳು! ನಾನೆಂತಹ ಪಾಪ ಮಾಡಿರುವೆ! ಆ ಚುಂಬನದಿಂದ ನನಗೆ ದೊರೆತುದೇನು? ನಾನು ಇದಕ್ಕಾಗಿ ಅಹೋರಾತ್ರಿ ಚಿಂತಿಸಿದ್ದೆನಲ್ಲ!

ನಾನೆಂತಹ ಪ್ರಮಾದ ಮಾಡಿದೆ! ಏಕೆ ಮದುವೆಯಾದೆ!

ಮದುವೆಯಾಗದಿದ್ದರೆ ಯಾರನ್ನು ಗೆಲ್ಲುತಿದ್ದೆ? ಏನನ್ನು ಗೆಲ್ಲುತಿದ್ದೆ?

ಹೃದಯವು ಕಳವಳಿಸಿತು. ಮಿದುಳು ವೇಗವಾಗಿ ಚಲಿಸಿತು. ಗಟ್ಟಿಯಾಗಿ ಕಿರಿಚಿಕೊಳ್ಳೋಣವೆನಿಸಿತು. ತಟ್ಟನೆ ಎದ್ದು ಕುಳಿತೆ. ದೀಪ ಹಚ್ಚಿಸಿದೆ. ಮತ್ತೆ ನನ್ನ ಹೆಂಡತಿಯ ಕಡೆಗೆ ನೋಡಿದೆ.

ಆ ನಿಷ್ಪಾಪಿ ಜೀವ! ಜಗತ್ತಿನ ಸೂಕ್ಷ್ಮ ಭಾವನೆಗಳಾವುದರ ಪರಿಚಯವೂ ಇಲ್ಲದೆ, ಪ್ರಯಾಣದಿಂದ ದಣಿದು ಚೆನ್ನಾಗಿ ನಿದ್ರಿಸುತಿದ್ದಳು!

ನಾನು ಬರೆಹಗಾರ. ಚಿತ್ರಗಾರನಾಗಿದ್ದರೆ ಚಿತ್ರಿಸುತ್ತಿದ್ದೆ.

ಆಕೆ ನನ್ನ ಬರಹಗಳನ್ನು ಮೆಚ್ಚುತ್ತಿದ್ದಳು; ನ ಹೆಂಡತಿ, ತನ್ನ ಗಂಡನು ಸರ್ವಜ್ಞನೆಂದು ಮಾತ್ರ ಕೊಂಡಿದ್ದಳು.

ಮೆಲ್ಲನೆ "ಸರೂ!" ಎಂದೆ. ಆಕೆಗೆ ಎಚ್ಚರವಾಗ

ಭಗವಂತನು ನನಗೆ ಇವಳಷ್ಟೆ ಚಿಕ್ಕ ಪ್ರಮಾಣ ಮಿದುಳು ಕೊಡಲಿಲ್ಲವೇಕೆ ಎಂದುಕೊಂಡೆ.

ಆಕೆ ನನ್ನಲ್ಲಿ ಜೀವ ತುಂಬಬಲ್ಲವಳಾಗಿದ್ದಳು; ಈ ಅದರ ಸೇವೆ ಮಾತ್ರ ಬಲ್ಲಳು.

ಆಕೆ ಪ್ರೇರಣೆ ಕೊಡಬಲ್ಲವಳಾಗಿದ್ದಳು; ಈಕೆ ಒಡ ಮನಸ್ಸನ್ನು ತಟಸ್ಥವಾಗಿರಿಸಬಲ್ಲವಳು.

ಆಕೆ ಮೈಯುರಿ ಕೊಡುವವಳು; ಈಕೆ ಮೈ ಸ ಸಮಜಾಯಿಸುವಳು.

ಆಕೆ ಸೂರ್ಯನಂತೆ ಪ್ರಜ್ವಲಿಸುವಳು; ಈಕೆ ಚಂ ನಂತೆ ಶೀತಲ.

ಆಕೆ ಮದಿರೆಯಾಗಿದ್ದಳು; ಈಕೆ ಮಧು.

ಆಕೆ ಭಕ್ತಿಯನ್ನು ಹುಟ್ಟಿಸಬಲ್ಲವಳಾಗಿದ್ದಳು; ಈ ಭಕ್ತಿಯೊಪ್ಪಿಸುವಳು.

ಆಕೆ ಹೃದಯವನ್ನು ಹೊಕ್ಕಿ, ಒಳಗೂ ಹೊರಗ ಓಡಾಡಿ ದಣಿಸುತಿದ್ದಳು; ಈಕೆ ಹೃದಯದಲ್ಲಿ ಸ್ತಬ್ಧವಾ ಬಲ್ಲಳು.

ಇವರಿಬ್ಬರಲ್ಲಿ ಸುಂದರ ಕವನವಾವುದು?

★

ಚಿಂತಿಸಿದೆ, ಚಿಂತಿಸಿದೆ. ಆಕೆಯ ಸೌಂದರ್ಯ ಪಾ ಮಾಡಿದರೆ ಪಾಪಿಯಾಗುವೆನೆ? ಆಕೆ ಪಾಪಿಯಾಗುವಳೆ ಪ್ರೇಮಿಗಳೊಳಗೆ ಸಮ್ಮಿಲನವಾಗಲು ಧರ್ಮದ ಅತಂ ಗಳಿವೆಯೆ?

ಪುನಃ ಮೈ ಕಂಪಿಸತೊಡಗಿತು. ನಾನು ಹುಚ್ಚನಾ ಹೋಗುವೆನೋ ಎನಿಸಿತು. ಭಯದಿಂದ ಹೃದಯವು ವೇ ವಾಗಿ ಬಡಿದುಕೊಂಡಿತು. ಬಾಯಿ ಫಕ್ಕನೆ ತೆರೆದುಕೊಂ ಕೂಗು ಹೊರಟಿತು: ''ಸರೂ!"

ಸರೂ ಈ ಬಾರಿ ಜಗ್ಗನೆ ಎದ್ದು ಕುಳಿತು, ನನ್ನನ ಹಿಡಿದು, "ಏನು, ಸ್ವಪ್ನ ಕಂಡಿರಾ?" ಎಂದು ಪ್ರಶ್ನಿಸಿದಳ

ಏನಾಶ್ಚರ್ಯ! ಸರುವಿಗೆ ನನ್ನ ವೇದನೆ ಹೇಗೆ ಅ ವಾಯಿತು? ಗಾಢ ನಿದ್ದೆಯಿಂದೆದ್ದ ಕ್ಷಣಕ್ಕೇ, ನಾನು ಬೆ ರಿರುವೆನೆಂದು ನನ್ನನ್ನು ಹೇಗೆ ಹಿಡಿದುಕೊಂಡಳು?

''ಅಹುದು ಸರೂ!" ಎಂದೆ.

''ಹೇಗೆ ನಡಗುವಿರಿ! ಸ್ವಪ್ನವು ಭಯಂಕರವಿತ್ತೆ?"

"ಬಹಳ ಭಯಂಕರ!"

"ನೀವು ಮಲಗಿಕೊಳ್ಳಿ. ನಾನು ನಿಮ್ಮ ಮೈ ಮೇ ಒಂದು ಕೈಯನ್ನಿಟ್ಟಿರುತ್ತೇನೆ!"

"ಅಹುದು, ಹಾಗೆಯೇ ಮಾಡು." ಎನ್ನುತ್ತ ಕಣ ಗಳನ್ನು ಮುಚ್ಚಿದೆ!

ಸರು ಅಪ್ರಬುದ್ಧೆಯೆಂದು ಭಾವಿಸಿದ್ದೆ. ಬೇಕಾದಂತೆ ರುಪಿಕೊಳ್ಳಬಲ್ಲ ಒಂದು ಹಿಟ್ಟಿನ ಮುದ್ದೆ ಎಂದೆಣಿಸಿದ್ದೆ. ಾಗ ಏನಾಶ್ಚರ್ಯ! ಅವಳು ನನ್ನ ಹೃದಯ ವೇದನೆಯು ಾಸವಾದ್ದಂತೆ ವರ್ತಿಸಿರುವಳು! ಅವಳ ಆತ್ಮವು ನನ್ನೊಡನೆ ಾಕ್ಷ್ಮ ತಂತುಗಳಿಂದ ಬಿಗಿಯಲ್ಪಟ್ಟಿದೆಯೆ? ಪ್ರೇಮಾಂಧ ಾದ ನಾನು ಮಾತ್ರ ಅದರ ಅರಿವಿಲ್ಲದವನಾಗಿರುವೆನೆ? ಸರು ನ ಹೃದಯವು ವಿಶಾಲವಿದೆ! ನನಗೀಗ ಮಾತೃಸ್ಥಾನ ಲ್ಲಿದ್ದು ತಮ್ಮಣಿಸುತ್ತಿರುವಳು. ನಾನೇ ಅಪ್ರಬುದ್ಧ ಬಾಲಕ ಂತೆ, ಭಯಗೊಂಡು ಮಾತೃವಿನ ಮರೆಹೊಕ್ಕ ಪಸುಳೆಯಂತೆ ಶ್ರಯ ಹೊಂದಿದ್ದೇನೆ.

ಸರು ದೇವತೆ!

ಆದರೆ, ಸರುವಿಗೆ ನನ್ನ ಮೇಲೆ ಪ್ರೇಮವಿದೆಯೇ? ದು ಪ್ರೇಮವೇ?

ಸರುವು ಯಾವ ಕಾಲವಾದರೂ ಚತುರುಕ್ತಿ ಕಲಿಯ ಲ್ಲಳೇ?

ಸರುವಿಗೂ ಆಕೆಗೂ ಒಂದು ವಿಷಯದಲ್ಲಾದರೂ ಾಮ್ಯವಿದೆಯೇ?

ಆಲೋಚಿಸಿ ಆಲೋಚಿಸಿ, ಕೊನೆಗೆ ಪ್ರೇಮದ ವಿಷ ುಕ್ಕೇ ಹೊರಳುತ್ತಿರುವೆನೇಕೆ? ಮತ್ತೂ ಸರುವನ್ನು ಆಕೆಗೆ ೋಲಿಸುತ್ತಿರುವೆನೇಕೆ?

ನಾನು ನಿದ್ರೆ ಮಾಡಲಾರೆನೆ? ಆಕೆ ನನಗೀಗ ಶಾಪ ಾಗಿ ಪರಿಣಮಿಸಿರುವಳೇ? ನನ್ನ ಶಾಂತಿ ಪೂರ್ಣವಾಗಿ ಈ ೀವಾವಧಿ, ಹೋಯಿತೇ?

ಶಾಪ?–ಅಹುದೆನಿಸುತ್ತಿದೆ. ಶಾಂತಿ? ಇಲ್ಲ. ಇಲ್ಲಿರು ಷ್ಟು ಕಾಲವೂ ಇಲ್ಲ.

ಅದೇನದು?

ಹೊರಗೆ ಆಕಾಶದಲ್ಲಿ, ಒಂದು ನಕ್ಷತ್ರವು ರಜತ ರೇಖೆ ುನ್ನು ಲಿಖಿಸಿ ಪತನವಾಯಿತು. ಝಗ್ಗನೆ ನನ್ನಲ್ಲಿ ಒಂದು ಚಾರ ಹೊಳೆಯಿತು! ಆಕೆ ಆ ನಕ್ಷತ್ರದಂತೆ ನನ್ನ ಜೀವನ ಲ್ಲಿ ರಜತ ರೇಖೆ ಲಿಖಿಸಿರುವಳು. ನನ್ನ ಪಾಲಿಗೆ ಅವಳು ತನವಾದ ಆ ತಾರೆಯಂತೆ! ಅದನ್ನು ಹಿಡಿಯಹೋಗುವ ಾನೂ ಪತನ ಹೊಂದುವೆನು; ಅಂದರೆ ಹಿಡಿಯಲಾಗದುದರ ಡೆಗೆ ನೆಗೆದು ನಿಷ್ಫಲನಾಗಿ, ಮನವನ್ನೂ ಮೈಯನ್ನೂ ೋಯಿಸಿಕೊಳ್ಳುತ್ತಿರುವೆನು. ಆ ನಕ್ಷತ್ರವಿರುವ ಸ್ವರ್ಗವು ನಗೆ ಅಂದ ನೋಡಲಿಕ್ಕಾಗಿಯೇ ಇದೆ; ಪಾಠ ಕಲಿಯ ಕ್ಕಾಗಿ ಇದೆ. ನನ್ನ ಜೀವನವು ಈ ಲೋಕದಲ್ಲಿ!


ವಿಷಮ ಕಾಮ ಪ್ರೇಮಗಳ ಜ್ವಾಲೆಯನ್ನು ಪುನಃ ದಯದಲ್ಲೆ ಮರೆಸಿ, ತಣಿಸಲೆತ್ನಿಸಿ, ಮರುದಿನವೇ ಇಲ್ಲಿಂದ ೂರಟೆ.

ಪ್ರಾಚೀನ ಕಾಲದಲ್ಲಿ

ಏಕಾಂಕ ನಾಟಕಗಳ

ಏಕಾಂಕ ನಾಟಕಗಳೆಂದರೆ ಇಂದು ಸಿನ್ನೆಯ ಸೃಷ್ಟಿಯೆಂದು ಅ
ಕರಲ್ಲಿ ತಪ್ಪಭಿಪ್ರಾಯವಿದೆ. 'ಏಕಾಂಕ' ಪದ್ಧತಿಯು ಅ
ಪ್ರಾಚೀನ ಮಾತ್ರವಲ್ಲ — ಅವುಗಳ ಘಟನೆ --- ನಿಯಮ —
ಪ್ರಯೋಗ ವಿಧಾನಗಳು ಕೂಡ ಇಂದು ಬದಲಾಗದೆ, ಇದ್ದ
ಕ್ಕಿದ್ದಂತೇ ಅನುಕರಿಸಲ್ಪಡುತ್ತಿವೆ. ಈ ಲೇಖನದಲ್ಲಿ
ಪ್ರಾಚೀನಕಾಲದಲ್ಲಿ ಏಕಾಂಕಗಳ ಘಟನೆ ಹೇಗಿದ್ದಿ
ತೆಂಬುದರ ಬಾಹ್ಯ ರೇಖೆಯನ್ನಷ್ಟೆ ಲಿಖಿಸಲಾಗಿದೆ.

★



ಪ್ರಕಾಶದವರ "ಸಮ್ರಾಟ್ ವಿಕ್ರಮಾದಿತ್ಯ ಚಿತ್ರ"ದಲ್ಲಿ ಪೃಥ್ವಿರಾಜ್ ವಿಕ್ರಮನ ಪಾತ್ರದಲ್ಲಿ

ಪ್ರಾಚೀನಕಾಲದಿಂದಲೇ ನಾಟಕಕಲೆ ಮತ್ತು ಅವುಗಳ ವಿಕಾಸವನ್ನು ಬಲ್ಲ ಭಾರತವಾಸಿಗಳಿಗೆ ಏಕಾಂಕ ನಾಟಕಗಳ ಪರಿಚಯವು ಇಂದು ಹೊಸತಲ್ಲ. ಸಂಸ್ಕೃತ ವಾಙ್ಮಯದಲ್ಲಿ ನಾಟಕಕರ್ತೃಗಳಿಗೆ, ಅಭಿನಯಕಾರರಿಗೆ ಮಾರ್ಗದರ್ಶಕನಾಗಿದ್ದವನು ಭರತನು. ಭರತನು ತೋರಿ ಕೊಟ್ಟ ಹಾದಿಯಲ್ಲೇ ಇಂದಿನ ನಾಟಕಕಾರರು ನಡೆಯುತ್ತಿರುವರು. ಆತನು ರೂಪಕ-ಉಪರೂಪಕಗಳೆಂದು ರೂಪಕಕ್ಕೆ ಎರಡು ಭೇದವನ್ನು ಕೊಟ್ಟಿರುವನು. ಇವುಗಳಲ್ಲಿ ಮೊದಲನೆಯ ರೂಪಕಕ್ಕೆ ಹತ್ತು ಭೇದವಿದೆಯೆಂದೂ ಉಪರೂಪಕಕ್ಕೆ ಹದಿನೆಂಟು ಭೇದವಿದೆಯೆಂದೂ ಹೇಳಿರುವನು.

ದಶಭೇದದಿಂದ ಕೂಡಿದ ರೂಪಕದಲ್ಲಿ ವ್ಯಾಯೋಗ, ಅಂಕ, ವೀಥಿ ಎಂಬೀ ಮೂರು, ಏಕಾಂಕನಾಟಕಗಳನ್ನು ಸಂಬಂಧಿಸಿದವು. ಇವುಗಳಲ್ಲಿ ವ್ಯಾಯೋಗವು ವೀರರಸವನ್ನು ಹರಿಸುತಿದ್ದು ಪುರುಷಪಾತ್ರಗಳಿಗೆ ಅಧಿಕಸ್ಥಾನವನ್ನು ಕೊಟ್ಟುದು ಕಂಡುಬರುತ್ತಿದೆ. ಸ್ತ್ರೀ ಪಾತ್ರದ ಅಗತ್ಯತೆಯು ರಸಾನುಗುಣವಲ್ಲವೆಂದು ಪ್ರಕೃತಿ ನಿಯಮಭೇದನೆಗೆ ಹಿಂ
ನವರು ಹೊರಡದಿರುವುದೇ ಇದಕ್ಕೆ ಕಾರಣವಿರಬಹುದು.

ಅಂಕದಲ್ಲಿ ಕರುಣಾರಸಕ್ಕೆ ಪ್ರಾಮುಖ್ಯತೆಯಿದೆ. ಸ್ತ್ರೀ
ಯರ ಶೋಕವರ್ಣನೆಯೇ ಬಹಳವಾದ್ದು. ಕರುಣೆ
ಮತ್ತು ಸ್ನೇಹದಿರವಿನ ಲಲನೆಯರ ನಾರೀ ಧರ್ಮವು ಅಂ
ದಲ್ಲಿ ಒಡ್ಡುವ ಕತೆಯಾಗಿದೆ.

ವೀಥಿಯಲ್ಲಿ ಶೃಂಗಾರರಸ ಮತ್ತು ಅದಕ್ಕೆ ಮುಖ್ಯ
ಯಿದೆ. ಶೃಂಗಾರರಸವು ವೀಥಿಯಲ್ಲಿ ಕಂಡುಬರುತ್ತಿ
ಯಾದರೂ ಜೀವನದ ಮಾರ್ಗದಲ್ಲಿ ಪ್ರೇಮೋಪಾಸನೆ
ಭಕ್ತಿಮಾರ್ಗದ ಮಟ್ಟಕ್ಕೇರಿದುದು. ಈ ಮೂರರಲ್ಲಿಯು
ನಡೆದಿರುವ ಘಟನೆ ಒಂದು ದಿನಕ್ಕಿಂತ ಮೀರಿದುದ
ಕೇವಲ ಒಂದು ಚಿತ್ರವನ್ನು ಚಿತ್ರಿಸುತಿದ್ದು ಒಂದು ದಿನ
ಘಟನೆಯ ಚಿತ್ರದೃಶ್ಯಗಳಾಗಿವೆ.

ಗೋಷ್ಠಿ (1) ನಾಟ್ಯರಾಸಕ (2) ಉಲ್ಲಾಪ್ಯ (3
ಕಾವ್ಯ (4) ರಾಸಕ (5) ಪ್ರೇಂಖಣ (6) ಶ್ರೀಗದಿತ (7
ವಿಲಾಸಿಕಾ ಯಾ ವಿನಾಯಕಾ (8) ಹಲ್ಲೀಶ (9) ಮತ್ತು
ಭಾಣಿಕಾ (10) ಎಂಬೀ ಹತ್ತು ಹದಿನೆಂಟು ಭೇದದಿಂ
ಕೂಡಿದ ಉಪರೂಪಕಗಳಲ್ಲಿ ಸೇರಿದವುಗಳಿದ್ದರೂ ಏಕಾಂ
ನಾಟಕಗಳ ಸಾಲಿನವುಗಳಾಗಿವೆ.

ಸಂಸ್ಕೃತ ಸಾಹಿತ್ಯದಲ್ಲಿ ಏಕಾಂಕ ನಾಟಕಗಳು ವಿರ
ಗಳಲ್ಲ. ಯಥೇಷ್ಟ ಸಿಗುತ್ತಿವೆ.

ರೈವತ ಮದನಿಕಾ (ಗೋಷ್ಠೀ) ವಿಲಾಸವತೀ (ನಾಟ್ಯ
ರಾಸಕ) ದೇವೀ ಮಹಾದೇವಂ (ಉಲ್ಲಾಪ್ಯ) ಮೇನಿಕಾ
ಹಿತಂ (ರಾಸಕ) ಬಾಲಿವಧಃ (ಪ್ರೇಂಖಣ) ಕ್ರೀಡಾರಸಾತ
(ಶ್ರೀಗದಿತ) ಬಿಂದುಮತೀ (ವಿಲಾಸಿಕಾ) ಕೇಲಿರೈವತ
(ಹಲ್ಲೀಶ) ಕಾಮುದತ್ತಾ (ಭಾಣಿಕಾ) ಸೌಗಂಧಿಕಾಹರಣ
(ವ್ಯಾಯೋಗ) ಶರ್ಮಿಷ್ಠಾ ಯಯಾತಿಃ (ಅಂಕ) ಇವೇ
ಮೊದಲಾದುವು ಹಿಂದಣ ಏಕಾಂಕಗಳು.

ಪಶ್ಚಿಮದಲ್ಲಿ ನಾಟಕಗಳ ವಿಕಾಸವು ಯೂನಾನದಲ್ಲಿ
ಮೊತ್ತಮೊದಲುಂಟಾಯಿತು. ಭಾರತ ಸಾಹಿತ್ಯಕಾರರ



ಪ್ರಭಾತದವರ ಚಾಂದ್ ಚಿತ್ರದಲ್ಲಿ, ರೂಪರಾಣಿ ಬೇಗಂ ಪಾರಾ

ಮಟ್ಟಕ್ಕೆ ಅವರ ನಾಟಕ ವಿಶ್ಲೇಷಣೆಯು ಆದರೂ ಮುಟ್ಟಿದ್ದಿಲ್ಲವೆಂದು ಹಲವರ ಮತ; ಇದು ಬಹುಮತವೂ ಆಗಿದೆ. 'ಅರಸ್ತು'ವು ತನ್ನ 'ಪೋಯಿಟಿಕ್ಸ್' ಎಂಬ ಗ್ರಂಥದಲ್ಲಿ ನಾಟಕಗಳಲ್ಲಿ ಸಂಯೋಗ (ಆನಂದ) ವಿಯೋಗಾಂತಗಳೆಂಬ ನಾಟಕಗಳ ಎರಡು ಭೇದವನ್ನು ಹೇಳಿರುವನು. ಯೂನಾನಿನ ಸರ್ವಪ್ರಥಮ ನಾಟಕಕಾರನು ಎಸ್‌ಚೀಲಸ್. ಈತನ ನಾಟಕಗಳನ್ನೆಲ್ಲಾ ಶೋಧಿಸಿ ನೋಡಿದರೆ ಅಖಿಲವೂ ಏಕಾಂಕಗಳು. ಎಸ್‌ಚೀಲಸನ ನಂತರ ಸೋಫೋಕ್ಲೀಜನೆಂದು ಶೋಧಕರು ಹೇಳುತ್ತಿರುವರು. ಅವನು ಏಕಾಂಕ ನಾಟಕ ಲೇಖಕನೇ ಆಗಿರುವನು. ಇವರ ಏಕಾಂಕ ನಾಟಕಗಳೆಲ್ಲಾ ಸಮುಕದ ಆವರಣದಿಂದ ಸೇರಿದುವು. ಸಮುಕ (ಯುನಿಟೀ ಕಲ್ಚರಲ್) ಈ ನಾಟಕಗಳು ಒಂದೇ ಸ್ಥಾನದಲ್ಲಿ ನಡೆಯುತಿದ್ದುವುಗಳನ್ನು ಕುರಿತುಳ್ಳುವು, ಅದಲ್ಲದೆ ಒಂದು ದಿನದ ಒಂದು ಘಟನೆಯ ದೃಶ್ಯಗಳು.

ಅಲ್ಲಿನ ನಾಟಕದ ಬಳವಣಿಗೆ ಆ ರೀತಿಯಿದ್ದಿತು. ಭಾರತದ ನಾಟಕದ ವಿಷ್ಕಂಭಕ ಪ್ರವೇಶಕ ವಿಭಜನೆಗಳು ಅಲ್ಲಿನ ನಾಟಕಗಳಿಗೆ ಇಲ್ಲ. ವಿಷ್ಕಂಭ ಪ್ರವೇಶಗಳ ವಿಚಾರವನ್ನು ಲಕ್ಷಣ ಗ್ರಂಥಗಳಿಂದ ಅರಿಯಬೇಕಿದೆ. ಶುದ್ಧ, ಸಂಕೀರ್ಣ ವಿಷ್ಕಂಭವೆಂದು ವಿಷ್ಕಂಭದಲ್ಲಿ ಭೇದವಿದೆ. ಹಿಂದುಮುಂದಿನ ಕಥೆಯ ಘಟನೆಯ ಸಂಯೋಜನೆಯು ಇವುಗಳಿಂದ ನಡೆಯುವುದು. ಹೇಗಿದ್ದರೂ ಯೂನಾನಿನ ಸಮುಕಗಳಿಗೆ ಏಕಾಂಕಗಳೆಂದೇ ಹೇಳಬೇಕಾಗುವುದು.



ಪ್ರಕಾಶದವರ ಭವ್ಯ ಚಿತ್ರ "ಸಮ್ರಾಟ್ ವಿಕ್ರಮಾದಿತ್ಯ"ದಲ್ಲಿ ರತ್ನಮಾಲಾ—ರಾಜಕುಮರಿಯಾಗಿ.



ಪ್ರಕಾಶದವರ 'ಸಮ್ರಾಟ್ ವಿಕ್ರಮಾದಿತ್ಯ'ದಿಂದ ಒಂದು ದೃಶ್ಯ.

ಶ್ಲೋ॥ ಏಕಂಹನ್ಯಾನ್ನ ವಾಹನ್ಯಾದಿ
ಷುರ್ಮುಕ್ತೋ ಧನುಷ್ಮತ ॥
ಬುದ್ಧಿರ್ಬುದ್ಧಿ ಮತೋತ್ಸೃಷ್ಟಾಹನ್ಯ
ದ್ರಾಷ್ಟ್ರಂಸ ರಾಜಕಂ ॥

ತಾತ್ಪರ್ಯ॥ ಬಿಲ್ಲುಗಾರನಿಂದ ಬಿಡಲ್ಪಟ್ಟ ಅಂಬು ಒಬ್ಬನನ್ನು ಕೊಲ್ಲುವುದು ಅಥವಾ ತಪ್ಪಿಹೋಗುವುದು. ಬುದ್ಧಿವಂತನಿಂದ ಪ್ರಯೋಗಿಸಲ್ಪಟ್ಟ ಬುದ್ಧಿಯು ಅರಸನನ್ನೂ ರಾಜ್ಯವನ್ನೂ ಅಳಿಸುವುದು.

ಶ್ಲೋ॥ ಅಭ್ಯಾಸಾನುಗತಾ ವಿದ್ಯಾ
ಬುದ್ಧಿಃ ಕರ್ಮಾನುಸಾರಿಣೀ ।
ವುದ್ಯೋಗಾನುಗತಾ ಸಂಪತ್‌ಫಲಂ
ಭಾಗ್ಯಾನುಸಾರಿಚ ॥

ತಾತ್ಪರ್ಯ॥ ಅಭ್ಯಾಸವಿದ್ದಂತೆ ವಿದ್ಯೆಯಿರುವುದು. ಕರ್ಮವಿದ್ದಂತೆ ಬುದ್ಧಿಯಿರುವುದು. ಪ್ರಯತ್ನವಿದ್ದಂತೆ ಸಂಪತ್ತು ಇರುವುದು. ಭಾಗ್ಯವಿದ್ದಂತೆ ಫಲವುಂಟಾಗುವುದು.

ಜೀವಂತ ಸ್ಮಾರಕ



ಲೇಖಕಿ: ಪಾರಿಜಾ ದೇವಿ.

ಕಳೆದೆರಡು ಸತ್ಯಾಗ್ರಹ ಚಳವಳಿಗಳು ಅನೇಕ ಕರುಣ ಕಥೆಗಳನ್ನು ರಕ್ತ ಲೇಖನಿಯಿಂದ ಲಿಖಿಸಿವೆ. ಆಗ ನಡೆದ ಸತ್ಯ ಘಟನೆಗಳನ್ನೆ ಎತ್ತಿ ವರದಿ ಮಾಡಿದರೆ ಬೋಧಪ್ರದವಾದ ಒಂದು ಪ್ರತ್ಯೇಕ ಸಾಹಿತ್ಯದ ರಚನೆಯಾಗುವುದು. ದಿವಂಗತನ ಸ್ಮಾರಕದ ಉತ್ಸವದ ಉತ್ಸಾಹವೊಂದು ಕಡೆ; ಆ ದಿವಂಗತನ ಜೀವಂತ ಸ್ಮಾರಕದ ಕರುಣಾಮಯ ಕುರುಹು ಇನ್ನೊಂದು ಕಡೆ. ಸ್ಮಾರಕಗಳ ಆಡಂಬರವೇಕೆ? ಡಂಭಾಚಾರವೇಕೆ? ಶಿಲಾ ಸ್ಮಾರಕಗಳಿಗೆ ವ್ಯಯಿಸುವ ಹಣವನ್ನು ಮಡಿದ ದೇಶಭಕ್ತನು ಬಿಟ್ಟುಹೋದ ಪತ್ನೀಪುತ್ರರನ್ನು ಅವರ ದುರವಸ್ಥೆಯಿಂದ ಉದ್ಧರಿಸುವುದಕ್ಕಾಗಿ ವಿನಿಯೋಗಿಸುವುದರಿಂದ ದೇಶದ ಚಿತ್ರವೇ ಬದಲಾಗುತಿತ್ತೇನೊ! ಈ 'ಜೀವಂತ ಸ್ಮಾರಕ'ವು ಚಿಕ್ಕ ಕಥೆಯಾದರೂ, ಅಂತಃಕರಣವನ್ನು ಹೊಡೆದೆಬ್ಬಿಸುತ್ತಿದೆ. ಇದರ ಸರಲಕಥನೆಯಲ್ಲಿ ಕರುಣಾರಸವಡಗಿದೆ.

ಆ ಊರಿನ ಜನರ ಉತ್ಸಾಹವನ್ನು ನೋಡಿ ಗೋವಿಂದರಾಯರು ಬಹಳ ಸಂತೋಷಪಟ್ಟರು. ಅಂದು ಆ ಊರಿನ ದೇಶಭಕ್ತರೊಬ್ಬರ ಪ್ರತಿಮೆಯ ಅನಾವರಣ ಸಮಾರಂಭಕ್ಕಾಗಿ ಜನರು ಗೋವಿಂದರಾಯರನ್ನು ಬೇಡಿಕೊಂಡಿದ್ದರು. ರಾಯರೂ ತನ್ನ ಕೈಯಿಂದ ದೇಶಭಕ್ತರೊಬ್ಬರ ಅಲ್ಪ ಸೇವೆಯು ಸಲ್ಲಿಸಲ್ಪಡುವ ಸಂದರ್ಭವು ತನಗೆ ಲಭಿಸಿತೆಂದು ಆನಂದಪಟ್ಟರು.

ಹತ್ತು ವರ್ಷಗಳ ಹಿಂದೆ ಆ ಊರು ತೀರ ಹಳ್ಳಿಯಾಗಿತ್ತು. ಆದರೆ, ಈಗ ಅಲ್ಲಿ ಜನರ ವಸತಿಯು ಹೆಚ್ಚಿ, ಒಂದೆರಡು ಶಾಲೆಗಳೂ, ಒಬ್ಬಿಬ್ಬರು ಡಾಕ್ಟರರೂ ಕೆಲಸ ಮಾಡುತಿದ್ದರು. ಈಗ ಅಲ್ಲಿಯ ಜನರ ಮನಸ್ಸಿಗೆ ದೇಶಭಕ್ತರ ಪ್ರತಿಮೆಯನ್ನು ಪ್ರತಿಷ್ಠಿಸುವ ಆಲೋಚನೆ ಬಂದಿತ್ತು.

ಆ ದೇಶಭಕ್ತನು ಒಬ್ಬ ಬ್ರಾಹ್ಮಣನ ಮಗನಾಗಿದ್ದನು. ಚಿಕ್ಕ ಪ್ರಾಯದಲ್ಲಿಯೇ ತಂದೆಯು ತೀರಿಹೋದುದರಿಂದ ಉದರಪೋಷಣೆಗಾಗಿ ಮುಂಬಾಯಿಗೆ ಹೋದನು. ಅಲ್ಲಿ ಒಂದು ಅಂಗಡಿಯಲ್ಲಿ ಕೆಲಸಕ್ಕೆ ನಿಂತನು. ಮುಂದೆ ಸತ್ಯಾಗ್ರಹ ಚಳವಳಿಯು ಪ್ರಾರಂಭವಾಗುತ್ತಲೇ ಸತ್ಯಾಗ್ರಹಕ್ಕೆ ಸೇರಿದನು.

ಅವನು ಸತ್ಯಾಗ್ರಹಕ್ಕೆ ಸೇರಿದ ಎಂಟು ದಿನಗಳಲ್ಲೇ ಆತನಿಗೆ ಅಝಾದ ಮೈದಾನಿನಲ್ಲಿ ಝೇಂಡಾ ವಂದನೆಗೆ ಹೋಗಬೇಕಾಯಿತು.

ಅಲ್ಲಿ ಅಧಿಕಾರಮದದಿಂದ ತುಂಬಿದ ಸಾರ್ಜಂಟರ ಪೆಟ್ಟಿಗೆ ಆತನು ಬಲಿಬಿದ್ದನು. ದೇಶೀ ಶಿಪಾಯಿಗಳು ಆತನನ್ನು ಓಡಲು ಹೇಳಿದರು. ಆದರೆ ಆತನು ಮಾತ್ರ ಅಲುಗಾಡಲಿಲ್ಲ.

ಆ ಊರು ಹತ್ತಿರ ಹತ್ತಿರ ಬರುವಾಗ ಗೋವಿಂದರಾಯರಿಗೆ ಇದೆಲ್ಲ ನೆನಪಿಗೆ ಬಂತು.

ಮರುದಿನ ಎಂಟು ಘಂಟೆಗೆ ಆ ಅನಾವರಣ ಸಮಾರಂಭವಾಗುವುದಿತ್ತು. ಎಲ್ಲರೂ ಇದರ ತಯಾರಿಯಲ್ಲಿದ್ದರು.

ಗೋವಿಂದರಾಯರು, ಆ ಊರಿನ ಪ್ರಮುಖರಲ್ಲೊಬ್ಬರಾದ ರಾಮರಾಯರಲ್ಲಿ ಇಳಿದರು. ರಾಮರಾಯರು ಮಾಡಿದ ಆದರ ಸತ್ಕಾರಗಳನ್ನು ನೋಡಿ ಗೋವಿಂದರಾಯರು ಬಹಳ ಸಂತೋಷಪಟ್ಟರು.

ರಾತ್ರಿ ಮಲಗುವದಕ್ಕೆ ಹೋಗುವಾಗ ರಾಮರಾಯರು ಕೆಲವು ಪ್ರಸಿದ್ಧ ವರ್ತಮಾನ ಪತ್ರಿಕೆಗಳ ಕಟ್ಟೊಂದನ್ನು ಗೋವಿಂದರಾಯರಿಗೆ ಕೊಟ್ಟರು. ಗೋವಿಂದರಾಯರು ಅಲ್ಲೆ ಅಡ್ಡಾಡಿ, ಕೆಲವು ಪತ್ರಿಕೆಗಳನ್ನು ಬಿಡಿಸಿದರು. ಕಡೆಗೆ ಆ ದೇಶಭಕ್ತನು ಸತ್ತ ಭೀಷಣ ಪ್ರಸಂಗವಿರುವ ಪತ್ರಿಕೆಯನ್ನು ತೆಗೆದು ಓದತೊಡಗಿದರು.

"ಧ್ವಜ ವಂದನೆಗಾಗಿ ಅಝಾದ ಮೈದಾನಿನಲ್ಲಿ ಸಾವಿರಾರು ಜನರು ಕೂಡಿದ್ದರು. ಅಷ್ಟರಲ್ಲಿ ಫಟ್ ಫಟ್ ಶಬ್ದ ಕೇಳಿಬಂತು. ಎಲ್ಲರೂ ಅತ್ತ ಇತ್ತ ಓಡತೊಡಗಿದರು. ಪೋಲೀಸರು, ಸಾಧ್ಯವಿದ್ದಷ್ಟು, ಹೊಡೆಯದೆನೇ ಜನರನ್ನು ಚದರಿಸುತಿದ್ದರು. ಆದರೆ ಒಬ್ಬ ಯುವಕನು ಮಾತ್ರ ಮೇರು ಪರ್ವತದಂತೆ ನಿಂತಿದ್ದನು. (ಆ ಊರಿನ ದೇಶಭಕ್ತನು) ಧ್ವಜವನ್ನು ಹಿಡಿದುಕೊಂಡು ಪ್ರಾಣ ಹೋದರೂ ಧ್ವಜವನ್ನು ಬಿಡಲಾರೆನೆಂಬ ನಿಶ್ಚಯ ಮಾಡಿಕೊಂಡು ನಿಂತಿದ್ದನು. ಇದನ್ನು ನೋಡಿ ಸಾರ್ಜಂಟನು ಬಹಳ ಕೋಪದಿಂದ ಓಡಿಬಂದು, ಚೆನ್ನಾಗಿ ಬಡೆದನು. ಜನರೆಲ್ಲರೂ ತಳಮಳಿಸಿದರು. ಆದರೆ, ಆ ವೀರನು ಸ್ವಲ್ಪವೂ ಅಲುಗಾಡಲಿಲ್ಲ. ಆತನ ಇಡೀ ಮೈಯಿಂದ ರಕ್ತವು ಹರಿಯತೊಡಗಿತು. ಕಡೆಗೆ ಅವನು ಬಿದ್ದುಬಿಟ್ಟನು. ಬೀಳುವಾಗಲೂ 'ಧ್ವಜ! ಧ್ವಜವನ್ನು ರಕ್ಷಿಸಿರಿ'–ಎಂದನು.

ಹೊರಗೆ ಬಾಗಿಲಿನ ಶಬ್ದವಾಯಿತು. ಗೋವಿಂದರಾಯರು ನೋಡಿ ಆಶ್ಚರ್ಯಪಟ್ಟರು. ಸುಮಾರು 10, 12 ವರ್ಷ ಪ್ರಾಯದ ಒಬ್ಬ ಹುಡುಗನು ಹೆದರಿಕೊಂಡು ಇಣಿಕಿದನು.

ಗೋವಿಂದರಾಯರು ಆತನಿಗೆ ಧೈರ್ಯಕೊಟ್ಟು 'ಮಗೂ, ಒಳಗೆ ಬಾ!' ಎಂದರು. ಹುಡುಗನು ಅತ್ತ ಇತ್ತ ನೋಡಿ ಬಾಗಿಲು ತೆರೆದು ಒಳಗೆ ಬಂದನು.

(63ನೇ ಪುಟಕ್ಕೆ ಮುಂದುವರಿದಿದೆ.)



ಕಮಲಿನಿಗೆ

ಲೇಖಕರು: ಶ್ರೀ। ಎಮ್. ಶಂಕರನಾರಾಯಣ ಭಟ್ಟ. ವಿದ್ವಾನ್.

★

ಸೃಷ್ಟಿಯಲ್ಲಿ ಚೆಲುವಡೆದ ಹೂವು ಕಮಲ; ಅದರ ಆಕರ್ಷತೆ, ಬೆಡಗು, ಔಚಿತ್ಯ, ವಿರಾಜಕತೆಗಳನ್ನು ಕವಿಕಂಡಂತೆ, ಕಾರನೂ ವಸ್ತುವಿಜ್ಞಾನಿಯೂ ಕಾಣುವುದಲ್ಲ. ಭಿನ್ನತೆಯ ಬಗೆಗಳು ಬರೆಹದಲ್ಲಿ ಕಂಡು, ವಿವಿಧ ರಸಗಳನ್ನು ವಾಚಕನಲ್ಲಿ ಹುಟ್ಟಿಸು ಬರೆಹಗಾರನು ತನ್ನ ಅನುಭವವನ್ನು ಲೇಖನಿಯಿಂದ ಚಿತ್ರಿಸ ಹೊರಟಾಗ ಅವನು ಕಂಡ ಬಗೆ ಕಂಡುಬರುತ್ತದೆ. ಈ ಲೇಖದಲ್ಲಿ ಅದೊ ಅಳಿದ ಕಮಲದ ಚಿತ್ರವೊದಗಿ ವಿಧಾತನ ಲೀಲೆಯು ವೈಚಿತ್ರ್ಯದಂತೆ ಕವಿ ವೈಚಿತ್ರ್ಯತೆಯಿಂದ ಪುರಾಣ ಕಥಾ ಸಮ್ಮೇಳನವೂ ಅಶಾಸ್ತ್ರವ ಕೂಡಿ, ಇದು ಘಟನಾತ್ಮಕ ಪ್ರಬಂಧವೆನಿಸಿದೆ.

ಜೀವನವಿಕಸಿತ ಲಲಿತ ಕಮಲಿನಿ! ಲೋಕದ ಸುಂದರ ಸೃಷ್ಟಿಗಳಲ್ಲಿ ಮೊದಲನೆಯ ಸ್ಥಾನವನ್ನು ಪಡೆದ ಸೌಂದರ್ಯದೊಡನೆ ನಿನ್ನ ಜೀವನವೂ ಕೊನೆಗಂಡುದೆ! ದುರ್ಗಮಾರಣ್ಯಗಳಿಂದ ನಿಬಿಡವಾಗಿ ಗಗನತಲಸ್ಪರ್ಶಿಗಳಾದ ಶಿಖರಗಳಿಂದೊಪ್ಪುವ ಪರ್ವತಾವಲಿಗಳಲ್ಲಿ ಸ್ವೇಚ್ಛಾವಿಹಾರಿಯಾಗಿ ಮೆರೆಯುತ್ತಿದ್ದ ಆ ಮತ್ತ ಮತಂಗಜವೆಲ್ಲಿ! ಮನುಜ ಸೌಕರ್ಯ ಸಹಕಾರಿಯಾದ ಸರೋವರವೆಲ್ಲಿ! ಅಲ್ಲಿ ಮೆಲ್ಲ ಮೆಲ್ಲನೆ ಹುಟ್ಟಿ ಬೆಳೆದು ಕೆಸರ್ಮಲ್ಲಿಗೆಯೆನಿಸಿಯೂ ಪ್ರಮೋದಾಮೋದಪ್ರದೆಯೆನಿಸಿ ಎಲ್ಲಾ ಜನರ ತಲ್ಲಣವನ್ನೂ ಬಲ್ಲಂತೆ ಪರಿಹರಿಸಿದ ನೀನೆಲ್ಲಿ! ಕಾಲನೇ ಮುನಿದು ಬಂದಂತೆ ಮದದಾನೆ ತಾನೇ ಬರಬೇಕೆ! ನೀರಡಿಸಿ ಬಂದರೆ ಮನವಾರೆ ನೀರ್ಗುಡಿದು ನಡೆಯುವುದನ್ನು ಬಿಟ್ಟು ನೀರಾಟವೆ! ಏರಾಟ ಹಾರಾಟಗಳಿಂದ ಓರಂತೆ ದಣುವಾರಿಸಲುಪಕ್ರಮಿಸಿದರೆ ತಡೆವವರಾರು! ಮದವಿಲಸಿತ ಮಹಾಗಜದ ಮುಂದೆ ನಿಲ್ಲುವವರಾರು!

ಸಚರಾಚರ ಸೃಷ್ಟಿಯಲ್ಲಿ ಸೌಂದರ್ಯ ನಿಧಿಗಳನ್ನು ಜಾಗರೂಕತೆಯಿಂದ ಸೃಜಿಸುವ ವಿಧಾತನೆ, ನಿನ್ನ ರಚನಾ ಕೌಶಲ್ಯವೇನು! ಉಪಾಯಾಂತರದಿಂದ ಮರುಕ್ಷಣವೇ ಅವನ್ನು ಪರಿಹರಿಸುತ್ತಲೂ ಇರುವ ನಿನ್ನ ಉದ್ದೇಶವೇನು! ಜಗನ್ನಿಯಾಮಕನೆ, "ತನ್ನ ರಚನೆಯು ಹೇಗಿದ್ದರೂ ತನಗೆ ತೃಪ್ತಿಕರವೆನಿಸದು" ಎಂಬ ಸೂತ್ರವನ್ನನುಸರಿಸಿ ಇನ್ನೂ ಬಲು ಸೊಗಸೆನಿಸುವಂತೆ ಇತರ ಸುಂದರ ವಸ್ತುಗಳನ್ನು ನಿರ್ಮಿಸುವುದಕ್ಕಾಗಿ ಮೊದಲು ಉಪಯೋಗಿಸಿದ ಸೃಷ್ಟಿ ಸಾಮಗ್ರಿಗಳನ್ನು ಕೈಚಾಚಿ ಸೆಳೆದುಕೊಳ್ಳುವೆಯೊ! ಕಮಲಯೋನಿಯೆನಿಸಿದ ಬ್ರಹ್ಮನೆ, 'ಊರಿಗೆ ಅರಸನಾದರೂ ತಾಯಿಗೆ ಮಗನು' ಎಂಬ ಮಾತಿನ ಸಾರವನ್ನರಿಯದೆ ಬೆಟ್ಟದಿಂದಿಳಿದು ಅಹಂಕಾರದಿಂದೇರಿದ ಮದಗಜದ ಸೊಂಡಿಲ ಹೊಡೆತಕ್ಕೆ ಗುರಿಯಾಗೆಂದು ಅಮ್ಮನ ತಲೆಯಲ್ಲಿಯೂ ನೀನು ನಿನ್ನ ಬ್ರಹ್ಮಲಿಪಿಯನ್ನು ಬರೆಯದೆ ಬಿಡಲಿಲ್ಲವೆ! ನಿನ್ನ ಸ್ಥೂಲ ದೇಹದ ಭಾರವನ್ನು ಧರಿಸಿ ಪುತ್ರವಾತ್ಸಲ್ಯವನ್ನು ನಿರ್ವಹಿಸಿದ

ಕೋಮಲ ನಲಿನಿಯಲ್ಲಿಯೂ ವಿಧಿಯೇ ನೀನು ನಿ
ಧಾಷ್ಟ್ರ್ಯವನ್ನು ತೋರಿಸುವುದೆ! ಪದ್ಮಜನೆ, ನಿನ್ನ ಪಾ
ಭಕ್ತಿಯ ಚರಮಸೀಮೆಯಿದಲ್ಲವೆ! ನೀನು ಜಡಜಸಂ
ನಾಗಿ ಜಡನೆನಿಸಿದೆಯೊ! ಹುಟ್ಟಿದಂದಿನಿಂದಲೇ ಚತುರ್ಮು
ಗಳಿಂದಲೂ ನಿರಂತರ ವೇದಾಭ್ಯಾಸನಿರತನಾಗಿ ಜಡಭ
ನಾದೆಯೋ! ಪಿತಾಮಹನಾಗಿ ನಿನ್ನ ಮತಿಯು ಕರ್ತ
ಕರ್ತವ್ಯವಿಕಲವೆನಿಸಿತೆ! ಅಥವಾ ನಿನ್ನ ತಪ್ಪೇನು! ಪ್ರಪ
ವೆಲ್ಲವೂ ನಿನ್ನ ಸೃಷ್ಟಿಯಾಗಿರುವಾಗ ಕಮಲಿನಿಯನ
ನೀನೇ ಸೃಜಿಸಿರಬೇಕಲ್ಲವೆ! ಆಹಾ, ಜನ್ಮದಾತನಾಗಿಯ
ಪಿತೃವಾತ್ಸಲ್ಯದಿಂದ ನಲಿನಿಯನ್ನು ಸಲಹದೆ ಹೋದೆಯೆ
ಕಮಲಾಸನನೇ, ಬಿಸಪ್ರಸೂನವು ನಿನಗೆ ತತ್ಕಾಲದ ಆ
ಮಾತ್ರವೆನಿಸಿತೆ! ಲಾವಣ್ಯಸಾರಸಂಗ್ರಹತತ್ಪರನಾಗಿ ನಿ
ವಿವೇಕವೂ ವಿಕಲವೆನಿಸಿತೆ! ವಿಧಿ ವಿಲಸಿತವೇ ವಿಚಿತ್ರ ತರ

ದಿನಕರನೆ! ಪ್ರೇಮದಿಂದೊಲಿದ ಕಮಲಿನಿಯ ಪಾ
ಗ್ರಹಣವನ್ನು ಸಹಸ್ರ ಕರಗಳಿಂದಲೂ ನೆರವೇರಿಸಿ ಅಬ್ಜಿನಿ
ಪತಿಯೆನಿಸಿದೆಯಲ್ಲವೆ! ದುಷ್ಟಗಜದ ಶುಂಡಾದಂಡ
ಆಘಾತಕ್ಕೆ ಗುರಿಯಾಗಿ ಪ್ರಾಣೋತ್ಕ್ರಮಣದಿಂದ ತೊಳ
ತ್ತಿದ್ದ ನಲಿನಿಯನ್ನೇಕೆ ಕಡೆಗಣಿಸುವೆ! ಮಾತಂಗ ಕ
ಕೃಷ್ಟಳು ಕೇವಲ ವರ್ಜ್ಯಳೆಂದು ತಟಸ್ಥನಾದೆಯೊ! ಆಹ
ನಿನ್ನ ಜಾತಿಭಾವನೆಯ ಒಂದು ಮೇಲ್ಮೆಯೆ! ಅಬಲೆಯ
ದುಷ್ಟರ ಹಾವಳಿಯಿಂದ ತಪ್ಪಿ ಸಮಾಜದಲ್ಲಿ ಎಲ್ಲರಂತೆ ತ
ಯೆತ್ತಿ ನಡೆದು ಬದುಕುವ ಹದನವೆಂತು! ಸಮಾಜವೆ
ದುಷ್ಟರನ್ನು ಪರಿಹರಿಸುವ ನಿನ್ನ ಕರ್ತವ್ಯದಲ್ಲಿ ಕಳೆಗುಂದ
ಮುಂದುವರಿಯುತ್ತಿರು. ಲೋಕ ಬಂಧುವೆ! ಪ್ರದೋ
ಕಾಲದಿಂದಲೂ ನಿನ್ನ ಅಗಲಿಕೆಯ ಬೇಸರದಿಂದಲೆ ಯವ
ಯಾತನೆಯಿಂದಲೆಂಬಂತೆ ಯಾಮಿನೀ ಯಾಮಗಳಿಂದ ಬಿ
ಗಡೆಹೊಂದಿ ಸಡಗರದಿಂದ ನಿನ್ನೊಲವಿನ ಬರವನ್ನೇ ಇದಿ
ಗೊಳ್ಳಲು ತವಕಿಸುತ್ತಿದ್ದ ಕಮಲಿನಿಗೆ ಅನಿರೀಕ್ಷಿತವಾ
ದುಷ್ಟ ಮತಂಗಜದ ಜಂಗುಳಿಯೆ! ನಲ್ಲೆಯ ಎಲ್ಲಾ ಕಷ
ಗಳನ್ನೂ ಪರಿಹರಿಸತಕ್ಕ ಕರ್ತವ್ಯದಲ್ಲಿಯೂ ವಿಮುಖತೆಯೆ
ಜಗಚ್ಚಕ್ಷುವೆ! ಅಸ್ತಮಾನ ಶಿಖರವನ್ನೇರಿ ಕಣ್ಮರೆಯಾದೊಡ



ಚಂದ್ರಕಾಂತ ಶಿಲಾನಿರ್ಮಿತ ಮಂಟಪಗಳೆದುರು ರಜತ ಪಾತ್ರೆಗಳಿಂದ ಮನೋಹರ ಕಾರಂಜಿಗಳು ಹೊರಚಿಮ್ಮುತ್ತಿರುವಾಗ,
ತರುಣ ಹೃದಯಗಳಲ್ಲಿ ಪ್ರೇಮ ಕಾರಂಜಿಗಳು ಹೊರಕ್ಕೊಸರದೆ ಇರಬಲ್ಲುವೆ?...[ಮೆಹಬೂಬರ "ಹುಮಾಯೂನ್" ಚಿತ್ರದಿಂದ.]

ಮಧುಕರ ನಿಕರವನ್ನೊಳಗೊಂಡು ನಿಮೀಲನಗೊಂಡ ಕಮಲಿನಿಯು ಕರ್ಮದ ಮರ್ಮವನ್ನರಿತು ಅನ್ಯ ಸಂಸರ್ಗ ದೂಷಿತೆಯೆಂದು ಬಹಿರ್ಮುಖನಾದೆಯೊ! ಕರ್ಮಸಾಕ್ಷಿಯೆ! ಮಿತಮತಿಯಿಲ್ಲದವರಿಗೆ ಬೆಂಗಾವಲೇಕೆ ಎಂಬ ಸದಭಿಪ್ರಾಯವೇ ನಿನಗೆ! ಸರಿ! ಸರಿ! ನೀನು ಸರಿಯುತ್ತಿರುವುದು ಸಹಜವು. ಅನಂತಪಥ ಸಂಚಾರದಿಂದ ಲೋಕವನ್ನು ಬೆಳಗಿಸುವ ಸ್ವಕಾರ್ಯನಿರತನಿಗೆ ಬಿಡುವೆಲ್ಲಿಂದ! ಪೊಡಮಡುವೆನಿದೋ, ತಡೆಯದೆ ಮುನ್ನಡೆಯುತ್ತಿರು!

ಗಗನಾಂಗಣದಲ್ಲಿ ತಾರಾಮಣಿಯಂತೆ ಪಾವನತರ ಸರೋವರದಲ್ಲಿ ನಲಿದ ನಲಿನಿಯೆ! ವಂದಿಗಳ ವಂಧನೆಗೆ ಮನಮೆಚ್ಚಿ ಎಚ್ಚರಗೊಳ್ಳುವಂತೆ ತುಂಬಿಗಳ ಮಧುರತರ ಝೇಂಕಾರಕ್ಕೆ ವಿಕಾಸಗೊಂಡು ತಲೆದೂಗುತ್ತ ತುಂಬಿ ತುಳುಕಾಡುವ ಮಧುಭರಕ್ಕೆ ತೊನೆದಾಡುತ್ತ ಮಂದಾನಿಲಂಗೊಲಿದು ನಿಜ ಪರಿಮಳವನ್ನೀಯುತ್ತ ಅಂತರಾಳ ಚಂಚಲೆಯೆನಿಸಿಯೂ ಚಪಲೆಯಾದ ಸಿರಿಗೆ ಕರುಮಾಡವೆನಿಸಿದ ಕಮಲಿನಿಯೇ, ನೀನು ಮಹಾಗಜದ ಗಂಡದಾಳಿಗೆ ಕಾತರಿಸಿದೆಯೆಂಬುದು ಸೋಜಿಗವು. ಕ್ಷೀರಸಾಗರ ಕನ್ನಿಕೆ ಮಹಾವಿಷ್ಣುವಿನ ಮಡದಿ ಲೋಕಮಾತೆಯೆನಿಸಿದ ರಮೆಯಾದರೂ ನಿನ್ನ ಔದಾರ್ಯ ಸ್ಮರಣೆಗಾಗಿ ಕಮಲೆಯೆನಿಸಿಯೂ ತ್ರಿಭುವನವನ್ನು ಸಲಹುವ ಕೃಪಾಕಟಾಕ್ಷವನ್ನು ಬೀರಿ ಸ್ವಭವನವೆನಿಸಿದ ನಿನ್ನನ್ನು ಪರಿಪಾಲಿಸದೆ ಹೋದಳೆ!

ತ್ರಿಲೋಕವಿಜಯಿಯೆನಿಸಿ ಪ್ರಖ್ಯಾತನಾದ ಕಾಮನೆ! ನೀನಾದರೂ ಪಂಚಬಾಣಗಳಿಂದಲ್ಲವೇ ಸಕಾಮನು! ಕೈಲಾಸವಾಸಿಯಾದ ರುದ್ರನನ್ನೂ ಜಯಿಸಿ ವಿಜಯಧ್ವಜವನ್ನು ರಜತಗಿರಿ ಶಿಖರದಲ್ಲಿ ನೆಲೆಗೊಳಿಸಿದೆಯಷ್ಟೆ! ನಿನ್ನ ಮುಖ್ಯ ಬಾಣವೆನಿಸಿದ ಅರವಿಂದವೇ ಸ್ವರಕ್ಷಣೋಪಾಯಶೂನ್ಯತೆಯಿಂದ ತಲ್ಲಣಿಸುತ್ತಿದ್ದಾಗ ಅದರ ರಕ್ಷಣಾಕಾರ್ಯವನ್ನೂ ಮರೆತು ಬಿಟ್ಟೆಯೊ! ಅಥವಾ ಲೋಕವನ್ನೆಲ್ಲಾ ಜಯಿಸಿದ ಮೇಲೆ ಬಾಣವೇಕೆ ಎಂದು ಸುಮ್ಮನಿರುವೆಯೊ! ವೀರನೇ, ಆತ್ಮರಕ್ಷಣೆಗಾದರೂ ವೀರರು ಶಸ್ತ್ರಾಸ್ತ್ರಗಳನ್ನು ಧರಿಸಬೇಕೆಂಬ ನಿಯಮವನ್ನೂ ಮೀರುವೆಯೊ! ಶಸ್ತ್ರಸನ್ಯಾಸದಿಂದ ವಿಪತ್ಪರಂಪರೆಗಳು ಸಂಭವಿಸುವುವು ಎಂಬ ಭ್ರಮೆಯನ್ನು ಕಿತ್ತೊಗೆದು ಇಡೀ ವಿಶ್ವವನ್ನೇ ಆತ್ಮೀಯ ಭಾವದಿಂದ ನೋಡುವ ಸಮತಾವಾದಕ್ಕೆ ತಲೆವಾಗಿ ಅರವಿಂದವನ್ನೂ ಅಲ್ಲಗಳೆಯುವೆಯೊ! ಆಹಾ! ಇದೆಂತಹ ಭ್ರಮೆಯು! ನೀನಂದೇ ಮುಕ್ಕಣ್ಣನ ತ್ರಿನೇತ್ರಾಗ್ನಿಗೆ ಆಹುತಿಯಾಗಿ ನಾಮಮಾತ್ರಾವಶಿಷ್ಟನೊ ಅನಂಗನೊ ಎನಿಸಿರುವಾಗ ಸ್ವಕೀಯ ಶರ ರಕ್ಷಣೆಗೆ ಅದೆಂತು ಸಮರ್ಥನಾಗುವೆ! ಆದುದರಿಂದ ನೀನು ನಿರ್ವಿಣ್ಣನೋ ವಿಷಣ್ಣನೋ ಆಗಿರುವುದು ಸಹಜವೇ ಸರಿ!

ಕಮಲಿನಿ! ನೀನು ಉನ್ನತಕುಲ ಸಂಜಾತೆಯೆನಿಸಿ ಚತುರ್ಮುಖ ಬ್ರಹ್ಮನಿಗೆ ಜನ್ಮದಾತೆಯೆನಿಸಿ ಗ್ರಹಪತಿಗೆ
ಧರ್ಮಪತ್ನಿಯೆನಿಸಿ, ಐಶ್ವರ್ಯಗಳ ಒಡತಿಯಾದ ಲ
ದೇವಿಗೆ ಆಶ್ರಯದಾತೆಯೆನಿಸಿ ಕುಸುಮ ಶರನಿಗೆ ನೆ
ನೆಯ ಸರಳೆನಿಸಿ, ಹೀಗೆ ಉನ್ನತೋನ್ನತ ಸಂಬಂಧ
ಮೇಲ್ಮೆಗೊಂಡು ಭುವನದಲ್ಲಿ ಅಗ್ರಸ್ಥಾನವನ್ನು
ಅದರ ಬಲದಿಂದ ಬೀಗಿ ಕೂಗಿದೆಯೊ! ಹಂಬಲಿಸಿ
ಸುವ ತುಂಬಿಗಳನ್ನು ಬಂಧನಗೊಳಿಸಿ ಮೇಲ್ಮೆಗಾಗಿ ಬ
ಹಿಗ್ಗುತ್ತಿದ್ದ ನಿನ್ನ ಗತಿಯೆ! ದೊಡ್ಡವರ ಬಾಂಧವ್ಯದ
ಯಿಂದ ಬಡವರನ್ನು ಕಡೆಗಣಿಸಬಾರದು ಎಂಬ ರಹ
ಈಗಲಾದರೂ ನಿನಗೆ ಮನವರಿಕೆಯಾದುದೇ! "ಏಳಿಗೆ
ಬಂಧುಗಳ ಬಳಗವು" ಎಂಬುದರಿಂದ ಆಪದ್ಬಂಧು
ಬಂಧುಗಳು! ಪಾಪಪುಣ್ಯಗಳೇ ಒಡನಾಡಿಗಳು! ಎಂಬ ತ
ನಿನ್ನ ಹೃದಯದಲ್ಲಿ ಈಗಲಾದರೂ ನೆಲಸದೆ ಇರಲಾರದು

ನಲಿನಿ! ಅಕಾಲದ ಘೋರ ವಿಪತ್ತಿಗೊಳಗಾಗಿ ಕ
ದವಡೆಯೆಂಬ ಅಗಾಧವಾದ ಮಡುವಿನಲ್ಲಿ ಕೆಡೆದಿರುವೆ
ಆಹಾ! ಸೌಂದರ್ಯದ ಗನಿಗಳು ದುಷ್ಟರ ಪೀಡೆಗೊಳ
ಮನಗರಗಿಸುವ ಪ್ರಾಣಾಪಾಯನಿವೇದಕ ಚರಿತೆಗಳೆ
ಮಹಾಮುನಿಯಗಸ್ತ್ಯನ ಶಾಪದ ಪ್ರಭಾವದಿಂದ ಇಂದ್ರ
ಮ್ನನೆಂಬ ವಿಷ್ಣುಭಕ್ತಾಗ್ರಣಿಯು ಮಹಾಗಜವಾಗಿ ಬ
ಸರೋವರದಲ್ಲಿ ವಿಹರಿಸಿ ನಿನ್ನನ್ನು ಜೀವನದಲ್ಲಿಯೇ ಕ
ಗಾಣಿಸಿದನೆಂಬುದಕ್ಕಿಂತಲೂ ಉತ್ತಮ ಲೋಕದಲ್ಲಿ ಸ
ರ್ಯನಿಧಿಯೆನಿಸಿದ್ದ ನೀನೇ ಮಹಾನುಭಾವನೊಬ್ಬನ ಘೋ
ಶಾಪದ ಫಲದಿಂದ ನಲಿನಿಯೆನಿಸಿ ಮದದಾನೆಯ ಜಂ
ಗೊಳಗಾಗಿ ಮೋಕ್ಷವನ್ನೈದಿದೆಯೆಂಬುದೇ ಸಂಯುಕ್ತ
ಎಂದೆನಿಸದಿರಲಾರದು.

ಕಮಲಿನಿ! ನೀನು ಮೃಣಾಳನಾಳಸಮುದ್ಭವೆಯೆ
ವಿಕಾಸವೆಂಬ ಮಂದಹಾಸದೊಡನೆ ಚೆಲ್ವಕಂಪನ್ನಿಣಿಸ
ಸಂಸಾರ ತಾಪಗಳಿಂದ ಬೆಂದು ಕಂದಿದ ಜನರ ಬಗೆಯ
ಬಗೆವಗೆಯ ಉಪಾಯಗಳಿಂದ ತಣಿಸುತ್ತ ಮೇಧಾವಿಗಳೆ
ಜಡಮತಿಗಳೆನ್ನದೆ ಕವಿಗಳೆನ್ನದೆ ವಿದ್ವಾಂಸರೆನ್ನದೆ ಸ್ತ್ರೀ
ರೆನ್ನದೆ ಪುರುಷರೆನ್ನದೆ ವೃದ್ಧರೆನ್ನದೆ ಬಾಲಕರೆನ್ನದೆ ಸಕಲ
ಭಿನ್ನ ಭಿನ್ನ ರೀತಿಗಳಿಂದ ಮಾಡುತ್ತಿರುವ ನಿನ್ನ ಗುಣಗ
ವನ್ನು ಕೇಳುತ್ತ ತ್ರಿಭುವನಗಳಲ್ಲಿಯೂ ಆದರ್ಶಚರಿತೆಯ
ವಳೆನಿಸಿ ಯಶಸ್ವಿನಿಯಾದೆಯೊ!

ಆರ್ಯಕವಿಪುಂಗವರು ನಿನ್ನನ್ನು ಬಣ್ಣಿಸಿ ಬ
ಮನದಣಿಯದೆ ತಮ್ಮ ಕಾರ್ಯದಲ್ಲಿ ಕೃತಾರ್ಥರೆನಿಸಲು
ಶತಪತ್ರವೆ! ಸಹಸ್ರ ಪತ್ರವೇ!

ಅರವಿಂದ ಮಹೋತ್ಪಲ ತಾ
ಮರಸ ಕುಶೇಶಯ ಬಿಸಪ್ರಸೂನಾಂಬುಜ ಪು।
ಷ್ಕರ ರಾಜೀವಾಂಭೋರುಹ
ಸರಸೀರುಹ ಪದ್ಮ ನಲಿನಸಾರಸ ಕಮಲಂ ॥

ಎಂಬ ನಾಮಾವಳಿಯನ್ನೇರ್ಪಡಿಸಿ ಪಾರಾಯಣನಿರತರ
ಪುಣ್ಯವನ್ನು ಗಳಿಸಿದರೇ!

ಕನ್ನಡಿಗರಾದರೂ ತಮ್ಮ ಬಿನ್ನಾಣದಂತೆ—ಸಿರಿ
ಕರುಮಾಡಂ ಕೆಸರ್ಮಲ್ಲಿಗೆ ನೀರ್ವೂ ತಾಮರೆಯೆಂದು

ಗೆಯಿಂದ ಕೊಂಡು ಕೊನೆದಾಡುತ್ತಿರುವರಲ್ಲದೆ ತಾವರೆ ಯ್ಯನೆಂದೂ ತಾವರೆಗಣ್ಣನೆಂದೂ ಶ್ರೀಮನ್ನಾರಾಯಣ ೂಡನೆ ನಿನಗೆ ಸಂಬಂಧವನ್ನು ಸಲ್ಲಿಸಿಯೂ ತೃಪ್ತಿಗೊಂಡಿಲ್ಲವೆ!

ಸುಂದರವಾದ ಸರಸಿಯ ಅಂತರಾಳದಿಂದ ನಾಳವೆನಿಸಿ ಂದು ನೆರೆದು ಬಿರಿದು ಮೆರೆದ ಕೆಂದಾವರೆಯೇ, ನಗರ ಸಭೆ ುವರು ಈಗಲೀಗ ಏರ್ಪಡಿಸುವ ಪುಷ್ಪಪ್ರದರ್ಶನಾವಸರ ಲ್ಲಿ ನಿಶ್ಚಯವಾಗಿಯೂ ನಿನಗಲ್ಲವೆ ಪ್ರಥಮ ಸಂಭಾವನೆಯು ೂರಕಬೇಕಿದ್ದಿತು! ಸುಯೋಗದ ಘಟನೆಯು ದೈವಚಿಂತನೆ ೂಳಗೆನಿಸಿರುವಾಗ ಯಾರೇನು ತಾನೇ ಮಾಡಬಲ್ಲರು.

ಕಮಲಿನಿ! ನಿನ್ನ ಪ್ರಭಾವವೇನೆಂದರಿಯದೆ 'ಚಂದ ಾಗಿ ಅರಳಿದೆ. ಅದಕ್ಕೇನು! ವಿಧಾತನ ಕೈವಾಡದಲ್ಲಿ ಈ ಗೆಯ ಸೃಷ್ಟಿಗಳಿರುವುದು ಸಹಜವು! ನಮ್ಮ ಸೌಕರ್ಯ ್ಕಾಗಿಯೇ ಅವುಗಳ ಜನ್ಮವು' ಎಂದೇನೋ ತಿಳಿದುಕೊಂಡಿದ್ದೆ ಲ್ಲದೆ ಹೆಚ್ಚೇನೂ ಯೋಚಿಸಿರಲಿಲ್ಲ. ಕಣ್ಣು ತೆರೆದು ನೋಡಿ ರೆ ಈಗ ನೀನೆಲ್ಲಿ! 'ಇದ್ದವರ ಗುಣವು ಹೋದ ಮೇಲೆ ಎಂಬ ಾತೀಗ ಸರಿಯಾಯಿತು., ಇದೀಗ ಅಕಾಲವಿಯೋಗವೆಂದು ೇಳಿ ಸುಮ್ಮನೆ ಬಿಡತಕ್ಕ ವಿಚಾರವೆ! ನಿನ್ನ ಜನ್ಮವೇನು, ಣವೇನು, ಲೋಕಹಿತೈಷಿತೆಯೇನು ಎಂಬುದಾಗಿ ಮುಂದಿ ಯೆಲ್ಲವೂ ತಿಳಿಯುವಂತೆ ಮಾಡಬೇಡವೆ! ನಿನ್ನ ಲಲಿತ ಮೃದುಲವಾದ ಭಾವಚಿತ್ರವನ್ನು ಬರೆಯಿಸಿ—ಆಹಾ! ಸಿದ್ಧಿಸಿದ ಯುದ್ಧದಿಂದಾಗಿ ಬಯಕೆಯ ಅಧಿಕರಣ ದುರ್ಭಿಕ್ಷೆಯೇ ಮುಂದೆ ಬರುತ್ತಿರುವಾಗ ಚಿತ್ತಭಿತ್ತಿಯಲ್ಲಿ ಮನವೆಂಬ ಕುಂಚದ ಮೂಲಕ ಭಾವನೆಯ ಬಗೆವಗೆಯ ಬಣ್ಣಗಳಿಂದ ರೂಪರೇಖೆಗಳನ್ನೇರ್ಪಡಿಸಿದ ನಿನ್ನ ಪ್ರತಿಕೃತಿಯನ್ನು ಸ್ನೇಹದಿಂದಲೇ ಪ್ರಕ್ಷಾಲನೆಗೊಳಿಸಿ ಹೃನ್ಮಂದಿರದಲ್ಲಿ ನಿನ್ನ ತೈಲಚಿತ್ರದ ಅನಾವರಣ ಸಮಾರಂಭವನ್ನು ಸಂಭ್ರಮದಿಂದ ನೆರವೇರಿಸುವುದಲ್ಲದೆ ಸರಳ ಜೀವನದ ಸಾಧುಸಂತರ ಉಪಯೋಗಕ್ಕಾಗಿ ನಿನ್ನ ಹೆಸರಿನಿಂದಲೇ ಸ್ಮಾರಕ ನಿಧಿಯೊಂದನ್ನೇರ್ಪಡಿಸುವುದು! ಓವೋ! ಕಮಲಿನಿ, ನೀನು ಯಶಸ್ವಿನಿಯಾಗಿಯೂ ಲೋಕದ ಭಾವನೆಯು ವಿಕಾಸಗೊಂಡು ಗೆಲವಿಂದ ನಲಿಯುವಂತೆ ಪ್ರಸನ್ನತೆಯಿಂದ ಉಪದೇಶಿಸುತ್ತಿರು! ದ್ವೇಷಚಿಂತನೆ ಯಳಿಯುವಂತೆ ಸರಳವರ್ತನೆಗೆ ಸರಣಿಯನ್ನು ಮುಂಗಾಣಿಸುತ್ತಿರು!! ಸೃಷ್ಟಿಯಲ್ಲಿ ಸುಖಶಾಂತಿಯು ನೆಲಸುವಂತೆ ನಲವಿಂದ ಸಲಹೆಯನ್ನು ಕೊಡುತ್ತಿರು!!! ಪರಮಾತ್ಮನು ಅನಂತವಾದ ನಿನ್ನ ಆತ್ಮಕ್ಕೆ ಚಿರಶಾಂತಿಯನ್ನೀಯುತ್ತಿರಲಿ!

ಭದ್ರಂ — ಶುಭಂ — ಮಂಗಳಂ ॥

(59ನೇ ಪುಟದಿಂದ ಮುಂದುವರಿದುದು)

'ಮಗೂ, ನಿನಗೇನು ಬೇಕು?'

ಹುಡುಗನು, ಒಂದು ಐದು ರೂಪಾಯಿಯ ನೋಟನ್ನು ೂಡಲು ಕೈ ಚಾಚಿದನು.

'ನನಗೇಕೆ ಹಣ?'

'ನಾಳೆ ಪ್ರತಿಮೆಯನ್ನು ಅನಾವರಣ ಮಾಡುತ್ತಾರಲ್ಲ! ದಕ್ಕಾಗಿ ತಾಯಿ ಕೊಟ್ಟದ್ದು.'

'ಆದರೆ, ನೀನು ಹಣ ಒಟ್ಟುಗೂಡಿಸುವುದಿಲ್ಲ. ಅದೆಲ್ಲ ಲಸ ರಾಮರಾಯರಿಗೆ.'

"ತಾಯಿಗೆ ಅವರ ಮೇಲೆ ವಿಶ್ವಾಸವಿಲ್ಲ. ನಿಮ್ಮ ಹತ್ತಿ ನೇ ಕೊಡಹೇಳಿದ್ದಾಳೆ.

ಗೋವಿಂದರಾಯರು ನಗುತ್ತಾ, 'ತಾಯಿಗೆ ಹೇಳು, ಹಣವನ್ನು ನಾನು ಸರಿಯಾಗಿ ಉಪಯೋಗಿಸುವಂತೆ ಾಡುವೆನು.'

ಇಷ್ಟರಲ್ಲಿ ಹೊರಗಿನಿಂದ ಯಾರೋ ಬಂದ ಸಪ್ಪಳವಾ ಿತು. ಹುಡುಗನು ಅವಸರದಿಂದ ಹೋದನು. ಗೋವಿಂದ ಾಯರು ಈ ವಿಷಯವಾಗಿ ಆಲೋಚಿಸುತ್ತಾ ನಿದ್ದೆ ಹೋದರು.

ಮರುದಿನ ಸಮಾರಂಭಕ್ಕೆ ಅನೇಕ ಜನರು ನೆರೆದರು. ಾಷಣವೂ ಬಹಳ ಚಲೋದಾಯಿತು.

ಗೋವಿಂದರಾಯರು ಅಲ್ಲಿಂದ ಹೊರಟರು. ಆದರೆ ೋಟಾರು 3 ಘಂಟೆಯ ಮುಂಚೆ ಇಲ್ಲ. "ಅಲ್ಲಿಯೇ ನಿಲ್ಲ ೇಕಾಯಿತು. ಮಧ್ಯಾಹ್ನ ಊಟದ ಸಮಯದಲ್ಲಿ ಆ ುಡುಗನೂ ಗೋವಿಂದರಾಯರ ಪಂಕ್ತಿಯಲ್ಲಿದ್ದನು. ಅವ ನ್ನು ನೋಡಿ ಗೋವಿಂದರಾಯರಿಗೆ ಹಿಂದಿನ ದಿನದ ನೆನ ಾಯಿತು. ಊಟ ಮಾಡಿ ಅವರು ವರ್ತಮಾನ ಪತ್ರಿಕೆಗಳನ್ನು ಬಿಡಿಸುತ್ತಾ ಅಡ್ಡ ಸರಿದರು. ಅಷ್ಟರಲ್ಲಿ ಆ ಹುಡುಗನು ಓಡಿ ಓಡಿ ಬಂದು ಅವರ ಮುಂದೆ ನಿಂತನು.

'ನೀನು ಈ ಹೊತ್ತು ಇಲ್ಲಿಗೆ ಊಟಕ್ಕೆ ಬಂದಿದ್ದೆಯಲ್ಲ"

'ಹೌದು; ಇವತ್ತು ನನ್ನ ಊಟದ ಸರದಿ ಇಲ್ಲಿ.'

'ನಿನ್ನ ತಾಯಿ ಎಲ್ಲಿ ಇದ್ದಾಳೆ?'

'ಡಾಕ್ಟರರ ಮನೆಯಲ್ಲಿ ಅಡಿಗೆ ಕೆಲಸ ಮಾಡುತ್ತಾಳೆ. ಹುಡುಗನು ನಾಚಿದನು.

'ನಿನ್ನ ತಂದೆ?'

'ಅವರು ಈ ಲೋಕದಲ್ಲಿಲ್ಲ. ಈ ಹೊತ್ತು ಯಾರ ಪ್ರತಿಮೆಯ ಅನಾವರಣ ಸಮಾರಂಭವಾಯಿತೋ ಅವರೇ ನನ್ನ ತಂದೆ!'

'ಏನು!' ಗೋವಿಂದರಾಯರು ಆಶ್ಚರ್ಯದಿಂದ ಕೇಳಿದರು. ಮತ್ತೆ ಏನೋ ನೆನಸಿ ಎದ್ದು, ಕಿಸೆಯಿಂದ ಹಣದ ಪಾಕೇಟನ್ನು ತೆಗೆದರು. ಆ ಹುಡುಗನು ಕೊಟ್ಟ ಐದು ರೂಪಾಯಿಯ ನೋಟನ್ನೂ ಮತ್ತೆ ೧೫ ರೂಪಾಯಿ ನೋಟುಗಳನ್ನೂ ಹುಡುಗನಿಗೆ ಕೊಟ್ಟರು. ಹುಡುಗನು ಕೈ ಎತ್ತಲಿಲ್ಲ.

ಇಷ್ಟರಲ್ಲಿ ರಾಮರಾಯರು ಏನೋ ಕೆಲಸಕ್ಕಾಗಿ ಗೋವಿಂದರಾಯರ ಕೋಣೆಯೊಳಗೆ ಬಂದರು.

ಹುಡುಗನು, ಗೋವಿಂದರಾಯರು ಹಣ ಕೊಡುವಾಗ ತೆಗೆದುಕೊಳ್ಳದೆ ಇದ್ದುದನ್ನು ನೋಡಿ ರಾಮರಾಯರು ಆಶ್ಚರ್ಯಪಟ್ಟರು. ಅವರು ಕೇಳಿದರು: 'ಇದೇನು ಮಾಡುತ್ತೀರಿ ಗೋವಿಂದರಾಯರೇ?'

"ಏನಿಲ್ಲ! ಜೀವಂತ ಸ್ಮಾರಕಗಳಿಗೆ ಸಹಾಯ!' ಗೋವಿಂದರಾಯರು ಅತ್ತ ನೋಡದೆ ಹೇಳಿದರು.



ಮೆಹಬೂಬರ ಭವ್ಯ ಐತಿಹಾಸಿಕ ಚಿತ್ರ "ಹುಮಾಯೂನ್"ದಲ್ಲಿ ಚಂದ್ರಮೋಹನನು ರಜಪೂತ ಅರಸನ ಪಾತ್ರದಲ್ಲಿ ಹೊಸ ಅಭಿನಯ ನೈಪುಣ್ಯವನ್ನು ತೋರುತ್ತಾನೆ.

ಏಕಾಂಕ ನಾಟಕ ಕಲೆ

★

ಕಾದಂಬರಿಗಳಲ್ಲಿ ಅಧ್ಯಾಯಕ್ಕಿರುವ ಮ
ತ್ವವೇ ನಾಟಕಗಳೆಡೆಯಲ್ಲಿ ಏಕಾಂಕಗಳಿಗಿ
ಕಾದಂಬರಿಗೂ ಸಣ್ಣ ಕತೆಗೂ ಇರುವ ಅಂ
ರ್ಯವೇ ದೀರ್ಘ ನಾಟಕಕ್ಕೂ ಏಕಾಂಕಕ
ಇದೆಯೆಂದು ಮತ್ತೊಂದು ಉಪಮೆ ಕೊ
ಬಹುದು. ಸಣ್ಣ ಕತೆಯ ಲಕ್ಷಣಗಳ
ಏಕಾಂಕ ನಾಟಕಗಳಿಗನ್ವಯಿಸಿದರೆ ಅಥವ
ಸಣ್ಣ ಕತೆಯ ಲಕ್ಷಣವನ್ನನುಸರಿಸಿ ಏಕಾಂ
ಗಳನ್ನು ಬರೆದರೆ ಸರಿಹೋಗುವುದೆಂದೂ
ಲೇಖನದಿಂದ ತಿಳಿಯಬಹುದಾಗಿದೆ. ಏಕಾಂ
ನಾಟಕಗಳನ್ನು ಬರೆವವರಿಗೂ ಪ್ರಯೋ
ವಾದುದನ್ನು ನೋಡುವ ಪ್ರೇಕ್ಷಕನಿಗೂ
ಏಕಾಂಕಗಳೆಂದರೇನೆಂಬ ತಿಳಿವಿರಬೇಕು.
ಲೇಖವು ಏಕಾಂಕಗಳೆಂತಿರಬೇಕೆಂಬುದನ್ನ
ಕೆಲವೇ ಮಾತುಗಳಲ್ಲಿ ಚಿತ್ರಿಸಿ ತೋರಿಸಿದೆ.

★

ನಾಟಕ ಮತ್ತು ಏಕಾಂಕ ನಾಟಕಗಳ ಭೇದವು ಕಾದಂಬರಿ ಮತ್ತು ಸಣ್ಣ ಕತೆಗಳಿಗಿರುವಂತೆ ವಿಭಿನ್ನವಾಗಿದೆ. ಈ ವಿಧದ ಭೇದವಿರುವುದಾದರೂ ಹಲವರು ಈ ಕಲಾಭೇದವನ್ನು ಧಾರಣೆಗೊಂಡಂತೆ ಕಂಡುಬರುವುದಿಲ್ಲ. ಮನುಜನ ಬಾಳು ಒಂದಾದರೂ, ಆ ಬಾಳುವೆಯು ಹಲವಾರು ಸನ್ನಿವೇಶಗಳಿಂದ ಕೂಡಿರುವುದು. ಅವನ ಬಾಳಿನಲ್ಲಿ ಸುಖದುಃಖ ಶ್ವಾಸೋಚ್ಛ್ವಾಸ, ಸ್ವಪ್ನ, ಸುಷುಪ್ತಿ, ಜಾಗರಾಜಾಗರಗಳು ಸದಾ ಬಿಟ್ಟಿರಲಾರವು. ಅವನು ಮರಣಪರ್ಯಂತ ಪ್ರಪಂಚದ ಬಾಹ್ಯ ವಸ್ತುಗಳೊಡನೆ ಹೋರಾಡುತ್ತಲೇ ಇರುವನು. ಹೋರಾಟದೊಂದಿಗೆ ಪ್ರಕೃತಿಯ ಸಂಪರ್ಕ ಹೊಂದಿ, ಜೀವನವನ್ನು ಸುಖಗೊಳಿಸುವ ಲಾಲಸೆಯಿಂದ ದುಡಿಯುತ್ತಲೇ ಇರುವನು. ನಾಟಕದಲ್ಲಿ ಮನುಷ್ಯನ ವ್ಯಕ್ತಿಗತ ರೂಪವು

ಪ್ರಕೃತಿ ಮತ್ತು ಸಮಾಜಗಳಿಂದ ಸಂ
ಲನಗೊಂಡು ನಮ್ಮೆದುರು ನಿಲ್ಲುತ್ತಿರ
ವುದು.

ಮನುಷ್ಯನು, ಜೀವನದಲ್ಲಿ ಒಮ್ಮೆ
ಉನ್ನತಿ ಮತ್ತೊಮ್ಮೆ ಅವನತಿ, ಸ್ಥಿರತೆ
ಚಂಚಲತೆ ಸುಖಗಳಿಂದ ಕೂಡಿದವನಾಗುತ್ತಿರುವನು.
ದೇಶ, ಕಾಲ, ಪರಿಸ್ಥಿತಿ, ಪ್ರಕೃತಿ ಮತ್ತು ಆವಶ್ಯಕತೆ
ಗಳಿಗೆ ಅನುಗುಣವಾಗಿ ಮನುಷ್ಯನ ಸ್ವಭಾವವುಂಟಾಗು
ತ್ತಿರುವುದು. ಇದು ಮನುಷ್ಯನ ವ್ಯಕ್ತಿತ್ವ, ಇಲ್ಲವೇ ಜೀವಿಯ
ವ್ಯಕ್ತಿತ್ವ. ಮನುಷ್ಯನ ಜೀವನ ವಿಚಾರವನ್ನು ಆಳವಾಗಿ
ವಿವೇಚಿಸಿದರೆ ಈ ವಿಭಿನ್ನತೆಯು ಅಭಿವ್ಯಕ್ತವಾಗುವುದು.
ನಾಟಕಕಾರನು ಇದನ್ನು ವಿವೇಚಿಸಿ, ಯಾ ಅಧ್ಯಯನಗೆಯ್ದು
ಸಮಾಜದೆದುರು ರೂಪಗೊಳ್ಳುವಂತೆ ಮಾಡಿಬಿಡುವನು. ಮಾನ
ವಸಮಾಜದ ವಿಕಾಸವನ್ನು ಇದರಿಂದ ಅವನು ದಿನೇ ದಿನೇ
ಮಾಡಹತ್ತುವನು. ಕಾವ್ಯಗಳೂ, ಕಾದಂಬರಿಗಳೂ ಮಾನ
ವನ ಜೀವನವನ್ನು ಶಬ್ದಗಳ ಮೂಲಕ ಹೃದಯದಲ್ಲಿ ಚಿತ್ರಿಸು
ವಂತೆ ಮಾಡುತ್ತಿರುವವಾದರೂ, ನಟನೆಯ ಮೂಲಕ

ಪ್ರತ್ಯಕ್ಷ ಗೋಚರವಾಗುವಂತೆ ಮಾಡುವವು ನಾಟಕಗಳೇ. ನಾಟಕಗಳಿಗೆ ಈ ಕಾರಣದಿಂದ "ರೂಪಕ"ವೆಂಬ ನಾಮಕರಣವುಂಟಾಗಿದೆ. ರೂಪುಗೊಂಡು ಕಣ್ಣಮುಂದೆ ತೋರುವವಾದಕಾರಣ "ರೂಪಕ"ವೆಂದಿತ್ತ ನಾಮಕರಣವು ಅನ್ವರ್ಥವಿದೆ.

ನಾಟಕಗಳ ಸಾರ್ಥಕತೆಯು ಅಂತರ್ದ್ವಂದ್ವತೆಯಲ್ಲಿದೆ. ಅಂತರ್ವಿರೋಧವು ತೋರದೆ ಉಚ್ಚ ಶ್ರೇಣಿಯ ನಾಟಕವೆನಿಸದು. ಅಂತರ್ವಿರೋಧವೇ ಬಾಹ್ಯದ್ವಂದ್ವ ಜಗತ್ತನ್ನು ತೋರುತ್ತಿದೆ. ಬಾಹ್ಯ ದ್ವಂದ್ವವು ಕಾಲಕ್ರಮದಿಂದ ಮುಂದೆ ಅವಸಾನಗೊಳ್ಳುತ್ತಿರುವುದು. ಈ ಕಾರ್ಯವು ನಾಟಕಕಾರನ ಉದ್ದೇಶವನ್ನು ಕೊನೆಮುಟ್ಟಿಸಿ ಬಿಡುವುದು. ಜೀವನದ ದೊಡ್ಡ ಘಟನೆಯನ್ನು ನಾಟಕಕಾರನು ಪ್ರತ್ಯಕ್ಷವಾಗಿ ನಾಟಕದಲ್ಲಿ ಕಾಣುವಂತೆ ಮಾಡಿಬಿಡುವನು. ಅದರಲ್ಲಿ ಬಳಸಿರುವ ಸಂವಾದ ಮತ್ತು ವಾತಾವರಣವು ಆ ನಾಟಕವನ್ನು ಪರಿಪೋಷಿಸಿಬಿಡುವುದು.

ಏಕಾಂಕ ನಾಟಕಗಳಲ್ಲಿ ಜೀವನದ ಒಂದು ಅಂಶ,— ಜೀವನದ ಒಂದು ಪರಿವರ್ತನೆಯ ಕ್ಷಣಕಾಲ, ಮಾತ್ರ ಕಂಡು ಬರುತ್ತಿರುವುದು. ಈ ಚಿತ್ರಣವು ಒಂದು ದಿನದಲ್ಲಿ, ಒಂದು ಘಂಟೆಯ ಹೊತ್ತಿನಲ್ಲಿ ಹೊಳೆಹೊಳೆವ ಮೋಡ, ಮರುಕ್ಷಣದಲ್ಲಿ ಮಿಂಚುತ್ತಿರುವ ಮಿಂಚು, ಅದರೊಂದಿಗೆ ಬೀಳುವ ಮಳೆಹನಿ, ಇನ್ನದೊಮ್ಮೆ ಕೇಳುವ ಗುಡುಗುಗಳಂತೆಯೂ ವಸಂತಕಾಲದಲ್ಲಿ ಅರಳಿ ಅದೊಮ್ಮೆ ಮುಗಮುಗಿಸುವ, ಮತ್ತದೊಮ್ಮೆ ತುಂಬಿಯ ಎರಗುವಿಕೆಗೆ ಬೆಂಡಾಗುವ, ಬೆಂಗದಿರನ ತಾಪಕ್ಕೆ ಸೊರಗುವ, ಕ್ಷಣ ಹೊತ್ತಿನಲ್ಲಿ ನಾರಿಯ ಕೈಗೆ ಬೀಳುವ, ಇನ್ನದೊಮ್ಮೆ ಮಾಲೆಯಾಗುವ, ನಾರಿಯ ಮುಡಿಗೆ ಸೇರುವ, ಮುಡಿಯೊಂದಿಗೆ ಸೇರಿ ರಂಜನೆಗೊಳ್ಳುವ, ರಂಜನೆಗೊಂಡು ಇನಿಯನೊಡಗೂಡುವ ಮತ್ತೆ ಅದೇ ಹೊತ್ತಿನಲ್ಲಿ ಮುದುಡಿ ನುಚ್ಚುನೂರಾಗುವ ಒಂದೊಂದು ಅಂಶಚಿತ್ರವಾಗಿರುವುದು.

ಕಾದಂಬರಿಗಳಲ್ಲಿ ಅಧ್ಯಾಯಕ್ಕಿರುವ ಮಹತ್ವವೇ ನಾಟಕಗಳೆಡೆಯಲ್ಲಿ ಏಕಾಂಕಗಳಿಗಿರುವ ಮಹತ್ವವಾಗಿದೆ. ಮರಗಳಿಗೆ ಕೊಂಬೆಗೊಡುವ ಶೋಭೆಯೇ ನಾಟಕಗಳಿಗೆ ಏಕಾಂಕವು ಕೊಡುವ ಶೋಭೆ. ನದಿಗಳಿಗೆ ಉಪನದಿಗಳು ಕೊಡುವ ಪುಷ್ಟಿಯಂತೆ ಜೀವನದಲ್ಲಿ ಏಕಾಂಕಗಳು ಪುಷ್ಟಿಯನ್ನು ಕೊಡುವವು.

ದೀರ್ಘ ನಾಟಕಕಾರನು ಅಶೋಕನನ್ನು ಅಹಿಂಸಾವಾದಿಯಾಗಿ ತೋರಿಸಲು ಅವನ ಜೀವನದ ಪೂರ್ವ ಸ್ವಭಾವ, ಆ ಕಾಲದ ರಾಜನೀತಿ, ಪ್ರಜೆಗಳ ಅವಸ್ಥೆ, ಕಲಿಂಗದ ಯುದ್ಧ. ಹಿಂಸೆಯ ಉಗ್ರತೆ, ದೇಶಕಾಲದ ಸ್ಥಿತಿಗತಿಗಳನ್ನು ತೋರದುಳಿಯನು. ಆದರೆ ಏಕಾಂಕ ನಾಟಕ ಕರ್ತೃವು ಕಲಿಂಗ ರಣಭೂಮಿಯ ಚಿತ್ರವನ್ನು ತೋರಿಸಿ ಅಶೋಕನ ಸ್ವಭಾವ ಪರಿವರ್ತನೆಯ ಮತ್ತು ಭಾರತದ ಭಾವೀ ಕಲ್ಯಾಣದ ಅಹಿಂಸೆಯನ್ನು ಎಚ್ಚರಗೊಳ್ಳುವಂತೆ ಮಾಡಿಬಿಡುವನು. ಏಕಾಂಕ ನಾಟಕ ಲೇಖಕನು ಯುಧಿಷ್ಠಿರನಂತೆ ಯುದ್ಧವಿಚಾರದಲ್ಲಿ ಮಗ್ನನಾಗನು. ದುರ್ಯೋಧನನಂತೆ ಹಲವರನ್ನು ಕೂಡಿ ತಂತ್ರ ಜಾಲದಲ್ಲಿಳಿಯಲಾರನು. ಅವನು ಅರ್ಜುನನಂತೆ ಲಕ್ಷ್ಯಸಿದ್ಧಿಯ ಕಡೆಗೆ ಕಣ್ಣಿಡುವನು. ಅವನ ಕಣ್ಣೆದುರು ಜೀವನದ ಬದಲಾವಣೆ, ತಿರುಗುವಿಕೆ, ಪರಿವರ್ತನೆ, ಅವುಗಳೊಂದು ನೆಗೆತಗಳು ಮಾತ್ರ ಕಂಡುಬರುವವು. ಅವನಿಗೆ ಯುಗಕಾಲದ ಜೀವನದ ಸಂಬಂಧದ ಅಗತ್ಯತೆಯಿಲ್ಲ. ಗಿಡಬಳ್ಳಿಗಳ ಅಂಕುರವನ್ನು ನೋಡಲಾರನು. ಮುಗುಳುಗಳ ಗೊಂಚಲನ್ನೂ ಹುಡುಕಲಾರನು. ಜೀವನದಲ್ಲಿ ಒದಗಿದ ಒಂದು ದಿನದ, ಕೆಲವು ಗಂಟೆಗಳ, ಕೆಲವು ಕ್ಷಣ ಹೃದಯದಲ್ಲಿ ಉಂಟಾದ ಮನೋತರಂಗಗಳ ನೆಗೆತವನ್ನು ತೋರಿಗೊಡಲು ಹೊರಡುವನು.

ಏಕಾಂಕ ನಾಟಕವು ವಸ್ತು ಪ್ರದರ್ಶನಾಲಯದ ಪ್ರತಿ ವಸ್ತುಗಳ ಸನ್ನಿವೇಶದಂತಿದ್ದು ಅದಕ್ಕೆ ಮಹತ್ವವೂ ಅಸ್ತಿತ್ವವೂ ಜೀವನದಲ್ಲಿ ಇದ್ದೇ ಇದೆ. ಏಕಾಂಕ ನಾಟಕದ ರಚನೆಯು ದೊಡ್ಡ ನಾಟಕ ರಚನೆಯಂತೆ ಸುಲಭ ಸಾಧ್ಯವಲ್ಲ. ಅದರ ಕಲೆಯು ಸಮಾಜದಲ್ಲಿ ಉತ್ಕೃಷ್ಟ ರೀತಿಯಿಂದ ಕಾಣುವಂತೆ ಮಾಡುವುದು ಲೇಖಕನ ಕಲೆ. ಇಂತಹ ಕಲೆಯು ಕನ್ನಡಿಗರ ಏಕಾಂಕಗಳಲ್ಲಿ ಒದಗಬೇಕು. ಇಂದಿನ ಏಕಾಂಕ ನಾಟಕ ಲೇಖಕರು ಇದುವರೆಗೆ ನಡೆದ ಹಾದಿಯಲ್ಲಿ ಈ ತೆರದ ಲಕ್ಷಣದ ಗುರಿಯು ಇನ್ನೂ ಬಂದಿಲ್ಲ. ಹೆಚ್ಚಿನ ಏಕಾಂಕಗಳೂ ಜೀವನದ ಹಲವಾರು ದಿನಗಳ ಘಟನೆಯನ್ನು ಒಂದೆಡೆ ಚಿತ್ರಿಸಿದಂತಿದ್ದು ಏಕಾಂಕ ನಾಟಕಗಳ ಕಲೆಯು ನಮ್ಮ ಪ್ರಪಂಚಕ್ಕಿನ್ನೂ ಒದಗಿಲ್ಲ. ಏಕಾಂಕ ನಾಟಕ ಲೇಖಕರು ಈ ಗೌರವವನ್ನು ಸಂಪಾದಿಸುವುದು ಮುಂದಿನ ಕರ್ತವ್ಯವೆನ್ನುವೆವು.



ತಿಪ್ಪಯ್ಯನವರ ಗಜೇಟ

(ಲೇಖಕರು: ಕೆ. ವಿ. **ಕೃಷ್ಣ ಭಟ್ಟ**, ಬಿ.ಎ.,ಬಿ.ಓ.ಎಲ್.. ಕಾವೇರಿಕಾ

ಶ್ರೀ। ಕೆ. ವಿ. ಕೃಷ್ಣ ಭಟ್ಟರು ಸ್ವಭಾವತಃ ವಿನೋದಿ; ವ್ಯಂಗ್ಯ ಬರೆಹಗ ಅವರ ನಚ್ಚಿನ ವೃತ್ತಿ. ಅವರ ವ್ಯಂಗ್ಯ ಬರೆಹಗಳು ಕೆಲವರ್ಷಗಳ ಹಿಂದೆ 'ಪ್ರಭಾ ದಲ್ಲಿ ಪ್ರಕಟವಾಗಿವೆ; ಜನಪ್ರಿಯವಾಗಿವೆ. ಕಾರಣಾಂತರದಿಂದ ಅವರು ಇತ್ತೀ ಲೇಖನ ವ್ಯವಸಾಯದಿಂದ ದೂರವಾಗಿದ್ದರು. ಅವರ ಮೌನವ್ರತವನ್ನು ಭ ಗೊಳಿಸಿ ಅವರನ್ನು ಪುನಃ ನಮ್ಮ ಓದುಗರ ಮುಂದೆ ಎಳತಂದಿರುವೆವು. ಇಲ್ಲಿ, ' ಯುವ ಗಜೇಟ'ನ ವ್ಯಂಗ್ಯ ಬರೆದಿರುವರು; ಅಚ್ಚಾಗುವ ಅನೇಕ 'ಗಜೇಟ ಗಳಿಗೂ ಅದು ಅನ್ವಯಿಸುತ್ತದೆ.

ಪೀಠಿಕೆ:–ಲೇಖಕರು ಯುದ್ಧಾನಂತರದಲ್ಲಿ ಬರೆಯಲಿಕ್ಕಿರುವ "**ಮಣ್ಣಂಗಟ್ಟೆ**" ಎಂಬ ಕಾದಂಬರಿಯೊಳಗಣ ಒಂದು ಸಣ್ಣ ಪ್ರಕರಣವಿದ

ಕೊಕ್ಕೆಪ್ಪಾಡಿ ತಿಪ್ಪಯ್ಯನವರೆಂದರೆ ನಮ್ಮೂರಿಗೊಂದು ನಡೆಯುವ ಗಜೇಟು (Travelling Gazette) ಇದ್ದ ಹಾಗೆ. ಆಳವಾದ ಅನುಭವದ ಸ್ವಾರಸ್ಯ, ವಿವೇಕಪೂರ್ಣವಾದ ವಿಮರ್ಶೆಯ ಚಾಕಚಕ್ಯ, ರಸವತ್ತಾದ ಶೈಲಿ ಮುಂತಾದ ಅಪೂರ್ವ ವಿಷಯಗಳಿಗೆ ಅನುಪಮ ಭಾಂಡಾಗಾರದಂತಿರುವ ತಿಪ್ಪಯ್ಯನವರ ಗಜೇಟನ್ನು ಒಮ್ಮೆ ಸವಿನೋಡಿದವರು ಮತ್ತೆ ಬಿಡಲಾರರು. ಆದುದರಿಂದ ಸಹೃದಯರಾದ ವಾಚಕರ ಅವಗಾಹನೆಗೋಸ್ಕರ ನಾವು ಬಹಳ ಕಷ್ಟದಿಂದ ಸಂಶೋಧನೆ ನಡೆಸಿ, ಸದರಿ ತಿಪ್ಪಯ್ಯನವರ ಗಜೇಟನ ಒಂದಾನೊಂದು ಬಿಡಿಸಂಚಿಕೆಯನ್ನು ಕಂಡುಹಿಡಿದು ಅದರಲ್ಲಿಯ ಸಾರವತ್ತಾದ ವಿಷಯಗಳನ್ನು ಸಂಗ್ರಹಿಸಿ ಈ ಮೂಲಕ ಪ್ರಕಟಿಸಿರುತ್ತೇವೆ. ತಿಪ್ಪಯ್ಯನವರಿಂದ ಬರೆಯಲಾಗಿರುವ ವಿಷಯಗಳು ಬೇರೆಯೆಡೆಗಳಲ್ಲಿ ಎಷ್ಟನ್ನಾದರೂ ದೊರಕಲಾರವು ಎಂಬ ದೃಢವಿಶ್ವಾಸದಿಂದಲೇ ನಾವು ಇದನ್ನು ಇಂತಹ ಕಾಗದದ ತುಟಾಗ್ರತೆಯ ಕಾಲದಲ್ಲಿ ಕೂಡಾ ಹೀಗೆ ಬಹಿರಂಗವಾಗಿ ಪ್ರಕಟಿಸುವ ಸಾಹಸವನ್ನು ಕೈಕೊಂಡುದಾಗಿದೆ. ಇಲ್ಲಿಂದ ಮುಂದೆ ತಿಪ್ಪಯ್ಯನವರ ಗಜೇಟನ ಯಥಾಪ್ರತಿ ನಕಲು: —

"ಶ್ರೀ ಗಣೇಶಾಯ ನಮಃ ॥ ಕೊಕ್ಕೆಪ್ಪಾಡಿ ತಿಪ್ಪಯ್ಯನವರ ಗಜೇಟಿಗೆ ನಿರ್ವಿಘ್ನಮಸ್ತು ॥ ಶುಭಮಸ್ತು ಎಂದರೆ ಮಸ್ತು ಶುಭವಾಗಲಿ ಎಂಬ ತಾತ್ಪರ್ಯ॥ ಸನ್. ೧೯೪೪ನೇ ಇಸವಿಯ ಜನವರಿಯಲು ತಾ-ಅಯಿದಿರಲು, ಕೊಕ್ಕೆಪ್ಪಾ ತಿಪ್ಪಯ್ಯನವರು ಪ್ರಮಾಣ ಪೂರ್ವಕವಾಗಿ ಸಂಗ್ರಹಿಸಿ ಗಜೇಟನ ವಿವರವೆಂತೆಂದರೆ,—ಈ ತಿಪ್ಪಯ್ಯನವರ ಗಜೇ ನಲ್ಲಿ ಬರೆಯಲಾಗಿರುವ ಯಾವ ವಿಷಯಕ್ಕೂ ತಿಪ್ಪಯ ನವರು ಸ್ವಂತ ಜವಾಬುದಾರರಲ್ಲಾ ಎಂಬ ಸಂಗತಿಯನ ಸರ್ವರೂ ತಿಳಿದಿರತಕ್ಕದು. ಹಿಂದೆ ಪ್ರಕಟವಾದ ಯಾ ಗಜೇಟೂ ಇದಕ್ಕೆ ಸಮಾನವಲ್ಲ. ಆದುದರಿಂದಲೇ ಇದಕ "ತಿಪ್ಪಯ್ಯನವರ ಗಜೇಟು" ಎಂಬ ಪ್ರಸಿದ್ಧಿಯು ಬರತಕ್ಕದ ಯೋಗ್ಯವಾಗಿಯೇ ಇದೆ. ಈ ಗಜೇಟನಲ್ಲಿ ಪ್ರಯೋಜ ವಿಲ್ಲದ ಸುಳ್ಳುವಾರ್ತೆಗಳಿಗೆಡೆಯಿಲ್ಲ. ಎಲ್ಲಾ ವಿಷಯಗಳನ್ ತಿಪ್ಪಯ್ಯನವರು ತಮ್ಮ ಸ್ವಂತ ಕಚೇರಿಯಲ್ಲಿಯೇ ಮೊದಲ ಗಿಯೇ ಪರಿಶೋಧಿಸಿ ತಿದ್ದುವುದರಿಂದ,—ಸುಳ್ಳು ಸುದ್ದಿಗಳ ಈ ಗಜೇಟನಲ್ಲಿ ಪ್ರಕಟವಾಗಲು ಎಳ್ಳಷ್ಟಾದರೂ ಎಡೆಯ ಗದು. ಸುಳ್ಳನ್ನಾದರೂ ಸತ್ಯವಾಗಿ ನಂಬುವಂತೆ ವಣಿ ಸುವ ಸಾಮರ್ಥ್ಯವು ತಿಪ್ಪಯ್ಯನವರ 'ಕಂಠಕ್ಕೆ' ಇದೆಯೆಂಬ ದನ್ನು ಯಾರೂ ಮರೆಯಲಾಗದು. ಎಂಬಲ್ಲಿಗೆ "ವಾಚಕರಿ ತಿಪ್ಪಯ್ಯನವರ ಹಿತೋಕ್ತಿ"ಯೆಂಬ ಪ್ರಥಮಾಧ್ಯಾಯ ಸಂಪೂರ್ಣ. ಇನ್ನು ತಿಪ್ಪಯ್ಯನವರ 'ಅನುಭವ ತರಂಗಿಣಿ ಯೆಂಬ ದ್ವಿತೀಯಾಧ್ಯಾಯವು ಎಂತೆಂತೆಂದರೆ,—ಈ ನಡೆಯುತ್ತಿರುವುದು ಕಲಿಯುಗವೆಂದೇ ಹಲವರ ನಂಬು ಯುಂಟು. ಆದರೆ, ಇದು ಎಷ್ಟನ್ನಾದರೂ ಕಲಿಯುಗವ ಅಲ್ಲ; ಕಲಿವಯುಗವೂ ಅಲ್ಲ, ಕೇವಲ 'ನಕಲಿ' ಯು

ವೆಂದೇ ತಿಪ್ಪಯ್ಯನವರ ಗಜೇಟಿನ ಕಚೇರಿಯ ನಿಶ್ಚಿತಾಭಿಪ್ರಾಯ. ನಕಲು ಮಾಡುವವರನ್ನು ಕೂಡಾ ಒಂದಲ್ಲ ಒಂದು ವಿಧದಲ್ಲಿ ನಕಲಿ ಮಾಡುವುದರಲ್ಲಿ ತಿಪ್ಪಯ್ಯನವರು ಪಳಗಿದ ಕೈಯೆಂಬುದು ಸರ್ವಶ್ರುತ. ಪುರಾಣಗಳಲ್ಲೆಲ್ಲಾ ಅಜ್ಜೀ ಪುರಾಣವೇ ಮೇಲು; ಏಕೆಂದರೆ ಅಜ್ಜೀ ಪುರಾಣಕ್ಕೆ ಅಜ್ಜಿಯೂ ಇಲ್ಲ, ಅಜ್ಜನೂ ಇಲ್ಲ. ಆದುದರಿಂದ ಅದು ಅನಾದಿ ಅನಂತ. "ವಿದ್ಯೆ ಕಲಿತವನೂ ಉಣ್ಣುತ್ತಾನೆ, ವಿದ್ಯೆ ಕಲಿಯದವನೂ ಉಣ್ಣುತ್ತಾನೆ. ಸುಮ್ಮನೆ ವಿದ್ಯೆ ಕಲಿತು ತಲೆ ಹಾಳು ಮಾಡಿಕೊಳ್ಳುವುದೇಕೆ?" ಎಂಬುದಾಗಿ ಅಜ್ಜಿಯ ಪ್ರಶ್ನೆ ಮೊಮ್ಮಗನಿಗೆ. "ಎಮ್ಮೆಯೂ ಜೀವ ಹೋದರೆ ಸಾಯುತ್ತದೆ; ನೀವೂ ಜೀವ ಹೋದರೆ ಸಾಯುವಿರಿ. ಹೀಗಿರುವಾಗ ನೀವೇಕೆ ಮನುಷ್ಯರಂತೆ ಕಷ್ಟಪಟ್ಟು ಬದುಕಲಿಕ್ಕೆ ಬಯಸುವುದು?" ಎಂದು ಆ ಅಜ್ಜಿಗೆ ತಿಪ್ಪಯ್ಯನವರ ಪ್ರಶ್ನೋತ್ತರ. "ನಾನು ಹೇಳಿದ್ದೇ ಕೊನೆಯ ಸಿದ್ಧಾಂತ" ಎಂದು ಅಜ್ಜಿಗೆ ಸ್ವಯಂ ಸಮಾಧಾನವು! ಹಾಗಾದರೆ ಹೀಗೆ, ಹೀಗಾದರೆ ಹಾಗೆ; ಹಾಗೂ ಹೀಗೂ ಆದರೆ ಹೇಗೆ? ಹೇಗಾದರೂ ಹಾಗೆಯೇ! ಕೇಳಿದರೆ ಸುದ್ದಿ, ಹೇಳಿದರೆ ಬುದ್ಧಿ, ಮಾಡಿದರೆ ಮಾತ್ರ ಪ್ರಸಿದ್ಧಿ. ತನ್ನ ತಪ್ಪು ತನಗೇ ತಿಳಿದಾಗ ಮಾತ್ರ ಮನುಷ್ಯನಿಗೆ ತನ್ನತಾನನ ಆಗುವುದಂತೆ! ಎಲ್ಲಿಯಾದರೂ ಸರಿ, ಸಾಧಿಸಿದರೆ ಸಬಳ ನುಂಗಬಹುದು. ದಾನಗಳಲ್ಲೆಲ್ಲಾ ಮೈದಾನವೇ (ಮಂಗಳೂರು ಮೈದಾನವಲ್ಲ!) ಶ್ರೇಷ್ಠ! ಮಾನ ಹೋದರೆ ಬರುವುದು ವಿಮಾನವೇ? ಉಂಬಳಿ ಕೊಟ್ಟರೂ ಕಂಬಳಿಯ ಉಣ್ಣೆಯು ಪಟ್ಟೆಯಾದೀತೇ? ಸಿಕ್ಕಿ ಬಿದ್ದವ ಕಳ್ಳ, ತಪ್ಪಿಸಿಕೊಂಡವ ಸುಭಗ. ಮಾಡಿದ್ದುಣ್ಣುವ ಮಾರಾಯನು ಬೇಡದ್ದನ್ನೂ ಉಣ್ಣುತ್ತಾನಂತೆ. ಇತ್ಯಾದಿ ಇತ್ಯಾದಿಯೆಂಬಲ್ಲಿಗೆ ತಿಪ್ಪಯ್ಯನವರ ಗಜೇಟಿನ ದ್ವಿತೀಯಾಧ್ಯಾಯವು ಮುಗಿದುದು. ಇಲ್ಲಿಂದ ಮುಂದೆ ತೃತೀಯಾಧ್ಯಾಯದಲ್ಲಿ "ನೆನಪು" ಎಂಬ ಪ್ರಬಂಧ ಬರೆಯುವುದಕ್ಕೆ ಶುಭಮಸ್ತು. "ನೆನಪು" ಸರ್ವಸಾಧಾರಣವಾಗಿ ಎಲ್ಲರಿಗೂ ಇದ್ದರೂ, ಎಲ್ಲರ ನೆನಪೂ ಒಂದೇ ತರದ್ದಲ್ಲ. ಕೆಲವಂಗೆ ಬಹಳ ಹಳೇಕಾಲದ ಸಂಗತಿಗಳ ನೆನಪು ಇರುವಾಗ ಅದರೊಂದಿಗೆ ಇತ್ತೀಚೆಗಿನ ಸಂಗತಿಗಳೊಂದೂ ನೆನಪಿರುವುದಿಲ್ಲವಂತೆ. ಕೆಲವರಿಗೆ ಬೇರೆಯವರಿಗೆ ಸಂಬಂಧಿಸಿದ ಸಂಗತಿಗಳೆಷ್ಟೋ ನೆನಪಿದ್ದರೂ, ತಮ್ಮ ಸಂಗತಿಗಳೊಂದೂ ನೆನಪಿನಲ್ಲಿರುವುದಿಲ್ಲವಂತೆ. ಇನ್ನು ಕೆಲವರಿಗೆ ತಾವು ಎರಡನೆಯವರಿಂದ ತೆಗೆದುಕೊಂಡುದನ್ನು ಹಿಂತಿರುಗಿ ಕೊಡುವ ನೆನಪುಳಿಯದಿದ್ದರೂ, ಎರಡನೆಯವರಿಗೆ ಕೊಟ್ಟುದನ್ನು ಹಿಂತಿರುಗಿ ತೆಗೆದು ಕೊಳ್ಳುವ ನೆನಪಿರುತ್ತದಂತೆ! ಕೋರ್ಟಿನಲ್ಲಿ ಸಾಕ್ಷೀ ಹೇಳುವವರಿಗಿರುವ ನೆನಪಿನ ಶಕ್ತಿಯು ಬಹಳ ವಿಚಿತ್ರತರದ್ದಿದೆಯೆಂದು ಕೇಳುತ್ತೇವೆ. 'ನೆನಪಿನಲ್ಲಿಡತಕ್ಕ ವಿಷಯಗಳನ್ನು' ಕೆಲವರು ನೆನಪಿಗಾಗಿ ಬರೆದಿಟ್ಟುಕೊಳ್ಳುವ ಪದ್ಧತಿಯುಂಟಷ್ಟೆ; ಹಾಗೆ ಬರೆದು ಇಟ್ಟುಕೊಂಡದ್ದನ್ನೇ ನೋಡಿಕೊಳ್ಳುವುದಕ್ಕೇ ನೆನಪಾಗದಿದ್ದವರೂ ಹಲವರು ಇರುತ್ತಾರಂತೆ, ಎಂಬಲ್ಲಿಗೆ ತಿಪ್ಪಯ್ಯನವರ ಗಜೇಟಿನಲ್ಲಿ "ನೆನಪು" ಎಂಬ ಪ್ರಬಂಧವಾಗಿದ್ದು ತೃತೀಯ ಅಧ್ಯಾಯವು ಸಂಪೂರ್ಣ. ಇಲ್ಲಿಂದತ್ತ ಚತುರ್ಥಾಧ್ಯಾಯವೆನಿಸಿದ, ತಿಪ್ಪಯ್ಯನವರ ಗಜೇಟಿನೊಳಗಣ ವಿವಿಧ ವಿಷಯ ಸಂಗ್ರಹವೆಂಬ ವಿಶ್ವಕೋಶದ "ಸ್ಯಾಂಪಲಿ" (Sample)ನ ಕ್ರಮವೆಂತೆಂದರೆ, (೧) ಯುದ್ಧ ಮುಗಿದ ಬಳಿಕ ಮತ್ತೊಂದು ಯುದ್ಧವಾಗುವ ತನಕ ಶಾಂತಿಯು ನೆಲೆಗೊಳ್ಳುವುದರಲ್ಲಿ ಏನೂ ಸಂದೇಹವಿಲ್ಲ ಎಂಬ ಹೊಸ ವಾರ್ತೆಯೊಂದು ಈಗ ತಾನೇ ವಿದೇಶವೊಂದರಿಂದ ಬಂದು ಮುಟ್ಟಿದೆಯಂತೆ. (೨) ಸಾಯದೆ ಇರಬಯಸುವವರು ಹುಟ್ಟದೆ ಇರಬೇಕೆಂದು ತಿಪ್ಪಯ್ಯನವರ ಗಜೇಟಿನ ಕಚೇರಿಯಲ್ಲಿ ಸರ್ವಾನುಮತದಿಂದ ತೀರ್ಮಾನವಾಗಿದೆಯೆಂದೊಂದು ಗಾಳಿ ಸುದ್ದಿ ಹಬ್ಬಿದೆ. (೩) ಇದ್ದದ್ದೆಲ್ಲಾ ಹೋಗುವಾಗ ಇಲ್ಲದಿದ್ದದ್ದೂ ಅದರ ಸಂಗಡವೇ ಹೋಗಿ ಬಿಡುತ್ತದೆ ಎಂಬ ಸಮಾಧಾನವಾಗುತ್ತದಂತೆ. (೪) ಬಿಳೀ ಕೊಡೆಯಡಿಯ ನೆಳಲೂ ಕಪ್ಪೇ ಆಗಿದೆಯೆಂದು ಒಬ್ಬರು ಆಶ್ಚರ್ಯಪಟ್ಟರಂತೆ. (೫) ಎಲ್ಲೆಡೆಗಳಲ್ಲಿಯೂ ಯಾವಾಗಲೂ 'ಬಿಸಿ ಬಿಸಿ' ಯಾಗಿ ಸಿಕ್ಕುವ ಪದಾರ್ಥವು ಬೆಂಕಿಯೊಂದೇ ಎಂಬುದನ್ನು ಪೌರ್ವಾತ್ಯ ವೈಜ್ಞಾನಿಕರೊಬ್ಬರು ಕಂಡು ಹಿಡಿದಿರುವರಂತೆ! ಇತ್ಯಾದಿ ಇತ್ಯಾದಿ. ಎಂಬಲ್ಲಿಗೆ ತಿಪ್ಪಯ್ಯನವರ ಗಜೇಟಿನ ಚತುರ್ಥಾಧ್ಯಾಯವು ಮುಗಿದುದು. ಇನ್ನು ಈ ಕಾಲದಲ್ಲಿ ಎಲ್ಲಾ ವಸ್ತುಗಳಿಗೆ 'ಕಂಟ್ರೋಲು' ಆಗಿರುವಂತೆ ಬರೆಹಕ್ಕೂ ಕಂಟ್ರೋಲಾಗಬಹುದೆಂಬ ಸುದ್ದಿಯಿರುವುದರಿಂದ, ಇನ್ನು ಮುಂದೆ ತಿಪ್ಪಯ್ಯನವರ ಗಜೇಟನ್ನು ಆದಷ್ಟು ಸಂಕ್ಷೇಪಿಸಿ ಅನುಕೂಲ ವಾರಗಳಲ್ಲಿ ಅನುಕೂಲವಾದರೆ ಮಾತ್ರ ಬರೆಯಲು ಸಂಕಲ್ಪಿಸಿರುವುದರಿಂದ, ವಾಚಕರು ಅಲ್ಲಿಯವರೆಗೆ ಕ್ಷಮೆಯಿಂದ ಕಾದಿರಬೇಕಾಗುವುದೆಂಬ ವಿಷಯವನ್ನು ನಿರೂಪಿಸಲು ಬಯಸುತ್ತೇವೆ—ಎಂಬಲ್ಲಿಗೆ ಕೊಕ್ಕೆಪ್ಪಾಡಿ ತಿಪ್ಪಯ್ಯನವರು ಬಹು ಸಾಹಸಪಟ್ಟು ಬರೆದು ಮುಗಿಸಿದ ಗಜೇಟಿಗೆ ಮಂಗಳಂ ಮಹಾ ॥

(ತಿಪ್ಪಯ್ಯನವರ ಗಜೇಟಿನ ಒಂದು ಸಂಚಿಕೆಯನ್ನು ಮಾತ್ರ 'ಸ್ಯಾಂಪಲಿ'ಗಾಗಿ ನಾವು ಇಲ್ಲಿ ಸಂಗ್ರಹಿಸಿ ಕೊಟ್ಟುದಾಗಿದೆ. ಹೆಚ್ಚಿನ ಸಂಚಿಕೆಗಳನ್ನು ಓದಲಪೇಕ್ಷಿಸುವವರು ಇನ್ನು ಹಲವು ಕಾಲ ತಾಳ್ಮೆಯಿಂದ ಕಾದಿರಬೇಕಾಗುವುದೆಂಬುದನ್ನು ತಿಳಿಸಲು ನಾವೂ ವ್ಯಸನಪಡುತ್ತೇವೆ— ಇತಿ ಸಂ—ಕೆ. ವಿ. ಕೃ. ಭ.)



ಅಶೋಕ ಕುಮಾರ್, ''ಚಲ್‌ಚಲ್ರೇ ನವ್‌ಜವಾನ್'' ಚಿತ್ರದಲ್ಲಿ, ನಾಸೀಮ್‌ಳ
ರೂಪರಾಶಿಯ ಮುಂದೆ ತಟಸ್ಥನಾಗಿರುವನು.



ರೂಪರಾಣಿ ನಾಸೀಮ್, ಫಿಲ್ಮಿಸ್ತಾನದವರ 'ಚಲ್‌ಚಲ್ರೇ ನವ್ ಜವಾನ್' ಚಿತ್ರದಲ್ಲಿ,
ತರುಣರಿಗೆ ಪ್ರೇರಕಶಕ್ತಿಯಾಗುತ್ತಾಳೆ.



★ ಸಮಯದ ಬೆಲೆ ★

(ಲೇಖಕರು: ಶ್ರೀ ಬಿ. ರಾಮಕೃಷ್ಣಾಚಾರ್, ಬಿ. ಎ., ವಿದ್ವಾನ್.)

★

ಸಮಯಕ್ಕೆ ಮೌಲ್ಯ ನಿರ್ಣಯಿಸುವುದು ಯಾರಿಂದಲೂ ಸಾಧ್ಯವಿಲ್ಲ— ಎಂಬುದನ್ನು ಈ ಲೇಖ ಸರಳ ಶೈಲಿಯಲ್ಲಿ ವಿವರಿಸುತ್ತಾರೆ. ಸಮಯವು ಅಮೌಲ್ಯವೆಂಬುದನ್ನು ಸಾಮಾನ್ಯ ಎಲ್ಲರೂ ವರಾದರೂ ತಮ್ಮ ನಿತ್ಯ ವ್ಯವಹಾರದಲ್ಲಿ ಅದನ್ನು ಮರೆತಿರುತ್ತಾರೆ. ಇಂತಹ ಲೇಖಗಳು ಮರೆವವರಿಗೆ ಎಚ್ಚರ ರೂಪದಲ್ಲಿವೆ.

ಭಗವಂತನ ಅನಂತ ಸೃಷ್ಟಿಯಲ್ಲಿ ಬೆಲೆಯಿಲ್ಲದ ವಸ್ತು ಯಾವುದೂ ಇಲ್ಲ. ಕಾಲನ ಕೈವಾಡದಿಂದ ಕಸಕಡ್ಡಿಗೂ ಕಾಸು ಬೆಲೆ ಹುಟ್ಟುವುದು. ಯಾವ ಅಲ್ಪ ವಸ್ತುವನ್ನೇ ಆಗಲಿ ನಿರರ್ಥಕವೆಂದು ಕಡೆಗಣಿಸಲು ಬರುವುದಿಲ್ಲ. ನಮ್ಮ ಕಣ್ಣೆದುರಲ್ಲಿ ಬಿದ್ದಿರುವ, ನಾವು ಎಂದೂ ಗಮನಕ್ಕೆ ತಾರದ ಕಸಕಡ್ಡಿಯೂ ಒಂದು ಸಂದರ್ಭದಲ್ಲಿ ನಮಗೆ ಅನಿವಾರ್ಯವಾಗುವುದು. ಅದು ಕೈಗೆ ಎಟಕದಿದ್ದರೆ ಅಗತ್ಯವುಳ್ಳ ಕೆಲಸ ಕೆಟ್ಟು ಹೋಗುವುದು. ಒಂದು ಸಲ ಅದರ ಉಪಯೋಗವನ್ನು ತಿಳಿಯದೆ ಸಿಕ್ಕಿದ ಸಂದರ್ಭವನ್ನು ಕಳೆದುಕೊಂಡ ಮೇಲೆ ನಾವು ಪರಿತಪಿಸುವುದುಂಟು.

ಎಲ್ಲಾ ವಸ್ತುಗಳಿಗೂ ಬೆಲೆಯಿದೆ. ಹಾಗಾದರೆ, ಸಮಯವನ್ನೂ ಬೆಲೆಕೊಟ್ಟು ಪಡೆಯಬಹುದೆ? ಅದಕ್ಕೆ ಬೆಲೆ ಕಟ್ಟುವುದು ಹೇಗೆ? ಎಂದು ಯಾರಾದರೂ ಕೇಳಬಹುದು.

ಸಮಯಕ್ಕೆ ಬೆಲೆ ಇದೆ. ರೂಪಾಯಿ ಆಣೆ ಪೈಯ ಲೆಕ್ಕದಲ್ಲಿ ಅದಕ್ಕೆ ಬೆಲೆಕಟ್ಟುವ ಪ್ರಸಂಗ ಬರುವುದಿದೆ!

ಸಮಯದ ಬೆಲೆಯನ್ನು ಬಲ್ಲವರೇ ಬಲ್ಲರು. ಅದರ ಮರ್ಮವನ್ನು ತಿಳಿಯದೆ, ಮಹತ್ವವನ್ನು ಮರೆತು, ಮಿಂಚಿ ಹೋದ ಮೇಲೆ ಮರುಗುವ ಅನೇಕರನ್ನು ನಾವು ಇಂದೂ ನೋಡಬಹುದು.

ಮನುಷ್ಯನ ಪರಿಮಿತ ಆಯುಸ್ಸಿನಲ್ಲಿ ಅರ್ಧಕಾಲ ನಿದ್ರೆಯಲ್ಲಿ ಕಳೆಯುವುದು. ಕಾಲಂಶಕ್ಕಿಂತಲೂ ಹೆಚ್ಚು ಸಮಯ ಬಾಲ್ಯಾಪ್ಯ ವೃದ್ಧಾಪ್ಯಗಳಲ್ಲಿ ಸಂದುಹೋಗುವುದು. ಇನ್ನು ಉಳಿದ ಅಲ್ಪ ಅವಧಿಯಲ್ಲಿ ಆತನು ಮಾಡಬಹುದಾದ ಕೆಲಸ ವೆಷ್ಟು?

ಆದರೂ ಸಿಕ್ಕಿದ ಅಲ್ಪ ಅವಕಾಶದಲ್ಲಿ ಮನುಷ್ಯನು ಎಷ್ಟೋ ಮಹತ್ವದ ಕೆಲಸ ಮಾಡಲು ಸಮರ್ಥನಾಗಿದ್ದಾನೆ. ಒಬ್ಬೊಬ್ಬ ವೈಜ್ಞಾನಿಕನು ತನ್ನ ಶಕ್ತ್ಯಾನುಸಾರ ಸಿಕ್ಕಿದ ಅಲ್ಪ ಕಾಲದಲ್ಲಿ ಎಂತೆಂತಹ ನೈಸರ್ಗಿಕ ಚಮತ್ಕಾರವನ್ನು ಕಂಡು ಹಿಡಿದು, ತನ್ನ ಸೌಕರ್ಯಕ್ಕಾಗಿ ಬಳಸಿಕೊಂಡಿಲ್ಲ? ಹಲವರು ಹಲವುಕಾಲ ಪರಿಶ್ರಮದಿಂದ ಮಾಡಿರುವ ಶೋಧನೆ ಸಮುದಾಯವು ಇಂದು ನಮ್ಮ ಸುತ್ತಲೂ ಕಾಣುವು ಅದನ್ನು ನಾವು ಅನುಭೋಗಿಸುತ್ತಿದ್ದೇವೆ. ಅಲ್ಪಶಕ್ತಿ ಮಾನವನು ಅನಂತ ನೈಸರ್ಗಿಕ ಶಕ್ತಿಗಳನ್ನು ವಶಗೊ ಪಳಗಿಸಿಕೊಂಡು, ತನ್ನ ಊಳಿಗರ ಆಳಾಗಿ ಮಾಡಿಕೊಳ್ಳ ಸಮರ್ಥನಾಗಿದ್ದಾನೆ. ತಾನೇ ಉತ್ಪಾದನೆ ಮಾಡಿರುವ ನೈಸರ್ಗಿಕ ಶಕ್ತಿಗಳ ದುರುಪಯೋಗದಿಂದ ನಾಶದ ಮಾ ವನ್ನೂ ಅನುಸರಿಸಬೇಕಾಗುತ್ತದೆ!

ಇಂತಹ ಪರಿಶ್ರಮಿಗಳು ಸಮಯವನ್ನು ಪ್ರತ್ಯೇಕಿಸಿ ಕೊಂಡೇ ಹಿಡಿದ ಕೆಲಸವನ್ನು ಪೂರೈಸಲು ಸಮರ್ಥರಾ ಅವರನ್ನೇ ಕೇಳಿರದೆ ಏನೆನ್ನಬಹುದು? ಅವರಿಗೆ ಆ ಕೆಲಸ ಆಸಕ್ತಿಯಿದ್ದ ಕಾರಣ, ತಮ್ಮ ಇತರ ಕೆಲಸದ ನಡುವೆ ಸಮಯ ಒದಗಿಸಿಕೊಂಡು, ಹಿಡಿದ ಕೆಲಸವನ್ನು ಮುಕ್ತಾ ಗೊಳಿಸಿದರು.

ಪ್ರಪಂಚದಲ್ಲಿ ಯಾರನ್ನಾದರೂ ಕೇಳಿದರೆ ಅ ತನಗೆ ಪುರುಸೊತ್ತು ಇಲ್ಲವೆಂದೇ ಹೇಳುವನು. ಇದರ ತ ಏನೇ ಇರಲಿ, ಆತನು ಅವಕಾಶವಿದ್ದು ಅದನ್ನು ಸದು ಯೋಗಪಡಿಸಿಕೊಳ್ಳದೆ ಇದ್ದು, ಕಾಲಹರಣ ಮಾಡಿ ಅನಂ ಕೆಲಸ ಮಾಡಲೇಬೇಕಾಗಿ ಬಂದಾಗ, ಪರಿತಪಿಸಿ 'ಪುರುಸ ಇಲ್ಲ' ಎಂಬ ನೆಪಹೇಳಲು ಬಾಧ್ಯನಾಗುತ್ತಾನೆ! ನಿಜಾ ವನ್ನು ಹೇಳುವುದಾದರೆ ನೈಸರ್ಗಿಕ ನಿಯಮದಂತೆ ಅವ ಸಿಕ್ಕಿದ ಸಮಯದಲ್ಲಿ ಅವನು ತನ್ನ ಕರ್ತವ್ಯವನ್ನು ಮಾಡ ಉದಾಸೀನತೆಯಿಂದಲೊ ಇನ್ನಾವ ಕಾರಣದಿಂದಲೊ ಅ ನಾಗುವುದಲ್ಲದೆ, ಆತನಿಗೆ ಸಮಯ ದೊರೆಯಲಿಲ್ಲವೆಂ ಹೇಳಲಾಗುವುದಿಲ್ಲ! ಅದಕ್ಕೆ ಆತನ ಮಾನಸಿಕ ದೌರ್ಬಲ್ಯ ಕಾರಣ. ಅಥವಾ ಅವನಿಗೆ ನಿರ್ದಿಷ್ಟ ಸಮಯದಲ್ಲಿ ಅ ವುಳ್ಳ ಕೆಲಸ ಪೂರೈಸುವ ತಾಳ್ಮೆಯಿಲ್ಲವೆನ್ನಲೂ ಬಹು ಹರಿದ ಬಟ್ಟೆಯನ್ನು ಸಕಾಲದಲ್ಲಿ ಹೊಲಿದರೆ ಮುಂದೆ ಒಂಭ ಹೊಲಿಗೆ ಉಳಿಯುವುದೆಂಬ ಗಾದೆಯಿದೆ.

ಮಾನವನು ತನಗೆ ಸಿಕ್ಕಿದ ಅಲ್ಪ ಅವಕಾಶವನ್ನು ಪೂರ್ಣ ಉಪಯೋಗಿಸುತ್ತಾನೆಯೆ? ಎಂದು ಪರಿಶೀಲಿಸಿ ನೋಡುವ.

ಜೀವನದ ಹೋರಾಟದಲ್ಲಿ ತೊಡಗಿರುವ ಮನುಷ್ಯನಿಗೆ ಸಮಯವೆಷ್ಟಿದ್ದರೂ ಕಡಮೆಯೆಂದು ಅನುಭವವಾಗುವುದು ಸ್ವಾಭಾವಿಕ. ಏಕೆಂದರೆ ಒಬ್ಬ ಕಾರಖಾನೆಯ ಕೆಲಸಗಾರನು ನಿರ್ದಿಷ್ಟ ಸಮಯದಲ್ಲಿ ನಿಯತವಾದ ಕೆಲಸ ಪೂರೈಸಬೇಕಾಗುತ್ತದೆ. ಆಗ ಒಂದು ಕೆಲಸ ಪೂರ್ಣವಾಗದೆ ಇನ್ನೊಂದು ಕೆಲಸಕ್ಕೆ ಕೈಹಚ್ಚಲು ಬರುವುದಿಲ್ಲ. ಒಂದಕ್ಕಿಂತ ಇನ್ನೊಂದು ಕೆಲಸ ಅತ್ಯಗತ್ಯವಾಗಿ ಬಂದೊದಗಿದರೆ ನಿಜವಾಗಿಯೂ ಆತನಿಗೆ ಸಮಯ ಸಾಲುವುದಿಲ್ಲ. ಆದರೆ ಆ ನಿರ್ದಿಷ್ಟ ಸಮಯವನ್ನು ಅವನು ಹಾಳುಮಾಡಿಕೊಂಡರೆ, ಅದು, ಸ್ವಾಭಾವಿಕವಾಗಿ ಕಡಿಮೆಯಾಗಬೇಕಷ್ಟೆ! ಉದಾಸೀನನಾಗಿ ಇಂದಿನ ಕೆಲಸವನ್ನು ನಾಳೆಗೆ ಮುಂದರಿಸಿದರೆ, ಆತನಿಗೇ ಮರುದಿನ ಅದನ್ನು ಪೂರೈಸಲು ಸಮಯದ ಸಂಕೋಚದಿಂದ ಅಸಾಧ್ಯವಾಗುವುದು. ಆಗ ತಾನೇ ಆತನಿಗೆ ಸಮಯದ ಬೆಲೆ ಗೊತ್ತಾಗುವುದು. ನಿರ್ದಿಷ್ಟ ಸಮಯದಲ್ಲಿ ಅವನು ಕೆಲಸಕ್ಕೆ ಹೋಗದೆ ನಿಂತ ಪಕ್ಷದಲ್ಲಿ ಆತನಿಗೆ ನಿಯತವಾದ ಮಜೂರಿಯು ಕಡಿಮೆ ಮಾಡಲಾಗುವುದು. ಆಗಲೇ ಆತನು ಕಳೆದುಕೊಂಡ ಸಮಯದ ಬೆಲೆ ಮನಸ್ಸಿಗೆ ಬರುವುದು. ನಿಯತ ಸಮಯದಲ್ಲಿ ಮಾಡತಕ್ಕ ಕೆಲಸ ಪೂರೈಸಿದರೆ, ಇನ್ನೂ ಹೆಚ್ಚಿನ ಕೆಲಸಮಾಡಿ ಆ ಹೆಚ್ಚಿನ ಕಾಲದ ಮಜೂರಿಯನ್ನು ಪಡೆಯಲು ಆತನಿಗೆ ಅವಕಾಶವಿದೆ. ಈಗ ನೋಡಿ, ಸಮಯದ ಬೆಲೆ ಎಷ್ಟೆಂದು, ಮುಂದಟ್ಟಾಗುವುದು! ಮನುಷ್ಯನಿಗೆ ಆಕಸ್ಮಿಕ ಜಾಡ್ಯ ಒದಗಿದ ಸಂದರ್ಭದಲ್ಲಿ ಆತನು ಅಶಕ್ತನಾಗುವನು ನಿಜ. ಆದರೆ ದೇಹದಾರ್ಢ್ಯವಿದ್ದು, ಆ ಸಮಯದ ಸದುಪಯೋಗ ಮಾಡಿಕೊಂಡರೆ ಆತನೇ ಲಾಭಪಡೆಯುವನು.

ಸಾಮಾನ್ಯವಾಗಿ ಮನುಷ್ಯನು ತನ್ನ ವಿಶ್ರಾಂತಿಗಾಗಿ ಅಗತ್ಯವುಳ್ಳ ವಿರಾಮಸಮಯವಲ್ಲದೆ, ಹೆಚ್ಚಿನ ಕಾಲಭಾಗವನ್ನು ಉದಾಸೀನತೆಯಿಂದಲೋ ದುರ್ವ್ಯಸನಕ್ಕೆ ಗುರಿಯಾಗಿಯೋ ಕಳೆದುಕೊಳ್ಳುತ್ತಾನೆ. ಆತನಿಗೆ ಹೇರಳ ಸಮಯವಿದ್ದೇ ಇದೆ. ಆದರೆ ಅದನ್ನು ಮನಗಾಣದೆ, ಕಾಲಹರಣ ಮಾಡಿಕೊಂಡು ಪಶ್ಚಾತ್ತಾಪ ಪಡುವುದಿದೆ.

‘ಕಾಲವೂ ನೀರಿನ ಏರಿಳಿತವೂ ಯಾವ ಮನುಷ್ಯನಿಗೂ ಕಾದಿರುವುದಿಲ್ಲ’ ಎಂಬುದೊಂದು ಇಂಗ್ಲಿಷ್ ಗಾದೆಯಿದೆ. ಕಾಲವೂ ನೀರೂ ತನ್ನ ನೈಸರ್ಗಿಕ ನಿಯಮದಂತೆ ನಡೆಯುತ್ತಾ ಇರುವುದು. ಮನುಷ್ಯನು ಮಾತ್ರ ಅದನ್ನು ಅನುಸರಿಸಲು ಶಕ್ತನಾಗದೆ, ವ್ಯರ್ಥ ಕಾಲಕಳೆದು ‘ಸಮಯ ಸಿಗಲಿಲ್ಲ’ ಎಂದು ತಲೆತಪ್ಪಿಸಿಕೊಳ್ಳಲು ಹವಣಿಸುತ್ತಾನೆ. ಯಾರನ್ನೇ ಕೇಳಿ, ತನಗೆ ‘ಈಗ ಪೂರ್ಣ ಅವಕಾಶವಿದೆ’ ಎಂದು ಹೇಳುವವರೇ ವಿರಳ! ಅಂತಹವನೊಬ್ಬನಿದ್ದರೆ ಆತನು ನಿಜವಾಗಿಯೂ ‘ಭಾಗ್ಯಶಾಲಿ’, ‘ಪುಣ್ಯಾತ್ಮ’ ಎನ್ನಬಹುದು. ವೃಥಾ ಕಾಲಹರಣ ಮಾಡದೆ, ಸಕಾಲದಲ್ಲಿ ಕೆಲಸಪೂರೈಸುವವನಿಗೆ ಯಾವ ಎಡರೂ ಇಲ್ಲ. ಅವನು ಎಂತಹ ಮಹತ್ವದ ಕೆಲಸವನ್ನೂ ಪೂರೈಸಲು ಶಕ್ತನಾಗಿಯೇ ಆಗುತ್ತಾನೆ.

ಸಾಮಾನ್ಯ-‘ಪುರುಸೊತ್ತಿಲ್ಲ’ ಎನ್ನುವ ಅಂಟುಜಾಡ್ಯವು ಎಲ್ಲೆಲ್ಲಿಯೂ ಹಬ್ಬಿದೆ! ಮನುಷ್ಯನು ಶಾರೀರಿಕ ಅಲಕ್ಷ್ಯದಿಂದ ದುರ್ಬಲನಾಗುತ್ತಾನೆ. ನಮ್ಮ ಪೂರ್ವಜರ ಶಕ್ತಿ ನಮಗಿಲ್ಲ. ಅವರಂತೆ ನಾವು ನಿಸ್ಪೃಹರಲ್ಲ! ಅವರಲ್ಲಿರದಿದ್ದ ದುರ್ವ್ಯಸನ ನಮ್ಮಲ್ಲಿದೆ. ಅಂತೆಯೇ ಹಿಂದಿನವರು ಶ್ರಮಪಡುವಂತೆ ನಮಗೆ ಸಾಧ್ಯವಿಲ್ಲ. ಹಿರಿಯರು ಅನ್ನಾಹಾರಗಳ ಗೊಡವೆಯಿಲ್ಲದೆ, ಹಿಡಿದ ಕೆಲಸ ಪೂರೈಸುವ ಛಲವುಳ್ಳವರಾಗಿದ್ದರು. ಇಂದು ನಾವಾದರೊ ಅತ್ಯಲ್ಪ ಶ್ರಮದ ಕೆಲಸದ ಮಧ್ಯೆಯೂ ಕಾಫಿಯೋ, ಬೀಡಿ-ಸಿಗರೆಟೋ, ನಸ್ಯಪುಡಿಯೋ, ಇನ್ನಾವ ಹುರುಪುಗೊಳಿಸುವ ಸಾಧನಕ್ಕೋ ಹಾತೊರೆಯುತ್ತೇವೆ. ಅದಿಲ್ಲದಿದ್ದರೆ ಕೆಲಸವೇ ಸಾಗುವುದಿಲ್ಲ! ಅಂತಹ ಪರಿಸ್ಥಿತಿ ನಮ್ಮದಾಗಿದೆ ಇಂದು!!

‘ಪುರುಸೊತ್ತಿಲ್ಲ’ ಎಂಬುದು ಎಲ್ಲಾ ಕಡೆಯಲ್ಲಿಯೂ ಕೇಳುವುದು. ತಿರುಪೆ ಎತ್ತಿ ಜೀವಿಸುವವನಿಂದ ತಿರೆಯಾಳುವವನ ವರೆಗೂ ಇದೇ ಪಾಡು. ಯಾರಿಗೂ ಪುರುಸೊತ್ತಿಲ್ಲ! ಆಫೀಸಿನ ಒಬ್ಬ ಕ್ಲಾರ್ಕನನ್ನು ಕೇಳಿ! ಆತನ ಮೇಜಿನ ಮೇಲೆ ರಿಕಾರ್ಡುಗಳ ರಾಶಿ ಬಿದ್ದಿರುತ್ತದೆ. ದಿನದಿನಕ್ಕೂ ರಾಶಿಯು ಹೇರುತ್ತಾ ಬರುವುದು. ಅವನು ಆಯಾ ದಿನದ ಕೆಲಸ ಪೂರೈಸದೆ ಉದಾಸೀನತೆ ತೋರುವುದರಿಂದ, ಮರುದಿನ ಹೊಸ ಕೆಲಸ ಬಂದು ಬೀಳುವಾಗ ಆತನಿಗೆ ಹಿಂದಿನ ಕೆಲಸಕ್ಕೂ ಅವಕಾಶವಿಲ್ಲದೆ, ಎರಡೂ ಕೆಲಸಗಳೂ ಹಾಳಾಗುವುವು. ಅವನನ್ನು ಕೇಳಿದರೆ ‘ಅಯ್ಯೋ, ಪುರುಸೊತ್ತೇ ಇಲ್ಲ’ ವೆಂದು ನೆಪ ಹೇಳಿಬಿಡುತ್ತಾನೆ. ನಿಜಾಂಶಕ್ಕಾದರೂ ಆತನು ಕಾಫಿ ಹೋಟೇಲಿನಲ್ಲಿಯೋ, ಬೀಡಿಸಿಗರೇಟು ಸೇವನೆಯಲ್ಲಿಯೋ, ಹರಟೆ ಹೊಡೆಯುತ್ತಲೋ ತನ್ನ ಅಮೂಲ್ಯ ಸಮಯ ಕಳೆದುಕೊಳ್ಳುವುದನ್ನು ನೋಡಿದರೆ, ಅತನನ್ನು ನಿರಪರಾಧಿಯೆಂದು ಹೇಗೆ ಹೇಳಬಹುದು? ಅವನಿಗೊಬ್ಬ ಮೇಲ್ವಿಚಾರಕನಿದ್ದು ದಿನಂಪ್ರತಿ ಅವನು ಮಾಡಿದ ಕೆಲಸವನ್ನು ವಿಮರ್ಶಿಸುವವನಿದ್ದರೆ ಅವನು ಹಾಗೆ ಮಾಡಲಾರ. ಆದರೆ ಅಂತಹ ಮೇಲ್ವಿಚಾರಕರೂ ಅದೇ ಮನಸ್ಸಿನವರಾದರೆ ಇನ್ನೂ ಚೆನ್ನಾಯಿತು! ಹೀಗಾಗಿ ಅನೇಕ ವೇಳೆ ಹಲವು ಆಫೀಸುಗಳಲ್ಲಿ ಕೆಲಸ ಸಾಗದೆ, ಅತ್ಯಾವಶ್ಯಕ ಕೆಲಸಗಳು ವಿಲಂಬವಾಗಿ, ಮೇಲಧಿಕಾರಿಗಳ ನೆನಪುಪತ್ರ ಬಂದಾಗ ಕಂಗೆಡುವ ಪ್ರಸಂಗ ಬರುವುದು! ಆತನ ಅಲಕ್ಷ್ಯದಿಂದಾಗಿ ಅನೇಕ ವೇಳೆ ಅರಿಯದ ಹಳ್ಳಿಗರು ಪೇಚಾಡಬೇಕಾಗುವುದು. ಆತನಿಗೆ ಸರಿಯಾಗಿ ಸಮಯ ಸಿಕ್ಕಲಿಲ್ಲ ಎಂದು ಯಾರೂ ಹೇಳಲಾರರು!

ಒಬ್ಬ ಸೇನಾಪತಿಯು ಅವಸರ ಸಿಕ್ಕಿದಾಗ ಶತ್ರುವಿನ ಮೇಲೆ ಹಲ್ಲೆ ಮಾಡಲು ವಿಲಂಬ ಮಾಡಿದರೆ ಅಂದಿನ ಆ ಉದಾಸೀನತೆಯ ಪರಿಣಾಮವು ಆತನಿಗೆ ವಿಷಮವಾಗಿ ಪರಿಣಮಿಸಬಹುದು. ವಾದಿಯು ಪ್ರತಿವಾದಿಯ ವಿರುದ್ಧ ಜಪ್ತು ಇಂಜಂಕ್ಷನ್ ಪಡೆಯಲು ವಿಳಂಬ ಮಾಡಿದರೆ ಆಗುವ ನಷ್ಟವೆಷ್ಟು? ಅಂತಹ ಕೆಲಸಗಳು ನಿಯತ ಸಮಯದಲ್ಲಿಯೇ ಮಾಡತಕ್ಕವು. ಅವಕ್ಕೆ ಅವಕಾಶವಿಲ್ಲ. ನಾಳೆಯೆಂದರೆ ಕೆಟ್ಟೇ ಹೋಗುವುದು!

ಸಮಯದ ದುರುಪಯೋಗ ಪಡಿಸುವವರು 'ಪುರುಸೊತ್ತಿಲ್ಲ' ಎಂಬ ಸೊಲ್ಲನ್ನೇ ಯಾವಾಗಲೂ ಹಾಡುವರು! ಎಂತಹ ದೊಡ್ಡ ಆಫೀಸರನೇ ಆಗಲಿ, ಅವನೂ ಈ ರೋಗಕ್ಕೆ ಬಲಿಯಾಗಿದ್ದಾನೆ. ಅವನು ಅಲ್ಲಸಲ್ಲದ ಹವ್ಯಾಸಗಳಲ್ಲಿ ಸಮಯ ಕಳೆಯುವುದನ್ನು ನೋಡಿದರೆ ಆತನ ನೆಪವು ಸುಳ್ಳೆನಿಸಲಾರದೆ?

ನಮ್ಮ ಈಗಿನ ನಾಗರಿಕತೆಯ ಲಕ್ಷಣ ಹೊಸ ರೀತಿಯಾಗಿದೆ! ಆಫೀಸರರು ಮೇಲ್ವಿಚಾರಕ್ಕಾಗಿ ತಾಲೂಕು ಹಳ್ಳಿಗಳಿಗೆ ಹೋದಾಗ ಅತಿ ತ್ವರೆಯಿಂದ ಅಲ್ಲಿಯ ಕೆಲಸ ಪೂರೈಸದೆ, ಮುಂದಿನ ಅವಸರಕ್ಕೆ ತಳ್ಳಿಬಿಟ್ಟು ಓಡಿ ಹೋಗುತ್ತಾರೆ! ಅವರ ಮುಕ್ಕಾಮು ಒಂದು ದಿನ ಯಾ ಅರ್ಧ ದಿನ! ಆ ಅರ್ಧ ದಿನವಲ್ಲಿ ಅವರ ಊಟ ಪಾಟ, ವಿರಾಮ, ಹರಟೆ ದುರ್ವ್ಯಸನಕ್ಕೆ ಸಮಯ ಕಳೆದು ಮಿಾಸಲಾಗಿ ಉಳಿದ ಸಮಯ ಕೆಲವೇ ಗಂಟೆಗಳು! ಈ ನಡುವೆ ಯಾವ ಕೆಲಸ ಮಾಡಬಹುದು? ಅತಿ ಉಚ್ಚ ಅಧಿಕಾರಿಗಳು ಬಂದರೂ ಇದೇ ರೀತಿ ಅತಿ ಅವಸರದಿಂದ ಕೆಲಸದ ಮಹತ್ವವನ್ನು ಕಡೆಗಣಿಸಿ, ಸಂಚಾರ ಕಾರ್ಯಕ್ರಮವನ್ನು ಒಂದೆರಡು ಗಂಟೆಗಳಲ್ಲಿಯೇ ತೀರಿಸಿ ಬರುತ್ತಾರೆ. ಅತಿ ಅಪೂರ್ವವಾಗಿ ಜಿಲ್ಲೆಗಳನ್ನು ಸಂದರ್ಶಿಸುವ ಮಹನೀಯರೂ ಈ ರೀತಿ ಅವಸರದಿಂದ ಬಂದು ಓಡಿಹೋಗುವುದರಿಂದ ಅವರನ್ನು ನೋಡಲು ಕುತೂಹಲವುಳ್ಳ ಕಾರ್ಯಗೌರವದಿಂದ ಅವರನ್ನು ಕಾಣಲು ತವಕಿಸುವ, ಅನೇಕ ಜನರು ನಿರಾಶರಾಗುವುದಿದೆ.

ಅಧಿಕಾರಿಗಳಂತಿರಲಿ. ನಮ್ಮ ರಾಷ್ಟ್ರೀಯ ಮುಖಂಡರಲ್ಲಿ ಅನೇಕರೂ ಇದೇ ರೀತಿ ಅವಸರದ ಕಾರ್ಯಕ್ರಮ ಇಟ್ಟುಕೊಂಡು, ಒಂದೇ ದಿನದಲ್ಲಿ ನಾಲ್ಕೈದು ಮುಕ್ಕಾಂ ಮಾಡುವುದು ಶೋಚನೀಯವಾಗಿದೆ! ಅವರಿಗೆ ಸಮಯವಿಲ್ಲವೆನ್ನುವಿರಾ? ಆದರೆ, ಅದೇಕೊ ಹೆಚ್ಚು ಸಮಯ ಕೊಟ್ಟರೆ ಅವರ ಗೌರವಕ್ಕೆ ಕುಂದೊದಗಬಹುದೇ? ಎಂದು ಹಳ್ಳಿಗರು ಕೇಳುವುದು ಸ್ವಾಭಾವಿಕ!

ವಿದ್ಯಾರ್ಥಿಗಳ ದಶೆಯು ಇನ್ನೂ ಕಠಿಣ. ಹಣಕೊಟ್ಟು ಶಾಲಾ ಕಾಲೇಜುಗಳಲ್ಲಿ ಕಲಿಯುವ ವಿದ್ಯಾರ್ಥಿಯು ರಜೆದಿನಗಳನ್ನು ವ್ಯರ್ಥವಿನೋದಗಳಲ್ಲಿ ಕಳೆದು, ಪರೀಕ್ಷೆಯು ಸಮಿಾಪಿಸಿದಾಗ ರಾತ್ರಿ, ಹಗಲು ಪರಿಶ್ರಮಪಟ್ಟು ಅನೇಕವೇಳೆ ಅಸಫಲನಾಗುತ್ತಾನೆ. ಅವನಿಗೆ ಸಮಯದ ಬೆಲೆಯ ಅರಿವಿಲ್ಲವೆನ್ನಬೇಕು. ಈಗಿನ ಸಭ್ಯತೆಯ ಹಲವು ಸೌಕರ್ಯ ಸಾಧನೆಗಳಿಂದಲೂ ಹಲವು ವಿಧದ ಆಕರ್ಷಣದಿಂದಲೂ ಅ… ಮನಸ್ಸು ಸ್ಥಿಮಿತದಲ್ಲಿರದೆ, ಹಿರಿಯರು ಕೊಟ್ಟ ಹಣ… ದುರುಪಯೋಗ ಮಾಡಿ, ತಾನು ವಿದ್ಯಾಧ್ಯಯನಕ್ಕಾಗಿ ಬ… ಧ್ಯೇಯವನ್ನು ಮರೆತು, ದುಃಖಕ್ಕೀಡಾಗುವನು. ಕೈಮಿ… ಹೋದ ಮೇಲೆ ಅವನಿಗೆ ಸಮಯದ ಬೆಲೆ ಗೊತ್ತಾಗುವು… ಹೀಗಾಗಿ ಅವನು ಪರೀಕ್ಷೆಯಲ್ಲಿ ಅನುತ್ತೀರ್ಣನಾದರೆ ತ… ಯಾರದು?

ನಮ್ಮ ನವನಾಗರಿಕತೆಯು ನೂರಾರು ಸಾಧನಗ… ಮನುಷ್ಯನನ್ನು ಆಕರ್ಷಿಸುವಂತಹವೇ ಆಗಿವೆ. ಅವುಗಳಿ… ಆತನ ಉನ್ನತಿಯಾಗುವ ಬದಲು, ಒಂದು ವಿಧದಿಂದ … ಸರ್ವ ವಿಧದಲ್ಲಿಯೂ ಆತನ ಅವನತಿಯೇ ಆಗಿ ಪರಿಣ… ಸುವುದು! ಇವೆಲ್ಲ ಆತನ ಮನಸ್ಸನ್ನು ಹಲವು ಕ… ಒಯ್ದು, ಚಪಲಗೊಳಿಸಿ ಉದ್ದೇಶಚ್ಯುತನನ್ನಾಗಿ ಮಾ… ವುವೇ ಹೊರತು, ಆತನ ಬೆಳವಣಿಗೆಗಾಗಿ ಅಲ್ಲವೆಂ… ನಿರ್ಭಯವಾಗಿ ಹೇಳಬಹುದು. ಮನುಷ್ಯನ ಮನಸ್ಸಿ… ಜೀವನ ಸಂಗ್ರಾಮದಲ್ಲಿ ವಿರಾಮ ಅವಶ್ಯ ಬೇಕು. ಆ… ಅದರ 'ಅತಿ'ಯಾದರೆ ಆತನ ಸುಖದ 'ಇತಿ'ಯೇ ಆ… ಲಾರದೆ?

ಆದ ಕಾರಣ ಇಂದು ನಾವು ಜಗತ್ತಿನಲ್ಲಿರುವ ಮ… ತ್ವದ ಪದವಿಗೇರಿದ ಮಹನೀಯರನ್ನು ಪರಿಶೀಲಿಸಿದರೆ, ಅವ… ಸಫಲತೆಗೂ ಯಶಸ್ಸಿಗೂ ಅವರ ಕರ್ತವ್ಯನಿಷ್ಠೆಯೇ ಕಾರ… ವೆನ್ನಲೇ ಬೇಕು. ಐರೋಪ್ಯದೇಶಗಳಲ್ಲಿ ವೈಜ್ಞಾನಿಕ ಶೋ… ಕರು ರಾತ್ರಿ ಹಗಲು ದುಡಿಯುವರಾಗಿ ಕೇಳುತ್ತೇವೆ. ಅವ… ಉದಾಸೀನರಾಗಿದ್ದರೆ ಇಂದು ನಾವು ನಿತ್ಯವೂ ಸೌಕಯ… ಕ್ಕಾಗಿ ಬಳಸುವ ಸಾಧನೆಗಳು ಎಲ್ಲಿಂದ ಬರಬೇಕಿತ್ತು? ಹ… ವಾರು ಜನರು ತತ್ತ್ವ ಶೋಧನೆಗಾಗಿ ತಮ್ಮ ಪ್ರಾಣಗಳನ… ಅರ್ಪಿಸಿರುವುದು ಇತಿಹಾಸದಿಂದ ಅನುಭವಕ್ಕೆ ಬಂದಿ… ಅಂತಹ ದೇಹದಾರ್ಢ್ಯ ನಮ್ಮಲ್ಲಿರಬೇಕು; ತಾಳ್ಮೆ ಬೇಕ… ದುರ್ವ್ಯಸನಗಳ ಕಾಟವಿರಬಾರದು; ಕರ್ತವ್ಯನಿಷ್ಠೆಯಿ… ಬೇಕು; ಹಿಡಿದ ಕೆಲಸ ಪೂರೈಸುವ ಛಲಬೇಕು. ಜೀವನ… ಹೋರಾಟದ ಮಧ್ಯೆ ವಿರಾಮಕ್ಕೆ ಅವಕಾಶ ಕೊಟ್ಟ ಮೇಲ… ಬಿಡು ಸಮಯದಲ್ಲಿ ಉಪಯೋಗೀ ಕೆಲಸಮಾಡುವವರ… ಧನ್ಯರು. ಅಂತಹರ ಬಾಳು ಬೆಳಗುವುದು; ಬೆಳೆದು ಬ… ಯಾಗಿ ಚಿಗುರು ಫಲಕೊಡುವುದು. ಭಗವಂತನು ಕೊ… ರುವ ನೈಸರ್ಗಿಕ ಶಕ್ತಿಯನ್ನು ಉಪಯೋಗಿಸಿಕೊಳ್ಳು… ಕರ್ತವ್ಯ ನಮ್ಮದು. ಕರ್ತವ್ಯಚ್ಯುತನಾದರೆ ಕೆಲಸ ಕೆ… ವುದು.

ನವನಾಗರಿಕತೆಯ ನವೀನ ಆಕರ್ಷಣಗಳ ನಡು… ನಮ್ಮ ಬಾಳನ್ನು ನೇರಾಗಿ ಸಾಗಿಸುವ ಶಕ್ತಿಯನ್ನು ನಾ… ಸಫಲಗೊಳಿಸಬೇಕು. ಅಂತಾದರೆ ಮಾನವನ ಜನ್ಮ… ಸಾರ್ಥಕವಾಗುವುದು.

——

★ ಪರಸ್ಪರ ಅಂತಃಕರಣ ★

(ಲೇಖಕರು: ಶ್ರೀ। ಎ. ಕೇಶವ ಪೈ, ವಿದ್ವಾನ್.)

ಇದು, 'ಆತ್ಮವೊಂದು—ದೇಹವೆರಡಾ'ಗಿರುವ ದಂಪತಿಗಳ ಒಂದು ಪುಟ್ಟ ಆಸೆಯನ್ನು ಕುರಿತಾದ ಕಥೆ. ಕಥಾಲೇಖಕರು ಆ ಮಮತೆಯ ದಂಪತಿಗಳ ಬಹುಕಾಲದ ಆಸೆಯನ್ನು ಕಥಾಂತ್ಯದಲ್ಲಿ ಪೂರೈಸುವ ಭರವಸೆಯಿತ್ತು ನಿಷ್ಠೂರವಾಗಿ ಚಿವುಟಿಬಿಡುವಂತೆ ತೋರಿದೆ, ಆದರೆ, ಈ ಕಥೆಯಲ್ಲಿ ಆಸೆಯನ್ನು ಪೂರ್ಣಗೊಳಿಸುವುದು ಮುಖ್ಯ ಉದ್ದೇಶವಾಗಿಲ್ಲ. "ಪರಸ್ಪರ ಅಂತಃಕರಣ"ದ ಚಿತ್ರೀಕರಣದಿಂದ ಓದುಗನಲ್ಲಿ ಕರುಣಾಭಾವವೂ ಆ ದಂಪತಿಗಳಿಗಾಗಿ ಸಹಾನುಭೂತಿಯೂ ಉಂಟಾಗಿ, ವಿಧಿಯು ವಂಚಿಸಿದ ರೀತಿಗಾಗಿ ಮರುಕ ಪಡುವವನು ಆ ದಂಪತಿಗಳ ಪ್ರೇಮಕ್ಕಾಗಿ ಒಂದು ಅವ್ಯಕ್ತ ಆನಂದವನ್ನನುಭವಿಸುತ್ತಾನೆ.

ಶ್ಯಾಮು ಬಡವ. ಶ್ರೀಮಂತರಲ್ಲಿ ಜನಿಸಿ, ಬಳೆದನು; ಶ್ರೀಮಂತ ಕನ್ನಿಕೆಯನ್ನು ಲಗ್ನವಾದನು. ಅನಂತರ ಚಿತ್ರವು ಪೂರ್ಣ ಮಾರ್ಪಟ್ಟಿತು. ತಂದೆಯ ಮನೆಯೂ ಬರಿದಾಯಿತು; ಮಾವನ ಮನೆಯೂ ಬರಿದಾಯಿತು.

ಇಂದು ಅವನು ಬಡವ. ಆದರೆ, ಅವನ ಹೃದಯವು ಬಡವಾಗಿರಲಿಲ್ಲ. ಅವನಿಗನುಕೂಲವಾಗಿ, ತನ್ನ ಪತಿಯನ್ನು ತಿಳಿದು ವರ್ತಿಸುವ ಹೆಂಡತಿ ದೊರೆತಿದ್ದಳು. ಶ್ಯಾಮು—ಲೀಲೆ, ಇವರ ಸಂಸಾರವು, ಬಡತನ ಬಂದರೂ ಸಂತೋಷದಲ್ಲಿ ಸಾಗಿತ್ತು.

ಆದರೆ, ಅವರಲ್ಲೊಂದು ವಿಚಿತ್ರ ಆಸೆಯಿತ್ತು. ಆ ಆಸೆಯು ಪೂರ್ಣವಾಗದೆ ಆಗಾಗ್ಗೆ ಚಿಂತೆಯಲ್ಲಿರಿಸುತ್ತಿತ್ತು.

ಶ್ಯಾಮುವಿಗೆ ಚಿಕ್ಕದೊಂದು ಕೆಲಸವಿತ್ತು. ಲೀಲೆಯು ಸುಶಿಕ್ಷಿತಳಾದುದರಿಂದ, ಮಿತವ್ಯಯ ಮಾಡಿ, ಪ್ರತಿ ತಿಂಗಳಿಗೆ ಕೊಂಚ ಹಣವನ್ನು ಉಳಿಸುತಿದ್ದಳು.

ಲೀಲೆಯು ಯಾವಾಗಲೂ ಶ್ರೀಮಂತ ಹೆಂಗಸರು ಉಟ್ಟುಕೊಂಡಿದ್ದ ಬನಾರಸು ಸೀರೆಯನ್ನೆ ನೋಡುವಳು. ಅವರು ಬೀದಿಯನ್ನು ದಾಟಿಹೋಗುವ ವರೆಗೂ ಆ ಸೀರೆಯನ್ನು ನೋಡಿಕೊಳ್ಳುವಳು. ಆ ಸೀರೆಯಲ್ಲಿರುವ ಹೂಗಳ ಅಂದ ಚೆಂದ, ಅದರ ಸೆರಗು, ಅಂಚುಗಳನ್ನು ತನ್ನ ಸ್ಮೃತಿಪಥದಲ್ಲಿ ತರುವಳು. 'ಅಯ್ಯೋ, ನನಗೂ ಅಂಥ ಸೀರೆಯಿದ್ದರೆ ಆಗುತ್ತಿತ್ತು! ಹೆತ್ತವರು ನನಗೆ ಚಲೋ ಕುಪ್ಪಸವನ್ನು ಮಾಡಿಸಿಕೊಟ್ಟಿದ್ದಾರೆ. ಅದಕ್ಕೆ ಸರಿಯಾಗಿ ಒಂದು ಬನಾರಸು ಸೀರೆಯನ್ನು ತೆಗೆಸಿಕೊಡಲಿಲ್ಲವಲ್ಲ! ಪಾಪ! ಅವರು ಏನು ಮಾಡಬಲ್ಲರು! ಅವರಲ್ಲಿ ಹಣವಿದ್ದರೆ ಖಂಡಿತವಾಗಿಯೂ ಕೊಂಡುಕೊಳ್ಳುತ್ತಿದ್ದರು. ಅವರಿಗೆ ನನ್ನಲ್ಲಿ ಪ್ರಷ್ಟು ಮಮತೆ ಬೇರೆ ಯಾವ ಅಕ್ಕಂದಿರಲ್ಲೂ ಇಲ್ಲ. ನಾನು ಸಿರ್ಭಾಗ್ಯಳಾದುದರಿಂದ ಯಾರನ್ನು ದೂರಿ ಫಲವೇನು?' ಎಂದು ತನ್ನ ಮನಸ್ಸಿನಲ್ಲಿ ಉದ್ಗಾರವನ್ನು ತೆಗೆದು ದುಃಖಿಸುವಳು.

ಲೀಲೆಯ ಈ ತರದ ವರ್ತನೆಯು ಶ್ಯಾಮುವಿಗೆ ಗೋಚರಿಸದೆ ಇರುತ್ತಿದ್ದಿಲ್ಲ. ತನ್ನ ಪ್ರೀತಿಯ ಹೆಂಡತಿಗೆ ಒಂದು ಬನಾರಸು ಸೀರೆಯನ್ನು ತೆಗೆಸಿಕೊಟ್ಟು, ಅವಳ ಅಂದ ಚೆಂದವನ್ನೂ ಒನಪು ವಯ್ಯಾರಗಳನ್ನೂ ಕಣ್ತುಂಬ ನೋಡಿ, ಮನವಾರೆ ಸಂತಸ ಪಡಬೇಕೆಂದು—ಆಸೆಯಿತ್ತು. ಅದನ್ನು ಅವಳೊಡನೆ ಹೇಳಿ ಏನು ತಾನೆ ಸಾಗುವುದು! ಮುಂದೆ ಅಂಥ ಸೀರೆಯನ್ನು ತೆಗೆದುಕೊಳ್ಳಲಿಕ್ಕೆ ಪ್ರಯತ್ನಿಸಬೇಕು. ಅದಕ್ಕಾಗಿ ಹಣ ಶೇಖರಿಸಬೇಕು. ಎಂದು ಮನಸ್ಸಿನಲ್ಲೇ ನಿರ್ಧಾರ ಮಾಡಿಕೊಂಡನು.

ಮನೆಗೆ ಯಾರಾದರೂ ಕೈಗಡಿಯಾರ ಕಟ್ಟಿಕೊಂಡ ಮನುಷ್ಯರು ಬಂದರೆ ಶ್ಯಾಮುವು ಅವರನ್ನು ಚೆನ್ನಾಗಿ ದಿಟ್ಟಿಸುವನು. ಅವರ ಚಿನ್ನದ ಸರಪಣಿಯನ್ನು ಕಂಡುಕೊಂಡು ತನಗೆ ಅಂಥ ಸರಪಣಿಯಿಲ್ಲವಲ್ಲ! ಅಂಥ ಒಂದು ಒಡವೆ ಇದ್ದರೆ ಆಗಬಹುದಿತ್ತು. ತನ್ನ ಗಡಿಯಾರಕ್ಕೆ ಅದನ್ನು ಕಟ್ಟಿ ಆನಂದ ಪಡಬಹುದಿತ್ತು! ಎಂದು ಮನಸ್ಸಿನಲ್ಲೆ ಕುದಿಯುವನು. ತನ್ನ ಹೆತ್ತವರು ತನಗೊಂದು ಗಡಿಯಾರ ಮಾತ್ರ ಕೊಟ್ಟುದಕ್ಕಾಗಿ ಅವರನ್ನು ಹಳಿಯದೆ, ಅವರ ದಾರಿದ್ರ್ಯಕ್ಕಾಗಿ ಮರುಗಿ, ತನ್ನ ಹಣೆಯಲ್ಲಿ ಆ ಸುಖವು ಬರೆದಿಲ್ಲ ಎಂದು ಸುಮ್ಮಗಾಗುವನು.

ಲೀಲೆ, ತನ್ನ ಪತಿಯ ಮನದಾತುರವನ್ನು ಅವನ ಹೊರಗಿನ ನಡತೆಯಿಂದಲೇ ತಿಳಿದುಕೊಂಡಳು. ಗಂಡನ ಆಸೆಯನ್ನು ಸಲ್ಲಿಸಬೇಕೆಂದು ತಾನು ಗೃಹಕೃತ್ಯಕ್ಕಾಗಿ ಹಣವನ್ನು ಮಿತವಾಗಿ ವೆಚ್ಚಮಾಡಿ ಅಲ್ಪಸ್ವಲ್ಪ ಹಣವುಳಿಸುವಳು. ಪ್ರತಿವಾರದಲ್ಲಿ ಕೆಲವು ಬಿಡಿ ಕಾಸುಗಳನ್ನು ಕೂಡಿಸಿ ಬಿಡುವಳು. ಪತಿಯೊಡನೆ ಈ ಸಂಗತಿಯನ್ನು ಹೇಳಳು. ಎಲ್ಲವನ್ನೂ ಮರೆಮಾಜುವಳು.

ಒಂದು, ಎರಡು, ಮೂರು, ... ಒಂಭತ್ತು ರೂಪಾಯಿಗಳು— ಇಷ್ಟೆ! ಈ ಅಲ್ಪ ಹಣದಿಂದ ನಾನು ಹೇಗೆ ಚಿನ್ನದ ಸರಪಣಿಯನ್ನು ಕೊಂಡುಕೊಳ್ಳಲಿ! ಇದು ಹೇಗೆ

ಸಾಧ್ಯ? ರಾತ್ರಿಗೆ ಬಂದ ಗಂಡನನ್ನು ಕಂಡ ಕ
ಮತ್ತಷ್ಟು ದುಃಖ ಪಡುವಳು. ಶ್ಯಾಮು ತನ್ನ ಹೆಂಡ
ಕುಪ್ಪಸವನ್ನು ಕಂಡ ಕೂಡಲೆ ಸಿಟ್ಟುಸಿರು ಬಿಡುವನು.
ಇನ್ನೂ ಅವಳಿಗೊಂದು ಸೀರೆಯನ್ನು ಕೊಂಡುಕೊಂಡ
ಲಾಗಲಿಲ್ಲವಲ್ಲ! ಎಂದು ಮನಸ್ಸಿನಲ್ಲಿ ಕೊರಗುವ
ಹೆಂಡತಿಯ ದುಃಖ ಗಂಡನಿಗೆ ತಿಳಿದಿತ್ತು; ಗಂಡನ
ಹೆಂಡತಿಗೆ ಗೊತ್ತಿತ್ತು. ಆದರೆ ಇಬ್ಬರೂ ಆ ವಿಷಯ
ಎತ್ತರು; ಮೌನವಾಗಿರುವರು.

ಒಂದು ದಿನ ಲೀಲೆಯು ಸರಾಫಕಟ್ಟೆಗೆ ಹೋಗಿ ಚಿ
ಸರಪಣಿಯ ಬೆಲೆಯನ್ನು ಗೊತ್ತುಹಚ್ಚಿದಳು. ಅಂಗ
ವನು ಇಪ್ಪತ್ತೈದು ರೂಪಾಯಿ ಇಲ್ಲದೆ ಬಂಗಾರದ
ಪಣಿಯು ದೊರಕದು ಎಂದು ಉತ್ತರವಿತ್ತನು.
ಆಲೋಚಿಸಿದರೂ ಇನ್ನೂ ಬೇಕಾಗುವ ಹದಿನಾರು ರೂಪಾ
ಗಳನ್ನು ಎಲ್ಲಿಂದ ತರಲಿ! ಎಂದು ಮನಸ್ಸಿನಲ್ಲಿ ಚಡಪ
ದರೂ ಕಡೆಗೆ ತನ್ನಲ್ಲಿದ್ದ ವೆಲ್ವೆಟಿನ ಜರತಾರಿ ಕುಪ್ಪಸವ
ದರೂ ಅಂಗಡಿಗಾರನ ಉಳಿದ ಹಣಕ್ಕಾಗಿ ಮಾರುವೆನೆ
ನಿಶ್ಚಯಿಸಿದಳು. ಹಾಗೆಯೇ ಹೋಗಿ ಅವನ ಹತ್ತಿರ
ಮಾತನ್ನು ಆಡಲು ಬಲು ಸಂಕೋಚಪಟ್ಟಳು. ಆ ಪ್ರಸ
ಈ ಪ್ರಸ್ತಾಪವನ್ನೆತ್ತಿ ಕಡೆಗೆ ತನ್ನ ಮನಸ್ಸಿನ ಆಶೆಯ
ಅವನಿಗೆ ಬಿಚ್ಚಿಹೇಳಲು, ಅವನು ಕೂಡಲೆ ಒಂಭತ್ತು ರೂ
ಗಳನ್ನೂ ಆ ರವಕೆಯನ್ನೂ ಸ್ವೀಕರಿಸಿ ಚಿನ್ನದ ಸರ
ಯನ್ನು ತಂದುಕೊಟ್ಟನು.

ಅತ್ತ ಶ್ಯಾಮು, ತನ್ನ ಮಡದಿಯು ಪ್ರತಿದಿನ
ಬೇಕೆಂದು ಆಶಿಸುವ ಬನಾರಸು ಸೀರೆಯನ್ನು ಕೊಂಡುಕೊ
ಲಾಗದುದಕ್ಕಾಗಿ ಬಲು ಕೊರಗಿದನು. ಕಡೆಗೆ ಇ
ಅದನ್ನು ಹೇಗಾದರೂ ಕೊಂಡುಕೊಳ್ಳಲೇ ಬೇಕು. ತನ್ನ
ಯಾವ ಸೊತ್ತು ಇದೆ. ಹಿರಿಯರಿಂದ ಬಂದ ಒಂದು
ಯಾರವಿದೆ. ಇದನ್ನೇಕೆ ಸುಮ್ಮನೆ ಇಟ್ಟುಕೊಳ್ಳುವು
ತನ್ನ ಕೈಹಿಡಿದ ಪ್ರಿಯತಮೆಗೆ ಒಂದು ಸೀರೆಯನ್ನು ತ
ಕೊಡಲಾರದ ಗಂಡಸು ಗಂಡಸೆ! ಸುಡು ಆತನ ಜನ್ಮ ಎಂ
ಬಲುವಾಗಿ ಯೋಚಿಸಿ, ಕೊನೆಗೆ ಇದನ್ನಾದರೂ ವಿಕ್ರಯಿ
ತನ್ನ ಪ್ರಾಣಪ್ರಿಯೆಗೆ ಸೀರೆಯನ್ನು ಕೊಂಡುಕೊಳ್ಳುವೆ
ಎಂದುಕೊಂಡನು.

ಯಾವ ಸರಾಫಕಟ್ಟೆಗೆ ಹೋಗಿ ಪತ್ನಿಯು ತನ್ನ ಕುಪ್ಪ
ವನ್ನು ಕೊಟ್ಟು ಸರಪಣಿಯನ್ನು ಕೊಂಡಳೋ, ಅದೇ ಸರಾ
ಕಟ್ಟೆಗೆ ಹೋಗಿ ತನ್ನ ಬಂಗಾರದ ವಾಚನ್ನು ಮಾರಿಬಿಟ್ಟ
ಅದರಿಂದ ಅವನಿಗೆ ತೊಂಭತ್ತಾರು ರೂಪಾಯಿ ಮಾ
ದೊರೆಯಿತು. ಆ ಹಣವನ್ನೂ ತನ್ನಲ್ಲಿದ್ದ ನಾಲ್ಕು ರೂಪ
ಗಳನ್ನೂ ಕೂಡಿಸಿ, ಒಂದು ಜವುಳಿ ಅಂಗಡಿಗೆ ಹೋಗಿ, ಕೆಂ
ರಂಗಿನ ಹೂಗಳಿದ್ದ ಒಂದು ಚಲೋ ಬನಾರಸು ಸೀರೆಯನ

(75ನೇ ಪುಟಕ್ಕೆ ಮುಂದುವರಿದಿದೆ)

ನೇಪಥ್ಯ ("ವೇಷಭೂಷೆ" ಅಥವಾ MAKE-UP)

ಭಾರತೀಯ ಚಲಚ್ಚಿತ್ರಕಾರರಲ್ಲಿ ಕೆಲವರು ನೇಪಥ್ಯಕ್ಕೆ ಇತ್ತೀಚೆಗೆ ಹೆಚ್ಚಿನ ಲಕ್ಷ್ಯ ಕೊಡುತ್ತಿರುವುದು ಕಂಡುಬಂದಿದೆ; ಆದರೆ ಕೆಲವು ಚಿತ್ರಗಳು "ನೇಪಥ್ಯ"ದ ವಿಷಯದಲ್ಲಿ ಕೇವಲ ಶೈಶವಾವಸ್ಥೆಯಲ್ಲಿವೆ. ಈ ಲೇಖಕರು ನಮ್ಮ ಚಲಚ್ಚಿತ್ರಕಾರರ ಅಜ್ಞಾನಕ್ಕಾಗಿ ಸಂತಾಪಗೊಂಡು, 'ನೇಪಥ್ಯಕ್ಕೆ ಪ್ರಾಮುಖ್ಯತೆ ಕೊಡದೆ, ನಮ್ಮ ಪೌರಾಣಿಕ ಮಹಾ ಪುರುಷರನ್ನೂ ಐತಿಹಾಸಿಕ ವೀರರನ್ನೂ ನೋಡಿ ನಾವು ಜುಗುಪ್ಸೆಗೊಳ್ಳುವಂತೆ, ಜನತೆಗೆ ಅನಾದರಣೆ ಹುಟ್ಟುವಂತೆ ಮಾಡು ತ್ತಿರುವರು' ಎಂದು ಟೀಕಿಸುತ್ತ, 'ನೇಪಥ್ಯ'ದ ಕುರಿತು ಎರಡು ಸಲಹೆಗಳನ್ನು ಕೊಡುತ್ತಾರೆ.

ನೇಪಥ್ಯವು ಬಾಹ್ಯ ಸೌಂದರ್ಯವಾಗಿದೆ. ಬಾಹ್ಯ ಸೌಂದರ್ಯವು ಅಂತರ್ಯ ಸೌಂದರ್ಯದ ಪ್ರದರ್ಶನೆಗೆ ಮುಖ್ಯವೆಣಿಸಿದೆ. ಮೊತ್ತಮೊದಲು ಪ್ರೇಕ್ಷಕನು ಹೊರ ಚೆಲುವನ್ನು ಕಾಣುವನು; ಹೊರಚೆಲುವನ್ನು ಕಂಡು ಅದಕ್ಕೆ ಮರುಳಾಗುವನು. ರಂಗ ಮಂಚಗಳ ಪಾತ್ರಗಳಿಗೆ ಹೊರ ಚೆಲುವು ಇರದಿದ್ದರೆ, ಕಥಾನಕದ ಒಳ ಸೌಂದರ್ಯವು ಎಷ್ಟೇ ಗಂಭೀರವಾಗಿದ್ದರೂ ಪ್ರೇಕ್ಷಕನಿಗೆ ಸೊಗಸಾಗಿ ಕಾಣದು. ಆದುದರಿಂದ ಪಾತ್ರಕ್ಕೆ ಒಪ್ಪುದ ಉಡಿಗೆ ತೊಡಿಗೆ ಕೊಟ್ಟು ರಂಜನೆಗೊಳಿಸುವುದು ದಿಗ್ದರ್ಶಕನ ಮುಖ್ಯ ಕರ್ತವ್ಯವಿದೆ.

ಇಂದಿನ ರಂಗಮಂಚಗಳ ಹಾಗು ಚಲಚ್ಚಿತ್ರ ದಿಗ್ದರ್ಶಕರು ನೇಪಥ್ಯಕ್ಕೆ ಹೆಚ್ಚು ಪ್ರಾಮುಖ್ಯತೆ ಕೊಟ್ಟಂತೆ ಅಥವಾ ಲಕ್ಷ್ಯ ಕೊಟ್ಟಂತೆ ಕಂಡುಬರುವುದಿಲ್ಲ. ಪೌರಾಣಿಕ ಕಥಾನಕಗಳ ಚಿತ್ರಗಳಿಗೆ ಹೋದರೆ ಆ ಕತೆಗೊಪ್ಪುವ, ಕಾಲಕ್ಕೊಪ್ಪುವ, ಪಾತ್ರಕ್ಕೊಪ್ಪುವ ವೇಷಭೂಷೆಗಳು ಕಂಡುಬರುವುದಿಲ್ಲ. ಅಭಿನಯಿಸಿಸ, ಪ್ರಸಿದ್ಧೀಕರಿಸಿದ ನಾಟಕ ಮತ್ತು ಚಿತ್ರಗಳು ಅವುಗಳಿರದೆ ಜನರಿಗೆ ಅವನ್ನು ಕಾಣಹೋಗುವುದು ಬೇಡ ಎನಿಸಹತ್ತಿದೆ.

ನಮ್ಮ ಚಲಚ್ಚಿತ್ರ ಸಂಸ್ಥೆಗಳು ಚರಿತ್ರೆಯ ಚಿತ್ರಗಳನ್ನು ಕೊಡುತ್ತಿವೆ. ಅವುಗಳು ಕೊಟ್ಟ ಚಿತ್ರಗಳಲ್ಲಿ ಕಥಾನಕಕ್ಕೆ ಯೋಗ್ಯವಾದ ನೇಪಥ್ಯವು ಕೈ ಬೆರಳಿನಿಂದೆಣಿಸಲುಳ್ಳ ಯೋಗ್ಯತೆಗೆ ಪೂರ್ಣವಲ್ಲದಿದ್ದರೂ ಸಾಮಾನ್ಯ ರೀತಿಯಿಂದ ಮೆಚ್ಚುಗೆಗೆ ಪಾತ್ರವಾದುವು ಒಂದೆರಡು ಮಾತ್ರ. ಈ ವೇಷಭೂಷೆಯೊಂದಿಗೆ ಪಾತ್ರಕ್ಕನುಗುಣವಾದ ಶಾರೀರಿಕ ವ್ಯಕ್ತಿಗಳು ಚಿತ್ರಪಟಕ್ಕೆ ಅತ್ಯಗತ್ಯ. ಕೆಲವು ದಿಗ್ದರ್ಶಕರು ಹಿಂದುವಿನ ಧೋತ್ರ ಉಡಿಸಿ ಕೊನೆಗೆ ತಲೆ ಮುಚ್ಚಲು ಮುಸಲ್ಮಾನರ ಟೋಪಿಯನ್ನು ತೊಡಿಸಿದುದುಂಟು. ಇದು ವಿನೋದವೋ ವಿಚಾರವೋ ನಮಗೆ ಹೇಳಬರುವುದಿಲ್ಲ. ನಮ್ಮ ಚಲಚ್ಚಿತ್ರಕಾರರು ನೇಪಥ್ಯ ವಿಷಯದಲ್ಲಿ ತೀರ ಅಲಕ್ಷ್ಯ ತೋರುತ್ತಿರುವರು. ಇಂತಹ ಹೇಯತೆಯನ್ನು ಕಂಡರೆ ಚಿತ್ರ ನಿರ್ಮಾತೃಗಳು ಕಾಲಭೇದ, ದೇಶ, ಭಿನ್ನತೆ, ಮನುಷ್ಯನ ವ್ಯಕ್ತಿತ್ವ ಸಂಸ್ಕೃತಿ, ಸಮಾಜ ಧೋರಣೆಗಳಾವುದನ್ನೂ ತಿಳಿಯದ ಮನುಷ್ಯಭಿನ್ನ ವ್ಯಕ್ತಿಗಳೆಂದು ಹೇಳಬೇಕಾಗುತ್ತದೆ. ಪಾತ್ರಕ್ಕೆ ಒಪ್ಪುವ ವೇಷಭೂಷೆ, ವೇಷಭೂಷೆಯೊಂದಿಗೆ ಪಾತ್ರಕ್ಕನುಗುಣವಾದ ಶಾರೀರಿಕ ವ್ಯಕ್ತಿಗಳು ಚಿತ್ರಪಟಕ್ಕೆ ಅತ್ಯಗತ್ಯ. ಇದರಿಂದ ವಿರಹಿತವಾಗಿ ತೋರುವ ಕಥಾನಕ ದೃಶ್ಯಾಭಿನಯವು ಶ್ರವ್ಯ ಕಾವ್ಯಕ್ಕೆ ಹೋಲಿಕೆಗೊಂಡು ಸಮಾಜದ ಕಳೆಗೂಡಿದ ದೃಶ್ಯರೂಪ ಚಿತ್ರಗಳಾಗುವುದಿಲ್ಲ. ಅದಲ್ಲದೆ ಇಂತಹ ಚಿತ್ರಗಳ ಪರಿಣಾಮವು ನಿಜ ಪ್ರಪಂಚದೊಡನೆ ಹೋಲದಿದ್ದು, ಕಥಾನಕಕ್ಕೆ ಕಥಾನಕ ವ್ಯಕ್ತಿಗಳ ಮೇಲೆ ಅಭಿಮಾನ ಗೌರವಗಳನ್ನು ಕುಗ್ಗಿಸಿ ಬಿಡುವುದು. ಭಾರತದ ಪೂರ್ವ ಚರಿತ್ರೆಗಳ ಮೇಲೂ ಚಾರಿತ್ರಿಕ ವ್ಯಕ್ತಿಗಳ ಮೇಲೂ ಅನಾದರಣೆಯನ್ನು ಹುಟ್ಟಿಸು

(74ನೇ ಪುಟದಿಂದ ಮುಂದುವರಿದುದು)

ಕೊಂಡುಕೊಂಡು ಹರ್ಷಚಿತ್ತನಾಗಿ ಧಾವಿಸಿಕೊಂಡು ಮನೆಗೆ ಬಂದನು.

ಶ್ಯಾಮುವು, "ಲೀಲಾ, ನೀನು ಹಲವು ವರುಷಗಳಿಂದ ಕೋರುತ್ತಿದ್ದ ವಸ್ತುವನ್ನು ಇಕೊ, ತಂದಿರುವೆನು...." ಎನ್ನುವಷ್ಟರಲ್ಲಿ ಅವಳು ತೊಟ್ಟುಕೊಂಡಿದ್ದ ಕುಪ್ಪಸವನ್ನು ಕಾಣದೆ ಹತಾಶನಾದನು.

ಲೀಲೆಯು, "ಎಷ್ಟೋ ಕಾಲದಿಂದ ಬೇಕುಬೇಕೆಂದು ಹಾರೈಸುತ್ತಿರುವ ಒಡವೆಯನ್ನು ನಾನು ತಮಗಾಗಿ ತಂದಿರುವೆನು" ಎನ್ನುತ್ತ ಅವನ ಕೈಯ ಕಡೆಗೆ ದೃಷ್ಟಿಸಿ, ಗಡಿಯಾರವು ಮಾಯವಾದುದನ್ನು ಕಂಡು ಸ್ತಂಭೀಭೂತಳಾದಳು.

ಒಬ್ಬರು ಮತ್ತೊಬ್ಬರ ಮುಖವನ್ನೂ ಕಣ್ಣುಗಳನ್ನೂ ನೋಡುತ್ತ ನೋಡುತ್ತ ಮೌನಮುದ್ರೆಯನ್ನು ಧರಿಸಿಕೊಂಡು ಸುಮ್ಮನೆ ಕುಳಿತುಕೊಂಡರು.

ಪರಸ್ಪರ ಅಂತಃಕರಣವು ತಿಳಿದುಕೊಂಡ ಅವರವರು ಯಾಚಿಸುವ ವಸ್ತುವು ಅವರಿಗೆ ದೊರಕಿದಾಗ ಅದನ್ನು ಅನುಭವಿಸುವುದು ಅವರ ಹಣೆಯಲ್ಲಿ ಬರೆದಿರಲಿಲ್ಲ. ತಂದ ವಸ್ತುಗಳನ್ನು ಬೇರೆಯೇ ಇರಿಸಬೇಕಾಯಿತು.

ನಂತಹ ದೋಷ ಭಾರವನ್ನು ಹೊತ್ತವರು ಇಂತಹ ದಿಗ್ದರ್ಶಕರು. ಇದರಿಂದ ನಮ್ಮ ಸಮಾಜವು ಕೀಳಾಗಿದೆ.

ಕೆಲವು ಚಿತ್ರಗಳಲ್ಲಿ ದಿಗ್ದರ್ಶಕರು ಪುರಾಣ ಸ್ತ್ರೀ ಪಾತ್ರಗಳನ್ನೂ ಪುರಾಣ ಪುರುಷರನ್ನೂ ಇಂದಿನ ಪ್ರೌಢವತಿಯುತರುಣ ರುಣಿಯರ ವೇಷ ಭೂಷೆಗಳಿಗೆ ಹೋಲುವಂತಹ ಪೋಷಾಕುಗಳಿಂದ ರಂಗಮಂಚಕ್ಕೆ ಇನ್ನೂ ಬರಮಾಡುತ್ತಿರುವುವುದನ್ನು ಕಂಡರೆ ಪ್ರೇಕ್ಷಕಗಣವು ಅದೊಂದು ಆಂದೋಲನವನ್ನು ಎಬ್ಬಿಸಬೇಕು. ಅಂತಹ ಚಿತ್ರಗಳನ್ನೂ ನಾಟಕಗಳನ್ನೂ ಕಾಣುವ ಬದಲು ಅವುಗಳು ನಡೆಯದಂತೆ ಮಾಡುವುದು ಶಿಕ್ಷಿತ ನಾಗರಿಕರ ಕರ್ತವ್ಯ. ಚಿತ್ರಕಾರರು ಹರಯ ಗೂಡಿದ ವೃದ್ಧರನ್ನೂ ವೃದ್ಧೆಯರನ್ನೂ ಕಿರು ಹರೆಯದ, ಯೌವನದ ಪಾತ್ರಗಳ ಅಭಿನಯಕ್ಕೆಡೆಗೊಡುತ್ತಿರುವುದನ್ನು ಕಂಡರೆ, ಅವರು ಪ್ರವಹಿಸುತ್ತಿರುವ ರಸ ಪ್ರವಾಹಗಳನ್ನು ನಿರೀಕ್ಷಿಸಿದರೆ ನಟರಿಗೆಲ್ಲಾ ಕಾಯಕಲ್ಪ ಚಿಕಿತ್ಸೆಯಾಗುತ್ತಿದೆಯೇ ಎಂಬಾತುರ ವೊದಗುತ್ತಿದೆ.

ದೃಶ್ಯಕ್ಕೊಪ್ಪುವ ಸನ್ನಿವೇಷಗಳು ನೇಪಥ್ಯ ರಚನೆಗೆ ಸೇರಿದವು. ಅವುಗಳ ಲೋಪ ದೋಷ ಹೇಳಿತೀರದು. ಗರೀಬರ ಮನೆಯ ಸಂವಿಧಾನಗಳನ್ನೂ ಅವರ ವೇಷಭೂಷೆಗಳನ್ನೂ ಚಿತ್ರಕಾರರು ಪ್ರದರ್ಶಿಸುತ್ತಿರುವುದನ್ನು ಕಂಡರೆ ಬಡವರಲ್ಲಿ ಕಾಣಬರುವ ನ್ಯೂನತೆಗಳೊಂದೂ ಅವರ ಜಗತ್ತಿನ ಬಡವರಲ್ಲಿ ಕಾಣಲಾರವು.

ನವೀನ ಕಾಲದ ಪಾತ್ರರಚನೆಯ ನೇಪಥ್ಯ ವಿಧಾನದಲ್ಲೂ ದಿಗ್ದರ್ಶಕರು ಇನ್ನೂ ಎಚ್ಚರವಹಿಸಿದಂತೆ ಇಂತಹ ಚಿತ್ರಗಳನ್ನು ಕಾಣುವಾಗ ಕಂಡುಬರುತ್ತಿರುವುದು ಜನತೆಗೆ ತಿಳಿಯದಿಲ್ಲ. ಗಂಟೆ ಗಂಟೆಗೆ ಉಡುಪುಗಳನ್ನು ಬದಲಾಯಿಸಿ ಮಿನಿಟು ಮಿನಿಟಿಗೆ ವೇಷ ಶೃಂಗಾರಗೆಯ್ಯು ಹೋಗುವುದಕ್ಕೂ ನಿಲ್ಲುವುದಕ್ಕೂ ಮೋಟರು ಕಾರು, ನುಡಿಯುವುದಕ್ಕೆ ಫೋನ್ ಎಲ್ಲೆಡೆಯಲ್ಲೂ ರೇಡಿಯೋ, ಬಗೆ ಬಗೆಯ ಆಸನ, ಶಯ ಚಾಪಾನ, ಸಿಗರೇಟಿನ ಸತ್ಕಾರ, ಇವುಗಳಿಗೇ ಪ್ರಾಧಾ ವಿತ್ತು, ಅವಶ್ಯವಿದ್ದರೂ ಇಲ್ಲದಿದ್ದರೂ ಇವುಗಳನ್ನೇ ತುಂ ಕಾಣಿಸಿ. ಅರ್ಥವಿಲ್ಲದ ಕಥೆಗಳನ್ನು ಅನಭಿಜ್ಞ ದಿಗ್ದರ್ಶಕ ಇನ್ನಷ್ಟು ಅರ್ಥಗೆಡಿಸಿ, ನಾಲ್ಕು ಹಾಡುಗಳಿಂದೇನೊ ಕೊಂ ತೃಪ್ತಿಪಡಿಸಿ ನಮ್ಮನ್ನು ಕಳುಹುತ್ತಿರುವರು. ''ನೇಪಥ್ಯ'' ಕುರಿತು ಕಲಿಸುವವರಿಲ್ಲ, ಕಲಿತವರಿಲ್ಲವಾಗಿದೆ.



ಗಾನವಿಶಾರದೆ ಶೀಲಾ. ಮಿನೆರ್ವದವರ ''ಪುಕಾರ್''—''ಸಿಕಂದರ್'' ಮೊದಲಾದ ಐತಿಹಾಸಿ ಚಿತ್ರಗಳಲ್ಲಿ ಯಶಸ್ವೀ ಅಭಿನಯ ಕೊಟ್ಟು, ಸುಮಧುರ ಕಂಠದಿಂದ ಭಾರತೀಯರನ್ನು ಆನಂ ಗೊಳಿಸಿದ ಈ ನಟಿ, ಈಗ ಸ್ವತಂತ್ರ ನಟಿಯಾಗಿರುವಳು.



ಮೋಕ್ಷ ಸಾಧಕರು

(ಲೇಖಕರು: ಶ್ರೀ। ಕೊರಡ್ಕಲ್ ಶ್ರೀನಿವಾಸರಾವ್.)

ಶ್ರೀ। ಕೊರಡ್ಕಲ್ಲರು ಸದ್ಗ್ರಂಥವಾಚನ ಬಿಟ್ಟು, ಸ್ನೇಹಿತರ ಒತ್ತಾಯದಿಂದ ಸತ್ಕಥಾ ಶ್ರವಣಕ್ಕೆ ಹೋಗುತ್ತಾರೆ. ಅಲ್ಲಿ ಮೋಕ್ಷಸಾಧನೆಗೆ ಬಂದ ಕೆಲವು ಸತ್ಪುರುಷರನ್ನು ಕಂಡು, ಅವರನ್ನು ಹಿಂಬಾಲಿಸುತ್ತಾರೆ ಶ್ರೀ। ಕೊರಡ್ಕಲ್ಲರು ಇತರ ಕೆಲವು ಲೇಖಕರಂತೆ ಇಲ್ಲಿ ಹರಿದಾಸರ ಟೀಕೆಗೆ ಹೋಗುವ ಬದಲು, ಹರಿಕಥಾಶ್ರವಣದಿಂದ ಯಾವ ಪರಿಣಾಮವೂ ಆಗದೆ ಅಥವಾ ತತ್ಕಾಲಿಕ ಪರಿಣಾಮವಾಗಿ ಹೊರಬರುತ್ತಲೇ ಮೊದಲಿನಂತೇ ತಾನೇ ತಾನಾಗುವ ಮಂದಿಯನ್ನು ಕುರಿತು ಎರಡು ಕಠಿನೋಕ್ತಿಗಳನ್ನಾಡುತ್ತಾರೆ.

ಊರಲ್ಲಿ ಶ್ರೀರಾಮನವಮಿ ಮಹೋತ್ಸವವು ಸಂಭ್ರಮದಿಂದ ಸಾಗುತ್ತಲಿತ್ತು. ರಾಮಾಯಣ ಪಾರಾಯಣ, ನಗರಭಜನೆ, ಹರಿಕಥೆ, ಶ್ರೀ ರಾಮಪೂಜೆ, ದಿನನಿತ್ಯ ನಡೆಯುತ್ತಲಿದ್ದುವು. ರಾತ್ರಿ ಸುಮಾರು ಒಂಭತ್ತು ತಾಸಾಗಿರಬಹುದು. ನಾನು ಲೋಕಮಾನ್ಯ ತಿಲಕರ 'ಕರ್ಮಯೋಗ ಶಾಸ್ತ್ರ'ವನ್ನೋದುತ್ತಲಿದ್ದೆ. "ಗ"ರವರು ಬಂದರು. ಬಂದವರೇ 'ಏನಯ್ಯಾ! ಸಲ್ಲದ ಹುಚ್ಚು! ನಾಸ್ತಿಕ ವರ್ತನೆ! ಊರು ಊರೇ ದೇಗುಲದಲ್ಲಿ ಕೂಡಿ ಶ್ರೀರಾಮ ಮಹೋತ್ಸವದಲ್ಲಿ ತಲ್ಲೀನವಾಗಿರುವಲ್ಲಿ ನೀವು ಈ ಮೂಲೆ ಸೇರಿ ಹಾಳು ಪುಸ್ತಕ ಹಿಡಿದು ಕುಳಿತಿರುವಿರಲ್ಲ! ಇನ್ನೊಂದರೆಗಳಿಗೆಯೆಂದರೆ ದಿವ್ಯ ಹರಿಕಥೆಗಾರಂಭವಾಗುತ್ತೆ! ಪಾಪಪರಿಹಾರಕ್ಕೆ, ಪುಣ್ಯಸಂಗ್ರಹಕ್ಕೆ, ಮೋಕ್ಷಪ್ರಾಪ್ತಿಗೆ ಎಂತಹ ಅಲಭ್ಯ ಸಂದರ್ಭ! ಎಂತಹ ಸೌಕರ್ಯ ಸೌಲಭ್ಯ! ವರ್ಷದಲ್ಲಿ ಇದೊಂದು ವಾರವಾದರೂ ಆ ಪುಸ್ತಕದ ಹಾಳುಹರಟೆ ಬಿಟ್ಟು, ದೇವಸ್ಥಾನದ ಕಟ್ಟೆಗೆ ಸಾಗಿ ಪುಣ್ಯ ಕಟ್ಟಿಕೊಳ್ಳಬಾರದೇ? 'ಊರಿಗೊಂದು ದಾರಿ, ಪೋರನಿಗೊಂದು ದಾರಿ' ಎಂಬಂತಾಯಿತಲ್ಲ ನಿಮ್ಮ ಪಾಡು, ಏಳಿ, ಹೋಗೋಣ; ನೀವೊಮ್ಮೆ ಬಂದು ನೋಡಿದರೆ ಮತ್ತೆಂದಿಗೂ ಬಿಡಲಾರಿರಿ!' ಎಂದರು. ಸ್ವರ್ಗಕ್ಕೇರುತ್ತಿರುವ ನಮ್ಮೂರು ಎಲ್ಲಾದರೂ ನನ್ನಿಂದಾಗಿ ಕೆಳಗುರುಳಬಾರದು. ಹೇಗೂ ಇರಲಿ, ಮೋಕ್ಷಕಾಮಿಗಳನ್ನೆಲ್ಲ ಒಂದೊಮ್ಮೆ ನೋಡಿಕೊಂಡು ಬರೋಣ ಅನ್ನಿಸಿತು ನನಗೆ. "ಗ"ರವರೊಡನೆ ಹೊರಟೆ.

ಅಂದು ಕೊನೆಯ ದಿನ. ಹರಿದಾಸರು ರಾಮಾಯಣ ಕಥಾಮೃತವನ್ನೆಲ್ಲ ಆ ಮೊದಲೆ ಊರಿಗೆ ಧಾರಾವಾಹಿಯಾಗಿ ಹರಿಯಿಸಿಯಾಗಿತ್ತು. ಮಂದಿಯೆಲ್ಲ ಹೀರಿ ಹೀರಿ ಪುನೀತವಾಗಿತ್ತು. ಆದುದರಿಂದ ಪುನರಾವರ್ತನೆಯ ರೂಪದಲ್ಲಿ ಹರಿದಾಸರಂದು ಎತ್ತಿಕೊಂಡಿದ್ದ ವಿಷಯ ರಾಮಾಯಣ ಸಾರ ಸಂಗ್ರಹ, ಎಂದ ಮೇಲೆ ರಾಮನ ಪಿತೃವಾಕ್ಯ ಪರಿಪಾಲನೆ, ಆತನ ಏಕಪತ್ನೀವ್ರತ, ಭರತನ ಭ್ರಾತೃಪ್ರೇಮ, ಸೀತೆಯ ಪತಿಭಕ್ತಿ, ಲಕ್ಷ್ಮಣನಿಗೆ ಅವಳಲ್ಲಿದ್ದ ಮಾತೃಭಾವ, ಇವೆಲ್ಲ ಹೃದಯಂಗಮವಾಗಿಯೆ ಚಿತ್ರಿತವಾದುವು. ಮಂದಿಯು ಸೈಸೈಯೆಂದು ತಲೆದೂಗಿತು. ಜೈಜೈಯೆಂದೂ ಕೂಗಿತು. ಕೈಕೆಂಪಡರುವತನಕವೂ ಚಪ್ಪಾಳೆ ಹೊಡೆಯಿತು. ಬಂದವರೆಲ್ಲ ಮಂಗಳಾರತಿ ನೋಡಿ ಗಂಧಪ್ರಸಾದದ ಉದ್ದುದ್ದ ನಾಮ ಎಳೆದುಕೊಂಡು ಜನ್ಮಸಾರ್ಥಕವಾಯಿತೆಂಬ ಹಿಗ್ಗಿನಿಂದ ಚದರ ತೊಡಗಿದರು. ನಾವೂ ಹೊರಟೆವು.

"ನೋಡಿದಿರಾ? ಹ್ಯಾಗೆ!" "ಗ"ರವರ ಹಿಗ್ಗಿನ ಪ್ರಶ್ನೆ.

"ನೋಡಿದೆ ಸ್ವಾಮಿ, ಸಾಧಾರಣ ಎಲ್ಲ ನಾಯಿಬಾಲ!" ನನ್ನ ಕಿರುನಗೆಯ ಉತ್ತರ.


'ಹಾಗೆಂದರೆ?' ಅವರ ಕುತೂಹಲದ ನುಡಿ.

"ಒಳಗೆ ಸಭೆಯಲ್ಲಿ ಎಷ್ಟೋ ಮಂದಿಯನ್ನು ಕಂಡೆ. ಅವರೆಲ್ಲ ಪಾವನರಾಗಿರಬೇಕೆಂದು ಹಿಗ್ಗಿದೆ. ಆದರೆ ಬರೇ ಭ್ರಮೆ! ಈಗ ಹೊರಬಂದು ನೋಡುತ್ತೇನೆ, ಅವರೆಲ್ಲ ಹಿಂದಿನಂತೇ!" ಎಂದು ನನ್ನ ಒಗಟಿನ ಪೊಟ್ಟಣ.

'ಒಗಟನ್ನು ಬಿಚ್ಚಿ ಸ್ಪಷ್ಟವಾಗಿ ಹೇಳಿಬಿಡಿ ನೋಡೋಣ!' ಅವರ ಅಪ್ಪಣೆ.

ನಾನೆಂದೆ: "ನೋಡಿ, ಎದುರಲ್ಲಿ ಕಂಭದ ಬಳಿಯಲ್ಲಿ ಕುಳಿತಿದ್ದನಲ್ಲ ಆ "ನ"? ಶ್ರೀರಾಮನ ಏಕಪತ್ನೀ ವ್ರತದ ವರ್ಣನಾಂತ್ಯದಲ್ಲಿ 'ಜೈರಾಮ್ ಸೀತಾರಾಮ್, ಜೈರಾಮ್ ಸೀತಾರಾಮ್' ಎಂದು ಎಲ್ಲರಿಗಿಂತಲೂ ಮಿಗಿಲಾಗಿ ಕೂಗಿ ಚಪ್ಪಾಳೆ ಹೊಡೆಯುತ್ತಿದ್ದನಲ್ಲ? ಇಂದಾದರೂ ಆ ಪುನೀತ ನೆಟ್ಟಗೆ ಮನೆಗೆ ಸಾಗಿ ಹೆಂಡತಿಯನ್ನು ಕಂಡಾನೆಂದು ಎಣಿಸಿದ್ದೆ. ಆದರೆ ನೋಡಿ, ಆಗಲ್ಲೀ ಪಕ್ಷಿಯ ಬೆನ್ನು ಹಿಡಿಯ ಹತ್ತಿದೆ ಆ ಪ್ರಾಣಿ! ಈಚೆ ನೋಡಿ, ಈ "ರ". ಇವಳ

(78ನೇ ಪುಟಕ್ಕೆ ಮುಂದುವರಿದಿದೆ)



ಯುದ್ಧೋತ್ತರ ಪುನರ್ರಚನೆಯಲ್ಲಿ

ಖಾದಿಯು ಸ್ಥಾನ

(ಲೇಖಕರು: ಶ್ರೀ। ಎಚ್. ನಾರಾಯಣರಾವ್.)

ಯಾಂತ್ರಿಕ ಪ್ರಚಂಡತೆಯನ್ನು ನೋಡಿ ವಿಸ್ಮಯಗೊಂಡು "ಇದರಿಂದಲೇ ಜಗತ್ತಿನ ಆರ್ಥಿಕ ಉನ್ನತಿ" ಎಂದು ಭಾವಿಸುವ ಲೋಕದಲ್ಲಿ, ಮಹಾತ್ಮನೋರ್ವನು ಶಾಂತವಾಗಿ, ದೃಢಚಿತ್ತದಿಂದ ಕುಳಿತು ನೂಲುತ್ತಿರುವನು. ಜನಾಂಗಕ್ಕೆ ಸ್ವಾತಂತ್ರ್ಯ—ಲೋಕಕ್ಕೆ ಶಾಂತಿ—ಇದು ಆ ಮಹಾತ್ಮನ ಜೀವಿತೋದ್ದೇಶ; ಖಾದಿಯೊಂದೇ ಜೀವನದ ಹಾದಿ—ಇದು ಆ ಮಹಾತ್ಮನ ಸಂದೇಶ. ಶೋಷಣಾಪದ್ಧತಿ ಕೊನೆಗೊಳ್ಳುವನಕ ಜಗತ್ತಿಗೆ ಶಾಂತಿಯಿಲ್ಲ; ಶೋಷಣ ಪದ್ಧತಿಯಿಲ್ಲದಿರುವುದು ಒಂದೇ—ಖಾದಿ. ಮಹಾತ್ಮರ ಈ ತತ್ವವನ್ನು, ಖಾದಿ ಕಾರ್ಯದಲ್ಲೆ ತಮ್ಮ ಜೀವನವನ್ನರ್ಪಿಸಿರುವ ಶ್ರೀ। ಎಚ್. ನಾರಾಯಣ ರಾವ್ ಅವರು ಅಧಿಕಾರವಾಣಿಯಿಂದ ವಿವರಿಸುತ್ತಾರೆ.

ಯುದ್ಧೋತ್ತರ ಪ್ರಪಂಚದಲ್ಲಿ ಪುನರ್ರಚನೆಯು ಯಾವ ರೀತಿಯಿಂದ ನಡೆಯಲಿಕ್ಕಿದೆ ಮತ್ತು ಹೇಗೆ ನಡೆಯುತಕ್ಕದ್ದು ಎಂಬುದರ ಕುರಿತು ಈಗ್ಗೆ ಬಹಳ ದಿನಗಳಿಂದ ಅನೇಕ ಅರ್ಥ ಶಾಸ್ತ್ರಜ್ಞರೂ, ರಾಜನೀತಿಜ್ಞರೂ ಯೋಚಿಸತೊಡಗಿದ್ದಾರೆ; ನವಯೋಜನೆಗಳೂ ಸಿದ್ಧವಾಗಿವೆ. ಈ ಯೋಜನೆಗಳು ಜಗತ್ತಿನ ದೃಷ್ಟಿಯನ್ನು ತಮ್ಮ ಕಡೆಗೆ ಸೆಳೆಯುವುದು ಸಹಜವಾಗಿಯೇ ಇದೆ. ಇವುಗಳ ಮುಂದಿನ ರೂಪ-ರೇಖೆಗಳ ಮೇಲೆಯೇ ಭಾವೀ ಜನಾಂಗದ ಜೀವನವು ಸಂಪೂರ್ಣ ಅವಲಂಬಿಸಿದೆ. ಪುನರ್ರಚನೆಯೇನೊ ಆವಶ್ಯಕ. ಆದರೆ ಅಂಥಾ ರಚನೆಯು ಯಾವ ತತ್ವಗಳ ಮೇಲೆ ಅವಲಂಬಿಸಿರಬೇಕೆಂಬುದೇ ಮುಖ್ಯ ಪ್ರಶ್ನೆ.

ಜಾಗತಿಕ ಯುದ್ಧದಿಂದ ಜನರು ಸೋತು ಸುಣ್ಣಾಗಿದ್ದಾರೆ. ಇನ್ನು ಮುಂದೆ ಯುದ್ಧಗಳೇ ನಡೆಯದಂತಾಗಲಿ ಎಂದು ಲೋಕದ ಹಾರೈಕೆ. ಇದಕ್ಕೆ ದಾರಿಯೇನೆಂದು ಅನೇಕರು ಯೋಚಿಸುತಿದ್ದಾರೆ. ಎಲ್ಲಿಯು ತನಕ ಶೋಷಣ ಪದ್ಧತಿ (Exploitation) ಇರುವದೋ ಅಲ್ಲಿಯ ತನಕ ಯುದ್ಧವು ಅನಿವಾರ್ಯವೇ ಸರಿ. ಜಗತ್ತಿನ ದೊಡ್ಡ ಯಾಂತ್ರಿಕ ಕೈಗಾರಿಕೆಗಳೆಲ್ಲಾ ಶೋಷಣ ಪದ್ಧತಿಯ ಅಡಿಗಲ್ಲಿನ ಮೇಲೆ ಕಟ್ಟಲ್ಪಟ್ಟವೆ.

ಭಂಡವಾಳಿಗರು ಈ ಕೈಗಾರಿಕೆಗಳನ್ನು ಯುದ್ಧಕಾಲದಲ್ಲಿ ಯುದ್ಧೋಪಕರಣಗಳನ್ನು ಸಿದ್ಧಗೊಳಿಸುವುದಕ್ಕೂ, ಶಾಂತಿಕಾಲದಲ್ಲಿ ಭೋಗೋಪಕರಣಗಳನ್ನು ಜನಪದ ರೀತ್ಯಾ ಉತ್ಪನ್ನ ಮಾಡಿ ಅತಿ ಸುಲಭ ಬೆಲೆಗೆ ಮಾರಾಟ ಮಾಡುವುದಕ್ಕೂ ತಾನು ಮೇಲು ನಾನು ಮೇಲೆಂದು ಪೈಪೋಟಿಯಿಂದ ವ್ಯಾಪಾರ ನಡೆಸುವರು. ಯುದ್ಧಕ್ಕಾಗಿ ಹುಡುಕಲ್ಪಟ್ಟ ಅತಿ ಸೂಕ್ಷ್ಮ ಮತ್ತು ಘೋರ ಯಂತ್ರಗಳನ್ನು ಹೇಗೆ ಪುನರ್ರಚನೆಯ ಕಾರ್ಯಕ್ಕೆ ಉಪಯೋಗಿಸಬಹುದು? ಪ್ರಚಂಡ ಉತ್ಪತ್ತಿಯಿಂದ (Mass Production) ರಾಷ್ಟ್ರಗಳೊಳಗೆ ವ್ಯಾಪಾರವು ಸ್ಪರ್ಧೆಯಿಂದ ನಡೆಯುವಂತೆ ಹೇಗೆ ಮಾಡಲು ಸಾಧ್ಯವಿದೆ ಎಂದು ತಜ್ಞರೆಲ್ಲರೂ ಯೋಚಿಸುತ್ತಿದ್ದಾ[ರೆ]. ಇದಕ್ಕಾಗಿ ಆಗಲೇ ಕಾರ್ಯಾರಂಭವೂ ಆಗಿದೆ. ಮಾನ[ವ] ಸುಖಭೋಗಗಳಿಗೆ ಸಕಲ ಸೌಕರ್ಯಗಳನ್ನು ಕಲ್ಪಿಸಬೇಕು. ಇದಕ್ಕಾಗಿ ಸುಸಂಘಟಿತ ಸಂಸ್ಥೆಗಳೂ, ಸರಕಾರಗಳೂ ತಂತಮ್ಮ ರೂಪು-ರೇಖೆಗಳನ್ನು ಬದಲಾಯಿಸುವುದು ಅವಶ್ಯವೆಂದು ಇವರು ಅನ್ನುವರು.

ಆಧುನಿಕ ನಾಗರಿಕತೆಯ ಈ ದಿನಗಳಲ್ಲಿ ಜೀವನ[ದ] ಸೌಕರ್ಯಗಳೆಲ್ಲವೂ ಸುಲಭಸಾಧ್ಯವಾಗುವಂತೆ, ಯಂತ್ರಗಳ ಸಹಾಯದಿಂದ ದೊಡ್ಡ ದೊಡ್ಡ ಕೈಗಾರಿಕೆಗಳನ್ನು ಸ್ಥಾಪಿಸಿ ತನ್ಮೂಲಕ ಎಲ್ಲರಿಗೂ ಕೆಲಸ ಎಲ್ಲರಿಗೂ ಸುಖ

(77ನೇ ಪುಟದಿಂದ ಮುಂದುವರಿದುದು)

ಗಂಡ ಹೆಂಡತಿಗಾಗಿ ಜೀವ ಅರೆದು ದುಡಿಯುತ್ತಿದ್ದಾನೆ ಪ[ಂಚ]ವೂರಲ್ಲಿ. ಇವಳು, ಸುಂದರ ರಾವಣನ ವೈಭವದ ಪ್ರಲೋಭನೆಗಳಿಗೂ ಮರುಳಾಗದ ಸೀತೆಯ ಪತಿವ್ರತಾ ದಾರ್ಢ್ಯವನ್ನು ಕಿವಿಯಾರೆ ಕೇಳಿದ ಇವಳು ಈಗ ಯಾರನ್ನು ಕಟ್ಟಿಕೊಂಡು ಹೋಗುತ್ತಿದ್ದಾಳೆ ನೋಡಿದಿರಾ? ಅಚೆ ನೋಡಿ ಅಲ್ಲಿ ಹೋಗುತ್ತಿದ್ದಾನೆ ಆ "ಪ". ಭರತನ ಬಂಧುಪ್ರೇಮದ ವರ್ಣನೆಯಾಗುತ್ತಿದ್ದಾಗ ತಲೆದೂಗುತ್ತಿದ್ದನಲ್ಲ? ಭರತನು ಅಣ್ಣನ ಪಾದುಕೆಗಳನ್ನು ತಲೆಯ ಮೇಲೆ ಹೊರುವಷ್ಟು ಭಕ್ತಿ ತೋರಿದ್ದರೆ, ಈ ಪ್ರಾಣಿ ತನ್ನದರಿಂದ ಅಣ್ಣನ ಕಪಾಲಕ್ಕೆ ಹೊಡೆವಷ್ಟು ಶಕ್ತಿ ತೋರಿದ್ದ. ಇನ್ನು ಹಿಂದೆ ನೋಡಿ, ಅಲ್ಲಿ ಬರುತ್ತಿದೆ ಮತ್ತೊಂದು ಪ್ರಾಣಿ! ಸೋದರನ ಪತ್ನಿಯಲ್ಲಿ ತಾಯಿಯನ್ನು ಕಂಡ ಆ ಮಹಾತ್ಮನ ಚರಿತಾಮೃತವನ್ನು ಕಿವಿ ಪೂರ ಹೀರಿದೆ. ಆದರೆ ಇದರ ಕೃತಿ? ಅಣ್ಣನಿಗೆ ಹುಚ್ಚು ಹಿಡಿಸಿ, ಕಟ್ಟಿಕೊಂಡ ಅತ್ತಿಗೆಯೊಡನೆ ಸರಸಮಾಡುತ್ತ ಬರುತ್ತಿದೆ! ಹೀಗೇ ಸುತ್ತು ಮುತ್ತು ನೋಡಿ: ಇವರು ಮನುಷ್ಯರೇ ಪಶುಗಳೇ? ಹರಿದಾಸರ ಮಾತಿನ ನಳಿಗೆಯೊಳಗಿರುವಷ್ಟು ಈ ಬಾಲಗಳು ನೆಟ್ಟಗೆ; ಅನಂತರ ತಿರುಗಿ ಎಂದಿನಂತೆ ಸೊಟ್ಟಗೆ!"

ದೊರಕಿಸಬೇಕೆಂಬುದು ಈ ಪುನರ್ರಚನೆಯ ಉದ್ದೇಶವಾಗಿದೆ. ಇದಕ್ಕಾಗಿ ದೊಡ್ಡ ಕಾರ್ಖಾನೆಗಳ ಸ್ಥಾಪನೆಯಾಗಿ ಕೈಗಾರಿಕೆ–ವ್ಯಾಪಾರಗಳೆಲ್ಲವೂ ತದನುಸಾರವಾಗಿ ರೂಪುಗೊಳಿಸಲ್ಪಟ್ಟವೆ. ಆದರೆ ಶೋಷಣಪದ್ಧತಿಯು ಮಾತ್ರ ಇದರಲ್ಲಿ ಮೊದಲಿನಂತೇ, ಅಚ್ಚಳಿಯದೆ ಉಳಿದಿದೆ. ಕೆಲವರ ಭೋಗಕ್ಕಾಗಿ ಹಲವರು ಅನುದಿನ ದುಡಿಯಬೇಕಾಗುವುದು. ಈ ಪದ್ಧತಿಯಲ್ಲಿ ಶಾಂತಿ ಇರಲಾರದು.

ವೇಗದ ಪ್ರಮಾಣ, ಜಲ, ನೆಲ ಆಕಾಶಗಳಲ್ಲಿ ಸಂಚರಿಸಲು ಬೇಕಿದ್ದ ಉಪಕರಣಗಳ ಸಿದ್ಧತೆಗಳಿಂದೊಡಗೂಡಿದ ಸಮಾಜರಚನೆಯಲ್ಲಿ, ಜನರ ಅಭ್ಯಾಸ, ಜೀವನ, ಮನೋವೃತ್ತಿಗಳೆಲ್ಲವೂ ವ್ಯತ್ಯಾಸ ಹೊಂದದಿರಲಿಕ್ಕಿಲ್ಲ. ಇಂಥಾ ಪುನರ್ರಚನೆಯ ಕಾರ್ಯಕ್ಷೇತ್ರದಲ್ಲಿ ಖಾದಿಗೆ ಸ್ಥಾನವಿದ್ದೀತೆ ಎಂಬ ಪ್ರಶ್ನೆಯುತ್ಪನ್ನವಾಗುವುದು ಸಹಜವಾಗಿದೆ. ಈ ಪ್ರಶ್ನೆಯನ್ನು ಸಮರ್ಪಕವಾಗಿ ಬಿಡಿಸಬೇಕಾದರೆ, ಖಾದಿಯ ಅರ್ಥ ಮತ್ತು ಧ್ಯೇಯಗಳ ಕುರಿತು ವಿಮರ್ಶಿಸುವುದು ಅಗತ್ಯ.

ಖಾದಿ ಎಂದರೆ ಒರಟಾದ ಕೈನೂಲಿನಿಂದ ತಯಾರಿಸಲ್ಪಟ್ಟ ಬಟ್ಟೆ ಎಂದಷ್ಟೇಯಲ್ಲ. ಖಾದಿಯ ನೀತಿ ಶಾಸ್ತ್ರದ ಧ್ಯೇಯವು ಯಂತ್ರಯುಗದ ಧ್ಯೇಯಗಳಿಗಿಂತ ಭಿನ್ನವಾಗಿದೆ.

"ಶೋಷಣ ವೃತ್ತಿಯನ್ನು ಹತ್ತಿಕ್ಕಿದರೆ ಮಾತ್ರ ಅರ್ಥಶಾಸ್ತ್ರಕ್ಕೆ ನೀತಿಶಾಸ್ತ್ರದ ಹೊಳಪು ಕೂಡುವುದು. ನೀತಿಯಿಂದ ಕೂಡಿರದ ಅರ್ಥಶಾಸ್ತ್ರವು ಬರೇ ಅರ್ಥಶಾಸ್ತ್ರವಲ್ಲ" ಎಂದು ಗಾಂಧೀಜಿಯವರು ಅನ್ನುತ್ತಾರೆ. ಖಾದಿಯು ನೀತಿಯಿಂದ ಕೂಡಿದ ಅರ್ಥಶಾಸ್ತ್ರದ ಮೇಲೆ ಅವಲಂಬಿಸಿದೆ. ಶೋಷಣವನ್ನು ಹತ್ತಿಕ್ಕಿದ ಅರ್ಥಶಾಸ್ತ್ರವೆಂದರೆ ಖಾದಿಯಿಂದ ಉತ್ಪನ್ನವಾದ ಅರ್ಥಶಾಸ್ತ್ರ. ಅಶೋಷಣ ಪದ್ಧತಿಯಿಂದ ಸ್ಥಾಪಿಸಲ್ಪಟ್ಟ ಸಮಸ್ತ ಗ್ರಾಮ ಕೈಗಾರಿಕೆಗಳೂ ಖಾದಿ ಎನ್ನಿಸಿಕೊಳ್ಳುತ್ತವೆ ಗಾಂಧೀಜೀಯವರು ಖಾದಿಯನ್ನು ಸೂರ್ಯಮಂಡಲಕ್ಕೂ ಇತರ ಗ್ರಾಮಕೈಗಾರಿಕೆಗಳನ್ನು ಅದರ ಸುತ್ತಮುತ್ತಲಿರುವ ಗ್ರಹಗಳಿಗೂ ಹೋಲಿಸಿರುತ್ತಾರೆ. ಇದು ಅತಿ ಸುಂದರವಾದ ಉಪಮೆಯಾಗಿದೆ. ಖಾದಿಯ ಸುತ್ತಲೂ ಇತರ ಗ್ರಾಮಕೈಗಾರಿಕೆಗಳು ಬೆಳೆಯಲಿಕ್ಕೇಬೇಕು. ಗ್ರಾಮಾಂತರಗಳಲ್ಲಿ ಜೀವನಕ್ಕೆ ಅವಶ್ಯವಿರುವ ಸಕಲ ಪದಾರ್ಥಗಳನ್ನು ಉತ್ಪತ್ತಿ ಮಾಡುವ ಮತ್ತು ಉಪಯೋಗಿಸುವ ಶಕ್ತಿಯುಳ್ಳ ಸಮಾಜ ರಚನೆಯಾಗಬೇಕು. ಇಂಥ ಸಮಾಜಕ್ಕೆ ಅಶೋಷಣ ಸಮಾಜವೆನ್ನಬಹುದು. ಇದರಲ್ಲಿ ಪ್ರಾಯಶಃ ಸುಲಿಗೆ ಇರಲಾರದು. ಒಂದು ವೇಳೆ ಸುಲಿಗೆಯ ಸುಳಿವು ಇರಬಹುದಾದರೂ ಅದು ತೀರ ಕಡಮೆ ಪ್ರಮಾಣದಿಂದಿದ್ದು ಹಾನಿಕರವಾಗಿರಲಾರದು. ಇಂಥ ಸಮಾಜ ರಚನೆಯೇ ಖಾದಿಯ ಧ್ಯೇಯ. ಎಲ್ಲೆಲ್ಲಿ ಖಾದಿ ಬೆಳೆಯುವದೋ ಅಲ್ಲಲ್ಲಿ ಶೋಷಣೆರಹಿತ ಸಮಾಜವು ರೂಪುಗೊಳ್ಳುವುದು. ಇಂಥ ಸಮಾಜದ ಧ್ಯೇಯ ಮತ್ತು ಜನರ

ನಾಗರೀಕತೆಯ ನೀತಿಯು ಅಹಿಂಸಾತ್ಮಕವಾಗಿದ್ದು ಮಾನವೀ ಶಕ್ತಿಯ ವಿಕಾಸಕ್ಕೆ ತುಂಬಾ ಸಹಕಾರಿಯಾಗುವುದು. ಇದರಿಂದ ಇಡೀ ಪ್ರಪಂಚಕ್ಕೆನೇ ಲಾಭವಾಗುವುದು. ಇದರಿಂದ ಜಾಗತಿಕ ಯುದ್ಧಗಳ ಹೆಸರೇ ಅಡಗಿಹೋಗುವುದರಲ್ಲಿ ಸಂಶಯವಿಲ್ಲ.

ಯುದ್ಧದಿಂದ ಬೆಂದು ಬೇಸತ್ತಿರುವ ಮಾನವಕೋಟಿಗೆ ಇಂಥ ಪುನರ್ರಚನೆಯು ರುಚಿಸದೇ? ಯುದ್ಧಕ್ಕೆ ಬೀಜ ಹಾಕುವ ನಾಗರೀಕತೆಯು ಇನ್ನೂ ಬೇಕೆನ್ನಬಹುದೇ? ನಮ್ಮ ಮಕ್ಕಳು ಮರಿಗಳಿಗೂ ಯುದ್ಧವು ಸಾಕೆನ್ನಿಸಿದ ಈ ದಿನಗಳಲ್ಲಿ ಖಾದಿ ತತ್ವಕ್ಕೆ ಪ್ರೋತ್ಸಾಹ ಸಿಗದಿದ್ದರೆ, ಜನಾಂಗಗಳ ಭಾವೀ ಜೀವನವು ಚಿಂತಾಜನಕವಾಗಿರುವುದು ಶತಸಿದ್ಧ.

ಖಾದಿ ಸ್ಥಾಪನಾಚಾರ್ಯರಾದ ಮಹಾತ್ಮಾ ಗಾಂಧಿಯವರಿಗೆ ಖಾದಿಯಲ್ಲಿ ಅಚಲ ಶ್ರದ್ಧೆಯಿದೆ. "ಖಾದಿ ಮೂಲಕ ಮಾನವ ವರ್ಗದ ಸೇವೆ" ಇದು ಅವರ ಜೀವನದ ಜೀವಾಳವಾಗಿದೆ. "ರಾಟಿಯು ಅಹಿಂಸೆಯ ಪ್ರತೀಕವಾಗಿರಬೇಕು. ಅಹಿಂಸಾ ಸಮಾಜ ರಚನೆಯೇ ತನ್ನ ಕನಸು. ರಾಟಿಯ ಮೂಲಕ ಇದು ಸಾಧ್ಯವಾಗದಿದ್ದರೆ ರಾಟಿಯನ್ನು ತಾನು ಬೆಂಕಿಗೆ ಎಸೆಯುವುದಕ್ಕೆ ಹಿಂಜರಿಯುವುದಿಲ್ಲ. ರಾಟಿಯ ಮೇಲೆ ತನಗೇನೂ ಮೋಹವಿಲ್ಲ" ವೆನ್ನುತ್ತಾರೆ ಅವರು. ಕುಂಪಣಿ (East India Company) ಯವರ ಕಾಲದಲ್ಲಿ ಈ ರಾಟಿಯು ಸುಲಿಗೆಯ ಗುರುತಾಗಿತ್ತು. ಆದ್ದರಿಂದ ಹಿಂಸೆಯ ಪ್ರತೀಕವಾಗಿತ್ತು. ಅದನ್ನು ಅಟ್ಟದಿಂದ ತಾನು ಕೆಳಕ್ಕಿಳಿಸಿ ಅದರ ಮೇಲಿರುವ ಜೇಡರ ಬಲೆಯನ್ನು ಗುಡಿಸಿ ಹಳ್ಳಿಗೊಯ್ದು ಅಹಿಂಸೆಯ ಪ್ರತೀಕವನ್ನಾಗಿ ಅದನ್ನು ಸ್ಥಾಪಿಸಲು ಅನುದಿನ ಶ್ರಮಪಟ್ಟಿದ್ದೇನೆ" ಎಂದು ಅವರು ಹೇಳುತ್ತಾರೆ. ಚರಕಕ್ಕೆ ಇಂಥ ಮಹತ್ವಸ್ಥಾನವನ್ನು ಅವರು ಕೊಟ್ಟದ್ದಲ್ಲದೆ, ಹಿಂದುಸ್ಥಾನದ ಸ್ವಾತಂತ್ರ್ಯಕ್ಕಾಗಿ ಗ್ರಾಮ ಸೇವೆ ಅಗತ್ಯವೆಂದು ಕಂಡುಹಿಡಿದರು. ದೇಶಾಭಿಮಾನಿಗಳ ದೃಷ್ಟಿಯನ್ನು ಗ್ರಾಮಾಂತರಗಳಿಗೆ ತಿರುಗಿಸಿದರು. ಹಳ್ಳಿಗಾಡಿನಲ್ಲಿಯೇ ಅಹಿಂಸಾ ಸಮಾಜ ರಚನೆಯಾಗಿ, ದೇಶದ ಸ್ವಾತಂತ್ರ್ಯ ಸ್ಥಾಪ[illegible] ಮೂಲಕ ಪ್ರಪಂಚ ಸೇವೆ ನಡೆಯಬೇಕೆಂದು ಅವರು [illegible] ಜನ್ಮದ ಗುರಿಯನ್ನಾಗಿಟ್ಟುಕೊಂಡಿದ್ದಾರೆ. ಈ ಧ್ಯೇ[illegible] ಸಾಧನೆಯೇ ಖಾದಿಯ ಅರ್ಥ ಅಂದ ಮೇಲೆ ಖಾ[illegible] ಪ್ರಸಾರವೇ ಪುನರ್ರಚನೆಯಾಗಲಿಲ್ಲವೇ?

ಚರಖಾ ಸಂಘದ ಕಾರ್ಯದ ವಿಕೇಂದ್ರೀ[illegible] ಯೋಜನೆಯೇ ಈ ಪುನರ್ರಚನೆಯ ಅಸ್ತಿಭಾರ. "[illegible]ಗಳ ಪುನರುತ್ಥಾನ" ಎಂಬ ಶಬ್ದಕ್ಕೆ ಗಾಂಧೀಜಿಯ[illegible] ಒಪ್ಪಲಿಲ್ಲವಂತೆ. ಇದರ ಬದಲಿಗೆ "ಗ್ರಾಮ ಸೇವೆ" [illegible] ಶಬ್ದಗಳನ್ನು ಅವರು ಸೂಚಿಸಿದರಂತೆ. ಈಗಿನ ಅವರ ಸ[illegible] ಗ್ರಾಮ ಸೇವಾ ಕಾರ್ಯದಲ್ಲಿ, ಖಾದಿಗೆ ಕೇಂದ್ರ ಸ[illegible] ಕೊಡಲ್ಪಟ್ಟಿದೆ. ಇದರ ಸುತ್ತುಮುತ್ತಲೂ ಇತರೇ ಗ್ರಾ[illegible] ಸೇವಾ ಕಾರ್ಯಗಳು ರೂಪುಗೊಳಿಸಲ್ಪಟ್ಟಿವೆ. ಸಮಾ[illegible] ದೃಷ್ಟಿ ಪಥವನ್ನೇ ಬದಲಾಯಿಸುವ ಉದಾತ್ತ ಧ್ಯೇಯದಿ[illegible] ಸ್ಥಾಪಿಸಲ್ಪಟ್ಟ ಖಾದಿಯು ಸರ್ವ ಮಾನ್ಯವಾಗದಿರ[illegible] ಜಗತ್ತಿನ ಸುಖಕ್ಕೂ ಶಾಂತಿಗೂ ಕಾರಣಭೂತವಾದು[illegible] ಖಾದಿಯೊಂದೇ. ಯುದ್ಧೋತ್ತರ ಪುನರ್ರಚನೆಯ[illegible] ಖಾದಿಗೆ ಪವಿತ್ರ ಸ್ಥಾನವಿದೆ. ಮಾತ್ರವಲ್ಲ, ಆತ್ಮೋನ[illegible] ಮಾಡುವ ಮಹಾಶಕ್ತಿಯಿದೆ.

—o : : o—

ಶ್ಲೋ॥ ಲಕ್ಷ್ಮೀರ್ಮೈತ್ರೀ ಬಂಧುತಾ ಭೋಗಭಾಗ್ಯ ।
ಧರ್ಮಾಧರ್ಮೌ ಬಂಧನಂ ಪಂಚತಾವಾ ॥
ಸರ್ವಂಹ್ಯೇತದ್ವರ್ತತೇ ಜಿಹ್ವಕಾಗ್ರೇ ।
ತಸ್ಮಾಲ್ಲೋಕೇ ಸಾಧುವಾಕ್ಸೌಖ್ಯಮೇತಿ ॥

ತಾತ್ಪರ್ಯ॥ ಐಶ್ವರ್ಯ, ಸ್ನೇಹ, ಬಾಂಧ[illegible] ಭೋಗಭಾಗ್ಯಗಳು, ಧರ್ಮಾಧರ್ಮಗಳು, ಬಂಧನ, ಮರ[illegible] ಇವೆಲ್ಲ ಮನುಷ್ಯನ ನಾಲಿಗೆ ತುದಿಯಲ್ಲಿ ಇರುವವಾ[illegible] ಒಳ್ಳೆಯ ಮಾತುಳ್ಳವನು ಸುಖವನ್ನೈದುವನು.

ಮನುಷ್ಯರ

ದರ್ಪವನ್ನಿಳಿಸುವ ಸರ್ಪಗಳು

(ಲೇಖಕಿ: ಶ್ರೀಮತಿ ಸರಸ್ವತಿ ಬಾಯಿ, ರಾಜವಾಡೆ.)



ಇದು ಒಂದು ಕಥೆಯಲ್ಲ; ಸರ್ಪಗಳ ವಿಷಯಕವಾದ ಶೋಧನಾತ್ಮಕ ಲೇಖನವೂ ಅಲ್ಲ. ಶ್ರೀಮತಿ ರಾಜವಾಡೆಯವರು, ಕೆಲವೊಂದು ಘಟನೆಗಳನ್ನು ಕೂಡಹಾಕಿ, ತಮ್ಮದೇ ಆದ ಒಂದು ಶೈಲಿಯಲ್ಲಿ ವಿವರಿಸಿರುವರು. ಕಥನ ರೀತಿಯಲ್ಲೊಂದು ಆಕರ್ಷಣೆಯಿದೆ. ಲೇಖಕಿಯು ಇದನ್ನು ಕೂಡಹಾಕುವಲ್ಲಿ ಸರ್ಪಗಳ ಕೆಲವೊಂದು ಶಕ್ತಿಗಳನ್ನೂ ಮನುಷ್ಯರ ಮೇಲಾಗುವ ಪರಿಣಾಮವನ್ನೂ ವಿವರಿಸುವ ಮೂಲಕ ತನ್ನ ನಂಬುಗೆಯೂ ಆ ಕಡೆ ವಾಲಿರುವುದನ್ನು ಹೇಳಿರುವುದಾದರೂ, ಅದು ಖಚಿತಗೊಂಡು ವಿವರಿಸಿದ ಅಥವಾ ನಿಶ್ಚಿತವಾದ ಅಭಿಪ್ರಾಯವಲ್ಲ. ಅನೇಕರು ಸರ್ಪಗಳ ಅದ್ಭುತ ಶಕ್ತಿಯನ್ನು ನಂಬದೇ ಇರಬಹುದು. ಆದರೆ, ಕೆಲವೊಂದು ಕಥೆಗಳು ಅದ್ಭುತಕರವಿದ್ದು ಲಕ್ಷ್ಯವನ್ನು ಸೆಳೆಯುತ್ತವೆ; (ಅವುಗಳ ಮರ್ಮವನ್ನು) ವಿವರಿಸಬರುವುದಿಲ್ಲ.

"ಎಷ್ಟರ ಮಾಲೆಗಳನ್ನಿಡಲಮ್ಮಾ ಈ ಹೊತ್ತು?" ಎಂದು ರಂಜೆಹೂವಿನ ಮೈರೆಯು ದನಿಕೊಟ್ಟಾಗ, ಕಾಫಿ ಕುಡಿಯುತಿದ್ದ ನಾನು ಹೊರಬಂದೆ. ಬೇಕಾದ ಮಾಲೆಗಳನ್ನು ತೆಗೆದಿಟ್ಟು, ನಿಯಮದಂತೆ, ಅವಳಿಗೆ ಎಲೆ ಅಡಿಕೆಯನ್ನು ಕೊಟ್ಟೆ. ಅವಳದನ್ನು ಜಗಿಯುತ್ತ ಕುಳಿತಳು. ಮುಖವು ಸ್ವಲ್ಪ ಬಾಡಿತ್ತು.

"ಏನು, ಒಂದು ಮಾದರಿಯಾಗಿರುವೆ?" ಎಂದೆ. ಅವಳು ಹೇಳಿದುದನ್ನು ಕೇಳಿ ಆಶ್ಚರ್ಯವಾಯಿತು. ಅವಳೆಂದಳು: 'ಏನೆನ್ನಲಮ್ಮಾ, ನಮ್ಮದು ನಿರ್ಭಾಗ್ಯ ಕುಟುಂಬ. ಅನೇಕ ತಲೆಗಳಿಂದ ಸರ್ಪಶಾಪಕ್ಕೊಳಗಾಗಿದ್ದೇವೆ. ನಿನ್ನೆ ನಮ್ಮದೊಂದು ಎಮ್ಮೆ ಇದ್ದಕ್ಕಿದ್ದಂತೆ ಸತ್ತುಹೋಯಿತು. ಒಳ್ಳೆಯ ಎಮ್ಮೆ ನೋಡಿ; ಜೇಳೆ ಹಾಲು ಕೊಡುತಿತ್ತು. ಹೋದ ವರ್ಷವೇ ತೆಗೆದುಕೊಂಡದ್ದು. ದೇವರ ಮುನಿಸು ಬಡವರ ಮೇಲೆಯೆ. ಬಲುಮೆ ಕೇಳಿದಾಗ ನಾಗನ ಉಪದ್ರವೆಂದು ತೋರಿತು. ಕೂಡಿದ ಮಟ್ಟಿಗೆ ಆ ನಾಗದೇವರಿಗೆ ಸೇವೆ ಸಲ್ಲಿಸುತ್ತಿದ್ದೇವೆ. ಇನ್ನು ಹೇಗೆ ಮಾಡುವುದೆಂದೇ ತಿಳಿಯದು.''

"ಏನಾದರು ಕಾಹಿಲೆ ಇತ್ತೆ ಅದಕ್ಕೆ?" ನಾನು ಕೇಳಿದೆ. ಅವಳು ತ್ರಸ್ತಳಾಗಿ, 'ಅಯ್ಯೊ, ಅದೇನೂ ಇಲ್ಲಮ್ಮಾ. ಮೇಯಲು ಹೋದ ಎಮ್ಮೆ. ಬರುತ್ತಲೆ ಕಟ್ಟಿಹಾಕಿ, ಹುಲ್ಲಿಟ್ಟು, ನೀರು ತೋರಿಸಿದಳು ನನ್ನ ತಂಗಿ. ನಾನು ಅಂಗಳದಲ್ಲಿ ಹುರುಳಿ ಆರಿಸುತ್ತಿದ್ದೆ. ಹಟ್ಟಿಯಲ್ಲೇನೋ ಶಬ್ದವಾಯಿತು. ಓಡಿಹೋಗಿ ನೋಡುತ್ತೇನೆ—ಎಮ್ಮೆ ಕೈಕಾಲು ಚಾಚಿ ಮಲಗಿತ್ತು. ಗಾಬರಿಯಾಗಿ ಬಳಿಯಲ್ಲಿದ್ದ ಗಂಡುಸನ್ನು ಕೂಗಿದೆ. ಏನೇನೋ ಮದ್ದು ಮಾಡಿದರು. ನಿಷ್ಫಲ. ಪಾಪದ ಪ್ರಾಣಿ—ಸ್ವಲ್ಪ ಒದೆದಾಡಿತು-ಆಯಿತು. ಇಷ್ಟುದ್ದ ನಾಲಿಗೆ ಹೊರಬಿತ್ತು. ಹಚ್ಚಗೆ ಹುಲ್ಲಿನ ಬಣ್ಣಕ್ಕೆ ತಿರುಗಿತ್ತಾ ನಾಲಿಗೆ. ನಮಗೆ ಗೊತ್ತಾಯಿತು ಸುಬ್ಬರಾಯನ ಕಾರಬಾರೇ ಇರಬೇಕೆಂದು. ಬಲುಮೆಯಲ್ಲೂ ತೋರಿತಲ್ಲ ಹಾಗೆ!'

"ನಿಮಗೆಲ್ಲ ಹುಚ್ಚು—ಉಪದ್ರವವಂತೆ, ತಲೆಯಂತೆ. ಜವುಗು ಸ್ಥಳದಲ್ಲಿ ಹಾವುಗಳಿಗೇನು ಕಡಿಮೆಯೇ? ಮನೆ ಹತ್ತಿರ ಕಸ-ಕುಪ್ಪೆಗಳನ್ನು ಹಾಕಿಟ್ಟಿರುತ್ತೀರಿ. ವಿಷಜಂತುಗಳಿಗೆ ಮನೆಮಾಡಿಕೊಟ್ಟಂತಾಗುತ್ತದೆ'' ಎಂದೆ ನಾನು ಬೇಸರದಿಂದ. ಅವಳು ಹೆದರಿದವಳಾಗಿ, "ಇಲ್ಲಮ್ಮಾ, ಹಾಗೆನ್ನಬೇಡಿ. ಉಪದ್ರವಲ್ಲವಾದರೆ, ನೋಡಿರಂತೆ ಅದು ಕಚ್ಚಿದ ರೀತಿಯನ್ನು. ಸಾಧಾರಣವಾಗಿ ಎಂಥಾ ವಿಷವಾದರೂ ದನ, ಎಮ್ಮೆಗಳು ನಾಲಿಗೆಯಿಂದ ನೆಕ್ಕಿಕೊಂಡರೆ, ಅವುಗಳಿಗೆ ನಾಟುವುದಿಲ್ಲವಂತೆ. ನಮ್ಮ ಎಮ್ಮೆಗೆ ಕಚ್ಚಿದ ಸ್ಥಳ ನಾಲಿಗೆ ಎಟುಕದಾಗಿತ್ತು. ನಡುನೆತ್ತಿಯ ಮೇಲೆ ಹೊಡೆದಿತ್ತಂತೆ............ ಏನೋ ಗ್ರಹಚಾರ. ಹೋದ ವರ್ಷ ಹೀಗೆ ಬೇರೆ ಎರಡು ಜೀವಗಳು ಹೋಗಿದ್ದುವು!'' ಎನ್ನುತ್ತಿರುವಾಗ ಅವಳ ಕಣ್ಣುಗಳು ಹನಿದುವು. ನನಗೂ ದುಃಖವಾಯಿತು. ಕಳೆದ ವರ್ಷ ಅವಳ ಅಣ್ಣನ ಮಕ್ಕಳೆರಡು ಸರ್ಪದ ದೆಸೆಯಿಂದ ಒಂದೇ ದಿನ ಹೋಗಿದ್ದುವಂತೆ. ಒಂದು ಮಗು ರಾತ್ರಿ ಮಲಗಿದ್ದು ಏಳಲೇ ಇಲ್ಲವಂತೆ— ಅದರ ಬಳಿಯಲ್ಲೇ ಮಲಗಿದ್ದ ಮತ್ತೊಂದು ಬೆಳಿಗ್ಗೆ ಎದ್ದು 'ಬಾಯಾರಿಕೆ' ಎಂದಿತಂತೆ. ಬೆಳಿಗ್ಗೆ ನೀರೇಕೆ ಎಂದು ಮಜ್ಜಿಗೆ ಕೊಟ್ಟರಂತೆ. ಕುಡಿದೊಡನೆ ಕಣ್ಣುಗಳು ತಿರುಗಿದುವು. ಬಾಯಲ್ಲಿ ನೊರೆ ಬಂತು. ಹಾಗೆಯೇ ಒರಗಿಬಿಟ್ಟಿತು. ಎಂತಹ ಶೋಚನೀಯ ವಿಷಯ!

ಇಂತಹ ಎಷ್ಟೊಂದು ಘಟನೆಗಳು ನಿತ್ಯವೂ ಸಂಭವಿಸುತ್ತಿಲ್ಲ! ನಾಗಮಂಡಲವನ್ನು ಮಾಡಿಸುವುದು, ತನು ಹಾಕು

ವುದು ಇವುಗಳಲ್ಲದೆ ಬೇರೆ ಪರಿಹಾರವೇ ಇಲ್ಲವೆ? ಇಲ್ಲವೆಂದೇ ಹೇಳಬೇಕು. ಏಕೆಂದರೆ, ಎಷ್ಟೋ ಕಡೆಗಳಲ್ಲಿ ವಾತಾವರಣವು ಅದೆಷ್ಟು ಚೊಕ್ಕವಾಗಿದ್ದರೂ ಈ ಹಾವುಗಳ ಕೋಟಲೆಯು ಕಂಡುಬಂದುದಿದೆ. ಅವುಗಳ ವರ್ತನೆಯಾದರೂ ಎಂತಹ ಸಾಗರೀಕರನ್ನೂ ದಂಗುಬಡಿಸುವಂತಿರುತ್ತದೆ. ಉದಾಹರಣೆಗೆ ನನ್ನ ಪ್ರತ್ಯಕ್ಷಾನುಭವದ ಸಂಗತಿಯಿದು: ಮಲ್ಲೇಶ್ವರದಲ್ಲಿ ಅತಿ ಸ್ವಚ್ಛವಾದ ಬೀದಿಯಲ್ಲಿ ನಮ್ಮ ಮನೆ. ಹಾವುಗಳ ವಾಸಕ್ಕೆ ಸ್ವಲ್ಪವೂ ಎಡೆಯಿಲ್ಲದ ಸ್ಥಳ; ಏಕೆಂದರೆ, ಈ ವಿಷಯ ನಡೆದಾಗ, ನಮ್ಮ ಮನೆ ಇನ್ನೂ ಹೊಸದು. ಗೃಹ ಪ್ರವೇಶವಾಗಿ ತಿಂಗಳೆರಡಾಗಿತ್ತಷ್ಟೆ. ಹೂದೋಟದ ಗಿಡ ಗಳಿನ್ನೂ ಮೊಳಕೆಯಲ್ಲಿದ್ದುವು. ಮೇಲಾಗಿ ಕಾಂಕ್ರೀಟಿನ ಮನೆ. ಹಾವುಗಳೆಲ್ಲಿ ನಿಲ್ಲಲು ಸಾಧ್ಯ?

ಅದೊಂದು ದಿನ. ಮನೆತುಂಬ ನೆಂಟರಿದ್ದರು. ಬೆಳಿಗ್ಗೆ ಹನ್ನೊಂದು ತಾಸಿರಬಹುದು. ಇದ್ದಕ್ಕಿದ್ದಂತೆ ಕೇದಗೆಯ ಸುಗಂಧವು ಮನೆಯನ್ನಾವರಿಸಿತು. ಇದೇನೆಂದು ನೋಡು ವಾಗ ನಂಬಲಾಗದ ಸತ್ಯವು ಕಂಡುಬಂತು. ದೇವರ ಕೋಣೆಯ ಮುಂದೆ ನಾಗರ ಹಾವೊಂದು ಹರಿದಾಡುತಿತ್ತು. ಏನೋ ಅನಾಚಾರವೆಂದರು ಅಜ್ಜಿಯೊಬ್ಬರು. ಅವರು ಸುಬ್ರ ಹ್ಮಣ್ಯ ಉಪಾಸಕರು. ನಾವೆಲ್ಲ ಹೆದರಿ ಅಡಗಿದೆವು. ಅವರು ಕ್ಷಮಿಸಬೇಕೆಂದೆಲ್ಲಾ ಹೇಳಿ, ಏನೋ ಹರಕೆ ಹೊತ್ತು, ಒಳ್ಳೆ ಮಾತಿನಿಂದ ಬಂದಲ್ಲಿಗೇ ತೆರಳಬೇಕೆಂದರು. ಹಾವು ದೇವರ ಕೋಣೆಯೊಳಗೆ ಹೋಯಿತು. ಆ ಅಜ್ಜಿಯು ಮೈಮೇಲೆ ಬಂದವರಂತಾಗಿ, 'ಮುಟ್ಟು ಏರವಾಗಿದೆ — ಶುದ್ಧಿಯಾಗ ಬೇಕು' ಎಂದರು. ಹಾಗೆಯೇ ಆಗಲೆಂದ. ಹಿರಿ... ಮೇಲೆ ಅವರಿಗೆ ಪ್ರಜ್ಞೆ ತಪ್ಪಿತು. ವಿಚಾರಿಸಿ ನೋ... ನಿಜಕ್ಕೂ ಮದುವೆಯಾಗದ ಹುಡುಗಿಯೊಬ್ಬಳು ಪು... ಯಾಗಿದ್ದಳು. ಮರ್ಯಾದೆಯ ದೆಸೆಯಿಂದ ಮರೆ... ಮನೆಯೆಲ್ಲಾ ಅಡ್ಡಾಡಿದುದು ತಿಳಿದು ಬಂತು. ಕೆಲ ವೈ... ಕ್ರಿಯೆಗಳನ್ನು ಮಾಡಿಸಿದೆವು. ಮತ್ತಾ ಹಾವಿನ ಸು... ಇಂತಹ ನಿದರ್ಶನ ಸಿಕ್ಕುವಾಗ ಮನುಷ್ಯರ ಮೇಲಿನ ಸ... ಪ್ರಭುತ್ವವನ್ನು ನಂಬದೆ ಏನು ಮಾಡಬೇಕು?

ಏನಾಶ್ಚರ್ಯ! ಅಧಿಕಾಂಶ ಜಂತುಗಳಂತೆ ... ಅವಯುವಗಳನ್ನು ಪಡೆಯದ ಈ ಹಾವುಗಳು ಮನುಷ್ಯರ... ಹಾರಗಳಲ್ಲಿ ತಲೆ ಹಾಕುವುದೆಂದರೇನು! ಮನುಷ್ಯ... ಹಾವುಗಳಿಗೂ ಸಂಬಂಧವಾದರೂ ಹೇಗೆ ಘಟಿಸಿ... ಇದೊಂದು ಸಮಸ್ಯೆಯೇ ಸರಿ. ನಾವು—ಹಿಂದುಗಳು—... ವನ್ನು ದೇವರೆಂದು ಪೂಜಿಸುತ್ತೇವೆ, ಒಲಿಸಿಕೊಳ್ಳುತ್ತೇ... ಎಷ್ಟೋ ಕುಟುಂಬಗಳು ಸರ್ಪಶಾಪಗ್ರಸ್ತವಾಗಿರುವು... ಕೇಳಿಬಲ್ಲೆವು. ಕೆಲವೊಂದು ಕುಟುಂಬಗಳಿಗವು ಒ... ನಿಧಿಯನ್ನೋ ನಾಗಮಣಿಯನ್ನೋ ಕೊಟ್ಟು ಉದ್ಧ... ಕತೆಗಳೂ ನಮಗೆ ಹೊಸತಲ್ಲ. ನಾಸ್ತಿಕವಾದವು ನಿ... ವಾಗಿಯೂ ಈ ಸರ್ಪಗಳ ಮಾಟದಿಂದ ಸೋಲದಿ... ನಾಗಪ್ರತಿಷ್ಠೆಯಿಂದ ಎಷ್ಟೋ ವಂಶಗಳು ವೃದ್ಧಿಯಾಗಿರುವ... ನಾಗನ ಪ್ರಕೋಪದಿಂದಾಗಿ ಇಂದಿಗೂ ಎಷ್ಟೋ ಜ... ಕಷ್ಟಪಡುತ್ತಿರುವರು.

ಹರಿವ ಜಂತುಗಳಲ್ಲಿ ನಾಗರಹಾವಿನಷ್ಟು ಬುದ್ಧಿಯ... ಜಂತುವು ಬೇರೊಂದಿಲ್ಲವೆಂದು ಕಂಡು ಬಂದಿದೆ. ಅವುಗ...



ಪ್ರದೀಪ್ ಪಿಕ್ಚರ್ಸಿನವರ "ಪನ್ನಾದಾಯಿ" ಚಿತ್ರದಲ್ಲಿ ಗುಲಾಬ್ ಮತ್ತು ಗೋಪ್, ಒಂದು ವಿನೋದ ದೃಶ್ಯದಲ್ಲಿ [ಗಂಡ-ಹೆಂಡಿರಾಗಿ]



ಪ್ರದೀಪ್ ಪಿಕ್ಚರ್ಸಿನವರ "ಪನ್ನಾದಾಯಿ... ಚಿತ್ರದಲ್ಲಿ ಮುಬಾರಕ್, ಅಕ್ಬರನ ... ಪಾತ್ರದಲ್ಲಿ.

ಮನುಷ್ಯಭಾಷೆಯು ಅರ್ಥವಾಗುತ್ತದೆ ಎಂಬುದನ್ನು ಪ್ರತಿಪಾದಿಸಲು ಬೇಕಾದಷ್ಟು ಆಧಾರಗಳಿವೆ. ಮನುಷ್ಯರನ್ನು, ಮನುಷ್ಯರಂತೇ ಅವುಗಳು ಪ್ರೀತಿಸುತ್ತವೆ ಮತ್ತು ದ್ವೇಷಿಸುತ್ತವೆ. ಇದರ ಗೂಢವಾದರೂ ಏನಿರಬಹುದು? ಬಹುಶಃ ಪುರಾತನ ಕಾಲದಲ್ಲಿ ಸರ್ಪಯಜ್ಞ ಮಾಡಿದ ವಂಶಜರಲ್ಲಿ ವೈರವೂ ನಾಗಕನ್ನೆಯವರನ್ನು ವರಿಸಿಕೊಂಡಿದ್ದರವರ ವಂಶಜರಲ್ಲಿ ಅವಕ್ಕೆ ಪ್ರೇಮವೂ ಇರಬಹುದು. ಇದೇ ಕಾರಣದಿಂದಾಗಿ ಅವುಗಳಿಗೆ ಮನುಷ್ಯರಲ್ಲಿ ನಿಕಟ ಸಂಬಂಧವಿರುವುದೋ ಏನೊ!

ಸಮಾಚಾರ ಪತ್ರಿಕೆಗಳಲ್ಲಿ ಪ್ರಕಟವಾದ ಕೆಲವಿಷಯಗಳಿಂದಾಗಿ ಅವುಗಳು ಮನುಷ್ಯರಲ್ಲಿ ಯಾವ ರೀತಿಯಿಂದ ನಡೆದುಕೊಳ್ಳುತ್ತಿವೆ ಎಂಬುದನ್ನು ತಿಳಿಯಬಹುದು.

(೧) ಕೆಲವರ್ಷಗಳ ಹಿಂದೆ 'ಜಸ್ಟಿಸ್' ಪತ್ರಿಕೆಯಲ್ಲೊಂದು ವರ್ತಮಾನವಿತ್ತು. ಅಯ್ಯಂಪೇಟೆಯಿಂದ ಆರು ಮೈಲು ದೂರವಿರುವ ಪುದ್ದೂರು ಎಂಬ ಗ್ರಾಮದಲ್ಲಿ, ರಾಯಂಬಾಳ್ ಎಂಬ ಸ್ತ್ರೀಯು ಹದಿನೈದು ಮಾಸಗಳ ತನಕ ಗರ್ಭಿಣಿಯಾಗಿದ್ದು ಕೊನೆಗೊಂದು ಹಾವನ್ನು ಹೆತ್ತಳು. ಪ್ರಸವಿಸಿ ತಿಂಗಳ ವರೆಗೂ ಯಾವ ದುಷ್ಟತನವಿಲ್ಲದೆ ತಾಯೊಂದಿಗೆ ಸಲುಗೆಯಿದ್ದಿತು. ಒಂದು ದಿನ ಏನಾಯಿತೋ ತನ್ನ ಮಾವ(ತಾಯಿಯ ತಮ್ಮ)ನನ್ನು ಕಚ್ಚಿಬಿಟ್ಟಿತು. ನೆರೆಹೊರೆಯವರದನ್ನು ಕಲ್ಲಿನಿಂದ ಹೊಡೆದು ಕೊಂದರು. ತಾಯಿಗೆ ವರ್ತಮಾನವಾಗುತ್ತಲೆ ಮಗುಸತ್ತದಕ್ಕೆ ಅತ್ತಳಂತೆ. ಆದರೆ ತಮ್ಮನು ವಿಷವೇರಿ ಬಿದ್ದುದನ್ನು ನೋಡಿ ಬೇಗನೇ ಹಾವು ಕಚ್ಚಿದ ಗಾಯವನ್ನು ಬಾಯಿಂದ ಕಚ್ಚಿ ವಿಷವನ್ನು ಹೀರಿ ಉಗಿದ ಮೇಲೆ ತಮ್ಮನು ಎಚ್ಚತ್ತನು.

ನಮ್ಮ ಹಳ್ಳಿಗರ ಬಾಯಲ್ಲೂ ಮೇಲಿನ ಘಟನೆಯನ್ನು ಹೋಲುವ ಒಂದು ಕಥೆಯಿದೆ. ಒಬ್ಬಳು ಮಗುವಿನೊಂದಿಗೆ ಸರ್ಪವೊಂದನ್ನು ಹೆತ್ತಳಂತೆ. ಎರಡೂ ಬೆಳೆದವು. ಹಾವು ಮನೆಯವರನ್ನೆಲ್ಲಾ ಪ್ರೀತಿಸುತ್ತಿತ್ತು. ತಂಗಿಯೊಡನೆ ಯಾವಾಗಲೂ ಆಟವಾಡುತಿತ್ತು. ಮಾತೊಂದು ಆಡಲು ಬಾರದು, ಮತ್ತೆಲ್ಲ ಮನುಷ್ಯರಂತಿತ್ತು. ಅದರ ನಡತೆ, ತನ್ನ ಪ್ರಯತ್ನದಿಂದಲೇ ನಿಶ್ಚಯವಾದ ತಂಗಿಯ ಮದುವೆಯ ಸಿದ್ಧತೆಯಾಗುತ್ತಿರುವಾಗ, ಅಡುಗೆ ಮನೆಯಲ್ಲಿ ಸುತ್ತುಗಟ್ಟಿ ಮಲಗಿತ್ತಂತೆ. ಅಡಿಗೆಯವರಾರೋ ಹಗ್ಗದ ಸಿಂಬಿಯೆಂದರಿತು ಕುದಿವ ಪಾಯಸದ ಪಾತ್ರೆಯನ್ನದರ ಮೇಲಿಟ್ಟುದರಿಂದದು ಪ್ರಾಣಕ್ಕೆ ಎರವಾಯಿತಂತೆ. ಈ ಎರಡು ಕಥೆಗಳಲ್ಲಿ ಸರ್ಪವು ಮನುಷ್ಯರಲ್ಲಿ ಬಾಂಧವ್ಯವನ್ನು ಬೆಳೆಸಿಕೊಂಡಿದೆ.

(೨) ಒಂದು ಹಿಂದೀ ಪತ್ರಿಕೆಯಲ್ಲಿ ಕೆಳಗಿನ ಕಥೆಯಿತ್ತು. ಒಬ್ಬ ಪ್ರಯಾಣಿಕನನ್ನು—ಅವನಲ್ಲಿ ಹೇರಳ ಹಣವಿತ್ತು—ಕಳ್ಳನೊಬ್ಬನು ಮುತ್ತಿದನು. ಬೇಡಿಕೆಗೆ ಸೊಪ್ಪು ಹಾಕದೆ ಕಣ್ಣುಕಟ್ಟಿ ತಲೆಯನ್ನು ಕಡಿಯಲೆತ್ನಿಸುವಾಗ ಅನಿರೀಕ್ಷಿತವಾಗಿ ಸರ್ಪವೊಂದು ಕಳ್ಳನ ಎರಡೂ ಕೈಗಳನ್ನು ಬಿಗಿದು

[88ನೇ ಪುಟಕ್ಕೆ ಮುಂದುವರಿದಿದೆ.]

ಕಾರ್ಯ, ಮೃತ್ಯು ಮತ್ತು ರೋಗ

ಟೊಲ್‌ಸ್ಟಾಯಿಯು, ರಷ್ಯದ ಪ್ರಸಿದ್ಧ ಕಾದಂಬರಿಕಾರನು. ಸಮಾಜದಲ್ಲಿ ನ್ಯಾಯ ನಿಯಮಗಳ ರೂಪದಿಂದ ಮನೆಮಾಡಿರುವ ಅ ವಿಲ್ಲದ ರೂಢಿಗಳನ್ನು; ಪತಿ-ಪತ್ನಿ ಸಂಬಂಧ, ಉಚ್ಚ-ನೀಚ ಭೇದ, ಬಡವ-ಬಲ್ಲಿದ ಘರ್ಷಣೆ ಮೊದಲಾದುವನ್ನು ಟೊಲ್‌ಸ್ಟಾಯಿ ಮನೋಹರ ಕಾದಂಬರಿಗಳಿಂದ ಚಿತ್ರಿಸಿ ಸ್ಪಷ್ಟಗೊಳಿಸಿ, ಶ್ರೀಮಂತನು ಬಡವರ ರಕ್ಷಕನೆಂದು ವಿಶದೀಕರಿಸಿದನು. ಟೊಲ್‌ಸ್ಟಾಯಿಯ ಕೃತಿಗಳು ಮಹಾತ್ಮಾಜಿಯವರ ಮೇಲೂ ಪ್ರಭಾವ ಬೀರಿದ್ದುವು. ಈ ಪುಟ್ಟ ಲೇಖನದಲ್ಲಿ ಟೊಲ್‌ಸ್ಟಾಯಿಯವರು, ಜಗತ್ತಿನ ಮಾನವ ಅಣ್ಣತಮ್ಮಂದಿರಂತೆ ಇರಬೇಕಾದರೂ ಬಡವ-ಬಲ್ಲಿದರೆಂಬ ಭೇದ ಕಲ್ಪನೆಯಿಂದ ಭೂಸ್ವರ್ಗವನ್ನು ನರಕವಾಗಿ ಮಾರ್ಪಡಿಸಿಕೊಂಡರೆಂ 'ಬಲವೇ ನ್ಯಾಯ'ವೆಂಬ ತತ್ವವು, ಇಂದಿನ ಸುಸಂಸ್ಕೃತರಲ್ಲಿಯೂ ಹರಡಿದೆಯೆಂದೂ ಮಾರ್ಮಿಕವಾಗಿ ಚಿತ್ರಿಸಿರುವರು.

ದಕ್ಷಿಣ ಅಮೇರಿಕದ ಮೂಲ ನಿವಾಸಿಕರಲ್ಲಿ ಹರಡಿರುವ ಒಂದು ಕತೆಯಿದೆ. ಆ ಕತೆಯನ್ನವರು ಒಬ್ಬರಿಂದಿನ್ನೊಬ್ಬರಿಗೆ ಹೇಳುತ್ತ ಬಂದಿರುವರು.

ಸೃಷ್ಟಿಯ ಆದಿಮಕಾಲದಲ್ಲಿ ಮಾನವನಿಗೆ ಉದ್ಯೋಗದ ಆವಶ್ಯಕತೆಯಿದ್ದಿಲ್ಲ. ದೇವರು ಮನುಷ್ಯನನ್ನು ಸೃಷ್ಟಿಸಿದ ಪ್ರಥಮ ಕಾಲದ ನೆಲೆಯು ಆ ರೀತಿಯಿದ್ದಿತು. ಮನೆಯ ಅವಶ್ಯಕತೆಯಿರಲಿಲ್ಲ; ಊಟ-ಉಡಿಗೆಗಳ ಉಚಾರವಿರಲಿಲ್ಲ. ಎಲ್ಲರೂ ನೂರು ವರ್ಷ ಕಾಲ ಬಾಳುತಿದ್ದರು. ಮನುಷ್ಯನಿಗೆ ರೋಗವೆಂದರೇನೆಂದು ತಿಳಿದಿರಲಿಲ್ಲ.

ಕೆಲಕಾಲನಂತರ ದೇವರು, ಮನುಷ್ಯನ ಸ್ಥಿತಿಗತಿಯನ್ನರಿಯುವ ಹಂಬಲಿನಿಂದ ಮಾನವ ಲೋಕಕ್ಕೆ ಬಂದನು. ಆ ಸಮಯದಲ್ಲಿ ಮನುಷ್ಯನ ಪ್ರಶ್ನೆ ಎಲ್ಲಿ? ಎಲ್ಲರೂ ಪರಸ್ಪರ ಕಾದಾಡುತಿದ್ದರು. ಜಗಳವೇ ಜಗಳ. ಪ್ರತಿಯೊಬ್ಬನೂ ಚಿಂತೆಯಿಂದ ತುಂಬಿದ್ದನು. ಚಿಂತೆಯಿರದ ಅಥವಾ ವಿಚಾರಕ್ಕೊಳಪಡದ ಮನುಜನೇ ಇರಲಿಲ್ಲ. ಜೀವನದಲ್ಲಿ ಆನಂದದ ಸುಳಿವಿಲ್ಲ. ಕ್ಷೇಮ ವಿಚಾರವು ಯಾರಿಗೂ ಇರದೆ, ದೇವರನ್ನೇ ಹಳಿಯುತಿದ್ದರು.

ದೇವರು ಇದನ್ನು ಕಂಡು ಚಿಂತೆಗೊಳಪಡಬೇಕಾಯಿತು. "ಈ ಅವಸ್ಥೆಯು ಮಾನವಜಾತಿಯು ಬೇರೆ ಬೇರಾಗಿರುವುದರ ಮತ್ತು ಸ್ವತಂತ್ರ ಜೀವಿಕೆಯುಂಟಾದುದರ ಫಲ"ವೆಂದು ಮನದಲ್ಲಿ ಕೂಡಲೇ ಹೊಳೆದು ದೇವರು ಈ ವ್ಯವಸ್ಥೆಯ ಪರಿವರ್ತನೆಗೆ ಹೊರಟನು. ಪ್ರತಿಯೊಬ್ಬ ಮನುಷ್ಯನೂ ಉದ್ಯೋಗದ ವಿನಾ ಬಾಳುವುದು ಆ ಮೇಲೆ ಅಸಂಭವವಾಯಿತು. ಮಳೆ ಗಾಳಿ, ಬಿಸಿಲುಗಳ ತಡೆಗಾಗಿ ಹಸಿವೆಯಳಿವಿಗೆ ಕೃಷಿಯನ್ನು ಮಾಡಬೇಕಾಯಿತು.

ದೇವರು ಕೆಲಸದ ವಿಚಾರಕ್ಕಿಳಿದಾಗ, ಮನುಷ್ಯನು ಉದ್ಯೋಗಜೀವಿಯಾದಾಗ, ಪರಸ್ಪರ ಮೈತ್ರಿ ಸಹಾನುಭೂತಿಯಿಂದ ಒಗ್ಗಟ್ಟಾಗಿರಬಹುದೆಂಬ ಭರವಸೆ ಹೊಂದಿದನು. ಎಲ್ಲ ಕೆಲಸಗಳನ್ನು ಒಬ್ಬನಿಂದಲೆ ಮಾಡಲಾಗುವುದಿ ಮನೆಯನ್ನು ರಚಿಸಲು ಕಲ್ಲುಕುಟಿಗರ, ಬಡಗಿಗಳ, ಇನ್ನಿತ ಆವಶ್ಯಕತೆಯಿದೆ. ಉಡಿಗೆ-ತೊಡಿಗೆ, ಆಹಾರ-ವಿಹ ವಿಷಯದಲ್ಲಿಯೂ ಇಂತೆಯೇ ಎಂಬ ಭಾವನೆ ದೇವರಲ್ಲಿದ್ದಿ

ಹೀಗೆಯೇ ಸಮಯ ಉರುಳಿತು. ದೇವರು ಮತ್ತೊ ಮನುಜರನ್ನು ಕಾಣಲು ಅನುವಾದನು. ಮನುಜರ ಸು ಜೀವಿತ ದಶೆಯನ್ನರಿವುದು ಅವನ ಉದ್ದೇಶವಾಗಿದ್ದಿತು.

ದೇವರು ತಿರುಗಿ ಮನುಜ ಸಮಾಜವನ್ನು ನೋಡಿದ ಮೊದಲಿನ ನೆಲೆಗಿಂತಲೂ ಕೀಳ್ದೆಸೆಗೆ ಮುಟ್ಟಿದ್ದಿತು. ರೆಲ್ಲರೂ ಒಂದುಗೂಡಿ ಮನೆಯ ಕೆಲಸಗಳನ್ನು ಮಾಡುತಿದ್ದ ಆದರೆ ಅವರಿಗೆ ಐಕ್ಯತೆಯ ಬಂಧವಿರಲಿಲ್ಲ. ಒಂದೊಂ ಪಂಗಡವಾಗಿ ಮನುಜಸಮಾಜವಿದ್ದಿತು. ಪ್ರತಿ ಪಂಗಡ ಇನ್ನೊಂದು ಪಂಗಡದ ಮೇಲೆ ತನ್ನ ಅಧಿಕಾರ ಸತ್ತೆಯನ ಹೊರಿಸುವುದರಲ್ಲಿ ಮಗ್ನವಾಗಿತ್ತು. ಈ ಅಧಿಕಾರಸತ್ತೆಯಿ ದಲೇ ಕೆಲಸಗಳು ನಡೆಯುತಿದ್ದುವು. ಎಲ್ಲ ಪಂಗಡಗಳ ಪ್ರತೀಕಾರದೃಷ್ಟಿಯಿಂದಿದ್ದುವು. ಪರಸ್ಪರ ವಿರೋಧ ಮತ್ತ ಜಗಳ, ಇದರಿಂದ ಎಲ್ಲಾ ಪಂಗಡಗಳ ಅವಸ್ಥೆಯು ಹಾಳಾ ದ್ದಿತು!

ಇದನ್ನು ನೋಡಿದ ದೇವರ ಎದೆ ಕರಗಿತು. ಕೂಡಲೇ ಮಾನವಸಮಾಜಕ್ಕೆ ಮರಣದ ಅರಿವು ಎಂದೆಂದೂ ಬಾರದಂ ಮಾಡಿ ಮರಣವನ್ನು ನಿರ್ಮಿಸಿದನು. "ಮನುಷ್ಯನಿಗೆ ಮ ಣವು ಬರಲಿ. ಯಾವ ದಿನ, ಹೇಗೆ ಎಂಬ ತಿಳಿವುಂಟಾ ದಿರಲಿ" ಎಂದೂ ಹೇಳಿದನು.

"ಮನುಷ್ಯನು ತನ್ನ ಮರಣವು ಯಾವಾಗ ಎಂಬುದನ ತಿಳಿಯದಿರಲು ಅಲ್ಪ ಕಾಲವಿರುವ ಜೀವನದಲ್ಲಿ ಚಿಕ್ಕ ಪು ವಿಷಯಗಳಿಗೆ ಮನವೀಯದೆ ಬಾಳುವೆಯ ದಿನಗಳನ ಹಾಳುಗೊಳಿಸಲಾರನು" ಎಂದು ದೇವರು ಈ ಸಮಯದ ಆಲೋಚಿಸಿದನು.

ದೇವರ ಈ ಪ್ರಯತ್ನವೂ ವಿಫಲವಾಯಿತು. ಯಾವ ಸುಖ ಶಾಂತಿಯೂ ಉಂಟಾಗಲಿಲ್ಲ. ತಿರುಗಿ ದೇವರು ಭೂಮಂಡಲವನ್ನು ಕಾಣಬಂದಾಗ ಮಾನವ ಸಮಾಜವು ದುರ್ದಶಾಪೂರ್ಣವಾಗಿತ್ತು!

ಮರಣವನ್ನು ಕೊಟ್ಟುದೇ ತಡ,–ಇದರಿಂದ ಮನುಜರಲ್ಲಿ ಹಲವರಿಗೆ ತುಂಬಾ ಲಾಭವೊದಗಿತು. ಬಲಿಷ್ಠರಾದ ಮಂದಿಗಳು ಅಬಲರನ್ನು ಹೊಡೆದು ಕೊಂದು, ಮತ್ತೆ ಕೆಲವರನ್ನು ಓಡಿಸಿ, ಅವರಿರುವಲ್ಲಿ ತಮ್ಮ ಅಧಿಕಾರವನ್ನು ನೆಲೆಗೊಳಿಸತೊಡಗಿದರು. ಇದರ ಪರಿಣಾಮವಾಗಿ ಬಲಶಾಲಿಗಳೂ ಅವರ ಪರಿವಾರದವರೂ ಕೌಟುಂಬಿಕರೂ ಆವ ಕೆಲಸವನ್ನೂ ಮಾಡದೆ, ಸುಖಭೋಗದಲ್ಲಿ ಮಗ್ನರಾದರು. ನಿರುದ್ಯೋಗ ಸಮಸ್ಯೆಯುಂಟಾಯಿತು. ಹಲವರಿಗೆ ಜೀವನವು ದುಃಖದ ಬೀಡಾಯಿತು. ಬಡವರು ಹೊಟ್ಟೆಗಾಗಿ ಹಗಲಿರುಳು ದುಡಿಯುವರು. ಈ ಶ್ರಮಜೀವಿಗಳಿಗೆ ಹೊಟ್ಟೆಗೆ ಬೇಕಾದ ಕೂಳು, ದಿನವಿಡೀ ದುಡಿದರೂ ಸಿಗದಾಯಿತು. ಜೀವನದಲ್ಲಿ ಶ್ರಮಜೀವಿಗಳಿಗೆ ವಿಶ್ರಾಂತಿಯಿಲ್ಲ, ಸುಖಭೋಗವಿಲ್ಲ. ಒಂದು ದಳವು ಇನ್ನೊಂದು ದಳಕ್ಕೆ ನೋಡಿ ಬೆದರಿತ್ತು ಮತ್ತು ಅವರನ್ನು ಕಂಡು ಮನದಲ್ಲಿ ಜುಗುಪ್ಸೆಗೊಳ್ಳುತಿದ್ದರು. ಮನುಷ್ಯ ಜೀವನದಲ್ಲಿ ಸುಖದ ಲವಕಣಿಕೆಯಿರದೆ ಎಲ್ಲವೂ ದುಃಖಮಯವಾಯಿತು.

ಈ ರೀತಿಯ ಬಾಳನ್ನು ಕಂಡು ದೇವರು ಮತ್ತೊಂದು ಉಪಾಯವನ್ನಾಲೋಚಿಸಿದನು. ಇದು ಅವನ ಅಂತಿಮ ಉಪಾಯವಾಗಿತ್ತು. ಈ ಉಪಾಯದಿಂದ ಮಾನವ ಸಮಾಜದ ವ್ಯವಸ್ಥೆಯು ಸುಧಾರಣೆಗೊಳ್ಳಬಹುದೆಂಬ ಭಾವನೆಯು ದೇವರಲ್ಲಿದ್ದಿತು.

ಅವನು ಕೊನೆಯದಾಗಿ ರೋಗವನ್ನು ನಿರ್ಮಿಸಿದನು.

ಲೋಕದಲ್ಲಿ ಬಗೆ ಬಗೆಯ ವ್ಯಾಧಿಗಳನ್ನು ಹರಡಿದನು. ರೋಗನಿರ್ಮಾಣ ಕಾಲದಲ್ಲಿ ದೇವರ ಭಾವನೆಯು ಹೀಗಿತ್ತು: "ಮನುಷ್ಯರೆಲ್ಲರಿಗೂ ರೋಗದ ಬೆದರಿಕೆಯುಂಟಾಗುವುದು. ಎಲ್ಲರೂ ತಮಗೆ ರೋಗಬರಬಹುದೆಂದು ಶಂಕಾಯುಕ್ತರಾಗುವರು. ಇದರಿಂದ ರೋಗಹೀನನು ರೋಗಿಯಲ್ಲಿ ದಯೆಗೊಳ್ಳುವನು. ರೋಗಿಯ ಸಹಾಯಕನಾಗುವನು. ರೋಗಿಗಳು ನಿರೋಗಿಗಳ ಸಹಾಯವನ್ನು ಎಣಿಸುತಿದ್ದು, ಪರಸ್ಪರ ಸಹಕಾರವು ಬಾಳುವೆಯಲ್ಲಿ ಒದಗುವುದು."

ರೋಗವನ್ನು ಸೃಷ್ಟಿಸಿ ದೇವರು, ಸ್ವಸ್ಥಾನದಲ್ಲಿ ಕೆಲ ಕಾಲವಿದ್ದು ಹಿಂತಿರುಗಿ, ಮನುಜವರ್ಗವನ್ನು ಕಾಣಲು ಬಂದನು. ನೋಡುವುದೇನು! ಲೋಕವ್ಯವಸ್ಥೆಯು ಹಿಂದುಮುಂದಾಗಿತ್ತು. ಅಸ್ತವ್ಯಸ್ತವಾಗಿತ್ತು. ರೋಗದಿಂದ ಮನುಜನಲ್ಲಿ ಐಕ್ಯತೆಯನ್ನುಂಟುಮಾಡುವುದೇ ದೇವರ ಉದ್ದೇಶವಾಗಿತ್ತಾದರೆ ಅದರ ಬದಲು ಮನುಷ್ಯರಲ್ಲಿ ಬಿಕ್ಕಟ್ಟುಂಟಾಗಿ ಹಾಹಾಕಾರವು ತುಂಬಿದ್ದಿತು. ಯಾವ ನೌಕರರ ಮೂಲಕ ಕೆಲಸ ಮಾಡಿಸುತಿದ್ದ ಬಲಶಾಲಿಗಳು ಅದೇ ಕೆಲಸಗಾರರ ಮೂಲಕ ರೋಗಿಗಳ ಶುಶ್ರೂಷೆಯನ್ನೂ ಸೇವೆಯನ್ನೂ ಮಾಡಿಸುತಿದ್ದರು. ಈ ಕೆಲಸವು ಬಲಾತ್ಕಾರದಿಂದ ನಡೆಯುತ್ತಿತ್ತು. ನೌಕರರು ಬಲಶಾಲಿಗಳಾದ ರೋಗಿಗಳ ಪರಿಚರ್ಯೆಯಲ್ಲಿ ದಣಿಯಬೇಕಾಯಿತು. ಬಲಿಷ್ಟರು ಯಾವ ವಿಚಾರವೂ ಇಲ್ಲದೆ ಆಲಸಿಗಳಾಗಿದ್ದು, ಕೆಲಸಗಾರರನ್ನು ದಣಿಸಿ ಬಿಡುವರು. ಕೆಲಸಗಾರರಿಗೆ ಇದರಿಂದ ವಿಶ್ರಾಂತಿಯಿರದೆ ಅವರ ಕುಟುಂಬದ ರೋಗಿಗಳನ್ನೂ ಆತ್ಮ ಜೀವನವನ್ನೂ ನಡೆಯಿಸಲು ಸಮಯ ಮತ್ತು ಸಂಪತ್ತು ಇಲ್ಲದಾಯಿತು. ಬಡಕೆಲಸಗಾರರ ಮನೆ ರೋಗಗಳ ಪರಿಚರ್ಯೆಗೆ ಮಂದಿಯಿಲ್ಲ. ಅವರ ರೋಗಕ್ಕೆ ಮದ್ದಿಲ್ಲ. ರೋಗಿಗಳ ಕೆಲಸದಿಂದ ಬಡವರೇ ರೋಗದ ಬೀಡಾಗಹತ್ತಿದರು. ಬಲಶಾಲಿಗಳಾದ ಧನಿಕರು ರೋಗಿಗಳನ್ನು ಕಣ್ಣಿನಿಂದ ಕಾಣುವಾಗ ಮನಸ್ಸಿಗೆ ಅಶಾಂತಿಯುಂಟಾಗುವುದೆಂದು ತಮ್ಮ ಮನಸ್ಸಂತೋಷ ಮತ್ತು ಶಾಂತಿಗಾಗಿ ರೋಗಿಗಳಿಗೆ ಬೇರೆ ಮನೆಯನ್ನು ನಿರ್ಮಾಣಗೊಳಿಸಿದರು. ಅದು ಆಸ್ಪತ್ರೆ.

ಈ ಆಸ್ಪತ್ರೆಗಳ ದೊಡ್ಡ ತಯಾರಿಕೆಯು ನಡೆಯಿತು. ಆಸ್ಪತ್ರೆಗಳು ಬಲಶಾಲಿಗಳಾದ ಧನಿಕರ ಮನೆಯಿಂದ ಬಹಳ ದೂರವಿರುವಂತೆ ಮಾಡಿದರು. ರೋಗಿಗಳ ಕಷ್ಟವನ್ನು ಕಾಣಬಾರದೆಂದು ಈ ವ್ಯವಸ್ಥೆಯು ನಡೆಯಿತು. ಬಲಶಾಲಿಗಳಿಗೆ ಈ ಕಷ್ಟವನ್ನು ಕಾಣುವುದು ಸಹ್ಯವಲ್ಲ. ರೋಗಿಗಳು ಈ ಸ್ಥಾನದಲ್ಲಿ ರೋಗದಿಂದ ನರಳಿ ದುಃಖವನ್ನು ಅನುಭವಿಸಿ ಮಡಿಯಲಿ; ಬಲಶಾಲಿಗಳಾದ ತಮಗೆ ಇದೊಂದೂ ಕಾಣುವುದು ಬೇಡ. ರೋಗಿಗಳಲ್ಲಿ ಸಹಾನುಭೂತಿಯು ಬಡಸೇವಕರ ಮೂಲಕ ಉಂಟಾಗಬೇಕು. ಸಂಬಳದ ಈ ಕೆಲಸಗಾರರು ರೋಗಿಗಳನ್ನು ಆವ ದಯೆಯೂ ಇಲ್ಲದೆ ನೋಡುತ್ತಿರುವರು. ಇಂತಹ ಕೆಲಸಗಾರರೆ ರೋಗಿಗಳ ಪರಿಚಾರಕರು. ಇನ್ನು ಹಲವು ಅಂಟುರೋಗಗಳು. ಈ ರೋಗವಿದ್ದೆಡೆ ರೋಗಿಗಳಿಂದ ದೂರಮಾತ್ರವಲ್ಲ, ಅವರ ಶುಶ್ರೂಷೆಯಿಂದಲೂ ಜನರು ದೂರವಾಗಿ ಇರಹತ್ತಿದರು.

ಈ ಉಪಾಯವೂ ವಿಫಲವಾಗಲು ದೇವರು ದಿಕ್ಕು ತೋರದಾದನು! ಕೂಡಲೇ ತಾನು ಮಾಡಿದ ಆವ ಯುಕ್ತಿಗಳೂ ಮನುಷ್ಯನಿಗೆ ಸುಖ ಮಾರ್ಗಕ್ಕೆ ಬೀಳಲಿಲ್ಲವೆಂದು ಮರುಕಗೊಂಡು "ಮಾನವನು ಈ ದುಃಖವನ್ನು ಅನುಭವಿಸುತ್ತಿರಲಿ; ಇದೇ ಅವನ ತಪ್ಪಿಗಿರುವ ಶಿಕ್ಷೆ. ಇದರಿಂದಲೇ ಅವರ ಮೋಚನೆ"ಯೆಂದು ಮನುಷ್ಯನನ್ನು ತನ್ನ ಇಚ್ಛಾನುಸಾರ ವರ್ತಿಸುವಂತೆ ಬಿಟ್ಟನು.

ದೇವರು ಈ ರೀತಿ ನಡೆದ ಬಳಿಕ ಮನುಷ್ಯನಲ್ಲಿ ಹಲ ಕಾಲಾನಂತರ ಮನದಲ್ಲಿ ವಿಚಾರವು ಒಡೆಯಿತು. ಸುಖವಾಗಿರಲು ಏನುಮಾಡುವುದೆಂಬ ಹೆಬ್ಬಯಕೆಯುಂಟಾಯಿತು. ಈ ಬಯಕೆಯು ಎಲ್ಲರಲ್ಲೂ ಅಂಕುರಿಸಲಿಲ್ಲ. ಕೆಲವು

[86ನೇ ಪುಟಕ್ಕೆ ಮುಂದುವರಿದಿದೆ.]

ಏಕಾಂಕನಾಟಕಗಳೂ ಪಾಶ್ಚಾತ್ಯರೂ

ಪಾಶ್ಚಾತ್ಯರಲ್ಲಿ ಏಕಾಂಕನಾಟಕಗಳ ಸರಿಯಾದ ವಿಕಾಸವು ಪ್ರಥಮ ಜಾಗತಿಕ ಯುದ್ಧಾನಂತರವೇ ಉಂಟಾಯಿತು. ಜಗತ್ತು ಹೆಚ್ಚ ಔದ್ಯೋಗಿಕವಾಗಿ, ದುಡಿವವನಿಗೆ ಮನೋರಂಜನೆ ಅವಶ್ಯವಾದರೂ ಸಮಯ ಮತ್ತು ತಾಳ್ಮೆಗಳು ಕಡಿಮೆಯಾದ ಕಾರಣ, ಏಕಾಂಕಗಳ ಪೈರು ಆ ಕಡೆ ಹುಲುಸಾಯಿತು.

ವಿಭಿನ್ನಜಾತಿಯ ನಾಟಕಗಳು ಪಾಶ್ಚಾತ್ಯರ ರಂಗಮಂಚದಲ್ಲಿ ಹಿಂದೆ ಇರುತಿದ್ದರೂ ಅವರಲ್ಲಿ ಏಕಾಂಕ ನಾಟಕಗಳ ಅಭಾವವೂ ಇದ್ದಿತು. ಸಮಯದ ಕೊರತೆ, ಜೀವನ ಸಮಸ್ಯೆಯ ತೊಡಕು, ಇವುಗಳಿಂದಲೂ ಹೆಚ್ಚು ಕಾಲವನ್ನು ಒಂದೇ ವಿಷಯದಲ್ಲಿ ಕಳೆಯಲಿರುವ ತಾಳ್ಮೆ ಕಡಿಮೆಯಾದುದರಿಂದಲೂ ನಾಟಕಗಳಲ್ಲಿ ಜನತೆಗೆ ಆಸಕ್ತಿ-ಗೌರವಗಳು ಕ್ಷೀಣದಶೆಗೆ ಬರಲು ಏಕಾಂಕ ನಾಟಕಗಳ ಸೂತ್ರಪಾತವುಂಟಾಯಿತು. ಇದಕ್ಕೆ "ಜವನಿಕೋತ್ಥಮಣ" (Curtain Raiser)ವೆಂದು ಅವರ ನಾಮಕರಣ. ಇವುಗಳು ಹಾಸ್ಯರಸದವುಗಳಾಗಿದ್ದವು. ಪಾರಸೀಕರ ಏಕಾಂಕಗಳನ್ನು ನೋಡಿದರೆ ಇದನ್ನು ಇನ್ನೂ ಅರಿಯಬಹುದಾಗಿದೆ. ಎ. ಎ. ಮಿನೀ, ಅರ್ನಲ್ಡ್ ಬೆನೆಟ್, ಜೊನ್ ಗಾಲ್ಸವರ್ಥಿ, ಲಾರ್ಡ್ ಡೆನ್ಸೇನೀ, ಜೆ. ಜೆ. ಬೇಲ್, ಜೊನ್ ಡ್ರಿಂಕ್‌ವಾಟರ್ ಮೊದಲಾದವರು ಏಕಾಂಕನಾಟಕಗಳನ್ನು ಪಾಶ್ಚಾತ್ಯರಲ್ಲಿ ಮೊತ್ತಮೊದಲಾಗಿ ಬರೆದು ರಂಗಮಂಚಕ್ಕಿತ್ತರು. ಪಾಶ್ಚಿಮಾತ್ಯರಲ್ಲಿ ಏಕಾಂಕನಾಟಕಗಳ ಸಂಪೂರ್ಣವಾದ ವಿಕಾಸವು ಗತಮಹಾಯುದ್ಧಾನಂತರ, 1918ರಿಂದ, ಆರಂಭಗೊಂಡಿತು. ಗ್ರೇಟ್ ಬ್ರಿಟೈನಿನಲ್ಲಿ ಇವುಗಳ ಯಥಾರ್ಥವಾದ ವಿಕಾಸವು 1924ರಲ್ಲಿ ಮಿ. ಜೆ. ಎಸ್. ಮೆರಿಯಟನ ಮೂಲಕವಾಯಿತು. ಅವನು ಅಲ್ಲಿನ ನಾಟಕಾಭಿನಯ ಮಂಡಲಿಗೆ ಸಹಾಯವಾಗುವಂತೆ ಮಾಡಿದ ಕರ್ಮವೇ ಆಧುನಿಕ ಏಕಾಂಕ ನಾಟಕಗಳ ವಿಕಾಸಕ್ಕಿರುವ ತಳಹದಿಯಾಯಿತು. ಇಂದಿದರ ಫಲವಾಗಿ ಏಕಾಂಕಗಳ ನೆರೆಯು ಭರದಿಂದ ಬಂದಿತು. ಅದಲ್ಲದೆ ಏಕಾಂಕ ನಾಟಕಗಳಿಗೆ ಪಾಶ್ಚಾತ್ಯರು ತುಂಬಾ ಮರ್ಯಾದೆಯನ್ನು ಕೊಡುತ್ತಿರುವರು. ಏಕಾಂಕನಾಟಕಗಳ ಸಂಗ್ರಹಗಳನ್ನು ಇದರೊಂದಿಗೆ ಪ್ರಸಾರಪಡಿಸುತ್ತಲೂ ಇರುವರು. ನಾಟಕ ಕಂಪೆನಿಕಾರರೇ ಈ ಕೆಲಸವನ್ನು ನಡೆಯಿಸುತ್ತಲಿರುವರು. ಇದರಿಂದ ನಾಟಕ ಪ್ರೇಕ್ಷಕರಿಗೆ ಉಂಟಾಗುವ ಆನಂದ ಇನ್ನೂ ಘನವಾಗುತ್ತಾ ಹೋಗತೊಡಗಿದೆ. ನಾಟಕಮಂಡಳಿಯವರು ಸಿನೆಮಾ ಪ್ರದರ್ಶನಗಳಂತೆ ಏಕಾಂಕ ನಾಟಕಗಳನ್ನೂ ಪ್ರದರ್ಶಿಸಿ ತುಂಬಾ ಕಲೆಯ ಚಾತುರ್ಯವನ್ನು ಬೆಳಗಿಸುತ್ತಲಿರುವರು. ರಂಗಮಂಚಗಳು ಈ ರೀತಿಯ ಕೆಲಸ ಮಾಡುವುದರಿಂದ ಕಲೆಯು ಉಳಿವೇ ಉಂಟಾಗಿ ಬಳೆಯುವುವು.

ಪುಸ್ತಕಭಂಡಾರದವರೂ ಏಕಾಂಕ ನಾಟಕಗಳ
ಯೂರೋಪಿನಲ್ಲಿ ಪ್ರಚುರಪಡಿಸಲು ಸಹಾಯಕರಾಗಿದ್ದು
ನಮ್ಮ ಕಣ್ಣಿಗೆ ಶತಶಃ ಬೀಳುತ್ತಿರುವುದು. ("ಪೆಂಗ್ವಿನ
ಬುಕ್ಸ್ ಕಂಪನಿಯು ಇಂತಹುಗಳಲ್ಲೊಂದು.) ಪಾಶ್ಚಾ
ರಲ್ಲಿ ತೋರುತ್ತಿರುವ ಏಕಾಂಕಗಳಲ್ಲಿ ಒಂದು ದೃಶ್ಯದ ನಾ
ಗಳಿವೆ. ಹೆಚ್ಚು ದೃಶ್ಯಗಳವೂ ಇವೆ. ಬರ್ನಾರ್ಡ್ ಶ
ನಾಟಕಗಳು ದೊಡ್ಡ ನಾಲ್ಕಾರು ದೃಶ್ಯಗಳಿಂದಲೇ ಕೆ
ಗೊಳ್ಳುತ್ತಿವೆ. ವರ್ತಮಾನಯುದ್ಧದ ಮೊದಲು ಏಕಾ
ಗಳ ಸ್ಪರ್ಧೆಯು ನಾಟಕಮಂಡಲಿಯವರ ಮೂಲಕ ನ
ದಿದ್ದುದೂ ತಿಳಿದುಬರುತ್ತಿದೆ. ಅಂದು ಈ ಸ್ಪರ್ಧೆಯ
600ಕ್ಕೆ ಮಿಕ್ಕಿದ ನಾಟಕಮಂಡಲಿಗಳು ಏಕಾಂಕನಾಟ
ಸ್ಪರ್ಧೆ ಮಾಡಿರುವುವಂತೆ. ಪಾಶ್ಚಿಮಾತ್ಯರು ಏಕಾಂಕನ
ವಾಕ್ಪಟಗಳನ್ನು ತಯಾರಿಸಹತ್ತಿರುವರು.

ಪಶ್ಚಿಮದೇಶದಲ್ಲಿ 'ಏಕದೃಶ್ಯದ ನಾಟಕ' (One A
Play), ಸಂಕ್ಷಿಪ್ತ (Sketch) ಮತ್ತು ರೇಡಿಯೋ ನಾಟ
ಎಂದು ಮೂರು ಬಗೆಯ ಏಕಾಂಕನಾಟಕಗಳಿವೆ. ಇ
ಮೂರಕ್ಕೂ ಅಲ್ಪ ಸ್ವಲ್ಪ ಭೇದವಿದ್ದರೂ ಲೇಖನಶೈಲಿಯ
ಹೆಚ್ಚಿನ ಅಂತರವಿರುವುದಿಲ್ಲ.

ನಾವಿಂದು ಪರಾಧೀನತೆಯ ಬಾಳ್ವಿಡಿದು ನಿಂತು ಪಾ
ಮಾತ್ಯರ ಹಿಂದೆ ನಡೆಯುತಿದ್ದೇವೆ. ನಮ್ಮ ದೇಶದಲ್ಲಿನ ಭಾ
ಗಳಲ್ಲಿ ಅವುಗಳ ಪರಿವರ್ತನೆಯನುಕರಣೆಗಳು ಉಂಟಾಗು
ರುವುದು ಸಹಜ. ಆದರೆ ಕನ್ನಡಿಗರಿಗೆ ಅಲ್ಲಿನ ಉತ್ತಮ ಲೇ
ಕರ ಕೃತಿಗಳನ್ನು ಇನ್ನೂ ಕಾಣುವ ಅದೃಷ್ಟವು ಬಂದಿಲ್ಲ.

[85ನೇ ಪುಟದಿಂದ ಮುಂದರಿದುದು]

ಮಂದಿಗಳು ಮಾತ್ರ ಮಾನವನ ಐಕ್ಯತೆಗೆ ಆವ ಹಾ
ಸಹಾನುಭೂತಿ ಪರಸ್ಪರ ಮೈತ್ರಿಗಳೊದಗುವ ಕರ್ಮವೇನ
ಮನುಷ್ಯ ಬಿಕ್ಕಟ್ಟು ಹರಿಯುವುದೆಂತು ಎಂದು ಯೋಚಿ
ಹತ್ತಿರುವರು. ಇದನ್ನು ಯೋಚಿಸುವವರಲ್ಲಿ ಮರಣವು ಎ
ರಿಗೂ ಇದೆ. ಮನುಷ್ಯನು ಬಾಳಿರುವ ನಿಮಿಷ ಗಂಟೆ, ದಿ
ತಿಂಗಳು, ವರ್ಷ, ಮತ್ತು ವರ್ಷಗಳು ಐಕ್ಯತೆ ಗೂಡಿದ
ಮಾನವ ಸಮಾಜದಲ್ಲಿ ಸಹಾನುಭೂತಿ ಪ್ರೇಮಗಳಿಂ
ಕೂಡಿರತಕ್ಕದ್ದು ಎಂಬೆಣಿಕೆಯೂ ಇದೆ. ಇಂದು ಇಂತ
ಮಾನವನು ರೋಗವನ್ನು ದೂರಮಾಡುವುದು ಅಸಂಭವ
ಮಾತು; ಮನುಷ್ಯನ ಸುಖಜೀವನಕ್ಕೆ ಪರಸ್ಪರ ಪ್ರೇಮ
ಸೌಹಾರ್ದಬಂಧ ಎಲ್ಲದಕ್ಕೂ ಮುಖ್ಯವೆನ್ನುತ್ತಿರುವನು.



ಹರಟೆ

ತೂತುಗಳಿಗೆರಡು ಮಾತುಗಳು

(ಲೇಖಕರು: ಶ್ರೀ। ಎಮ್. ವಿ. ಪ್ರಭು, ಎಮ್.ಎ., ಎಲ್.ಟಿ.)

ವಿನೋದಪರ ಹರಟೆಗಳಿಂದ ಕಳೆದ ಹತ್ತು ವರ್ಷಗಳಿಂದಲೂ ನಮ್ಮ ವಾಚಕರಿಗೆ ಸುಪರಿಚಿತರಾದ ಶ್ರೀ। ಎಮ್. ವಿ. ಪ್ರಭುಗಳವರು ಈ ಬಾರಿ ತೂತುಗಳ ಕುರಿತು ತುತೂರಿಯೂದುತ್ತಾರೆ. ಕಾಲು ಬುಡದಿಂದ ನೆತ್ತಿಯ ತನಕ, ಪಡುಸಾಲೆಯಿಂದ ಅಡುಗೆ ಸಾಲೆಯ ತನಕ, ಬಟ್ಟೆಯಲ್ಲಿ–ಬಟ್ಟಲಲ್ಲಿ–ಎಲ್ಲೆಲ್ಲಿಯೂ ತೂತುಗಳನ್ನು ಕಂಡುಹಿಡಿದರೂ, ಅವರು ಮರುಗುವುದಿಲ್ಲ; ಎಲ್ಲ ಸಂಕಷ್ಟಗಳನ್ನೂ ನಕ್ಕುಬಿಡುತ್ತಾರೆ.

ಒಟ್ಟೇ ಪುರಾಣವನ್ನು ತೆರೆಯುವಾಗ ಅಲ್ಲಿ ಹಲವು 'ಒಟ್ಟೆ'ಗಳು ನಮಗೆ ಪ್ರತ್ಯಕ್ಷವಾಗಲು, 'ಒಟ್ಟೇಪುರಾಣ'ವನ್ನು ಬರೆಯಲಿಕ್ಕೆ ಸಹಾಯವನ್ನೀಯುವ ಕೆಲವು ಸೂಚನೆಗಳೂ ನಮ್ಮ ಕೈಯನ್ನು ಬಲಪಡಿಸಿದವು.

ಬರೆಯಲಿಕ್ಕೆಂದು ಒಟ್ಟುಗೂಡಿಸಿದ ಹಲವು ಬೇರೆಬೇರೆ ಜಾತಿಯ ಕಾಗದದ ತುಂಡುಗಳಲ್ಲಿ ಸಹ, ಅನೇಕ ತೂತುಗಳು ಕೂಟವನ್ನೇರ್ಪಡಿಸಿವೆ. ದೊಡ್ಡ ತೂತು ಅಧ್ಯಕ್ಷರ ಸ್ಥಾನದಲ್ಲಿದೆ; ನಾಲ್ಕೈದು ಸಣ್ಣ ತೂತುಗಳು ಉಪಾಧ್ಯಕ್ಷ, ಕಾರ್ಯದರ್ಶಿ, ಖಜಾನ್ಚಿ ಮೊದಲಾದವರ ಸ್ಥಾನದಲ್ಲಿವೆ. ಮಂಡಳಿಯ ಸದಸ್ಯರೂ ತೂತುಗಳೇ. ಹೀಗೆ ತೂತುಗಳೆಲ್ಲ ಕೂಟವಾಗಿ ಅನೇಕ ತೂತು ಠರಾವುಗಳನ್ನು ಮಂಜೂರು ಮಾಡುತ್ತಿದ್ದುವು.

ಇಷ್ಟು ಬರೆಯುವಾಗ ಲೇಖನಿಯು ನಿಂತಲ್ಲೆ ನಿಂತುಬಿಟ್ಟಿತು. 'ಏನು?' ಎಂದು ಕೇಳುವಾಗ, 'ಮಸೀಕುಂಡದಲ್ಲಿ ಸ್ನಾನವಾಗಲಿಲ್ಲ' ಎಂಬ ಉತ್ತರ ಬರಲು, ಲೇಖನಿಯನ್ನು ಮಸಿಯ ಬಾವಿಯಲ್ಲಿ ಮುಳುಗಿಸಬೇಕಾಯಿತು. ನಮ್ಮ ಲೇಖನಿಗೆ ಐದೈದು ನಿಮಿಷಕ್ಕೊಮ್ಮೆ ಇಂತಹ ಸ್ನಾನವಾಗಬೇಕು. ಸ್ನಾನವಾದ ಕೂಡಲೆ ಐದು ನಿಮಿಷದ ಮೌನವ್ರತವು ಇದೆ. ಇಷ್ಟು ಸಮಯವನ್ನು ಹಾಳುಮಾಡಲೇಕೆ? ನಮ್ಮ ಹೊಟ್ಟೆಗೂ ಕಾಫಿ ಸ್ನಾನವಾಗಬೇಕೆಂದು ನೆನಪಾಗಿ ಭೋಜನ ಗೃಹಕ್ಕೆ ಓಡಿದೆವು.

ಅಲ್ಲಿ, ತೂತುಗಳಿರುವ ಪಾತ್ರೆಗಳ ಮಹಾ ಪ್ರದರ್ಶನವೊಂದು ಜರಗುತ್ತಿತ್ತು. ನಾವು ಕುಡಿಯುವ ಲೋಟಕ್ಕೆ ಒಂದಕ್ಕಿಂತ ಹೆಚ್ಚು ತೂತುಗಳು. ಮೇಲಿನಿಂದ ನಾವು ಕಾಫಿ ಕುಡಿಯುವಾಗ ಕೆಳಗಿನಿಂದ ಸೋರುತ್ತಿದೆ. ಹೀಗೆ ಕಾಫಿಯು ಮೈಮೇಲೂ ನೆಲದ ಮೇಲೆಯೂ ಹರಿಯುತ್ತಿರುವಾಗ ಕಾಫಿಯನ್ನು ಕುಡಿಯುವುದರೊಂದಿಗೆ ನಿಜವಾದ ಸ್ನಾನವೂ ಆಗುತ್ತಿತ್ತು. ಯಾವ ಪಾತ್ರೆಯನ್ನು ಎತ್ತಿ ಹಿಡಿದರೂ ಅದು ತಾನೂ ತೂತಿನ ಪಾತ್ರವೆಂದು ಉಚ್ಚ ಸ್ವರದಲ್ಲಿ ಕೂಗುತ್ತಿತ್ತು. ತೂತಿನ ಪಾತ್ರೆಗಳ ಅಧಿಕಾರಿಯು (ಯಾವಾಗಲೂ ನಮ್ಮ ಕಡೆಯಿಂದ ಹಾದುಹೋಗುವವನು) ಮನಸ್ಸು ಮಾಡಿದರೆ ನಮ್ಮ ಪಾತ್ರೆಗಳಲ್ಲಿ ನೂರಕ್ಕೆ ನೂರು ಅವನಿಗೆ ಸೇರಬೇಕಾದವುಗಳೆಂದು ಅವುಗಳನ್ನೆಲ್ಲ ಎತ್ತಿಕೊಂಡು ಹೋಗಬಹುದು. ಆದರೆ ಅವುಗಳು ನಮ್ಮ ಕೈಬಿಟ್ಟರೆ ನಮಗೆ ಗತ್ಯಂತರವಿಲ್ಲ. ಹೀಗೆ, ಭೋಜನಗೃಹದಲ್ಲಿಯೂ ತೂತಿನ ಮಹಿಮೆಯು ಒಡೆದು ಕಾಣುತ್ತಿತ್ತು.

ಸ್ನಾನಗೃಹದ ಕೊಡಪಾನಗಳಿಗೂ ಅದೇ ರೋಗ. ಬಾವಿಯಿಂದ ಇಡೀ ಕೊಡಪಾನವನ್ನು ತುಂಬಿಸಿ ಅದನ್ನು ಮೇಲಕ್ಕೆಳೆದರೆ ಸ್ನಾನಗೃಹವನ್ನು ಸೇರುವಷ್ಟರಲ್ಲೆ ಅದರಲ್ಲಿರುವ ಅರೆವಾಸಿ ನೀರು ಕಾಣೆಯಾಗುತ್ತದೆ. ಬಾವಿಯಿಂದ ಸ್ನಾನಗೃಹಕ್ಕೆ ಇರುವ ಹಾದಿಯೆಲ್ಲ ನಮ್ಮ ಕೊಡಪಾನದ ನೀರಿನ ಅಂಶವನ್ನು ವಸೂಲು ಮಾಡಿ, ತನ್ನ ಸ್ನಾನವನ್ನೂ ಪೂರೈಸುತ್ತದೆ. ನೀರು ತುಂಬಿಸಿಡುವ ಹಂಡೆಯ ಮರಿಯಾದ ಸಣ್ಣ 'ತಪ್ಪಲೆ'ಗೂ ಹಿರಿಯರ ಆ ರೋಗ!

ಊಟದ ಬಟ್ಟಲು ಸರಿಯಿದೆ ಎಂದು ಸಮಾಧಾನದಿಂದಿರಲು ಸಾಧ್ಯವಿಲ್ಲ. ಅದರಲ್ಲಿ ಗಂಜಿಯನ್ನು ತಿನ್ನಬಹುದು, ನೀರನ್ನು ಕುಡಿಯಲಿಕ್ಕಾಗುವುದಿಲ್ಲ. ಅದು ನೆಲದ ಮೇಲೆ ಇಳಿದು ಹೋಗುತ್ತದೆ. ಅನೇಕರು ಗಂಜಿಯೂಟ ಬಿಟ್ಟು, ಹೊಟೇಲು ಕಾಫಿಯ ಆಶ್ರಯ ಹೊಂದಲು ಇದೂ ಒಂದು ಕಾರಣವಿರಬಹುದು!

ಪೇಟೆಗೆ ಹೊರಡಲು ಸಿದ್ಧನಾದಾಗ ತೂತಿನ ಐದಾರು ಸಾಮಾನುಗಳು 'ನಮ್ಮನ್ನೂ ಕರಕೊಂಡು ಹೋಗಿ' ಎಂದು ಎದ್ದುನಿಂತಿವೆ! ಪ್ರಥಮದಲ್ಲಿ ನಮ್ಮ ಹಳೇ ಪೇಟಾ, ಪೇಟಾ ಇಟ್ಟುಕೊಳ್ಳದೆ ಪೇಟೆಗೆ ಹೋಗಲೇ? ಪೇಟಾತುಂಬ ಮರ್ಯಾದೆ ಹೋಗಿ ಪೇಟೆಯಲ್ಲೊಂದು ಯಕಶ್ಚಿತ ವ್ಯಕ್ತಿಯಾಗಲೇ? ಪೇಟಾವಿಗೆ ಮೇಲೊಂದು ತೂತಿದೆ. ಈ ತೂತಿನಲ್ಲಿ ಕಾಲಗತಿಯಿಂದ ಅಧಿಕಾಂಶವು ಅಳಿದುಹೋಗಿ ಹಿಂದುಳಿದ ಕೆಲವೇ ಕೇಶಗಳಿಗೆ ಶ್ವಾಸವನ್ನು ತೆಗೆದು

ಕೊಳ್ಳುವ ಸೌಕರ್ಯವಿದೆ. ಅದು ತಲೆಯೆಂಬ ಮಾಡಿಗೆ ಸಿಕ್ಕಿಸಿದ ಕಿಟಕಿ. ಮತ್ತೆ, ಮೈಮೇಲೆ ಸಿಕ್ಕಿಸಿಕೊಳ್ಳಬೇಕಾದ ಷರ್ಟು ಮತ್ತು ಅಂಗಿ! ಇವೆರಡಕ್ಕೂ ತೂತೆಂಬ ದಶಮ ಗ್ರಹದ ಪೀಡೆ. ಹತ್ತಿಪ್ಪತ್ತು ಇವೆ. ಒಂದು ಕಡೆಯಲ್ಲಿ ಹರಿದರೆ ಮತ್ತೆ ಮುಟ್ಟಲೇ ಆರೆವು. ಒಂದು ತೂತು ಹೊಲಿಯಹೋದರೆ ಬೇರೆ ಒಂಭತ್ತು ಉಂಟಾಗುತ್ತಿವೆ!

ನಮ್ಮ ಕೋಟುಗಳಲ್ಲೆಲ್ಲ 'ಭಟ್ಟನ ಹೋಲು'ಗಳೇ ಇರುವವಲ್ಲದೆ ಯಾವ ವಿಧದ 'ಬಟ್ಟನೂ'ಇಲ್ಲ. ಷರ್ಟಿಕಿಸೆಯಲ್ಲಿ ಅಡಗಿಕೊಂಡೇ ಇರುವ ಕರವಸ್ತ್ರವನ್ನು ಪರೀಕ್ಷಿಸಿ ನೋಡಿದರೆ ಅದರಲ್ಲಿಯೂ ಒಂದೆರಡು ದೊಡ್ಡ ತೂತುಗಳಿರಬೇಕೆ!

ಉಟ್ಟುಕೊಳ್ಳುವ ಧೋತ್ರದಲ್ಲಿಯೂ ತೂತುಗಳ ಸೈನ್ಯ. ಅಭ್ಯಾಸಬಲದಿಂದ ಲಭಿಸಿದ ಒಂದು ವಿಧದ ಅಮೋಘವಾದ ಜ್ಞಾನಸಂಪತ್ತಿನಿಂದ ನಾವು ಈ ತೂತುಗಳು ಸಾಮಾನ್ಯ ಜನರ ದೃಷ್ಟಿಗೂ ಬೀಳದಂತೆ ಮಾಡುವ ಶಕ್ತಿಯನ್ನು ಸಂಪಾದಿಸಿರುತ್ತೇವೆ. ಕಾಲಿನಡಿಯಲ್ಲಿರುವ ಪಾದರಕ್ಷೆಗಳಿಗೂ ತೂತುಗಳ ಬಾಧೆಯಿಲ್ಲದಿಲ್ಲ. ಈಗಿನ 'ಜೋಡು'ಗಳು, ಕೊಂಡುಕೊಂಡ ಮೂರು ತಿಂಗಳಲ್ಲಿ ತೂತುಗಳ ಪ್ರದರ್ಶನವಾರಂಭಿಸುತ್ತಿವೆ. ಹಿಡಿಯುವ ಕೊಡೆಯಲ್ಲ[illegible] ತೂತುಗಳು ಹೆಚ್ಚು; ನೂಲು ಕಡಿಮೆ!

ಜನರಲ್ಲೆಲ್ಲ ಕೈಚೀಲ ಪೇಟೆಗೆ ಒಯ್ಯುವ ಅ[illegible]ವೊಂದಿದೆ. ಪ್ರತಿದಿನ ಆ ಚೀಲದ ತೂತುಗಳ ದು[illegible]ಯಾಗಬೇಕು. ಈ ಬಗ್ಗೆ ಪ್ರತಿ ಮನೆಯಲ್ಲಿ ಒಂದು [illegible] ಸಿದ್ಧವೇ ಇದೆ. ಮನೆಯಲ್ಲಿದ್ದ ಸೂಜಿ ಕಾಣೆಯಾದರೆ [illegible]ಯವರೆಲ್ಲ ಅದನ್ನು ಹುಡುಕುವುದರಲ್ಲಿ ಹೆಚ್ಚು ಸಮಯ[illegible] ವೆಚ್ಚಮಾಡುವರು. ಅದು ಪುಣ್ಯವಶಾತ್ ಸಿಕ್ಕಿದರೆ ಮನೆ[illegible]ರಲ್ಲಿ ಒಂದು ಹೊಸ ಕೂಸು ಹುಟ್ಟಿದರೆ ಆಗುವಷ್ಟೆ ಸಂತೋ[illegible]ವಾಗುವುದು. ಏಕೆಂದರೆ ಈ ಸೂಜಿಯಿಂದಲೆ ವಿಲ್ಲಿನ[illegible] ಮನೆಗೆ ಬರುವ ಸೋಜಿಯ ಪ್ರಾಣರಕ್ಷಣೆಯಾಗುವುದು.

ತೂತಿನ ಮಹಿಮೆ ದೊಡ್ಡದಿದೆ. ಅದನ್ನು ಒ[illegible] ಗ್ರಂಥದಲ್ಲಿ ವಿವರಿಸಲು ಸಾಧ್ಯವಾಗದು. ಮಾನವ ಜೀವಿ[illegible] ಹಲವು ತೂತುಗಳಿರುವ ದೊಡ್ಡ ಪಾತ್ರ; ಈ ಪಾತ್ರವ[illegible] ಕ್ಷೇಮವಾಗಿಡಲು ಯತ್ನಿಸದೆ ಜಗತ್ತು ಹೊರಗಿನ ಬಟ್ಟೆ-ಅ[illegible] -ಮುಂಡಾಸುಗಳ ತೂತುಗಳನ್ನು ಮಾತ್ರ ಸರಿಪಡಿಸುತ್ತಿದೆ.

(83ನೇ ಪುಟದಿಂದ ಮುಂದರಿದುದು.)

ಕೋಳದಂತೆ ಸುತ್ತಿಕೊಂಡಿತು.....ದಾರಿಹೋಕರು ಇವರನ್ನು ಕಂಡು, ಪೋಲಿಸರ ಆಗಮನವಾದ ಮೇಲೆ ಸರ್ಪವು ತನ್ನಷ್ಟಕ್ಕೆ ಬಿಟ್ಟು ಹೋಯಿತು. ಇದು ನಮ್ಮ ಪಾಠ ಪುಸ್ತಕದ "ಬೇಡನೂ ಪಾರಿವಾಳವೂ" ಎಂಬ ಕಥೆಯಂತಿಲ್ಲವೆ?

(೩) ಚಾಟಸೂ ಎಂಬಲ್ಲಿಯ ಇಬ್ಬರು ಬ್ರಾಹ್ಮಣರು ನಸೀರಾಬಾದಿಗೆ ಹೋಗಿ ಹಣಗಳಿಸಿ, ಎರಡು ವರ್ಷಗಳನಂತರ ಊರಿಗೆ ಹಿಂದಿರುಗುವಾಗ ದಾರಿಯಲ್ಲೊಬ್ಬನಿಗೆ ಸರ್ಪದಂಶವಾಗಿ ಸತ್ತನು. ಜತೆಗಾರನು ಅವನ ಅಂತ್ಯ ಕ್ರಿಯೆಯನ್ನು ಹೇಗೂ ಮುಗಿಸಿ, ಅವನ ಸಾಮಾನುಗಳನ್ನೆಲ್ಲಾ ಸಾಗಿಸಿ ಮೃತರ ಹಕ್ಕುದಾರರಿಗೆ ಕೊಡಲು, ಅವರು ಇವನನ್ನು ನಂಬದೆ ಏನೇನನ್ನೋ ಪ್ರಸ್ತಾಪಿಸಿ ಅವನ ಮೇಲೆ ದಾವೆ ಹೂಡಿದರು. ಸಜೆಯ ಸಮಯದಲ್ಲಿ ನ್ಯಾಯಾಧೀಶರ ಮುಂದೆ ಸರ್ಪವೊಂದು ಹೆಡೆಬಿಚ್ಚಿ ಕುಳಿತುಕೊಂಡಿತು. ತತ್ಕಾಲವೇ, ನಸೀರಾಬಾದನ್ನು ನೋಡದವನೊಬ್ಬನಿಗೆ ಆವೇಶವುಂಟಾಗಿ ಪ್ರತಿನಿಧಿರೂಪದಿಂದ ಹೇಳಿದನು:–"ಆಪಾದಿತನು ನಿರಪರಾಧಿ. ಊರಿಗೆ ಮರಳುವಾಗ ಇವನೂ, ಕಾಲವಾದವನೂ ಒಂದು ಛತ್ರದಲ್ಲಿ ಮಲಗಿದ್ದರು. ರಾತ್ರಿ ಕಳ್ಳರ ಭಯದಿಂದ ಸತ್ತವನು ತನ್ನ ಹಣದ ಗಂಟನ್ನೊಂದು ಮೂಲೆಯಲ್ಲಿ ಅಡಗಿಸಿಟ್ಟನು. ಅಲ್ಲಿಂದ ಸರ್ಪವಿತ್ತು. ಅವನ ಹಣದ ಗಂಟು ಅವನ ತಲೆಗೆ ತಾಗಲು, ಅದು ಆತನನ್ನು ಕಡಿದು ಬಿಟ್ಟಿತು. ಹಣವು ಅಲ್ಲಿಯೇ ಇದೆ. ಆ ಸರ್ಪವು ಅದನ್ನು ಕಾಯುತ್ತಿದೆ."

ಅನುಸಂಧಾನದ ಮೇಲೆ ಅಕ್ಷರಶಃ ನಿಜವಾಯಿತು. [illegible]ರಡು ಕಥೆಗಳಲ್ಲಿ ಸರ್ಪವು ನ್ಯಾಯಾಧಿಪತಿಯಾಗಿದೆ!

(೪) ಇತ್ತೀಚಿಗಿನ ಒಂದು ಪತ್ರಿಕೆಯಲ್ಲಿನ ಸಂಗತಿ[illegible] ಇವೆಲ್ಲಕ್ಕೂ ಆಶ್ಚರ್ಯಕರವಾದುದು. ಗಡಿನಾಡಿನ ಒಂ[illegible] ಗ್ರಾಮದಲ್ಲೊಬ್ಬ ಸಿಪಾಯಿಯು ಸರ್ಪವೊಂದನ್ನು ಕಂ[illegible] ಗುಂಡಿಕ್ಕಿದನು. ಅದು ತಕ್ಷಣ ಸತ್ತಿತು. ಆದರೆ, ಅ[illegible] ಕೂಡಲೆ ಆರೇಳು ಸರ್ಪಗಳು ಎದುರಾಗಿ ಅವನನ್ನು ಕಡಿದ[illegible] ಅವನು ಓಡೋಡಿಹೋಗಿ ಮನೆಯವರಿಗೀ ವರ್ತಮಾ[illegible] ತಿಳಿಸಿ ವಿಷವೇರಿ ಮೃತನಾದನು. ಅವನ ಬಂಧುಗಳು ಸಿ[illegible]ಗೆದ್ದು ಸರ್ಪಗಳ ಶಿಕಾರಿಗೆ ಹೊರಟರು. ಇದ್ದ ಪೊದೆ-ಹುತ್ತಗಳನ್ನೆಲ್ಲಾ ಹುಡುಕಿ ಸಿಕ್ಕ ಸರ್ಪಗಳನ್ನೆಲ್ಲಾ ಧ್ವಂಸಿ[illegible]ದರು. ಆ ಕೂಡಲೇ ಇರುವೆ ಮುತ್ತಿದಂತೆ ಎಲ್ಲೆಲ್ಲೂ ಸ[illegible]ಗಳೇ ಸರ್ಪಗಳು! ಅವುಗಳ ಹಾವಳಿಯನ್ನು ತಡೆಯಲಾಗ[illegible] ಅಲ್ಲಿಯ ಜನರೆಲ್ಲ ಆ ಗ್ರಾಮವನ್ನೇ ಬಿಡಬೇಕಾಯಿತ[illegible] ಅವುಗಳೂ ಕೂಡ ಪ್ರತಿಕ್ರಿಯೆಯನ್ನು ಸಾಧಿಸುತ್ತವೆಂ[illegible]ದಕ್ಕೆ ಸರಿಯಾದ ಉದಾಹರಣೆಯಿದು. ಈ ವಿಚಿತ್ರ ವಿ[illegible]ದಲ್ಲಿ ಇನ್ನೂ ಇಂತಹ ಎಷ್ಟೋ ಕಥೆಗಳು ಪ್ರಸಿದ್ಧವಾಗಿ[illegible] ಈ ನಾಗರೀಕ ಯುಗದಲ್ಲೂ ಕೊನೆಯ ಪಕ್ಷ ಹಿಂದುಗ[illegible]ಲ್ಲಾದರೂ ಅವುಗಳ ಸತ್ವ ಕಡಿಮೆಯಾಗಿಲ್ಲ. ಒಟ್ಟಿ[illegible] ಮೇರೆಗೆ ಅವುಗಳು ಸಜ್ಜನರ ಬೆಂಗಾವಲಿಗಿವೆ. ಸೊಕ್ಕಿ[illegible] ಜನರ ದರ್ಪವನ್ನಿಳಿಸಲು ಹಿಂಜರಿಯುವುದಿಲ್ಲ. ಆದರ[illegible] ಎರಡು ರೀತಿಯ ಜನರಲ್ಲೂ ನಾಗನಿಗೆ ಸಮಾನ ಪ್ರತಿಷ್ಠೆ ಯಿ[illegible]




ನವಯುಗದವರ '‘ದಿನ್–ರಾತ್’’ ಚಿತ್ರದಲ್ಲಿ ಸ್ನೇಹಪ್ರಭಾ



ನವಯುಗದವರ “ದಿನ್‌ರಾತ್” ಚಿತ್ರದಲ್ಲಿ ಸುಲೋಚನಾ ಚಟರ್ಜಿ.

★ ಗೆದ್ದವರ ಸತ್ಯ ★



(ಲೇಖಕರು: ಶ್ರೀ ಕೋ. ಶಿ. ಕಾರಂತ.)

★

ಎರಡನೆಯ ಮಹಾಯುದ್ಧದ ಇತಿಹಾಸವನ್ನು ಶ್ರೀ ಕಾರಂತರು, ತಮ್ಮ ವ್ಯಂಗ್ಯ ಲೇಖನಿಯಿಂದ ಹೊಸತೊಂದು ರೀತಿಯಲ್ಲಿ, ಶಿಶುಗೀತಗಳಿಂದ ಚಿತ್ರಿಸಿರುವರು. ಕನ್ನಡದಲ್ಲಿ ಈ ಬಗೆಯ ಬರೆಹ, ಬಹುಶಃ ಇದೇ ಮೊದಲನೆಯದು. ಇಲ್ಲಿ ಒಂದೊಂದು ದೇಶವನ್ನು ಒಂದೊಂದು ಮೃಗದಿಂದ ಚಿತ್ರಿಸಿದೆ.

★

ಜರ್ಮನಿ	= ತೋಳ	ಚೀನ	= ದನ	ಫ್ರಾನ್ಸ್	= ನಾಯಿ
ಇಟಲಿ	= ಕಿರುಬ	ಅಮೇರಿಕ	= ಸಿಂಹ	ರಷ್ಯ	= ಕರಡಿ
ಜಪಾನು	= ಚಿರತೆ	ಇಂಗ್ಲೆಂಡ್	= ನರಿ	ಜೆಕೊಸ್ಲೊವೆಕಿಯ	= ಮೊಲ

ಪೋಲೆಂಡ್ = ಕೋಳಿ **ಹಿಂದುಸ್ಥಾನ = ಕುರಿ**

ಅಂಕ ೧.

(ಪಶು ಪ್ರಾಣಿಗಳೆಲ್ಲ ಮಲಗಿವೆ. ಒಂದು ಕಡೆ ಎಚ್ಚತ್ತ ತೋಳ, ಉಳಿದವರ ನಿದ್ರೆ ಕಂಡು ಮಾತಾಡುತ್ತದೆ.)

ತೋಳ: ಕೇಳಿಸದೇನು—ತೋಳನ ಕೊರಳು?
ನನಗೇಕಿಲ್ಲ? ಹೆಮ್ಮೆಯ ಬಾಳು?
ಕಾಯಿಲೆ ಬಿದ್ದ ಜರ್ಮನ್ ತೋಳ!
ಸಿರ್ಬಂಧ ಕಡಿದಿದೆ—ಮುರಿದಿದೆ ಕೋಳ!
ಅಬ್ಬಾ—ಬೇಟೆಗೆ ಜಾಗವೇ ಇಲ್ಲ!
ಸಿದ್ದೆಗೂ ಕೂಡಾ ಶಾಂತಿಯು ಇಲ್ಲ!
ನೆರೆಕರೆ ಮನೆಯಾ ಮೊಲ ಕೋಳಿಗಳೇ,
ಮರಿಗಳ ನೀಡುತ ಇರಿ, ರಾಜಿಯೊಳೆ!

ಕಿರುಬ: (ತಾನೂ ಎದ್ದು ಆಚೀಚೆ ಕಂಡು)
ಕೇಳಿದೆ ತೋಳ ನಿನ್ನೀ ಗೋಳ.
ನನಗೂ ನಿನಗೂ ಹಗೆಗಳೆ ಬಹಳ.
ಆ ಕಡೆ ಕಂಡರೆ ಕರಡಿಯ ಭೀತಿ!
ಲೋಕದಿ ತುಂಬಿದೆ ನಾಯ್ನರಿ-ಕೀರ್ತಿ!

ತೋಳ: ಕತ್ತೇ ಕಿರುಬನೆ ಕೇಳು!
ನಂದೇ ಮಂತ್ರವ ಹೇಳು!

ಕಿರುಬ: ಕೂಡಿಸಿ ಹಾಡುವ ಒಂದೇ ಮಂತ್ರ
ಹಂಚಿಕೆ ಹರಡುವ ಒಂದೇ ತಂತ್ರ!

ತೋಳ: ಅಂತಿರೆ ಹೂಡು–ಬೆನ್ನಿಗೆ ಬೆನ್ನು!
ಆಪದ್ಧರ್ಮಕೆ—ಎಲ್ಲಿದೆ ಸಿನ್ನು?

ತೋಳಗು ಕಿರುಬಗು ಪ್ಯಾಕ್ಟು (Pa
ಜಗಕ್ಕೆ ತಿಳಿಯಲಿ ಫ್ಯಾಕ್ಟು (fact.)

ತೋಳ ಕಿರುಬ: (ಸೇರಿ ಹಾಡುತ್ತ ಕವಾಯತು ನಡೆಯಿ ವುವು.)
ನಮ್ಮಯ ಮಕ್ಕಳಿಗನ್ನವೇ ಇಲ್ಲ!
ಬೇಟೆಗೆ ಕಾಡೇ ಇಲ್ಲ!
ಲೋಕದಿ ಕಾಟಿಗೆ ದಿಕ್ಕೇ ಇಲ್ಲ!
ಆದರೂ ಊಟಕೆ ಇಲ್ಲ!
ಲೆಫ್ಟ ರೈಟು ಲೆಫ್ಟ ರೈಟು!
ತೋಳ ಕಿರುಬನ ಪ್ಯಾಕ್ಟು!
ರಷ್ಯನ ಕರಡಿಗೆ ಕಣ್ಣಿಟ್ಟು!
ಎಲ್ಲರೂ ಸೇರಿ ನಮ್ಮೊಟ್ಟು!

[ಗದ್ದಲಕ್ಕೆ ಒಂದೊಂದಾಗಿ ಎಚ್ಚರಗೊಳ್ಳುವ ಯುದ್ಧ ಪಿನ ಮೃಗಗಳು.]

ನರಿ: ಕರಡಿ ಮೇಲಿನ ಈ ಸಿಟ್ಟು—
ಹೆಚ್ಚುತಲಿರಲಿ—ಸುಖವುಂಟು!

(ಮಲಗುವುದು.)

ಮೊಲ: ಅಯ್ಯೋ ಕಾಲಿ ನಾಯಿ!
ಕೇಳಿದೆಯ ತೋಳನ ಬಾಯಿ!
ಹೀಗೆ ಆದರೆ ಮುಂದೆ
ಎಲ್ಲಿನ ಶಾಂತಿ—ಎಂದೆ?

ಕೋಳಿ: ಪೋಲಿ ಹೇಳದು ಈ ಕೋಳಿ!
ಕೇಳುತಲಿಹುದು ರಣಗಾಳಿ!
ತೋಳನ ಕಣ್ಣೇ ನನ್ಮೇಲೆ!

ನಾಯಿ: ಗೌ-ಗೌ-ಗೌ— ಗೌ ಗೌ ಗೌ!
ಕಿರುಬನ ತಂಟೆಗೂ ದೂರಿದ್ದೆ!
ತೋಳನ ಕಾಯಿಲಿ ನಂಬಿದ್ದೆ!
ಗದ್ದಲ ಹೆಚ್ಚಿ, ನನ್ನಿದ್ದೆ!
ಯಾಕೋ ಕೆಟ್ಟಿದೆ—ಏನ್ ಜಿದ್ದೆ?
ಗೌ ಗೌ ಗೌ— ಗೌ ಗೌ ಗೌ.

ತೋಳ+ಕಿರುಬ: ಲೆಫ್ಟು ರೈಟು ಲೆಫ್ಟು ರೈಟು (ಗೀತೆ ಹಾಡುವರು.)

ನಾಯಿ: ಗೌ ಗೌ ಗೌ ಗೌ— ಗೌ ಗೌ ಗೌ-ಗೌ!
ಇಂಗ್ಲಿಷ್ ನರಿಯನು ಕೂಗಲೇ ಈಗ?
ನಂಬದಿದ್ರಾಗ . . . . ನಂಬಿದರೆ ಹ್ಯಾಗ?
ಗೌ ಗೌ ಗೌ — ಗೌ ಗೌ ಗೌ!

ನರಿ: ಕಾಲಿ ನಾಯಿ ಕೂಗೇ ಗೌ ಗೌ ಗೌ!

ನಾಯಿ: ತೋಳ ಕಿರುಬನ ಪ್ಯಾಕ್ಟು!
ಗೊತ್ತೇ ಅದರ ಒಳಗುಟ್ಟು?

ತೋಳ+ಕಿರುಬ: ಲೆಫ್ಟು ರೈಟು — ಲೆಫ್ಟು ರೈಟು—
ಬೆಡ್‌ಗೆ ಇಂದು ಗುಡ್‌ನೈಟು!
ಬೇಟೆಗೆ ಚಲೋ ಟ್ವೈಲೈಟು.

ಮೊಲ: ಮನೆ ಮುಂದಿದೆ ಜರ್ಮನ್ ತೋಳ!
ಕಾಪಾಡಿರಣ್ಣ ರೈಖ್ ಮಕ್ಕಳ!

ನಾಯಿ: ಕಾಣೋ, ಕೇಳೋ, ನರಿ.
ತೋಳವು ಸೊಕ್ಕಿದೆ ಬರಿ.
ಹಾಕಲೇ ಬೇಕು ಗುದ್ದು;
ಬಿಟ್ವುದು ಆದರೆ ಪೆದ್ದು!

ನರಿ: ಯಾಕೆ ನಾಯಿಯೇ ಈ ಸಿಟ್ಟು?
ಹೋದದ್ದೇನು ನಮ್ಮ ಗಂಟು?
ಕರಡಿಯು ಮನೆ ಆಚುಂಟು;
ತೋಳವು ಬೆಳೆದರೆ ಹಿತವುಂಟು!
ಬಿಡು, ಚಿಂತೆ. ಬಿಡು
ನನ್ನಲ್ ನಂಬುಗೆ ಇಡು! (ಎಂದು ಸಂಧಾನಕ್ಕೆ ಹೋಗುವುದು.)
ಹೂಣರ ತೋಳ-ಯಾಕೆ ಏನು ಈ ಕೋಪ!

ತೋಳ: "ಯಾಕೆ, ಏನು-ಈ ಕೋಪ!"
ಹೊಟ್ಟೆಗಿಲ್ಲ ಬಲು ತಾಪ!

ನರಿ: ಅಷ್ಟೇ ತಾನೆ, ಬಿಡು ಭೂಪ!
ಎಲೋ ಬೆಪ್ಪೇ, ಮೊಲ,
ಸಣ್ಣ ಮರಿಗ್ಯಾಕೋ ಛಲ!
ಒಂದೆರಡು ಮರಿ ಕೊಡು;
ಹುಟ್ಟವೆ ನಾಳೆ! ಬಿಡು!

ತೋಳ: (ಮರಿಯನ್ನು ಕಿತ್ಕೊಯ್ದು) ಬೇಷ್ ಬೇಷ್ ಒಪ್ಪಿದೆ ಮಾತ!
ನ್ಯಾಯಕ್ ನರಿಯೇ ದೇವತಾ!

ಕಿರುಬ: ಒಳ್ಳೆಯ ಹಂಚಿಕೆ! ತೋಳನ ರಾಜಿ!
ಕಿರುಬಗೆ ಏನಿದೆ? ಫಾಯಿದೆ? ಪೂಜಿ!

ತೋಳ: ರೋಮನ್ ಕಿರುಬ ನೀನು!
ಬುದ್ಧಿಯೆ ಬೇಡವೇನು?
ತಾಳು ತಾಳು ನೋಡು!
ಸುತ್ತಲು ಚೆಲ್ಲುವೆ ಬಾಡು!
ಬೇಸರ ಬೇಡ—ಕವಾತು ಮಾಡು!
ಗಂಟಲ ದಾಂಥಲೆ ಹೂಡೇ ಹೂಡು!

ತೋಳ+ಕಿರುಬ: ಲೆಫ್ಟು ರೈಟು ಲೆಫ್ಟು ರೈಟು.

ಕೋಳಿ: ಕೊ ಕೊ ಕೋ ಕೊ ಕ್ಕೊ ಕ್ಕೋ-ಕೊ ಕ್ಕೊ ಕೋ
ತೋಳನ ಕಣ್ಣಿಗೆ ಕೋಲಿಕ್ಕೋ!
ಬಾಯಿಗೆ ತುಂಬ ಮಣ್ಣಿಕ್ಕೋ!

ತೋಳ: ಜಂಬದ ಪೋಲಿ ಕೋಳಿ!
ಗೂಡಿಗೆ ಮಾಡುವೆ ದಾಳಿ!

ಕೋಳಿ: ಬನ್ನಿ—ಬನ್ನಿ—ಬನ್ನಿ!
ಸಹಾಯ ನೆಚ್ಚಿ ತನ್ನಿ!
ತೋಳಕೆ ಕೊಡೆನಾ ಹಾದಿ!
ಶರೀರ ನೆತ್ತರ ಬೀದಿ!

ನರಿ-ನಾಯಿ: ಕೋಳಿ, ತಳ್ಳಿಬಿಡು—
ಹಿಡಿದ ಮರಿಯನು ಕೊಡು!

ತೋಳ: ನರಿ-ನಾಯಿಗಳ ಕೇಳಿ
ಬಿಟ್ಟೇನು—ಧಾಳಿ!

ಕರಡಿ: ಇದೇ ಸಮಯ . . . . ಇದೇ ಸಮಯ;
ಬೇಡ ಈಗ . . . ನಯ ಭಯ.
ಮುಂದಿನ ಕೋಳಿ ನಿಂಗೆ?
ಹಿಂದಿನ ಅಂಶ ನಂಗೆ.
ಕಾದಾಟ ಬೇಡ ನಮಗೆ;
ಸ್ನೇಹವೇ ಇರಲಿ-ಬಿಮ್ಮಗೆ.

ತೋಳ: ತೋಳ ಕರಡೀಗೆ ಪ್ಯಾಕ್ಟು;
ನೆಯಿಬರ್ಲಿ ಗುಡ್ ಆಕ್ಟು.

ನಾಯಿ: ರಷ್ಯನ ಕರಡಿ ಮೋಸ!
ಕೊಟ್ಟಿತಲ್ಲಾ—ಕೆಲಸಾ!

ನರಿ: ಯೋಚನೆ ಬಿಟ್ಟು ಕಾದಿ.
ಸತ್ಯಕೆ ಸಾರುವ ಹಾದಿ.
ಬೆ ಬೇ ಬೇ—ಕುರಿಯೇ!
ಹಿಂದೀ ಮುಂದೆಯ ಮರಿಯೇ!
ಬಾರೈ ಕಾದಲು ಬಳಿಗೆ (ಎಂದು ಎಳೆದು ತಂದು)

ಅಬಲರ ಕಾಯ್ದ ಕೀರ್ತಿ!
ನಿನಗೂ ಬರಲಿ ಭರ್ತಿ!
ನನ್ನಯ ಮನವೇ!
ನಿನ್ನಯ ತನುವು!
ಬಂದೇ ಬಿಟ್ಟೆಯಲ್ಲ!
ಬೇಷ್ ಆಯಿತಲ್ಲ.

ನಾಯಿ: ನಾಯ್ಗಳ ಹಿಂಡನು ಕೂಡಿಯೇ ಹೊರಟೆ!
ತೋಳನ ಕೈಗೆ ಪರಟೆ!

ತೋಳ: ಕಿರುಬಣ್ಣ—ನೀನೂ ಯುದ್ಧವ ಸಾರು.

ಕಿರುಬ: ಗಳಿಗೆಯು ಬರಲಿ—ನಾನು ಜೋರು
ಕೂಗು, ಕಿರುಚು, ಹಾರು, ಚೀರು;
ಕಂಡದ್ದೆಲ್ಲಾ ಪರಚು!
ಬಿತ್ತು–ವೊಲ! ನಿನಗೆ ಗೆಲ!
ನಾಯಿ ಮಡಚಿದೆ ಬಾಲ,
ನಾನೂ ಸೇರುವೆ ಯುದ್ಧದ ಹೊಲ,
ಗೆಲದಲಿ ನನಗೂ ಪಾಲ!

ತೋಳ+ಕಿರುಬ: ಲೆಪ್ಟ ರೈಟು—ಲೆಪ್ಟು ರೈಟು!
ತೋಳ ಕಿರುಬನ ಮೈಟು!
ಇಂದಿನಿಂದ ಅದೇ ರೈಟು!
ಪ್ರಜಾಸತ್ತೆಗೆ ಗುಡ್‌ನೈಟು!
ಹಿಡಿ ಕುರಿ ಮರಿ,
ಕಚ್ಚು ನರಿ ಮರಿ.
ಹೊಡಿ, ಬಡಿ, ಇರಿ!
ಭೀತಿಯು ಹಾಕಲಿ—ಮರಿ!

ನರಿ: (ಒಂದು ಮೂಲೆಯಲ್ಲಿ ಒಂಟಿಯಾಗಿ ಊಳಿಡುತ್ತ)
ಉಕ್ಯೋ ಉಯ್ಯೋ, ಉಕ್ಯೊ ಉಯ್ಯೊ ಲೋಕ
ಕೇಳುತಲಿಹುದೇ ಶೋಕ!
ಸತ್ಯದ ಪಕ್ಷಕೆ ಬೆಂಬಲ ನೀಡಿ—
ತೋಳನ ನೀತಿಗೆ ಅನ್ನಿರಿ 'ಖೋಡಿ'—

ತೋಳ: ಅಳುತ್ತೈತೆ—ನರಿ!
ಅದಕೆ ಹೊಟ್ಟೆ ಉರಿ!
ಕೇಳಿರೆಲ್ಲ ಮೃಗ!
ದೂರ ಬೇಡಿ ಜಗ!
ಆಕ್ಸಿಸ್ ಪಕ್ಷ ರೈಟು—
ವಿಜಯ ಸಜ ಸೈಟು—
ಬೆಂಬಲ ಕೊಡಿ–ಅಂದೆ—
ಹಂಬಲ ಬಿಡೆ–ಮುಂದೆ.
(೧ನೇ ಅಂಕ ಮುಗಿಯಿತು.)

★

ಅಂಕ ೨.

ನರಿ: (ಇನ್ನು ಊಳಿಡುತ್ತಿದೆ.)
ಉಕ್ಯೋ ಉಯ್ಯೋ ಉಕ್ಯೊ ಉಯ್ಯೋ–ಲೋಕ!
ಬಡ ಜನಕಾಗಿದೆ–ಶೋಕ.
ಸತ್ಯದ ಪಕ್ಷಕೆ ಬೆಂಬಲ ನೀಡಿ,
ತೋಳಗು ಕಿರುಬಗು ತೊಡಿಸಿರಿ ಬೇಡಿ.

ದನ: ನಿನ್ನೀ ಕೂಗು ಇಂದಿನದು
ನನ್ನದು ಮಾತ್ರ–ಎಂದಿನದು!
ಚೀನಿ ದೊಡ್ಡಿಗೆ ಜಪಾನಿ ಚಿರತೆ,
ಹಿಂಸೆಯ ಕೊಡುತಿದೆ; ನಿತ್ಯವು ಚಿಂತೆ.

ನರಿ: ಅಯ್ಯೋ ಸಿಂಹಾ ಬಾರದೆ ದಯ!
(ದೂರದ ಸಿಂಹವು ಬರುವುದು)

ಸಿಂಹ: ನನ್ನದೇ ನನಗೆ, ಅದುವೇ ಸೊಯ!
ಆದರು ಲಿಪ್ಪಿನ ಸಿಂಪೆತಿಯೆಲ್ಲಾ
ನಿಮಗೇ ಮೀಸಲು; ಇನ್ನಾರಿಗಿಲ್ಲ.
ಕಳಚಿದ ಉಗುರಿನ ವಿಕ್ರಯ ಮಾಡಿ
ಕೊಡುವೆನು ಸಹಾಯ, ಹಗೆಗಳ ದೂಡಿ!

ಕಿರುಬ: ಸೊಕ್ಕಿದ ಸಿಮ್ಮನ ಕೇಳಿತು ನರಿ!
ರೊಕ್ಕದ ಆಸೆಯ ತೋರಿಸಿತು!

ತೋಳ: ಸಿಮ್ಮನ ಭೀತಿಯು ಅಷ್ಟೇನಿಲ್ಲ;
ಕರಡಿಯ ನಿದ್ರೆಯು ನಂಬುಗೆಯಲ್ಲ.
ಜಪಾನಿ ಚಿರತೆಯ ಕೆರಳಿಸಿ ಬೇಗ,
ಸ್ವಾಯತ್ತವಾಗಿಪ ಲೋಕದ ಭೋಗ
(ಅದನ್ನು ಕರೆಸುವುದು

ತೋಳ, ಕಿರುಬ, ಚಿರತೆ ಸೇರಿ:
ಕೇಳಿ ಕೇಳಿ ಜಗ!
ಹೊಂದ ಬೇಡಿ ದಗ!
ಚಿರತೆ, ಕಿರುಬ, ತೋಳ,
ಇವಕ್ಕೆ ನಂಟು ಬಹಳ,
ಮೂವರ ಮಾತನು ಕೇಳಿ
ಶರಣು ಬನ್ನಿ–ಬಾಳಿ.
(ಮೂರೂ ಕುಣಿಯುವುವು)

ಚಿರತೆ: ಹೊರಟೆ ನಾನು, ಹೊಸತೇ ಯಾತ್ರೆ.
ದನಗಳ ಹಿಂಡು ನಿತ್ಯದ ಯಾತ್ರೆ.
ತಬ್ಬಲಿ ನಾಯಿ ನರಿಗಳ ಮರಿಯ,
ಸವಿಯಲು ಹೊರಟೆ, ನೋಡಾ ಪರಿಯು!

ಸಿಮ್ಮ: ಏನಿದೇನು ಚಿರತೆರಾಯ,
ಊರ್ಮನೆ ಬಿಟ್ಟು ಹೊರಟೆಹೆಯ!

ಚಿರತೆ: ಛಿ! ಛಿ! ಬಂದೆ ನಿನ್ನಲ್ಲೆ!
ಮನ್ನಣೆ ಸಲಿಸಲು—ಅಹುದಲ್ಲೇ!!
(ಹೀಗೆಂದು ಸಿಂಹದ ಬಳಿಗೆ ಹೋಗಿ ಮಲಗಿದ ಸಿಂ
ಬಾಲದ ಗೊಂಡೆಯನ್ನು ಕಚ್ಚುವುದು.)

ಸಿಂಹ: ಏನೇ ಖೋಡಿ, ಸಂಧಾನ! ನೋಡಿ!
ಕಚ್ಚಿ ತಿಂದೆಯಾ ಬಾಲದ ಗೊಂಡಿ?

(ಅದನ್ನು ಕಂಡ ಹಸುವು)

ದನ: ಅಂಬಾ, ಅಂಬಾ, ಅಂಬಾ . . . .!
ತಿಳಿಯಿತೇನು . . . . ಸಿಂಬಾ?
ನಮ್ಮನೆ ನುಗ್ಗಿದ ಹಾಳು ಚಿರತೆ!
ನಂಬಿದೆ; ಬಂತು, ನಿನಗೂ ಕೊರತೆ!

ತೋಳ, ಕಿರುಬ: ಲೆಪ್ಟು ರೈಟು-ಲೆಪ್ಟು ರೈಟು!
ಚಿರತೆ ಸಲಿಸಿದೆ ರೈಟು!
ಲೆಪ್ಟು ರೈಟು ಲೆಪ್ಟು ರೈಟು!
ವಿಕ್ಟರಿ ಈಸ್ ಇನ್ ಸೈಟು!
ಕರಡಿಯ ಒದೆಯುತೆ ಕುಣಿಯುವ ಗೈಟು.
ಇದೇ ಕೀರ್ತಿಯ ಹೈ-ಲೈಟು!

(ಹೀಗೆಂದು ಮಲಗಿದ ಕರಡಿಯನ್ನು ತುಳಿಯುವುವು.)

ನರಿ: ಉಕ್ಯೊ ಉಯ್ಯೊ ಉಕ್ಯೊ ಉಯ್ಯೋ
ಉಕ್ಯೊ ಉಯ್ಯೊ--ಲೋಕ
ತಿಳಿಯದೆ ಈಗ--ತಿಳಿಯದೆ ಬೇಗ
ಶಾಂತಿಗೆ ತಟ್ಟಿಹ ಶೋಕ!

ಸಿಂಹ: ಬಂದೆ ನರಿಯೆ, ಸಹಾಯ ತಂದೆ,
ಬಂದೆ ಹಸುವೆ ಸಂಗಡ ಬಂದೆ!
ಕಾದುವ ಸೇರಿ ಯುನೈಟೆಡ್ ನೇಶನ್ಸ್.
ಬೇಕು, ಭಾರಿ ಪೇಶನ್ಸು!

ನರಿ: ಕಾಲಕ್ಕೆ ತಕ್ಕ ಕೋಲ ಎಂದು!
ಹಿರಿಯರು ಮಾಡಿದ ಗಾದೆ!
ಕರಡಿ ಕಾಲಿಗೆ ವಂದಿಸಿ ನಿಂದು
ನಿವಾರಿಪೆ, ಬಂದಿಹ ಬಾಧೆ!
ಕುಶಲವೆ ಕರಡಿ–ತುಳಿಯಿತೆ ತೋಳ!
ಲಾಂಛನ ನೀಗಿಸಿ ಮೆರೆಸುವ ಬಾಳ!
ಬಿದ್ದ ಜಗವೇ ಕೇಳಿ,
ಕೇಳಿ ಧೈರ್ಯ ತಾಳಿ.
ಐದೂ ಬೆರಳಿಹ ಕೈ;
ನೋಡಿ–ನಂಬಿರಿ ಜೈ!
ನರಿ, ನಾಯಿ, ಸಿಂಬಾ
ಕರಡಿ, ದನ–ಎಂಬ!
ಐವರು ಗಂಡರ ಮುಂದೆ
ಆಕ್ಸಿಸ್ ಪಕ್ಷ—ಹಿಂದೆ.

ದೂರದಿಂದ ಬಡ ಮೃಗಗಳು:
ಬಲಿಷ್ಟರವರ ಮುಂದಕೆ ತಂಟೆ
ನಡೆಸುತೆ, ಬದುಕಿ ಬಾಳಿದರುಂಟೆ?

ತೋಳ: ಯಾರ್ಯಾರಿಲ್ಲವೊ ನಮ್ಮಯ ಪಕ್ಷ!
ಅವರೇ ಹಗೆಗಳು ಎಂಬುದು ಲಕ್ಷ!!

ಸಿಮ್ಮ: ನೋಡೋ, ಕೇಳೋ, ನರಿರಾಯ,
ಜಗಕ್ಕೆ ಹೋಗದು ತೋಳನ ಭಯ.
ಅದರಿಂ ಕೆರಳದು ಬಡವರ ಧೈರ್ಯ,
ಕೆರಳದೆ ಆಗದು ನಮ್ಮೀ ಕಾರ್ಯ!

ನರಿ: ನಿಜ ನಿಜ—ಸಿಂಬ, ಜಗತ್ತು ಹುಂಬ!
ಬಾಯಿಯ ಜಂಬ, ವಿಜಯಕೆ ಕಂಬ!
ದೋಣಿಯನೇರಿ — ನಾನೂ ನೀನೂ!
ಬೀರುವ ಒಂದು ಶುಭಾಶಯವನ್ನು!

ನರಿ+ಸಿಮ್ಮ: ಸಲಿಸುತಲಿರುವೆವು ನವೀನ ಚಾರ್ಟರ್
ಕೆಳಗಿದೆ ಸಾಕ್ಷಿಗೆ ಅಟ್ಲಾಂಟಿಕ್ ವಾಟರ್
ಕೇಳಿದೆ ನಮಗೆ ಅಬಲರ ಕರೆ,
ಅದಕೇ ಸಂಗರ ಅದುವೇ ಖರೆ.
ಲೋಕದ ಭಯ, ಹಸಿವನು ನೀಗಿಸಿ,
ಸತ್ಯವನುಳಿಸಲು-ಜಯವನು ಬರಿಸಿ!

ಕುರಿ: ದೇವರೇ ನಿಮಗೆ ಬುದ್ಧಿ
ಕೊಟ್ಟನು; ಒಳ್ಳೆ ಸುದ್ದಿ!
ನನಗೂ ಲಾಗುವೆ – ನಿಮ್ಮೀ ಚಾರ್ಟರ್?
ಅದುವೇ ಧೈರ್ಯ, ಶೆಲ್ಲು, ಮಾರ್ಟರ!

ನರಿ: ಮುಂಕೇ ಮರಿ, ಕುರಿ ಮರಿ!
ಪಾಲಕ ನಾನು, ಯಾಕೆ ಚಾರ್ಟರ್?
ಬಿಳಿ ಜಗಕಷ್ಟೆ ಅದುವೇ ಲಾಗು
ನನಗೂ ನಿನಗೂ ಸ್ನೇಹ........ಹೋಗು, ಹೋಗು.

ನರಿ + ಸಿಮ್ಮ + ದನ + ಕುರಿ + ನಾಯಿ: ವಿ ಫಾರ್ ವಿಕ್ಟರೀ
ಅದುವೆ ನಮಗೆ ನಿಜಗುರಿ!

(ತಿರುತಿರುಗಿ ಪಲ್ಲವಿಯಾಗಿ ಹೇಳುತ್ತ ನಡೆಯುವರು.)

ದೂರದಿಂದ: ಲೆಪ್ಟ್ ರೈಟು ಲೆಪ್ಟ್ ರೈಟು!
ಆಕ್ಸಿಸ್ ಡೈನಮೈಟು!
ಶರಣು ಬನ್ನಿ ಶರಣು ಬನ್ನಿ!
ಬದುಕಿರಿ—ಬೇಡವು ಸ್ಪೈಟು!

ಐವರು: ವಿ—ಫಾರ್ ವಿಕ್ಟರಿ!
ಅದುವೇ ನಮ್ಮ ನಿಜಗುರಿ! (ಕವಾಯತು ನಡೆಸುತ್ತ)

ಕುರಿ: (ಅಳುತ್ತ ಬೆಂಗಡೆಯಲ್ಲಿ)

ವಿ – ಫಾರು ವಿಕ್ಟರೀ
ಅದುವೇ ನಮ್ಮ ನಿಜಗುರಿ.
ತೋಳಕ್ಕಿಂತ ನರಿ ವಾಸಿ.
ಅಷ್ಟೇ ತೀರ್ಪಿನ ಸಮ್ಮರಿ . . .

★

ಅಂಕ ೩

ನಾಯಿ: ಗೌ ಗೌ ಗೌ--ಮರಿಗಳೆ ಬನ್ನಿ.
ಸ್ವಾತಂತ್ರ್ಯ ಸಮರಕೆ ಧೈರ್ಯವ ತನ್ನಿ.

ಮುಂದಿನ ಬದಲಾವಣೆ!!

ಸೂಪರ್ : : : ಬೆಂಗಳೂರು

★

ಪ್ರಗತಿಯುವರ
ಪುರಾಣಪ್ರಸಿದ್ಧವಾದ

ಶ್ರೀವಳ್ಳಿ

(ತಮಿಳು)

ಭೂಮಿಕೆ:

T R ಮಹಾಲಿಂಗಂ
T. R. ರಾಮಚಂದ್ರನ್
ಕುಮಾರಿ ರುಕ್ಮಿಣಿ
ಬೇಬಿ ಕಮಲಾ
ಮಹದೇವನ್
N. S. ಕೃಷ್ಣನ್
ಟಿ. ಎ. ಮಧುರಂ.

★



ಡೈರೆಕ್ಷನ್: A. V. ಮೇಯಪ್ಪನ್ ಮತ್ತು A. T. ಕೃಷ್ಣಸ್ವಾಮಿ.



ಪ್ರದರ್ಶನಕ್ಕೆ ಸಿದ್ಧವಾಗಿದೆ .

ಜಯಂತ ಫಿಲ್ಮ್ಸನವರ

ಇನ್ಸಾನ್ (ಹಿಂದೀ)

ತಾರಾಗಣ:

- ಕಿಶೋರ ಸಾಹು
- ಶೋಭನಾಸಮರ್ಥ
- ಪಹಾರಿ ಸನ್ಯಾಲ್
- ಕೆ. ಸಿ. ಡೆ.
- ಮಾಯಾ ಬ್ಯಾನರ್ಜಿ
- ಡೇವಿಡ್

ಮತ್ತು ಇತರರು.

PARTICULARS:

Tel: "TALLAMFILM"

TALLAM PICTURE CIRCUIT

CHICKPET, BANGALORE CITY.

ಸತ್ಯದ ಪಂಗಡ ಬೆಳೆಯುತ್ತಿಹುದು!
ಆಸೆಯ ಬಾಂದಳ ಬಿತ್ತರಿಸಿಹುದು.

ನರಿ: ಗೆಳೆಯರೆ ಬನ್ನಿರಿ, ಹಲ್ಗಳ ಮಸೆಯಿರಿ.
ಆಕ್ಸಿಸ್ ಮೇಲಕೆ ತಕ್ಷೀರ ಬೆಳೆಸಿರಿ.
ಅಂಕಲ್ ಸಿಂಬಗೆ ತ್ರಾಣವು ತುಂಬ,
ಅಲಾಯಿ ಪಕ್ಷಕೆ ಧೈರ್ಯ ಕಂಬ!

ದನ: ಅಂಬಾ — ಅಂಬಾ — ಅಂಬಾ.
ಸಹಾಯ ತಾರೋ ಸಿಂಬಾ!
ಚಿರತೆಯನಿದಿರಿಸಿ ಮುರಿದಿವೆ ಕೊಂಬು
ಕೊಟ್ಟರೆ ಉಂಟು ನೀನು-ಬಾಂಬು.

ಕರಡಿ: ತೋಳನ ಎದುರಿಗೆ ಬಿದ್ದಿಹ ನಾನೇ
ಹೆಚ್ಚಿನ ಏಟಿಗೆ ಬಲಿಯಾಗಿಹೆನೇ
ಸಹಾಯ ಬೇಕು ತುಂಬ, ಶಾನೆ!
ತೋಳದ ಬೆನ್ನಿಗೆ ಎರಗಲಿ ಸೇನೆ!

ಎಲ್ಲರೂ: ವೀ—ಫಾರು ವಿಕ್ಟರಿ!
ಅದೇ ನಮ್ಮ ನಿಜಗುರಿ!

ನರಿ: ಎಲ್ಲಕು ಬೇಕು ಕ್ರಮ ಸರಿ.
ಯೋಚನೆ ಬಿಡಿ ತರಾತುರಿ,
ಚಾಂಕಿ ಹಸು ಕೇಳ್ ಪರಿ!
ತೋಳ, ಕಿರುಬ ಮೊದಲ್ಗುರಿ!
ಮತ್ತೇನಾಗ ಚಿರತೆ ಮರಿ.
ಬಿತ್ತೆಂದ ತಿಳಿ, ಖರೋ ಖರಿ.

ಕರಡಿ: ಕೆಂಚು ಕರಡಿಯ ಅಂಗಳ ನುಗ್ಗಿ
ತೋಳವು ಹಾರುತಿರೆ!
ನೀವೇನಲ್ಲಿ ದೂರದಿ ಬಗ್ಗಿ
ಸಹಾಯವಿಲ್ಲ— ಮಾತು ಬರೆ!

ನರಿ: ಅಯ್ಯೋ ಕರಡಿ, ಯೋಚನೆ ಬೇಡ!
ತಯಾರಿ ನಡೆದಿದೆ ತುಂಬ!
ಮೊದಲಿಗೆ ತರಿಯುತೆ ಕಿರುಬನ ಓಡ
ಕೂಡುತ ಬರುವೆನು — ಸಿಂಬ.

ಎಲ್ಲರೂ: ವೀ — ಫಾರ್ — ವಿಕ್ಟರಿ!
ಅದುವೇ ನಮ್ಮ ನಿಜಗುರಿ.

ತೋಳ: ಕರಡಿಯನ್ನು ಸಾಯಿಸಿ ಬಿಟ್ಟು
ದೂರ ನಗುವ ಹೊಸ ಪರಿ!

ನರಿ: ಬೇದಗೊಳಲಾರೆವಯ್ಯ,
ತೋಳ ತಂತ್ರ ಸಾಗದು!
ಕಿರುಬನನ್ನು ಕುಟ್ಟಿಕೊಲ್ಲೆ!
ಎದ್ದೆವನ್ಯವಾಗದು!
ವಿ-ಫಾರ್-ವಿಕ್ಟರಿ- (ಎಂದು ಕಿರುಬನನ್ನು ಸುತ್ತು
ನರ್ತನ ವೇಗವಾಡುವರು.)

ಕಿರುಬ: ಅಯ್ಯೋ ಸಾಕು—ಅಯ್ಯೋ ಸಾಕು,
ಕೊಲ್ಲಬೇಡಿ ಪಶುಗಳೆ!
ನೋಟಕೇನೊ ತೋಳನಾದೆ,
ಹೃದಯ ಘೇಟು ನರಿಯೊಳೆ!

ಎಲ್ಲರೂ: ವಿ-ಫಾರ್-ವಿಕ್ಟರಿ. (ಕಿರುಬ ಉರುಳುವುದು.)

ಕಿರುಬ: ಬಿದ್ದೆ ಬಿದ್ದೆ-ಶರಣ್ರ್ರೀ
ಗೆದ್ದವರ ಕಡೆ ನಾನ್‌ರೀ!
ತೋಳಕ್ಕೆದುರು ಕಾದಿರಿ,
ನಾನೂ ಬರುವೆ, ನಿಂದಿರಿ.

ನಾಯಿ: ಗೌ-ಗೌ-ಗೌ-ಗೆಲ್ದೆವು ನಾವು!
ಕಿರುಬನ ಸೋಲಲಿ ಮರೆತೆವು ನೋವು!
ಪುನಶ್ಚ ದೊರೆತರೆ ಮನೆಯೂ, ತಾವೂ
ಆ ದಿನ ಸಮರಕೆ ಕೊನೆ ನಿಶ್ಚಯವು!

ನರಿ: ಕಂಡೆಯೋ-ಏನೋ ಕರಡಿರಾಯ?
ಕಿರುಬನ ಮನೆಯ ಬಂಡಾಯ,
ದಣಿವನು ಆರಿಸಿ ಒಂದೇ ಗಳಿಗೆ,
ತೋಳಗೆ ಅರೆವೆವು ಮದ್ದಿನ ಗುಳಿಗೆ!

ಕರಡಿ: ಕಾಣುವುದೇನು, ನರಿರಾಯ!
ತೋಳನ ಜಗಳದಿ ವೈಯೇ ಗಾಯ!
ವೈರಿಯ ಜೆಂಗಡೆ ಕಚ್ಚದೆ ಹೋಗಿ.
ಮರೆಯೆನು ಎಂದಿಗು ಸಿಟ್ಟಿನ ಯೋಗಿ!

ತೋಳ: (ತುಸು ಆಯಾಸದಿಂದ)
ಲೆಪ್ಟ್ ರೈಟು, ಲೆಪ್ಟ್ ರೈಟು.
ಸಹಾಯರಾರು ಇನ್ನುಂಟು?
ಕಿರುಬನ ಮೇಳ
ತಪ್ಪಿತು ಬ್ಲೈಟು!
ಆದರು ಕಾದುವೆ— ಥಾನ್ಸು ಬ್ರೈಟು!
ಲೋ ಲೋ ಲೋ ಲೋ ಚಿರತೆ!
ಕರೆಯುವದಾದರೂ ಕೇಳೀತೆ!

ಚಿರತೆ: ಕೇಳದೆ ಎಂದು ಇದ್ದೀತೇ?
ವಿರಾಮವೆನಗೆ ಇದ್ದೀತೇ!
ವೈರಿಯ ಮರಿಗಳ ಹಿಡಿಯುತ್ತೆ
ಕಾಲವ ಕಳೆಯುವೆ, ನೋಡ್ ಇತ್ತೇ!

ತೋಳ: ಆಕ್ಸಿಸ್ ಪಕ್ಷದ ಕಿರುಬ, ಕತ್ತೆ,
ಆಟಕೆ ಕೊಟ್ಟಿತು-ಚಕ್ಕರ ಲತ್ತೆ.
ಕರಡಿಯ ಜತೆಯಲಿ ಜಗಳ ಕಿತ್ತೆ,
ಮನದಲಿ ತಪ್ಪೆಂದ್ ಕಾಣುತ್ತೆ!
ಮೂಡಣ ಚಿರತೇ-ನೀನು ಬಾರೆ!
ರೈಸಿಂಗ್ ಸನ್ನು, ಮೂನು, ತಾರೆ!

ಕರಡಿಯ ಸೊಂಟಕೆ ಬಾಯಿ ಹಾಕು!
ಗೆಲುವಿಗೆ-ನಮಗೆ ಹೆಚ್ಚೇನು ಬೇಕು!

ಚಿರತೆ: ಛೀ! ಛೀ! ಹಾಗುಂಟೆ!
ನನ್ನಯ ಭದ್ರ ನನಗುಂಟೆ!
ಕರಡಿಗು ನನಗು ಬಲುನಂಟೆ.
ಬೇಡ–ಎದುರಿಗೆ ಆ ತಂಟೆ!

ತೋಳ: ಆದರೇನು ಆದರೇನು, ಖಾಜಿ ನ್ಯಾಯ ಹೆಚ್ಚು!
ಆದರೇನು ಹೋದರೇನು — ನಾಜಿವೈರ ಹೆಚ್ಚು!
ಕಾಳಗಕ್ಕೆ ಇಳಿದ ಮೇಲೆ-ತೋರ್ಪೆ ವೈರ ಕೆಚ್ಚು.
ತೋರಲಾರೆ-ಮೋರೆಯಲ್ಲಿ-ಭಯಭೀತಿ ಪೆಚ್ಚು.

ಎಲ್ಯಾಸ್: ಡಿ–ಡೇ ಬಂತು, ಡಿಮಿ ಡಿಮೀ!
ಮಾತಿನ ಮುಗಿತ, ಢಮಾಢಮಿ!
ಸೋತಿದೆ ತೋಳ, ಫ್ರಮಾಫ್ರಮಿ!
ಲೋಕದ ಒಡೆತನ ಬರಿ ಭ್ರಮಿ!

ಎಲ್ಲರೂ: ವೀ—ಫಾರ್—ವಿಕ್ಟರೀ
ದೊರೆವತನಕ ಕಾದಿರಿ ॥

(ತುಂಬ ಹೋರಾಟವಾಗಿ— ತೋಳ ದಣಿದು ಉಸಿರಾಡಿಸಿಕೊಳ್ಳುತ್ತಿರುವಾಗ)

ಕರಡಿ: ಬಳಿಗೆ ಬಾರೋ, ನರಿರಾಯ!
ಕುಸಿಯುತಲಿಹುದು ತೋಳನ ಭಯ.
ತೆಗೆಯಲು ಬೇಕು ನಾಳಿನ ಪಾಯ!
ಬರಲೇ ಕೂಡದು ಮುಂದೆ ಅಪಾಯ!

ನರಿ: ಸತ್ಯದ ಮಾತು, ಸಿಂಹನ ಕರೆವೆ!

ಕರಡಿ: ಕರೆಯಲು ಇಲ್ಲವು ಅಡ್ಡಿ–ಪರವೆ

ಸಿಂಬ: ಬಂದೆನು ಕರಡಿ ಕೆಂಚನ ಕರೆಗೆ.
ಹೇಳಲು ಏನಿದೆ ಮುಂದಿನ ಒಸಗೆ?

ನರಿ: ಬೇಡವೆ ಸಿಂಬಾ ನಮ್ಮಲಿ ಬಿಸುಗೆ!

ಕರಡಿ: ಬರಲೇ ಕೂಡದು ಚಿರಿ ಚಿರಿ,- ಕಡೆಗೆ!
ಕಾದಿದರಾರು–ಈ ಸಮರದಲಿ?

ನರಿ: ನೀನು, ನಾನು, ಸಿಂಬನಲಾ

ಕರಡಿ: ಮೂವರೇ ಮುಖ್ಯಂ ಮರೆತಿರೆಲಾ!

ನರಿ+ಸಿಮ್ಮ: ಮೂವರೇ ಮುಖ್ಯ-ಮರೆಯುವಲಾ!

ಕರಡಿ: ಹಾಡುವ ಜತೆಗೆ ಹೊಸಗಾನ
ಇತರರು ಕೇಳಲು ಬರಿ ಮೌನ!
ಬಿಗ್ಗ್ ತ್ರೀ ಬಿಗ್ಗ್ ತ್ರೀ—ಎಂಬ ಮಾತು ಬರೋಬರಿ!
ಬಿಗ್ಗ್ ತ್ರೀ ಹಿಂದೆ ಬನ್ನಿ—ಬಿಟ್ಟು ಇತರ ಉಸಾಬರೀ!

(ಹಾಡುತ್ತ ಮುಂದರಿಯುವರು)

ನರಿ: ಬರದ ಜನಕೆ ಇಲ್ಲ ಮಾನ, ಅದನು ಮಾತ್ರ ನಂಬಿರಿ!

(ಹೋಗುವರು)

ನಾಯಿ! ಶಾಂತಿಯ ಸಂತೆ ಕೂಡುವುದಂತೆ!
ಕರೆಯುವರೆಮ್ಮನು ಅಂತೆ!

ಕೋಳಿ: ನನ್ನಯ ಮರಿಗಳ ಕರಡಿಗೆ ಕೊಟ್ಟು
ತೋಳನ ಮರಿ ಎನಗಂತೆ.

ನಾಯಿ: ಅದೇನು ಹೆಚ್ಚು! ನನ್ನನು ಮರೆತೇ
ಹೋಗುವರದಕೆ,–ಅಂತೆ,
ಜಗಕ್ಕೆ ಹಿರಿಯರು ಐವರು ಎಂದು!
ಕೂಗಿದ ಸುದ್ದಿಯೇ ಕಂತೆ!
ಸಂತೆಯ ಶಾಸ್ತ್ರ ವಿಸ್ತಾರ ಹೇಳಿ
ಕಾಯ್ವರು ಬಿಗ್ ತ್ರೀ ಅಂತೆ!

ಕುರಿ: ಕರೆಯದು ಬಂದಿದೆ ನನಗೂ ಕೇಳು
ನಾನೂ ಹೋಗುವೆ ಹರ್ಷ ತಾಳು!
ಕೊರಳಿನ ಸರಪಣಿ ತಪ್ಪಿದರಾಯ್ತು!
ಕಾಯ್ದಿಹ ವಿಜಯವೇ ಬಂತು!

ದನ: ಚಿರತೆಯ ಕಾಟ ತಪ್ಪೀ ಮುಂದಕೆ!
ಬಾಳುವೆ ನಡೆಸುವ ಬಯಕೆ!
ಅದುವೆ ನನಗೆ ವಿಕ್ಟರಿ ಮುಂದಕೆ!
ಸಂಶಯ ಹರಿಸೆ ಚಂದಕೆ!

ಅಶರೀರವಾಣಿ: ಅಶರೀರವಾಣಿಯು ಆಗುತಲಿಹುದು
ಅದುವೇ ಲಾಲಿಸಿ ಕೇಳಿ.
ಶಾಂತಿ ಪ್ರಸವದ ವೇದನೆ ಇಹುದು
ಅದರಿಂ ನಿರೀಕ್ಷೆ ತಾಳಿ.

ನರಿ + ಸಿಮ್ಮ ಕರಡಿ | ಬಿಗ್ ತ್ರೀ—ಬಿಗ್ ತ್ರೀ! ನಮ್ಮ ಮಾ
ಕೇಳಿರಿ! ಬಿಗ್ಗ್ ತ್ರೀ — ಬಿಗ್ಗ್ ತ್ರೀ
ಮುಂದೆ ಛಂದ ಬಾಳಿರಿ!

ಸಿಂಹ: ವಿಧಿಸುವೆವಯ್ಯ ಶಾಂತಿಯ ನಾವು
ಜಗಳಕೆ ಕೊನೆತರ
ಮೀರುವ ಜನಗಳ— ದಂಡಿಸಲಿಹೆವು
ಬಳಗಕೆ ಸುಖ ತರ

ನರಿ : ಕುರಿಗಳ ಮನೆಯ ಒಳತೋಟಿಯನು
ತಿಳಿಸಲು ತಳವ
ಒಡೆಯನ ಹಿಂದಕೆ ನಡೆದರೆ ಒಯಿನು
ಅರಿಯಲು ತಡವಿಲ

ಕರಡಿ: ಚಿರತೆಯ ಸಾವದು ಹಸುವಿಗೆ ಕ್ಷೇಮವು!
ಅದೊಂದೆ ಕೊನೆಯ
ಬಲಿಷ್ಠ ಮೂವರ ಒಲವಲಿ ನಲಿವುದು!
ಚೆಲುವಿಗೆ ನಿಜವ

(ಮೂವರು [ನರಿ, ಸಿಂಹ; ಕರಡಿ] ಹಾಡಿ ನಲಿ
ವಾಗ—ಉಳಿದ ಪ್ರಾಣಿಗಳು ಇಣಿಕಿ ನೋಡ್ವುವು)

"ಬೈರಾಮುಖಾನ್" ಚಿತ್ರ (ಸ್ಟೆಂಡಾರ್ಡ್ ಪಿಕ್ಚರ್ಸ್)ದಿಂದ.



ಲಲಿತಾ ಪವಾರ್
ಸ್ಟೆಂಡಾರ್ಡ್ ಪಿಕ್ಚರ್ಸಿನವರ ಬೈರಾಮ್ ಖಾನ್
ಚಿತ್ರದಲ್ಲಿ



"ಬೈರಾಮ್ ಖಾನ್" ಚಿತ್ರದಲ್ಲಿ ಗಜಾನನ ಜಾಗೀರದಾರ್
(ದಿಗ್ದರ್ಶಕ ಹಾಗೂ ನಟನಾಗಿ)



ಸ್ಟೆಂಡಾರ್ಡ್ ಪಿಕ್ಚರ್ಸಿನವರ "ಬೈರಾಮ್ ಖಾನ್" ಚಿತ್ರದಿಂದ ಒಂದು ದೃಶ್ಯ



ಸ್ಟೆಂಡಾರ್ಡ್ ಪಿಕ್ಚರ್ಸಿನವರ
"ಬೈರಾಮ್ ಖಾನ್" ಚಿತ್ರದಲ್ಲಿ ಡೇವಿಡ್

"ಗದಾಯುದ್ಧ"ದಲ್ಲಿ ವಕ್ರೋಕ್ತಿ

ಲೇಖಕರು: ಶ್ರೀ ಅಮ್ಮೆಂಬಳ ಶಂಕರನಾರಾಯಣ, ವಿದ್ವಾನ್.

ವಕ್ರೋಕ್ತಿಯೆಂದರೆ ಕೊಂಕುನುಡಿಯೆಂದರ್ಥ. ಇಲ್ಲಿ ವಕ್ರೋಕ್ತಿಯನ್ನು ಅಲಂಕಾರಿಕರು ಹೇಳುವ ಸಂಕುಚಿತವಾದ ಅರ್ಥ ಉಪಯೋಗಿಸಿಕೊಂಡಿಲ್ಲ. 'ವಕ್ರೋಕ್ತಿ ಜೀವಿತ'ವನ್ನು ಬರೆದ ಅಲಂಕಾರಿಕನು ಸ್ವಭಾವೋಕ್ತಿಯೊಂದನ್ನು ಬಿಟ್ಟು ಎಲ್ಲಾ ಅಲಂಕಾರಗಳ ವಕ್ರೋಕ್ತಿಯೊಂದರಲ್ಲೇ ಸಮಾವೇಶಗೊಳಿಸಿದಷ್ಟು ವಿಶಾಲವಾದ ಅರ್ಥದಲ್ಲಿಯೂ ಉಪಯೋಗಿಸಿಕೊಂಡಿಲ್ಲ. ಕವಿಯು ತನ್ನ ಪ್ರತಿಭಾ ದಿಂದ ಸಾಮಾನ್ಯ ವಿಚಾರವನ್ನು ಅಸಾಧಾರಣ ರೀತಿಯಲ್ಲಿ ಬಳಸಿ, ಕೊಂಕಾಗಿ ಅಳವಡಿಸಿಕೊಂಡು, ಜಾಣ್ಮೆಯಿಂದ ಮಾತಾಡಿದರೆ, ಆ ಸ ರವೊದ ಜಾಣ್ನುಡಿಗೇ ವಕ್ರೋಕ್ತಿಯೆಂಬ ಸಂಕೇತವನ್ನಿಟ್ಟುಕೊಂಡಿರುವೆನು. ಅದು ಮಾತ್ರ ಸಹೃದಯ ಹೃದಯಾಹ್ಲಾದಕವಾಗಿಯ ಮನಸ್ಸಿಗೆ ಹೃದ್ಯವಾಗಿ ರಮ್ಯವಾಗಿಯೂ ಇರತಕ್ಕದ್ದು.

ಸಂಸ್ಕೃತ ಸಾಹಿತ್ಯದಲ್ಲಿ 'ನೀಲಕಂಠ ವಿಜಯ'ವನ್ನು ಬರೆದ ನೀಲಕಂಠ ದೀಕ್ಷಿತನು ವಕ್ರೋಕ್ತಿ ಲೇಖನದಲ್ಲಿ ಪ್ರಸಿದ್ಧನು. ಆದುದರಿಂದಲೇ,—

'ನೀಲಕಂಠಸ್ಯ ವಕ್ರೋಕ್ತಿಃ ಸಾ ಮುಗ್ಧೇಂದು ಕಲಾ ನಿಭಾ'

ಎಂದರೆ ನೀಲಕಂಠನ ವಕ್ರೋಕ್ತಿಯು ಬಾಲಚಂದ್ರ ಕಲೆ ಯಂತೆ ಸುಂದರವಾದುದು,–ಎಂದು ಪ್ರಸಿದ್ಧಿಯುಂಟಾಯಿತು.

ಹಾಗೆಯೇ ಕನ್ನಡ ಸಾಹಿತ್ಯದಲ್ಲಿ 'ಸಾಹಸ ಭೀಮ ವಿಜಯ'ವನ್ನು ಬರೆದ ಕವಿಚಕ್ರವರ್ತಿ ರನ್ನನು ವಕ್ರೋಕ್ತಿ ಯನ್ನು ಬಳಸುವುದರಲ್ಲಿ ನೀಲಕಂಠ ಕವಿಯಂತೆ ಜಾಣನು ಎಂದು ನಾವು ವಿಮರ್ಶಾದೃಷ್ಟಿಯಿಂದ ಪರೀಕ್ಷಿಸುವಾಗ ತಿಳಿಯಬಹುದು. ಅವನ ವಕ್ರೋಕ್ತಿಯೂ ಕೂಡ ಮುಗ್ಧ ಚಂದ್ರನ ಕಲೆಯಂತೆ ಆಹ್ಲಾದಕವಾಗಿದೆ.

'ವಾಗ್ದೇವಿಯ ಭಂಡಾರದ ಮುದ್ರೆಯನೊಡೆದ' ರನ್ನ ನಲ್ಲಿ ಈ ವಕ್ರೋಕ್ತಿಯು ನಿಸರ್ಗ ಸುಭಗವಾಗಿ ಸರಳ ಸುಂ ದರವಾಗಿದೆ. ಅವನಲ್ಲಿ ಈ ಅಸಾಧಾರಣ ಶಕ್ತಿಯು ಸ್ವಭಾವ ಸಿದ್ಧವಾದುದರಿಂದಲೇ ಅದಕ್ಕಷ್ಟು ರಮ್ಯತೆ. ಅವನು ತಾನೇ ಹೇಳಿಕೊಳ್ಳುವಂತೆ 'ಸರಸತಿಯಂ ನಬಲೆಯಂಗೋಣ್ಮುರಿಗೊಂಡು ಅರ್ಥಕ್ಕೆ ಕುದಿದು ನೋಯಿಸುವ ಸರಸ್ವತೀ ದ್ರೋಹ'ನಲ್ಲ. ರನ್ನನ ಅನ್ಯಾದೃಶವಾದ ಈ ಕೊಂಕುನುಡಿಯ ಕಾವ್ಯ ಸೌಂದರ್ಯ ಶೈಲಿಯನ್ನೇ ಅವನನ್ನು ಹೊಗಳುವ ಅವನ ಮುಂದಿನ ಕವಿಗಳು 'ರನ್ನ ಮೆಯ್ಸಿರಿ' (ಆಂಡಯ್ಯ) 'ಕವಿರತ್ನ ನೊಜೆ' (ನಯಸೇನ) 'ರನ್ನನ ಕಾಂತಿ' (ಜನ್ನ) 'ರನ್ನನ ಕೃತಿ ಸೌಂದರೀ ಸುಭಗಂ' (ಕಮಲಭವ) ಎಂದೆಲ್ಲಾ ಹೊಗ ಳಿದುದಾಗಿರಬಹುದು.

ರನ್ನನು ಹತ್ತನೇ ಶತಮಾನದವನು. ಅವನು ಬರೆದ 'ಗದಾಯುದ್ಧ' ಅಥವಾ 'ಸಾಹಸಭೀಮ ವಿಜಯ' ಮತ್ತು 'ಅಜಿತನಾಥ ತೀರ್ಥಂಕರ ಪುರಾಣ ತಿಲಕ'ವೆಂಬೆರಡು ಚಂಪೂ ಕೃತಿರತ್ನಗಳು ಕನ್ನಡ ಸಾಹಿತ್ಯಕ್ಕೆ ಅನರ್ಘ ಭೂಷಣಪ್ರಾ ವಾಗಿವೆ. ಅವನು ಗದಾಯುದ್ಧ ಕಾವ್ಯದಲ್ಲಿ ತೋರಿ ವಕ್ರೋಕ್ತಿಯ ಬೆಡಗನ್ನು ಸ್ಥಾಲೀಪುಲಾಕ ನ್ಯಾಯದಿ ಸೂಕ್ಷ್ಮವಾಗಿ ಎತ್ತಿ ತೋರಿಸುವ ಸಾಹಸ ಮಾಡುವೆನು.

೧. ನೀನಗ್ನಿ ಪುತ್ರಿಯೈ ಪವ–
ಮಾನ ತನೂಭವನೆನಾನಣಂ ಕೂಡೆ ಸುಸಂ–
ಧಾನಮರಿನೃಪರೊಳೆಂತನ–
ಲಾನಿಲ ಸಂಯೋಗ ಮುರಿಪದಿರ್ಕುಮೆ
ಪಗೆಯ

ಭೀಮನು ದ್ರೌಪದಿಯನ್ನು ಸಮಾಧಾನಿಸುತ್ತಿರುವನು 'ನೀನು ಅಗ್ನಿಪುತ್ರಿ. ನಾನು ವಾಯುಪುತ್ರ. ನಾವಿಬ್ಬ ಕೂಡಿದಾಗ ಸಂಧಿಯೆಂತು? ಬೆಂಕಿಯೂ ಗಾಳಿಯೂ ಒ ಸೇರಿದರೆ ವೈರಿಯನ್ನು ಉರಿಸದಿರುವುವೆ?'

೨. ಗುರುಕುಲಮಂ ನುಂಗಿದೆಯಿ–
ನ್ನರೆಬಗುಮಂ ನುಂಗಲಿರ್ಪೆ ಕುರುಪತಿಯುಮ
ನ್ನೆರಡನೆಯ ಹಿಡಿಂಬಿಯನೆ–
ಮ್ಮರಸಂ ರಕ್ಕಸಿಯನೆಲ್ಲಿ ತಂದನೊ ನಿನ್ನಂ?

ವಿದುಷಕನು ದುಃಖಿತೆಯಾದ ದ್ರೌಪದಿಯನ್ನು ವಿನೋ ಗೊಳಿಸುತ್ತಿರುವನು —'ಕೌರವರನ್ನು ನುಂಗಿ, ದುರ್ಯೋಧ ನನ್ನು ನುಂಗಲಿರುವ ಎರಡನೆಯ ಹಿಡಿಂಬಿಯಂತಿರು ನಿನ್ನನ್ನು ನಮ್ಮರಸ ಭೀಮನು ಎಲ್ಲಿಂದ ತಂದನೋ?'

೩. ಒಡವುಟ್ಟಿದರಂ ಕೊಂದವ–
ರಡಗಂ ತಿಂದವರ ತೆತ್ತರಂ ಬೆಸಲಗೆಯೊಳ್
ಕುಡಿವೀ ನಿಸ್ತ್ರಿಂಶತೆಯಂ
ಹಿಡಿಂಬಿಯಂ ಪೊರ್ದಿ ಕಲ್ತನಾಗನೆ ಭೀಮಂ!

ಒಡ ಹುಟ್ಟಿದ ಕೌರವರನ್ನು ಕೊಂದು, ಅವರ ಮಾಂಸವನ ತಿಂದು, ನೆತ್ತರನ್ನು ಕುಡಿಯುವ ಈ ರಾಕ್ಷಸತ್ವವನ ಭೀಮನು, ಹಿಡಿಂಬಿಯನ್ನು ಮದುವೆಯಾದುದರಿಂದ ಕಲಿ ದಾಗಿರಬೇಕು.

೪. ಅನಿಮೇಷಾದ್ಯವತಾರಂ
ತನಗಾಯ್ತು ದಶಾವತಾರ ಮಲ್ಲದೊಡಿರದ-
ರ್ಜುನನ ರಥಮೆಸಪ ಪನ್ನೊಂ-
ದನೆಯದು ಸೂತಾವತಾರಮುಂ ಹರಿಗಾಯ್ತೇ!

ವಿಷ್ಣುವಿಗೆ ಮತ್ಸ್ಯಾದಿ ದಶಾವತಾರವಲ್ಲದೆ, ಅರ್ಜುನನ ರಥವನ್ನೋಡಿಸುತ್ತಿರುವ ಹನ್ನೊಂದನೆಯದಿದು ಸೂತಾವತಾರವುಂಟಾಯಿತೇ?

೫. ಅತಿರಥನಾತಂ ಗಡ! ಬಲ
ಯುತ ಸಮರಥನೆನ್ನೊಳಧಿಕ ಬಲವಂತಂ ಮಾ-
ರುತಿ ಗಡ! ಮಹಾರಥಂ ಮಾ-
ರುತಿಯುಂ ತದ್ರಥದ ಗಾಳಿಗಳ್ದೊಡ್ಡಿದುವೇ?

ಭೀಮನು ಮಹಾರಥನು ನಿನ್ನಿಂದ ಅಧಿಕ ಬಲಶಾಲಿಯು ಎಂದು ಸಂಜಯನೆಂದುದಕ್ಕೆ ಮಹಾರಥನೆಂದರೆ ಅವನ ರಥದ ಚಕ್ರಗಳು ದೊಡ್ಡದಾಗಿರುವುವೇ? ಎಂದು ಕೌರವನು ಭೀಮನನ್ನು ತಮಾಷೆ ಮಾಡುತ್ತಿರುವನು.

೬. ತುಂಗರಿಪುದಂತಿ ದಂತಾ-
ಲಿಂಗನಮುಂ ದಿವಿಜ ಸುಂದರೀ ತುಂಗ ಕುಟಾ-
ಲಿಂಗನಮು ಮೊಡನೆ ವೀರ ಭ-
ಟಂಗಾದುದು ರಣದೊಳಣ್ಮಿದಂಗರಿದುಂಟೇ?

ಆನೆಯಿಂದೊಬ್ಬ ಭಟನು ಸತ್ತನೆಂದುದರ ವರ್ಣನೆಯ ರೀತಿ- ಆನೆಯ ದಂತಾಲಿಂಗನದೊಡನೆಯೇ ಭಟನಿಗೆ ಸುರಸುಂದರಿಯ ತುಂಗ ಕುಟಾಲಿಂಗನವೂ ಉಂಟಾಯಿತು.

೭. ಗುರುವಿನ ನೆತ್ತರಂ ಕುಡಿವೆನಪ್ಪೊಡವಂ ದ್ವಿಜ
ವಂಶಜಂ ನಿಜಾ-
ವರಜನ ನೆತ್ತರಂ ಕುಡಿವೆನಪ್ಪೊಡೆ ಭೀಮನೆ
ಪೀರ್ದನೆಯ್ದೆ ಭೀ-
ಷ್ಮರ ಬಿಸುನೆತ್ತರಂ ಕುಡಿವೊಡಿನ್ನು ಮೊಳಂ
ಕುರುರಾಜ ನಿನ್ನ ನೆ-
ತ್ತರ ಸವಿನೋಳ್ಪನಂ ಬಯಸಿ ಬೀತಪೆನೆಂದು
ದದೊಂದು ಪುಲ್ಮರುಳ್.

ಇದು ರಣರಂಗದಲ್ಲಿ ನೆತ್ತರು ಕುಡಿವ ಪಿಶಾಚಿಯ ಮಾತು—'ದ್ರೋಣನ ನೆತ್ತರು ಕುಡಿವೆನೆಂದರ ಅವನು ಬ್ರಾಹ್ಮಣ. ದುಶ್ಶಾಸನನ ನೆತ್ತರು ಕುಡಿವೆನೆಂದರೆ ಭೀಮನು ಮೊದಲೇ ಕುಡಿದುಬಿಟ್ಟಿರುವನು. ಭೀಷ್ಮನ ನೆತ್ತರು ಕುಡಿವೆನೆಂದರೆ ಇನ್ನೂ ಜೀವಿಸಿರುವನು. ಆದುದರಿಂದ ಕೌರವನೇ, ನಿನ್ನ ನೆತ್ತರ ಸವಿ ನೋಡಬೇಕು.'

೮. ಮಾನಧನನೆನಿಸಿ ನಿನ್ನಭಿ-
ಮಾನಕ್ಷತಿ ಮಾಡಿದ್ಯೆ ಸುಯೋಧನ ನೀಂ ಮು-

ತ್ತೀ ನೀರೊಳಗೆ ಸೆದಿರ್ಕುಂ
ಮೀನಿರ್ಕುಂ ಕಪ್ಪೆಯಿರ್ಕು ಮಿರ್ಪರೆ ಗಂಡರ್?

ನೀರಲ್ಲಿರುವ ಸುಯೋಧನನೊಡನೆ ಅರ್ಜುನನು—'ನೀರಲ್ಲಿ ಮುತ್ತು, ಮೀನು, ಕಪ್ಪೆ ಇರುವುವು, ಶೂರರಿರುವರೇ?' ಎನ್ನುವನು. ಇದನ್ನು ಕೇಳಿದಾಗ ಅಭಿಮಾನಧನನಿಗೆ ಹೇಗನಿಸಿರಲಿಕ್ಕಿಲ್ಲ? ಆ ಭಾವನೆಯನ್ನು ಕವಿಯು 'ನೀರೊಳಗಿರ್ದುಂ ಬೆಮರ್ತನುರಗಪತಾಂ' ಎಂಬ ವಕ್ರೋಕ್ತಿಯಿಂದ ವರ್ಣಿಸಿರುವನು.

೯. ಬಂದಂ ಬಕಾಂತಕಂ ಪೋ
ಕೊಂದಂ ಬಕವೆಸರ್ಗೆ ಮುನಿದು ಸಮ್ಮುಮನಿನ್ನೆಂ-
ಬಂದದೊಳೆ ಪಾರಿ ಪೋದುವು
ನಿಂದಿರದುರವಣಿಸಿ ಬಕನಿಕಾಯಶಮದರೊಳ್

ಬಕಾಂತಕ ಭೀಮನು ಬಂದನು. ಬಕದ ಹೆಸರಿನ ನಮ್ಮನ್ನು ಕೊಲ್ಲುವನೆಂದು ಕೊಕ್ಕರೆಗಳು ಆ ವೈಶಂಪಾಯನ ತೆರೆಯಿಂದ ಹಾರಿದುವು.

೧೦. ಪುಟ್ಟಂ ಸಟ್ಟುಗಮುಂ ಕೊಂ-
ಡಟ್ಟಾರಿಸಿ ಬೋನವಿಟ್ಟು ಬಂದೆಯೊ ಗದೆಗೊಂ-
ಡೊಟ್ಟೈಸುವಂಕುಟಾದುದೆ
ತೊಟ್ಟನೆ ತೊಳೆ ನಿನಗೆ ಗಂಡಗರ್ವಮುಮಾಯ್ತೇ?

'ಹುಟ್ಟನ್ನೂ ಸಟ್ಟುಗವನ್ನೂ ತೆಗೆದುಕೊಂಡು, ಅಡಿಗೆ ಆರಿಸಿ, ಅನ್ನವಿಟ್ಟು ಬಂದೆಯೇನು? ನಿನಗೂ ಪೌರು[ಷ] ಎಂದು ಕೌರವನು ಭೀಮನಿಗೆ ಪರಿಹಾಸ ಮಾಡುತ್ತಿರು

ಹೀಗೆಯೇ 'ಭೀಮನ ದೆಸೆಯಿಂದ ಭೂಮಿಯನ್ನು ಕೆರೆಗೆ ಹೊಕ್ಕೆನಲ್ಲದೆ ಅಂಜಿ ಹೊಕ್ಕಿಲ್ಲ'ವೆಂಬ ಕೌರವನ ಮಾನೋಕ್ತಿ; 'ನೀನು ಅಡಿಗೆ ಭಟ್ಟ'ನೆಂದು ಕೌರವನು ನನ್ನು ಮೂದಲಿಸಿದುದಕ್ಕೆ, 'ನಿನ್ನ ಶರೀರ ಮಾಂಸ ಮರುಳ್ಗೆ ಬಾಣ ಸುಗೆಯ್ವಂ' ಎಂಬ ಭೀಮನ ದರ್ಪೋ 'ನೀನು ಉದಧಿಯಲ್ಲಿ ನೀರ್ವಾಸಸೆ (ನೀರ ಮಾನುಷೆ)ಯ ಪಡೆದ ಗರ್ವದಿಂದ ಲಕ್ಷ್ಮೀ ನಿಳಯನೆನಿಸಿದ್ದಿ. ನಿನ್ನ ಸಿ ಮಹಿಮೆಯ ಪುರುಳು ಗೊತ್ತುಂಟು' ಎಂಬ ಶ್ರೀ ಕೃಷ್ಣನಿ ಅಭಿಮನ್ಯುವನ್ನು ಹೊಗಳುವ ಸಂದರ್ಭದಲ್ಲಿ 'ನಿನ್ನಂ ಪೆ ಮೊಲೆವೆತ್ತಳೆ ವೀರ ಜನನಿವೆಸರಂ ಪೆತ್ತಳ್' ಎಂದು ದ್ರೆಯ ಕುರಿತ ಮಾತು; ಕೌರವನು ತೊಡೆಯುಡಿದು ಬಿದ್ದುದಕ್ಕೆ, ನೆಲವನ್ನೆಂತೂ ಬಿಡೆನೆಂದು ನೆಲಕರ್ಚಿರುವನ ಊಹೆ—ಇವೇ ಮೊದಲಾದುವು ವಕ್ರೋಕ್ತಿಗಳಿಗೆ ಅ ಜಾಣ್ಮೆಯ ಕೊಂಕು ಮಾತುಗಳಿಗೆ ಶ್ರೇಷ್ಠವಾದ ಉದಾಹ ಗಳು. ಇವು ಕವಿಚಕ್ರವರ್ತಿಯ ಅನುಪಮ ಪ್ರತಿ ಸುಂದರ ದ್ಯೋತಕಗಳು.

ಕೇರಳದ ಮಹಾಕವಿ ಕುಮಾರ ಆಶಾನ್

(ಲೇಖಕರು: ಶ್ರೀ| ಕೆ. ಎ. ದೇವದಾಸ, ಶಿರೋಮಣಿ, ಪಿ. ಓ. ಎಲ್.)

[ಇದು, ಕೇರಳದ ಓರ್ವ ಮಹಾಕವಿಯ ಸಂಕ್ಷಿಪ್ತ ಜೀವನ ಚರಿತ್ರವಾಗಿದೆ. ಇದರೊಂದಿಗೆ, ಆ ಕವಿಯ ಕೆಲವು ಕವಿತೆಗಳನ್ನೂ, ಕನ್ನಡದಲ್ಲಿ ಅವುಗಳ ತಾತ್ಪರ್ಯವನ್ನೂ ಕೊಟ್ಟದ್ದರೆ ಚೆನ್ನಾಗಿತ್ತೆಂದು ತೋರುವುದು; ಹೀಗೆ ಕೊಡುವುದರಿಂದ ಕರ್ಣಾಟಕ-ಕೇರಳ ಸಾಂಸ್ಕೃತಿಕ ಬಂಧನಕ್ಕೂ ಸಹಾಯವಾಗುವುದು.]

ಶ್ರೀ ಕುಮಾರ ಆಶಾನ್, ಎಂಬ ಮಹಾ ಕವಿಯ ನಾಮವನ್ನರಿಯದ ಕೇರಳೀಯರು ಅತಿ ವಿರಳ. ತಿರುವಾಂಕೂರು ಸಂಸ್ಥಾನದ ಚಿರಯಿನ್‌ಕೀಳು ತಾಲೂಕಿನ ಕಡೆಕ್ಕಾವೂರು ದೇಶದ ಕಾಯಿಕ್ಕರ ಗ್ರಾಮದಲ್ಲಿರುವ ತೊಮ್ಮನ್ ವಿಳಾಗತ್ತು ಮನೆಯಲ್ಲಿ ಕೊಲ್ಲ ವರ್ಷ 1046 (1869ನೇ ಇಸವಿ) ನೇ ವಿಷುದಿನ ಜನ್ಮವೆತ್ತಿದರು. ತಂದೆಯ ಹೆಸರು ನಾರಾಯಣ. ತಾಯಿಯ ಹೆಸರು ಕೊಚ್ಚುಪ್ಪೆಣ್. ಕಾಯಿಕ್ಕರ ಗ್ರಾಮವು ತೀಯ ಸಮಾಜದವರ ಒಂದು ಕೇಂದ್ರ. ಈ ಮಹಾಕವಿಯು ಕೇರಳ ಸಾಹಿತ್ಯವನ್ನು ಬೆಳಗಿಸಿದ್ದಲ್ಲದೆ, ತನ್ನ ಸಮಾಜವಾದ ತೀಯ ಸಮಾಜವನ್ನು ಕೂಡ ಉದ್ಧರಿಸಿ ಕವಿತೆಗಾಗಿ ಸರಕಾರದಿಂದ ಸ್ವರ್ಣಕಂಕಣ ಪಟ್ಟೆ ವಗೈರೆ ಕೀರ್ತಿ ಮುದ್ರೆಯನ್ನೂ ಪಡೆದನು. ಪಂಡಿತರಿಂದಲ್ಲ—ಸಾಮಾನ್ಯ ಜನರು ಕೂಡಾ ಅವನ ಸರಸವೂ ಉದ್ಬೋಧಕವೂ ಆದ ಕವಿತೆಯನ್ನು ಸರಾಗವಾಗಿ ಹಾಡುವುದನ್ನು ನಾವು ಕೇಳಬಹುದು.

ಗುರುಮಠದಲ್ಲಿ ಮಲಯಾಳವನ್ನೂ ಇತರ ಸಮಯದಲ್ಲಿ ಬೇರೊಬ್ಬರಿಂದ ಅಮರ ಶಬ್ದ, ಶ್ರೀರಾಮೋದಂತ ಶ್ರೀಕೃಷ್ಣ ವಿಲಾಸಕಾವ್ಯವನ್ನೂ ಕಲಿತು ಸಂಸ್ಕೃತದಲ್ಲಿ ಕೂಡಾ ಜ್ಞಾನ ಸಂಪಾದಿಸಿದನು. ಅಂತೂ 13ನೇ ಪ್ರಾಯದಲ್ಲಿ ಸಮೀಪದೊಂದು ಶಾಲೆಯಲ್ಲಿ 4ನೇ ದರ್ಜೆ ವರೆಗೆ ಕಲಿತನು. ಆರ್ಥಿಕ ತೊಂದರೆಯ ನಿಮಿತ್ತ ವಿದ್ಯಾಭ್ಯಾಸ ಮುಂದರಿಸಲಾಗದೆ 2 ವರ್ಷಕಾಲ ಒಂದಂಗಡಿಯಲ್ಲಿ ಲೆಕ್ಕ ಬರೆಯುವ ಕೆಲಸ ಕೈಕೊಂಡನು. ಆ ಕಾಲದಲ್ಲಿ ಶೃಂಗಾರ ರಸಭರಿತವಾದ ಅನೇಕ ಕವಿತೆಗಳನ್ನು ಬರೆಯುತ್ತಿದ್ದನು.

ಆಗಲೇ ಶ್ರೀಗುರುನಾರಾಯಣ ಮಹರ್ಷಿಗಳು ಈ ಕಡೆಗೆ ಬಂದು ಸೇರಿದರು. ಅವರನ್ನು ನಾಣು ಗುರುಗಳೆಂದು ಜನರು ಕರೆಯುತ್ತಿದ್ದರು. ಕುಮಾರ ಕವಿಯ ಪ್ರತಿಭೆಯನ್ನೂ ವಾಙ್ಮಾಧುರ್ಯವನ್ನೂ ಕಂಡರಿತ ಗುರುನಾರಾಯಣ ಸ್ವಾಮಿಯವರ ನಿರ್ಬಂಧದ ಮೇರೆಗೆ ಪುನಃ ಹಿರಿಯರು ಮೂರು ವರ್ಷಕಾಲ ಕುಮಾರನನ್ನು ಸಂಸ್ಕೃತ ಶಾಲೆಗೆ ಕಳುಹಿಸಿದರು

ಶ್ರೀ ನಾಣು ಗುರುವಿನ ಸಹವಾಸವು ಕುಮಾರನಿಗೆ ಪದೇ ಪದೇ ಉಂಟಾದ ಕಾರಣ ಅವನಲ್ಲಿ ಆಧ್ಯಾತ್ಮಿಕಚಿಂತೆ ಏಕಾಂತ ವಾಸದಲ್ಲಿ ಪ್ರೀತಿಗಳು ಹೆಚ್ಚಿದವು. ಒಮ್ಮೆ ಕೆಲ ಕಾಲ ಮನೆಯಿಂದ ದೂರವಾಗಿರಲು ಒಂದು ದೇವಾಲಯದಲ್ಲಿ ಇರತೊಡಗಿದನು. ಅಲ್ಲಿಗೆ ಬಂದ ಅನೇಕ ಬಾಲಕರಿಗೆ ಸಂಸ್ಕೃತ ವಿದ್ಯೆಯನ್ನು ಕಲಿಸತೊಡಗಿದನು. ಅಂದಿನಿಂದ ಕುಮಾರನಿಗೆ ಕುಮಾರ ಆಶಾನ್ ಎಂಬ ಹೆಸರಾಯಿತು. ಒಮ್ಮೆ ಆ ತರಗತಿಯಲ್ಲಿ ಅಕ್ಷರ ಶ್ಲೋಕದ (ಬಾಂಡಿ) ಸ್ಪರ್ಧೆ ನಡೆಯಿತೆಂದೂ ಅದರಲ್ಲಿ ಕೊನೆಗೆ ಲಕ್ಷ್ಮಿಕುಟ್ಟಿಯೆಂಬ ದೇವಾಂಗ ಕುಮಾರಿಯು ಜಯಿಸಿದಳೆಂದೂ ಆಶಾನು ಆ ಬಾಲಿಕೆಯನ್ನು ಹರಸಿದನೆಂದೂ ಜನರು ಹೇಳುತ್ತಾರೆ.

ಕುಮಾರ ಆಶಾನು ಮೂರು ವರ್ಷಕಾಲ ಶ್ರೀನಾರಾಯಣ ಗುರುಗಳ ಶಿಷ್ಯನಾಗಿ ಕಾಲಕಳೆದನು. ಅನಂತರ ಗುರುಗಳು ಆಶಾನನ್ನು ವಿದ್ವತ್ ಪರೀಕ್ಷೆಯ ತರಬೇತಿಗಾಗಿ ಬೆಂಗಳೂರಿಗೆ ಕಳುಹಿಸಿದರು. ಅಲ್ಲಿ ಮೂರು ವರ್ಷಕಾಲ ಓದಿದನು. ಆಗ ನಗರದಲ್ಲಿ ಪ್ಲೇಗಿನ ಬಾಧೆ ಹೆಚ್ಚಿದ್ದರಿಂದ ಮದ್ರಾಸಿಗೆ ತೆರಳಿ ಅಲ್ಲಿಂದ ಕಲ್ಕತ್ತೆಗೆ ತೆರಳಿದನು. ಅಲ್ಲಿ ತರ್ಕತೀರ್ಥ ಪರೀಕ್ಷೆಗೆ ಅಭ್ಯಾಸ ಮಾಡಿದರೂ ದುರ್ದೈವದಿಂದ ಆ ಕಾಲದಲ್ಲಿ ನಗರದಲ್ಲಿ ರೋಗವು ಹೆಚ್ಚಿದ ನಿಮಿತ್ತ, ಪರೀಕ್ಷೆ ಕೊಡದೆ ೨೧ನೇ ಪ್ರಾಯದಲ್ಲಿ ಊರಿಗೆ ಮರಳಿದನು. ಅಷ್ಟರಲ್ಲಿ ಇಂಗ್ಲಿಷಿನಲ್ಲೂ ಆಶಾನು ತಕ್ಕಷ್ಟು ಪಾಂಡಿತ್ಯವನ್ನು ಸಂಪಾದಿಸಿದನು.

ಶ್ರೀ ನಾರಾಯಣ ಗುರುಗಳು ಆಗ ಸಮಾಜೋದ್ಧಾರದ ಕಾರ್ಯವನ್ನು ಕೈಗೊಂಡಿದ್ದ ಕಾಲ. ಆಶಾನು ಅವರ ಕಾರ್ಯದಲ್ಲಿ ಭಾಗವಹಿಸಿ ಸ್ವಸಮಾಜದಲ್ಲಿ ಸಂಘಟನೆ ಸಂಸ್ಕೃತ ಪ್ರಚಾರವನ್ನು ಮಾಡಿದನು. ಹಲಕೆಲವು ಪುಸ್ತಕಗಳನ್ನೂ ಬರೆದನು. ಬ್ರಹ್ಮಚಾರಿ ಆಶಾನನ ಸಹಭಾಗಿತ್ವದಿಂದ ಶ್ರೀಗುರುಗಳಿಗೆ ತುಂಬಾ ಲಾಭವಾಯಿತು. 1078ನೇ ಕೊಲ್ಲ ವರ್ಷದಲ್ಲಿ ಈ ಗುರು ಶಿಷ್ಯರ ನಿರಂತರ ಸಾಹಸದ ಫಲವಾಗಿ S. N. D. P. ಯೋಗವು ಸ್ಥಾಪಿಸಲ್ಪಟ್ಟಿತು. 'ವಿವೇಕೋದಯ'ವೆಂಬ ಮಾಸ ಪತ್ರಿಕೆಯನ್ನೂ ಹೊರಡಿಸಿದರು. ಶ್ರೀ ಆಶಾನ್ ಮಹಾಕವಿಯೇ ಅದರ ಸಂಪಾದಕನಾಗಿದ್ದನು. ಆ ಕಾಲದಲ್ಲಿ ಅವನು 'ವೀಣಪೂವು' (ಬಿದ್ದ ಹೂವು) ಎಂಬ

[102ನೇ ಪುಟಕ್ಕೆ ಮುಂದುವರಿದಿದೆ.]



ಪ್ರಾಚೀನ ಭಾರತದಲ್ಲಿ

ಪತ್ರಲೇಖನ

ಲೇಖಕರು: ದಿವಂಗತ ಶ್ರೀ ಎಂ. ಎನ್. ಕಾಮತರವರು.

ಪತ್ರಲೇಖನವು ಒಂದು ಪ್ರತ್ಯೇಕ ಕಲೆ. ಕಾಲಸ್ಥಿತಿಗಳು ಬದಲಾದಂತೆ ಅ… ಶೈಲಿ, ಕ್ರಮಗಳೂ ಕೊಂಚ ಬದಲಾಗುತ್ತಿರಬಹುದು. ಆದರೆ ಅವುಗಳ ಮುಖ… ಮುಖ್ಯ ಲಕ್ಷಣ ಒಂದೇ. ಈ ಲೇಖನದಲ್ಲಿ ಪ್ರಾಚೀನ ಭಾರತದಲ್ಲಿನ ಪತ್ರಲೇಖನ… ವನ್ನೂ ಪತ್ರವಾಹಕರ ವಿಷಯವನ್ನೂ ಮನೋಹರವಾಗಿ ವರ್ಣಿಸಲಾಗಿದೆ. ದಿ… ಕಾಮತರ ಸ್ಮರಣಾರ್ಥ, ಅವರ ಹಳೇಸಂಗ್ರಹದಿಂದ ಈ ಲೇಖವನ್ನು ಆಯ್ದು ಕೊಟ್ಟರು…

★

ಎಲ್ಲಿ ಮಾಲಿನಿಯು ಮೆಲ್ಲಡಿಯಿಂದ ಪ್ರವಹಿಸುತ್ತ, ಮಂದಮಾರುತನೊಡನೆ ಸಂಗೀತ ಧ್ವನಿಯಿಂದ ಸಂಭಾಷಣ ಮಾಡುತ್ತಿರುವಳೊ—ಎಲ್ಲಿ ಜಲಕ್ರೀಡೆಯನ್ನಾಡುವ ಹಂಸ ಕಾರಂಡವಗಳ ಕಲರವದಿಂದ ಸರೋವರವೆಲ್ಲವೂ ಕಂಪಿಸುತ್ತಲಿರುವುದೋ—ಎಲ್ಲಿ ಹರಿಣಗಳ ಹಜ್ಜೆಗಳ ಸದ್ದಿನಿಂದ ಉಪವನವೆಲ್ಲವೂ ಪ್ರತಿಧ್ವನಿತವಾಗುತ್ತಿರುವುದೋ—ಎಲ್ಲಿ ಪರ್ವತಶ್ರೇಣಿಗಳು ಪ್ರಹರಿಗಳಂತೆ ಸೀಮಾಂತ (Frontier) ವನ್ನು ಸಂರಕ್ಷಿಸುತ್ತಲಿರುವುವೋ- ಕಣ್ವಮಹರ್ಷಿಯ ಅಂತಹ ತಪೋವನ ಪ್ರಾಂತದಲ್ಲಿಯ ಕುಸುಮಕುಂಜವೊಂದು ಪ್ರಣಯ ಲಿಪಿಯ ರಚನಾಕಾರ್ಯಕ್ಕೆ ಯಥಾರ್ಥವಾಗಿಯೂ ಅತ್ಯುತ್ತಮವಾದ ಒಂದು ಸ್ಥಾನವು. ನಡುವಗಲ … ಸೀಯುವಾದ ಬಿರುಬಿಸಿಲದಗೆ, ಅದರೊಡನೆ ಏರಿಬರು… ರುವ ವಿರಹಜ್ವಾಲೆ! ಮ್ಲಾನವಾದ ಆ ಮುಖಮಂ… ಮೇಲೆ ಪಾಂಡುರವರ್ಣವುಳ್ಳ ಆ ಕಪೋಲದ ಮೇತ್ರಿ … ಯಿನಿಯ ಮನಸ್ತಾಪವು ಚಿತ್ರಿತವಾಗಿರುವುದು. ಎಡ… ಗಳಲ್ಲಿ ಸೇವಾಸಿರತೆಯರಾದ ಅನಸೂಯಾಪ್ರಿಯಂವದೆಯ… ನಲಿನೀಪತ್ರದ ಬೀಸಣಿಗೆಯಿಂದ ತಮ್ಮ ಸಖಿಗೆ ಬೀಸ… ಅವಳ ತಾಪವನ್ನು ಕಡಮೆ ಮಾಡುವುದಕ್ಕೆಂದು ಆ… ಅದೆಷ್ಟೋ ವ್ಯರ್ಥ ಕಷ್ಟವನ್ನು ಅನುಭವಿಸಿರುವರು. ನಾ… ಕೆಯ ಸ್ವಹಸ್ತಪೋಷಿತವಾದ ಹರಿಣಶಾಬವು ಅರೆದ…

(101ನೇ ಪುಟದಿಂದ ಮುಂದರಿದುದು.)

ಲಘು ಕಾವ್ಯವನ್ನು ಬರೆದನು. ಆ ಕಾವ್ಯವುದಲಿತ ಸಮಾಜದಲ್ಲೊಂದು ಆತ್ಮ ಚೈತನ್ಯವನ್ನು ಸಂಚಾರ ಮಾಡಿಸಿತು. 5 ವರ್ಷ ಕಾಲದಲ್ಲಿ S. N. D. P. ಯೋಗವು ಬಲವಾದ್ದೊಂದು ಸಂಸ್ಥೆಯಾಯಿತು.

1095ನೇ ಕೊಲ್ಲ ವರ್ಷದಲ್ಲಿ ವಿವಾಹವಾದನು. ಆದರೆ 1 ವರ್ಷದ ಸಂಸಾರ ಗುಣವನ್ನು ಪರೀಕ್ಷಿಸಿ 1099ನೇ ವರ್ಷದಲ್ಲಿ—ತನ್ನ 51ನೇ ಪ್ರಾಯದಲ್ಲಿ—ಮಕರ ಮಾಸ 3ನೇ ದಿನ ರಾತ್ರಿ ಬೋಟಿನಲ್ಲಿ ನದೀ ಯಾತ್ರೆ ಮಾಡುವಾಗ ಸಂಭವಿಸಿದ ಅಪಘಡದಲ್ಲಿ ಇಹಲೋಕದ ಯಾತ್ರೆಯನ್ನು ಕೊನೆಗೊಳಿಸಿದನು.

ಆಶಾನ್ ಬರೆದ ಲಘು ಕಾವ್ಯಗಳಲ್ಲಿ 'ಕರುಣಾ' ಪ್ರರೋದನಂ, ಚಂಡಾಲ ಭಿಕ್ಷುಕಿ, ದುರವಸ್ಥಾ, ಲೀಲಾ, ನಳಿನೀ, ಸಿಂಹ ಪ್ರಸವಂ, ವೀಣಪೂವ್ ಇವು ಮು… ವಾದುವು. ಮಹಾಕವಿಗೆ ಭಗವಾನ್ ಬುದ್ಧನ ತತ್ವ… ವಿಶೇಷವಾದ ಪ್ರತಿಪತ್ತಿಯಿತ್ತು. ಕರುಣೆಯಲ್ಲಿ ಉಪಗ… ವಾಸವದತ್ತೆಯರ ಸಮಾಗಮವು ವರ್ಣಿಸಲ್ಪಟ್ಟಿದೆ. ಕರು… ರಸದ ಸಾಗರವದು. ಓದಲು ರಮ್ಯ. ಸರಳಶೈಲಿ. … ರೀತಿ ಇತರ ಖಂಡಕಾವ್ಯಗಳೂ ಹೃದಯವನ್ನು ಕ್ಷಣಕ… ಪರಿವರ್ತನಗೊಳಿಸುವ ಪದ್ಯರತ್ನಗಳ ಕೂಟ. ಕರುಣಾ… ವೆಲ್ಲಿಯೂ ತುಳುಕಾಡುತ್ತದೆ.

ಶ್ರೀ ಎಳುತ್ತಚ್ಛನು ಕೇರಳದ ಮಧ್ಯಕಾಲದ ಹೆಸರಾ… ಕವಿಯಾದರೆ ಶ್ರೀ ಆಶಾನು ಆಧುನಿಕ ಕವಿಗಳಾದ … ವಳ್ಳತ್ತೋಳ್, ಉಳ್ಳೂರ್, ಕುಟ್ಟಿ ಮತ್ತು ಮಹಾ… ಗಳಿಂದಲೂ ವಂದನೀಯನಾದ ಕವೀಶ್ವರನೆಂಬುದನ್ನು ನ… ಎಂಬ ಲಘು ಕಾವ್ಯವನ್ನಾಸ್ವಾದಿಸಿದವರಿಗೆ ತಿಳಿಯದಿರದು…

ಣ್ಣಳಿಂದ ಅವಳ ನೆಳಲಲ್ಲಿಯೇ ಮಲಗಿ ನಿದ್ದೆ ಮಾಡುತ್ತಿರು
ವುದು. ಒಂದೆರಡು ಹಕ್ಕಿಗಳು ಮಾತ್ರ, ಕಿಚಿರುಮಿಚಿರನ್ನು
ತ್ತಲಿವೆ. ಇಂತಹ ಕಾಲದಲ್ಲಿಯೇ, ನಾಯಿಕೆಯ ಮನೋ
ಭಾವವು, ತಾಮರೆಯೆಲೆಯ ಮೇಲೆ, ಒಂದೇ ಒಂದು ಶ್ಲೋಕ
ರೂಪವಾಗಿ, ಲಿಪಿಬದ್ಧವಾದುದು. ಇದೇ ಆ ಶಕುಂತಲೆಯ
ಪ್ರಣಯಪತ್ರಿಕೆ!

["ಅಭಿಜ್ಞಾನ ಶಾಕುಂತಲಂ," ತೃತೀಯಾಂಕಂ]

ಪುನಃ ವಸಂತನು ತನ್ನ ವಿಜಯಧ್ವಜವನ್ನೆತ್ತಿದ್ದನು. ಕೋಕಿಲದ ಕುಹೂರವವು ಪ್ರಪಂಚಕ್ಕೇ ನವೀನಾನಂದ ಉಂಟುಮಾಡುತ್ತಿದ್ದಿತು; ಮಕರಂದಮತ್ತಗಳಾದ ಭ್ರಮರಗಳು ತಮ್ಮ ನಿರಂತರ ಗುಂಜನದಿಂದ ಬನಸಿರಿಯ ಮೌನಭಾವವನ್ನು ಭೇದಿಸತೊಡಗಿದ್ದುವು. ಆಗಲೇ ಪುಷ್ಪೋದ್ಯಾನದಲ್ಲಿ ರಾಜನೊಬ್ಬನು ಒಂದು ಲಿಪಿಯನ್ನೋದುತಿದ್ದನು. ಲೇಖಿಕೆ ಕರ್ಪೂರ ಮಂಜರಿ. ಕಸ್ತೂರಿಯ ಮಸಿಯೂ, ಕೇದಗೆಯೆಲೆಯೂ ಲೇಖನೋಪಕರಣಗಳು.

["ಕರ್ಪೂರಮಂಜರೀ" ದ್ವಿತೀಯಯವನಿಕಾಂತರಂ]

ಮತ್ತೊಂದು ದಿನ ಮಧ್ಯಾಹ್ನದ ಸಮಯದಲ್ಲಿ ಗಂಗಾ-ಯಮುನೆಗಳ ಸಂಗಮಸ್ಥಳವಾದ ಪ್ರತಿಷ್ಠಾ ನಗರದ ಹಿರುದ್ಯಾನದಲ್ಲಿ, ಅರಸನಾದ ಪುರೂರವನು ಸಂಚರಿಸುತ್ತಿರುವನು! ಮಾಧವೀ ವಿತಾನವನ್ನು ಆಂದೋಲನ ಮಾಡುತ್ತೆ ಮಂದಪರಿಮಳದಿಂದ ಪರಿಪುಷ್ಟನಾದ ಆ ಮಂದಾನಿಲನು ತನ್ನ ಸೌರಭವನ್ನು ದಶದಿಶೆಗಳಲ್ಲಿಯೂ ಹರಡುತ್ತಿರುವನು. ಆಗ ಅಂತರಿಕ್ಷದಲ್ಲಿ, ಸಖಿಯಾದ ಚಿತ್ರಲೇಖೆಯೊಡನೆ ಬಂದು, ಊರ್ವಶಿಯು ತನ್ನ ಮನೋಭಾವವನ್ನು ಭೂರ್ಜಪತ್ರದ ಮೇಲೆ ಸ್ವಹಸ್ತಾಕ್ಷರಗಳಿಂದ ಬರೆದು, ಅರಸನ ಸಮ್ಮುಖದಲ್ಲಿ ಅದನ್ನು ಪ್ರಕ್ಷೇಪಿಸಿದಳು. –
"ವಿಕ್ರಮೋರ್ವಶೀಯಂ" ದ್ವಿತೀಯಾಂಕಂ]

ಆ ಪತ್ರವನ್ನು ದೋರಬಂಧದಿಂದ ಅಲಂಕರಿಸಿ, ಸಾಮಾನ್ಯರಾರೂ ಅದನ್ನು ಒಡೆದು ಓದಿಕೊಳ್ಳದಂತೆ ಮೃತ್ತಿಕಾವಳಿಯ ಮುದ್ರೆಯನ್ನೊತ್ತಿದರೋ — ಅದು, ಇನ್ನೊಂದು ಬಗೆಯ ಪತ್ರ ["ವಿದ್ಧಸಾಲಭಂಜಿಕೆ" ತೃತೀಯಾಂಕಂ] ರಾಣಿವಾಸದ ನಿರ್ಬಂಧಕ್ಕೆ ಒಳಗಾದವರಾಗಲಿ, ಉನ್ಮುಕ್ತರಾದ ಸ್ವೇಚ್ಛಾ ವಿಹಾರಿಣಿಯರಾಗಲಿ ತಪೋವನದಲ್ಲಿ ಬಳೆದ ಲೋಕಾನುಭವರಹಿತರಾದ ಅಬಲೆಯರಾಗಲಿ, ಪ್ರಾಚೀನ ಭಾರತದಲ್ಲಿ ಪತ್ರಗಳನ್ನು ಬರೆವರು. ಒಕ್ಕಣೆಯೋ ಒಂದು ಶ್ಲೋಕ: ಅಥವಾ, ಒಂದು ಗಾಥೆ; ಇನ್ನು, ಲೇಖನ ಪ್ರಣಾಲಿಯಾವುದೋ. – ಎಲೆಗಳು, ಕಾಡಿಗೆ!

ಉಗುಗೋರ್ನೆಯ ಕಂಟದಿಂದ, ಕಣ್ಣ ಕಾಡಿಗೆಯ ಮಸಿಯಿಂದ ತಪ್ಪಿದ "ವ"ಕಾರವನ್ನು ಒಪ್ಪುವ "ಯ"ಕಾರವಾಗಿ ತಿದ್ದಿದ ವಿಷಯೆಯ ಎಡಗಯ್ಯನ್ನು ಅಲಂಕರಿಸಿದ್ದ ಆ ದುಷ್ಟಬುದ್ಧಿಯಿಂದ ಮದನನಿಗೆ ಪ್ರೇರಿತವಾದ ಪತ್ರವು ಅವಳ ಪ್ರಣಯಜನಿತವಾದ ಸ್ವಾರ್ಥತೆಯಿಂದೊಡಗೂಡಿದ "ಫೋರ್ಜರಿ(Forgery)ಯ ಕ್ರಮದ, ಮತ್ತೂ ತತ್ಕಾಲದಲ್ಲಿ ಆಕೆಗೆ ಒದಗಿದ ಲೇಖನ ಸಾಮಾಗ್ರಿಗಳ, ಪರಿಚಯವನ್ನು ಮಾತ್ರ ಉಂಟುಮಾಡಿಕೊಡುವುದಲ್ಲದೆ, ಆಗಳಿನ ಕಾಲದ ಲೇಖನಪ್ರಣಾಲಿಯ ಸರ್ವಸಾಮಾನ್ಯತೆಯನ್ನು ಸೂಚಿಸುವುದಿಲ್ಲ. ವಿಷಯೆಯ ಇನ್ನೊಂದು ಹೆಸರು 'ಕೃತಿಮ ಲೇಖಿಕಾಸುಂದರಿ"! – (The Fair Forger). ಇಂತಹ 'ಫೋರ್ಜರಿ'ಗಳು ಶಾಸನಕ್ಕೆ ಒಳಗಾಗಿರುವುದಿಲ್ಲ. ಪರಂತು ಇದೊಂದೇ ಈ ತರದ 'ಫೋರ್ಜರಿ'ಯ ಉಲ್ಲೇಖವಿದೆ.

ಕೇವಲ ಪ್ರಣಯ ಪತ್ರಗಳನ್ನು ಮಾತ್ರ ಆಗಳಿನ ಕಾಲದಲ್ಲಿ ಪ್ರೇರಿಸುತ್ತಲಿರಲಿಲ್ಲ. ಇತರ ವಿಧವಾದ ಪತ್ರಗಳೂ ಇದ್ದುವು. ಅಗ್ನಿಮಿತ್ರನಿಗೆ ವಿದರ್ಭರಾಜನು ಬರೆದ ಪತ್ರವು ದರ್ಪಯುಕ್ತವಾದುದು. – ಮಾಲವಿಕಾಗ್ನಿ ಮಿತ್ರಂ ಪ್ರಥಮಾಂಕಂ ಸೇನಾಪತಿಯಾದ ವೀರಸೇನನಿಗೆ ಪ್ರತಿಪತ್ರವನ್ನು ಬರೆಯಲು ಅಗ್ನಿಮಿತ್ರನಾಜ್ಞಾಪಿಸುವನು. ಪುಷ್ಪಮಿತ್ರನು ಅಗ್ನಿಮಿತ್ರನಿಗೆ ಪತ್ರವನ್ನು ತಂದುಕೊಡುವನು.—[ಮಾಲವಿಕಾಗ್ನಿ ಮಿತ್ರಂ ಪಂಚಮಾಂಕಂ]

ಮಾಲ್ಯವಂತನು ಪರಶುರಾಮನಿಗೆ ಪತ್ರವನ್ನು ಕೊಡಲು, ರಾಮನು ಪ್ರತ್ಯುತ್ತರವನ್ನು ಕಾಲಪತ್ರದ ಮೇಲೆ

ತವಾಲರಸದಿಂದ ಬರೆದುಕೊಟ್ಟನು—[ಮಹಾವೀರ ಚರಿತಂ ದ್ವಿತೀಯಾಂಕಂ] ಉತ್ಕಲ ದೇಶದಿಂದ ದೂತನೊಬ್ಬನು ಪತ್ರವನ್ನು ತಂದನು. ಪ್ರಬೋಧ ಚಂದ್ರೋದಯಂ ದ್ವಿತೀಯಾಂಕಂ]

ಪತ್ರಗಳನ್ನು ಗರ್ಭೀಕರಿಸುವುದಕ್ಕೆ, 'ಲಕ್ಕೋಟೆ' ಗಳಿಗೂ ಕಡಮೆಯಿರಲಿಲ್ಲ. ಅವುಗಳ ಆಕಾರವಾದರೋ—ಭಿನ್ನ ಭಿನ್ನವಾಗಿದ್ದಿತು.—[ಮಾಲವಿಕಾಗ್ನಿಮಿತ್ರಂ, ಪಂಚಮಾಂಕಂ] – ಚಂದ್ರಗುಪ್ತನ ಕಾಲದಲ್ಲಿ ಮಸೀಪಾತ್ರವೂ ರೂಢಿಗೆ ಬಂದಿತು. ಚಂದ್ರಗುಪ್ತನೇ ನಾಯಕನಾದ "ಮುದ್ರಾರಾಕ್ಷಸ" ನಾಟಕದಲ್ಲಿ, ಚಾಣಕ್ಯನು—'ಮಸೀಭಾಜನಂ ಪತ್ರಂಚೋಪಾನಯ'—ಎಂದು ಹೇಳುವನು.—[ಪ್ರಥಮಾಂಕಂ]—ಆಗಳಿನ ಕಾಲದಲ್ಲಿ ಕಾಯಸ್ಥ ಜಾತಿಯವರೇ ಕರಣಿಕರು. ಆದುದರಿಂದಲೇ, ಚಾಣಕ್ಯನು ಪತ್ರವನ್ನು ನಕಲೆತ್ತಿ ಬರೆಯೆಂದು ಶಕಟದಾಸನಿಗೆ ಹೇಳುವನು. ಈಗಳಿಗೆ ಸಭ್ಯಕಾಲದ 'ತಾಜಾಪ್ರತಿ'(Fair Copy)ಯ ಹಾಗೆ. ಸಾಸಿರ ಮಾಡಿದರೂ ಬ್ರಾಹ್ಮಣನ ಬರಹವು ಚೆನ್ನಾಗಿ ತೋರುವುದಿಲ್ಲವೆಂದು, ಚಾಣಕ್ಯನು,—"ಶ್ರೋತ್ರಿಯಾಕ್ಷರಾಣಿ ಪ್ರಯತ್ನ ಲಿಖಿತಾನ್ಯಪಿ ನಿಯತಮಸ್ಪಷ್ಟಾನಿ ಭವಂತಿ!"—ಎನ್ನುವನು. ಬ್ರಾಹ್ಮಣರೇ ಆಗಳಿನ ವಿದ್ವಾಂಸರೂ ಅಧಿಕಾರಿಗಳೂ ಆಗಿದ್ದರು. ಈಗಳಿಗೂ, ಅಧಿಕಾರಿಗಳಾದ ವಿದ್ವಾನ್ ಪದವೀಧರರು ಬರೆವ ಅಕ್ಷರಗಳು ಚಾಣಕ್ಯನ ಆ ಮಾತಿಗೆ ಪ್ರತಿವಾಗಿಗಳಾಗಿಲ್ಲ. ವಿದ್ಯೆಯೂ ಅಧಿಕಾರವೂ ಅತಿಶಯವಾಗುತ್ತ ಬಂದಂತೆ, ಅಕ್ಷರದ ಆಕಾರವೂ ವಿಕಾರಗೊಂಡಿತು! ಅಲ್ಲದೆ ಆಗಳಿನ ಕಾಯಸ್ಥರಿಗೆ ಬದಲು, 'ಕಾಪಿಯಿಂಗ್ ಪ್ರೆಸ್, ಟೈಪ್‌ರೈಟರ್, ಸ್ಟೆನ್ಸಿಲ್ ಪೇಪರ್' ಮೊದಲಾದುವು ಇದ್ದೇ ಇವೆ!! ಬ... ಪರೀಕ್ಷೆ (Handwriting Test)ಯೆಂತೂ ಆಯಿತೆ... ಎದ್ದೇ ಹೋಯಿತು!!!

ಪತ್ರಗಳಿಗೆ ಮುದ್ರೆಯನ್ನೊತ್ತುವ ವಾಡಿಕೆಯೂ ... ಇದ್ದಿತು. "ಆ ಚೀಟಿಯನ್ನೊಡೆ. ಅದರ ಮುದ್ರೆಗೆ ... ಭಂಗವು ಬಾರದಂತೆ ಜಾಗ್ರತೆ!"——ಎಂದು ಭಾಗುರಾ... ನೊಡನೆ ಮಲಯಕೇತುವೆನ್ನುವನು.— ["ಮುದ್ರಾರಾಕ್ಷ... ಪಂಚಮಾಂಕಂ].

ಇನ್ನು ಪತ್ರವಾಹಕರೊ? – ಈಗಳಿನ ಕಾಲದಂತೆ ... ಒಂದೊಂದು ಪತ್ರವನ್ನೊಯ್ಯಲು, ಒಬ್ಬೊಬ್ಬನು ... ಭೂಪ್ರದಕ್ಷಿಣೆಯ ಪುಣವುಳ್ಳ ಯಾತ್ರಿಕವಾದ 'ಕಾರ್ಡು... ಪ್ರಚಲಿತಗಳಾಗಿರುವ ನಮ್ಮ ದಿನಗಳಲ್ಲಿ, ಇದು ನ... ಆಶ್ಚರ್ಯ ವಿಷಯವೆಂದೇ ತೋರುವುದು. ಅಪ್ರಯೋ... ವಾದ ವಿಷಯ ಪ್ರೇಷಣಕ್ಕಾಗಿ ಆಗ ಪತ್ರಗಳನ್ನು ... ಯೋಗ ಮಾಡುತ್ತಿರಲಿಲ್ಲ; ಆದರೆ. ಈಗ? ಸಭ್ಯ ತರಗ... ಸಂಭಾವಿತ ಮನುಷ್ಯರಾದ ನಮಗೆ ಕ್ಷಣಕ್ಕೊಂದು ·ಕಾ... ವಿನಿಯೋಗವಾಗುವುದು! ಬಹಳ ಮಾಡಿ, ಕಾರ್ಡುಗ... ಪ್ರಯೋಜನವಾಗುವುದು ಕಡಮೆ; ಅವುಗಳ ವ್ಯಯ... ಹೆಚ್ಚು; ಗೌರವವೂ ತೊಲಗಿದೆ. ಆಗಳಿನ ಕಾಲ... ದೂತನು ಬಂದನೆಂದರೆ, ಎಲ್ಲರೂ ವಿಶೇಷ ಕುತೂಹಲ... ಅವನನ್ನು ನೋಡುವರು. ಪಾಪ! "ಬಹು ದೂರ ನ... ಅವನ ಕಾಲ್ಗಳು ಬಳಲಿವೆ. ಮೊಳಕಾಲ ವರೆಗೆ ಅವನ... ಚೆಯ ಅಂಚು ಕೆಸರಿನಿಂದ ತುಂಬಿದೆ! ಬೆನ್ನಮೇಲೆ, ...



ನ್ಯೂ ಥಿಯೇಟರ್ಸಿನವರ "ಮೇರಾಬಹೆನ್" ಚಿತ್ರದಿಂದ



ನ್ಯೂಥಿಯೇಟರ್ಸಿನವರ "ಮೇರಾಬಹೆನ... ಚಿತ್ರದಲ್ಲಿ ಸುಮಿತ್ರಾದೇವಿ



...ನೆಯು ಬಟ್ಟೆಯ ಸೆರಗಿನಲ್ಲಿ ದೋರಬದ್ಧವಾದ ಪತ್ರವೊಂದು ಭದ್ರಪಡಿಸಲ್ಪಟ್ಟಿದೆ"—["ಹರ್ಷ ಚರಿತ್ರಂ", ದ್ವಿತೀಯೋಚ್ಛ್ವಾಸಂ]

ಮತ್ತೊಬ್ಬ ಪತ್ರವಾಹಕನು "ಸೂರ್ಯನ ಕಾದ್ರದಿಂದ ಪಥಶ್ರಾಂತನಾಗಿರುವನು. ಓಡುವ ರಭಸಕ್ಕೆ ದೂಳೇಳುತ್ತದೆ; ಗಾಳಿಗೆ ಉತ್ತರೀಯವು ಹಾರಾಡುತ್ತಿದೆ; ನಿಶ್ವಾಸವು ಭಾರವಾಗಿದೆ; ಬೆವರಿನಿಂದ ಅವನ ಹಣೆ ತೊಯ್ದು ಹೋಗಿದೆ. ["ಹರ್ಷ ಚರಿತ್ರಂ", ಪಂಚಮೋಚ್ಛ್ವಾಸಂ]— ಪಾಪದವನ ಕೈಯ್ಯಲ್ಲಿ ಕಿನಿಲು ಕಿನಿಲೆನ್ನುವ ಗೆಜ್ಜೆಯ ಕೋಲಾಗಲಿ, ನೆತ್ತಿಯ ಮೇಲೆ 'ಪಾರ್ಸೆಲ್'ಗಳ ಮೂಟೆಯಾಗಲಿ, ಸೊಂಟದಲ್ಲಿ ಹಿತ್ತಾಳಿಯ ಮುದ್ರೆಯುಳ್ಳ 'ಬೆಲ್ಟಾ'ಗಲಿ ಇಲ್ಲ; ಅಥವಾ ಆಯ್ಪುಯ್ದು ಮೈಲಿಗೆ ಬೇರೊಬ್ಬನು ಬಂದು ಅವನ ಭಾರವನ್ನು ವಹಿಸುವುದಿಲ್ಲ. ಜನರಿದಿರಲ್ಲಿ ಓಡೋಡಿ, ಮರೆಯಾಗುತ್ತಲೆ ವಿಶ್ರಮಿಸಿಕೊಳ್ಳುವುದೂ ಇಲ್ಲ; ಮೇಲಾಗಿ, ಬಲಾತ್ಕರಿಸುವುದಕ್ಕೆ ಆವ 'ಓವರ್ಸೀಯರೂ' ಇಲ್ಲ. ಈ ಕಾರಣಗಳಿಂದ, ಪಾಠಕರು ಪುರಾತನ ಪತ್ರವಾಹಕನಿಗೆ ಬರ್ಬರನೆಂದಾಗಲೀ, ಮಡೆಯನೆಂದಾಗಲೀ, ನಾಮಕರಣ ಮಾಡಲಾಗದು.

ಪ್ರತಿಯೊಂದಕ್ಕೂ ಸಂಸ್ಕೃತ ಸಾಹಿತ್ಯದಲ್ಲಿ "ಶಾಸ್ತ್ರ" ನೇರ್ಪಟ್ಟಿರುವುದು. ಅಂತೆಯೆ, ಪತ್ರಲೇಖನಕ್ಕೂ ಒಂದು ದೊರೆದಿರುವುದು. ಲೇಖನ ಕ್ರಮ, ಪತ್ರದ ಆಕಾರ, ಉಪಕರಣ,—ಇತ್ಯಾದಿ ವಿಷಯಗಳನ್ನು ಈ ಗ್ರಂಥವು ಪ್ರತಿಪಾದಿಸುವುದು. ಇದು ವರರುಚಿಯಿಂದ ರಚಿಸಲ್ಪಟ್ಟುದು; ಹೆಸರು 'ಪತ್ರ ಕೌಮುದಿ". ವರರುಚಿಯು ಶಕಪುರುಷನಾದ ವಿಕ್ರಮಾದಿತ್ಯನ ಸಭಾಸದನೂ, ನವರತ್ನಗಳಲ್ಲಿ ಒಬ್ಬನೂ ಆಗಿದ್ದನೆಂದೂ ತಿಳಿಯಬರುತ್ತಿದೆ.

ಆಕಾರ ವಿಷಯದಲ್ಲಿ ಪತ್ರಗಳು ಉತ್ತಮ, ಮಧ್ಯಮ, ಸಾಮಾನ್ಯಗಳೆಂಬ ಮೂರು ಭೇದಗಳನ್ನೊಳಗೊಂಡಿವೆ; ಮೂರರ ಆಕಾರವೂ ಬೇರೆ ಬೇರೆ.—"ಷಡಂಗುಲಾಧಿಕಂ ಹಸ್ತಂ ಪತ್ರಮುತ್ತಮಮೀರಿತಮ್ । ಮಧ್ಯಮಂ ಹಸ್ತಮಾತ್ರಂ ಸ್ಯಾತ್ಸಾಮಾನ್ಯಂ ಮುಷ್ಟಿಹಸ್ತಕಮ್ ॥"—ಎಂದು ವರರುಚಿ ಹೇಳಿರುವನು. ಈಗಳಿನ ಕಾಲದಲ್ಲಿ ಈ ಬಗೆಯ ಆಕಾರವು ಹಾಸ್ಯಾಸ್ಪದವಾಗಬಹುದು. ಆದರೆ, ಸರಕಾರೀ ಪತ್ರಗಳೆಲ್ಲವೂ ಇಂದು ಅದೇ ಬೃಹದಾಕಾರದ 'ಲಕ್ಕೋಟೆ'ಯಲ್ಲಿಯೇ ಬರುತ್ತಲಿವೆ! ಈಗಣವರಂತೆ, ದಿನಕ್ಕೆ ಅಯ್ವತ್ತು ಪತ್ರಗಳನ್ನು ಆಗ ಬರೆಯುತ್ತಿರಲಿಲ್ಲ. ಅತಏವ ಆಕಾರವು ಹೇಗೆ ಬಳೆದಿದ್ದಿತೋ ಪತ್ರಲೇಖನ ಪ್ರಕಾರವೂ ಹಾಗೆಯೇ ವಿಸ್ತೃತವಾಗುತ್ತಿದ್ದಿತು.

ಪತ್ರವನ್ನು ಮೂರು ಭಾಗಗಳಾಗಿ ಮಡಿಸಬೇಕಾಗಿದ್ದಿತು. ಮೇಲಣ ಎರಡು ಭಾಗಗಳನ್ನು ಹಾಗೆಯೆ ಬಿಟ್ಟು, ಕೆಳಗಣ ಭಾಗದಲ್ಲಿಯೇ ಕೇವಲ ಗದ್ಯ, ಕೇವಲ ಪದ್ಯ ಅಥವಾ ಗದ್ಯಪದ್ಯಾತ್ಮಕವಾಗಿ ಬರೆಯಬೇಕಾಗಿದ್ದಿತು. ಈ ವಿಷಯದಲ್ಲಿ, ವರರುಚಿಯು — "ಪತ್ರಸ್ತು ತ್ರಿಗುಣೀಕೃತ್ಯ ಊರ್ಧ್ವದ್ವಿಗುಣಮುತ್ಸೃಜೇತ್ । ಶೇಷಭಾಗೇ ಲಿಖೇದ್ವರ್ಣಾನ್ ಗದ್ಯಪದ್ಯಾದಿ ಸಂಯುತಾನ್ ॥"—ಎಂದು ಹೇಳಿರುವನು.

ಪತ್ರದ ಅಗ್ರಭಾಗದಲ್ಲಿ ಮಂಗಲಸೂಚಕವಾದ ಅಂಕುಶದಂತಹ ಚಿಹ್ನವೊಂದನ್ನು ಬರೆಯಬೇಕಾಗಿದ್ದಿತು. ಮಧ್ಯದಲ್ಲಿ ಬಿಂದುವೂ, ನಿಮ್ನ ಭಾಗದಲ್ಲಿ ಸಪ್ತಾಂಕ (೭)ವೂ ಬರೆಯಲ್ಪಡುತ್ತಿದ್ದಿತು. ಅದರ ಕೆಳಗೆ, "ಸ್ವಸ್ತಿ" ಎಂಬ ಶಬ್ದ. ಆ ಮೇಲೆ ಬಂಧುರವಾದ ಒಂದು ಗದ್ಯ. ಅನಂತರ— "ಷಡ್ಗುರೋಃ ಸ್ವಾಮಿನಃ ಪಂಚದ್ವೇಭೃತ್ಯೇ ಚತುರೋ ರಿಪೌ । "ಶ್ರೀ" ಶಬ್ದಾತಾಂತ್ರಯೋ ಮಿತ್ರೇಽಪ್ಯೇಕೈಕಂ ಪುದ್ರಭಾರ್ಯಯೋಃ ॥"— ಎಂಬ ರೀತಿಯಲ್ಲಿ ಭಾಗ್ಯಸೂಚಕವಾದ "ಶ್ರೀ"ಯೆಂಬಕ್ಷರವನ್ನು ಬರೆವುದು.

"ಆರೆಲ್ಲ ಹೇಗೆ ಇದ್ದಾರೆ?" ಎಂಬುದನ್ನು ಸಂಸ್ಕೃತದಲ್ಲಿಯಾಗಲಿ, ಪ್ರಾಕೃತದಲ್ಲಿಯಾಗಲಿ, ಬರೆದು ಮುಗಿಯಿಸಿ, ಅನಂತರ—'ತಾಜಾ ಕಲಂ'. ಆವ ಕಾರಣದಿಂದ ಪತ್ರವು ಪ್ರೇರಿತವಾಯ್ತೆಂಬ ವಿಶೇಷ ವಿವರಣೆ, ಕೊನೆಗೆ ಯಶಸ್ಸೂಚಕವಾದ, ಪ್ರೀತಿಸೂಚಕವಾದ ಒಂದು ಪದ್ಯ. "ಕಿಮಧಿಕಮಿತಿ", "ಅಲಮತಿ ವಿಸ್ತರೇಣ"—ಇತ್ಯಾದಿ ವಾಕ್ಯಗಳಿಂದ ಪತ್ರಸಮಾಪ್ತಿ. ಪ್ರತಿಯೊಂದು ಪತ್ರದಲ್ಲಿಯೂ ಮಾಸ, ವಾರ, ಮೊದಲಾದುವನ್ನು ಸೂಚಿಸುವ ಶ್ಲೋಕವೊಂದು ಬರೆಯಲ್ಪಡುವುದು.

ವಿವಾಹಾದಿ ಆಮಂತ್ರಣ ಪತ್ರಗಳು ಈಗಳಿನ ಕಾಲದಲ್ಲಿ ನಾನಾ ವರ್ಣರಂಜಿತವಾಗುವುದುಂಟು. ಆಗಳಿಗೂ ಹಾಗೆಯೇ ಸ್ವರ್ಣ-ರೂಪ್ಯ-ತಾಮ್ರವರ್ಣಗಳಿಂದ ಯಥಾಕ್ರಮವಾಗಿ ಉತ್ತಮ-ಮಧ್ಯಮ-ಸಾಮಾನ್ಯ ಪತ್ರಗಳು ಶೋಭೆಯನ್ನು ಹೊಂದುತ್ತಿದ್ದುವು.

ಪಾಶ್ಚಾತ್ಯರ ಶೋಕಸೂಚಕ (Mourning) ಪತ್ರಗಳಿಗೆ ಕಪ್ಪು ಗೆರೆಗಳಿರುವಂತೆ ವಿಶೇಷ ಪತ್ರಗಳಿಗೆ ಈಗ ಚಿಹ್ನೆಗಳಿವೆ. ಈ ಪದ್ಧತಿ ಆಗಳಿಲ್ಲ. ಆದರೂ, ಬೇರೆಯ ಬಗೆಯ ಗುರುತುಗಳಿದ್ದುವು. ಈಗಳಿನ "O. H. M. S." ಎಂಬುದರ ಬದಲಿಗೆ, ಆಗಳಿನ ಕಾಲದ ಅರಸನ ಪತ್ರದ ಮೇಲ್ಗಡೆಯಲ್ಲಿ, ಆರು ಬೆರಳುಗಳ ಸ್ಥಳವನ್ನು ಬಿಟ್ಟು, ಮಧ್ಯೆದಲ್ಲಿ ಕಸ್ತೂರೀ ಕುಂಕುಮಶೋಭಿತವಾದ ಚಂದ್ರಮಂಡಲದಂತಹ ಒಂದು ಚಿಹ್ನವಿದ್ದಿತು. ಮಂತ್ರಿಯ ಪತ್ರದಲ್ಲಿ ಚಂದನ ಬಿಂದು—ಪತ್ನಿಯು ಪತಿಗೆ ಬರೆವುದಾದರೆ, ಸಿಂದೂರದ ಒಂದು ಗೋಲಚಿಹ್ನ. ಪತ್ನಿಗೆ ಬರೆವುದಾದರೆ ಅಲಕ್ತದ, ಭೃತ್ಯನಿಗೆ ರಕ್ತಚಂದನದ, ಶತ್ರುವಿಗೆ ರಕ್ತದ ಗೋಲಾಕಾರದ ಚಿಹ್ನಗಳು ಇರುತ್ತಿದ್ದುವು.

'ಸ್ಟಾಂಪ'ನ್ನಂಟಿಸಿದ ಪತ್ರಗಳನ್ನು 'ಕೋರ್ಟು ಕಚ್ಚೇರಿ'ಗಳಲ್ಲಿ ಕೊರೆ(Punch)ವಂತೆ, ಪ್ರಾಚೀನ ಕಾಲದಲ್ಲಿಯೂ, ಅರಸನ ಪತ್ರದ ಬಲಗಡೆಯ ಕೆಳಗಣ ಮೂಲೆಯಲ್ಲಿ ಒಂದಂ

ಗುಲದಷ್ಟು ತುಂಡನ್ನು ಹರಿದುಬಿಡುವ ವಾಡಿಕೆಯಿದ್ದಿತು. ಈ ವಿಷಯವಾಗಿ, ವರರುಚಿಯು—"ದಕ್ಷಿಣೇ ಪತ್ರಸೋಣಸ್ಯ ಅಧಸ್ತಾಚ್ಛೇದ ಯೇತ್ಸುಧೀಃ । ಏಕಾಂಗುಲ ಪ್ರಮಾಣೇನ ರಾಜಪತ್ರಸ್ಯ ಚೈವ ಹಿ ॥" ಎಂದೂ ಹೇಳಿರುವನು.

ಪತ್ರವನ್ನೊಯ್ಯುವ ನಿಯಮುಗಳು ವಿವಿಧವಾಗಿದ್ದುವು. ಅಂಚೆಯುವನೂ ಚರ್ಮದ ಚೀಲವೂ ಇರಲಿಲ್ಲವಾಗಿ, ಪತ್ರ ವಾಹಕರು ಕೆಲವು ಸೂತ್ರಗಳನ್ನು ವಿಧೇಯತೆಯಿಂದ ಅನುಸರಿಸಬೇಕಾಗಿದ್ದಿತು. ಪೂಜನೀಯರ ಪತ್ರಗಳನ್ನು ತಲೆಯಲ್ಲಿರಿಸಿಕೊಂಡೊಯ್ಯುವರು, ಅನ್ಯ ಪತ್ರಗಳನ್ನು ಸೆರಗಿನಲ್ಲಿ ಕಟ್ಟಿಕೊಳ್ಳುವರು. ಪಠನ ನಿಯಮುವೂ ಹಾಗೆಯೇ. ತಮಗಿಂತಲೂ ಅಧಿಕ ಗೌರವಿಗಳ ಪತ್ರಗಳನ್ನು ಮೊದಲು ನಮಸ್ಕರಿಸಿ, ತರುವಾಯ ಒಡೆದು ಓದುವರು. ಇದರಿಂದ ಪತ್ರ ವಾಹಕನಿಗೂ ಸನ್ಮಾನವಾಗುತ್ತಿದ್ದಿತು. ತನ್ನ ತಂದೆಯ ಪತ್ರವನ್ನು ಚಂದ್ರಾಪೀಡನು—"ಶಿರಸಿಕೃತ್ವಾ ಸ್ವಯಮೇವ ಶತದುನ್ಮುಚ್ಯ ಕ್ರಮಶಃ ಪಪಾಠ"—ಎಂದು ಕಾದಂಬರಿಯಲ್ಲಿರುವುದು. ಭಾರ್ಯೆಯು, ಪುತ್ರನ, ಮಿತ್ರನ ಪತ್ರಗಳನ್ನು ಹೃದಯದೇಶಕ್ಕೂ, ವೀರರ ಪತ್ರಗಳನ್ನು ಕಂಠದೇಶಕ್ಕೂ ಸ್ಪರ್ಶಮಾಡಿಸುವರು. ಈ ವಿಷಯವಾಗಿ, ವರರುಚಿಯು—'ಭಾರ್ಯಾ ಪುತ್ರಸ್ಯ ಮಿತ್ರಸ್ಯ ಹೃದಯೇ

ಧಾರಯೇತ್ಸುಧೀಃ । ಪ್ರವೀರಾನಾಂ ಕಂಠದೇಶೇ ಪತ್ರ
ರಣ ಮಿೂರಿತಮ್".

ಬರೆವ ವಿಧಾನವೂ ವಿಸ್ತೃತವಾದುದು. ಸಾಮಾ
ಪತ್ರವ್ಯವಹಾರ—ಸಂಪಾದಕರು ಹೇಗೂ "ಬಾತಮಿೂದಾ
ಅಭಿಪ್ರಾಯಕ್ಕೆ ನಾವು ಹೊಣೆಯಲ್ಲ"ವೆಂದು ಮೊ
ಪ್ರಕಟಿಸಿಬಿಡುವರು!—ವಿಶೇಷ ವಿಶ್ವಸನೀಯವಲ್ಲ. ಪರಂ
ಒಬ್ಬ ರಾಜನು ಮತ್ತೊಬ್ಬನಿಗೆ ಪತ್ರವನ್ನು ಬರೆವಾಗ,
ರಿಂದ ಸಂಧಿ ವಿಗ್ರಹಾದಿಗಳುಂಟಾಗುವುವೆಂದು, ಬರೆದ
ಮೇಲೆಯೆ ಅದರ ಉತ್ತರವಾದಿತ್ವವನ್ನು ಹೊರಿಸುತ್ತಿದ್ದರ
ಕಾರಣ, ಎಷ್ಟೋ ಸಾವಧಾನವಾಗಿ ಅಂತಹ ಪತ್ರಗಳ
ಬರೆಯಬೇಕಾಗಿದ್ದಿತು. ಆವ ಲೇಖಕನು ಉಪಯು
ರೀತಿಯಲ್ಲಿ ಸುನಿಪುಣ ಪದವಿನ್ಯಾಸದೊಡನೆ ಪತ್ರಗಳ
ಬರೆಯ ಬಲ್ಲನೋ ಅಂತಹನನ್ನು ಮಂತ್ರಿಗಳೂ ಮಾನಿಸು
ದ್ದರು. ಲೇಖಕನನ್ನು ರಾಜನು ಗದ್ಯ ಪದ್ಯಾತ್ಮಕವ
ಪತ್ರವೊಂದನ್ನು ಬರೆವಂತೆ ಆಜ್ಞಾಪಿಸುವನು. ಅವನು ನಿಜ
ಸ್ಥಾನದಲ್ಲಿ, ಹಲವು ಪಂಡಿತರೊಡನೆ ವಿಚಾರದಿಂದ ತ
ವಿಸ್ಮೃತಿ ಭ್ರಮೆಗಳನ್ನು ದೂರವಮಾಡಿ, ಅದನ್ನು ಪತ್ರ ಪುಸ್ತ
ದಲ್ಲಿ ಬರೆದಿಡುವನು. ಈ ಪತ್ರ ಪುಸ್ತಕವೇ ಈಗ
"Correspondence Book"!. ಅದನ್ನು 'ನಕ
ತೆಗೆದು, ನಿರ್ಜನಸ್ಥಾನದಲ್ಲಿ ರಾಜನಿಗೆ ಓದಿಹೇಳಿ, ಒಪ್ಪು
ಯಾದರೆ, 'ತಾಜಾ ನಕಲ'ನ್ನು ಬರೆದು ಕಳುಹಿಕೊಡುವನು

ಅಷ್ಟೇ ಅಲ್ಲ! ಆರಾರನ್ನು ಹೇಗೆ ಹೇಗೆ ಸಂಬೋ
ಬೇಕೆಂಬ ನಿಯಮುವೂ, ಅದನ್ನು ಬರೆವ ವಿಧಾನಗಳೂ "ಪ
ಕೌಮುದಿ"ಯಲ್ಲಿವೆ. ಅರಸನಿಗೆ "ಮಹಾರಾಜಾಧಿರಾ
ದಾನಶೀಲ, ಕಲ್ಪವೃಕ್ಷತುಲ್ಯ" ಇತ್ಯಾದಿ ಪದಗಳೂ, ಮಂತ್ರಿ
"ಸಚ್ಚರಿತ", ಪಂಡಿತನಿಗೆ "ಶಾಸ್ತ್ರಾರ್ಥ ನಿಪುಣ", ಗುರುಃ
"ಸಾಂಖ್ಯ ಸಿದ್ಧಾಂತ ನಿಪುಣ"—ಇತ್ಯಾದಿ ಪದಗಳೂ ಉ
ಯುಕ್ತವೆಂದು ತಿಳಿಯಬರುತ್ತಿದೆ. ಪತ್ರಪ್ರಾರಂಭವು ಲಂ
ವಾಗಿ, ಪಾಠಕರು ಅದನ್ನು ಓದುತ್ತಿರಲಿಲ್ಲವೋ ಎಂ
ಸಂದೇಹವಾಗುವುದು. ನಾವಾದರೆ, ಅದನ್ನು ಓದುತ್ತಿದ್ದ
ತೆಯೇ ಕಂಗೆಟ್ಟು ಹೋಗುವೆವು. ಈ ಗದ್ಯವನ್ನು ನೋಡಿ

॥ ಸ್ವಸ್ತಿ ಗೀರ್ವಾಣಚಯ ಚೂಡಾರತ್ನ ರಾಜಿ
ಚಿಶ್ಚಸ್ಪಿತ ಚಂದ್ರಚೂಡಚರಣನಲೀಂದು ವೃಂದ ಚಂದ್ರಿ
ಸಂದೋಹಾಸ್ವಾದ ಚತುರಚೇತಶ್ಚಕೋರವರ ವಿಷಮುಸಮ
ಪಂಚರತ್ನಬಲತರತುರಗಪುಟಪಟಲದಲಿತಭೂಪೃಷ್ಠೋ
ತ್ತಿಷ್ಠದ್ಭೂಯಿಷ್ಟ ಧೂಲೀಧಾರಾಧೂಸರಿತಸ ಕಲಹರಿದ
ಪ್ರಚಂಡಭುಜದಂಡ ಭ್ರಾಜಮಾನ ಖರತರಾಸಿ ವಿತ್ರಾ
ಪ್ರತ್ಯರ್ಥಿ ಪೃಥ್ವೀಪತಿ ಸಾರ್ಥಪ್ರಾರ್ಥಿತಾನುಕಮ್ಪಾಸು
ಸಮ್ಪಾತಾಸವರತ್ ವಿದ್ವದ್ದಾರಿದ್ರ್ಯ ವಿದ್ರಾವಣದ್ರವಿಣದಾ
ವಿಶ್ರಾವಣ ಸಮುಪಾರ್ಜಿತೋರ್ಜಿತ ಯಶೋಮರಾಲಾವ

ಜ್ವಲಿತನಲಿದಧೀಚಿಸಂಚಿತ ಸದ್ಯಶೋವ್ಯಣಾಲಜಾಲ ಭೂಪಾಲ ಕುಲತಿಲಕ ಶ್ರೀಯುತ ಮಹಾರಾಜಾಧಿರಾಜೇಷು॥

ಪ್ರಸಾಕ್ಷರಗಳೂ ಒತ್ತಕ್ಷರಗಳೂ ಗುಂಪುಗೂಡಿ, ರುಷ್ಯದ ಕೊಸ್ಸೆಸ್ ಸೈನ್ಯದಂತೆ, — ಅಬ್ಬಬ್ಬ! — ಇದನ್ನೂ ಓದುವರಿದ್ದಿರಬಹುದೆ? ಪರಂತು, ಇದು ಅಗತ್ಯವಾಗಿಯೂ ಪತ್ರದ ಅಂಗ ತೊದಲ್ನುಡಿಯು ನಾಲಗೆ ತಡೆಯುಳ್ಳವರ ವಿಕೃತಿಗೆ ಇದನ್ನೊಮ್ಮೆ ತಡೆಯದೋದುವುದೇ ಚಿಕಿತ್ಸೆಯೆಂದು ದೂರದಿರಿ! ಬಲ್ಲವರೇ ಅರಿವರು ಬೆಲ್ಲದ ಸವಿಯನ್ನು!

ಈಗಳಿನ ಮತ್ತೂ ಆಗಳಿನ ಪತ್ರಗಳಲ್ಲಿ ಪ್ರಭೇದವಿಷ್ಟೇ; ಆಕಾರ ಮತ್ತು ಆಡಂಬರ ಪ್ರಾಚೀನ ಕಾವ್ಯಗಳುದ್ದ; ಪ್ರಾಚೀನ ಗುಹೆಗಳು ವಿಶಾಲ; ಪ್ರಾಚೀನ ಮಂದಿರಗಳು ವಿರಾಟ್ಸ್ಥೂಲ—ಅಂತೆಯೆ ಪ್ರಾಚೀನ ಪತ್ರಗಳೂ ಬೃಹದಾಕಾರ. ಒಂದು ಶ್ಲೋಕವನ್ನು ರಚನಮಾಡುವುದರಲ್ಲಿ ಎಷ್ಟೋ ನೈಪುಣ್ಯವು ಆಗ ಅಡಗಿದ್ದಿತು. ಪ್ರಕಾಂಡ ಗಿರಿಶಿಖರಗಳನ್ನೂ ಖಂಡಿಸುವ ಅತುಲಶಕ್ತಿಯು ಆಗಳಿನ ಶಿಲ್ಪಿಗಳ ಹೊಡೆತದಲ್ಲಿದ್ದಿತು. ಅಂತೆಯೆ, ಪತ್ರಲೇಖನದಲ್ಲಿಯೂ ಈಗಳಿಗೆ ಹತ್ತು ಪಾಲು ಪರಿಶ್ರಮವೂ ಸಮಯವೂ ಆಗಬೇಕಾಗಿದ್ದಿತು. ಗಳಿಗೆ ಗಳಿಗೆಗೂ, ಆಗ, ಪತ್ರಗಳ ಪ್ರೇರಣವಿರಲಿಲ್ಲ. ಆವುದನ್ನು ಅಪರೂಪವಾಗಿ ಬರೆಯುತ್ತಿದ್ದರೋ, ಆವುದನ್ನು ಕಳುಹಲು ಬಹು ಧನವು ವಿನಿಯೋಗಿಸಲ್ಪಡುತ್ತಿದ್ದಿತೊ, ಅಂತಹ ಆ ಪತ್ರದ ಶೋಭೆಯನ್ನು ಹೆಚ್ಚಿಸಲು ಇಷ್ಟು ಪರಿಶ್ರಮವನ್ನು ಅನುಭವಿಸುತ್ತಿದ್ದುದೇನೂ ವಿಚಿತ್ರವಲ್ಲ. ಆಡಂಬರ ಪೂರ್ಣವಾದ ವಾಕ್ಯ ವಿನ್ಯಾಸ ಸಾಮಾನ್ಯ ಪತ್ರಗಳಲ್ಲಿ ಬೇಡನಾಗಿದ್ದರೂ, ಅದು ರಾಜಕೀಯ ಪತ್ರಗಳಲ್ಲಿ ಅಪರಿಹಾರ್ಯವಾದುದು. ಈಗಳಿನ 'ದಸ್ತಾವೇಜು'ಗಳಲ್ಲಿ ಮೇಲ್ಪಂತಿಯಾಗಿ ಬರೆವ ವಾಕ್ಯಗಳಿವೆಯಷ್ಟೆ! ಪ್ರಾಚೀನ ಕ್ರಮವೂ ಈಗಳಿನ ವಾಕ್ಸರಣೆಯ ಪೂರ್ವಾಧಿಕಾರಿ ಮಾತ್ರ. 'ಒಫಿಸಿಯಲ್' ಪತ್ರಗಳನ್ನೊಮ್ಮೆ ನೋಡಿದರೆ, ಇದು ಇನ್ನಷ್ಟು ಸ್ಪಷ್ಟವಾಗಬಹುದು.

ವೃಕ್ಷ ಪತ್ರಗಳೂ ಪತ್ರಲೇಖನಕ್ಕೆ ಸಾಮಾನ್ಯವಾಗಿ ಉಪಯೋಗಿಸಲ್ಪಡುತ್ತಿದ್ದುದರಿಂದ, ಈಗಲೂ ನಾವು 'ಕಾಗದ'ಗಳಿಗೆ 'ಪತ್ರ'ಗಳೆನ್ನುವೆವು. ಕಾಲಪತ್ರ(ಓಲೆ)ಗಳ ಮೇಲೆ ಬರೆದ ಗ್ರಂಥಗಳಂತೂ ಇನ್ನೂ ಇವೆ.

ಅಂತಹ ದಿನಗಳೇ ಬಾರದಿರಲಿ! ಸರಕಾರವು ಅಂಚೆಯ ಮನೆಗಳನ್ನು ನಿರ್ಮೂಲ ಮಾಡಿಬಿಟ್ಟರೆ, ಹಳ್ಳಿಯ ದಾರಿಯಲ್ಲಿ ಭೃಂಗ ಝುಂಕಾರದಿಂದೋಡುವ 'ರನ್ನರ'ರ ಕಿನ್ನರಿಯಿನ್ನಿರದೆ ಹೋಗುವುದು; ವಿರಹಾತುರೆಯಾದ ಪತ್ನಿಯು ದೂರದೇಶವನ್ನೆಯ್ದಿದ ನಿಜಪತಿಯ ಪತ್ರಗಳನ್ನು ಪಡೆವ ಆಸೆಗೆ ಜಲಾಂಜಲಿ ಬಿಡುವಳು; ವಾಣಿಜ್ಯದ ವಿಶಾಲ ಸಾಮ್ರಾಜ್ಯವು ಜರ್ಝರಿತವಾಗುವುದು; ಪ್ರತಿಯೊಂದು ಗ್ರಾಮವೂ ಬಹಿಃಪ್ರಪಂಚವನ್ನು ಮರೆಯುವುದು; ಇನ್ನು, ರಸಿಕರಾದರೋ, ಹೊಸ ಮೋಡಗಳನ್ನು ಕಂಡು,—"ಪ್ರಯೋದ! ಪ್ರಿಯಾಯಾಃ ಸಂದೇಶಂ ಮೇ ಹರ!"—ಎಂದು, ಕಾಳಿದಾಸನ "ಮೇಘದೂತ" ಕಾವ್ಯದ ಯಕ್ಷನೊಡನೆ ಸಹಾನುಭೂತಿಯನ್ನು ಪ್ರದರ್ಶಿಸುವರು. ಆದರೆ, ಇದೆಲ್ಲವೂ ಬರಿದೆ ಕಲ್ಪನೆಯಷ್ಟೆ?

ಇದುವೆ, ಪ್ರತ್ಯಕ್ಷ ವ್ಯವಹಾರದ ಕಾಲ! ಜೀವನದ ಗಭೀರತೆಯೆಲ್ಲರಿಗೂ ತಿಳಿದೇ ಇದೆ;—ಶಕುಂತಲಾ-ಕರ್ಪೂರ ಮಂಜರಿಯರು ನಾಟಕಗಳಲ್ಲಿನ ನಾಯಿಕೆಯರು ಮಾತ್ರ-ಮಾನವನ ಮನಸ್ಸೇನೋ ಮೊದಲಂತೆಯೆ ಇದೆ. ಆದರೂ, ಕಾಲವಶವಾಗಿ, ಅದರ ವಿಕಾಸವು ಮಾತ್ರ ಬೇರೆಯ ಬಗೆಯಾಗಿದೆ. ಪ್ರಾಚೀನ ರೀತಿಯ ಪತ್ರಗಳು ಈಗ ಇಲ್ಲ; ಅಂತವುಗಳ ಆಕಾರಾಡಂಬರಗಳಿಗೂ ಈ ಇಪ್ಪತ್ತನೆಯ ಶತಮಾನದ ನಮಗೂ ಗಂಟಿಲ್ಲ. ಇದೇನುತ್ಪಾತ! ಕೇವಲ ಆ ಹಳೆಯ ಪತ್ರಗಳನ್ನು ಕುರಿತು ಬರೆವೆನೆಂದೇ, ಅವುಗಳಂತೆಯೆ ಈ ಉಲ್ಲೇಖವು ದೀರ್ಘವೂ ಆಡಂಬರಪೂರ್ಣವೂ ಆಗಿ ಹೋಯಿತಲ್ಲ? ಇದರಿಂದಲೇ ಆ ಹಳೆಯ ಪತ್ರಗಳ ಪರಿಚಯವು ವಾಚಕರಿಗೆ ಆಗದೆ ಇರದೆಂದು ನೆರೆನಂಬುವೆನು. ಅಲಮತಿ ವಿಸ್ತರೇಣ!

—oo—

ಶ್ಲೋ॥ ಹಾರಂ ವಕ್ಷ ಸೀತೇನಾಪಿದತ್ತಮಜ್ಞೇನ ಮರ್ಕಟಃ।
ಲೇಧಿ ಚಿಘ್ರತಿ ಸಂಕ್ಷಿಪ್ಯ ಕರೋತ್ಯುನ್ನತ ಮಾಸನಂ॥

ತಾತ್ಪರ್ಯ: ಯಾರಾದರೂ ಮಂಗನ ಕೊರಳಲ್ಲಿ ಮಣಿ ಹಾರವನ್ನು ಹಾಕಿದರೆ ಅದನ್ನು ನೆಕ್ಕಿ ಕಚ್ಚಿ ಮೂಸಿ ಕಿತ್ತು ಉಂಡೆ ಮಾಡಿ ತಿಕದ ಕೆಳಗಿಟ್ಟುಕೊಳ್ಳುವದು.



ಮಿ। ಎಮ್. ಹವೇಲಿವಾಲಾ
("ಬೈರಾಮ್‌ಖಾನ್" ಚಿತ್ರದ ನಿರ್ಮಾತೃ)

ಉಡುಪಿಯ ಶ್ರೀ ಕೃಷ್ಣ ಮಠದಲ್ಲಿ
ಸಾರಸ್ವತರನ್ನು ಕುರಿತು ಎರಡು ಶಾಸನಗಳು

ಲೇಖಕರು: ಶ್ರೀ। ಗೋವಿಂದ ಪೈ.

ಉಡುಪಿಯ ಶ್ರೀ ಕೃಷ್ಣಮಠಕ್ಕೆ ಮೂವರು ಸಾರಸ್ವತ ಬ್ರಾಹ್ಮಣ ಮಹನೀಯರು ಉಂಬಳಿಬಿಟ್ಟ ವಿವರವಿರುವ ಎರಡು ಶಾಸನಗ ಕುರಿತು ಶ್ರೀ। ಗೋವಿಂದ ಪೈಯವರು ಇಲ್ಲಿ ವಿಚಾರ ಮಾಡಿರುತ್ತಾರೆ. ಇತಿಹಾಸದ ಅರಿವು ಜನಾಂಗಗಳಲ್ಲಿ ಪರಸ್ಪರ ಅನ್ಯೋನ್ಯಭಾ ಸ್ನೇಹಸಂವರ್ಧನೆಗೂ ಸಹಾಯಕವಾಗುತ್ತದೆ. ಶ್ರೀ। ಪೈಯವರ ಈ ಸಂಶೋಧನೆಯೂ ವರ್ಗ–ವರ್ಗಗಳೊಳಗೆ ತಿಳಿಯಾದ ಉಂಟಾಗಲೆಂಬ ಉದ್ದೇಶದಿಂದ ಇದೆ ಎಂದು ನಾವು ಭಾವಿಸುತ್ತೇವೆ. ಶ್ರೀ। ಪೈಯವರು ಯಾವ ವಿಷಯವನ್ನೇ ಆಗಲಿ, ಕಂಡು-ತಿ ತೂಗಿ-- ಖಚಿತಗೊಂಡೇ ಬರೆವವರು. ಅವರ ಶಾಸ್ತ್ರೀಯ ಅನ್ವೇಷಣೆಯ ಫಲಗಳಿಗೆ ಈ ಲೇಖವು ಒಂದು ಅಮೂಲ್ಯ ಕೂಡಿಕೆಯಾಗಿದೆ.

ವಿಜಯ ನಗರದ ಕೊನೆಯದಾದ ಅರವೀಡು ವಂಶದ II ವೀರ ವೆಂಕಟಪತಿ ಮಹಾರಾಜನು (ಕ್ರಿ. ಶ. 1586–1614) ಪೆನುಕೊಂಡದಿಂದ ಆಳುತಿದ್ದಾಗ (ಬಂತಿ ೪-೫), ಆತನ ಸಾಮ್ರಾಜ್ಯದಲ್ಲಿ ಒಳಪಟ್ಟ ತುಳುರಾಜ್ಯ –ಮಲೆರಾಜ್ಯಗಳನ್ನು ಅವನ ಆಜ್ಞಾಧಾರಕನಾಗಿ ಕೆಳದಿಯ ಅರಸನಾದ I ವೆಂಕಟಪ್ಪ ನಾಯಕನೂ (ಕ್ರಿ. ಶ. 1582–1629) ಈತನ ಕೈಕೆಳಗೆ ಬಾರಕೂರ ಪ್ರಾಂತವನ್ನು ಚಿನ್ನಭಂಡಾರದ ಪೋಬರಸಯ್ಯನ ಮಗ ರಾಮಕೃಷ್ಣಪ್ಪ ಒಡೆಯನೂ[೧] (ಬಂ. ೧೨-೧೩) ಪಾಲಿಸುತ್ತಿದ್ದಾಗ, ಶ್ರೀ ಹಯಗ್ರೀವ ದೇವರ ದಿವ್ಯ ಪಾದ ಪದ್ಮಾರಾಧಕರೂ ಶ್ರೀ ವಾದಿರಾಜ ತೀರ್ಥರ ಕರಕಮಲ ಸಂಜಾತ, ಅಂದರೆ ಶಿಷ್ಯರೂ, ಆದ ಶ್ರೀ ವೇದವೇದ್ಯ ತೀರ್ಥರು (ಬಂ. ೭–೮) 'ತಂಮ ಪೂಜಾ ಪರಿಯಾಯದಲ್ಲಿ ಉಡುಪಿನ[೨] ಶ್ರೀ ಕ್ರುಷ್ಣ ದೇವರ ಮಠಊ ಮೊದಲೆ ಮುರಗೆಲಸ ಯಿರಲಾಗಿ ಶ್ರೀ ಕ್ರುಷ್ಣ ದೇವರನೂ ಹೊರಮುಂಟಪಕೆ ಮಾಡಿಸಿ, ಅಲ್ಲಿಯೂ ದೇವರ ಪೂಜೆಯನೂ ಸಾಂಗವಾಗಿ ಸುತಲೆ ದೇವರ ಗರ್ಭಾಗಾರ ಮುಂದಣ ಮಠವನೂ ಮಯವ ಮಾಡಿಸಿ ಆ ಮೇಲೆ ಎರಡು ನೆಲೆಯಾಗಿ ತಾಂ ಹೊದಕೆಯನೂ ಮಾಡಿಸಿ ಆ ಮೇಲೆ ಕಲಶ ಸ್ಥಾಪನೆಯ ಮಾಡಿಸಿ' (ಬಂ. ೯–೧೨) ಶಾ. ಶ. (ವರ್ತಮಾನ ವ ೧೫೩೬ ಪ್ರಮಾದೀ[೩] ಸಂ। ವೈಶಾಖ ಶುದ್ಧ ೧೨(ಬಂ. ೩–೪ ಕ್ರಿ. ಶ. 1613 ಎಪ್ರೀಲ್ ೨೧ನೆಯ ತಾರೀಕು ಬುಧ ದಂದು 'ವಿದ್ಯುಕ್ತ ಪ್ರಕಾರದಿಂದ ಶ್ರೀ ಕ್ರುಷ್ಣ ದೇವರ ಪುನಃ ಪ್ರತಿಷ್ಟೆಯನೂ ಮಾಡಿದ' ರೆಂದೂ (ಬಂ. ೧೪), ತರ ಅದೇ ಸಂವತ್ಸರದ ಕಾರ್ತಿಕ ಶುದ್ಧ ಹುಣ್ಣಿವೆ ಚಂದ್ರಗ್ರಹಣ (ಬಂ. ೧೬) = ಕ್ರಿ. ಶ. 1613 ಅಕ್ ಬರ 17ನೆಯ ತಾರೀಕಿನ ರಾತ್ರಿಯ ಚಂದ್ರಗ್ರಹಣದ ಕಾಲದಲ್ಲಿ ವೆಂಕಟಪತಿ ಮಹಾರಾಜನ ಸಿರೂಪದಿಂದ ಟಪ್ಪ ನಾಯಕನು ಶ್ರೀ ಕೃಷ್ಣ ದೇವರ ಮಠಕ್ಕೆ, ಬಾರಕ ಸೀಮೆಯಲ್ಲಿ ಉಂಬಳಿ ಬಿಟ್ಟನೆಂದೂ (ಬಂ. ೧೫–೧೮). ಬಳಿಕ ಅದೇ ಸಂವತ್ಸರದ ಮಾಘ ಶುದ್ಧ ೧ ಶನಿವಾರ = ಶ. 1614 ಜನವರಿ 1ನೆಯ ತಾರೀಕಿನಂದು ವೇದವೆ ತೀರ್ಥರೂ ಬನ್ನಿಂಜದ ಪ್ರಾಂತದಲ್ಲಿ ಆ ಮಠಕ್ಕೆ ದತ್ತಿ ರೆಂದೂ (ಬಂ. ೨೧-೨೨) ಆ ಕೃಷ್ಣಮಠದ ಬಡಗಣ ಗೋ ಯಲ್ಲಿರುವ ನಂ. 297ನೆಯ ಶಾಸನದಿಂದ[೪] ತಿಳಿಯುತ್ತ

ಈ ಶಾಸನದಲ್ಲಿ ವೇದವೇದ್ಯತೀರ್ಥರನ್ನು ಹಯಗ್ರಿ ದೇವರ ಆರಾಧಕರಾದ ವಾದಿರಾಜ ತೀರ್ಥರ ಕರಕ

---

೧ ಕ್ರಿ. ಶ. 1565ರಲ್ಲಿ ವಿಜಯ ನಗರದ ರಾಮರಾಜನು ಬಿದ್ದು ಹೋಗುತ್ತಲೆ ಅವನ ಮನೆವಾರ್ತೆಯ ಬೊಕ್ಕಸದ ಸೇನಬೋವ ನಾಗಿದ್ದ ಚಿನ್ನಭಂಡಾರದ ನಾರಣಪ್ಪಯ್ಯನನ್ನು ಕೆಳದಿಯ ಚಿಕ್ಕ ಸಂಕಣ ನಾಯಕನು (ಕ್ರಿ. ಶ. 1558–70) ತನ್ನ ಕೈಕೆಳಗಣ ಅಧಿಕಾರದಲ್ಲಿ ಇಟ್ಟುಕೊಂಡನೆಂದು 'ಕೆಳದಿ ನೃಪ ವಿಜಯ'ದಿಂದ (IV-೮) ತಿಳಿಯುತ್ತದೆ. ಈ ಚಿನ್ನಭಂಡಾರದ ರಾಮಕೃಷ್ಣಪ್ಪ ಒಡೆಯನು ಆತನವನಾಗಿರಬೇಕು. ಸಾಹಿತ್ಯ ಶಿರೋಮಣಿ ಶ್ರೀ। ಬಿ. ಶ್ರೀನಿವಾಸ ಭಟ್ಟರ (1924) 'ಶ್ರೀ ವಾದಿರಾಜ ಗುರುವರ ಚರಿತ್ರೆ'ಯಲ್ಲಿ (ಪು. 28) ಈ ಚಿನ್ನಭಂಡಾರದ ರಾಮಕೃಷ್ಣಪ್ಪ ಒಡೆಯನನ್ನು ರಾಮಕೃಷ್ಣ ಪ್ರಭು ಎಂದಿರುವುದರಿಂದ, ಪ್ರಭು ಎಂಬ ಉಪನಾಮದಿಂದ ಆತನು ಸಾರಸ್ವತ ಬ್ರಾಹ್ಮಣನೇನೋ ಎಂದು ತೋರಬಹುದಾದರೂ ವಾಸ್ತವಿಕವಾಗಿ ಅವನು ಕರ್ಣಾಟಕ ಬ್ರಾಹ್ಮಣನಲ್ಲದೆ ಸಾರಸ್ವತನಲ್ಲ.

೨ ಉಡುಪಿಯಲ್ಲಿಯ ಶಾಸನಗಳೆಲ್ಲವಲ್ಲಿಯೂ 'ಕೆಳದಿ ನೃಪ ವಿಜಯ'ದಲ್ಲಿಯೂ (XI . ೧೯) **'ಉಡುಪಿನ'** ಎಂದೇ ವಿನಾ 'ಉಡುಪಿಯ' ಎಂದಿಲ್ಲದ ಕಾರಣ ಷಷ್ಠೀ ವಿಭಕ್ತಿಯ ಏಕವಚನವು ಹಾಗಿರುವ ಆ ಊರಿನ ಹೆಸರಿನ ನೇರಾದ ರೂಪು ಉ–ಕಾರಾಂತವಾಗಿ ಉಡುಪು ಎಂದಿರಬೇಕಲ್ಲದೆ ಇ-ಕಾರಾಂತವಾಗಿ ಉಡುಪಿ ಎಂದಲ್ಲ. ತುಳುವಿನಲ್ಲೂ ಆ ಊರನ್ನು ಉಡ್ಪು—ಒಡ್ಪು ಎನ್ನುತ್ತಾರೆ.

೩ ಪರಿಧಾವಿ ಸಂವತ್ಸರದ ಬಳಿಕಣದೇ ಈ ಸಂವತ್ಸರದ ಹೆ ನೇರಾಗಿ 'ಪ್ರಮಾದಿ' ಎಂದೇ ಸರಿ, ಇದನ್ನು ತೀರ ತಪ್ಪಾಗಿ 'ಪ್ರ ದೀಚ' ಎನ್ನುತ್ತಾರೆ.

೪ South Indian Inscriptions (**S I I**), Vol. ನಂ. 297 [ಪು. 148–49]

ಸಂಜಾತರೆಂದಿರುವುದರಿಂದ, ಅವರು ಉಡುಪಿಯ ಅಷ್ಟಮಠಗಳಲ್ಲಿ ಒಂದಾದ ಸೋದೆಮಠದ ಪ್ರಖ್ಯಾತ ಗುರುವರ್ಯರಾದ ವಾದಿರಾಜರ ಸಾಕ್ಷಾಚ್ಛಿಷ್ಯರೆಂದೂ, ವೇದವೇದ್ಯರು ಕೃಷ್ಣ ಮಠವನ್ನು ಜೀರ್ಣೋದ್ಧಾರ ಮಾಡಿಸಿ ಅಲ್ಲಿ ಶ್ರೀ ಕೃಷ್ಣನ ಪುನಃ ಪ್ರತಿಷ್ಠೆಯನ್ನು ತಮ್ಮ ಪೂಜಾಪರ್ಯಾಯದಲ್ಲಿ ಮಾಡಿದರೆಂದಿರುವುದರಿಂದ, ಈ ಶಾಸನಕಾಲದಲ್ಲಿ ಸ್ವಯಂ ವೇದವೇದ್ಯರೇ ಪರ್ಯಾಯಸ್ಥರಾಗಿದ್ದರೆಂದೂ ವ್ಯಕ್ತವಾಗುತ್ತದೆ. ಶ್ರೀಮನ್ಮಧ್ವಾಚಾರ್ಯರ ಸಾಕ್ಷಾಚ್ಛಿಷ್ಯರಲ್ಲಿ ಒಬ್ಬರಾದ ವಿಷ್ಣುತೀರ್ಥರಿಂದ ೧೫ನೆಯವರಾದ೫ ವಾದಿರಾಜರು ಶಾ. ಶ. ೧೫೨೨ ಶಾರ್ವರಿ ಸಂ। ಫಾಲ್ಗುಣ ಬಹುಳ ೩ ಬುಧವಾರ = ಕ್ರಿ. ಶ. 1601 ಮಾರ್ಚಿ 11ನೆಯ ತಾರೀಕಿನಂದು ವೃಂದಾವನಸ್ಥರಾಗುತ್ತಲೆ ಅವರ ಶಿಷ್ಯರಾದ ವೇದವೇದ್ಯರು ಸೋದೆ ಮಠದ ಗುರುಪೀಠಾರೂಢರಾದರು.

ಆ ಕೃಷ್ಣಮಠದ ಪಡುವಣ ಗೋಡೆಯಲ್ಲಿರುವ ೨ ಶಿಲಾಶಾಸನಗಳ ಒಕ್ಕಣೆ ಹೀಗದೆ:—

(೧) ನಂ. 302ನೆಯ ಶಿಲಾಶಾಸನ೬ —

೨) ... ... ಜಯಾಭ್ಯುದಯ ಶಾಲಿವಾಹನ ಶಕವರ್ಷ

೩) ೧೫೩೬ ಪ್ರಮಾದಿ ಸಂವತ್ಸರದ ... ಧ ೧೨ ಲೂ ಸ್ವಸ್ತಿ। ಶ್ರೀ ವಾದಿರಾಜ ತೀರ್ಥ ಶ್ರೀ

೪) ಪಾದಂಗಳ ಕರಕಮಲ ಸಂಜಾತರಾದ ವೇದವೇದ್ಯ ತೀರ್ಥ ಶ್ರೀಪಾದಂಗಳು ಉಡು

೫) ಪಿನ ಶ್ರೀ ಕೃಷ್ಣದೇವರ ಪಿ......ಸ ಕಾಲದಲೂ **ಸಾಸಷ್ಟಿ ಗ್ರಾಮ**ವೊಳಗಣ **ಅಷ್ಟಗ್ರಾಮ** ಮು

೬) ಖ್ಯವಾದ **ಮಠಗ್ರಾಮ**ಕ್ಕೆ ಮೊದಲಿಗರಾದ ಕೌಶಿಕ ಗೋತ್ರದ ಋಕ್ಶಾಖೆಯ **ದಾಂಪ್ರಭು**ಗಳ ಮಗ ಓಾ

೭) **ಮರ್ಸ ಪ್ರಭು** ಮಾಡಿದ ಧರ್ಮದ ವಿವರ । ತಂನ ಹಿರಿತಂದೆ **ರಂಗ ಪ್ರಭು** ಆತನ **ಮಾಳಯ**

೮) ಗೆ ಸಹ್ಯಅಕ್ಷಯ ಪುಂಣ್ಯಲೋಕ ಪ್ರಾಪ್ತಿಯಾಗಬೇಕೆಂದು ಶ್ರೀ ಕೃಷ್ಣ ದೇವರಿಗೆ

....

೧೨) ನಡಸುವ ಹಾಗೆ ಆರುವಾರ ಸ್ಥಳದ ಮೇಲೆ ಕೊಟ್ಟ ದೊಡವರ ಗ ೧೬೦

೧೩) ನೂರ ಅರುವತ್ತು ವರಹನ್ನೂ ಕೊಟ್ಟು ಸಹಿರಂಣ್ಯೋದಕ ಧಾರಾಪೂರ್ವಕವಾಗಿ ಬಿಟ್ಟ ಧರ್ಮ

೧೪) ಶ್ರೀ ಶ್ರೀ ಕೃಷ್ಣಾಯ ನಮಃ॥ ತತ್ಸಂವತ್ಸರದ ತದಿನದಲ್ಲಿ **ಸಾಸಷ್ಟಿ ದೇಶದ ಅಷ್ಟಗ್ರಾಮ**ಕೆ

೧೫) ಮುಖ್ಯವಾದ **ಮಠಗ್ರಾಮ**ಕ್ಕೆ ಮೊದಲ್ಲಿಗರಾದ ದಾಸರ **ದಾಂಪ್ರಭು** ಮಗ **ಗೋವಿಂದ ಪ್ರಭು**

೧೬) ತಂನ ಮಾತಾಪಿತೃಗಳಿಗೆ ಅಕ್ಷಯಾ ಪುಂಣ್ಯಲೋಕ ಪ್ರಾಪ್ತಿಯಾಗಬೇಕೆಂದು ತನ್ನ ಮಕ್ಕಳಿಗೆ

೧೭) ಪುತ್ರ ಪೌತ್ರಾಭಿವೃದ್ಧಿಯಾಗಬೇಕೆಂದು ಮಾಡಿದ ಧರ್ಮದ ವಿವರ।

....

೨೪) ...... ದೊಡವರಹ ಗ ೫೫ ಅಯಿವತ್ತೈದು ವರಹನು ಕೊಟು ಸಹಿರಂಣ್ಯೋದಕ

೨೫) ಧಾರಾಪೂರ್ವಕವಾಗಿ ಕೊಟ್ಟು.................

೨೬) ....ಮಾಡಿದ ಧರ್ಮಶಾಸನ। ಶ್ರೀ ಕೃಷ್ಣಾರ್ಪಣ......

... .

೩೦) .... ॥ ಪರಿಶುರಾಮ ॥.........ಶ್ರೀ.

(೨) ನಂ. 301ನೆಯ ಶಿಲಾಶಾಸನ –೬

೧) ಸ್ವಸ್ತಿ ಶ್ರೀ ಜಯಾಭ್ಯುದಯ ಶಾಲಿವಾಹನ ಶಕ ವರುಷ ೧೫೩೬ನೆಯ ಸಂದ ಆನಂ

೨) ದ ಸಂವತ್ಸರದ ಪುಷ್ಯ ಶುದ್ಧ ೧೦ ಸ್ತಿರವಾರದಲ್ಲು ವಿದ್ಯಾಧೀಶ ತೀರ್ಥ ಶ್ರೀಪದಂಗಳು ವಿ

೩) ದ್ಯೋಪದೇಶ ತೀರ್ಥ ಪ್ರಸಾದಂಗಳ ಉಡುಪಿ**ನ** ಶ್ರೀಕೃಷ್ಣ ದೇವರ ಪೂಜಾಕಾಲದಲು **ಕೊ**

೪) **ಳಪಿ** ಗ್ರಾಮದೊಳಗಿನ **ಸಂಕುವಾಳಿ** ಅಗ್ರಹಾರದ **ಕೊಂಕಣ ವರ್ಗದ** ಬ್ರಾಂಹ್ಮಣ

೫) ರುಕ್‌ಶಾಖೆ ಭಾರದ್ವಾಜ ಗೋತ್ರದ **ಸೌದೆ**ಯ ಚಿಂನವರದ **ನಾರಣಪ್ಪಯ** ಮಗ

೬) **ಲಿಂಗಪ್ಪಯ** ಶ್ರೀ ಕೃಷ್ಣ ದೇವರ ಸಂನ್ಮುಖದಲ್ಲಿ... ...

....

೯) .... ಶ್ರೀ ಕೃಷ್ಣ ದೇವರಿಗೆ ಭೂಸ್ವಾಸ್ಥಿಗೆಂ

೧೦) ಡು ಧಾರೆಯನೆರದು ಕೊಟ್ಟಗ ೧೦೦ ಅಕ್ಷರದಲ್ಲು ನೂರಾ।

....

೧೬) ......ಮಂಗಳ ಮಹಾ ಶ್ರೀ ಮಹಾ ಶ್ರೀ ಶ್ರೀ ಶ್ರೀ ಶ್ರೀ.

ಇಪಲ್ಲಿ ನಂ. 302ನೆಯ ಶಾಸನದಲ್ಲಿ ತಿಂಗಳ ಹೆಸರು ಸವೆದುಹೋದ ಕಾರಣ ಅದು ಕಟ್ಟಾಗಿ ಇಂತಹದೇ ತಾರೀಕಿನಲ್ಲಿ ಹುಟ್ಟಿತೆಂದು ನಿರ್ಣಯಿಸಲಾಗದಾದರೂ, ಅದರ ಶಾ. ಶ. ವರ್ಷಸಂಖ್ಯೆ ಹಾಗೂ ಪ್ರಮಾದಿ ಎಂಬ ಸಂವತ್ಸರದ ಹೆಸರಿನಿಂದ ಮೇಲೆ ಕಂಡಿರುವಂತೆ ಅದು ಕ್ರಿ. ಶ. 1613-14ನೆಯದೆಂದು ನಿಶ್ಚಯವಿದೆ. ಆಗ್ಗೆ ಸೋದೆಮಠದ ವೇದವೇದ್ಯರು ಪರ್ಯಾಯಸ್ಥರಾಗಿದ್ದರೆಂದು ಮೇಲೆ ಕಂಡಿರುತ್ತೇವೆ. ನಂ. 301ನೆಯ ಶಾಸನದಲ್ಲಿ ಶಾ. ಶ. ವರ್ಷ ಸಂಖ್ಯೆ ೧೫೩೬ ಎಂದಿದ್ದರೂ ಸಂವತ್ಸರದ ಹೆಸರು ಆನಂದ ಎಂದಿರುವುದರಿಂದ, ಆ ಶಾಸನವು ಪ್ರಮಾದಿಯ (ದಲ್ಲ, ಅದರ) ಮಾರನೆಯ ಆನಂದ ಸಂವತ್ಸರದ್ದೆಂದು, ಅಂದರೆ ಶಾ. ಶ. (ಗತವರ್ಷ) ೧೫೩೬ = ಕ್ರಿ. ಶ. 1614-15ನೆಯದೆಂದು ಒಮ್ಮೆ ತೋರಬಹುದಾದರೂ, ಅಲ್ಲಿ ಶಾ. ಶ. ೧೫೩೬ ಆನಂದ ಸಂ। ಪುಷ್ಯ ಶುದ್ಧ ೧೦ ಸ್ಥಿರ (= ಶನಿ)ವಾರ ಎಂದಿರುವ ತೇದಿಯ ವಿವರವು ಇದ್ದಕ್ಕಿದ್ದಂತೆ ಸರಿಯಾದರೆ, ಆ ತೇದಿ ಕ್ರಿ. ಶ. 1613 ದಶಂಬರ 11ನೆಯ

೫ 'ಉಡುಪಿ ಕ್ಷೇತ್ರ ವರ್ಣನೆ' (ಪ್ರಭಾಕರ ಮುದ್ರಾಯಂತ್ರ, ಉಡುಪಿ, 1922), ಪು. ೪: ಆದರೆ ಶ್ರೀ। ಬಿ. ಶ್ರೀನಿವಾಸ ಭಟ್ಟರ 'ಶ್ರೀ ವಾದಿರಾಜ ಗುರುವರ ಚರಿತ್ರೆ'ಯಲ್ಲಿ (ಪುಟ ೭) ವಾದಿರಾಜರ ಗುರುಗಳಾದ ವಾಗೀಶತೀರ್ಥರು ವಿಷ್ಣುತೀರ್ಥರ ಪರಂಪರೆಯಲ್ಲಿ ೧೭ನೆಯವರೆಂದದೆ. ಹಾಗಾದರೆ ವಾದಿರಾಜರು ವಿಷ್ಣುತೀರ್ಥರಿಂದ ೧೮ನೆಯವರಾಗುತ್ತಾರೆ.

೬ **SII**, VII, ನಂ. 302 ಮತ್ತು 301 (ಪು. 154-55)

ತಾರೀಕು ಶನಿವಾರವಾಗುತ್ತದೆ, 'ಅಂದರೆ ಆನಂದ ಸಂವತ್ಸರವಲ್ಲ ಪ್ರಮಾದಿಯೇ ಆಗುತ್ತದೆ. ಹೀಗೆ ಶಾ. ಶ. ವರ್ಷ ಸಂಖ್ಯೆಯನ್ನೂ ಸಂವತ್ಸರಗಳ ಹೆಸರುಗಳನ್ನೂ ಹೇಳುವಲ್ಲಿ ೧—೨ ವರ್ಷ ಆಚೀಚೆಯಾಗುವ ಉದಾಹರಣೆಗಳು ಶಾಸನಗಳಲ್ಲಿ ಎಷ್ಟೋ ಇವೆ. ಈ ನಂ. 301ನೆಯ ಶಾಸನದಲ್ಲಿ ಹೇಳಿರುವ ವಿದ್ಯಾಧೀಶ ತೀರ್ಥರು ಉಡುಪಿಯ ಅಷ್ಟಮಠಗಳಲ್ಲಿ ಮತ್ತೊಂದಾದ ಕಾಣೂರು ಮಠದ ಗುರುಗಳು. ಇವರು ಮಧ್ವಾಚಾರ್ಯರ ಸಾಕ್ಷಾಚ್ಛಿಷ್ಯರೂ ಕಾಣೂರು ಮಠದ ಆದ್ಯಯತಿಗಳೂ ಆದ ರಾಮತೀರ್ಥರಿಂದ ೧೪ನೆಯವರು.[೭]

ಅಷ್ಟಮಠದ ಯತಿಗಳು ೨ ತಿಂಗಳಿಗೆ ಒಬ್ಬರಂತೆ ಪರ್ಯಾಯವಾಗಿ ಶ್ರೀ ಕೃಷ್ಣನಿಗೆ ಪೂಜೆ ಮಾಡುತ್ತ ಬರಬೇಕೆಂದು ಮಧ್ವಾಚಾರ್ಯರು ವಿಧಿಸಿದ ಕಟ್ಟಳೆಯನ್ನು ವಾದಿರಾಜರು ತಿದ್ದಿ ಒಬ್ಬೊಬ್ಬರು ೨—೨ ವರ್ಷ ಪರ್ಯಾಯದಿಂದ ಪೂಜೆ ನಡಿಸಬೇಕೆಂದು ಏರ್ಪಡಿಸಿದರೆಂದು ಸುಪ್ರತೀತವಿದೆಯಷ್ಟೆ. ಈಗ, ಮೇಲಣ ನಂ. 297ನೆಯ ಶಾಸನದಲ್ಲಿ ಸೋದೆಮಠದ ವೇದವೇದ್ಯರನ್ನು ಕುರಿತು 'ತಂಮ ಪೂಜಾ ಪರಿಯಾಯದಲ್ಲಿ' (ಬಂ. ೯) ಎಂದಿರುವುದರಿಂದ, ಮೇಲೆ ಕಂಡಿರುವಂತೆ ಆ ಶಾಸನ ಕಾಲದ ಕ್ರಿ. ಶ. 1613ನೆಯ ದಶಂಬರದಲ್ಲಿ ಆ ವೇದವೇದ್ಯರೇ ಪರ್ಯಾಯಸ್ಥರಾಗಿದ್ದರೆಂಬುದನ್ನೂ, ಅದರೊಂದಿಗೆ ಪ್ರತ್ಯೇಕ ಮಠದವರ ಪರ್ಯಾಯವು ೧೬ ವರ್ಷಕ್ಕೊಮ್ಮೆ ಬರುತ್ತಿರುವ ಆ ನೇಮಕ್ಕೂ ಸೋದೆಯವರ ಪರ್ಯಾಯ ಮುಗಿವುದೇ ಕಾಣೂರವರ ಪರ್ಯಾಯವು ಆರಂಭಿಸುತ್ತಿರುವ ಅನುಕ್ರಮಕ್ಕೂ ಸರಿಯಾಗಿ ಇದೇ ಬರುವ 1948ನೆಯ ಜನವರಿಯಲ್ಲಿ ಸೋದೆಯ ಸ್ವಾಮಿಯವರೂ 1950ರಲ್ಲಿ ಕಾಣೂರು ಸ್ವಾಮಿಯವರೂ ಪರ್ಯಾಯಕ್ಕೆ ಕುಳಿತುಕೊಳ್ಳುವರೆಂಬುದನ್ನೂ ಮನವರಿಸಿದರೆ, ಕ್ರಿ. ಶ. 1612ನೆಯ ಜನವರಿಯಿಂದ[೮] 1614ನೆಯ ಜನವರಿ ವರೆಗೆ ಸೋದೆಯ ವೇದವೇದ್ಯರ ಪರ್ಯಾಯ, ನಡೆಯಿತೆಂದೂ, ಅಲ್ಲಿಂದ ಮುಂದೆ ಕಾಣೂರಿನ ವಿದ್ಯಾಧೀಶರ ಪರ್ಯಾಯ ತೊಡಗಿತೆಂದೂ ಸಿದ್ಧವಾಗುವುದರಿಂದ, ನಂ. 302ನೆಯ ಶಾಸನೋಕ್ತವಾದ ದತ್ತಿಯನ್ನು ಆಗ್ಗೆ ಪರ್ಯಾಯಸ್ಥರಾಗಿದ್ದ ಸೋದೆಮಠದ ವೇದವೇದ್ಯರ ಸಮ್ಮುಖದಲ್ಲಿಯೂ, ನಂ. 301ನೆಯ ಶಾಸನದ ದತ್ತಿಯನ್ನು ಅದರ ತೇದಿಯಿಂದ ಇನ್ನು ಕೆಲವೇ ದಿನಗಳಲ್ಲಿ, ಅಂದರೆ ಕ್ರಿ. ಶ. 1613 ದಶಂಬರ 29ನೆಯ ತಾರೀಕಿನಂದು ಒದಗುವ ಮಕರ ಸಂಕ್ರಮಣದ ಹೊತ್ತಿಗೆ ಪರ್ಯಾಯಸ್ಥರಾಗಲಿರುವ ಕಾಣೂರು ಮಠದ ವಿದ್ಯಾಧೀಶರ ಸಮ್ಮುಖದಲ್ಲಿಯೂ ಶ್ರೀ ಕೃಷ್ಣ ಮಠಕ್ಕೆ ಬಿಟ್ಟರೆಂದು ಸ್ಪಷ್ಟವಿದೆ.

೭ ಉಡುಪಿ ಕ್ಷೇತ್ರ ವರ್ಣನೆ, ಪು. ೫.

೮ ಕ್ರಿ. ಶ. 1948 — ಕ್ರಿ. ಶ. 1612 = 336 = 21×16, ಅಂದರೆ ಕ್ರಿ. ಶ. 1612ರಿಂದ 1948ರೊಳಗೆ ಸೋದೆಯವರ ೨೧ ಪರ್ಯಾಯಗಳಾಗುತ್ತವೆ.

ಇವೆರಡೂ ಶಾಸನಗಳ ದಾತೃಗಳನ್ನು ಕುರಿತು ...
ಸುವಲ್ಲಿ, ನಂ. 301ನೆಯ ಶಾಸನದಾತನನ್ನು ಕೊ...
ವರ್ಗದ ಬ್ರಾಹ್ಮಣನೆಂದೂ, ನಂ. 302ನೆಯ ಶಾಸನದ...
ಪ್ರತ್ಯಕ್ಷ ಸಾರಸ್ವತರ ಹಲವು ಉಪನಾಮಗಳಲ್ಲಿ ಒಂದ...
ಪ್ರಭು ಎಂದೂ ಹೇಳಿರುವುದರಿಂದ, ಅವರು ಕೊ...
ದೇಶದ, ಅಂದರೆ ಗೋವೆಯ, ದಾಕ್ಷಿಣಾತ್ಯ ಸಾರಸ್ವತ...
ಕಂಡಿತವಾಗುತ್ತದೆ. ಅಥವಾ ಇನ್ನೂ ಬೇಕಾದರೆ, ಬ...
ಸೋಮಶೇಖರ ನಾಯಕನ (ಕ್ರಿ. ಶ. 1714–39) ...
೧೬೩೮ ದುರ್ಮುಖಿ ಸಂ। ಆಶ್ವೀಜ ಶು। ೧೦ ಸ್ಥಿರ (= ...
ವಾರ = ಕ್ರಿ. ಶ. 1716 ಸಪ್ತಂಬರ 15ನೆಯ ತಾರೀಕಿನ ...
ಪಟ್ಟದಲ್ಲಿ[೯] ತಂತಮ್ಮ ಉಪನಾಮಗಳಿಂದ ಸಾರಸ್ವತ ಬ್ರಾ...
ರೆಂದು ಪ್ರತ್ಯಕ್ಷವಿರುವ ಆಶ್ವಲಾಯನ ಸೂತ್ರದ ಋ...
ಯವರಾದ ಕೌಂಡಿನ್ಯ ಗೋತ್ರದ ಮ್ಹಾಳ ಪಈ(ಮ್ಹಾ...
ಮತ್ತು ದಾಮರಸ ಕಮ್ತಿ, ವತ್ಸಗೋತ್ರದ ಜೋಗಣ ...
ಮತ್ತು ಅಂಬಣ ಬಾಳಿಗ, ಹಾಗೂ ಕೌಶಿಕ ಗೋ...
ಸಾಂತಪ್ಪ ಶೇನಭಾವ ಮುಂತಾದವರನ್ನು 'ಸಾಸಷ್ಟ ...
ಅಷ್ಟಗ್ರಾಮದ ಕೊಂಕಣಸ್ಥ ಬ್ರಾಹ್ಮಣ'ರೆಂದೂ, ವಿದ...
ರದ ರಾಮರಾಜನ ಮಗ ಕೃಷ್ಣರಾಯನ ಕುಮಾರಕ ...
ಬಲರಾಯನು ಶಾ. ಶ. ೧೩೭೪ ಪ್ರಜಾಪತಿ ಸಂ। ಫಾ...
ಶು ೫ ಕುಜವಾರ = ಕ್ರಿ. ಶ. 1453 ಫೆಬ್ರವರಿ 13ನೆಯ ತಾ...
ನಂದು 'ಸಾಸಷ್ಟಿ ಗ್ರಾಮಕ್ಕೆ ಮುಖ್ಯವಾದ ಅಷ್ಟಗ್ರಾ...
ಮುಖ್ಯವಾದ ಮಠಗ್ರಾಮದ'ವನಾದ ಕೌಶಿಕ ಗೋ...
ವಿಠ್ಠಲ ಪ್ರಭೂ ಮಗ ದಾಮು ಪ್ರಭುಗೆ ಬರಸಿಕೊಟ್ಟ ತಾ...
ಪಟ್ಟದಲ್ಲಿ[೧೦] ಆ ದಾಮು ಪ್ರಭುವನ್ನು ಕೊಂಕಣ ದೇ...
ಬ್ರಾಹ್ಮಣನೆಂದೂ ಹೇಳಿರುವುದನ್ನು ಗಮನಿಸಬಹ...
ಕ್ರಿ. ಶ. 1721ರಲ್ಲಿ ರಚಿತವಾದ ಮರಾಟೀ 'ಕೊಂಕಣಾಖ್...
ದಲ್ಲಿ (ಉತ್ತರಾರ್ಧ, ಅಧ್ಯಾಯ ೪) ಹೇಳಿರುವಂತೆ...
'ಕೊಂಕಣೇಂ ಮುಳೀಚೇಂ ದೇಶಾಭಿಧಾನ' (೫)—ಕೊ...
ಎಂಬುದು ಸಾರಸ್ವತರ ದೇಶನಾಮ. ಕೊಂಕಣ ದೇ...
ಗೋವೆ ಸಾರಸ್ವತರ ಮಾತೃಭೂಮಿ ಎಂಬುದರಿಂದ ಅವ...
ಮುಖ್ಯತಃ ಕೊಂಕಣೇತರ ದೇಶದಲ್ಲಿ ಕೊಂಕಣ ವಗ...
ರೆಂದೂ ಕೊಂಕಣ ದೇಶೀಯರೆಂದೂ ಕೊಂಕಣಸ್ಥರೆ...
ಹೇಳಿರುವುದೂ ಹೇಳುತ್ತಿರುವುದೂ ಸಾಹಜಿಕವೇ. ಗೋ...
ಸಾರಸ್ವತರಲ್ಲಿ ಎಲ್ಲರೆಂಬಂತೆ ಋಗ್ವೇದಿಗಳು, ಆಶ್ವಲಾ...
ಸೂತ್ರದ ಋಕ್ಶಾಖೆಯವರು.

ನಂ. 302ನೆಯ ಶಾಸನದ ದಾತೃಗಳ ಪೀಳಿಗೆ ಹೀ...

ರಂಗ ಪ್ರಭು — ದಾಂ ಪ್ರಭು
ಮಾಳಯ
ದಾಮರ್ಸ ಪ್ರಭು — ಗೋವಿಂದ ಪ್ರ...

೯ ಮರಾಟೀ 'ಸರಸ್ವತೀ ಮಂಡಲ' (ಮುಂಬಯಿ 1...
ಪರಿಶಿಷ್ಟ ೧, ಪು. ೫–೬ ೧೦ ಅದೇ, ಪರಿಶಿಷ್ಟ ೧, ಪು. ೩—೪...

ಇದರಲ್ಲಿ ದಾಮರ್ಸ ಪ್ರಭು ಮತ್ತು ಗೋವಿಂದ ಪ್ರಭು ಹಾಗೂ ಅವರ ತಂದೆ ದಾಂ ಪ್ರಭುವನ್ನು ಸಾಸಷ್ಟಿಯೊಳಗಣ ಅಷ್ಟಗ್ರಾಮಕ್ಕೆ ಮುಖ್ಯವಾದ ಮಠಗ್ರಾಮದ ಕೌಶಿಕ ಗೋತ್ರ ದವರು ಎಂದಿರುವಂತೆಯೇ ಮೇಲಣ ಭುಜಬಲರಾಯನ ತಾಮ್ರಪಟ್ಟ ಪ್ರತಿಗ್ರಾಹಿಯಾದ ಕೌಶಿಕ ಗೋತ್ರದ ದಾಮ ಪ್ರಭುವನ್ನೂ ಅಲ್ಲಿ ಅದೇ ಭಾಷೆಯಿಂದ ನಿರೂಪಿಸಿರುವುದ ರಿಂದ, ಈ 302ನೆಯ ಉಡುಪಿಯ ಶಿಲಾಶಾಸನದ ಪ್ರಭುಗಳು ಭುಜಬಲರಾಯನ ತಾಮ್ರಪಟ್ಟದ ದಾಮಪ್ರಭುವಿನ ಸಂತತಿ ಯವರಾಗಿರಬಹುದೆಂದು ಯಥಾಯುಕ್ತವಾಗಿ ಅನುಮೇಯಿ ಸಲಾಗುತ್ತದೆ. ದಾಂ ಪ್ರಭು ಹಾಗೂ ದಾಮ ಪ್ರಭು ಎಂಬಲ್ಲಿ ದಾಂ—ದಾಮ ಎಂಬುದು ದಾಮೋದರ ಎಂಬ ಹೆಸರಿನ ಸಣ್ಣಿಸಿದ ರೂಪ, ಪ್ರಭು ಎಂಬುದು ಉಪನಾಮ; ಅತಏವ ಆ ನೇರಾದ ಹೆಸರು ದಾಮೋದರ ಪ್ರಭು ಎಂದು.

ದಾಕ್ಷಿಣಾತ್ಯ ಸಾರಸ್ವತರ ತಾಯಿನಾಡು ಗೋವೆ ಎಂದೂ ಅವರು ಗೋವೆಯಿಂದ ತಾನೆ ತುಳುನಾಡಿಗೆ ಬಂದ ರೆಂದೂ ಬೇರೆ ಹೇಳಬೇಕೆಂದಿಲ್ಲ. ಕ್ರಿ. ಶ. 1366ರಿಂದ 1470ರ ವರೆಗೆ ಗೋವೆ ವಿಜಯನಗರ ಸಾಮ್ರಾಜ್ಯದಲ್ಲಿ ಒಳಪಟ್ಟಿತ್ತು. ಆ ಮೇಲೆ ಅದು ಬಿಜಾಪುರದ ಅದಿಲ್‌ಶಾಹಿ ಸುಲ್ತಾನರ ವಶವಾಯಿತು, ಅವರಿಂದ ಅದರ ಬಹುಭಾಗವನ್ನು ಕ್ರಿ. ಶ. ೦. 1510ರಲ್ಲಿ ಪೋರ್ತುಗೀಸರು ಗೆದ್ದುಕೊಂಡರು. ಕ್ರಿ. ಶ. ೦. 1540ರಿಂದ ಇವರು ಅತ್ಯಂತ ಧರ್ಮಾಂಧರಾಗಿ ಗೋವೆಯ ಹಿಂದುಗಳನ್ನು ಬಹಳವಾಗಿ ಕಾಡಲಾರಂಭಿಸಿದರು. ಕ್ರಿ. ಶ. ೦. 1560ರಲ್ಲಿ ಅವರ ಕಾಟಕತನವು ತುತ್ತತುದಿಗೇರಿತು. ಹಿಂದುಗಳು ಮುಖ್ಯತಃ ಸಾರಸ್ವತರು, ಗೋವೆಯನ್ನು ಬಿಟ್ಟು ಹೋಗಬೇಕು, ಇಲ್ಲವೆ ಗೋವೆಯಲ್ಲೇ ಉಳಿವರಾದರೆ ಅವರು ಕ್ರೈಸ್ತರಾಗಬೇಕು ಎಂದು ಊರೂರಲ್ಲಿ ಸಾರಿಸಿದರು. ಕೂಡಲೇ ಸಾರಸ್ವತರ ಸಾವಿರಾರು ಕುಟುಂಬಗಳು ತಂತಮ್ಮ ಮನೆಮಾರನ್ನೂ ದೇವದೇವಾರಗಳನ್ನೂ ಬಿಟ್ಟು ತಂಡತಂಡ ವಾಗಿ ಗೋವೆಯಿಂದ ಒಲಸೆ ತೆಗೆದು, ಅಂದಿಗೆ ಬಹಳ ಹಿಂದಿ ನಿಂದಲೂ ತುಳುನಾಡಿನಲ್ಲಿ ಸಾರಸ್ವತರು ಅಲ್ಲಲ್ಲಿ ನೆಲಸಿದ್ದ ದೇವು ತಿಳಿದೇ, ಆಗ್ಗೆ ಕೆಳದಿಯ ನಾಯಕರ ಹಿಡುವಳಿ ಯಲ್ಲಿದ್ದ ತುಳುನಾಡನ್ನು ಸೇರಿದರು. ಹಾಗಾದರೆ ಈ ಶಾಸನ ದ ಹೊತ್ತಿಗೆ ಆ ವಲಸೆಯವರು ಗೋವೆಯಿಂದ ತುಳುನಾಡಿಗೆ ಬಂದು ಹೆಚ್ಚುಕಡಿಮೆ ೫೨ ವರ್ಷಗಳು ಆಗುತಿದ್ದುವಷ್ಟೆ.

ನಂ. 302ನೆಯ ಶಾಸನದ ಸಾಸಷ್ಟಿ ಎಂದರೆ ಗೋವೆ ಯದೊಂದು ವಿಭಾಗ. ಅದರ ಮೂಲ ಸಂಸ್ಕೃತ ಹೆಸರು ಷಟ್‌ಷಷ್ಟಿ. ಕೊಂಕಣಿ ಹೆಸರು ಸಾಸಷ್ಟಿ, ಅಂದರೆ ೬೬— ಇದರಲ್ಲಿ ಸಾರಸ್ವತರ ೬೬ ನೆಲೆವಳಿಗಳಿದ್ದ ಕಾರಣ ಅದಕ್ಕೆ ಆ ಹೆಸರಾಯಿತು. ಅದನ್ನೀಗ ಸಾಲ್‌ಸೇಟ್ (Salcete) ನ್ನುತ್ತಾರೆ. ಅದರ ಅಷ್ಟಗ್ರಾಮ ಎಂಬ ಅಂಶದ ಮುಖ್ಯ ಊರು ಮಠಗ್ರಾಮ, ಕೊಂಕಣಿಯಲ್ಲಿ ಮಡಗಾಂವ (ಪೋರ್ತುಗೀಸ್ ಅಪಭ್ರಂಶ Margao.)

ಗೋವೆಯಿಂದ ಹೊರಹೋದ ಸಾರಸ್ವತರ ಹಿರಿಯರು ಇಲ್ಲಿ ಮೊದಲು ಯಾವ ಯಾವ ಊರುಗಳಲ್ಲಿದ್ದರೊ ಅಲ್ಲಿಯ ಗ್ರಾಮದೇವತೆಗಳು ಹೊರದೇಶಗಳಲ್ಲಿರುವ ಅವರ ಸಂತತಿಯ ವರಿಗೆ ಸಹಜವಾಗಿ ಕುಲದೇವತೆಗಳಾದುವು. ಸಾರಸ್ವತರ ಹಲವು ಕುಲದೇವತೆಗಳಲ್ಲಿ ಒಂದರ ಹೆಸರು ಮಹಾಲಸಾ ಮ್ಹಾಳಸಾ ಅಥವಾ ಮಾಳಸಾ ದೇವಿ ಎಂದು. ಪೋರ್ತು ಗೀಸರ ಹಾವಳಿಗೆ ಮುಂಚೆ ಸಾಸಷ್ಟಿಯ ವೇರಣೆ ಎಂಬ ಲ್ಲಿದ್ದ ಈ ದೇವತೆಯ ದೇವಾಲಯವನ್ನು ಅನಂತರ ಅಲ್ಲಿಂದ ಅಂತ್ರೂಜ ಎಂಬ ಈಗಣ ಫೋಂಡಾ ಜಿಲ್ಲೆಯ ಮ್ಹಾಡ ದೋಳ ಎಂಬಲ್ಲಿಗೆ ಒಯ್ದರು.[೧೧] ಮಹಾಲಸಾ ದೇವಿ ಯಾರ ಕುಲದೇವತೆಯೊ ಅವರ ಕುಟುಂಬದಲ್ಲಿ ಹುಟ್ಟಿದ ಗಂಡುಮಕ್ಕಳಿಗೆ ಮ್ಹಾಳ—ಮಾಳ, ಮ್ಹಾಳು—ಮಾಳು, ಮ್ಹಾಳಪ್ಪ—ಮಾಳಪ, ಮ್ಹಾಳಯ್ಯ—ಮಾಳಯ ಎಂದು ಹೆಸ ರಿಕ್ಕುವುದುಂಟು. ನಂ. 302ನೆಯ ಶಾಸನದಲ್ಲಿ (ಬಂ. ೭) ರಂಗ ಪ್ರಭುವಿನ ಮಗನ ಹೆಸರು ಮಾಳಯ ಎಂದಿರುವುದ ರಿಂದ, ಅವರ ಕುಲದೇವತೆ ಬಹುತರವಾಗಿ ಮಹಾಲಸಾದೇವಿ ಎಂದೇ ಕಾಣುತ್ತದೆ. ದಾಮರ್ಸ (ದಾಮರಸ), ದೇವರ್ಸ (ದೇವರಸ), ತಿಮ್ಮರ್ಸ (ತಿಮ್ಮರಸ) ಮೊದಲಾದ ಕನ್ನಡ 'ಅರಸ' ಎಂಬ ಪರಪದ ಉಳ್ಳ ಹೆಸರುಗಳು ಆಗ್ಗೆ ಗೋವೆಯ ಸಾರಸ್ವತರಲ್ಲಿದ್ದುವು. ಈಗಲೂ ತುಳುನಾಡಿನವರೇ ಅಲ್ಲ, ಮಲೆಯಾಳದ ಸಾರಸ್ವತರಲ್ಲಿಯೂ ಇವೆ. ಸಾರಸ್ವತರ ಪ್ರಭು ಎಂಬ ಉಪನಾಮವು ಗ್ರಾಮ ಪ್ರಭು (ಅಂದರೆ ಊರೊ ಡೆಯ,) ಎಂಬುದರ ಸಣ್ಣಿಸಿದ ರೂಪವೆಂದೂ, ಅದೊಂದು ಸರಕಾರಿ ಪದವಿಯ ಸಂಜ್ಞೆ ಎಂದೂ ಕೊಂಕಣಾಖ್ಯಾನದಿಂದ (ಉತ್ತರಾರ್ಧ, ಅಧ್ಯಾಯ ೪) ತಿಳಿಯುತ್ತದೆ.—

ದೇಶಪ್ರಭು ತೋ ದೇಶಾಚಾ । ತೈಸಾ ಪ್ರಭು ಮ್ಹಣತಿ ಗ್ರಾಮಿಾಚಾ ॥ ೨೭ ॥

ನಂ. 301ನೆಯ ಶಾಸನದಲ್ಲಿ ಹೇಳಿರುವ ಕೊಳಪಿ ಎಂಬ ಗ್ರಾಮದೊಳಗಣ ಸಂಕುವಾಳಿ ಎಂಬ ಅಗ್ರಹಾರವು ಗೋವೆಯ ಮೇಲೆ ಹೇಳಿದ ಸಾಸಷ್ಟಿ ಎಂಬ ವಿಭಾಗದ ಕೆಳಷಿ ಅಥವಾ ಕೇಳೋಶಿ (Quelossim) ಎಂಬ ಅಂಶದಲ್ಲಿಯ ಶಂಖಾ ವಳಿ (Sancoale) ಅಂದರೆ ಈಗಿನ ಸಾಂಕಳಿ. ಆದ ಕಾರಣ ಈ ಶಾಸನದ ಒಕ್ಕಣೆಯಲ್ಲಿ ಕೆಳಶಿ (ಕೆಳಷಿ) ಎಂದೂ

---

೧೧ ಕೊಂಕಣಾಖ್ಯಾನದಿಂದ (ಪೂರ್ವಾರ್ಧ, ಅಧ್ಯಾಯ ೮) ತಿಳಿವಂತೆ—

ಶಕೇ ಚೌದಾಶೇಂ ಶಾಂಐಶೀಂ । ರಕ್ತಾಕ್ಷೀ ನಾಮ ಸಂವತ್ಸ ರಾಸೀ । ಮ್ಲೇಂಚ್ಛಾಂಸೀ ಪ್ರವೇಶಕೇಲಾ ತೇ ವರ್ಷೀಂ । ಕ್ಷೇತ್ರಾ ಬಾಹೇರ ದೇವಾಂಸೀ ಆಣಿಲೇಂ ॥ ೧೬ ॥

ಪೋರ್ತುಗೀಸರು ಶಾ. ಶ. ೧೪೮೬ ರಕ್ತಾಕ್ಷಿ ಸಂ॥ = ಕ್ರಿ. ಶ. 1564–65ರಲ್ಲಿ ಗೋವೆಯ ದೇವಸ್ಥಾನಗಳ ಮೇಲೆ ಕೈಯ್ಮಾಡುತ್ತಲೆ, ಆ ದೇವತೆಗಳನ್ನು ಆಯಾ ಮೂಲಸ್ಥಾನಗಳಿಂದ ಇತರತ್ರ ಕೊಂಡೊ ಯ್ದರು. ಕ್ರಿ. ಶ. 1567ನೆಯ ಇಸವಿಯ ಅದೊಂದೇ ವರ್ಷದಲ್ಲಿ ಅವರು ೨೮೦ ದೇವಸ್ಥಾನಗಳನ್ನು ನೆಲಸಮ ಮಾಡಿದರು.

ಶಂಖಾವಳಿ (ಸಂಕಾವಳಿ) ಎಂದೂ ಇರಬೇಕಾದ್ದಲ್ಲಿ ಕೊಳಪಿ ಎಂದೂ ಸಂಕುವಾಳಿ ಎಂದೂ ಎಡಹಿ ಕೆತ್ತಿರಬೇಕು. ಪೊರ್ತುಗೀಸರ ಹಾವಳಿಗೆ ಮುಂಚೆ ಸಾರಸ್ವತರ ಕುಲದೇವತೆಗಳಾದ ಶಾಂತಾದುರ್ಗಾ ದೇವಿಯ ದೇವಾಲಯ ಕೇಳೋಶಿಯಲ್ಲಿಯೂ ಲಿಂಗರೂಪಿಯಾದ ನೃಸಿಂಹ ದೇವರ ದೇವಸ್ಥಾನ ಶಂಖಾವಳಿಯಲ್ಲಿಯೂ ಇದ್ದುವು; ಅನಂತರ ಆ ದೇವತೆಗಳನ್ನು ಈಗಿನ ಪೋಂಡಾ ಜಿಲ್ಲೆಗೆ ಒಯ್ದು ಅಲ್ಲಿ ಶಾಂತಾದುರ್ಗೆಯನ್ನು ಕವಳೆಯಲ್ಲಿಯೂ ನೃಸಿಂಹನನ್ನು ವೇಲಿಂಗದಲ್ಲಿಯೂ ಪ್ರತಿಷ್ಠಿಸಿದರು. ಹಾಗೆಯೇ ಆ ಮೊದಲು ನಂ. 302ನೆಯ ಶಾಸನದಲ್ಲಿ ಹೇಳಿದ ಮಠಗ್ರಾಮದಲ್ಲಿದ್ದ ದಾಮೋದರ ದೇವರ ಲಿಂಗವನ್ನು ಆ ಮೇಲೆ ದೂರದ ಜಾಂಬೋಲಿಯಲ್ಲಿ ಪ್ರತಿಷ್ಠಿಸಿದರು.

ನಂ. 301ನೆಯ ಶಾಸನದ ದಾತೃ ಭಾರದ್ವಾಜ ಗೋತ್ರದವನು, ಅವನ ಹೆಸರು ಅಲ್ಲಿ ಕೆತ್ತಿರುವಂತೆ 'ನಾರಣಪ್ಪಯ ಮಗ ಲಿಂಗಪ್ಪಯ'. ಇದು ನೇರಾಗಿ ನಾರಣ ಪೈಯ ಮಗ ಲಿಂಗ ಪೈ ಎಂದು, ಅಂದರೆ ಈ ತಂಡೆಮಗಂದಿರ ಉಪನಾಮವು ಪೈ ಎಂದು. ದಾಕ್ಷಿಣಾತ್ಯ ಸಾರಸ್ವತರ ಪೈ ಎಂಬ ಉಪನಾಮದ ವ್ಯುತ್ಪತ್ತಿಯನ್ನು ಕುರಿತು ಕೊಂಕಣಾಖ್ಯಾನದಲ್ಲಿ (ಉತ್ತರಾರ್ಧ, ಅಧ್ಯಾಯ ೪)–

> ಕಾನಡೀ ರಾಯಾಚಿಂ ದೇಶ ಹೋತಾ ಜೆವ್ಹಾಂ । ಹೆಗಡೆ
> ಆಣಿ ಪೈ ನಾಮೇ ಝಾಲ್ಲಿಂ ತೆವ್ಹಾಂ ॥ ೨೨ ।
> ಥೋರ ವಟ ವ್ಹಾಜನ ಗ್ರಾಮಾಪ್ರತಿ । ನಾಮ ಘೇವೋನಿ
> ತ್ಯಾಸಿ ಆಪೆ ಸ್ಯಾ ಮ್ಹಣತಿ ॥
> ರಾಮಪೈಯ್ಯಾ ಕೃಷ್ಣಪೈಯ್ಯಾ ಐಸೀ ರೀತಿ
> ಐಸೀ ಪದ್ಧತೀ ಪೈಂ ಹೋತೀ ॥ ೨೪ ।
> ನಾಮ ಸೋಡೋನಿ ಬೋಲತ । ತೆವ್ಹಾಂ ಪೈ ಐಸೇಂ
> ಹೋತ । ೨೫ ॥

ಅಂದರೆ ಗೋವೆಯಲ್ಲಿ ಕನ್ನಡ ಅರಸರು ಆಳುತಿದ್ದಾಗ ಅಲ್ಲಿಯ ಸಾರಸ್ವತರಿಗೆ ಹೆಗ್ಗಡೆ ಮತ್ತು ಪೈ ಎಂಬ ಉಪನಾಮಗಳು ಉಂಟಾದವು; ಆಯಾ ಗ್ರಾಮದ ಪೊಡ್ಡವರನ್ನು ಗೌರವಿಸುವ ಬಗ್ಗೆ ಅವರ ಹೆಸರಿಗೆ ಕನ್ನಡ 'ಅಪ್ಪಯ್ಯ' ಎಂದು ಹಚ್ಚಿ, ಉದಾ. ರಾಮ+ಅಪ್ಪಯ್ಯ=ರಾಮಪ್ಪಯ್ಯ=ರಾಮಪಯ್ಯ, ಕೃಷ್ಣ+ಅಪ್ಪಯ್ಯ=ಕೃಷ್ಣಪ್ಪಯ್ಯ=ಕೃಷ್ಣಪಯ್ಯ ಎಂದಾದುದರ ಕೊನೆಯ 'ಪಯ್ಯ' ವೇ ಆ ಅಂಕಿತನಾಮಗಳಿಂದ ಬೇರ್ಪಟ್ಟು ಪೈ ಎಂದೂ, ಆ ಹೆಸರುಗಳು ರಾಮ ಪೈ, ಕೃಷ್ಣ ಪೈ ಎಂದೂ ಆಗಿ, ಅವರಿಗೆ ಪೈ ಎಂದು ಉಪನಾಮವಾಯಿತು ಎಂದು ಹೇಳಿದೆ. ಆದರೆ ಇದನ್ನು ಒಪ್ಪಲಾಗುವುದಿಲ್ಲ. ಹೆಗ್ಗಡೆ (=ಪೆರ್ಗಡೆ) ಎಂಬುದು ಕನ್ನಡದಿಂದ ಬಂದ ಉಪನಾಮವೇ ಸರಿಯಾದರೂ, ಪೈ ಹಾಗಲ್ಲ. ಏಕೆಂದರೆ ಗ್ರಾಮಪ್ರಭು ಎಂಬುದೇ ಸಣ್ಣಿಸಿ ಪ್ರಭು ಎಂದಾಯಿತೆಂದು ಕೊಂಕಣಾಖ್ಯಾನದಿಂದ ಮೇಲೆ ಕಂಡಿರುವಂತೆ, ವಿಷಯ-ಪತಿ, ನಗರ-ಪತಿ, ಗ್ರಾಮ-ಪತಿ ಎಂಬ ಆ ಹಳಗಾಲದಲ್ಲಿ ವ್ಯಾವಹಾರಿಕವಾಗಿದ್ದ ಸಂಸ್ಕೃತ ಅಧಿಕಾರನಾಮಗಳು ಲೋಕೋ-

ಕ್ತಿಯಲ್ಲಿ ಸಹಜವಾಗಿ ಸಣ್ಣಿಸಿ ಬರೇ 'ಪತಿ' ಎಂದ...
'ಪತಿ'ಯೂ ವ್ಯವಹಾರದಲ್ಲಿ ಸಹಜವಾಗಿ ಪ್ರಾಕೃತಿಸಿ
(ಅಥವಾ 'ಪಈ')=ಪೈ ಎಂದೂ ಆಗಿರಬೇಕು, ಅಂದರೆ
ಸ್ವತರಲ್ಲಿ ಸಾಮಾನ್ಯವಾಗಿರುವ ಪ್ರಭು, ನಾಯಕ. ಭಾಂ...
ಪಡಿಯಾರ ಮೊದಲಾದ ಇತರ ಉಪನಾಮಗಳಂತೆ ಪೈ
ಸಂಸ್ಕೃತದಿಂದ ತಾನೆ ಹುಟ್ಟಿರಬೇಕೆಂದೂ, ಅತಏವ...
ಕೃತ ಶಬ್ದವಾಗಿರಬೇಕೆಂದೂ, ಕನ್ನಡದಲ್ಲಿ ಐ-ಕಾರ...
ಪತಿ=ಪಇ ಯಿಂದಾದ ಪೈಯನ್ನು ಪಯ್-ಪಯ...
ಬರೆಯಬೇಕಾಗಿ, ಉದಾ. ರಾಮ-ಪೈಯನ್ನು ರಾಮಪ...
ರಾಮಪ್ಪಯ್ಯ ಎಂದು ಬರೆಯಬೇಕಾದ ಕಾರಣ ಆ...
ನಾಮವು ಅಪಯ—ಅಪ್ಪಯ್ಯದಿಂದ ಹುಟ್ಟಿತೆಂದು ಸ...
ವಿಕವಾಗಿ ಭ್ರಮಿಸಲ್ಪಟ್ಟಿರಬೇಕೆಂದೂ ನನಗೆ ತೋರು...
ಈ ಬಗ್ಗೆ ಶಾ. ಶ. ೧೦೮೩ ವೃಷ (ವಿಷು) ಸಂ। ಪುಷ್ಯ ಬ...
ಅಮಾವಾಸ್ಯೆ ಸೋಮವಾರದ ಸೂರ್ಯಗ್ರಹಣ=ಕ್ರಿ.
1162 ಜನವರಿ 17ನೆಯ ತಾರೀಕು (ಸೋಮವಾರವಲ್ಲ) ಸ...
(=ಬುಧ)ವಾರದ ಸೂರ್ಯಗ್ರಹಣದಂದಿನ ವಸಾ...
(Bassien) ಶಿಲಾಲೇಖದಲ್ಲಿ[೧೨] ಉತ್ತರ ಕೊಂಕಣದ...
ನಾದ ಶಿಲಾಹಾರವಂಶದ ಮಲ್ಲಿಕಾರ್ಜುನನ ಮಹಾಪ್ರ...
ನಾದ ಅನಂತ ಪೈಪ್ರಭುವಿನ ('ಮಹಾಪ್ರಧಾನ ಶ್ರೀ ಅ...
ಪೈಪ್ರಭೋ'—ಬಂ. ೭) ಉಪನಾಮದಲ್ಲಿ ಪೈ ಎಂ...
ಬಹಳ ಹಳಗಾಲದೊಂದು ಉದಾಹರಣೆಯನ್ನು ...
ಬಹುದು. ಪೈಪ್ರಭು ಮೊದಲಾದ ಕೆಲವು ಜೋಡು ...
ನಾಮಗಳೂ ಸಾರಸ್ವತರಲ್ಲಿವೆ.

ನಂ. 301ನೆಯ ಶಾಸನದಲ್ಲಿ ನಾರಣ...
(ನಾರಾಯಣ ಪೈ)ಯ ಮಗ ಲಿಂಗಪೈ[೧೩]ಯನ್ನು ಸೌ...
ಚೆನ್ನವರದ (ಬಂ. ೫) ಎಂದಿರುವಲ್ಲಿಯ ಸೌದೆ ಅ...
ಗೋವೆಯಿಂದ ಬಂದು ತುಳುನಾಡಿನಲ್ಲಿ ಆಗ್ಗೆ ನೆಲ...
ಊರಿನ ಹೆಸರಾಗಿರಬೇಕೆಂದು ತೋರುತ್ತದೆ. ಅದು ಯ...
ದೆಂದು ನಾನರಿಯೆ. ಈ ತಂದೆ ಮಗಂದಿರನ್ನು ಚೆನ್ನ...
ಎಂದಿರುವುದರಿಂದ ಅವರು ಸರಾಫರಾಗಿದ್ದರು.

ನಂ. 302ನೆಯ ಶಾಸನದ ದಾತೃಗಳು ದಾ...
ಪ್ರಭು ಮತ್ತು ಗೋವಿಂದ ಪ್ರಭುಗಳ ತಂದೆಯಾದ ದಾ...
ದರ (ದಾಂ) ಪ್ರಭುವನ್ನು ಗೋವೆಯ ಸಾಸಷ್ಟಿ ದೇ...
ಅಷ್ಟಗ್ರಾಮಕ್ಕೆ ಮುಖ್ಯವಾದ ಮಠಗ್ರಾಮಕ್ಕೆ ಮೊ...
ನೆಂದು ಅದರಲ್ಲಿ ಹೇಳಿರುವುದರಿಂದ, ಗೋವೆಯಲ್ಲಿಯ...
ಗ್ರಾಮಕ್ಕೆ ಆತನು ಪ್ರಮುಖನಾಗಿದ್ದುದನ್ನು ಇಲ್ಲಿ...
ನಾಡಿನಲ್ಲೂ ಅಷ್ಟು ಸಾಕೂತವಾಗಿ ಸ್ಮರಿಸಿರಬೇಕಾ...
ಹಾಗೆಯೇ ನಂ. 301ನೆಯ ಶಾಸನದ ದಾತೃ ಲಿಂಗಪ...
ತಂದೆ ನಾರಾಯಣ ಪೈಯನ್ನು ಸಾಸಷ್ಟಿ ದೇಶದ ಕೇಳ...

---

[೧೨] Epigraphia Indica, Vol. XXIII, ಪು. 275...

[೧೩] ಲಿಂಗ ಎಂಬ ಹೆಸರು ವಿರಳವಾಗಿಯೇ ಆದರೂ ... ನಾಡಿನ ಸಾರಸ್ವತರಲ್ಲಿದೆ.

ಗ್ರಾಮದ ಶಂಖಾವಳಿಯಾತನೆಂದು ಗೋವೆಯಲ್ಲಿಯು ಅವನ ಜನ್ಮಭೂಮಿಯನ್ನು, ಅಲ್ಲಿಯು ಅವನ ತವರೂರನ್ನು, ಇಲ್ಲಿ ಇಷ್ಟು ವಿವರವಾಗಿ ಹೇಳಿರಬೇಕಾದರೆ, ಸ್ವಯಂ ದಾಮೋದರ ಪ್ರಭು ಮತ್ತು ನಾರಾಯಣ ಪೈ ಅವರೇ ಗೋವೆಯನ್ನು ಬಿಟ್ಟು ಇಲ್ಲಿಗೆ ಬಂದಿರಬೇಕೆಂದೂ, ಹಾಗೆ ಬರುವವರೆಗೆ ದಾಮೋದರ ಪ್ರಭು ಗೋವೆಯ ಮಠಗ್ರಾಮದ ಮುಖ್ಯ ವ್ಯಕ್ತಿಯಾಗಿದ್ದನೆಂದೂ, ನಾರಾಯಣ ಪೈಯು ಮನೆ ಅಲ್ಲಿ ಶಂಖಾವಳಿಯಲ್ಲಿ ಇದ್ದಿತೆಂದೂ ಅವರವರ ಮಕ್ಕಳಿಗೂ ಗೊತ್ತಿದ್ದಿತೆಂಬೂ ಇಷ್ಟು ಸ್ಪಷ್ಟವಾಗುವುದರಿಂದ, ಅವರು ಪೋರ್ತುಗೀಸರ ಅತ್ಯಾಚಾರದ ಕ್ರಿ. ಶ. ಸು. 1560ರಲ್ಲಿ ಅಥವಾ ಅನಂತರ ಬೇಗನೆ ಇಲ್ಲಿಗೆ ಬಂದಿರಬೇಕೆಂದೂ ಕಂಡಿತವಾಗಿ ಅನುಮೇಯಿಸಲಾಗುತ್ತದೆ. ಇಂದಿಗೆ ೩೦೦ ವರ್ಷಗಳ ಹಿಂದಿನ ೧೦೦ ಗ (=ಗದ್ಯಾಣ) ಅಂದರೆ ೧೦೦ ವರಹವೆಂದರೆ ಈಗಿನ ೧೦೦೦ಕ್ಕೆ ಸರಿ ಎಂಬ ಕಾರಣ, ಇವೆರಡೂ ಶಾಸನಗಳಲ್ಲಿ ಹೇಳಿರುವಷ್ಟರ ದತ್ತಿ ಬಿಟ್ಟವರು ದೊಡ್ಡ ಶ್ರೀಮಂತರಾಗಿದ್ದಿರಬೇಕು.

ಇವೆರಡೂ ಶಾಸನಗಳ ದಾತೃಗಳು ಸಂಪ್ರದಾಯದಿಂದ ಮಾಧ್ವರಾಗಿದ್ದಿರಬೇಕೆಂದು ಬೇರೆ ಹೇಳಬೇಕೆಂದಿಲ್ಲ. ಆದರೆ ಸ್ವಯಂ ಮಧ್ವಾಚಾರ್ಯರು (ಜನ್ಮ ಕ್ರಿ. ಶ. 1238--ನಿರ್ಯಾಣ ಕ್ರಿ. ಶ. 1318) ಮಾತ್ರವಲ್ಲ, ಅವರ ಸಾಕ್ಷಾಚ್ಛಿಷ್ಯರಾದ ಅಕ್ಷೋಭ್ಯ ತೀರ್ಥರ ಶಿಷ್ಯರೂ ಅವರ ಬಳಿಕಲೇ ಉತ್ತರಾದಿ ಮಠದ ಗುರುವರ್ಯರೂ (ಕ್ರಿ. ಶ. 1365-1388) ಆಗಿದ್ದು ಟೀಕಾಚಾರ್ಯರೆಂದೂ ಪ್ರಸಿದ್ಧರಾದ ಜಯತೀರ್ಥರೂ ಗೋವೆಯಲ್ಲಿ ದ್ವೈತಮತವನ್ನೂ ವೈಷ್ಣವ ಧರ್ಮವನ್ನೂ ಪ್ರಚಾರಗೊಳಿಸಿದುದರಿಂದ, ಅದಕ್ಕೆ ಮುಂಚೆ ಅದ್ವೈತಿಗಳೂ ಸ್ಮಾರ್ತರೂ ಆಗಿದ್ದ ಅಲ್ಲಿಯ ಸಾರಸ್ವತರಲ್ಲಿ, ಮುಖ್ಯತಃ ಅಲ್ಲಿಯ ಸಾಸಷ್ಟಿ ದೇಶದ ಸಾರಸ್ವತರಲ್ಲಿ, ಹೆಚ್ಚಿನವರು ಮಾಧ್ವರಾದಕಾರಣ, ಅಲ್ಲಿಂದ ತುಳುನಾಡಿಗೆ ಬಂದ ಈ ಶಾಸನಗಳ ಸಾರಸ್ವತ ಬ್ರಾಹ್ಮಣರು ತುಳುನಾಡಿಗೆ ಬಂದು ಮಾಧ್ವರಾದರಲ್ಲ, ಗೋವೆಯಿಂದ ಬರುವುದಕ್ಕೆ ಮೊದಲೇ ಮಾಧ್ವರಾಗಿದ್ದರು. ಇದಲ್ಲದೆ ಇವರ ಪೈ ಮತ್ತು ಪ್ರಭು ಎಂಬ ಉಪನಾಮಗಳು ಸಾರಸ್ವತರಲ್ಲಿ ಮಾಧ್ವರಿಗಲ್ಲದೆ ಸ್ಮಾರ್ತರಿಗಿಲ್ಲ.

ಹೀಗೆ ಮಾಧ್ವರಾಗಿದ್ದರೂ ಇವರು ಉಡುಪಿಯ ಅಷ್ಟಮಠಗಳಲ್ಲಿ ಯಾವೊಂದೂ ಮಠದ ಶಿಷ್ಯವರ್ಗದಲ್ಲಿ ಸೇರುವವರಾಗಿರಲಾರರು. ಏಕೆಂದರೆ ಗೋವೆಯ ಸಾರಸ್ವತ ಬ್ರಾಹ್ಮಣರ ವೈಷ್ಣವ (ಮಾಧ್ವ) ಸಂಪ್ರದಾಯದ ೨ ಮಠಗಳಲ್ಲಿ ಒಂದಾದ ಗೋಕರ್ಣ ಮಠದ 'ಗುರುಪರಂಪರಾಮೃತ' (I. ೫-೯)ದಲ್ಲಿಯು ಹೇಳಿಕೆ 'ಸರಿಯಾದರೆ ಮಧ್ವಾಚಾರ್ಯರ ಸಾಕ್ಷಾಚ್ಛಿಷ್ಯರೂ ಉಡುಪಿಯ ಪಲಿಮಾರು ಮಠದ ಆದ್ಯ ಗುರುಗಳೂ ಆದ ಹೃಷೀಕೇಶ ತೀರ್ಥರ ಪೀಳಿಗೆಯಲ್ಲಿಯ ರಾಮಚಂದ್ರ ತೀರ್ಥರು 'ಸಾರಸ್ವತಾಚಾರ್ಯ ಕುಲೋದ್ಭವ'ನಾದೊಬ್ಬವಟುವಿಗೆ ಶಾ. ಶ. ೧೩೯೭ ಮನ್ಮಥ ಸಂ।ದಲ್ಲಿ, ಅಂದರೆ ಕ್ರಿ. ಶ. 1475ರಲ್ಲಿ, ಯತ್ಯಾಶ್ರಮವನ್ನು ಕೊಟ್ಟು ನಾರಾಯಣ ತೀರ್ಥರೆನಿಸಿದ ಆ 'ಗೌಡಸಾರಸ್ವತಾಚಾರ್ಯ ಗುರು'ವಿಂದ ಮೊದಲ್ಗೊಂಡು ಗೋಕರ್ಣ ಮಠ ಉಂಟಾಯಿತು. ವೈಷ್ಣವ ಸಾರಸ್ವತರ ಮತ್ತೊಂದಾದ ಕಾಶೀಮಠದ ಗುರುಗಳಾದ ಯಾದವೇಂದ್ರ ತೀರ್ಥರಿಗೆ ಪೂರ್ವಾದಿ ಮಠದ ರಘುನಂದನ ತೀರ್ಥರ ಶಿಷ್ಯರಾದ ಸುರೇಂದ್ರ ತೀರ್ಥರು ಪ್ಲವ ಸಂವತ್ಸರದಲ್ಲಿ, ಅಂದರೆ ಸುರೇಂದ್ರ ತೀರ್ಥರ ಕಾಲಕ್ಕೆ ಸರಿಯಾಗಿ ಕ್ರಿ. ಶ. 1541-42ರಲ್ಲಿ ಬರಸಿಕೊಟ್ಟ ತಾಮ್ರ ಶಾಸನದಲ್ಲಿ ೧೪ ಅವರನ್ನು 'ಅಸ್ಮತ್ ಪರಮಪ್ರಿಯರಾದ ಕೊಂಕಣಸ್ಥ ಕಾಶೀಮಠದ ಯಾದವೇಂದ್ರತೀರ್ಥ ವಡೇರಿಗೆ' (ವಡೇರಿಗೆ=ಒಡೆಯರಿಗೆ) ಎಂಬಲ್ಲಿ ಅವರ ಕಾಶೀಮಠವನ್ನು ಸ್ಪಷ್ಟವಾಗಿ ಉಲ್ಲೇಖಿಸಿರುವುದರಿಂದ, ಕಾಶೀಮಠವು ಆ ಶಾಸನದ ಕ್ರಿ. ಶ. 1541-42ಕ್ಕೆ ಸಾಕಷ್ಟು ಹಿಂದೆಯೇ ಉಂಟಾಗಿ ಆಗ್ಗೆ ಬೇಕಾದಷ್ಟು ಪ್ರಖ್ಯಾತವಾಗಿದ್ದಿರಬೇಕು. ಈಗಲೂ ಗೋವೆಯಲ್ಲಿರುವ ಹಾಗೂ ಅಲ್ಲಿಂದ ಹೊರಗಯ್ದು ಆಚೆ ಮಹಾರಾಷ್ಟ್ರದಲ್ಲೂ ಈಚೆ ತುಳುನಾಡು-ಮಲೆಯಾಳಗಳಲ್ಲೂ ನೆಲಸಿರುವ ವೈಷ್ಣವ ಸಾರಸ್ವತ ಬ್ರಾಹ್ಮಣರು ತಮ್ಮವೇ ಇವೆರಡು ಮಠಗಳ ಶಿಷ್ಯವೃಂದದವರಲ್ಲದೆ ಸಾರಸ್ವತೇತರ ಬೇರೆ ಯಾವ ಮಠದವರೂ ಅಲ್ಲ.

—oo—

ಶ್ಲೋ॥ ಕೋತಿಭಾರಸ್ಸಮರ್ಥಾನಾಂ ಕಿಂದೂರಂ
ವ್ಯವಸಾಯಿನಾಂ ।
ಕೋವಿದೇಶಸ್ಸು ವಿದ್ಯಾನಾಂ ಕಃ ಪರಃ ಪ್ರಿಯವಾದಿನಾಂ ॥

ತಾತ್ಪರ್ಯ: ಸಮರ್ಥರಿಗೆ ಅತಿ ಭಾರವಾವುದು, ಪ್ರಯತ್ನವುಳ್ಳವರಿಗೆ ದೂರವಾವುದು, ಒಳ್ಳೆ ವಿದ್ಯೆಯುಳ್ಳವನಿಗೆ ಪರದೇಶವಾವುದು, ಹಿತವಾಗಿ ಮಾತಾಡುವವನಿಗೆ ಅನ್ಯನಾವನು.

ಶ್ಲೋ॥ ಚಂದನಂ ಶೀತಲಂ ಲೋಕೇ। ಚಂದನಾದಪಿ
ಚಂದ್ರಮಾಃ । ತಾಭ್ಯಾಂಚ ಶೀತಲತಮಂ ಸಾಧೂನಾಂ ಹೃದಯಂ
ವಿದುಃ॥

ತಾತ್ಪರ್ಯ: ಲೋಕದಲ್ಲಿ ಚಂದನವು ಶೀತಲವಾದುದು; ಅದಕ್ಕಿಂತಲೂ ಚಂದ್ರನು ಶೀತಲ; ಅವೆರಡಕ್ಕಿಂತಲೂ ಸತ್ಪುರುಷರ ಮನಸ್ಸು ಶೀತಲವಹುದು.

---

೧೪ ಶ್ರೀ ಪುತ್ತೂರು ಯಾನೆ ನರಸಿಂಹ ಭಟ್ಟ, ಕುಂದಾಪುರ, ಇವರಿಂದ ಕನ್ನಡ ಭಾಷಾಂತರ ಸಹಿತವಾಗಿ ಪ್ರಕಟಿಸಲ್ಪಟ್ಟ ಸಂಸ್ಕೃತ 'ದಶ ಪ್ರಕರಣ' [1923]ದಲ್ಲಿ ಪ್ರಕರಣ ೫, ಪು. 230.

ಪಾತ್ರ ನಿರೂಪಣೆ (CASTING)

(ಲೇಖಕರು: ಶ್ರೀ। ಎನ್. ಕೃಷ್ಣಸ್ವಾಮಿ)

ಚಿತ್ರಕಥೆಗೊಪ್ಪುವಂತಹ, ಲೇಖಕನು ಕಲ್ಪಿಸಿ ವಿವರಿಸಿರುವಂತಹ ಪಾತ್ರವನ್ನು ಆಯ್ದು, ತಿದ್ದಿ ತಯಾರಿಸುವ ಚಿತ್ರಗಳೇ ಪೂರ್ಣತೆಯ ಸೀಮೆ ಮುಟ್ಟಬಲ್ಲವು. ಭಾರತೀಯ ಚಲಚ್ಚಿತ್ರಕಾರರು, ಪಾತ್ರನಿರೂಪಣೆಯ ಕಡೆಗೆ ಹೆಚ್ಚು ಲಕ್ಷ್ಯ ಕೊಡುತ್ತಿಲ್ಲ. ಹೊಲಿವುಡ್ ಚಿತ್ರಕಾರರು ಪಾತ್ರನಿರೂಪಣೆಗಾಗಿ ಪಡುವ ಶ್ರಮವೆಂಥದು — ಎಂಬುದನ್ನು ಈ ಲೇಖಕರು ಸಂಕ್ಷೇಪವಾಗಿ ಇದರಲ್ಲಿ ವಿವರಿಸುತ್ತಾರೆ.

ಅನೇಕ ವಿಚಾರಗಳಲ್ಲಿ ಹಿಂದೆ ಬಿದ್ದಿರುವ ನಮ್ಮ ಚಿತ್ರೋದ್ಯಮಿಗಳು, ಮುಖ್ಯ ವಿಷಯವಾದ ಪಾತ್ರ ನಿರೂಪಣೆಯ ವಿಚಾರದಲ್ಲೂ ತುಂಬ ಹಿಂದಿದ್ದಾರೆ. ನಮ್ಮವರಿಗೆ ಪಾತ್ರ ನಿರೂಪಣೆಯ ಬೆಲೆ ಇನ್ನೂ ಅರ್ಥವಾಗಿಲ್ಲ. ಹಾಲಿವುಡ್‌ನಲ್ಲಿ ಒಂದು ಪಾತ್ರಕ್ಕೆ ಒಂದು ವ್ಯಕ್ತಿಯನ್ನು ಆರಿಸಬೇಕಾದಲ್ಲಿ ನಿರ್ಮಾತೃಗಳು ಎಷ್ಟು ಹುಡುಕುತ್ತಾರೆ, ಎಷ್ಟು ಧನವ್ಯಯ ಮಾಡುತ್ತಾರೆ ಎಂಬುದನ್ನು ಪತ್ರಿಕೆಗಳಲ್ಲಿ ನಾವು ಅನೇಕ ವೇಳೆ ಓದಿಯಾಗಿದೆ. ಭಾರತೀಯ ಚಲಚ್ಚಿತ್ರ ಸಂಸ್ಥೆಗಳು ಈ ವಿಭಾಗದಲ್ಲಿ ಶ್ರಮ ತಕ್ಕೊಳ್ಳುವುದಿಲ್ಲ. ಶಾಂತಾರಾಮರಂಥಾ ಪ್ರತಿಭಾವಂತ ದಿಗ್ದರ್ಶಕರೂ ಸಹಾ ಈ ಬಗ್ಗೆ ಹೆಚ್ಚು ಆಸಕ್ತಿ ವಹಿಸುತ್ತಿಲ್ಲ.

ಒಂದು ಚಿತ್ರ ಕಲಾದೃಷ್ಟಿಯಿಂದ ಯಶಸ್ವಿಯಾಗಬೇಕಾದಲ್ಲಿ ಪಾತ್ರನಿರೂಪಣೆಯಂಥ ಮುಖ್ಯ ವಿಚಾರದಲ್ಲಿ ಅಸಡ್ಡೆ ತೋರಲು ಸಾಧ್ಯವೇ ಇಲ್ಲ. ಹಾಲಿವುಡ್ ಚಿತ್ರಗಳು ಗಳಿಸಿರುವ ಯಶಸ್ಸಿಗೆ ಮುಖ್ಯ ಕಾರಣಗಳಲ್ಲಿ ಈ ಪಾತ್ರನಿರೂಪಣೆ ಒಂದು. ಇದಕ್ಕೆ ಒಂದಲ್ಲ, ಹತ್ತಾರು ದೃಷ್ಟಾಂತಗಳನ್ನು ಕೊಡಬಹುದು.

ತ್ರಿವರ್ಣ ಚಿತ್ರ "ಗಾನ್ ವಿತ್ ದಿ ವಿಂಡ್" ಅದರಲ್ಲಿನ ಪಾತ್ರನಿರೂಪಣೆಯ ಸೊಗಸನ್ನರಿಯಬೇಕಾದರೆ ಆ ಮಹಾ ಕಾದಂಬರಿಯಲ್ಲಿ ಮಾರ್ಗರೆಟ್ ಮಿಚೆಲ್ ಯಾವ ರೀತಿ ಅಲ್ಲಿನ ಎರಡು ಪ್ರಮುಖ ಪಾತ್ರಗಳಾದ ಸ್ಕಾರ್ಲೆಟ್ ಓಹಾರಾ ಮತ್ತು ರೈಟ್ ಬಟ್ಲರ್ ಇವರನ್ನು ಬಣ್ಣಿಸಿದ್ದಾರೆ ಎಂಬುದನ್ನು ಸ್ವಲ್ಪ ಗಮನವಿಟ್ಟು ನೋಡಿರಿ:—

"Scarlett O'Hara was not beautiful but men seldom realized it when caught by her charm. Her eyes were pale green without a touch of hazel starred with bristly black lashes and slightly tilted at the ends." ಚಿತ್ರದಲ್ಲಿ ಮಾರ್ಗರೆಟ್ ಬಣ್ಣಿಸಿರುವ ಆ ತಿಳಿ ಹಸರು ಕಣ್ಣುಗಳನ್ನು ನೀವು ಸೂಕ್ಷ್ಮವಾಗಿ ನೋಡಿದಿರೋ? ಅಷ್ಟು ಪರಿಪಕ್ವವಾಗಿದೆ, ಆ ಪಾತ್ರಸೃಷ್ಟಿ! ಈ ವರ್ಣನೆಗೆ ಅನು
ವಾದ ಹುಡುಗಿಯನ್ನು ಆರಿಸಲು ಅವರು ಸಾವಿರದ ನ
ನೂರು ಹುಡುಗಿಯರನ್ನು ಪರೀಕ್ಷೆ ಮಾಡಿದರು. ಒಂದು
ಲಕ್ಷ ಅಡಿ ಸಾಮಾನ್ಯ ಫಿಲಂ ಹಾಗೂ ಹದಿಮೂರು ಸಾ
ಬಣ್ಣದ ಫಿಲಂ ಹಾಳುಮಾಡಿದರು. ಈ ಪ್ರಯೋಗಕ
ಸಾವಿರ ಡಾಲರು ವೆಚ್ಚವಾಯಿತು! ಇಷ್ಟು ಪ್ರಯಾಸ
ನಂತರ ಸಿಕ್ಕಿದಳು, ಡಾರ್ಜಿಲಿಂಗ್‌ನಲ್ಲಿ ಹುಟ್ಟಿದ ವಿವಿ
ಲೀ! ಬಹುಶಃ ಆ ಪಾತ್ರಾಭಿನಯಕ್ಕಾಗಿಯೇ ಅವಳು
ತಾಳಿದ್ದಳೇನೋ! ಹಾಗೇ ರೆಟ್ ಬಟ್ಲರ್‌ನನ್ನು ಕಾದ
ಯಲ್ಲಿ ಹೇಗೆ ಬಣ್ಣಿಸಿದ್ದಾರೆ, ಸ್ವಲ್ಪ ನೋಡಿರಿ:—

"He was tall man and powerfully b
Scarlett thought she had never seen a
with such wide shoulders, so heavy
muscles, almost too heavy for genti
When her eye caught his, he smiled, show
animal-white teath below a close-clip
moustache. He was dark of face, swarth
a pirate and his eyes were as bold and b
as any pirate's..." ಕ್ಲಾರ್ಕ್ ಗ್ಯಾಬಲನ ಆಯ್ಕೆ
ಸರಿಯೆನಿಸುತ್ತದೆಯೆ? 'ಗಾನ್ ವಿತ್ ದಿ ವಿಂಡ್' ಲೋ
ಲ್ಲೆಲ್ಲಾ ಜಯಭೇರಿ ಹೊಡೆಯಲು ಅನೇಕ ಕಾರಣ
ಬಹುದು. ಆದರೆ ಅವುಗಳಲ್ಲಿ ಈ ಪಾತ್ರನಿರೂಪಣೆಯ
ಅವರು ವಹಿಸಿರುವ ಶ್ರದ್ಧೆ ಸಹಾ ಒಂದು ಎಂದಿಷ್ಟು ಪ
ಧಾರಾಳವಾಗಿ ಹೇಳಬಹುದು.

ನಾವು ಇತ್ತೀಚೆಗೆ ನೋಡಿದ "ಫಾರ್ ಹೂ
ಬೆಲ್ ಟೋಲ್ಸ್" ಚಿತ್ರದಲ್ಲಿ ಪಾತ್ರವಹಿಸಲು ಇನ್
ಬರ್ಗ್‌ಮನ್ ಹಾಗೂ ಗ್ಯಾರಿ ಕೂಪರ್ ಇವರನ್ನು ಕರೆ
ನಿರ್ಮಾತೃಗಳು ಅಷ್ಟು ಶ್ರಮ ತೆಗೆದುಕೊಂಡದ್
ಏಕೆ? ಆ ಚಿತ್ರ ತಯಾರಿಕೆಗೆ ಆರಂಭವಾಗಲು ಒಂದು
ತ್ಸರ ಹಿಂದೆಯೇ ಲೇಖಕರಾದ ಅರ್ನೆಸ್ಟ್ ಹೆಮ್ಮಿಂ
ತಮ್ಮ ಆ ಪುಸ್ತಕದ ಒಂದು ಪ್ರತಿಯ ಮೇಲೆ "To In

Bergman who is the Maria of this story" ಎಂದು ಬರೆದು ಅವನ್ನು ಅವಳಿಗೆ ಕಳುಹಿಸಿದ್ದರಂತೆ. ಕಡೆಗೆ ಪಾತ್ರ ನಿರೂಪಣೆಯ ವಿಚಾರ ಬಂದಾಗ ಅದೇ ಹುಡುಗಿಯನ್ನು ಕರೆತರಬೇಕೆಂದು ಹೆಮ್ಮಿಂಗ್‌ವೇ ಒತ್ತಾಯ ಮಾಡಿದರು. ಎದುರಾಳಿ ಸಂಸ್ಥೆಯೊಂದರಲ್ಲಿ ಕೆಲಸಮಾಡುತ್ತಿರುವ ಆ ನಟಿಯನ್ನು ಕರೆತರಲು ಅವರ ಪಟ್ಟ ಶ್ರಮ ಎಷ್ಟು? ಇಷ್ಟು ಮಟ್ಟಿಗೆ ಶ್ರದ್ಧೆ ವಹಿಸಿ ಪಾತ್ರ ನಿರೂಪಣೆ ಮಾಡಿರುವ ಒಂದೇ ಒಂದು ದೃಷ್ಟಾಂತವಾದರೂ ನಮ್ಮ ದೇಶದಲ್ಲಿ ಉಂಟೆ? ಪಹರಿ ಸನ್ಯಾಲ್ ಹಾಗೂ ಕೌಸಲ್ಯ ಇವರಿಬ್ಬರನ್ನೂ ನಾಯಕ ನಾಯಕರನ್ನಾಗಿ ಮಾಡುವ ಬುದ್ಧಿವಂತರು ನಮ್ಮವರು! ಕೌಸಲ್ಯ ಇನ್ನೂ ಬಾಯಿಬಿಟ್ಟು ಸರಿಯಾಗಿ ನಾಲ್ಕು ಮಾತಾಡಲು ಬಾರದ ಹುಡುಗಿ; ಪಹರಿ ಅವಳ ತಂದೆಯ ಪಾತ್ರಕ್ಕೆ ಯೋಗ್ಯನಿರುವ ನಟ! ಇವರಿಬ್ಬರು ಪಾತ್ರವಹಿಸಿದ ಪಾತ್ರಗಳ "ರೋಮಾನ್ಸ್" (ಅದೂ ವಿವಾಹತತ್ಪೂರ್ವವಾದದ್ದು!) ನೋಡಬೇಕೆಂದರೆ ಎರಡು ಕಣ್ಣು ಸಾಲವು! ಲೀಲಾ ಚಿಟ್ನಿಸ್, ನೂರ್‌ಜಹಾನ್, ಮೆಹತಾಬ್, ಎಸ್. ಡಿ. ಸುಬ್ಬಲಕ್ಷ್ಮಿ—ಇಂಥಹವರು ಹದಿನೆಂಟರ ಹೊಸಿಲು ಹತ್ತಿರುವ ತರುಣಿಯರ ಪಾತ್ರವಹಿಸಿ ಲವಲವಿಕೆಯಿಂದ(!) ಶೃಂಗಾರ ಪ್ರದರ್ಶನದಲ್ಲಿ ತೊಡಗಿರುವುದನ್ನು ನೋಡಿದರೆ ತಮಾಷೆ ಆಗುವುದಿಲ್ಲವೇ?

ಪಾಶ್ಚಾತ್ಯ ನಿರ್ಮಾತೃಗಳು ಪಾತ್ರನಿರೂಪಣೆಗಾಗಿ ಪ್ರಯೋಗಗಳನ್ನು ನಡೆಸುವಾಗ ಕೆಲವುವೇಳೆ ಆ ಪಾತ್ರಕ್ಕೊಪ್ಪುವ ನಟನಟಿಯರು ತಮ್ಮ ಗುಂಪಿನಲ್ಲಿ ಸಿಗುವುದಿಲ್ಲ. ಹಾಗೆಂದು ಸಿಕ್ಕಿದವರನ್ನು ತಂದು ಅಲ್ಲಿ ದೂಡಿಬಿಡುವುದಿಲ್ಲ. ಕೊಲಂಬಿಯಾ ಸಂಸ್ಥೆಯವರು ತಮ್ಮ "ಗೊಲ್ಡನ್ ಬಾಯ್" ಚಿತ್ರದ ಮುಖ್ಯ ಪಾತ್ರ ವಹಿಸಬಲ್ಲ ಹುಡುಗನಿಗಾಗಿ ಹನ್ನೆರಡು ತಿಂಗಳು ಅಲೆದಾಡಿದರು. ಆದರೆ ಕಡೆಗೆ ಒಬ್ಬ ಹೊಸ ಹುಡುಗನನ್ನೇ ಈ ರಂಗಕ್ಕೆ ಕರತರಬೇಕಾಯಿತು. ಇತ್ತೀಚಿಗಿನ "ಸಾಂಗ್ ಆಫ್ ಬರ್ನಡೆಟಿ" ಚಿತ್ರದಲ್ಲಿ ಮುಖ್ಯ ಪಾತ್ರವನ್ನು ನಿರ್ವಹಿಸಲು ಒಬ್ಬ ಹೊಸ ಹುಡುಗಿಯೇ ಬರಬೇಕಾಯಿತು. ಆ ಪಾತ್ರನಿರೂಪಣೆ ಎಷ್ಟು ಪರಿಪೂರ್ಣವಾಗಿದೆ ಎಂಬುದನ್ನು ಈ ಚಿತ್ರ ನೋಡಿ ತಿಳಿಯಬೇಕೇ ವಿನಾ ಬರೆದು ತಿಳಿಸಲು ಮಾತು ಸಾಲವು. ಆ ಸರಳತೆ, ಆ ವಿಶ್ವಾಸ, ಆ ಕಷ್ಟಸಹಿಷ್ಣುತೆ–ಇವೆಲ್ಲವೂ ರೂಪುತಾಳಿ ನಮ್ಮೆದುರು ನಿಂತಂತೆ ಭಾಸವಾಗದಿರದು. ಹೀಗಿರುವುದರಿಂದ ಕಳೆದ ಸಾಲಿನಲ್ಲಿ ಅಕಾಡೆಮಿ ಅವಾರ್ಡ್ ಆಕೆಗೆ ಲಭಿಸದೇ ಮತ್ತಾರಿಗೆ ದೊರೆಯಬೇಕಿತ್ತು? "ಗುಡ್ ಬೈ ಮಿಸ್ಟರ್ ಚಿಪ್ಸ್" ಚಿತ್ರಕ್ಕೆ ರಾಬರ್ಟ್ ಡೊನಾಟ್‌ನ ಆಯ್ಕೆ ಎಷ್ಟು ಸಮಂಜಸವಾಗಿತ್ತು, ನೀವೇ ನೋಡಿರಿ.

ಸುಮ್ಮನೆ ಮೇಲೆ ಮೇಲೆ ಪಾಶ್ಚಾತ್ಯ ಚಿತ್ರಗಳ ಹೆಸರುಗಳನ್ನೂ ಕೊಡುತ್ತಿರುವ ಕಾರಣವಾದರೂ ಇಷ್ಟೇ: ನಮಗೆ ಈ ಪಾತ್ರನಿರೂಪಣೆಯ ವಿಚಾರ ಏನೇನೂ ಅರ್ಥವಾಗಿಲ್ಲ.

"ಪಾತ್ರನಿರೂಪಣೆ ಹೇಗಾಗಕೂಡದು" ಎಂಬುದಕ್ಕೆ ಬೇಕಾದರೆ ನೂರಾರು ದೃಷ್ಟಾಂತಗಳನ್ನು ನಾನು ಕೊಡಬಲ್ಲೆ. ಜಯಂತ್ ದೇಸಾಯಿ ತಯಾರಿಸಿರುವ "ಭಕ್ತರಾಜ" ತೆಗೆದುಕೊಳ್ಳಿ. ಪಗ್ನೀಸ್ ಅಂಬರೀಷನ ಪಾತ್ರಧಾರಿ; ಅವರ ಮಗಳ ಭೂಮಿಕೆ ಹೊರಲು ಯೋಗ್ಯಳಿರುವ ನೂರ್‌ಜಹಾನ್ ಅಂಬರೀಷನ ಮಲತಾಯಿ; ಅವರ ಮೊಮ್ಮಗಳ ಪಾತ್ರಕ್ಕೆ ಚಲೋ ಇರುವ 'ಬೇಬಿ' ಕೌಸಲ್ಯ ಅಂಬರೀಷನ- ಹೆಂಡತಿ! ನಮ್ಮವರಿಗೆ ಬುದ್ಧಿ ಇದೆ ಎನ್ನೋಣವೇ? ಬುದ್ಧಿ ವಿಕಲ್ಪವಾಗಿದೆ ಎನ್ನೋಣವೇ? 'ವಾಪಸ್' ಚಿತ್ರದ ವಿಮರ್ಶೆ ಮಾಡುತ್ತಾ ಒಬ್ಬರು ಬರೆದಿದ್ದಾರೆ: "ಈ ಚಿತ್ರದ ವೈಶಿಷ್ಟ್ಯವೆಂದರೆ ನವ ತರುಣತರುಣಿಯರ ಪಾತ್ರವನ್ನು ನವತರುಣತರುಣಿಯರೇ ಹೊತ್ತಿದ್ದಾರೆ" ಎಂದು! ಯಾವುದು ಸಹಜವಾಗಿಯೇ ಆಗಬೇಕಿತ್ತೋ ಅದಾದರೆ ಅದನ್ನು ಮಹತ್ವದ ವಿಚಾರ ಎನ್ನಬೇಕು, ನಾವು!

ನಾವು ನಿಜವಾಗಿಯೂ ಈ ವಿಚಾರದಲ್ಲಿ ಯಶಸ್ವಿಗಳಾಗಲು ಸಾಧ್ಯವಿಲ್ಲವೇ? ಖಚಿತ ಸಾಧ್ಯವಿದೆ ಎಂತಲೇ ನನ್ನ ಮತ. ಈ ಬಗೆಯ ನಿರಾಶೆಯ ಅಂಧಕಾರದಲ್ಲೂ ಆಶೆಯ ಕಿರಣ ಸೂಸುವಂಥ ಚಿತ್ರಗಳು ನಮ್ಮಲ್ಲಿ ಇವೆ. 'ಪ್ರೆಸಿಡೆಂಟ್' ಚಿತ್ರದ ಕಮಲೇಶ ಕುಮಾರಿ, 'ಅಧಿಕಾರ್' ಚಿತ್ರದ ಜಮುನಾ, 'ಸಪೆರಾ' ಚಿತ್ರದ ನವಾಬ್, 'ಆದ್ಮಿ'ಯ ಶಾಂತಾ ಹುಬ್ಳಿಕರ್, 'ವಿದ್ಯಾಪತಿ'ಯ ಕಾನನಬಾಲಾ, 'ಚಂಡಿದಾಸ' ಚಿತ್ರದ ಉಮಾ, 'ಬಡೀ ದೀದಿ'ಯ ಮೋಲಿನಾ ಹಾಗೂ ಪಹರಿ, 'ಕಾಶೀನಾಥ' ಚಿತ್ರದ ಸುನಂದಾ ಹಾಗೂ ಭಾರತೀ—ಇವು ಕೆಲವು ಪಾತ್ರನಿರೂಪಣೆಯ ಬಗ್ಗೆ ಸರ್ವಸಮರ್ಪಕವಾದ ನಿದರ್ಶನಗಳು. ನ್ಯೂಥಿಯೇಟರ್ಸಿನ ಹಲವು ಚಿತ್ರಗಳು ಈ ಬಗ್ಗೆ ಆದರ್ಶನೀಯ ಕೃತಿಗಳಾಗಿವೆ. ಪ...
ಯಲ್ಲೂ ಒಂದೆರಡು ಅಂಥ ಚಿತ್ರಗಳು ನಮಗೆ ಸಿಗು...
"ಚರಣೋಂಕಿ ದಾಸಿ" ನೋಡಿದ ಹೆಣ್ಣು ಮಗಳೊ...
"ಸತ್ತರೂ ಸರಿಯೆ, ನಾ ದುರ್ಗಾಬಾಯಿಯ ಸೊಸೆ ...
ವುದಿಲ್ಲ" ಎಂದು ನಡುಗುತ್ತಾ ನುಡಿದಳಂತೆ! ಅಂದಕೆ ದು...
ಖೋಟೆಯ ಆ ಪಾತ್ರಸೃಷ್ಟಿ ಎಷ್ಟು ವಾಸ್ತವವಾಗಿರ...
ನೀವೇ ನೋಡಿ. ಪಾತ್ರ ನಿರೂಪಣೆ ಸರಿಯಾಗಿದ್ದ...
ಪಾತ್ರ ಎಷ್ಟು ಮಟ್ಟಿಗೆ ನಿಮ್ಮ ಮಾನದ ಮೇಲೆ ಪರಿಣ...
ಕಾರಿಯಾಗಬಲ್ಲುದು ಎಂಬುದಕ್ಕೆ ಇದೊಂದು ದೃಷ್ಟಾ...
ಇದಕ್ಕೆ ತೀರಾ ವಿರೋಧ ರೀತಿಯ ದೃಷ್ಟಾಂತ ಒಂದ...
ನೋಡಿ: ನಳಿನಿ ಜಯವಂತ್‌ಳ ಮೊದಲ ಚಿತ್ರ 'ರಾ...
ನಳಿನಿ ಚೆಲುವಿನ ಗಣಿ - ತುಂಟತನ ಎನ್ನುವುದು ಈ ಕಣ್ಣಿ...
ತುಳುಕಾಡುತ್ತಿದೆ. 'ಕುಣಿದಾಡೋಣ ಬಾರ' ಎಂಬ...
ಆ ಮನ ಕಾತರಿಸುವಂತಿದೆ-ಇಂಥ ಮಗುವನ್ನು ಕರದೊ...
ಈ ಸನ್ಯಾಸಿನಿಯ ಪಾತ್ರ ಕೊಟ್ಟಿದ್ದಾರೆ! ಇನ್ನು ಆ ...
ಕಳೆಗಟ್ಟಬೇಕೆಂದರೆ ಹೇಗೆ ತಾನೆ ಸಾಧ್ಯ? ಅದೇ "ಆ...
ಮಿಚೌಲಿ"ಯಲ್ಲಿ ನಳಿನಿ ಹೇಗೆ ಅಭಿನಯಿಸಿದ್ದಾಳೆ!


ನಮ್ಮವರು ಪ್ರಯತ್ನಪಟ್ಟರೆ ಇದೇನೂ ಅಸಾಧ್ಯ...
ಕಾರ್ಯವಲ್ಲ. ಆದರೆ ಆ ಬಗ್ಗೆ ನಮ್ಮವರಿಗಿನ್ನೂ ಮನ...
ಬಂದಿಲ್ಲ. ಹೆಚ್ಚು ಹೆಚ್ಚು ಹಣ ಸಂಪಾದಿಸಿ, ಬೇಗಬೇ...
ಶ್ರೀಮಂತರಾಗಲು ಹೊರಟಿರುವವರೇ ಎಲ್ಲರೂ! ಕಾಂ...
ಪ್ರಿಯರಾದ ಇಂಥ ಮಂದಿಯಿಂದ ಏನು ತಾನೆ ಕಲಾಸಾ...
ಆದೀತು? ಈ ಕಡೆ ನಮ್ಮವರು ಗಮನ ನೀಡದ ಹೊ...
ನಮ್ಮ ಚಿತ್ರೋದ್ಯಮ ಊರ್ಜಿತವಾಗುವುದಾದರೂ ಎಂತ...



ಸುಪ್ರಖ್ಯಾತ ದಿಗ್ದರ್ಶಕ ನಿತಿನ್ ಬೋಸ್ ಶ್ರೀ ಫಿಲ್ಮಿನ ಮಾಜಿ ಪಾಲುಗಾರರು. ಈಗ ಅಮರ ಪಿಕ್ಚರ್ಸ್‌ದಲ್ಲಿರುವರು.



ಡಿ. ಆರ್. ಡಿ. ವಾಡಿಯಾರವರ "ಐನಾ" (ಕನ್ನಡಿ) ಚಿತ್ರದಲ್ಲಿ ಕೌಸಲ್ಯಾ



ತೆಲುಗು "ಭೀಷ್ಮ" ಚಿತ್ರದಲ್ಲಿ ಬಲಿಜೆಪ...

ರಾಣಾ ಪ್ರತಾಪಸಿಂಹ


ಬರೆದವರು: "**ಸುವು.**"

ಮೊಗಲ್ ಸಾಮ್ರಾಜ್ಯಷಾಹಿಗೆದುರಾಗಿ ಹೋರಾಟ ನಡೆಸುತ್ತಿದ್ದ ರಾಣಾ ಪ್ರತಾಪಸಿಂಹನು, ತನ್ನ ಸೇನೆಗಳ ಸಹಿತ, ಅರಾವಲೀ ಬೆಟ್ಟಗಳಲ್ಲಿ ಢೇರೆ ಹೊಡೆದಿದ್ದನು. ಸೈನಿಕರಿಗೆ ಆಹಾರ ಸರಬರಾಯಿಯು ಕಷ್ಟತಮವಾಗುತ್ತಿತ್ತು. ರಾಣನು, ತಾನು ಚಿತ್ತೂರನ್ನು ತಿರುಗಿ ಪಡೆದಲ್ಲದೆ ಮೃಷ್ಟಾನ್ನವುಣ್ಣಲಾರೆನೆಂದೂ, ಮೃದುತಲ್ಪದಲ್ಲಿ ಶಯನಿಸಲಾರೆನೆಂದೂ ಪ್ರತಿಜ್ಞೆ ಮಾಡಿದುದು ಇತಿಹಾಸಪ್ರಸಿದ್ಧವಿದೆ. ಸಾಮಾನ್ಯ ಸೈನಿಕರಿಗೆ ಹಂಚುತ್ತಿದ್ದ ಪಡಿಯೇ ರಾಣನ ಪಥ್ಯವೂ ಆಗಿತ್ತು. ರಾಣನ ಪತ್ನಿಯೂ ಮಗುವೂ ಅವನ ಜತೆಯಲ್ಲಿ ಇದ್ದರು. ಒಮ್ಮೆ, ರಾಜಬಾಲಕನು ಸಪ್ಪಗಾದ ಜೋಳದ ರೊಟ್ಟಿ ತುಂಡನ್ನು ಣ್ಣುತ್ತಿದ್ದಾಗ, ಒಂದು ಕಾಡುಬೆಕ್ಕು ಬಂದು, ಮಗುವಿನ ಕೈಯಿಂದ ಆ ರೊಟ್ಟಿ ತುಂಡನ್ನೆಳಕೊಂಡು ಓಡಿತು. ಮಗು ಕೂಗಿತು. ಅದನ್ನು ಸಮಜಾಯಿಸಲು ಮತ್ತೊಂದು ರೊಟ್ಟಿ ತುಂಡು ಕೂಡ ಅಲ್ಲಿರಲಿಲ್ಲ. 'ರಾಜಬಾಲಕನಿಗೀ ದುಸ್ಥಿತಿಯೇ?' ಎಂದು ರಾಣನ ಎದೆ ಕರಗಿತು. ಆಗಲೇ ರಾಣನು ಅಕ್ಬರನೊಡನೆ ಸಂಧಿ ಸೂಚಿಸಿ ಪತ್ರ ಬರೆದನೆಂದೂ, ಪತ್ರವಾಹಕನು ಹೊರಟುಹೋದ ನಂತರ ರಾಣನ ಮತಿಯು ತಿಳಿಗೊಳ್ಳಲು—ಅವನನ್ನು ಹಿಂದೆ ಕರೆಸಲು ಯತ್ನಿಸಿದನೆಂದೂ, ಆದರೆ, ಆ ವಾಹಕನು ಬಹುದೂರ ತಲಪಿದುದರಿಂದ ಸಾಧ್ಯವಾಗದಿರಲು,—ಅತ್ತ, ಅಕ್ಬರನು ರಾಣಾ ಪ್ರತಾಪಸಿಂಹನ ಪತ್ರ ನೋಡಿ, ರಾಣನ ಶೌರ್ಯ—ಅಭಿಮಾನ—ಛಲಗಳನ್ನು ಚೆನ್ನಾಗಿ ತಿಳಿದವನಾದ ಕಾರಣ ಪತ್ರವನ್ನು ನಂಬಲಿಲ್ಲವೆಂದೂ—ಉಲ್ಲೇಖವಿದೆ. ಈ ಕವಿಯು ರಾಣನ ಆಗಳಿನ ಮನೋಸ್ಥಿತಿಯನ್ನು ಇಲ್ಲಿ ವರ್ಣಿಸುತ್ತಿರುವನು.

ಓ ವಿಧಿಯೆ! ನೀನೆನಿತು ದಾರುಣನೊ! ನಾನರಿಯೆ! --
ೀವಿಧದ ಪಂಥದಲಿ ಮುಂದೆನ್ನ ಕೊಂಡೊಯ್ಯ—
ೀವಾಂಛೆ-ನಿನಗಾಯ್ತು; ಬಂದಿರುವ ಬೇಗುದಿಯು
ರ್ವಸುಖ ಭೋಗಗಳ ಕಾರಿಸಿತು. ಜನನಿಯಿಂ
ೋವುತ್ತೆ ಕೊಟ್ಟಿರುವ ಮೊಲೆವಾಲ ಶಕ್ತಿಯಿದೊ
ಾನಳಿದು ತಿರುಗುವೆಂ ಕಾನನದಿ. ಭೋಜ್ಯಮಿದೊ
ಾನೆರೆದುಕೊಳಲಾಯ್ತು. ಪೊಡವಿಪತಿ ಪೊಡೆಗಿರದೆ
ೊರಗುತಿಹ ಮಡದಿಯಿಂ, ತನುಜರಿಂ, ಸಿಂದನಿದೊ!
ರೆಯಲ್ಲಿ ಹಸಿವಿನೀ ಪ್ರಶ್ನೆ ಬಹು ದೊಡ್ಡದಿದೆ;
ರಿವೆನೇಂ ಹುಟ್ಟಿಂದಲರಿಯದಿಹ ಪಂಥಮಿದು.
ಾರತದ ಓ ಜನನಿ! ಧರೆದೇವಿ ನೋಡಿದೋ
ೊರಾರು ದಿನದಿಂದ ಬರಿದಾದ ಹೊಟ್ಟೆಯಿದೆ—
ುರೆಯುಂಡ ನಿನ್ನೊಡಲ ಮಕ್ಕಳಂ ಕಾಣಲಿದ
ಧಿಲೀಲೆಯೆಂದೆನಲೆ! ಉಣಲಿದ್ದು ಕುಳಿತಿದ್ದು
್ಷಿಥೆಯುಳಿಪ ತಿಸಿಪನ್ನೆ ಕೊಂಡೊಯ್ಯಲೆಂಬುದೇಂ?
ಾಳ್ಮೆಗದ ವರ್ತನಂ ಯೆನ್ನೆದೆಯ ಕದಡುತಿದೆ;
ಾಳಿನಾ ವಾತ್ಸಲ್ಯ ರಸಗೂಡಿ ಬೆರಸುತಿದೆ;
ೊಳಿಂಗೆ ಸಂಧಿಸುವ ಮತಿಯೆತ್ತಿ ಕೇಳುತಿದೆ;
ಮೂಳಿಗದ ಬಾಳಿಂಗೆ ತನು ಚೆಲ್ಲಿ ಹೊರಡುತಿದೆ;
ೋಳಿಡಿದ ಭಾರತದ ಪುತ್ರನಾ ಕರ್ಮವಿದು.
ಾಳಾಯ್ತು ಸರ್ವಸ್ವ. ಜೀವಿಸುತೆ ನಿಂದಿಂದು
ೋಳ್ಬಲವ ಮುಚ್ಚುತ್ತೆ ಗಂಡುತನವಳಿಸುತ್ತೆ:
ಾಳ್ಮೆಗದ ನೆಲೆಯಿಂದ ಕೀಳಾಗಿ ರಾಣನಿದೊ
ೊರದಿಂ ಬಂದಿರುವ ಮೊಗಲನಡಿಗೆರಗುತ್ತ
ೋರತರ ಪರದಾಸ್ಯದಿರವಿಂಗೆ ಸನ್ನದ್ಧ
ನಾಗಲಿಹ ಮನಗೊಳ್ಳಲತಿದೀರ್ಘ ಪಾದಪದ
ಮೇಗಿಂದ ಫಲವೊಂದು ಭೂತಲಕೆ ಬೀಳಲದ
ಕಂಗೆಟ್ಟು ನೋಡಿದಂ ಮೇಲ್ದೆಸೆಗೆ. ಚಾತಕದ
ಖಗವೊಂದು ವಿಟಪಿಯಾ ಶಾಖೆಯಲಿ ತೋರ್ದತ್ತು.
ಮಂಗಡೆಯೆ ಕೇಸರಿಯು ಪದಚಿಹ್ನ ಕಂಡತ್ತು.
ಸಿಂಗಮಂ ಪೋಲುತಿಹ ರಾಣನೆದೆಯೊಡನಿರದೆ:
ತಾಂಗೆಯ್ವ ಕಜ್ಜಕ್ಕೆ ಹೇಸಿಗೆಯಗೊಂಡತ್ತು.
ಮತ್ತೊಮ್ಮೆ ಚಾತಕವ ಕಣ್ತುಂಬ ನೋಡುತ್ತ;
ಓ ರಾಣ! ನೀನೆಂಥ ಜೀವಿಯೌ! ಖಗದಿಂದೆ
ಮಿರಿರುವ ಮನುಜತೆಯನೊಂದಿರ್ದು ಬೇಡುವುದೆ!
ದಾರುಣಂ ನೀನಾದೆ. ತಿಳಿವಿಂದೆ ಕೀಳಾದೆ.
ಕೂರ್ತಿರುವ ಗತಿಪಾಠ ಯಿೂ ಹಕ್ಕಿ ತೋರುತಿದೆ.
ನೀರುಳ್ಳ ತಲಮೆನಿತೊ ಕಂಡೊಡುಂ, ಜೀವನದ
ನೀರಳ್ಕೆಯುಳಿಸಲ್ಕೆ ತನಗಿರುವ ಮೇಘದಾ
ವರ್ಷವನೆ ಕಾಯುತಿದೆ. ಮರಿಗಳ್ಗೆ ತೃಷೆ ಬಾಧೆ
ಬಾಧಿಸಲ್ ಜೀವನದ ನಿಷ್ಠೆಯಂ ಪೇಳುತಿದೆ.
ಸಾಧುಜನ ಪಂಥಮಂ ನಡೆಯಿಂದ ತೋರುತಿದೆ.
ಮಾತಿರದ ಹಕ್ಕಿಯಿಂ ಕಡೆಯಾಗಿ ಬಾಳುವೆನೆ!
ಓತಿರುವ ಜನವೃತ್ತಿಗಾಣುತ್ತೆ ತಪ್ಪುವೆನೆ!
ಘಾತುಕಂ ತಾನೆನಿಸಿ ದೇಶವಂ ಬಂಧಿಪೆನೆ.
ಕೀರ್ತಿಲತೆಯಲ್ಲಿಯೇ ಮಡಿವಂತೆ ಗೆಯ್ಯುವೆನೆ.
ತಮ್ಮದಟ ತೋರುತ್ತೆ ಬಂದಿಹರ ಮರೆಯುವೆನೆ.
ನಾಂ ಸ್ವಾರ್ಥಿಯಾಗುತ್ತಲೊಪ್ಪಂದ ಗೆಯ್ಯುವೆನೆ.
ನಾಡಿಂಗೆ ಹರಣಮಂ ದೇಹಮಂ ರಕುತಮಂ
ನೀಡುವುದು ದೇಶಧುದ್ಧಾರಕಿಹ ವರ್ತನಂ.

(119ನೇ ಪುಟ ನೋಡಿರಿ)

ಸೌ। ಕಮಲಾಬಾಯಿ ಮಂಗಳೂರಕರ್



"ಪನ್ನಾಡಾಯಿ" ಚಿತ್ರನಿರ್ಮಾತೃ
ಶ್ರೀಮತಿ ಕಮಲಾಬಾಯಿ ಮಂಗಳೂರಕರ್.

ಸೌ। ಕಮಲಾಬಾಯಿ ಮಂಗಳೂರ್‌ಕರ್—ದಕ್ಷಿಣ ಕನ್ನಡದ ಮಹಿಳೆ,—ಚಿತ್ರನಿರ್ಮಾತೃವಾಗಿ, ದೇಶಪ್ರಸಿದ್ಧರಾಗಿರುವರು. ಚಿತ್ರ ನಿರ್ಮಾಣ ಕಾರ್ಯದಲ್ಲಿ ತೊಡಗಿದ ಪ್ರಥಮ ಮತ್ತು ಏಕಮಾತ್ರ ಕರ್ನಾಟಕ ಮಹಿಳೆ ಇವರೇ. ಇವರ ಪರಿಚಯಕ್ಕಾಗಿ ಅಭಿಮಾನ ಪೂರ್ವಕವಾದ ಆತುರದಿಂದಿರುವ ಕನ್ನಡಿಗರ ಜಗ್ಗೆ, ಈ ಲೇಖನವನ್ನು ಇಲ್ಲಿ ಕೊಟ್ಟಿರುವೆವು.

ಸೌ। ಕಮಲಾಬಾಯಿ ಮಂಗಳೂರಕರ್ ಇವರ ಜನ್ಮವು ಮಂಗಳೂರ ಪ್ರಸಿದ್ಧ ಶ್ರೀಮಂತ ಕುಲದಲ್ಲಿ ಉಂಟಾಯಿತು. ಆದರೆ ಶ್ರೀಮಂತ ಕುಲದವರಿದ್ದರೂ ಕಮಲಾಬಾಯಿಯವರಲ್ಲಿ ತುಂಬ ಉದ್ಯೋಗಾಸಕ್ತಿಯೂ ಮಹಾತ್ವಾಕಾಂಕ್ಷೆಯೂ ಅಗಮ್ಯವಾಗಿತ್ತು. ವಿಶೇಷವಾಗಿ ಮೊದಲಿನಿಂದಲೂ ಅವರ ಮನೋವೃತ್ತಿಯು ಸಂಗೀತದ ಕಡೆಗೆ ಹರಿದಿತ್ತು. ಬಾಲ್ಯದಲ್ಲಿ ಅಂದರೆ ಕೇವಲ ಎಂಟನೆ ವಯಸ್ಸಿನಲ್ಲಿ, ದುರ್ದೈವವಶಾತ್, ಮಾತಾಪಿತೃಗಳು ಸ್ವರ್ಗಸ್ಥರಾದರು. ಈ ಆಘಾತಾನಂತರ ಅವರ ಮನೆಯು ಬೆಳಗಾಂವದ ಕಡೆಗಾಯಿತು.

ಬೆಳಗಾಂವಿನಲ್ಲಿ ಸಂಗೀತ ಶಿಕ್ಷಣವನ್ನು ಮುಂದರಿಸುತ್ತ, ಸಂಗೀತಕಲೆಯಲ್ಲಿ ಪ್ರಾವೀಣ್ಯತೆ ಪಡೆದರು. ಅವರ ಉದ್ಯೋಗಾಸಕ್ತಿ ಮತ್ತು ಮಹತ್ವಾಕಾಂಕ್ಷೆ ಮನಸ್ಸಿಗೆ, ತಾನೇನಾದರೂ ಮಾಡಬೇಕು ಅದು ಕಲಾತ್ಮಕವಾಗಿರಬೇಕು. ಸಮಾಜಸೇವೆಯಾಗಬೇಕು – ಹೀಗೆನಿಸುತಿತ್ತು. ಸಂಗೀತದ ಅಭಿರುಚಿಯು ಚಲಚ್ಚಿತ್ರದ ಪ್ರೇಮವನ್ನೂ ಹುಟ್ಟಿಸುತ್ತಿತು. ಇಂತಹ ಉಚ್ಚ ವಿಚಾರದ ಆಕಾಂಕ್ಷೆಗಳು ಅತ್ಯಂತವಾಗಿರುವ ಸಮಯದಲ್ಲಿಯೇ, ಸಾಂಗ್ಲಿಯ ಓರ್ವ ಶ್ರೀಮಂತ ವ್ಯಾಪಾರಿಯೊಡನೆ ಅವರ ವಿವಾಹವು ನಡೆಯಿತು. ವಿವಾಹ ಕಾಲದಲ್ಲಿ ಕಮಲಾಬಾಯಿಯವರಿಗೆ ವಯಸ್ಸು ಸುಮಾರು ಹತ್ತೊಂಭತ್ತು.

ಸಾಂಗ್ಲಿಯ ಸಾಂಸಾರಿಕ ಜೀವನವು ಅವರಿಗೆ ಬೇಸರಿಕೆಯನ್ನು ಹುಟ್ಟಿಸಿತಾದರೂ ಸಮಾಜ ಸೇವಾಕಾಂಕ್ಷೆಯು ಅವರಿಂದ ಕಡಿಮೆಯಾಗಲಿಲ್ಲ; ಮಹತ್ವಾಕಾಂಕ್ಷೆಗಳು ಕುಗ್ಗಲಿಲ್ಲ. ಏನಾದರೂ ಕಾರ್ಯವನ್ನು ಕೈಕೊಳ್ಳಬೇಕೆಂಬ ವಿ[illegible]ರವು ಯಾವಾಗಲೂ ಉಂಟಾಗುತಿತ್ತು; ಮತ್ತು ಈ ವಿ[illegible]ವನ್ನು ಆಗಾಗ್ಗೆ ತನ್ನ ಮನೆಯವರೊಂದಿಗೆ ನುಡಿಯುತಿದ್[illegible]

ಕೆಲವು ವರ್ಷ ಸುಖಸಂಸಾರ ನಡೆಯಿತು. [illegible]ರೊಂದಿಗೆ ಕಾರ್ಯೋತ್ಸಾಹವೂ ಬೆಳೆಯಿತು. 'ಸಂಗೀ[illegible] ಮೂಲಕ ಏನಾದರೊಂದು ಕಾರ್ಯವನ್ನು ಮಾಡಬೇ[illegible] ಎಂಬೀ ವಿಚಾರವು ಬಲವಾಗ ತೊಡಗಿತು. ಆಲೋ[illegible]ತಿದ್ದಂತೆ ಚಿತ್ರಪಟ ಸೃಷ್ಟಿಯ ಕಾರ್ಯ ಕ್ಷೇತ್ರವು ರುಚಿಸಿ[illegible] ಮನೆಯವರಿಗೂ ತನ್ನ ವಿಚಾರವನ್ನು ತಿಳಿಸಿದರು.

ಕಮಲಾಬಾಯಿಯ ಪತಿಗೃಹದವರು ಉದಾರಿ[illegible] ಧ್ಯೇಯವಾದಿಗಳೂ ತಿಳಿವುಳ್ಳವರೂ ಆದುದರಿಂದ ಕಮ[illegible]ಬಾಯಿಯನ್ನು ಮಕ್ಕಳಿರದ ಕಾರಣದಿಂದಲೂ ಆಕೆಯ ಮ[illegible]ತ್ವಾಕಾಂಕ್ಷೆಯ ಮನಸ್ಸರಿತವರಾದ್ದರಿಂದಲೂ ಕತ[illegible]ಶೀಲತೆಯ ಸಂಪೂರ್ಣ ಅರಿವುಳ್ಳದ್ದರಿಂದಲೂ ಅವರಿಂದೇ[illegible] ಆತಂಕ ಉಂಟಾಗಲಿಲ್ಲ. ಬದಲಾಗಿ ಪ್ರೋತ್ಸಾ[illegible] ದೊರೆಯಿತು.

ಚಿತ್ರ ನಿರ್ಮಾಣದ ಬಗ್ಗೆ ಅನುಜ್ಞೆ ಸಿಗುತ್ತಲೇ 194[illegible] ಇಸವಿಯಲ್ಲಿ ಕಮಲಾಬಾಯಿಯವರು "ಪ್ರದೀಪ ಪಿಕ್ಚ[illegible] ಎಂಬ ಸಂಸ್ಥೆಯನ್ನು ಕೊಲ್ಲಾಪುರದಲ್ಲಿ ಸ್ಥಾಪಿಸಿ ಧ್ಯೇ[illegible]ವಾದೀ ಚಿತ್ರಪಟ "ಸಾವಳ್ಯಾ ತಾಂಡೇಲ್" ಇದರ ತ[illegible]ರಿಕೆಗೆ ತೊಡಗಿದರು. ದೇಶಪ್ರೇಮದಿಂದ ಕೂಡಿದ [illegible] ಶಿವರಾಯ ದಯಾಸಾಗರರ ಕಾರ್ಯ ಭಾರದ ಸೇನಾನ[illegible]

ಕತ್ವದ ಚಿತ್ರಪಟವನ್ನು ತೆಗೆದು ಜನಜಾಗ್ರತಿಯುಂಟುಮಾಡ ಬೇಕೆಂದು, ಹಾಗೆಯೇ ರಾಷ್ಟ್ರದ ಸ್ವಾತಂತ್ರ್ಯ ಸಾಧನದ ಜೀವನವನ್ನು ತೋರಿಸಬೇಕೆಂಬುದು ಕಮಲಾಬಾಯಿಯವರ ಧ್ಯೇಯವಾಗಿತ್ತು. ಆದರೆ ಲೋಕಮಹಾಯುದ್ಧದ ಕಠಿಣಾ ವಸ್ಥೆಯ ಮೂಲಕ "ಸಾವಳ್ಯಾ ತಾಂಡೇಲ" ಸಂಪೂರ್ಣ ಯಶಸ್ಸು ಪಡೆಯಲಾಗಲಿಲ್ಲ.

ಮೊದಲನೆಯ ಚಿತ್ರಪಟದ ಮೂಲಕ ಉಂಟಾದ ಅನು ಭವದ ಕಾರಣ ಚಿತ್ರೋದ್ಯೋಗದ ಪ್ರಧಾನಕೇಂದ್ರವು ಮುಂಬಯಿಯೇ ಎಂದು ತೋರಿ, ಅವರು ಕಂಪೆನಿಯ ಕಾರ್ಯಭಾರವನ್ನು ಮುಂಬಯಿಗೆ ಸಾಗಿಸಿದರು. ಅಲ್ಲಿ "ವಕೀಲ ಸಾಹೇಬ" ಎಂಬ ಅತ್ಯಂತ ಸುಂದರವಾದ ಚಿತ್ರ ವನ್ನು ತಯಾರಿಸಿದರು. ಧ್ಯೇಯವಾದೀ ದೃಷ್ಟಿಯನ್ನು ದೃಢೀ ಕರಿಸಿ ಕಮಲಾಬಾಯಿಯವರು, ಮೂರನೇ ಚಿತ್ರಪಟದ ಬಗ್ಗೆ—ದೇಶಕ್ಕಾಗಿ ಅಸಮಾನ ಸ್ವಾರ್ಥತ್ಯಾಗ ಮಾಡಿದ ಪನ್ನಾದಾಯಿಯ ಚಿತ್ರಕಥೆಯನ್ನಾರಿಸಿದರು.

ಕಮಲಾಬಾಯಿಯವರು ಕೇವಲ ಧನದ ಕಡೆಗೆ ಲಕ್ಷ್ಯ ಕೊಡಲಿಲ್ಲ. ಧನಕ್ಕಿಂತ ಧ್ಯೇಯವೇ ಅವರಿಗೆ ಪ್ರಿಯವಾ ಗಿದು. ಸಮಾಜ ಸೇವೆಯ ಹಿತೇಚ್ಛುಗಳು, ಅವರ ದೇಶ ಪ್ರೇಮದ ಸಂದೇಶವಾಹಕವಾಗಿರುವ ಚಿತ್ರಪಟವು ಉತ್ತ ಮೋತ್ತಮವಾಗಬೇಕೆಂದೆಣಿಸಿ,—ದುರ್ಗಾಖೋಟೆ, ಚಂದ್ರ ಮೋಹನ, ಮೀನಾಕ್ಷಿ, ಮುಬಾರಕ್, ಎಂ. ಇಸ್ಮಾಯಿಲ್, ಮೊದಲಾದ ಉಚ್ಚಶ್ರೇಣಿಯ ಕಲಾವಂತರನ್ನು ಈ ಚಿತ್ರ ಕ್ಕಾಗಿ ಆರಿಸಿದರು. ರಾಮದಯಾಳಸಿಯವರಂತಹ ಸಿಷ್ಣಾತ ಮಾರ್ಗದರ್ಶಕರನ್ನು ನಿಯಮಿಸಿದರು. "ಪನ್ನಾದಾಯಿ" ಚಿತ್ರವು ರಾಜಠೀವಿಯ ವೈಭವದಿಂದ ತಯಾರಾಯಿತು.

ಇತ್ತೀಚೆಗೆ ಚಿತ್ರ ಪ್ರಪಂಚದಲ್ಲಿ "ಪನ್ನಾದಾಯಿ" ಚಿತ್ರಪಟದ ಮಾತೇ ಎಲ್ಲೆಡೆಯಲ್ಲೂ ಕೇಳಿಸುತ್ತಿದೆ. ಅದ ರಲ್ಲೂ ಓರ್ವ ಮಹಿಳೆಯು ಇಷ್ಟು ಮಹತ್ವದ ಚಿತ್ರವನ್ನು ನಿರ್ಮಿಸುವ ಭಾರವನ್ನು ವಹಿಸಿದ್ದು ಮಾತ್ರವಲ್ಲ, ತನ್ನೊಬ್ಬಳ ಜವಾಬ್ದಾರಿಕೆಯ ಮೇಲೆ ಯಶಸ್ವಿಯಾಗಿ ಪೂರ್ಣಗೊಳಿಸಿದ ಳೆಂದು ಎಲ್ಲರೂ ಆಶ್ಚರ್ಯವನ್ನು ಪ್ರಕಟಿಸುತ್ತಾ, ಕಮಲಾ ಬಾಯಿಯವರ ವಿಷಯದಲ್ಲಿ ವಿಸ್ಮಯಾಹ್ಲಾದ ಹೊಂದುತ್ತಿ ರುವರು.

ಕಮಲಾಬಾಯಿಯವರು ತಾನು ಧ್ಯೇಯವಾದೀ ಚಿಂತನೆಯವರಾಗಿರುವರು. ಈ ಬಗೆಯ ಪ್ರಶಂಸೆಯಿಂದ ಅವರು ಹಿಗ್ಗದೆ, ಧ್ಯೇಯವಾದೀ ಕಾರ್ಯಕ್ರಮವನ್ನು ಮುಂದರಿಸುತ್ತಲಿರುವರು. ಅವರು ಮುಂದಿನ ಆಕರ್ಷಕ ಎರಡು ಚಿತ್ರಗಳ ವಿಚಾರವನ್ನು ಪ್ರಕಟಿಸಿರುವುದರಿಂದ ಅದೇ "ರುಕ್ಮಿಣಿ ಸ್ವಯಂವರ" (ಪೌರಾಣಿಕ ಕಥೆ)ಯ ತಯಾರಿ ನಡೆಸಿರುತ್ತಾರೆ. ಅನಂತರ, ರಾಣಿ ಅಹಲ್ಯಾಬಾಯಿ ಹೋಳ್ಕರ" ಇವರ ಜೀವನ ಚರಿತ್ರೆಯನ್ನುಳ್ಳ ಚಿತ್ರಪಟನಿರ್ಮಾ ಣದ ನಿರ್ಧಾರ ಮಾಡಿರುವರು.


ಇಂತಹ ಕರ್ತವ್ಯಪರಾಯಣೆ, ಧ್ಯೇಯವಾದೀ ಮತ್ತು ಸಾಹಸೀ ಮಹತ್ವಾಕಾಂಕ್ಷಿ ಮಹಿಳೆಯು ನಮ್ಮ ಮಂಗಳೂರಿ ನವರು ಎಂದು ತಿಳಿಯಲು ಮಂಗಳೂರಿನವರು, ಹಾಗೆಯೇ ಸಮಸ್ತಕನ್ನಡಿಗರು ಅಭಿಮಾನ ಪಡುವುದು ಸಹಜ! ಅವ ರನ್ನು ಗೌರವ ಪ್ರಶಂಸೆಗಳಿಂದ ಕಾಣಲು ಯಾರಿಗೆ ತಾನೇ ಮನಸ್ಸುಂಟಾಗದು! ನಾವು ಅವರನ್ನು ಹೃತ್ಪೂರ್ವಕ ಅಭಿ ನಂದಿಸಿ ಅವರು ಕೈಕೊಂಡಿರುವ ಕಾರ್ಯದಲ್ಲಿ ದೇವರು ಅನುಗ್ರಹಿಸಲೆಂದು ಪ್ರಾರ್ಥಿಸುವೆವು. ಅವರ ಕೀರ್ತಿಯು ಇದೇ ರೀತಿ ಬಳೆಯುತ್ತಾ ಹೋಗಲಿ ಎಂಬ ಇಚ್ಛೆಯನ್ನು ಪ್ರಕಟಿಸಿ, ಈ ಪರಿಚಯಾತ್ಮಕ ಲೇಖವನ್ನು ಇಲ್ಲಿಗೆ ಕೊನೆ ಗೊಳಿಸುವೆವು.

[117ನೇ ಪುಟದಿಂದ ಮುಂದರಿದುದು]

ನಾಡಳಿಸಿ ಬೀಡಳಿಸಿ ಕುಲವಳಸಿ ತೊಳ್ತುತನ
ಬೇಡುತ್ತೆ, ಮಕ್ಕಳಂ ದಾಸ್ಯಕ್ಕೆ ತಳ್ಳುವೆನೆ?
ಮೂಢತನವನ್ಯಾಯವಿದರಿಂದ ಮೇಲೇನು?
ನಾಡಿನುದ್ಧಾರಗತಿ ಸರ್ವರಂ ಹೊಂದಿರ್ದು
ನಾಡ ಹಿತದೆಸಕಮಂ ಮಾಡದಿರೆ ಜನ್ಮದಿಂ
ಮಾಡಿರುವ ಕರ್ತವ್ಯ ಪರಜನರ ಸಂಪದವ
ವರ್ಧಿಸುತೆ, ಮಕ್ಕಳಂ ಮರಿಗಳಂ ನುಂಗಿಸುವ
ವಧೆ ದೋಷವೆನ್ನನು ಮುತ್ತುತ್ತ ಬಳಸುವುದು.
ಮುಂದೆನಗೆ ಬಳಸುವಾ ಪಾಪ ಜನ್ಮ ಜನ್ಮದೊ—
ಳೊಂದಿಸಿತು ಸುಖಗತಿಯಗೊಡದಿರುತೆ ಬಾಳಿಂದೆ
ಬಿಳ್ದಸ್ಪೆ. ಮೊಗಲರಿಗೆ ಮಣಿಯೆನಾಂ ಸಂಧಿಗಿದೊ!
ತರ್ಪಣೆಯು ನಾನಿತ್ತೆ. ಮೊಳಗುವೆಂ ಸ್ವಾತಂತ್ರ್ಯ
ಸಂಪತ್ತಿಸಾಧನೆಯ ಮಾರ್ಗವಂ ಕರ್ತವ್ಯ
ವೆಮುಗಿಹುದು; ಫಲಸಿದ್ಧಿಯೊ ಪ್ರೇಮಪಥವರ್ತಿ
ಗಾಮಂತ್ರಣಂ ಗೆಯ್ಯದೊಡೆ ಕುಂದವಂಗಿಲ್ಲ;—
ವೆಂದೊರೆದು ಮನದಲ್ಲಿ, ಬಿಳ್ದಿರ್ದ ವೃಕ್ಷಫಲ
ಮೊಧಲಿತ್ತು ಕುವರಂಗೆ, ಸಂತ್ಸಯಿಸಿ ತಿಳುಪಿದಂ
ಸುಧೆಬಿಂದು ವರ್ಷಿಸುವ ಸೂಕ್ತಿಯಿಂ ಸಿಂಹಶಿಶು
ಚಿತ್ರಮುಂ ರೂಪಿಸಲ್ ವೀರಾವೇಶ ಬಂದತ್ತು;
ಮುದವೊದಗಿ ಸಂಧಿಯಾಮಂತ್ರಣೆಯು ಮುರಿದತ್ತು.

ಚಲಚ್ಚಿತ್ರಗಳಲ್ಲಿ ಸಂಗೀತ

ಲೇಖಕರು: ಶ್ರೀ। ಎಚ್. ಎಸ್. ಪೈ, ಸಂಪಾದಕ: ಸಿನೆಮಾ ಪುಟ, ಪ್ರಭಾತ.



ಸಂಗೀತವು ಮಾನವನಲ್ಲಿನ ಸೂಕ್ಷ್ಮ ಸದ್ಭಾವನೆಗಳನ್ನು ಹೊಡೆದೆಬ್ಬಿಸುವುದು. ಅದು ಆನಂದೋತ್ಪಾದನೆಗೆ ಹೇಗೆ ಕಾರಣವೋ ಹಾಗೆಯೇ ದುಃಖ, ಸಂತಾಪ, ರೋಷ ಮೊದಲಾದ ಭಾವನೆಗಳನ್ನೂ ಉತ್ಪಾದಿಸಬಲ್ಲುದು. ಶ್ರೀ। ಪೈಯವರು 'ಚಲಚ್ಚಿತ್ರಗಳಲ್ಲಿ ಸಂಗೀತ' ವೆಂತಿರಬೇಕೆಂಬುದನ್ನು ಸಂಕ್ಷಿಪ್ತವಾಗಿ ವಿವರಿಸುವಾಗ, ಸಂಗೀತದ ಮಹತ್ವವನ್ನೂ ಸರ್ವರಿಗೂ ಖಚಿತವಾಗುವಂತೆ ಬಾಹ್ಯರೇಖೆಯ ರೂಪದಲ್ಲಿ ಇಲ್ಲಿ ಕೊಡುತ್ತಾರೆ.

★

ಎಲ್ಲ ದೇಶಗಳಲ್ಲಿ ಗ್ರಾಮಗಳಲ್ಲಾಗಲಿ ನಾಡುಗಳಲ್ಲಾಗಲಿ, ನಾಗರಿಕರಲ್ಲಾಗಲಿ ಅನಾಗರಿಕರಲ್ಲಾಗಲಿ ಜನಜೀವನದಲ್ಲಿ ಸಂಗೀತವು ಸಾರ್ವತ್ರಿಕವಾಗಿ, ಪ್ರಧಾನವಾಗಿ, ಪೋಣಿಸಿ ಹೋಗಿದೆ. ಆಯಾ ದೇಶದ ಸಂಸ್ಕೃತಿಗನುಗುಣವಾಗಿ ಸಂಗೀತವು ಉಚ್ಚ ಯಾ ನೀಚ ಮಟ್ಟದಲ್ಲಿರಬಹುದು. ಒಂದೊಂದು ದೇಶದಲ್ಲಿ ಅದು ಒಂದೊಂದು ರೂಪ ತಾಳಿಕೊಂಡಿರಬಹುದು. ಆದರೆ, ಅದು ಸರ್ವಾಂತರ್ಯಾಮಿ.

ಭಾರತದಲ್ಲಿ

ಸೃಷ್ಟಿಕಾಲದಿಂದಲೂ ಸಂಗೀತವಿದ್ದಿರಬೇಕು. ಆದರೆ, ಮಾನವ ಭಾಷೆಯಂತೆ ಅದಕ್ಕೆ ಅಂಗಗಳು, ರೂಪರೇಖೆಗಳು, ಶಾಸ್ತ್ರ—ಇವು ಕಾಲಕ್ರಮೇಣ ಉಂಟಾದುವು. ಭಾರತದಲ್ಲಿ ಇದು, ಇತರ ದೇಶಗಳಿಗಿಂತ ಎಷ್ಟೋ ಶತಮಾನಗಳ ಹಿಂದಿನಿಂದಲೂ ಉಚ್ಚ ಮಟ್ಟಕ್ಕೇರಿತ್ತು ಎಂಬುದಕ್ಕೆ ಹಲವು ಆಧಾರಗಳಿವೆ. ಭಾರತದ ದೇವ–ದೇವತೆಗಳೆಲ್ಲ ಒಂದಲ್ಲ ಒಂದು ವಿಧದ ಸಂಗೀತೋಪಕರಣದ ಅನುಬಂಧವಿದ್ದೇ ಇರುವುವು. ವೀಣಾವಾಣಿ ಸರಸ್ವತಿ, ಮುರಲಿಧರ ಕೃಷ್ಣ, ನರ್ತಿಸುವ ನಟರಾಜ, ಡಮರು ಮುಂದೆ ಲಾಸ್ಯಲೀನನಾದ ಶಿವ—ಇದು ಭಾರತದಲ್ಲಿನ ಸಂಗೀತದ ಪ್ರಾಚೀನತೆ, ಸಂಗೀತಕ್ಕೆ ಭಾರತವು ಕೊಟ್ಟಿದ್ದ ಮಹತ್ವ ಇದನ್ನೆಲ್ಲ ಸೂಚಿಸುವುವು.

ಪಶ್ಚಿಮ-ಪೂರ್ವ

ಸಂಗೀತವನ್ನು ಪಶ್ಚಿಮ–ಪೂರ್ವ ಎಂಬೀ ರೀತಿಯಾಗಿ ಸ್ಥೂಲವಾಗಿ ವಿಭಜಿಸಬಹುದು. ಪರ್ಸಿಯದಿಂದೀ ದೇಶತನಕ ಹರಡಿದ ಪದ್ಧತಿಯೊಂದು; ಪರ್ಸಿಯದಾಚೆ ಬೆಳೆದು ಬಂದ ವರ್ಗ ಮತ್ತೊಂದು. ಮತ್ತಿದನ್ನು, ಪ್ರಾಂತವಾರಾಗಿಯೂ ವಿಭಜಿಸಿರುವರು. ಒಂದೊಂದು ಕಡೆಯಲ್ಲಿ ಪದ್ಧತಿ ಇದೆ. ಭಾರತದಲ್ಲಿ ಉತ್ತರ-ದಕ್ಷಿಣಗಳೆರಡರಲ್ಲಿ ಎರಡು ಮುಖ್ಯ ಪದ್ಧತಿಗಳನ್ನೂ ಮತ್ತೆ ಅವುಗಳಲ್ಲಿ ಅನೇಕ ಉಪಶಾಖೆಗಳ[illegible] ಗುರುತಿಸಿರುವರು.

ಸಂಗೀತದ ಬಳಕೆ

ಸಂಗೀತಕ್ಕೆ ಸಮಯ, ಸ್ಥಳ, ಸಂದರ್ಭ ಇವೆ[illegible] ನಿಶ್ಚಿತವಾಗಿಯೇ ಇವೆ. ಪ್ರಾಚೀನ ಕಾಲದಲ್ಲಿ ಅರ[illegible] ಶ್ರೀಮಂತರೂ ಸಂತೋಷ ಸಮಾರಂಭಗಳಲ್ಲಿ ಸಂಗಿ[illegible] ಮುಖ್ಯ ಕಾರ್ಯಕ್ರಮವನ್ನಿರಿಸಿಕೊಂಡಿದ್ದರು. ಕಾಲಕ್ರಮೆ[illegible] ಸಂಗೀತವು ನೃತ್ಯಕ್ಕೆ ಜೋಡಿಸಲ್ಪಟ್ಟಿತು. ನೃತ್ಯಶಾ[illegible] ಮೂಲ ಪುರುಷನಾದ ಭರತನು, ನಾಟ್ಯದಲ್ಲಿ ವಿವಿಧ ಸ[illegible] ತೋಪಕರಣಗಳನ್ನು ಬಳಸುವ ರೀತಿಯನ್ನು ಪ್ರಥ[illegible] ತಂದಿರಬೇಕು. ಹೃದಯವು ಸಂತೋಷದಿಂದ ಅರಳುತಿ[illegible] ತಾನಾಗಿ ಹೊರಸೂಸುವ ಸಂಗೀತವು, ರೂಪುಗೊಂಡ[illegible] ಮುಂದೆ, ದಣಿದ-ದುಃಖಗೊಂಡ ಹೃದಯಕ್ಕೂ ಚಿ[illegible] ರೂಪವಾಯಿತು. ಸಜೀವ ವಸ್ತುಗಳಿಗೆಲ್ಲ ಸಂಗೀತವು [illegible] ರಕ್ಕಿಂತಲೂ ಮುಖ್ಯವಾದುದು—ಎಂಬ ತಿಳಿವು ಜನರ[illegible] ಟಾಯಿತು. ಅದರ ಬಳಕೆಯು ಸಾರ್ವತ್ರಿಕವಾಯಿ[illegible] ಜನನ, ನಾಮಕರಣ, ವಿವಾಹ, ಪಟ್ಟಾಭಿಷೇಕ—ವಿ[illegible] ಸಮಾರಂಭ—ಎಲ್ಲಕ್ಕೂ ಸಂಗೀತದ ಬಳಕೆಯಾಯಿ[illegible] ಅದುವೇ ಅವುಗಳಿಗೆಲ್ಲ ಕಳೆಕೊಡುವ ಮುಖ್ಯಾಂಗವಾಯಿ[illegible] ಭಾವವನ್ನು ಹುಟ್ಟಿಸಬಲ್ಲ ಸಂಗೀತವು ಇತರ ಭಾವಗಳ[illegible] ಕೆರಳಿಸಬಲ್ಲುದೆಂದು ಜಾಣರು ತಿಳಯತ್ತಲೇ ಸಂಗೀ[illegible] ಯೋದ್ಧರಲ್ಲಿ ರಣೋತ್ಸಾಹ ತುಂಬಲೂ ಸಹಾಯಕ್ಕೆ [illegible] ವಂತಾಯಿತು.

ನಾಟಕಗಳಲ್ಲಿ

ಹರ್ಷ, ವಿಷಾದ, ರೋಷ, ಮೊದಲಾದ ನಾನಾ ಭ[illegible] ಗಳನ್ನು ಉದ್ದೀಪನಗೊಳಿಸಬಲ್ಲ ಸಂಗೀತವು, ರಂಗಭ[illegible]

ಯುಂಟಾದ ಕಾಲದಲ್ಲಿ—ನಾಟಕಗಳಲ್ಲೂ ನಾನಾ ಪಾತ್ರ ಗಳ ನಾನಾ ಭಾವಗಳನ್ನು ಪ್ರದರ್ಶಿಸುವುದಕ್ಕಾಗಿ ಉಪಯೋ ಗಿಸಲ್ಪಟ್ಟಿತು. ಪ್ರೇಮಿಯ ಹೃದಯ, ಮತ್ಸರಿಯ ಹೃದಯ, ಜಠರಾಗ್ನಿ, ದುಃಖಿತನ ಮನೋಭಾವ ಇದೆಲ್ಲ ಒಂದೊಂದು ರಾಗದಲ್ಲಿ ಸೂಚನೆಯಾಗುತಿದ್ದುವು. ವಿಯೋಗಕ್ಕೊಂದು ರಾಗ, ಸಂಯೋಗಕ್ಕೊಂದು, ಪ್ರೇಮಭಗ್ನ ಜೀವಿಗೊಂದು, ಧನತೃಷ್ಣೆಯಿಂದ ಪರಿತಪಿಸುವವನಿಗೊಂದು, ದುಷ್ಟ ಕಾಮ ದಿಂದ ಕಾತರಿಸುವವನಿಗೊಂದು—ಹೀಗೆ ಬೇರೆ ಬೇರೆ ಜಾತಿಯ ರಾಗಗಳು —ಆಯಾ ಪಾತ್ರದ ಬಾಯಿಯಿಂದ— ಆಯಾ ಸನ್ನಿವೇಶಕ್ಕೊಪ್ಪುವಂತೆ ಹೊರಟಾಗ, ಗದ್ಯದಿಂದ ಕಥಾಭಾಗವನ್ನೂ ಆ ಪಾತ್ರದ ಮನೋಭಾವವನ್ನೂ ತಲೆ ಯಿಂದ ತಿಳಿದ ಶ್ರೋತೃವು ಹೃದಯದಿಂದಲೂ ಅನುಭವಿಸಿ ದನು.

ಹೃದಯಕ್ಕೆ

ಅಹುದು, ಸಂಗೀತವು ತಲೆಗಾಗಿಲ್ಲ; ಹೃದಯಕ್ಕಾಗಿ ಇದೆ. ಅದು ಆತ್ಮೋನ್ನತಿಗಾಗಿ ಇದೆ. ಮನುಷ್ಯನಲ್ಲಿ— ತಲೆಯು ನೂರು ವರುಷಗಳಿಗೆ ಮಾಡಲಾಗದಂತಹ ಸತ್ಪರಿ ಣಾಮಗಳನ್ನು ಅದು ಕೆಲವೇ ಕ್ಷಣಗಳಲ್ಲಿ ಮಾಡಬಲ್ಲುದು. ತಾಮಸವಾದುದೇನಿದೆಯೋ ಅದನ್ನು ತೆಗೆದು ಹಾಕಿ ಲಾಲಿತ್ಯ-ಮೃದುತ್ವ-ಮಧುರತ್ವ-ಮಮತೆ-ಸೌಮ್ಯತೆ ಇವು ಗಳನ್ನು ತರುವ ಶಕ್ತಿ ಸಂಗೀತದ್ದು. ಸುಂದರವಾದುದನ್ನು ಅರಿತುಕೊಳ್ಳಲು, ಅರಿತು ಆನಂದಪಡಲು ಮನುಷ್ಯನಲ್ಲಿ ಅವಶ್ಯವಾಗಿರುವ ಆ ಸೂಕ್ಷ್ಮ ಅಭಿರುಚಿಗೆ ಸಂಗೀತವು ಸಹಾಯಮಾಡುತ್ತಿದೆ. ಅದು 'ಪ್ರಚಂಡತೆ'ಗೆ ಮನಸೋಲು ವಂತೆ ಮಾಡುವುದಿಲ್ಲ; ನಿಜವಾಗಿಯೂ ಸುಂದರವಾವುದಿ ದೆಯೋ ಅದನ್ನರಿತುಕೊಳ್ಳಿ—ಎನ್ನುತ್ತಿದೆ. ಮಾನವನಲ್ಲಿ ಸದಭಿರುಚಿ ಹುಟ್ಟಿಸಿ, ಅವನನ್ನು ಸಂಸ್ಕೃತನನ್ನಾಗಿ ಮಾಡು ತ್ತಿದೆ. ಅವನಲ್ಲಿ ಸಹಜವಾಗಿ ಏಳುವ ಪ್ರೇಮಕ್ಕೆ ಕಳೆಕೊಡು ತ್ತಿದೆ.

ಚಲಚ್ಚಿತ್ರಗಳಲ್ಲಿ

ವಾಕ್ಚಿತ್ರಗಳು ಬಂದ ಕಾಲದಿಂದ ಸಂಗೀತವು, ಸುಲಭ ವಾಗಿ ಪ್ರಚಾರವಾಗ ಹತ್ತಿದೆ. ವಾಕ್ಚಿತ್ರ ತಯಾರಿಸುವವರು, ಚಿತ್ರಗಳಲ್ಲಿ ಸಂಗೀತವನ್ನು ತರುವಾಗ, ಹಳೆಯ ನಾಟಕಕಾ ರರನ್ನು ಅನುಸರಿಸಿದರಲ್ಲದೆ ಹೊಸತೇನನ್ನೂ ತಂದಿಲ್ಲ. ಸಂ ಗೀತದ ನಾನಾ ಉಪಶಾಖೆಗಳು, ದೇಶದ ಒಂದು ಮೂಲೆ ಯಿಂದ ಮತ್ತೊಂದಕ್ಕೆ ಶೀಘ್ರವಾಗಿ ಪ್ರಚುರಿಸುವ ಮಹ ದುಪಕಾರ ಮಾತ್ರ ಚಲಚ್ಚಿತ್ರಗಳಿಂದಾಗಿದೆ. ಪಂಜಾಬಿ, ಬಂಗಾಲಿ, ತೆಲುಗು, ಕರ್ಣಾಟಕ, ತಮಿಳು ಸಂಗೀತಗಳ ವರ್ಗಗಳನ್ನು ಜನರು ಚಲಚ್ಚಿತ್ರಗಳಿಂದರಿತುಕೊಳ್ಳಲು ಸುಲಭ ಸಾಧನ ದೊರೆತಿದೆ.

ಅಪಕಾರ

ಉಪಕಾರಕ್ಕೆ ಹೊರಟ ಚಲಚ್ಚಿತ್ರಗಳು, ಅಕ್ಷಮ್ಯವಾದ ಅಪಕಾರವೊಂದನ್ನು ಮಾಡುತ್ತಿವೆ. ಒಂದೊಂದು ಸಮಯದಲ್ಲಿ ಜನರ ಲಕ್ಷ್ಯವನ್ನು ಹೆಚ್ಚಾಗಿ ಸೆಳೆದ ಒಂದು ಸಂಗೀತ ಪದ್ಧತಿಯನ್ನು, ದೇಶದ ಎಲ್ಲಾ ಭಾಗಗಳ ಚಿತ್ರನಿರ್ಮಾತೃಗಳೂ ಅನುಕರಿಸುವುದುಂಟು. ತಮಿಳರು, ತೆಲುಗರು, ಕನ್ನಡಿಗರು ಬಂಗಾಲಿ ಪದ್ಧತಿಯನ್ನನುಕರಿಸುವುದುಂಟು, ಅಥವಾ ಬಂಗಾಲೀ ಸಂಗೀತವು ಬಂದ ಚಿತ್ರಗಳಲ್ಲಿನ ರಾಗಗಳನ್ನು ಅಚ್ಚಳಿಯದಂತೆ ನಕಲುಮಾಡಿ ತಂತಮ್ಮ ಭಾಷೆಯ ಶಬ್ದಗಳನ್ನಿರಿಸುವುದುಂಟು. ಹೆಚ್ಚಿಚ್ಚಾಗಿ ಜನಮನ್ನಣೆ ಪಡೆಯಲಿ ಎಂಬ ಧನದೃಷ್ಟಿಯೊಂದರಿಂದಲೇ ಈ 'ನಕಲಿ' ನಡೆಯುವುದು. ಇದು ಅಕ್ಷಮ್ಯ ಅಪರಾಧ. ನಕಲೆತ್ತಲ್ಪಟ್ಟವನಿಗೆಷ್ಟು ಗೌರವವೋ ಅಷ್ಟೇ ಪ್ರಮಾಣದಲ್ಲಿ ನಕಲೆತ್ತಿದವನಿಗೆ ಅಗೌರವಕರವಿದೆ. ಇದರಿಂದ ಇನ್ನೊಂದು ದೋಷವೇನೆಂದರೆ, ಪಂಜಾಬದಲ್ಲಿ ಒಂದು ತಮಿಳು ಚಿತ್ರನೋಡುವವನು, ತಮಿಳರ ಸಂಗೀತ ಪದ್ಧತಿಯನ್ನರಿಯಲಾರದೆ, ತಾನು ಹಿಂದೀ ಅಥವಾ ಮರಾಠಿ ಚಿತ್ರವೊಂದರಲ್ಲಿ ಕೇಳಿದ ಧಾಟಿಯ ಹಾಡನ್ನೆ ತಮಿಳಿನಲ್ಲೂ ಕೇಳಿ, 'ತಮಿಳರಿಗೆ ಅವರದೇ ಪ್ರತ್ಯೇಕವಾದ ಒಂದು ಸಂಗೀತವಿಲ್ಲವೆ? ಇದ್ದರೆ, ಚಿತ್ರಗಳಿಗೆ ಅವರ ಪದ್ಧತಿಯನುಸಾರ ನೊಟೇಶನ್ ರಚಿಸಿಕೊಡುವ ಅಭಿಜ್ಞರಿಲ್ಲವೆ?' ಎಂದು ಆಶ್ಚರ್ಯಪಡುವನು. ದಕ್ಷಿಣದವರು ದಕ್ಷಿಣಾದಿ ಧಾಟಿಗಳನ್ನೂ, ಹಿಂದೂಸ್ಥಾನೀ ಪದ್ಧತಿಯವರು ಹಿಂದೂಸ್ಥಾನೀ ಮಟ್ಟುಗಳನ್ನೆ ಮಾತ್ರ ಕೊಡುವಂತಹ— ಒಂದು ನಿರ್ಬಂಧವಿದ್ದರೆ ಒಳ್ಳಿತು.

ಸನ್ನಿವೇಶಕ್ಕೊಪ್ಪುವ ಸಂಗೀತ

ಸನ್ನಿವೇಶಕ್ಕೆ—ಸಂದರ್ಭಕ್ಕೆ ಒಪ್ಪುವ ಸಂಗೀತವು ನಾಟಕ ಅಥವಾ ಚಿತ್ರಕ್ಕೆ ಶೋಭೆ ಕೊಡುವುದು. ಉದಾಹರಣಾರ್ಥ ಪ್ರಕಾಶದವರ "ರಾಮರಾಜ್ಯ"ದಲ್ಲಿನ ಆ ಪ್ರಖ್ಯಾತ ಹಾಡು: "ವೀಣಾ . . . ." ಅದು ಭೀಮಪಲಾಸ ರಾಗದಲ್ಲಿದೆ. ಭೀಮಪಲಾಸರಾಗವು ವಿಯೋಗ ಸೂಚಕನಾದುದು. ಈ ಚಿತ್ರಕಾರನು ಅದನ್ನು ಅರ್ಥವರಿತು, ಸಮಯವರಿತು, ಪರಿಣಾಮಕಾರಿಯಾಗಿ ಉಪಯೋಗಿಸಿರುವನು. ಸೀತಾಮಾತೆಯು ಅವಳ ಪತಿಯಿಂದ ತ್ಯಜಿಸಲ್ಪಡುವಳೆಂದು ತಿಳಿದ ಸಖಿಯು, ಹಾಡುವಂತೆ ಒತ್ತಾಯಪಡಿಸಿದಾಗ ಸಹಜವಾಗಿ ಆ ರಾಗವು ಅವಳಿಂದ ಹರಿಯುತ್ತಿದೆ. ವೀಣೆಯನ್ನಾಕೆ ವಿನಂತಿಸುವ ಮಾತುಗಳು ಪ್ರೇಕ್ಷಕನಲ್ಲೂ ಸಹಾನುಭೂತಿ ಹುಟ್ಟಿಸಿ ನಿರಪರಾಧಿ ಸೀತೆಗಾಗಿ ಅವನ ದುಃಖ ಉಕ್ಕುವುದು. ಪ್ರೇಕ್ಷಕನಲ್ಲುಂಟಾದ ಆ ಭಾವವು ಸಂಗೀತದಿಂದ ಬಹುಕಾಲ ಅವನಲ್ಲಿ ಉಳಿವುದು. ಸ್ಮರಣೆಯನ್ನು ತರುವ ಒಂದು ಅದ್ಭುತ ಶಕ್ತಿ ಸುಗಂಧದ್ದು, ಮತ್ತೊಂದು ಸಂಗೀತದ್ದು. ಈ ಸಂಗೀತವನ್ನು ಚಿತ್ರಗಳಲ್ಲಿ, ಕಲಾದೃಷ್ಟಿಯಿಂದ ಕೊಡ... ಸಂಗೀತದ ಸೇವೆಯಾಗುವುದು—ಇಲ್ಲದಿದ್ದರೆ ಕಲೆಯು ... ಜನರಿಗೂ ಅಪಕಾರ. ನಾಟಕಗಳಲ್ಲಿ ಮೊದಲು ಸಂ... ಆಕರ್ಷಣವಾಗಿತ್ತು; ಇಂದು ಚಿತ್ರಗಳಲ್ಲೂ ಸಂಗೀತವು ಉಚ್ಚ ಸ್ಥಾನದಲ್ಲೆ ಮೆರೆಯುತ್ತಿದೆ. ಆದರೆ, ಸಂ... ಸನ್ನಿವೇಶಗಳೇನೆಂದು ನೋಡದೆ, ನಡೆವವನೂ, ... ವನೂ, ಉಣ್ಣುವವನೂ, ಕಾರ್ಯಾಸಕ್ತನೂ, ದುಃ... ಪ್ರತಿಯೊಬ್ಬರೂ ತಾರತಮ್ಯವಿಲ್ಲದೆ, ಸಂಭವಾಸಂಭ... ಗೊಡವೆಯಿಲ್ಲದೆ ಕೆಲವು ಚಿತ್ರಗಳಲ್ಲಿ ಹಾಡಿ, ಕಲಾ... ಗಳಲ್ಲಿ ಜುಗುಪ್ಸೆಯುಂಟು ಮಾಡುವರು. ಸಂ... ವಿಷಯ ತಿಳಕೊಳ್ಳಲಿಚ್ಛಿಸುವ ಅನಭಿಜ್ಞರನ್ನು ಅನಭಿ... ಗಿಯೇ ಇರಿಸುವರು. ಉತ್ಕೃಷ್ಟ ಸಂಗೀತವನ್ನು ಯ... ವಾಗಿ ಯೋಗ್ಯ ಸನ್ನಿವೇಶಗಳಲ್ಲಿ ಕೊಟ್ಟ ಚಿತ್ರಗಳು ಕೆಲ... ಚಂಡಿದಾಸ, ದೇವದಾಸ, ರಾಮಶಾಸ್ತ್ರಿ, ರಾಮ... ಪಡೋಸಿ;—ಉಳಿದುವುಗಳು ಉತ್ಕೃಷ್ಟ ಚಿತ್ರಗಳಾ... ಉತ್ಕೃಷ್ಟ ಸಂಗೀತ ಕೊಟ್ಟದ್ದರೂ, ಸ್ಥಳ-ಸಮಯ-... ವೇಶಗಳನ್ನು ನೋಡಿ ಹಾಡುಗಳು ಕೊಡಲ್ಪಟ್ಟಿಲ್ಲ; ... ಭಾವಿಕವಾಗಿಯೇ ಕೊಡಲ್ಪಟ್ಟವೆ.

ಸಂಸ್ಕೃತಿಗೆ ಸಹಾಯಕ

ಸಂಗೀತವು ಸಂಸ್ಕೃತಿಗೆ ಸಹಾಯಮಾಡುವುದು; ... ಸ್ಕೃತಿಯು ಸಂಗೀತ ಕಲೆಯ ಉಚ್ಛ್ರಾಯ ಸ್ಥಿತಿ... ಗುರುತಿಸಲ್ಪಡುವುದು. ಮನುಷ್ಯನಲ್ಲಿನ ಸೂಕ್ಷ್ಮ ಸದ್ಭಾ... ಗಳನ್ನು ಹೊಡೆದೆಬ್ಬಿಸುವ ಗುಣಗಳುಳ್ಳ ಸಂಗೀತ... ಹೆಚ್ಚಿಚ್ಚು ಮಂದಿ ಕಲಿವಂತೆ ಉತ್ತೇಜನವಿರಬೇಕು.



ಶ್ಲೋ ॥ ಗೀರ್ಭಿರ್ಗುರೂಣಾಂ ಪರುಷಾಕ್ಷರಾಭಿ...
ಸ್ತಿರಸ್ಕೃತಾಯಾಂತಿನರಾಮಹ...
ಅಲಬ್ಧಶಾಣೋತ್ಕಷಣಾನೃಪಾಣಾಂ ನಜಾತು ಮೌ...
ಮಣಯೋ ವಸ...

ತಾತ್ಪರ್ಯ: ಗುರುಗಳ ಕಠಿನೋಕ್ತಿಗಳಿಂದ ... ಸಲ್ಪಟ್ಟವರು ಕಡೆಗೆ ಮಹಾತ್ಮರಾಗುತ್ತಾರೆ. ಸಾಣೆ... ಯಲ್ಪಡದ ರತ್ನಗಳು ರಾಜರ ಕಿರೀಟದಲ್ಲಿ ವಾಸ... ಲಾರವು.

ಶಕುಂತಲೆಯ ವಿಲಾಪ

ಪತಿಪಾದಯುಗ್ಮಗಳ ತೊಳೆವ ಭಾಗ್ಯವ ಪಡೆದು
ಸತಿಯಾಗಿ ಮೆರೆಯಬೇಕೆಂಬ ನಿಜಕಾಮ–
ವತಿಯಾಗಿ ಉಕ್ಕಿ ಮನಮುದವಾಂತರೂ ಇಂದು
ಮತ್ತೆ ಕಾಣವೆನೆಂದೊ ಈ ಪುಣ್ಯಧಾಮ? ॥ ೧ ॥

ಬನತರುಗಳೇ ನಿಮ್ಮನನವರತ ಬಿಟ್ಟಿರದೆ
ತನುಮನದಿ ಜಲಸೇಚನವ ಮಾಡಿ ಪೊರೆದೆ
ವನಲತೆಗಳೇ ನಿಮ್ಮ ಕಾಂತರನ್ನಗಲಿಸದೆ
ದಿನದಿನವು ಹೂ ಬೆಳೆಯ ಬೆಳೆಸಿ ನಲಿನಲಿದೆ! ॥ ೨ ॥

ಸಖಿಯೇ ಪ್ರಿಯಂವದೆಯೆ ನಿಮ್ಮಿಂದ ಸ್ವರ್ಗಸಮ
ಸುಖಜೀವಿಯಾದೆ ಉಲಿದಾಡಿ ನಲಿದಾಡಿ!
ಸಖಿ ಜೀವ ಸಂಗಾತಿ ಅನಸೂಯೆ! ನಿತ್ಯಮುಮ
ಸುಖವನೇ ಬಯಸಿರುವೆ ನೇಹವನು ನೀಡಿ ॥ ೩ ॥

ನಾ ಪ್ರಿಯಂವದೆಯಾಗಿ ಪ್ರಿಯವನ್ನೆ ನುಡಿಯುವೆಂ
ಈ ಪ್ರಾಣಸಖಿಯ ಪ್ರೇಮದ ನೆನಹಿಗಾಗಿ,
ನಾ ಪ್ರಿಯಂವದೆಯಾಗಿ ಮಚ್ಚರವ ನೀಗುವೆಂ
ಈ ಪ್ರೇಮಮಯ ಗೆಳತಿ ಅನಸೂಯೆಗಾಗಿ ॥ ೪ ॥

ನಾ ಪ್ರಿಯಂವದೆಯಾಗಿ ಅನಸೂಯೆಯಾಗುವೆನು
ಆ ಪ್ರಿಯಕರನ ಹೃದಯದೊಲವಿನಾರ್ಜನೆಗೆ!
ನಾ ಪ್ರಭಾಶೋಭಿತ ಕಿರೀಟದಿಂದೆಸೆಯುವೆನು
ಆ ಪ್ರಜಾಗಣದ ಸುಖಶಾಂತಿಯುನ್ನತಿಗೆ! ॥ ೫ ॥

ಮೃದು ಮಧು ಮಧುತರದ ಫಲಸಂಚಯದೊಳುಕ್ಕಿ
ಮುದವೀವ ಸುಮರಾಜಿಯಿಂದೆ ಮಘಮಘಿಸಿ
ಹೃದಯಕಾಹ್ಲಾದವಾದೀ ನೆಲೆಯ ಬಿಡಲಳ್ಕಿ
ಕದಡುತಿಹುದೆನ್ನೆರ್ದೆಯಿಂದು ಉರವಣಿಸಿ ॥ ೬ ॥

ಜನುಮಭೂಮಿಯ ಜನರು ಎಳೆಯುತಿಹರೊಂದಾಗಿ
ಮನವನಪಹರಿಸಿದವ ತಾನೆಳೆವನತ್ತ!
ತನುಮನಗಳಿಂದು ಹೊಯ್ದಾಡುತಿಹವೊಂದಾಗಿ
ಎನ್ನ ಚರಣಗಳೆಂತು ಮುಂಬರಿವುವತ್ತ? ॥ ೭ ॥

ಮಲಯಾಚಲದ ತಟಪ್ರಾಂತದಿಂದೆಸೆದೊಗೆದ
ಲಲಿತೆ ಚಂದನ ಲತೆಯು ಪಡೆದ ಗತಿಯನ್ನೆ
ಎಲೆ ತಾತ! ಸುಪ್ರೀತ! ನಿನ್ನಂಕವನು ತೊರೆದ
ಲಲನೆ ನಾನನ್ಯದೇಶದಿ ಪಡೆಯದಿಹೆನೇ? ॥ ೮ ॥

ಎಂದಿಗಾಲಿಸುವೆನೋ ಶ್ವೇತಪಕ್ಷಿಯ ಕುಕಿಲ–
ನೆಂದಾಲಿಸುವೆನೊ ಖಗಸಂಗೀತ ಸೋನೆ?
ಇಂದೀ ಬನವ ಬಿಡಲು ಮನವಳುಕುತಿದೆ ಸಕಲ
ಬಾಂಧವರ ಬಳಗವನು ಬಿಡಲಾನರಿವೆನೆ? ॥ ೯ ॥

ಮಾತೆ ಗೌತಮಿಯಿಂದ ತಾತ ಕಾಶ್ಯಪನಿಂದ
ಪ್ರೀತೆ ಸಹಜಾತೆ ವನಜ್ಯೋತ್ಸ್ನೆಯಿಂದಂ!
ಗೀತಗಳನುಲಿಯುತಿಹ ಖಗರಾಜಿಯಿಂದ ಮುದ–
ವಾಂತು ಬಿಟ್ಟಹೆನೆಂತು ತಾಯ್ನೆಲವಿದಂ! ॥ ೧೦ ॥

—ಎಚ್. ವಿಟ್ಠಲ ಶೆಣೈ.

ಆಗಸ

ಗಗನತಲದೊಳಗಮ್ಮ ಬಗೆಬಗೆಯ ಕುಸುಮಗಳು
ನಗುನಗುತ ಬಾಯ್ದೆರೆದು ಮಿಗೆರಂಜಿಸುವುವು
ಮಗುವಿಗಾಗಿಯೆ ಕೆಲವು ಹೂಗಳನು ತಾರಮ್ಮ
ಹಗಲಿರುಳು ಗೊಂಬೆಗಳ ನಾಸಿಂಗರಿಸುವೆ ॥ ೧ ॥

ಚಲಿಸುತಿಹ ಬೆಳ್ಳಿ ಬಟ್ಟಲನು ನಾಕಾಣುತಿಹೆ
ಕೆಳದಿಯನು ಕಳುಹಿ ತಾತಾಯೆ ನನಗದನು
ನಲವಿಂದ ಹಾಲುಪಾಯಸವಿಕ್ಕಿ ದೇವರಿಗೆ
ಮೆಲಲೀವೆ ನನ್ನ ಬಯಕೆಯನೊಂದು ಸಲಿಸು ॥ ೨ ॥

ತೇಲುತಿಹ ತುಂತುರಿನ ಬೀಸಣಿಗೆಯನು ತಾರೊ
ಗಾಳಿಯನು ಬೀಸುವೆನು ನನ್ನ ದೇವರಿಗೆ
ಮೇಲಾದ ಹಾಡುಗಳ ಹಾಡಿ ಕುಣಿದಾಡುವೆನು
ಕೇಳಿಸದೆ ನನ್ನ ನುಡಿಯೆಲೆ ತಾಯೆ ನಿನಗೆ ॥ ೩ ॥

ಅರಗಿಳಿಯೆ ಗಗನದೊಳಗರಳಿರುವ ಕುಸುಮಗಳು
ಅರಲಹುದು ಚುಕ್ಕಿಗಳು ತರಲಾರೆ ನಿನಗೆ
ಚಲಿಸುತಿಹ ಬಟ್ಟಲದು ಜಗಕೆ ಬೆಳಕನ್ನೀವ
ಹರಿಣಾಂಕನಲ್ಲವೇ ನಾತರವುದೆಂತು ॥ ೪ ॥

ಮುದ್ದುಮಗು ನೀಕಂಡ ತುಂತುರಿನ ಬೀಸಣಿಗೆ
ಶುದ್ಧನೀರದವಹುದು ನೀನೇನ ಬಲ್ಲೆ
ಸಾಧ್ಯವಿಲ್ಲವು ಪಿಡಿಯಲದುವೆ ಜಲನಿಧಿಯಿಂದ
ಎದ್ದ ಮೋಡವು ನಮ್ಮ ಕೈಗೆ ಸೋಂಕುವುದೆ ॥ ೫ ॥

ಎ. ಕೆ. ಪೈ, ವಿದ್ವಾನ್.

ಆಸೆ

ಬಾಳುವೆಯ ಬಿಹಿಗನಸು ಮನುಜನೆದೆಗೂಸು
ಬಾಯ್ಬಿಡಿಸಿ ಜೊಲ್ಲೀರ ಹರಿಯಿಸುವ ಸೊಲ್ಲು

ಆಳ್ತನವ ಬಿಗಿಹಿಡಿದು ಮೆರೆವ ತಿರೆಯರಸು
ಬಾಯಾರಿ ಬಸವಳಿಯೆ ಕುಡಿಯಲಿಹ ಹಾಲು

ಒಡಲಲ್ಲಿ ನಿಂದಿರಲು ಎಬ್ಬಿಸುವ ಭೇರಿ
ಕಡುತರದ ಸಂಕಟವ ತಂದಿಡುವ ವೈರಿ

ಕಟುರಸವ ಹಿಂಡಲ್ಕೆ ನಡೆಯುತಿಹ ಶೂರ
ಬಿಡದಿಚ್ಛೆ ಬೆಳೆಯುತ್ತೆ ಕಾಣದಿಹ ಮಾರ.

ಎಮ್. ಆರ್. ವಿಶ್ವಾಮಿತ್ರ.



ಮಧುಮಾಸ

(ಶ್ರೀ। ಆರ್. ಕೆ. ಪ್ರಭು, ಸಹಾಯಕ ಸಂಪಾದಕ "ಬೋಂಬೇ ಕ್ರೊನಿಕಲ್" ಮುಂಬ

ಶ್ರೀ। ಆರ್. ಕೆ. ಪ್ರಭುಗಳವರು ಈ ಬಾರಿ, "ಮಧುಮಾಸ" ಅಥವಾ "ಹನಿಮೂನ್" ಎಂಬುದರ ಅರ್ಥವನ್ನೂ, ಬೇರೆ ಬೇರೆ ದೇಶಗಳಲ್ಲಿನ ರೂಢಿಗಳನ್ನು ವಿವರಿಸುತ್ತಾರೆ. ಈ ಲೇಖನ ವಿಷಯವು ಕನ್ನಡ ಭಾಷೆಯಲ್ಲಿ ಚರ್ಚಿಸಲ್ಪಡುವುದು ಇ ಮೊದಲನೇ ಬಾರಿ. ಶ್ರೀ। ಪ್ರಭುಗಳವರು "ಮಧುಮಾಸ"ದ ಅರ್ಥವನ್ನೂ ಪದ್ಧತಿಗಳನ್ನೂ ವಿವರಿಸುವಾಗ ಆ ಶಬ್ದವ್ಯುತ್ಪತ್ತಿಯ ನ ಪ್ರತ್ಯೇಕವಾದ ಲೇಖವೊಂದನ್ನು ಬರೆದಿರುವುದನ್ನು ನಮ್ಮ ವಾರಪತ್ರಿಕೆಯ ಮುಂದಿನ ಒಂದು ಸಂಚಿಕೆಯಲ್ಲಿ ಕೊಡುವೆವು.

"ಮಧುಮಾಸ" — ಯಾನೆ "ಹನಿಮೂನ್" — ಇದು, ಆಂಗ್ಲರು ವಿವಾಹಾನಂತರ ಒಂದು ತಿಂಗಳ ತನಕ ವಿಹಾರಾರ್ಥ ಹೋಗುವ ಆಂಗ್ಲ ಪದ್ಧತಿಯೆಂದು ತೋರುವುದು. ಇದರ ಪ್ರಥಮ ಉಲ್ಲೇಖವು 1546ರಲ್ಲಿ ಆರಂಭವಾದಂತೆ ಹೇಳುತ್ತಿದೆ. ದಾಂಪತ್ಯ ಪ್ರೇಮ ಸಂಬಂಧವಾಗಿ ಈ ಶಬ್ದದ ಬಳಕೆಯು ಹದಿನೇಳನೇ ಶತಮಾನದಲ್ಲಿ ಚೆನ್ನಾಗಿ ಪ್ರಚಾರಕ್ಕೆ ಬಂದಂತೆ ಕಂಡುಬಂದಿದೆ. ಒಂದು ಉಲ್ಲೇಖದಲ್ಲಿ "ವಿವಾಹವಾದ ಕೂಡಲೇ ಚೆನ್ನಾಗಿ ಪ್ರೀತಿಸಿ, (ಈಗ ಮಧುವಾಗಿದ್ದುದು–ಮುಂದೆ ಆ ಪ್ರೀತಿಯು ಮಾಸುತ್ತ ಬಂದು ಚಂದ್ರನಂತಾಗುವುದು" — ಎಂದೂ ಅರ್ಥ ಕೊಡಲಾಗಿದೆ. (ಹನಿ = ಮಧು; ಮೂನ್ = ಚಂದ್ರ)

"ಮಧುಮಾಸ"ಕ್ಕಾಗಿ ನವದಂಪತಿಗಳು ತಮ್ಮ ವಿವಾಹ ಸ್ಥಳದಿಂದ ದೂರದ ಪ್ರದೇಶಗಳಿಗೆ ವಿಹಾರಾರ್ಥ ಹೋಗುವ ಪದ್ಧತಿಯು, ಜೊರ್ಜ್ IIIನ ಕಾಲದಲ್ಲಿ ಪ್ರಚಾರಕ್ಕೆ ಬಂತು. "ಟೆಟ್ಲರ್" ಪತ್ರಿಕೆಯ ಒಂದು ಮೊದಲ ಸಂಚಿಕೆಯಲ್ಲಿ 'ದಂಪತಿಗಳು ಈ ಕಾಲದಲ್ಲಿ ವಿಮುಖರಾಗುವುದಿದೆ; ಕೆಲವೊಮ್ಮೆ ಈ ಮಧುಮಾಸದಲ್ಲಿ ತಣ್ಣಗಾಗುವುದಿದೆ" ಎಂದೂ ವಿವರಿಸಿರುವ ಒಂದು ಲೇಖವಿದೆ. ಮಧುಮಾಸಕ್ಕಾಗಿ ಗಂಡ ಹೆಂಡಿರು ಹೊರಪ್ರದೇಶಗಳಿಗೆ ಹೊರಡುವುದು ಶಾಸ್ತ್ರೋಕ್ತವೆನಿಸುವಂಥ ರೂಢಿಯಾದುದು, ಕಳೆದ ಶತಮಾನದ ಮಧ್ಯಕಾಲದಿಂದಲೇ ಎನ್ನಬಹುದು.

ಕಳೆದ ನಾಲ್ಕು ಶತಮಾನಗಳಿಂದ 'ಮಧುಮಾಸ' ಸಂಬಂಧವಾದ ಆಚರಣೆಯಲ್ಲಿ ವ್ಯತ್ಯಾಸಗಳಾದರೂ, ವಿವಾಹಕ್ಕಿರುವ ಅದರ ಸಂಬಂಧವು ಮಾತ್ರ ಇದ್ದಂತೇ ಇದೆ. "ಹನಿಮೂನ್", ಶಬ್ದದ ವ್ಯುತ್ಪತ್ತಿಯ ಕುರಿತು ವಿಮರ್ಶಿಸುತ್ತ ಆಂಗ್ಲ ಪತ್ರಿಕಾಕಾರರೊಬ್ಬರು, ಮೂಲತಃ ಅದು "ಹನಿಮಂಥ್" ಎಂದಿತ್ತು ಎಂಬುದಾಗಿ ವಿವರಿಸಿರುವರು, ಆದರೆ "ಮೂನ್" ಮತ್ತು "ಮಂಥ್" ಇವೆರಡೂ ನಿಕಟಸಂಬಂಧವುಳ್ಳದಾಗಿರಲು, ಆ ಶಬ್ದದ ವಿಷಯು ಹೆಚ್ಚಿನ ಅಭಿಪ್ರಾ ಭೇದಕ್ಕೆ ಅಥವಾ ಶೋಧನೆಗೆ ಅವಶ್ಯಕತೆ ಕಾಣುವುದಿಲ್ಲ

ಆದರೆ, ಅದು ಆಂಗ್ಲ ಪದ್ಧತಿ ಮಾತ್ರವಲ್ಲ; ದೇಶಗಳಲ್ಲಿಯೂ ಬಹು ಪ್ರಾಚೀನಕಾಲದಿಂದಲೂ ಭಾರತದಲ್ಲಿ ಅದನ್ನು "ಮಧುಮಾಸ"ವೆನ್ನುತ್ತಿದ್ದರು.

ಪುರಾತನಕಾಲದ ಜರ್ಮನರೂ ಇಂಗ್ಲಿಷರೂ ಸ್ಕಾ ನೆವಿಯರೂ, ಮಧು [ಜೇನಿ]ನಿಂದ ತಯಾರಿಸಿದ ಪಾನೀಯವನ್ನು, ವಿವಾಹವಾದ ಮೂವತ್ತು ದಿನಗಳ ಕವೂ ಕುಡಿಯುವ ವಾಡಿಕೆಯಿತ್ತು. ಪ್ರತಿಯೊಂದು ವಿ ದಲ್ಲೂ ಈ ಪದ್ಧತಿಯಿರಲು ಅದುವೆ "ಹನಿ-ಮೂನ್" "ಮ ಮಾಸ"ವೆಂದು ರೂಢಿಯಾಯಿತು.

ಈ ರೀತಿ ಮಧುಪಾನ ಮಾಡುವ ಹಳೇ ಪದ್ಧತಿ ಇಂದಿಗೂ, ಯುರೋಪಿಯನ್ ಜನಾಂಗಗಳಲ್ಲಿ ಮಾತ್ರ ಪರ್ಶಿಯನರಲ್ಲಿ, ಚೀನೀಯರಲ್ಲಿ, ಜಪಾನೀಯರಲ್ಲಿ ವ ಹಿಂದೂಗಳಲ್ಲೂ ಇತ್ತು. ವಿವಾಹವಾದ ನವದಂಪತಿ ಒಂದೇ ಪಾತ್ರೆಯಿಂದ ಮಧುವನ್ನು ಕುಡಿವ ಈ ರೂಢಿ ಇಟೇಲಿಯಿಂದ ನೊರ್ವೇ ವರೆಗೂ, ಬ್ರಿಟ್ನಿನಿಂದ ರ ವರೆಗೂ ಇದ್ದು, ಸ್ಕೊಟ್ಲೆಂಡಿನಲ್ಲೂ ಇದರ ಕುರುಹುಗ ಈ ಪದ್ಧತಿಯು, ಯಹೂದಿಗಳಲ್ಲಿ ವಿವಾಹದ ಒಂದು ಅಂ ಆಗಿದೆ.

ಗ್ರೀಸಿನಲ್ಲಿ

ಆಧುನಿಕ ಗ್ರೀಸಿನಲ್ಲಿ, ವರನ ಮಾತೃವು, ಒ ಪಾತ್ರೆಯಿಂದ ವಧೂವರರಿಗೆ ಜೇನನ್ನು ತಿನ್ನಿಸುವಳು. ವಿವಾಹವು ಜೇನಿನಂತೆ ಮಧುರವಾಗಿರಲಿ ಎಂದದರ ಪುರೋಹಿತನೂ ವಧೂವರರೂ ದೇವತಾಪೀಠದ ಸುತ್ತ ಸುವಾಗ ಅತಿಥಿಗಳು ಸಿಹಿಮಿಠಾಯಿಯನ್ನು ಅವರ ವಿನೋದವಾಗಿ ಬಿಸುಡುವ ಇನ್ನೊಂದು ಕ್ರಮವೂ ಅವರ ಗ್ರೀಸಿನ ಹಳ್ಳಿಗರಲ್ಲಿ, ವಧುವಿನ ಮನೆಯ ದ್ವಾರದ

ಟ್ಟಿಗೆ, ''ಇವಳ ಮನೆಗೆ ಕಚ್ಚಾಟ ಕಲಹಗಳು ಬಾರದಿರಲಿ ಎಂಬುದಾಗಿ, ಜೇನನ್ನು ಸವರಿಬಿಡುವುದುಂಟು.

ಬಾಲ್ಕಾನ್ಸ್‌ಗಳಲ್ಲಿ

ಬುಕ್ರೈವಿನವ ರುಥೇನಿಯನರಲ್ಲಿ, ವಧುವಿನ ಮುಖಕ್ಕೆ ಜೇನನ್ನು ಹಚ್ಚುವರು; ಅಥವಾ ಎದೆಗೆ ಸಕ್ಕರೆ ಬಿಸಾಡುವರು. ಆಕೆಯ ಭವಿತವ್ಯವು ಮಧುರವಾಗಲೆಂಬೇ ಇದರ ಇಂಗಿತ. ಬಲ್ಗೇರಿಯದಲ್ಲಿ, ಯಾರಾದರೊಬ್ಬ ಹೆಂಗುಸು ವರನ ಮುಖಕ್ಕೆ ಮಧುವನ್ನು ಪೂಸುತ್ತ, ''ತುಂಬಿಯು ಜೇನನ್ನು ಪ್ರೀತಿಸುವಂತೆ ನೀವು ಅನ್ಯೋನ್ಯರಾಗಿರಿ'' ಎನ್ನುವಳು. ಸ್ಲೋವೇಡ್ಸದಲ್ಲಿ, ವಧುವಿನ ದೇಣಿಗೆ(ವರದಕ್ಷಿಣೆ)ಯಾದ ಮನೆಗೆ ವಧೂವರರು ಬರುತ್ತಲೇ, ವರನು ಒಂದು ಮಧುಪಾತ್ರದಲ್ಲಿ ಬೆರಳುಹಾಕಿ, ಅದರಿಂದ ಬಾಗಿಲ ಮೆಟ್ಟಲಲ್ಲಿ ಕ್ರೂಜೆಯನ್ನೆ ಳೆದು ಬಿಡುವನು. ಅವನು ಹಾಗೆ ಮಾಡುತಿದ್ದಂತೆ ಅತಿಥಿ ಗಳು ಗಟ್ಟಿಯಾಗಿ, ''ಈ ಮಧುವಿನಂತೆ ಮಧುರವಾಗಿರಿ'' ಎಂದು ಘೋಷಿಸುವರು. ಸ್ವಾರ್ಥರ್ಜದ ಬಳಿಯ ಪ್ರದೇಶ ದಲ್ಲಿ, ದಂಪತಿಗಳು ಬರುವಾಗ, ದ್ವಾರದಲ್ಲಿ ವರನ ತಾಯಿಯು ತಟ್ಟೆಯಲ್ಲಿ ಜೇನನ್ನು ಹಿಡಿದು ನಿಲ್ಲುವಳು. ವಧುವು ಈ ಪಾತ್ರೆಯಿಂದ ಜೇನು ಕುಡಿಯಬೇಕು. ವಧುವಿನ ಅಧರ ಗಳಿಂದುದುರುವ ನುಡಿಗಳು,ಮಧುವಿನಂತೇ ಮಧುರವಾಗಿರಲಿ ಎಂದರ್ಥ. ಆ ತಟ್ಟೆಯಲ್ಲುಳಿದ ಜೇನನ್ನು ದ್ವಾರದ ಚೌಕ ಟ್ಟಿಗೆ ಹಚ್ಚಿಬಿಡುವರು. ಕ್ರೋಶಿಯಾ ಮತ್ತು ಟರ್ಕಿಯಲ್ಲಿ, ದ್ವಾರದಲ್ಲಿ ವಧುವಿಗೆ ಒಂದು ತಟ್ಟೆ ಜೇನು ಕೊಡುವರು. ಪೋಲೆಂಡಿನಲ್ಲಿ, ವಧುವಿನ ತುಟಿಗಳಿಗೆ ಜೇನನ್ನು ಸವರುವರು. ಸ್ಲಾಚ್ ಎಂಬಲ್ಲಿ, ದ್ವಾರಕ್ಕೆ ಹಚ್ಚಲು ವಧುವಿಗೆ ಜೇನನ್ನೂ ಬೆಣ್ಣೆಯನ್ನೂ ಕೊಡುವರು. ಕೆಲಕಡೆಗಳಲ್ಲಿ, ವಧೂವರರು ''ಕೇಕ''ನ್ನು (ರೊಟ್ಟಿಯನ್ನು) ಜೇನಿನಲ್ಲಿ ಮುಳುಗಿಸಿ ತಿನ್ನು ವರು. ಬಾಲ್ಕಾನಿನ ಜಿಪ್ಸಿ ಪಂಗಡದವರಲ್ಲೂ ವಧುವಿನ ಕೆಲವಂಗಗಳಿಗೆ ಜೇನನ್ನು ಹಚ್ಚುವ ಕ್ರಮವಿದೆ.

ಚೀನ—ಜಪಾನ್‌ಗಳಲ್ಲಿ

ಚೀನದಲ್ಲಿ ಎರಡು ಪಾತ್ರೆಗಳಲ್ಲಿ, ದ್ರಾಕ್ಷಾರಸ ಮತ್ತು ಜೇನನ್ನು ಬೆರಸಿ, ಆ ಎರಡೂ ಪಾತ್ರೆಗಳನ್ನು ಕೆಂಪು ನೂಲಿ ನಿಂದ ಕಟ್ಟುವರು. ವರನು ಒಂದು ಪಾತ್ರೆಯಿಂದ ಕುಡಿಯು ತ್ತಲೇ ವಧುವಿಗೆ ಕೊಡುವನು. ಅವಳು ಮತ್ತೊಂದರಿಂದ ಕುಡಿವಳು. ಹೀಗೆ ಒಂದೊಂದೇ ಗುಟುಕನ್ನು, ಒಬ್ಬರಿನ್ನೊ ಬ್ಬರ ಕೈಬದಲಿಸಿ ಕುಡಿವರು. ದಂಪತಿಗಳು ಶಯ್ಯಾಗ್ರಸ್ಥ ರಾಗುವ ಮೊದಲು ಹಾಗೆ ಕುಡಿವುದು ಅಲ್ಲಿಯ ಪದ್ಧತಿ.

ಜಪಾನಿನಲ್ಲಿ ವಿವಾಹ ಬಂಧನದೊಂದಿಗೆ ವಧೂವರರು ''ಸಾಕೆ'' ಎಂಬ ಪಾನೀಯವನ್ನು ಕುಡಿವ ಪದ್ಧತಿಯಿದೆ. ಮೂರು ತಟ್ಟೆಗಳಲ್ಲಿ ಈ ಪಾನೀಯವನ್ನು ಹೊಯ್ದು, ದಂಪತಿ ಗಳು ಒಂಭತ್ತು ಭಾರಿ ಅದನ್ನು ಒಬ್ಬರಿಂದಿನ್ನೊಬ್ಬರಿಗೆ ಬದ ಲಾಯಿಸಿ ಕುಡಿವರು. ಈ ವಿಧಿಗೆ ಅದು ''ಸಾನ್—ಸಾನ್ ಕುಡೊ'' ಎನ್ನುವರು.

ಹಿಂದೂ ಪದ್ಧತಿ

ಹಿಂದೂಗಳಲ್ಲಿ ಪ್ರಚಾರವಿರುವ ಪದ್ಧತಿಯಂತೆ, ವರನು ವಧುವಿನ ಮನೆಗೆ ಬರುತ್ತಲೇ ಜೇನು – ಮೊಸರು—ತುಪ್ಪ ಮತ್ತು ಕಲ್ಲುಸಕ್ಕರೆ ಬೆರಸಿದ ''ಮಧುಪರ್ಕ''ವನ್ನು ಕುಡಿಯ

(126ನೇ ಪುಟಕ್ಕೆ ಮುಂದುವರಿದಿದೆ)



ನ್ಯೂ ಥಿಯೇಟರ್ಸಿನವರ ''ಮೇರಾ ಬಹೆನ್'' ಚಿತ್ರದಲ್ಲಿ ಸುಮಿತ್ರಾದೇವಿ.



ಪ್ರದೀಪ ಪಿಕ್ಚರ್ಸಿನವರ ''ಪನ್ನಾದಾಯಿ'' ಚಿತ್ರದಲ್ಲಿ ಮೀನಾಕ್ಷಿ.



ರಾಮಶುಕ್ಲ. (ಈ ನಟನು ಶಶಿಧರ ಮುಖರ್ಜಿ ಯವರು ದಿಗ್ದರ್ಶಿಸಲಿರುವ ಫಿಲ್ಮಿಸ್ತಾನದವರ ಮುಂದಿನ ಚಿತ್ರದಲ್ಲಿ ಬರುತ್ತಾನೆ.)



ನಮ್ಮ ಜಿಲ್ಲೆಯ

ಔದ್ಯೋಗಿಕ ಅಭಿವೃದ್ಧಿ

ಲೇಖಕರು: ಶ್ರೀ. ಬಿ. ವೈಕುಂಠ ಬಾಳಿಗ, ಬಿ. ಎ., ಬಿ. ಎಲ್., ವಕೀ

ಶ್ರೀ. ಬಿ. ವೈಕುಂಠ ಬಾಳಿಗರವರು ವಕೀಲವೃತ್ತಿಯಲ್ಲಿರುವವರಾದರೂ, ಜಿಲ್ಲೆಯ ವಾಣಿಜ್ಯ ಸಂಘ–ಸಂಸ್ಥೆಗಳೊಡನೆ ಸೂ ನೇರಾದ ಸಂಬಂಧವುಳ್ಳವರು. ಕೆನರಾ ಚೇಂಬರ್ ಕೊಮರ್ಸಿನ ಈಗಿನ ಅಧ್ಯಕ್ಷರು. ಜಿಲ್ಲೆಯ ಭೂಸಂಪತ್ತನ್ನೂ ಅರಣ್ಯ ಸಂಪತ್ತನ್ನೂ, ಕುಶಲ ಕೆಲಸಗಾರರಿಂದ, ಹೇಗೆ ಸಂಪದಭ್ಯುದಯ ಸಾಧಕವಾಗುವಂತೆ ಉಪಯೋಗಿಸಿ ಬಹುದು ಎಂಬುದರ ಬಗ್ಗೆ ಅವರು ಇಲ್ಲಿ ಸ್ಥೂಲವಾಗಿ ವಿಮರ್ಶಿಸಿ, ಕೆಲವು ಸೂಚನೆಗಳನ್ನು ತ್ತಾರೆ. ಪ್ರತಿಯೊಂದು ಜಿಲ್ಲೆಯು ಸ್ವಯಂ ಪೂರೈಕೆಯ ತತ್ತ್ವವನ್ನು ಅಂಗೀಕರಿಸಿ, ಕಾರ್ಯ ತರಬೇಕೆಂದೂ, ಭಾರತವು ಔದ್ಯೋಗಿಕವಾಗಿ ಮುಂಬರಿಯಬೇಕೆಂದೂ ಹೇಳುತ್ತಾರೆ. ಈ ವನ್ನ, ಬಲ್ಲಿದರು ಚೆನ್ನಾಗಿ ಮನನಮಾಡಿ, ಇದರಲ್ಲಿನ ಸೂಚನೆಗಳನ್ನು ಹೇಗೆ ಉಪಯೋಗಿಸಿ ಬಹುದೆಂದು ವಿಚಾರಿಸಬೇಕಾದುದು ಅವಶ್ಯವಿದೆ.

ಯುದ್ಧದಿಂದುಂಟಾದ ವಿಪರೀತ ಪರಿಸ್ಥಿತಿಯು, ನಮ್ಮ ದೇಶದಲ್ಲಿ, ನಮಗವಶ್ಯವಿರುವ ಹೆಚ್ಚಿನ ವಸ್ತುಗಳಿಗಾಗಿ ನಾವು, ಹೇಗೆ ಪರರ ಮೇಲೆ ಪೂರ್ಣ ಅವಲಂಬಿಸಿರುವೆವೆಂಬು ದನ್ನು ಸ್ಪಷ್ಟವಾಗಿ ಬಯಲುಪಡಿಸಿದೆ. ನಮಗೆ ಅವಶ್ಯವಿರುವ ವಸ್ತುಗಳು, ಬೇಕಾದಂತೆ ಅಗ್ಗವಾಗಿ ಪೇಟೆಯಲ್ಲಿ ದೊರೆಯು ತ್ತಿರುವಷ್ಟು ಕಾಲ ನಾವು,—ಅವು ಎಲ್ಲಿಯವು, ಹಿಂದೂದೇಶ ದಲ್ಲಿ ತಯಾರಾದುವೇ ಅಥವಾ ಜಪಾನಿನವೇ, ಇಲ್ಲವೇ ಮತ್ತಾವುದಾದರೂ ದೇಶದ್ದೇ ಎಂದು ವಿಚಾರಿಸುವ ಅಥವಾ ನೆನೆವ ಗೊಡವೆಗೆ ಹೋಗಲಿಲ್ಲ. ಒಂದು ವ್ಯಕ್ತಿಯ ಸ್ವಾರ್ಥ ದೃಷ್ಟ್ಯಾ ನೋಡುತ್ತ, ಆತನ ಜೀವನದ ಸುಖಕ್ಕೆ ಬೇಕಾದುದೆಲ್ಲ ಒದಗುತ್ತಿರಲು, ಯೋಚನೆಗೂ ಚಿಂತೆಗೂ ಇಂಬು ಇರಲಿಲ್ಲ. ಆದರೆ, ದೇಶಹಿತ ಅಥವಾ ಸಮಾಜಹಿತದೃಷ್ಟ್ಯಾ ನೋ ಆ ಅಲಕ್ಷ್ಯಭಾವವು ಮಹಾಪರಾಧವಿದೆ; ಇನ್ನೂ ಆ ಚಿಂತಿಸುತ್ತ, ಅದು ಸ್ವಘಾತುಕತನದ ಘೋರಣೆಯೇ ಬಹುದು. ನಾವು ನಮಗರಿಯದೆನೇ, ಚಲೋರೀತಿ ಆಕರ್ಷಿಸಲ್ಪಟ್ಟು ಜೋಳವು ಮೌನವಾಗಿ ನೆತ್ತರು ಹೀರು ಶೋಷಿಸಲ್ಪಟ್ಟಿರುವೆವು. ಸಾಮಾನ್ಯ ಮನುಷ್ಯನ ಮನಸ್ಸ ವಿಚಿತ್ರ ನೋಟಗಳಿಂದ ಮಂಕುಗೊಳಿಸಿ ಅತ್ತ ತಿರುಗಿಸಿ ವಿದೇಶೀ ಪ್ರಭುತ್ವವು ವಿನಾಶಕರ ಆಘಾತ ಕೊ ದೆಂದರೆ ಹೀಗೇ. ಈಗ ಒಂದು ಯುದ್ಧವು ಮುಗಿಯಿ ನಾವಿನ್ನು, ಪರಿಸ್ಥಿತಿಯ ಪೂರ್ಣಾವಲೋಕನಮಾಡಬೆ ಮುಂದಿನ ಬಾಳ್ವೆಯ ಬಗ್ಗೆ, ಹಿಂದಿನ ಪಾಠಗಳನ್ನು ಕ

(125ನೇ ಪುಟದಿಂದ ಮುಂದರಿದುದು.)

ಕೊಡುವರು. ಬಂಗಾಳದ ಕೆಲವು ಕಡೆಗಳಲ್ಲಿ, ವಧುವಿನ ಕೆಲವಂಗಗಳಿಗೆ ಜೇನು ಹಚ್ಚುವ ಪದ್ಧತಿ ಈಗಲೂ ಇದೆ ಯೆನ್ನುವರು. ಈ ಪದ್ಧತಿಯು ಹಿಂದೂದೇಶದ ಇತರ ಕಡೆ ಗಳಲ್ಲಿದೆಯೋ ಇಲ್ಲವೋ ನಾನರಿಯೆ. ಆದರೆ, ಇದ್ದಲ್ಲಿ, ನನ ಗಾಶ್ಚರ್ಯವಾಗದು. ಏಕೆಂದರೆ, ಅನೇಕ ಸಂದರ್ಭಗಳಲ್ಲಿ ಹಿಂದೂ ವಧುವಿಗೆ ಆಗಾಗ್ಗೆ, ನಾನಾದ್ರವ್ಯಗಳನ್ನು ಹಚ್ಚುವ ಪದ್ಧತಿಯಿದೆ. ಅದರಲ್ಲಿ, ಕೆಲವು ಕಡೆಗಳಲ್ಲಿ, ಜೇನನ್ನೂ ಸೇರಿಸುತ್ತಿರಬಹುದು.

ಈ ಮೇಲೆ ಹೇಳಿದುದರ ಮೇಲೆ, ನವದಂಪತಿಗಳು ಮಧುಪಾನಮಾಡುವ, ಅಥವಾ ಜೇನನ್ನು ಮೈಗೆ ಬಾಗಿಲಿನ ಚೌಕಟ್ಟಿಗೆ ಹಚ್ಚುವ ಪದ್ಧತಿಯು ಯಾವುದಾದರೂ ಒಂದು ದೇಶದಲ್ಲಿ ಮಾತ್ರವಲ್ಲ. ಪೌರ್ವಾತ್ಯರಲ್ಲಿಯೂ ಪಾಶ್ಚಿಮಾತ್ಯ ರಲ್ಲಿಯೂ ಇದೆಯೆಂದೂ. ಇದರಿಂದಲೇ "ಮಧುಮಾಸ" ಅಥವಾ "ಹನಿಮೂನ್" ಎಂಬ ಶಬ್ದವು ರೂಢಿಗೆ ಬಂತೆ ನಾವು ತಿಳಕೊಳ್ಳಬಹುದು.

ಸೂರ್ಯನ ವಿವಾಹ ಪದ್ಧತಿಯೊಂದು ಪುರಾ ಗ್ರಂಥಗಳಲ್ಲುಕ್ತವಾಗಿದೆ. ಅದನ್ನನುಸರಿಸಿಯೇ ಇಂ ಹಿಂದೂ ವಿವಾಹಪದ್ಧತಿಯಿದೆ. ವೇದೋಕ್ತ ಪದ್ಧತಿ ವಧೂವರರ ಮಧುಪಾನದ ಉಲ್ಲೇಖವಿದೆ. ಹಿಂದೂ ದಲ್ಲಿ, ಬ್ರಾಹ್ಮಣರಲ್ಲಿ ನಡೆವ ವಿವಾಹಗಳಲ್ಲಿ, ಆ ವೇದೋ ಮಂತ್ರಗಳನ್ನೆ ಪಠಿಸುವರು. ದಂಪತಿಗಳ ಅನ್ಯೋನ್ಯ ಶುದ್ಧ ನಡತೆ ಮೊದಲಾದುವುಗಳ ಬೋಧೆಯೂ ಅದರಿಂ ಉದ್ಧರಿಸಲ್ಪಟ್ಟು, ಹೇಳಲ್ಪಡುವುದು.

ಇಂದಿನ ಪದ್ಧತಿಗೆ ಮೂಲವಾದ ದೇವತೆಗಳ ಆ ವಿ ಪದ್ಧತಿಯ ವಿವರವನ್ನು, ಮುಂದೆ ಅನುವು ದೊರೆತಾಗ, ಸಂಚಿಕೆಯಲ್ಲಿ ಕೊಡುವೆವು.

ಬೇಕು. ಕಳೆದು ಹೋದುದನ್ನು ಸರಿಪಡಿಸಲಾಗುವುದಿಲ್ಲ. ವರ್ತಮಾನ ಕಾಲದ ಕರ್ತವ್ಯವೇನೆಂದೂ, ಭವಿಷತ್ತಿನ ಜೀವನಕ್ಕೊದಗಿಸುವ ರೀತಿ ಹೇಗೆಂದೂ ಚಿಂತಿಸಿ ಕಾರ್ಯ ತತ್ಪರರಾಗಬೇಕು.

ಸಾಮಾನ್ಯ ಮನುಷ್ಯನ ಅವಶ್ಯಕತೆಗಳು ಹೆಚ್ಚುತ್ತಿವೆ; ಇದು ಸಹಜವೂ ಅಹುದು. ದೇವರ ಸೃಷ್ಟಿಯಲ್ಲಿ ಪ್ರತಿಯೊಬ್ಬನೂ, ಪ್ರಕೃತಿಯೂ ಮಾನವ ಕಲ್ಪನೆ ಹಾಗೂ ವಿಜ್ಞಾನವೂ ಕೊಡಬಲ್ಲ ಪ್ರತಿಯೊಂದು ಸೌಕರ್ಯವನ್ನು ಯಥೇಚ್ಛ ಅನುಭವಿಸಲು ಅರ್ಹನು. ಈ ವಿಷಯದಲ್ಲಿ, ಸಹಜವಾಗಿ ಮನುಷ್ಯ-ಮನುಷ್ಯರೊಳಗೆ ಯಾವ ಪರಿಮಿತಿಯೂ ಇರಬಾರದು. ಮನುಷ್ಯನ ಶ್ರೀಮಂತಿಕೆ ಅಥವಾ ಸ್ಥಾನಮಾನಗಳಿಂದ ಏಳುವ ಆತಂಕಗಳು ದೈವಿಕನ್ಯಾಯಕ್ಕೆ ವಿರೋಧವಾಗಿವೆ, ಇವುಗಳು ಹೋಗಬೇಕು. ಕೆಲವೊಂದು ಮೂಲ ಹಕ್ಕುಗಳ ಪೂರ್ಣ, ನಿರಾತಂಕ ಮತ್ತು ಎಲ್ಲವರ ಆನಂದಮಯ ಜೀವನಕ್ಕೆ ಯಾವ ತೊಂದರೆಯೂ ಇರಬಾರದು. ಎಲ್ಲರೂ ಜಾತಿ, ವರ್ಣ, ಮತ ಭೇದವಿಲ್ಲದೆ ಏಕರೀತಿಯಾಗಿ ಅವನ್ನನುಭವಿಸುವಂತಾಗಬೇಕು. ಶುದ್ಧ ವಾಯು ಸೇವನೆಯ ಹಕ್ಕು, ಪೌಷ್ಟಿಕರ ರುಚಿಕರ ಭೋಜನವನ್ನುಣ್ಣುವ ಹಕ್ಕು, ಗಾಳಿ, ಚಳಿ, ಮಳೆಗಳಿಂದಾಶ್ರಯಹೊಂದುವ ಮನೆಯಲ್ಲಿ ಜೀವಿಸುವ ಹಕ್ಕು, ತನ್ನ ಇಚ್ಛೆಯ ಶಿಕ್ಷಣ ಪಡೆವ ಹಕ್ಕು, ಅಸ್ವಸ್ಥ ಬಿದ್ದಾಗ ಯೋಗ್ಯ ವೈದ್ಯಕೀಯ ಸಹಾಯ ಪಡೆವ ಹಕ್ಕು — ಇವು ಕೆಲವು, ಮನುಷ್ಯನ ಮೂಲಹಕ್ಕುಗಳೆನಿಸಲ್ಪಡುವುವು. ಯಾವ ವ್ಯಕ್ತಿಯೂ, ಸಮಾಜವೂ, ಸರಕಾರವೂ ಇವುಗಳನ್ನು ಹೊಂದುವುದನ್ನು ಅಲ್ಲಗಳೆಯಲಾರದು, ತಿರಸ್ಕರಿಸಲಾರದು ಮತ್ತು ತಡೆಯಲಾರದು. ಇದರ ಉಪಸಿದ್ಧಾಂತವಾಗಿ, "ಸ್ವಾತಂತ್ರ್ಯವು ನನ್ನ ಜನ್ಮಸಿದ್ಧ ಹಕ್ಕು" ಎನ್ನಲಾಗಿದೆ. ಪರಮಾತ್ಮನು, ಎಲ್ಲರೂ ಸುಖದಿಂದ ಜೀವಿಸಿರಬೇಕೆಂದು ಪೃಥ್ವಿಯನ್ನು ಸ್ವರ್ಗವನ್ನಾಗಿ ಮಾಡಿರುವನು. ಆದರೆ, ಮಾನವನ ದುರಾಶೆಯು ಈ ಸ್ವರ್ಗವನ್ನು ನರಕವನ್ನಾಗಿ ಮಾಡುತ್ತಿದೆ. ಇದರ ಕುರೂಪವು — ಒಂದು ಜನಾಂಗವು ಮತ್ತೊಂದನ್ನು ಶಾಶ್ವತವಾಗಿ ಪರತಂತ್ರದಲ್ಲಿರಿಸುವುದರಲ್ಲಿ ವಿದೇಶೀ ಆಡಳಿತದಲ್ಲಿ, ಒಡೆದು ಕಾಣುತ್ತಿದೆ. ಇದು ಬಹುಕಾಲ ನಡೆಯಲಾಗದು. ಔದ್ಯೋಗಿಕವಾಗಿಯೂ, ಒಂದು ಜನಾಂಗ ಅಥವಾ ಸರಕಾರವು, ಯಾವುದೇ ತರದ ವಸ್ತುಗಳನ್ನು ತಯಾರಿಸುವ ಉದ್ಯಮದಲ್ಲಿ ಎಲ್ಲಿಯೂ ಯಾರ ಮೇಲೆಯೂ ಯಾವ ತರದ ನಿರ್ಬಂಧವನ್ನೂ ಇರಿಸಲಾಗದು. ಹೆಚ್ಚು ನಂಬ್ರದ (ಅತಿನಾಜೂಕು) ನೂಲಿನ ವಸ್ತುಗಳನ್ನು ತಯಾರಿಸುವುದರ ಮೇಲಿನ ನಿರ್ಬಂಧವು ಅರ್ಥವಿಲ್ಲದುದು. ತೋರಿಕೆಗೆ ಅನಪಾಯಕಾರಿ ಎಂದು ಕಂಡರೂ — ಸೂಕ್ಷ್ಮವಾಗಿ ಪರೀಕ್ಷಿಸಿದರೆ, "ಪೆಟೆಂಟ್ ಹಕ್ಕು"ಗಳೆಂಬವು, ಈ ಅನಿಷ್ಟದ ದ್ರಾವಕರೂಪವೇ ಆಗಿದೆ. ಈ ವಿಷಯವನ್ನು ಇನ್ನು ವಿವರಿಸುವುದು ಅವಶ್ಯವಿಲ್ಲ. ನಾವು ಔದ್ಯೋಗಿಕವಾಗಿ ಬಹಳ ಹಿಂದೆ ಬಿದ್ದಿರುವೆವೆಂಬುದನ್ನು ಒಪ್ಪಲೇಬೇಕು. ಅಮೇರಿಕ ಮತ್ತು ಇಂಗ್ಲೆಂಡಿನಲ್ಲಿ ಸರಾಸರಿ ಒಬ್ಬನ ವರಮಾನವು ಅನುಕ್ರಮವಾಗಿ ರೂ. ೧೧೮೭ ಮತ್ತು ರೂ. ೧೦೧೩ ಇರುವಾಗ, ಹಿಂದೀಯನ ವರಮಾನವು ರೂ. ೬೫ ಮಾತ್ರ. ಹಿಂದೂದೇಶದ ಆಸರೆಗಳೂ, ಅಸಿದ್ಧ ಪದಾರ್ಥಗಳ ಸಂಪತ್ತು ಇತರ ದೇಶಗಳಿಗಿಂತ ಎಷ್ಟೋ ಪಾಲು ಹೆಚ್ಚು. ಈ ಸಂಪತ್ತೂ ಇದ್ದೂ ನಾವು ನಮ್ಮ ಆವಶ್ಯಕತೆಗಳ ಬಗ್ಗೆ ಪೂರ್ಣವಾಗಿ ಪರದೇಶಗಳ ಮೇಲೆ ಹೊಂದಿಕೊಂಡಿರುವೆಂಬುದು ಎಂತಹ ವಿಡಂಬನ! ನಮ್ಮ ಕಣಜದಲ್ಲಿ ಆಹಾರವಿದೆ. ಅದರ ಬಗ್ಗೆ ಕೆಲಸಮಾಡಲೂ ನಮ್ಮೊಡನೆ ಜನವಿದೆ. ಹೀಗಿದ್ದು ನಾವು ಉಪವಾಸಿಗಳಾಗಿದ್ದೇವೆ. ಈ ಅಸ್ವಾಭಾವಿಕ ಪರಿಸ್ಥಿತಿಯ ಕಡೆಗೆ ಲಕ್ಷ್ಯಕೊಡಬೇಕು. ಈ ಪರಿಸ್ಥಿತಿಯನ್ನು ಕೊಂಚ ವಿವೇಚಿಸಿ, ಸಮಸ್ಯೆಯನ್ನು ಪರಿಹರಿಸಲೆತ್ನಿಸೋಣ.

ಪ್ರತಿಯೊಂದು ಜಿಲ್ಲೆಯು ಪ್ರತ್ಯೇಕ ಅಂಶವಾಗಿ, ಪುನರ್ಘಟನೆಗೆ ತೊಡಗಿದರೆ, ಈ ಸಮಸ್ಯೆಯನ್ನು ವಿಚಕ್ಷಣತೆಯಿಂದ ಶೀಘ್ರವಾಗಿ ಪರಿಹರಿಸಬಹುದು. ವಿಕಾಸದ, ಬಳವಣಿಗೆಯ ಕ್ರಮವೇ ಅದು. ಆಧುನಿಕ ನಾಗರಿಕತೆಯು ನಮಗೇನಾದರೂ ಕಲಿಸಿದೆಯಾದರೆ,— ಇತರರ ವ್ಯಯದಲ್ಲಿ (ಇತರರಿಗೆ ತೊಂದರೆಯಾಗುವಂತೆ) ಕೈಗಾರಿಕೆಗಳನ್ನು ಯಾವುದಾದರೂ ಒಂದೇ ಸ್ಥಳದಲ್ಲಿ ಕೇಂದ್ರೀಕರಿಸುವುದರಿಂದುಂಟಾಗುವ ದುರಿಚ್ಛೆಗಳು. ಉದಾಹರಣಾರ್ಥ: ಮುಂಬಾಯಿಯು ನಮ್ಮ ನಗರಗಳ ರಾಣಿ, ಮತ್ತು ನಮ್ಮ ಕೈಗಾರಿಕೆಗಳ ಹೃದಯ. ಆದರೆ, ಈ ಸುಂದರ ನಗರಿಯು ತನ್ನಲ್ಲಿ ಅನಾರೋಗ್ಯಕರವಾದ — ವರ್ಷದ ಯಾವ ಕಾಲವೂ ಸೂರ್ಯರಶ್ಮಿ ಬೀಳದ — ತೀರ ಅನಾರೋಗ್ಯಕರ ಕೊಳಕು ಮನೆಗಳ ನೇಕವನ್ನು ಅಡಗಿಸಿದೆ. ಉದ್ಯೋಗಗಳನ್ನು ಪ್ರತ್ಯೇಕ ಪ್ರತ್ಯೇಕ ಸ್ಥಳಗಳಲ್ಲಿ ರಚಿಸಿದರೆ ಮೇಲಿನ ತರದ ಹಾನಿಯಿಲ್ಲ. ಸಿಮೆಂಟ್ ಉದ್ಯಮವು ಈ ಪದ್ಧತಿಯನ್ನು ಕೈಕೊಂಡಿದೆ. ವಲಯ ಪದ್ಧತಿಯು ಬಂದೇ ಬರುವುದು. ಸಂಬಂಧಪಟ್ಟವರು ಇದನ್ನು ಎಷ್ಟು ಬೇಗ ಲಕ್ಷಿಸುವರೋ ಅಷ್ಟು ಒಳ್ಳೆಯದು.


ಇನ್ನೂ ಮುಂದರಿವ ಮೊದಲು, ಔದ್ಯೋಗಿಕ ಬಡಾವಣೆ ಯಾ ಮಿತಿಮೀರಿದ ಉತ್ಪತ್ತಿಯ ಕುರಿತು ಸಾಮಾನ್ಯವಾಗಿ ಹರಡಿರುವ ಒಂದು ಹುಚ್ಚು ಟೀಕೆಯ ಕುರಿತು ಒಂದು ಮಾತು: ಮಿತಿಮೀರಿದ ಉತ್ಪತ್ತಿಯು ಹಾನಿಕರವೆಂಬ ಕೂಗು, ಈ ಯುದ್ಧದಿಂದೆದ್ದ ಪರಿಸ್ಥಿತಿಯಲ್ಲಿ ಸುಳ್ಳೆಂದು ಸ್ಪಷ್ಟವಾಯಿತು. ಮಾನವ ಜೀವನಾವಶ್ಯಕತೆಯ ವಸ್ತುಗಳ ಉಳಿಕೆಯ ಬದಲು, ಆಹಾರ-ಬಟ್ಟೆ-ಔಷಧಿಗಳು ಹೀಗೆ ಪ್ರತಿಯೊಂದು ವಿಧದ ವಸ್ತುವಿನ ಅಭಾವವಿದ್ದುದನ್ನು ಕಂಡೆವು. ಮೇಲಿನವುಗಳನ್ನು ತಯಾರಿಸುವ ಕಾರ್ಖಾನೆಗಳೂ ಕೆಲಸಗಾರರೂ ಯುದ್ಧಾವಶ್ಯಕತೆಯ ವಸ್ತುಗಳ ಕಡೆಗೆ ಹೊರಳಿದುದರಿಂದ

ಮೇಲಿನ ವಸ್ತುಗಳ ಅಭಾವವುಂಟಾಯಿತು ಎಂದಾರಾದರೂ ತರ್ಕಿಸಬಹುದು. ಇದು ಶುದ್ಧ ತಪ್ಪು. ಏಕೆಂದರೆ, ಈ ಯುದ್ಧದಲ್ಲಿ, ರಣಭೂಮಿ ಅಥವಾ ಯುದ್ಧೋಪಕರಣಗಳ ತಯಾರಿಯಲ್ಲಿ ತೊಡಗಿದ ಜನರು ಜಗತ್ತಿನ ಜನಸಂಖ್ಯೆಯಲ್ಲಿ ಸೇಕಡಾ 10ರಷ್ಟು ಇರಲಿಲ್ಲ. ನಿಜವಾದ ಕಾರಣವಿಷ್ಟೆ: ಕೆಲವೊಂದು ಜನರು ಅಥವಾ ರಾಷ್ಟ್ರಗಳು ಕೆಲವೊಂದು ಮುಖ್ಯ ಕೈಗಾರಿಕೆಗಳನ್ನು ತಮ್ಮ ಕೈಯಲ್ಲೆ ಇರಿಸಿಕೊಂಡಿವೆ. ಅವರ ವೈಯಕ್ತಿಕ ಅಹಂಭಾವದ ಮನಸ್ಸು ಅವರಿಗೆ, ಇಡೀ ಜಗತ್ತು ಯುದ್ಧ ನಿರತವಾಗಿದೆ—ಇದು ಸಾರ್ವತ್ರಿಕ ಯುದ್ಧ ಎಂದು ಭಾಸವಾಗುವಂತೆ ಮಾಡಿದೆ. ಜಗತ್ತಿನ ಜನಸಂಖ್ಯೆಯನ್ನು ಗಣಿಸುವಾಗ, ಜನರ ಆವಶ್ಯಕತೆಯ ವಸ್ತುಗಳನ್ನು ತಯಾರಿಸಲು ಬೇಕಾದ ಜನರು ಇರಲಿಲ್ಲ ಎಂಬುದನ್ನು ಹೇಳುವುದು ವ್ಯರ್ಥ. ಈ ಪರಿಸ್ಥಿತಿಯು ಯಹೂದಿಯ ಅತ್ಯಾಶೆಯಿಂದಲೇ ತರಲ್ಪಟ್ಟಿತು. ಇದಲ್ಲದೆ, ಮಿತಿಮೀರಿದ ಉತ್ಪತ್ತಿಯೆಂಬೀ ಭೂತವು ಮನುಷ್ಯಕೃತ, ಕೃತ್ರಿಮ ಬೇತಾಳವೇ ಆಗಿದೆ. ಬ್ರೆಝಿಲಿನ ಕಾಫಿಯು—ಮಿತಿಮೀರಿದ ಉತ್ಪತ್ತಿಯೆಂದು ಸಮುದ್ರಕ್ಕೆ ಬಿಸುಡಲ್ಪಟ್ಟಿತು. ಹಿಂದೂ ದೇಶದಲ್ಲಿ ದಾರಿದ್ರ್ಯವು ತಾಂಡವವಾಡುತ್ತಿದೆ. ಹಲವರಿಗೆ ಹಣದ ಅಭಾವದಿಂದ ಕಾಫಿ ದೊರೆಯದು. ಇಲ್ಲಿ ಅಥವಾ ಇಂತಹ ಬೇರೆ ದೇಶದಲ್ಲಿ ಆ ಕಾಫಿಯನ್ನು ಆನಂದಿಸುತ್ತಿದ್ದರಲ್ಲವೆ? ಯಾವ ವಿವೇಕಿಯೂ ಇದನ್ನು ಅಲ್ಲಗಳೆಯಲಾರನು. ಪ್ರಪಂಚದಲ್ಲಿ ಯಾರಾದರೊಬ್ಬರಿಗೆ ನಿರುಪಯೋಗಿಯಾದ ವಸ್ತುವೆಂಬುದಿಲ್ಲ. ಒಂದು ವಸ್ತುವು ಒ… ಉಪಯೋಗ ಕಾಣದಿದ್ದರೆ ಮತ್ತೊಬ್ಬನಾದರೂ ಉ… ಗಿಸುವನು. ಇಲ್ಲಿ ನಾವು ಪುನಃ ಪ್ರಶ್ನಿಸಬಹುದು: … ಷ್ಯನು ಅನುಭೋಗಿಸಬಹುದಾದ ಯಾವತ್ತೂ ಸೌ… ಗಳು ಅವನಿಗೆ ಕೊಡಲ್ಪಡುತ್ತವೆಯೆ? ಮನುಷ್ಯನ ಆ… ಗಳೂ ಆವಶ್ಯಕತೆಗಳೂ ಹೆಚ್ಚುತ್ತಲೇ ಇವೆ. ಹಿಂದೂ… ನಾಲ್ಕನೂರು ಮಿಲಿಯ ಜನರಿಗೆ ಸರಿಯಾಗಿ ವೈದ್ಯ… ಸೌಕರ್ಯಗಳೊದಗಬೇಕಾದರೆ ನೂರಾರು ಔಷಧ ಕಾ… ನೆಗಳೇರ್ಪಡಬೇಕಾಗುವುದು. ರಷ್ಯದಲ್ಲಿ ಈಗ ಪ್ರಯೋ… ಡುತ್ತಿರುವುದು ಪರೀಕ್ಷಾರ್ಥವಾದುದು ಮಾತ್ರ; … ಅನಿಷ್ಟಗಳಿಗೆ ಅವು ಚಿಕಿತ್ಸೆಯಾಗಬಹುದು.

ನಮ್ಮ ಜಿಲ್ಲೆಯು ಚಿಕ್ಕದು; ಬಡವಾದುದು. … ಕಾರಣ, ಅದು ಅಯಥಾರ್ಥವಾದ ಪರಿಮಾಣದ … ವಾಗಲಾರದು. ಅದರ ತಪ್ಪು ಇರುವುದಾದರೆ, ಈ… ಪರಿಮಾಣದ್ದೇ. ಪ್ರತಿಯೊಂದು ಜಿಲ್ಲೆಯು ತನಗವಶ್ಯ… ರುವ ವಸ್ತುಗಳನ್ನು ತಾನೇ ತಯಾರಿಸಿಕೊಳ್ಳುವುದು ಸ… ವಾದ ಮಹತ್ವಾಕಾಂಕ್ಷೆಯಾಗಿದೆ; ಅದು ಪ್ರತಿಯೊ… ಜಿಲ್ಲೆಯ ಕರ್ತವ್ಯವೂ ಆಗಿದೆ. ನಾವು ಹಾಗೆ ಮಾಡು… ವೆವೆ? ಇಲ್ಲ. ಏಕೆ? . . ಇದಕ್ಕೆ ಉತ್ತರವಿಲ್ಲ. … ನೋಡಿದರೆ, ನಾವು ಸೋಮಾರಿಗಳಾಗಿರುವೆವು; ಅ… ಭಾವದಿಂದಿರುವೆವು. ಬಹುಶಃ ನಾವು ಆ ವಿಷಯ… ಪರ್ಯಾಲೋಚಿಸದಿದ್ದುದೂ ಒಂದು ಬಲವಾದ ಕಾ…



ಅಮರ ಪಿಕ್ಚರ್ಸನವರ "ರತ್ನಾವಳಿ" ಚಿತ್ರದ ದಿಗ್ದರ್ಶಕ ಶ್ರೀ। ವೀರೇಂದ್ರ ದೇಸಾಯಿ



ಶ್ರೀ। ಚಮಣಲಾಲ ದೇಸಾಯಿ (ಅಮರ ಪಿಕ್ಚರ್ಸಿನ ಪ್ರಖ್ಯಾತ ಚಿತ್ರ-ಉತ್ಪಾದಕರು)



ಸೇಟ್ ಚುನಿಭಾಯಿ ದೇಸಾಯಿ… ಸುಪ್ರೀಮ್ ಫಿಲ್ಮ್ ಡಿಸ್ಟ್ರಿಬ್ಯೂಟರ್ಸ… ಕರು. ಚಲಚ್ಚಿತ್ರ ಕೈಗಾರಿಕೆಯ … ಅಂಗಗಳಲ್ಲಿ ಅನುಭವಿಗಳು…

ಂಗಳೂರಿನಲ್ಲಿ ದಿನಕ್ಕೆ ಎಷ್ಟು ಅಕ್ಕಿ ಬೇಕು ಎಂಬ ಸರಿ ಯಾದ ಲೆಕ್ಕವನ್ನು ಕೆಲವೇ ಮಂದಿ ಮಾತ್ರ ಕೊಡಲು ಶಕ್ತ ಎಂಬುದನ್ನು ನೋಡುವಾಗ ಕೌತುಕವೆನಿಸುತ್ತದೆ. ಇದರಿಂದ ತಿಳಿವುದೇನು? ಬಹಳೇ ಕೆಲವುಂದಿ ಜನರು,ತಂತಮ್ಮ ಕುಟುಂ ಬಗಳ ಆವಶ್ಯಕತೆಯ ಹೊರಗೆ ಮತ್ತೇನನ್ನೂ ತಿಳಿದಿರಲಿಲ್ಲ. ದುದರಿಂದ. ನಾವು ಈ ಜಡ್ಡುತನವನ್ನು ತೊಡೆದು ಬಿಟ್ಟು, ನಮ್ಮ ಆವಶ್ಯಕತೆಗಳೇನು. ಇತರರ ಸಹಾಯವಿಲ್ಲದೆ ನಾವು ನನ್ನು ಒದಗಿಸಿಕೊಳ್ಳಬಹುದು ಎಂಬುದನ್ನು ಪರ್ಯಾ ಲೋಚಿಸಬೇಕು. ಆದರೆ, ಎಲ್ಲರೂ ಅಥವಾ ಹೆಚ್ಚಿನವರು ದನ್ನು ಚೆನ್ನಾಗಿ ತಿಳಕೊಳ್ಳಲು, ನಮ್ಮ ಜಿಲ್ಲೆಯಲ್ಲಿ ಕಡ್ಡಾ ಯವಾದ ಧರ್ಮಾರ್ಥ ಶಿಕ್ಷಣವಿರಬೇಕು. ಇದು, ಇತರ ಸಮಸ್ಯೆಗಳ ಪರಿಹಾರಕ್ಕೂ ಧಾರಾಳ ಸಹಾಯಕವಾಗುವುದು. ಲ್ಲಿ ಪುನಃ ನಮಗನಿಸುತ್ತಿದೆ,—ನಾವು ಪಡೆವ ರೀತಿಯ ಕ್ಷಣವು ನಮಗೆಲ್ಲರಿಗೆ ಒಪ್ಪಿದುದಲ್ಲ. ವಾಣಿಜ್ಯ ಹಾಗೂ ಯಾಂತ್ರಿಕಸಂಬಂಧವಾದ ಶಿಕ್ಷಣವು ನಮಗೆ ಧಾರಾಳಬೇಕು. ನಮ್ಮಲ್ಲಿ ಕಲಿತ, ಕಲಿವ ಚುರುಕಾದ ತರುಣರು ಹಲವರಿರು ರು. ಅವರು ಜಿಲ್ಲೆಯ ಒಳಗೆ ಅಥವಾ ಹೊರಗೆ. ದೊಡ್ಡ ಸಂಸ್ಥೆಗಳಲ್ಲಿ ಜವಾಬ್ದಾರಿಯ ಸ್ಥಾನಗಳನ್ನಾಕ್ರಮಿಸಬೇಕಾ ದರೆ ಅಂತಹ ಶಿಕ್ಷಣವು ಅವಶ್ಯ. ನಮ್ಮ ತರುಣರ ಯೋಗ್ಯ ತೆಯನ್ನು, ಸೂಕ್ಷ್ಮ ಬುದ್ಧಿಯ ವಾಣಿಜ್ಯ ವಿಶಾರದರು ಚೆನ್ನಾಗಿ ಬಲ್ಲರು. ನಾವು ಅವರಿಗೆ ಮತ್ತೂ ಯೋಗ್ಯ ಶಿಕ್ಷಣ ಕೊಟ್ಟರೆ, ಅವರು ವಹಿಸುವ ಜವಾಬ್ದಾರಿಯ ಕಾರ್ಯಗಳಲ್ಲಿ ಅವರು ಶತಶಃ ಬೆಳಗುವರು; ಸ್ವಾಭಿಮಾನ-ಸ್ವಶಕ್ತಿಗಳಿಂದ ಯೋಗ್ಯ ಪ್ರಜೆಗಳಾಗಿ ಗೌರವದಿಂದ ಮೆರೆವರು. ಇವರನ್ನೆಲ್ಲ ನಮ್ಮ ಜಿಲ್ಲೆಯೊಳಗೇ ಇರಿಸಿಕೊಂಡು ಉಪಯೋಗಿಸುವ ಯತ್ನವಿರಬೇಕು. ಮುಂಬರುವ ಆ ಸಂಭವನೀಯ ಶಕ್ತಿಯು ನ್ಯಾಯವಾಗಿ ನಮ್ಮದು; ಈ ಶಕ್ತಿಯನ್ನು ನಾವು, ಇತರರ ಉಪಯೋಗಾರ್ಥ ಹೊರಗೆ ಹೋಗಬಿಡಬಾರದು; ಹೋಗ ಗೊಡುವುದಾದರೂ, ಉಭಯತ್ರರಿಗೂ ಉಪಯೋಗವಿದೆಯೋ ನೋಡಬೇಕು.

ನಮ್ಮ ಜಿಲ್ಲೆಯಲ್ಲಿನ ಇಂದಿನ ಮುಖ್ಯ ಕೈಗಾರಿಕೆ ಗಳೆಂದರೆ ಹಂಚು, ಕಾಫಿ, ಮತ್ತು ಗೇರುಭೀಜ. ಉಳಿದೆಲ್ಲ ವ್ಯಾಪಾರಗಳಲ್ಲಿ ನಮ್ಮಲ್ಲಿ ಅಭಾವವಿದೆ. ಬಟ್ಟೆಯ ವಿಷಯ ತೆಕ್ಕೊಂಡರೆ ನಾವು, ಎಷ್ಟೋ ಬಟ್ಟೆಗೆ ಪರಾವಲಂಬಿಗಳಾಗಿ ದ್ದೇವೆ. ನಮ್ಮ ಜಿಲ್ಲೆಯಲ್ಲಿ ಹತ್ತಿಯು ಬೆಳೆಸಲ್ಪಡುವುದಿಲ್ಲ ಎಂದು ಹೇಳುವರು. ಆದರೆ, ಇದು ಸರಿಯಾದ ಉತ್ತರವಲ್ಲ. ನಾವು ವಸ್ತ್ರವನ್ನು ತರಿಸುವ ಮುಂಬಯಿ ಅಥವಾ ಅಹಮ್ಮ ದಾಬಾದುಗಳಲ್ಲಿ ಹತ್ತಿ ಬೆಳೆಸಲ್ಪಡುವುದಿಲ್ಲ. ನಮ್ಮ ಜಿಲ್ಲೆಗೆ ದೊಡ್ಡ ಕರಾವಳಿಯಿದೆ. ಒಳ್ಳೇ ಬಂದರಗಳಿವೆ. ಜಲ ಮಾರ್ಗದ ಸೌಕರ್ಯವಿರುವಲ್ಲಿ, ಬಟ್ಟೆಯ ದಂಧೆಯ ಬಡಾ ವಣೆಗೆ ತೊಂದರೆಗಳಿರಬಾರದು. ಈ ಸಂಬಂಧವಾಗಿ ಒಂದು ವಿಷಯವನ್ನು ಬಯಲುಪಡಿಸಬಹುದು. ಹೆಚ್ಚು ಮಳೆ

ಬೀಳುವ ಪ್ರದೇಶದಲ್ಲಿ ಒಂದು ವಿಶಿಷ್ಟ ಜಾತಿಯ ಹತ್ತಿಯು ಬೆಳೆಸಬರುತ್ತಿದೆ. ಇದಕ್ಕೆ "ಸಮುದ್ರ-ದ್ವೀಪ ಅರಳೆ" ಯೆನ್ನುವರು. ಈ ತರಗತಿಯು ಉತ್ಕೃಷ್ಟವಾದುದು. ಇದು ಸಂಯುಕ್ತ ಅಮೇರಿಕದ ಎರಡು ಸಂಸ್ಥಾನಗಳಲ್ಲಿ ಮಾತ್ರ ಬೆಳೆಸಲ್ಪಡುತ್ತಿದೆ. ಇದನ್ನು ಪ್ರಯೋಗಾರ್ಥ ಶ್ರೀಮಾನ್ ಎನ್. ಸುಬ್ಬರಾವ್, (ಬಿ. ಎ., ಆನರ್ಸ್ ಬೊಟನಿ), ಉಡುಪಿ ಇವರು ತಮ್ಮ ಸ್ವಂತ ತೋಟದಲ್ಲಿ ಬೆಳೆಸಿ, ಶೋಧನಾಲಯಗಳಲ್ಲಿ ಪರೀಕ್ಷಿಸಿರುವರು. ಈ ಹತ್ತಿಯ ಎಳೆಗಳು ಉತ್ಕೃಷ್ಟವಾದುದೆಂದೂ, ಹಿಂದೂದೇಶದಲ್ಲಿ ಬೆಳೆಸಲ್ಪಡುವ ಎಷ್ಟೋ ಹತ್ತಿಗಳಿಗಿಂತ ಮೇಲಾದುದೆಂದೂ ತೀರ್ಮಾನವಾಗಿದೆ. ಇದನ್ನು ಹೆಚ್ಚೆಚ್ಚಾಗಿ ಬೆಳೆಸಿದರೆ, ಶಾಶ್ವತವಾದ ಒಳ್ಳೇ ಧಾರಣೆ ಬರುವುದು ಖಂಡಿತ. ಶ್ರೀಮಾನ್ ಸುಬ್ಬರಾಯರು ದೇಶಪ್ರೇಮಿಗಳು; ಸ್ವಾರ್ಥತ್ಯಾಗಿಗಳು, ಈ ಜಾತಿಯ ಹತ್ತಿ ಬೆಳೆಸುವವರಿದ್ದರೆ ಅವರು ತಮ್ಮ ಸಹಾಯ ಕೊಡಬಲ್ಲರು; ಮತ್ತು ಚಿಕ್ಕ ಪ್ರಮಾಣದಲ್ಲಿ ಬೀಜಗಳನ್ನು ಕೊಡಬಹುದು. ಸರಿಯಾಗಿ ಬಳಸಿಕೊಂಡರೆ, ಇದು ನಮ್ಮ ಜಿಲ್ಲೆಯ ಸಂಪದಭಿವೃದ್ಧಿಗೆ ಸಹಾಯಕವಾದೀತು. ನಮ್ಮ ಜಿಲ್ಲೆಯ ಮಜೂರರು ಚುರುಕಾದವರು; ಹೊರಗಿನವರೂ ಈ ಬಗ್ಗೆ ಪ್ರಶಂಸೆ ಸಲಿಸುತ್ತಾರೆ. ಈ ಮಜೂರರ ಸಹಾಯವನ್ನು ಪಡಿಸಿಕೊಂಡರೆ, ನಾವು ನಮ್ಮದೇ ಆದ ನೂಲುವ ಹಾಗೂ ನೇಯುವ ಗಿರಣಿಗಳನ್ನು ಸ್ಥಾಪಿಸಬಹುದು. ಈ ಬಗೆಯ ಉದ್ಯಮವು, ಅದನ್ನು ಚೆನ್ನಾಗಿ ತಿಳಿದವರಿಂದ ಯೋಗ್ಯ ಆಡಳಿತದಲ್ಲಿ ನಡೆವುದಾದರೆ, ಅದಕ್ಕೆ ಎಲ್ಲ ತರದ ಪ್ರೋತ್ಸಾಹವು ಸಲಲೇ ಬೇಕು.

ಕುಂಬಾರಿಕೆಯ ಹಾಗೂ ಹೊಳಪಿನ ಭರಣಿಗಳ ಮತ್ತು ಹೊಳಪಿನ ಹಂಚುಗಳ ದಂಧೆಯು ಮತ್ತೊಂದು. ನಮ್ಮಲ್ಲಿ ಉತ್ತಮವಾದ ಆವೆಮಣ್ಣು ದೊರೆಯುತ್ತಿದೆ. ಹಾಗೆಯೇ ಜೇಡಿಯೂ ನಮ್ಮ ಜಿಲ್ಲೆಯಲ್ಲಿ ಧಾರಾಳ ದೊರೆಯುತ್ತಿದೆ. ಇದು ಈಗೀಗ ಹೊಸ ಮತ್ತು ಅನೇಕ ಸ್ಥಳಗಳಲ್ಲಿ ಕಂಡು ಹಿಡಿಯಲ್ಪಟ್ಟಿದೆ. ಬೆಣಚು ಕಲ್ಲು ಹೇರಳವಾಗಿ ಸಿಗುತ್ತಿದೆ. ಇಲ್ಲದಿದ್ದರೂ ಇಂತಹ ವಸ್ತುಗಳನ್ನು ಸುಲಭವಾಗಿ ಆಮದು ಮಾಡಿಕೊಳ್ಳಬಹುದು. ಇದರ ಕೆಲಸ ತಿಳಿದ ಕುಶಲ ಕೆಲಸಗಾರರಿರುವರು. ನಮ್ಮ ಆವಶ್ಯಕತೆಗಳನ್ನು ಪೂರೈಸಿಕೊಳ್ಳಲು ನಮಗೊಂದು ಚಿಕ್ಕ ಕಾರ್ಖಾನೆ ಬೇಕು. ಈ ಕೈಗಾರಿಕೆಯು ಕ್ರಮೇಣ ಬೆಳೆದು, ನಮ್ಮ ಜಿಲ್ಲೆಯ ಆವಶ್ಯಕತೆಗಳನ್ನು ಪೂರೈಸಿ, ಹೊರಗಿನ ಜಿಲ್ಲೆಗಳಿಗೂ ಅಂದರೆ, ಎಲ್ಲಿ ಈ ದಂಧೆಯಿಲ್ಲವೋ ಅಲ್ಲಿಗೆ, ರಫ್ತು ಮಾಡಲು ಶಕ್ಯವಿದೆ. ಕಪ್,
ಸಾಸರ್, ನೆಲಕ್ಕೆ ಹಾಸುವ ಬಣ್ಣದ ಹೊಳಪಿನ
ಸೀಲಿಂಗ್ ಹಂಚುಗಳು, ಸ್ನಾನ ಗೃಹಕ್ಕೆ (ನೆಲ
ಗಳಿಗೂ) ಹೊದಿಸುವ ಹೊಳಪಿನ ಇಟ್ಟಂಗಿಗಳು
ರದ ವಸ್ತುಗಳು, ಮತ್ತು ಕೆಲವು ವಿದ್ಯುತ್ ಉ
ಇವುಗಳ ಬಗ್ಗೆ ತುಂಬಾ ಬೇಡಿಕೆಯಿದೆ; ಈ ಬೇ
ತ್ತಲೇ ಇದೆ.

ಸಂಪದಭ್ಯುದಯ ಸಾಧಕವಾದ ಮೂರನೇ
ವೊಂದು ಮೀನು ವ್ಯವಸಾಯ. ದಕ್ಷಿಣ ಕನ
ಮಲಬಾರಿನ ತೀರಗಳಲ್ಲಿ ಮೀನು ಹೇರಳವಾಗಿ
ಈಗ ಉಪಯೋಗದಲ್ಲಿರುವ ವಿಧಾನಗಳು ಪ್ರಾ
ದವು. ಆಧುನಿಕರೀತ್ಯಾ ಮೀನು ಹಿಡಿದು, ಜ
ವಂತೆ ಮಾಡಲು ಸರಕಾರದ ಯೋಜನೆಗಳಿವೆ.
ಮೊದಲಾದುದಕ್ಕೆ, ಎಷ್ಟು ಮೀನು ಇದ್ದರೂ
ಹಾಗೆಯೇ ಮೀನಿನ ತೈಲಗಳು, ಲಿವರ್ ಎ
ಗೊಬ್ಬರ ಮೊದಲಾದ ಉಪವೃತ್ತಿಗಳೂ ಇವೆ.

ನಮ್ಮ ಘಟ್ಟಗಳ ಘೋರಾರಣ್ಯಗಳ ಸಂಪ
ವಿದೆ. ಇದರ ಉಪಯೋಗವೂ ಹೆಚ್ಚು ಇದೆ.
ಬೆಂಕಿಪೆಟ್ಟಿಗೆ, ಮರಮುಟ್ಟು, ಪ್ಲಾಯ್‌ವುಡ್,
ರಟ್ಟು — ಮೊದಲಾದುದಕ್ಕೆ ಈ ಅರಣ್ಯಸಂಪತ್ತು

ನಾವೇ ನಮ್ಮ ಸಾಬೂನು, ಶಾಯಿ,
ಚೂರಿಗಳು, ಚಿಕ್ಕ ಪುಟ್ಟ ಉಪಕರಣಗಳು—
ತಯಾರಿಸಿಕೊಳ್ಳಲಾರೆವೇ? ನಮಗೆ ಯಾವ ಕಚ್
ದೊರೆಯುವುದಿಲ್ಲವೋ ಅದನ್ನು ನಾವು ತರಿಸಿಕೊ
ಹೆಚ್ಚೆಚ್ಚು ಹಣ್ಣು ಹಂಪಲುಗಳನ್ನೂ, ಹೂ-ತರಕ
ನಾವು ಬೆಳೆಸಿಕೊಳ್ಳಬಹುದು. ನಮ್ಮ ಜಿಲ್ಲೆಯ
ಗಳಲ್ಲಿ ಚಲೋ ಬಿಳಿ—ಹಳದಿ ಬೆತ್ತ ದೊರೆಯುತ್ತಿ

ತೆಂಗಿನೆಣ್ಣೆಯನ್ನು ನಾವು ಹೊರ ಜಿಲ್ಲೆಗಳಿಂ
ಮಾಡಿಕೊಳ್ಳಬೇಕೆ?

ಈ ವಿಷಯವು ಮಹತ್ತರವಾದುದು. ಇದ
ಒಬ್ಬನು ಚಿಂತಿಸುತ್ತ, ಮೇಲಿನ ಕೆಲವು ಸಾಧ್ಯ
ಹೊಳೆವುವು. ಈ ವಿಷಯದಲ್ಲಿ ಹೆಚ್ಚು ಆಲೋ
ತಮ್ಮ ಶಕ್ತಿಯನ್ನುಪಯೋಗಿಸಿ, ಜಿಲ್ಲೆಯ ಸಂಪದ
ಪರಸ್ಪರ ಉನ್ನತಿಗೆ ಸಾಧಕವಾದ ವಿಷಯಗಳನ್ನು
ರೂಪಕ್ಕೆ ತರುವಂತಾಗಲಿ ಎಂಬುದೇ ಈ ಲೇಖಕನ
ನಮ್ಮ ಜಿಲ್ಲೆಯು ಇತರರಿಗೆ ಆದರ್ಶವಾಗುವಂತೆ ನ
ಅದು ನಮ್ಮ ಸತತಯತ್ನವಾಗಿರಲಿ!

ಎರಡು ಚಿತ್ರಗಳು!

ಪ್ರಸರ್ವ ಬೇಡುವವ. ಹುಟ್ಟು ಕುರುಡನು ಅವನು. ...ಾರು ಗತಿಯಿಲ್ಲ. ಹರಕು ಉಡಲವಗಿಲ್ಲ—ಮುರುಕು ...ಸಲು ಇಲ್ಲ. ತರಗಲೆಯೆ ತಲ್ಪವು. ಮರದ ಬುಡವೇ ...ಯು. ಬೆಳಕ ಕಾಣದ ಒಡಲ ಬೆಳಗಲೆಂದೋ ಮತ್ತೆ ...ಯುರಿಯುದ ಪುಟ್ಟಕೂಸು ಬೇರಿಹುದವಗೆ.

ದಿನವಿಡೀ ಬೇಡುವನು. ವರ್ತಕರು, ನೌಕರರು, ...ವರು, ಕಿರಿಯುವರು, ಜರತಾರ ಧರಿಸಿಹರು, ಬೆಡಗಿನಾ ...ಯುರು, ಧರ್ಮಿಗಳು, ಕರ್ಮಿಗಳು, ಎಲ್ಲ ನೋಡು ...ನ ಬರಿದೆ ಸಾಗುತಲಿಹರು. ಕಂಡುಕಾಣದ ಹಾಗೆ ...ತಿ ಹೋಗುತಲಿಹರು. ಕವಡಿಯುನು ಅವನ ಕೈಲೀವ ...ಕಾಣೆ.

ಅವನಾರೊ ಪರದೇಶಿ, ಬೆಳಗಿಂದ ಉಣಲಿಲ್ಲ. ಹಿಡಿ ...ಎಲೆಯಲ್ಲಿ ಹಿಡಿದು ಸಾಗುತಲಿಹನು. ಕುರುಡನನು ...ಡಿದನು. ಹಸುಳೆಯುನು ಕಂಡನವ. ಏನು ಕಂಡಿತೊ ...! ಮತ್ತೆ ಹಿಂಗಿತೊ ಕ್ಷುಧೆಯು! ಕೂಳು ಕುರುಡನ ...ಕೊಟ್ಟು ಮುಂದಕೆ ಸಾರ್ದ. ಸದ್ದಿಲ್ಲದಲಿ ಹೋದ.

ಧರೆಯೊಳಗೆ ದಾನಿ ಆರೆಂಬುದನು ನೋಡು. ಬೇಡಿ ...ಲು ಕೊಡದೆ ಹೋಗುತಿಹ ನರನಲ್ಲ, ಬೇಡಿದೊಡೆ ...ರೆ ಕೊಡುತಿಹನು ಮತ್ತಿಲ್ಲಿ, ಬೇಡದೇ ಕೊಡುವವನೆ ...ಡಿಹನು ದಾನಿ. ಕೊಡುವವಗೆ ಪ್ರೇರಿಪನೆ ಹಿರಿಯು ಅವ...

ಊರ ಹೊರಗಣ ಕಟ್ಟೆ. ಭಾರಿ ಗದ್ದಲವಿಂದು. ಅವ... ...ೋ ಸನ್ಯಾಸಿ. ಹೊತ್ತು ಮೂಡುವ ಮುನ್ನದಿಂದಲಲ್ಲಿಹ... ...ು. ಅಲ್ಲ, ಭೂಮಿಯನೊಡೆದೇ ಉದ್ಭವಿಸಿ ಬಂದಿ... ...!

ಬಲು ದಿವ್ಯ ಮೂರುತಿ! ಜಡೆಗಟ್ಟಿಹುದು; ಕಣ್ಣು ಕಿಡಿ ಕಾರುವುದು; ನೆಟ್ಟ ದೃಷ್ಟಿಯಲಿಹನು. ಕರ್ಣಕುಂಡಲ ದ್ವಯವು ಚುಕ್ಕಿಗಳ ನಾಚಿಪುದು. ಭಸ್ಮಲೇಪಿತ ದೇಹ; ಸೌಂದರ್ಯರಾಶಿಯದು. ಕರವೊಂದರಲಿ ದೀರ್ಘ ದಂಡ ರಾಜಿಪುದು. ಮತ್ತೊಂದರಲಿ ಹೊಳೆವ ಕಮಂಡಲವು ಶೋಭಿಪುದು. ಪರಶಿವನ ಅವತಾರ? ಅವಗೊಬ್ಬ ಶಿಷ್ಯ ನಿಹ ಬೇರೆ.

ಕೆಂಗದಿರ ಪೂರ್ವದಿಟ್ಟದ ಬೆಟ್ಟವೇರಿ ಬರುವದರೊಳಗೆ ಜನಶೂನ್ಯ ಸ್ಥಾನವದು ಕಿಕ್ಕಿರಿದು ಹೋಗಿಹುದು. ಎಲ್ಲೆ ಮತದವರಿಹರು. ಪಾದಪೂಜೆಯ ಗೈವವರ ತಂಡವೊಂದೆಡೆಗೆ—ಕೈಮುಗಿದು ವಂದಿಸುತ ನಿಂತವರು ಎಲ್ಲೆಡೆಗೆ ಹರಕೆ ಹೊತ್ತವರೆಲ್ಲ. ಎಲ್ಲರಿಗೂ ಕೈಸನ್ನೆಯಿಂದ ಅಭಯವನೀವ, ದುಡ್ಡಿನಾ ಸುರಿಮಳೆಯು. ಫಲಪುಷ್ಪದಾ ಹೊಳೆಯು. ನಿಮಿಷ ನಿಮಿಷಕ್ಕೆ ತೆರೆಯು ತೀರವೇರಿ ಬರುತಿಹುದು.

ಅವನಾರು ಏನೆಂದು ತಿಳಿದ ಜನ ಅಲ್ಲಿಲ್ಲ. ಅವನ ವಿದ್ವತ್ತನ್ನು ಅರಿತವರು ಇಲ್ಲ. ತ್ಯಾಗಿಯೋ ಭೋಗಿಯೋ ಭವಿಯೋ ಬೈರಾಗಿಯೋ, ಸಿದ್ಧನೋ ಬುದ್ಧನೋ ಯಾರೆಂದು ಕೇಳಿದರು ಮತ್ತೆ ಬೇರಿಲ್ಲ. ಆಗವನ ವೇಷವೇ ಭೂಷಣವು.

ಸುವಿಚಾರ ನೀಗಿರುವ ಆಚಾರ ನಮ್ಮದಿದು. ಬಾಹ್ಯ ವೇಷವ ಕಂಡು ಜನ ಮರುಳಾಗುವದು. ಕಾಜನ್ನು ಕಾಣುತ್ತೆ ಕಾಂಚಾನವೆನ್ನುವದು; ಬರಿದೆ ಭ್ರಮೆ ಹೊಂದುವದು. ಧನಕನಕ ಸುರಿಯುವದು. ನಿಜವೇಷದಿಂ ಬಂದು ಬೇಡಿದರು ಕಾಡಿದರು ಇಲ್ಲೆಂದು ಬೆದರಿಪುದು.

ಬ್ರಹ್ಮಾನಂದ.



ಡಾ| ಟಿ. ಮಾಧವ ಪೈಯವ

ಮಾನವನ ಯೋಗ್ಯತೆಯು, ಅವನು ನಡೆಸುವ ಸಂಸ್ಥೆಗಳ ಉಪಯೋಗಿತೆ, ಜನತೆಗೆ ಸಲು
ನಿರುದ್ಯೋಗನಿವಾರಣಾಕಾರ್ಯದಲ್ಲಿ ಸಲುವ ಅಂಶದಾನ, ಇವುಗಳಿಂದ ನಿರ್ಧರಿಸಲ್ಪಡುತ್ತಿ
ಟಿ. ಮಾಧವ ಪೈಯವರು, ಸರ್ವತೋಮುಖವಾದ ಕಾರ್ಯಚಟುವಟಿಕೆಯುಳ್ಳವರು.
ದೇಹಚಿಕಿತ್ಸಾಶಾಸ್ತ್ರಜ್ಞರಾಗಿ ಬಂದರು. ಆದರೆ ದೇಶದ ನಾನಾ ಅಸ್ವಸ್ಥಗಳ ಚಿಕಿತ್ಸೆಯೂ
ವೆಂಬುದನ್ನು ಮನಗಂಡು, ಯತ್ನಿಸಿ ಯಶಸ್ವಿಯಾದರು. ಅವರ ಯತ್ನದ ಫಲವಾಗಿ
ಬಂದು, ಬೆಳೆದ ಸಂಸ್ಥೆಗಳ ಪರಿಚಯವನ್ನು ಇಲ್ಲಿ ಮೊತ್ತವಾಗಿ ಕೊಡುವುದರ ಮೂಲಕ
ಪರಿಚಯವನ್ನು ಕೊಟ್ಟಿರುವೆವು.

ಕಾಲು ಶತಮಾನಕ್ಕೂ ಹಿಂದೆ, ಓರ್ವ ವಿನಮ್ರ ಯುವಕನು, ತನಗೆ ಅಕ್ಷರಾಭ್ಯಾಸಪಿತ್ತ ಶಾಲೆಯನ್ನುದ್ಧರಿಸುವ ಸದಿಚ್ಛೆಯಿಂದ ಮುಂಬಯಿಗೆ ಹೋಗಿ, ಅಲ್ಲಿಯ ಲಕ್ಷಾಧೀಶರ ದ್ವಾರದ ಬಳಿ ಕಾದು ನಿಂತು, ಹತಾಶನಾಗದೆ, ಧನ ಸಂಗ್ರಹ ಮಾಡಿದನು. ಯುವಕನಲ್ಲಿ ನಾನಾ ವರ್ಗದ ಜನರ ಗುಣ ಸ್ವಭಾವಗಳ ಅರಿವುಂಟಾಯಿತು. ಆದರೆ, ಉತ್ಸಾಹವು ಕಡಿಮೆಯಾಗಲಿಲ್ಲ. ನಾಲ್ಕುಸಾವಿರ ರೂಪಾಯಿ ವರೆಗೆ ಸಂಗ್ರಹಿಸಿ, ಮರಳಿ ಬಂದು, ತನಗೆ ಓ ನಾಮ ಕಲಿಸಿದ ಮಾತೃ ಶಾಲೆಗೆ ಸೇವೆ ಸಲಿಸಿದನು. ಅದು ಬಹುಶಃ ಆ ಯುವಕನ, ಸಾರ್ವಜನಿಕ ಸೇವೆಯ ಪ್ರಥಮ ಫಲ.

ಯುವಕನ ಮುಂದಿನ ಬಾಳ್ವೆಯು ಸಾರ್ವಜನಿಕ ಸೇವೆಗಾಗಿಯೇ ಮೀಸಲಾಗಿತ್ತು ಎಂದು, ಅಂದು ಗುರುತಿಸಿದವರು ವಿರಲವಿರಬಹುದು. ಇಂದು, ಆ ಸಸಿ, ಮರವಾಯಿತು. ಸ್ವತಃ ಸುಫಲಗಳನ್ನಿತ್ತಿತು.

ಒಂದು ಶಾಲೆಗಾಗಿ, ಒಂದು ಸಂಸ್ಥೆಗಾಗಿ ಕಾಡಿಬೇಡಿ ಶ್ರಮಿಸಿದ ಆ ಯುವಕನು ಇಂದು, ತಾನೇ ಹತ್ತು ಹಲವು ಸಂಸ್ಥೆಗಳ ಜೀವಾಳವಾದನು. ಅನೇಕ ಶಿಕ್ಷಣ ಸಂಸ್ಥೆಗಳು ಈ ಯುವಕನಿಂದಲೇ ಜನನಕ್ಕೆ ಬಂದುವು.

ಡಾಕ್ಟರ್ ಮಾಧವ ಪೈ—ಈ ಹೆಸರಲ್ಲಿ ಇಂದು ಒಂದು ಮೋಹಕತೆ ತುಂಬಿದೆ; ಐಂದ್ರಜಾಲವಿದೆ. ಅವರದು ವಿರಾಮವಿಲ್ಲದ ಸೇವೆ; ತಡೆಯಿಲ್ಲದ ಯತ್ನ.

"ಅಸಾಧ್ಯ"ವೆಂಬ ಶಬ್ದವು ಅವರ ನಿಘಂಟನಲ್ಲಿಲ್ಲ. "ಸಾಧಿಸಿದರೆ ಸಬಳ ನುಂಗಬಹುದು" ಎಂಬ ಮಾತಿಗೆ, ಡಾ| ಮಾಧವ ಪೈಗಳವರ ಸಾಹಸೋದ್ಯಮದಿಂದ ಉದ್ಭವಿಸಿ ಪ್ರವರ್ಧಮಾನಕ್ಕೆ ಬಂದಿರುವ ಹಲವು ಸಂಘ–ಸಂಸ್ಥೆಗಳು ನಿದರ್ಶನವಾಗಿವೆ.

ಡಾ| ಪೈಗಳೇನೂ ಆಗರ್ಭ ಶ್ರೀಮಂತರಾಗಿದ್ದಿಲ್ಲ. ಅವರು ಕಾರ್ಯರಂಗಕ್ಕಿಳಿದಾಗ ಸ್ವತಃ ಸಂಪಾದಿಸಿದ ಗಂಟೂ ಇದ್ದಿಲ್ಲ. ಇಪ್ಪತ್ತು ವರುಷಗಳ ಹಿಂದೆ ಈ ಬರಿಗೈ
ಕಾಗದದ ಮೇಲೆ ಅಂಕೆ ಸಂಖ್ಯೆಗಳನ್ನು ಹಾಕಿಕೊಂ
ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿ
ಎಂಬ ಹಿರಿದಾದ ಧ್ಯೇಯೋದ್ದೇಶಗಳ ಸಂಸ್ಥೆಯನ್ನು ಅ
ಣಕ್ಕೆ ತರಲು ಹವಣಿಸಿದಾಗ, ಕಾಗದದ ಮೇಲಿನ ಅ
ಗುಣಾಕಾರವು ವ್ಯವಹಾರದಲ್ಲಿ ಬರಲಾರದೆಂದವರುಂಟ
ಶಯಚಿತ್ತದ ಕಿರುನಗೆ ಬೀರಿದವರುಂಟು. 'ಆಕಾ
ಪುರ'ವೆಂದವರುಂಟು. ಆದರೆ ಪೈಗಳವರ ಆತ್ಮ
ಪ್ರಾಮಾಣಿಕತೆಯು ದೃಢಸಂಕಲ್ಪ, ಸಾಧನೆ ಸಾಹ
ನಂಬುಗೆ, ಅಸಾಧಾರಣ ಉತ್ಸಾಹ, ಸೇವಾತುರತೆ
ಯಾವುವೂ ಆರಂಭದ ಎಡರುತೊಡರುಗಳಿಂದ, ಪ್ರ
ಟೀಕೆಗಳಿಂದ ಕುಂದಲಿಲ್ಲ, ನಂದಲಿಲ್ಲ. ಪ್ರತಿಯಾಗಿ ಪ
ಉಜ್ವಲಗೊಂಡುವು. ಪರಿಣಾಮವಾಗಿ ಆ ಇಪ್ಪತ್ತು
ಗಳ ಹಿಂದೆ ಒಬ್ಬ ಸಾಹುಕಾರನನ್ನು ಹಿಡಿದುಕೊಂಡ
ದೊಂದು ಕೊಟಡಿಯಲ್ಲಿ ಈ ಬರಿಗೈಯ ತರುಣ ಡಾ
ತೊಡಗಿದ ಆ ಸಂಸ್ಥೆ ಇಂದು ೫೦ ಶಾಖೆಗಳಿಂದ
ಬಹದ್ದೂರ್ರಪೀ ಸಂಘವಾಗಿ ಹಲವು ಮುಖಗಳಿಂದ
ಸೇವೆಯನ್ನು ಮಾಡುತ್ತಿದೆ. ೪೫೦ ನೌಕರರನ್ನಿಟ್ಟು
ಅವರಿಗೆ ವೇತನವಾಗಿ ವಾರ್ಷಿಕ ಮೂರು ಲಕ್ಷ ರೂ
ಗಳನ್ನು ವ್ಯಯಿಸುವಷ್ಟು ಆಢ್ಯತೆಯನ್ನು ಹೊಂದಿದೆ.
ಕ್ಷೇಮನಿಧಿ ಸಹಿತ ಇದರ ಭಂಡವಾಳವು ಇಪ್ಪತ್ತ ಮ
ಲಕ್ಷ. ಕಳೆದೊಂದು ವರುಷದಲ್ಲಿ ಇದರ ಸಂಪಾದನ
ಲಕ್ಷ ವೆಚ್ಚ ಕಳೆದು ಐನ್ ಮುನಾಫೆ ಒಂದು ಲಕ್ಷ
ತ್ತೆಂಟು ಸಾವಿರ. ಇಂದು ಇದರ ಸಮಗ್ರ ಧನಶಕ್ತಿ
resources) ಎರಡು ಕೋಟಿಗೆ ಮೀರಿದೆ. ಆದ
ನೇಳು ವರುಷಗಳ ಹಿಂದೆ ಇದು ಮನೆ ಮನೆ ಬಾಗಿಲ
ವನ್ನಿಟ್ಟು ದಿನಕ್ಕೆರಡಾಣೆಯಂತೆ ಠೇವಣಾತಿ ಪಡೆದು
ವರುಷಗಳ ಅಂತ್ಯದಲ್ಲಿ ೩೫೦ ರೂಪಾಯಿಗಳನ್ನು ಮರು



ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್, ಲಿಮಿಟೆಡ್, ಉಡುಪಿ. ಇದರ ಮುಖ್ಯ ಕಾರ್ಯಾಲಯ.

ಮಾಡುವೆನೆಂದು ಬಡಬಗ್ಗರಿಗೂ ಧನಸಂಚಯ ಮಾಡುವ ಹಂಚಿಕೆಯ 'ಪಿಗ್ಮಿ ಡಿಪೊಜಿಟ್' ಯೋಜನೆಯನ್ನು ಜನತೆಯ ಮುಂದಿಟ್ಟಾಗ ಹಿಂಜರಿದವರೇ ಹೆಚ್ಚು. ಮರುಪಾವತಿಯ ಅವಧಿ ಬರುವಾಗ ಈ ಬ್ಯಾಂಕು ಇದ್ದೀತೇ ಎಂದು ಕಿರುನಗೆ. ಬೀರಿದವರೆಷ್ಟೋ! ಆದರೆ ಆ ಏಳು ವರ್ಷಾಂತ್ಯದಿಂದ ಇಂದಿಗೆ ಸಾವಿರಗಟ್ಟಳೆಯಲ್ಲಿ 'ಪಿಗ್ಮಿ ಡಿಪೋಜಿಟ್'ದಾರರು ಹಣ ಪಡೆದುಕೊಂಡು ಹೋದರು, ಹೋಗುತ್ತಿದ್ದಾರೆ. ೫೦ ಶಾಖೆಗಳಿಗೂ ಪಿಗ್ಮಿ ಠೇವಣಾತಿಯ ಪ್ರವಾಹ ಭರದಿಂದ ಹರಿದು ಬರುತ್ತಿದೆ.



ಡಾ। ಮಾಧವಪೈಯವರು ಒಂಭತ್ತು ವರ್ಷದ ಬಾಲಕನಾಗಿದ್ದಾಗ. (ಆಗ, ಈ ಬಾಲಕನು ತಾನು ಮುಂದೆ ಹತ್ತು ಹಲವು ಸಂಸ್ಥೆಗಳ ಜನ್ಮದಾತನಾಗುವೆನೆಂದು ಎಣಿಸಿರಲಿಲ್ಲ, ನಿಜ. ಆದರೆ ನಿಸ್ಸಂದೇಹವಾಗಿ ಆತನ ಆಲೋಚನಾ ಪ್ರವಾಹವು ವಯೋಧರ್ಮದ ಸೀರೆ ಯೊಡೆದು ಮುಂದಕ್ಕೆ ಹರಿದಿತ್ತು.)

ಸಿಂಡಿಕೇಟು ತಾನೊಂದೇ ಉದ್ಧಾರವಾದುದಲ್ಲ, ಧನಿಕ ಬಡವರೆನ್ನದೆ ಎಲ್ಲರ ಹಣವನ್ನೂ ಸುರಕ್ಷಿತವಾಗಿ ಕಾಪಾಡಿ ವೃದ್ಧಿಸಿಕೊಟ್ಟುದು ಮಾತ್ರವಲ್ಲ, ಕೃಷಿಕೈಗಾರಿಕೆ ವ್ಯಾಪಾರ ಮುಂತಾದ ಹಲವಾರು ಉದ್ಯೋಗಗಳಲ್ಲಿರುವವರಿಗೆ, ತೊಡಗುವವರಿಗೆ ಆ ಹಣವನ್ನು ಬಳಸಲು ಕೊಟ್ಟು ಅವರನ್ನು ಉದ್ಧರಿಸಿದುದು ಮಾತ್ರವಲ್ಲ, ತನ್ನ ಆಥತೆ ಅನುಭವ ವಿಶಾಲ ಕ್ಷೇತ್ರ ವ್ಯಾಪಿಯ ಸೌಕರ್ಯಗಳ ಆಶ್ರಯ ಪ್ರೋತ್ಸಾಹಗಳ ನೆರವನ್ನಿತ್ತು ಜನೋಪಕಾರಕವಾದ ಹಲವು ಸಂಘ ಸಂಸ್ಥೆಗಳ ಆವಿಷ್ಕರಣಕ್ಕೆ ಕಾರಣವಾಗಿ, ಅವು ಇಂದು ಸ್ವತಂತ್ರವಾಗಿ ಅಭಿವೃದ್ಧಿ ಮಾರ್ಗದಲ್ಲಿ ಮುನ್ನಡೆಯುವಂತೆ ಮಾಡಿದೆ.

ಅಂತಹ ಸಂಘಸಂಸ್ಥೆಗಳಲ್ಲಿ 'ದಿ ಕೆನರಾ ಮ್ಯೂಚುವಲ್ ಲೈಫ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್' ಇದೊಂದು. ೧೯೩೬ರಲ್ಲಿ ಡಾ। ಪೈಗಳು ಈ ಯೋಜನೆಯ ಅಂಕೆಸಂಖ್ಯೆಗಳನ್ನು ಹಾಕಿ ಹೇಳಿ ತೋರಿಸಿದರು. ಜೀವವಿಮೆಯ ಪ್ರೀಮಿಯಮ್ ರೂಪದಲ್ಲಿ ನಮ್ಮಲ್ಲಿಂದ ಹೊರಹರಿದು ಇಲ್ಲಿ ಬರಿದಾಗಿ ಹೊರಗೆ ಸಿರಿಯೇರುವುದರ ಬದಲಾಗಿ ಇಲ್ಲೇ ನಿಲ್ಲಿಸಿ ಇಲ್ಲಿಯ ಉದ್ಯಮಗಳಿಗೆ ಹರಿಯಿಸಿ ನಿರುದ್ಯೋಗ ನಿವಾರಣೆಯನ್ನೂ ಸಂಪದಭಿವೃದ್ಧಿಯನ್ನೂ ಸಾಧಿಸಬಹುದೆಂದರು. ಇಂದು ಇದರ 'ಲೈಫ್ ಫಂಡು' ಹನ್ನೊಂದು ಲಕ್ಷ ರೂಪಾಯಿಯಷ್ಟಿದೆ. ಕಳೆದೊಂದೇ ವರುಷದಲ್ಲಿ ಇದು ಆರುವರೆಕೋಟಿಯವರೆ ಲಕ್ಷ ರೂಪಾಯಿ ಮೌಲ್ಯದ ವಿಮಾ ಪತ್ರಗಳನ್ನು ಕೊಟ್ಟಿದೆ. ಪ್ರೀಮಿಯಮ್ ರೂಪದಲ್ಲಿ ಆರೂವರೆ ಲಕ್ಷಕ್ಕೆ ಮೀರಿದ ಹಣ ಪ್ರವಾಹವನ್ನು ಸೆಳೆದಿದೆ. ಈ ಸಂಸ್ಥೆಯ ವಿಶ್ವಾಸಾರ್ಹತೆಗೆ ಬೇರೆ ನಿದರ್ಶನ ಬೇಕೇ? ೧೯೩೮ ಮತ್ತು ೧೯೪೨ರಲ್ಲಿ ಇದರ ಸೊತ್ತುಗಳನ್ನು ಸೇ. 3½ ಮತ್ತು ೩ರ ನಿರ್ದಾಕ್ಷಿಣ್ಯವಾದ ದರದಲ್ಲಿ ಮೌಲ್ಯ ನಿರ್ಣ(ಯ) (valuation) ಮಾಡಿಯೂ ಮಿಗತೆಯ ಆಧಿಕ್ಯತೆಯನ(ನ್ನು) ಪ್ರದರ್ಶಿಸಿಯದೆ. ಇಷ್ಟೆಲ್ಲ ಮಾಡಿಯೂ ಇದರ ಪುನರ್ನ(ವೀಕರಣ ವೆಚ್ಚ)ಯದ (renewal expense ratio) ಪ್ರಮಾಣ(ವು) ಕಡಿಮೆ ಕಡಿಮೆಯಾಗುತ್ತ ಬಂದು ಈಗ ಬರೇ ಸೇ. 3·35 (ಕ್ಕೆ) ನಿಂತಿದೆ. ಹೀಗೆ ತನ್ನ ಸ್ಥಿರ ಭದ್ರತೆಯನ್ನೂ ಅಭಿವೃ(ದ್ಧಿ)ಯನ್ನೂ ತೋರಿ 'The pride and envy o(f) Indian Insurance' ಎಂದು ವಿಮಾ ತಜ್ಞರ ಪ್ರಶಂ(ಸೆ)ಗೊಳಗಾಗಿರುವುದು ಆರಂಭದ ಮಾತಿಗೊಂದು ನಿವ್ಯಾ(ಜ)ವಾದ ನಿದರ್ಶನ.

'ದಿ ಕೆನರಾ ಲ್ಯಾಂಡ್ ಇನ್ವೆಸ್ಟ್‌ಮೆಂಟ್ ಲಿಮಿಟೆಡ್' ಇದು ಡಾ। ಮಾಧವ ಪೈಯವರ ಯತ್ನದ ತೃತೀಯ ಫ(ಲ). ಇದರ ತೆತ್ತ ಮೂಲ ಧನ ಕ್ಷೇಮನಿಧಿ ಸಹಿತ ಮೂರು ಲ(ಕ್ಷ)ದಷ್ಟಾಗಿದೆ. ಇದು ಮಡಿ ಎಂಬಲ್ಲಿ ೬೦ ಎಕ್ರೆ ಫಲವತ್ತಾ(ದ) ವಿಶಾಲ ಕೃಷಿ ಕ್ಷೇತ್ರವನ್ನು ಆಧುನಿಕ ರೀತಿಯಲ್ಲಿ ನಡೆಯಿಸ(ು)ತ್ತಿದೆ. ೧೫೮ ಎಕ್ರೆ ವಿಸ್ತೀರ್ಣದ ಮಣಿಪಾಲದಲ್ಲಿ ಕೃ(ಷಿ) ಮಾತ್ರವಲ್ಲದೆ ಆರೋಗ್ಯಕರವಾದ ವಸತಿಯ ಏರ್ಪಾಡ(ು), ಹಂಚು ಕಾರ್ಖಾನೆ, ಮೋಪು ಕಾರ್ಖಾನೆ ಇವನ್ನು ನಡೆಯ(ಿ)ಸುತ್ತ ನೂರಾರು ಜನರಿಗೆ ಉದ್ಯೋಗವನ್ನೀಯುತ್ತಿ(ದೆ). ಸೇ. 10ರಲ್ಲಿ ಡಿವಿಡೆಂಡ್ ಬರುವ ಇದರ ಪಾಲುಗಳಿಗೆ ಈ(ಗ) ಮೂಲ ಮೌಲ್ಯಕ್ಕಿಂತ ಸೇ. 50 ಹೆಚ್ಚು ಬೆಲೆ ಬರುವಂತಾಗಿ(ದೆ).



ಡಾ। ಮಾಧವ(ಪೈ)ಯವರು ಮೆಡಿಕಲ್ ವಿದ್ಯಾರ್ಥಿಯಾ(ಗಿ)ದ್ದಾಗ. (ಆಗ ನಾಡಿಪ(ರೀ)ಕ್ಷೆಯ ಕಾಲ. (ಈ) ಯುವಕನು ನಾಳೆ (ನಾ)ಡಿನ ಸಂಪದಭ್ಯುದ(ಯ) ಸಾಧಕ ಪರೀಕ್ಷೆಗಳಿಗ(ೆ) ಒಳಪಡಲಿರುವನೆಂ(ದು) ಊಹಿಸಿದವರು ಬ(ಹಳ) ಕಡಿಮೆ.)

'ಜನರಲ್ ಇನ್ವೆಸ್ಟ್‌ಮೆಂಟ್ ಎಂಡ್ ಕಮರ್ಶಿಯಲ್ ಕೋರ್ಪರೇಶನ್, ಲಿಮಿಟೆಡ್' ಇದರ ತೆತ್ತ ಮೂಲಧ(ನ)

ಒಂದು ಲಕ್ಷ. ಸಾಮಾನ್ಯ ಪಾಲುಗಳ ಮೇಲೆ ಸೇ. 14ರ ಡಿವಿಡೆಂಡ್ ಕೊಡುವಷ್ಟು ಪ್ರವರ್ಧಮಾನವಾಗಿದೆ. ಇದರ ಆಡಳಿತೆಯಲ್ಲಿರುವ ಕೈಮಗ್ಗಗಳ ನೇಯಿಗೆ ಕಾರ್ಖಾನೆಯಲ್ಲಿ ಸಿದ್ಧವಾಗುವ 'ಪಿ. ಎ. ಪೈ ಶೀರೆ'ಗಳು ಹೆಸರುವಾಸಿಯಾಗಿವೆ. 'ದಿ ಕೆನರಾ ಮೆಡಿಕಲ್ ಸ್ಟೋರ್ಸ್', 'ದಿ ಕೆನರಾ ಸರ್ಜಿಕಲ್ ಇನ್‌ಸ್ಟಿಟ್ಯೂಟ್', ಹಿಟ್ಟು ಮತ್ತು ಕೊಬ್ಬರಿಯೆಣ್ಣೆ ತಯಾರಿಸುವ 'ದಿ ಭಾರತ್ ಮಿಲ್ಸ್' 'ಮಣಿಪಾಲ್ ಪ್ರೆಸ್ಸ್' ಎಂಬ ಮುದ್ರಣಾಲಯ, 'ಶಿಲ್ಪಕಲಾಲಿಥೋಪ್ರೆಸ್ಸ್' ಎಂಬ ಕಲಾಕೌಶಲ್ಯದ ಅಚ್ಚು ಕೂಟ, ಇವನ್ನೂ ನಡೆಯಿಸುವುದು ಮಾತ್ರವಲ್ಲ, ಉಡುಪಿಯಲ್ಲಿ ಪ್ರವಾಸಿಗಳ ಸಕಲ ನಾಗರಿಕ ವಾಸ ಸೌಕರ್ಯಗಳನ್ನೊಳಗೊಂಡ 'ಚಿತ್ತರಂಜನ ಭವನ' ಎಂಬ ಭವ್ಯವಾದ ವಸತಿಗೃಹವನ್ನೂ ರಚಿಸಿ ಸುವ್ಯವಸ್ಥೆಯಿಂದ ನೋಡಿಕೊಳ್ಳುತ್ತಿದೆ.


ಹೀಗೆಯೆ ಸಿಂಡಿಕೇಡಿನ ತಾಯ್ತನದ ತೊಟ್ಟಿಲಲ್ಲಿ ಬೆಳೆದು ಬಲಗೊಂಡು ಈಗ ಸ್ವತಂತ್ರವಾಗಿ ಲಕ್ಷಗಟ್ಟಳೆಯಲ್ಲಿ ಬಂಡವಾಳವನ್ನೂ ಸಾವಿರಗಟ್ಟಳೆಯಲ್ಲಿ ಲಾಭವನ್ನೂ, ವಿವಿಧ ರೀತಿಯಲ್ಲಿ ಜನತಾಸೇವೆಯನ್ನೂ ತೋರಿಸಲಾಪ 'ದಿ ಸದರ್ನ ಇಂಡಿಯಾ ಎಪೆಕ್ಸ್ ಬ್ಯಾಂಕ್ ಲಿಮಿಟೆಡ್', ದಿ ಮಹಾರಾಷ್ಟ್ರ ಎಪೆಕ್ಸ್ ಬ್ಯಾಂಕ್, ಲಿಮಿಟೆಡ್' ಎಂಬ ಇನ್ನೆರಡು ಸಂಸ್ಥೆಗಳಿವೆ. ಮಾತ್ರವಲ್ಲ ಪ್ರವರ್ಧಮಾನವಾಗುತ್ತ ಜನತಾ ಸೇವೆಯಲ್ಲಿ ನಿರತವಾಗಿರುವ ಶ್ರೀ ರಾಮಕೃಷ್ಣ ಥಿಯೇಟರ್, ಲಿಮಿಟೆಡ್' ಎಂಬ ಸಿನೆಮಾಗೃಹ, 'ಹಿಂದೂ ಆರ್ಫನೇಜ್' ಎಂಬ ಅನಾಥಾಲಯ, 'ಮನಿಪಳ ಸೆನೆಟೋರಿಯಮ್' ಎಂಬ ಆರೋಗ್ಯ ಮಂದಿರ, 'ದಿ ಎಕೆಡೆಮಿ ಆಫ್ ಜನರಲ್ ಎಡ್ಯುಕೇಶನ್' ಎಂಬ ಔದ್ಯೋಗಿಕ ವಿಶ್ವವಿದ್ಯಾಲಯ ಇವೂ ಉಚ್ಚಧ್ಯೇಯೋದ್ದೇಶಗಳನ್ನಿಟ್ಟುಕೊಂಡು ಪ್ರಾಮಾಣಿಕತೆಯಿಂದಲೂ ಸೇವೋತ್ಸಾಹದಿಂದಲೂ ದುಡಿಯುತ್ತ ಧನಬಲ ಜನಬಲಗಳನ್ನು ಸೆಳೆಯುತ್ತ ಉನ್ನತಿಯನ್ನು ಹೊಂದುತ್ತಿವೆ. ಇವೆಲ್ಲವುಗಳ ಆಮೂಲಾಗ್ರ ವಿವರಗಳನ್ನು ಸಂಕ್ಷೇಪವಾಗಿ ಹೇಳಹೊರಟರೂ ಲೇಖನವು ದೀರ್ಘವಾಗುವುದು. ಬರಿಗೈಯ ವ್ಯಕ್ತಿಯೇ ಆಗಲಿ. ಪ್ರಾಮಾಣಿಕತೆಯಿಂದ ಸಾಧಿಸಿ



ಡಾ। ಮಾಧವ ಪೈಯವರು ಪದವೀಧರರಾಗಿ ಮರಳಿದಾಗ.

(ಆಗ ಜನತಾ ಸೇವೆಗೆ ಪ್ರಥಮ ಸಂದರ್ಭ ದೊರೆಯಿತು. ಸಾರ್ವಜನಿಕ ಸೇವಾ ತತ್ಪರನಿಗೆ, ಮನದಲ್ಲುದ್ಭವಿಸಿ ರೂಪುಗೊಳ್ಳುತ್ತಿರುವ ರಚನಾತ್ಮಕ ಯೋಜನೆಗಳಿಗೆ ಅವಕಾಶ ಕಲ್ಪಿಸಿಕೊಳ್ಳಲು ಸಮಯವೊದಗಿತು.)

ದರೆ, ಸೇವಾದೃಷ್ಟಿಯನ್ನಿಟ್ಟುಕೊಂಡಿದ್ದರೆ, ಪರಿಸ್ಥಿತಿಯನ್ನು ಪ್ರಯೋಗಿಸಿಕೊಳ್ಳುವ ವ್ಯವಹಾರ ಜಾಣ್ಮೆಯಿದ್ದರೆ, ಮೇಲಾಗಿ ಸ್ವಸಾಮರ್ಥ್ಯದಲ್ಲಿ ನಂಬುಗೆ, ವಿಘ್ನಪರಂಪರೆಗಳಿಗೆ ಬೆಚ್ಚದ ಬೆದರದ ಕೆಚ್ಚು, ಉತ್ಸಾಹದ ಕಿಚ್ಚು. ವಿಶ್ವಾಸಾರ್ಹವಾದ ಪಥದಲ್ಲಿ ನಡೆದರೆ ಧನಲಾಭವೂ ಜನಬಲವೂ ದೈವಬಲವೂ ಬಂದೇ ಬರುತ್ತದೆಂಬ ಆಶಾವಾದಿತ್ವದ ನಿಶ್ಚಲ ನೆಚ್ಚು ಇದ್ದರೆ ಅವನೆಂತಹ ಮಹತ್ಕಾರ್ಯಗಳನ್ನು ಸಾಧಿಸಿಯಾನು ಎಂಬುದನ್ನು ತೋರಿಸುವುದಕ್ಕಾಗಿ ಇಲ್ಲಿ ಕೆಲವು ವಿವರಗಳನ್ನು ಕೊಡಬೇಕಾಯಿತಷ್ಟೆ.



ಗಾಬರಿಯಿಲ್ಲ. ಅವರು ಜಟ್ಟಿಕಾಳಗಕ್ಕೆ ಕರೆವುದಿಲ್ಲ. ಗಾಮನ ಶಿಷ್ಯರೂ ಅಲ್ಲ. ಗಾತ್ರ ಮೀರಿ ಹೊಟ್ಟೆ ಬೆಳೆವುದನ್ನು ಅವರು ಮೆಚ್ಚುವುದಿಲ್ಲ. ಬಹು ಚಟುವಟಿಕೆಯ ಜೀವನದಲ್ಲಿ, ಆರೋಗ್ಯವನ್ನು ಕಾಪಾಡಲು, ವ್ಯಾಯಾಮಕ್ಕಾಗಿಯೂ ಕೊಂಚ ಸಮಯವನ್ನು ಕಂಡುಕೊಳ್ಳುತ್ತಾರೆ.

ಡಾಕ್ಟರ್ ಮಾಧವ ಪೈಗಳ ಯೋಜನೆಗಳು ದಿನೇ ದಿನೇ ಹೆಚ್ಚೆಚ್ಚಾಗಿ ಜನತೆಯ ಲಕ್ಷ್ಯವನ್ನು ಸೆಳೆಯುತ್ತಿವೆ. 'ಡಾಕ್ಟರ್ ಪೈಗಳ ಅಂಕೆಸಂಖ್ಯೆಗಳೆಂದರೆ ಬ್ರಹ್ಮಲಿಪಿ! ತೊಡೆದು ತೆಗೆಯುವಂತಹವಲ್ಲ, ಉಪೇಕ್ಷೆ ಮಾಡುವಂತಹವಲ್ಲ, ಗೋಚರಕ್ಕೆ ಬಂದೇ ಬರುವಂತಹವು!' ಎನ್ನುತ್ತದೆ ಲೋಕ. ಉಡುಪಿಯಲ್ಲೊಂದು ಸೆಕೆಂಡ್ ಗ್ರೇಡ್ ಕಾಲೇಜು ಉಂಟಾಗಬೇಕು, ಅದಕ್ಕಾಗಿ ಮೂರು ಲಕ್ಷ ರೂಪಾಯಿಗಳ ಸಂಗ್ರಹವಾಗಬೇಕು, ಈ ಮಹತ್ಕಾರ್ಯವನ್ನು ತನ್ನ ನವಸೃಷ್ಟಿಯ ಇತ್ತೀಚೆಗಿನ ಶಿಶುವಾದ 'ದಿ ಎಕೆಡೆಮಿ ಆಫ್ ಜನರಲ್ ಎಡ್ಯುಕೇಶನ್' ಎಂಬುದು ಸಾಧಿಸಲಾಪುದು, ಎಂದು ಡಾಕ್ಟರ್ ಪೈಗಳು ಮೊನ್ನೆ ಹೇಳಿದಾಗ ಕೂಡಿದ್ದ ಮಹಾಸಭೆಯು, ಡಾ। ಪೈಗಳ ಮುಂದಾಳುತನದಲ್ಲಿ ಎಕೆಡಮಿಯು ಇದನ್ನು ಶೀಘ್ರದಲ್ಲೇ ಸಾಧಿಸುವುದು ನಿಸ್ಸಂದೇಹ ಎಂದು ಒಮ್ಮತದಿಂದ ನಿರ್ಧರಿಸಿತು. ಸಾಧಿಸಿದರೆ ಸಬಳ ನುಂಗಬಹುದೆಂಬುದನ್ನು ತನ್ನ ವಿವಿಧ ಕೃತಿಗಳಿಂದ ನಾಡಿಗೆ ಪ್ರತ್ಯಕ್ಷವಾಗಿ ತೋರಿಸಿಕೊಟ್ಟ ಡಾ। ಪೈಗಳು ಅನುಸರಣೀಯರಿರುವರು. ಅವರ ನುಡಿ, ಅವರ ನಡೆ, ಅವರ

ನೋಟ, ಅವರ ನಿಯಮಬದ್ಧತೆಯ ಶಿಸ್ತಿನ ಜೀವನ, ಸ್ಥಿರ ಪ್ರಯತ್ನ, ಧೈರ್ಯ, ಸ್ಥೈರ್ಯ, ಸಾಹಸ, ಅವಿಶ್ರಾಂತ ಪರಿಶ್ರಮ, ಮುಂತಾದ ಸದ್ಗುಣಗಳೆಲ್ಲ ಅವರಿಂದುತ್ಪನ್ನವಾದ ಈ ಹಲವು ಸಂಘಸಂಸ್ಥೆಗಳ ನೂರಾರು ತರುಣ ನೌಕರರುಗಳಲ್ಲಿ ನೆಲೆಗೊಳ್ಳುತ್ತ ಬರುತ್ತಿವೆ. ನಾಳೆಗಾಗಿ ಎಷ್ಟೋ 'ಡಾ। ಪೈಗಳು' ಈಗಾಗಲೇ ಡಾ। ಪೈಗಳ ಸುತ್ತುಮುತ್ತಲಲ್ಲಿ ಅವರ ನೇತೃತ್ವದಲ್ಲಿ ಸಿದ್ಧವಾಗುತ್ತಲಿದ್ದಾರೆ. ನಾಳೆ ಈ ಹಲವು ಹದಿನೆಂಟು ಸಂಘಸಂಸ್ಥೆಗಳ ನಿರ್ವಾಹಕ್ಕೆ ತಕ್ಕ ನೇಕಾರರಿಲ್ಲದೆ ಅವ್ಯವಸ್ಥೆಯಿಂದ ಕುಸಿದು ಬಿದ್ದಾವೆಂಬ ಭಯವಿಲ್ಲ.



ಡಾ। ಮಾಧವ ಪೈಯವರು, ಮುಂಬಯಿಯ ಪ್ರಸಿದ್ಧ ದಾನಿ ಶ್ರೀ। ದಾಜೂಲಕರರೊಡನೆ. (ಶ್ರೀ। ದಾಜೂಲ್ಕರರು 1942ರಲ್ಲಿ ಉಡುಪಿಗೆ ದಯಮಾಡಿಸಿದಾಗ).

ಬರಿಗೈ ಹುಡುಗ ಮಾಧವ ಪೈ ತನಗೆ ಓನಾಮ ಕಲಿಸಿದ ಶಾಲೆಯನ್ನು ಉದ್ಧರಿಸಬೇಕೆಂಬ ಹುರುಪಿನಿಂದ ಬೊಂಬಾಯಿಗೆ ಹೋಗಿ ಲಕ್ಷಾಧೀಶರ ಗೇಟಿನ ಹೊರಗೆ ಕಾದುನಿಂತು, ನಿಂತು ಕಾದು, ಹತಾಶನಾದರೂ ಧೃತಿಗೆಡದೆ ತಿರುತಿರುಗಿ ಹೋಗಿ, ಕಾಡಿ ಬೇಡಿ, ನಾಲ್ಕು ಸಾವಿರ ರೂಪಾಯಿಗಳನ್ನು ಸಂಗ್ರಹಿಸಿ ತಂದಿದ್ದರೆ ಇಂದು ಮಾಧವ ಪೈ ತಾನಾಗಿ ತನ್ನ ಸ್ವಂತದಿಂದಲೇ ಹತ್ತೈವತ್ತು ಸಾವಿರ ರೂಪಾಯಿಗಳನ್ನು ಸಾರ್ವಜನಿಕ ಹಿತಕ್ಕಾಗಿ ದಾನಮಾಡುವ ಬುದ್ಧಿಯೂ ಸಾಮರ್ಥ್ಯವೂ ಉಳ್ಳವರಾಗಿದ್ದಾರೆ. ಅರ್ಧ ಲಕ್ಷ ರೂಪಾಯಿ ಸಹಿತ ಮನಿಪಳ ಸೆನೆಟೋರಿಯಮ್ ಸಾರ್ವಜನಿಕರಿಗೆ ಇವರ ದಾನ. ಮೊನ್ನೆ ಉಡುಪಿಯಲ್ಲಿ ಕಾಲೇಜು ಸಂಸ್ಥಾಪನೆಯ ಪ್ರಸ್ತಾಪ ಬಂದಾಗ, ವೈಯಕ್ತಿಕವಾಗಿ ತಾನು ಹತ್ತು ಸಾವಿರ ರೂಪಾಯಿಗಳನ್ನು ದಾನ ಮಾಡುವುದಲ್ಲದೆ ಕೆನರಾ ಮ್ಯೂಚುವಲ್‌ನಿಂದ ಇಪ್ಪತ್ತೈದು ಸಾವಿರ ತನ್ನ ತಾತತ್ವನದಲ್ಲಿದ್ದು ತನ್ನ ಮಾತು ನಡೆಯುವ ಇತರ ಪೂರ್ವೋಕ್ತ ಸಂಸ್ಥೆಗಳಿಂದ ಬಿಟ್ಟು ಅರುವತ್ತೈದು ಸಾವಿರ ಕೂಡಿಸಿಯೇನೆಂಬ ಧೈರ್ಯವುಳ್ಳ ಪ್ರತಿಷ್ಠಾವಂತ ಇಂದು ಡಾಕ್ಟರ್ ಮಾಧವ ಪೈ. ಬರಿಗೈಯಿಂದ ಸಂಸ್ಥಾನಿರ್ಮಾಣಕ್ಕೆ ತೊಡಗಿ ತಾನೆಂದು ತನ್ನ ಸೃಷ್ಟಿಯ ಸಂಸ್ಥೆಗಳಿಂದು ಒಂದು ...ಶಕ್ಕೆ ಒಂದು ಲಕ್ಷ ರೂಪಾಯಿ ದಾನವಾಗಿ ಕೊಡುವ ... ಕೊಡುವ ಶಕ್ತಿ ಉಳ್ಳವರು.



ಡಾ। ಮಾಧವ ಪೈಯವರು ಪತ್ನೀಪುತ್ರರೊಂದಿ...

ಬ್ರಹ್ಮಚರ್ಯಾಶ್ರಮಕ್ಕಿಂತ ಗೃಹಸ್ಥಾಶ್ರಮವೇ ಮೇಲೆಂದು ... ವರು. ಮಿತಸಂತತಿಯ ತತ್ವವನ್ನವರು ಅಂಗೀಕರಿಸುವುದಿಲ್ಲ ... ಅಥವಾ ಏಳು— ಅಷ್ಟೊಂದು ದೊಡ್ಡ ಸಂಖ್ಯೆಯಲ್ಲವೆನ್ನುತ್ತಾರ... ಸುಖಿ ಕುಟುಂಬವನ್ನು ನೋಡಿ ಆನಂದಪಡದವರಾರು!

ಮಾನವನ ಯೋಗ್ಯತೆಯು, ಅವನು ನಡೆಸುವ ... ಗಳ ಉದ್ದೇಶದಿಂದ ನಿರ್ಣಯಿಸಲ್ಪಡುವುದು. ಆ ... ಗಳಿಂದ ಜನತೆ ಹೊಂದುವ ಉಪಯೋಗ, ಅವುಗಳ ಸೇ... ವ್ಯಾಪಕತೆ, ಆ ಸಂಸ್ಥೆಗಳು ಸಾಧಿಸಿದ ನಿರುದ್ಯೋಗ ನಿವಾ... ಇವು ಜನತೆಯ ಮನಸ್ಸಿನಲ್ಲಿ ಅಚ್ಚಳಿಯದೆ ನಿಲ್ಲ...

ಡಾ। ಮಾಧವ ಪೈಯವರು ತಮ್ಮ ಆಫೀಸಿನಲ್ಲಿ ಕಾರ್ಯಾಸಕ್ತರಾಗಿದ್ದಾಗ



ಡಾ। ಮಾಧವ ಪೈಯವರು ಸರ್ವತೋಮುಖವಾಗಿ ಜ... ಸೇವೆ ಮಾಡಿದವರು, ಮಾಡುವವರು ಎಂಬುದು ಅವರ ... ಗಳಿಂದ ತಿಳಿದುಬರುತ್ತದೆ.



ಸುಶೀಲ ಕುಮಾರ್.

ಚಲಚ್ಚಿತ್ರ ಪ್ರೇಮಿಗಳ ಮೆಚ್ಚುಗೆ ಪಡೆದು ಪ್ರಥಮಶ್ರೇಣಿಯ ನಟನಾಗಿ ಬೆಳಕಿಗೆ ಬರುತ್ತಿರುವನು



ಅಂತರ್ರಾಷ್ಟ್ರೀಯ ವಿಷಯ

ಡಾ। ಕೊಟ್ನೀಸರ ಜೀವನ ಚರಿತ್ರ

ಶ್ರೀ। ಜಾನಕಿದಾಸ್, ಎಂ. ಎ., ಅಂತರ್ರಾಷ್ಟ್ರೀಯ ಸೈಕಲ್‌ಸವಾರ

ರಾಜಕಮಲ ಕಲಾಮಂದಿರದಲ್ಲಿ ಸಿದ್ಧವಾಗುತ್ತಿರುವ ಡಾ। ಕೊಟ್ನೀಸರ ಜೀವನ ಚರಿತ್ರೆಯ ವಿಷಯ ಶ್ರೀ। ಜಾನಕಿ ದಾಸರು ಕೆಲವು ಮಾತುಗಳನ್ನು ಹೇಳುತ್ತಾ ಜಾನಕಿದಾಸರು ಸ್ವತಃ ಈ ಚಿತ್ರದಲ್ಲಿ ಒಂದು ಪಾತ್ರ ವಹಿಸಲಿರುವರು.

ಭಾರತ ರಾಷ್ಟ್ರೀಯ ಮಹಾಸಭೆಯು, ಪಂಡಿತ ಜವಾಹಿರಲಾಲ ನೆಹರುಗಳವರಿಂದ ಸ್ಫೂರ್ತಿದಾಯಕ ಪ್ರೇರಣೆ ಹೊಂದಿ, 1938ರಲ್ಲಿ ಚೀನಕ್ಕೆ ವೈದ್ಯಪಥಕವನ್ನು ಕಳಿಸಿತು. ಭಾರತವು ಈ ಮಹತ್ಕೃತಿಗಾಗಿ ಗೌರವ ತಾಳುವುದು. ಆ ವೈದ್ಯಕೀಯ ಮಂಡಲವನ್ನು ಕಳಿಸಿದ ಉಚ್ಚ ಧ್ಯೇಯ, ಆ ಧ್ಯೇಯಾನುಸಾರ ಅದು ಗೈದ ಯಶಸ್ಸು, ಅಗ್ನಿವರ್ಷದಡಿ ಚೀನೀಯರೊಡನೆ ಅದು ಮಾಡಿದ ಸಾಹಸ—ಇದು ದೇಶಕ್ಕಾಗಿ ಮಾಡಿದ ಆತ್ಮತ್ಯಾಗದ ಒಂದು ಸುಂದರ ಕವನ; ಮನೋಹರ ಪ್ರಬಂಧ.

ಈಗ, ಭಾರತೀಯ ಚಲಚ್ಚಿತ್ರ ಕೈಗಾರಿಕೆಯ ಧುರೀಣ ಶಾಂತಾರಾಮರು ಈ ಅಂತರ್ರಾಷ್ಟ್ರೀಯ ಚರಿತ್ರವನ್ನು ಚಿತ್ರೀಕರಿಸುವರೆಂಬುದು, ಚಲಚ್ಚಿತ್ರ ಇತಿಹಾಸದಲ್ಲಿ ವಿಶೇಷ ವಾರ್ತೆಯಾಗಿದೆ. ಆ ವೈದ್ಯಕೀಯ ಮಂಡಲದಿಂದ ಒಬ್ಬನು ಹಿಂದಿರುಗಲಿಲ್ಲ. ಅವನೇ ಆ ಮಹಾಪುರುಷ,—ಡಾಕ್ಟರ್ ಕೊಟ್ನಿಸ್. ಆತನ ಪುಣ್ಯಮಯ ಜೀವನವು ತೆರೆಗೆ ಬರುವುದು.

ರಣದಿಂದ ಸುಟ್ಟು ಮಸಣವಾಗುತ್ತಲಿರುವ ಚೀನ; ಕ್ರೂರ ಶತ್ರುವಿನ ಅಸುರೀ ವರ್ತನೆ; ಆಕಾಶದಿಂದ ಅಗ್ನಿವರ್ಷ; ವೈದ್ಯಪಥಕವು, ಗಾಯಗೊಂಡು ಬಿದ್ದ ಚೀನೀಯರ, ಮರಣೋನ್ಮುಖವಾಗಿ ಬಿದ್ದಿರುವವರ ಸೇವೆಗೆ ತೊಡಗಿತ್ತು. ಡಾ। ಕೋಟ್ನಿಸರು, ಮಾನವಕೋಟಿಯನ್ನು ಕ್ರೌರ್ಯದಿಂದ ರಕ್ಷಿಸಲು ಯತ್ನಿಸುತ್ತಿದ್ದಂತೆ — ಚೀನಾ-ಭಾರತ ಸಂಧಾನಕ್ಕೂ ಯತ್ನಿಸಿದರು. ದಿವಾ ರಾತ್ರಿ ಶ್ರಮಿಸಿದರು; ಬೆವರು ಸುರಿಸಿದರು; ನೆತ್ತರನ್ನೂ ಕೊಟ್ಟರು. ಈ ದಣಿದ ಜೀವವನ್ನು ಸಂತವಿಸಲು ಚೀನೀ ರಮಣಿಯೊಬ್ಬಳು ಸಹಚರಿಯಾಗಿ ಬಂದು, ಅವರ ಜೀವನವನ್ನು ಪ್ರವೇಶಿಸಿದಳು. ಡಾ। ಕೊಟ್ನೀಸರು ಮರಣೋನ್ಮುಖ ಯೋದ್ಧನ ಬೇನೆಯನ್ನು ಶಮನಿಸುತ್ತಿದ್ದಂತೇ, ಶ್ರಮಿಸುತ್ತಲೇ ತನ್ನ ಪ್ರಾ ಯಿತ್ತರು......... ಮೊನ್ನೆ ತಾನೆ ನಡೆದ ಈ ಘಟನೆಗ ಶಾಂತಾರಾಮರು ತನ್ನದೇ ಆದ ವಿಶಿಷ್ಟ ಸ್ಪರ್ಶಗಳಿಂದ ಕರಿಸುವರು.

ಈ ಚಿತ್ರವು ಅಂತರ್ರಾಷ್ಟ್ರೀಯ ಪ್ರದರ್ಶನಕ್ಕೆ ತಕ ದುದು; ಅವಶ್ಯವಾದುದು. ಈ ನಾಡಿನಿಂದ ಜಗತ್ತಿಗೆ ತ ಮೂಲಕ ಭಾರತದ ಸಂದೇಶವನ್ನು ಕೊಡುವ ಪ್ರ ಯತ್ನವೇ— ಈ ಚಿತ್ರ. ನಮ್ಮ ಕಾಲದ ಓರ್ವ ಪ್ರ ದೇಶಭಕ್ತನ, ಓರ್ವ ಆದರ್ಶವಾದಿಯ ಜೀವನಚ ಪ್ರಥಮ ಚಿತ್ರೀಕರಣ. ಅದು ಕಲ್ಪಿತ ಕಥೆಗಿಂತ, ಅ ಕರವಾದುದು, ವಿಚಿತ್ರವಾದುದು. ನಡೆದ ಕಥೆ; ನಾಡಿ ಕಥೆ. ನವರಸವನ್ನೊಳಗೊಂಡುದು. (140ನೇ ಪುಟ ನೋ



"ಡಾ। ಕೊಟ್ನಿಸ್" ಚಿತ್ರ ಕಥಾಲೇಖಕ ಮಿ। ಕೆ. ಎ. ಅಬ್ಬಾಸ್

ತರುಣ ಲೋಕಕ್ಕೆ ಸಂದೇಶ.

ತರುಣ ಲೋಕವು ಧೀರತೆ, ಸಾಹಸಗಳನ್ನು ಮೆಚ್ಚುವುದು. ಧೈರ್ಯದಿಂದ ಎಡರುತೊಡರುಗಳನ್ನೆಲ್ಲ ಎದುರಿಸಿ, ಜಯಶಾಲಿಯಾಗಿ ಮುಂದರಿದವರನ್ನು ಮೆಚ್ಚುವುದು. ಇದು ಸ್ವಾಭಾವಿಕ. ಇಂತಹ ಸಾಹಸಿಗಳಲ್ಲಿ ನಮ್ಮ ಜಿಲ್ಲೆಯಲ್ಲಿ ಪ್ರಥಮ ಸ್ಥಾನ ಪಡೆದವರಲ್ಲೊಬ್ಬರಾದ ಡಾ। ಟ. ಮಾಧವ ಪೈಯವರು,—ತರುಣ ಲೋಕಕ್ಕೆ ಉತ್ತೇಜನಕರವಾದ ಸಂದೇಶ ಕೊಡಬೇಕೆಂದು ವಿನಂತಿಸಿದುದಕ್ಕೆ ಈ ಸಂದೇಶವನ್ನು ಕಳಿಸಿರುವರು.

⁂

ಸಹೋದರರೇ,

ನಾಳಿನ ಭಾರತದ ಭಾಗ್ಯನಿರ್ಮಾತೃಗಳು ನೀವು. ನಮ್ಮ ಸಾಹಿತ್ಯ—ಸಂಸ್ಕೃತಿ—ಕಲೆಗಳಲ್ಲಿಯೂ ಜೀವನದ ಉದ್ಯೋಗ ಉದ್ಯಮ ವ್ಯವಹಾರಗಳ ರೀತಿನೀತಿಗಳಲ್ಲಿಯೂ ಸುಧಾರಣೆಯಾಗಬೇಕು, ಪ್ರಗತಿಯಾಗಬೇಕು. ನಿಮ್ಮಿಂದ ಎಷ್ಟೋ ದಶಕಗಳಿಂದ ದಾಸ್ಯ ದಾರಿದ್ರ್ಯಗಳ ಮಡುವಿನಲ್ಲಿ ಮುಳುಗುತ್ತಿರುವ ನಮ್ಮ ತಾಯ್ನಾಡನ್ನು ಉದ್ಧರಿಸತಕ್ಕವರೂ ನೀವೇ. ವಿವಿಧ ಪರಿಸ್ಥಿತಿಗಳು ಬಗೆ ಹರಿಯವ ಸಮಸ್ಯೆಗಳನ್ನು ನಿಮ್ಮ ಮುಂದೆ ತಂದೊಡ್ಡಿವೆ; ನಿಮ್ಮ ಧೈರ್ಯ ಸ್ಥೈರ್ಯ ಉತ್ಸಾಹಗಳನ್ನು ಇಂಗಿಸುವಂತಿವೆ. ಇವುಗಳ ಪರಿಹಾರದ ಹೊಣೆಯೂ ನಿಮ್ಮ ಹೆಗಲನ್ನೇರಿದೆ. ಮೊತ್ತಮೊದಲು ಈ ಹೊಣೆಯ ಅರಿವು ನಿಮಗಾಗಬೇಕು, ಪರಿಸ್ಥಿತಿಯ ಕಾರಣ ನಿವಾರಣೆಗಳು ಹೊಳೆಯಬೇಕು. ಆಗತಾನೆ ನಿಮ್ಮ ಜೀವಿತದ ಸಾರ್ಥಕ್ಯವನ್ನು, ತಾಯ್ನಾಡಿನ ಸೇವೆಯನ್ನು, ಅರ್ಧಕ್ಕರ್ಧ ಸಾಧಿಸಿದಂತೆಯೇ.

ಧೀರೋದಾತ್ತ ಬುದ್ಧಿಯಿಂದ ಪರಿಸ್ಥಿತಿಯೊಡನೆ ಹೋರಾಡುತ್ತ, ತನ್ನ ಬಾಳಿನಲ್ಲಿ ಗೆಲವನ್ನು ಸಾಧಿಸುತ್ತ, ಇತರ ಮೇಲ್ಮೆಗಾಗಿ ದುಡಿಯುವವನೂ ಸೆರೆಮನೆಯಲ್ಲಿ ಕೊಳೆಯುವವನಷ್ಟೇ ರಣರಂಗದಲ್ಲಿ ಗುಂಡಿನ ಬಾಯಿಗೆ ಎದೆಗೊಡುವವನಷ್ಟೇ, ಅಪ್ರತಿಮದೇಶಭಕ್ತ, ಅಸಾಧಾರಣಧೀರ.

ಲೋಕವೆಲ್ಲ ಹೊಸತೊಂದು ಬಾಳ್ವೆಗೆ ಅಣಿಯಾಗುತ್ತಿರುವುದನ್ನು ನೀವಿಂದು ಕಾಣುತ್ತೀರಿ. ಇಂದಿನ ದಿನಗಳು ಮಸಣದ ಉರಿಯಲ್ಲಿ ಬೇಗುದಿಗೊಳ್ಳುತ್ತಿದೆಯಾದರೂ ನಾಳಿನ ಸುಖದ ಆಸೆ ಒಳಗಿಂದೊಳಗೆ ಮೊಳೆಯುತ್ತಲಿದೆ. ಈಗಾಗಲೇ ಎಲ್ಲ ದೇಶಗಳಲ್ಲಿ ಮೇಧಾವಿಗಳು ಆ ನಾಳಿನ ಪ್ರಪಂಚ ರಚನೆಯ ಯೋಜನೆಯಲ್ಲಿದ್ದಾರೆ. ಆದರೇನು? ನಮ್ಮನ್ನಾವರಿಸಿರುವ ಪಾರತಂತ್ರ್ಯದ ಸಂಕಲೆಯು ಕಡಿಯುವನಕ 'ಉದ್ಧರೇದಾತ್ಮಾನಾತ್ಮಾನಮ್' ಎಂಬ ಗೀತೆಯ ಮಾತೇ ನಮ್ಮ ಸಾಧನೆಯ ಹಾದಿಯನ್ನು ತೋರುವ ದಿವ್ಯಜ್ಯೋತಿ. ಅದೇ ನಮ್ಮ ಭಾಗಕ್ಕೆ ಉತ್ಕೃಷ್ಟ ಸಂದೇಶ.

ಜನಕೋಟಿಯು ತನ್ನ ಉದ್ಧಾರವು ಸರಕಾರದ ಕೈಯಿಂದಾಗಲೀ ಯಾವುದಾದರೊಬ್ಬ ವ್ಯಕ್ತಿಯ ಕೈಯಿಂದಾಗಲಿ ಆಗುವುದೆಂಬ ಭ್ರಮೆಯಲ್ಲಿದೆ. ಅಜ್ಞಾನ, ಅವಿಚಾರ, ಅಂಧಶ್ರದ್ಧೆ, ಅಂಧಾನುಕರಣ, ಅದೃಷ್ಟವಾದ, ಆಲಸ್ಯ-ಮನೋವೃತ್ತಿ, ಇವುಗಳ ಹೊಯಿಲಲ್ಲಿ ಸಿಲುಕಿ ಗುರಿಯಿಲ್ಲದೆ ಬಳಿದು ಹೋಗುತ್ತಲಿದೆ. ಈ ಪರಿಸ್ಥಿತಿಯು ನಿವಾರಣೆಯಾದರೆ ಅದಕ್ಕೆ ತನ್ನ ಶಕ್ತಿಯ ಆಳವು ಹೊಳೆಯುತ್ತದೆ. ಆಗ ಪಾರತಂತ್ರ್ಯದ ಅಡೆತಡೆಗಳೇನಿದ್ದರೂ ಮೇಲ್ಮೆಯ ಮೆಟ್ಟಲುಗಳನ್ನೆಷ್ಟೋ ಏರಬಹುದೆಂಬ ಅರಿವಾಗುತ್ತದೆ; ಏರುತ್ತ ಬಂದಂತೆ ಪರಾಧೀನತೆಯ ಶೃಂಖಲೆಯು ಶಿಥಿಲವಾಗುತ್ತ ಬಂದು ಕೊನೆಗೆ ತಾನಾಗಿ ಜಾರಿಹೋಗುವುದು.

ಸಹೋದರರೇ! ನೀವು ವೈಯಕ್ತಿಕವಾಗಿ, ಸಾಂಘಿಕವಾಗಿ, ಜನಕೋಟಿಯಲ್ಲಿ ವಿಚಾರವನ್ನು ಹರಡಿರಿ; ಅಜ್ಞಾನವನ್ನು ನಿವಾರಿಸಿರಿ. ದೇಶವು ಎಷ್ಟು ಸೂರೆಸುಲಿಗೆಯಾಗಿದ್ದರೂ ಅದರ ನೈಸರ್ಗಿಕ ಶಕ್ತಿ ಸಂಪತ್ತುಗಳೂ ಜನಬಲವೂ ಕುಂದಿಲ್ಲ. ಇವನ್ನು ಕಲೆಹಾಕಿ ಶಿಸ್ತಿನಿಂದ ಪ್ರಾಮಾಣಿಕತೆಯಿಂದ ಸ್ಫೂರ್ತಿಯಿಂದ ಉತ್ಸಾಹದಿಂದ

(140ನೇ ಪುಟಕ್ಕೆ ಮುಂದುವರಿದಿದೆ)

ಸಾಹಸದಿಂದ ಪರಿಶ್ರಮಿಸುವ ತಂಡೋಪತಂಡಗಳೇಳುವಂತೆ ಜನಜಾಗ್ರತಿಯನ್ನುಂಟು ಮಾಡಿರಿ. ತನ್ನ ಏಳಿಗೆ ಯೊಡನೆ ಇತರರ ಏಳಿಗೆಯೂ ಕೈಗೂಡುವಂತಹ ಯೋಜನೆಯುಳ್ಳ ಸಂಘಸಂಸ್ಥೆಗಳು ಉತ್ಸಾಹದಿಂದಲೂ ಪ್ರಾಮಾ ಣಿಕತೆಯಿಂದಲೂ ದುಡಿದರೆ ಧನಬಲವೂ ಜನಬಲವೂ ದೈವಬಲವೂ ಬಂದೇ ಬರುವುದು.

ಸ್ವಾವಲಂಬನವೇ ಇಂದಿನ ಪರಿಸ್ಥಿತಿಯಲ್ಲಿ ನಮ್ಮ ಕುತ್ತಗಳಿಗೆಲ್ಲ ಸಂಜೀವನ. ಅದೇ ನಮ್ಮ ನಿತ್ಯಜೀವನ ಹಾಗೂ ಸಾಂಘಿಕ ಜೀವನಕ್ಕೆ ತಕ್ಕುದಾದ ಹಾದಿ. ಈ ಹಾದಿಯಲ್ಲಿ ಸಾವಿರಾರು ಎರಡು ತೊಡರುಗಳಿರುವ ವೇನೋ ನಿಜ. ಆದರೆ ನಿಯಮಬದ್ಧತೆಯ ಶಿಸ್ತಿನಿಂದ ಸೇವಾದೃಷ್ಟಿಯಿಂದ ಪ್ರಾಮಾಣಿಕತೆಯಿಂದ ಸಾಹ ಸೋತ್ಸಾಹಗಳ ಕಾವಿನಿಂದ ನಾವು ಮುಂದೊತ್ತಿದರೆ ಅವೆಲ್ಲ ಹಿಮರಾಶಿಯಂತೆ ಕರಗಿ ನೀರಾಗಿ ಹರಿದುಹೋಗ ವುವು. ನಿರಂತರ ಆಶಾವಾದಿಯಾಗಿದ್ದು ಆತ್ಮ ವಿಶ್ವಾಸದಿಂದ ವಿಚಾರದೃಷ್ಟಿಯಿಂದ ಛಲದಿಂದ ಧೀರೋದಾತ್ತ ಬುದ್ಧಿಯಿಂದ ಮುನ್ನುಗ್ಗುವವನನ್ನು ಸೋಲಿಸಬಲ್ಲ ಶಕ್ತಿಯೊಂದು ಈ ವರೆಗೆ ಜನಿಸಿಲ್ಲ, ಮುಂದೆಯೂ ಜನಿ ಲಾರದು. ಈ ನಿರ್ಧಾರವನ್ನು ತಳೆದು ಹಿಂದಿನ ಅನುಭವದ ಬೆಳಕಿನಲ್ಲಿ, ಇಂದಿನ ಪರಿಸ್ಥಿತಿಯ ಪರಿಜ್ಞಾನದಲ್ಲಿ ಮುಂದಿನ ಏಳಿಗೆಯ ದೃಷ್ಟಿಯಲ್ಲಿ ನಾವೆಲ್ಲ ಮುಂದೆಸಾಗೋಣ. ಹೀಗೆ ಸಾಗಿದರೆ ವಿಜಯವು ನಮಗೆ ಕಟ್ಟಿಟ್ಟ ಗಂಟು. ಇಂತಾಗಲೆಂದು ಹಾರೈಸುವ,

ನಿಮ್ಮ ಹಿರಿಯ ಸೋದರ,

ಡಾ| ಟಿ. ಮಾಧವ ಪೈ

(138ನೇ ಪುಟದಿಂದ ಮುಂದುವರಿದುದು)

ಇಂತಹ ಯತ್ನಗಳು ಭಾರತದಲ್ಲಿ ಈ ಮೊದಲು ನಡೆದಿಲ್ಲ. ಡಾ| ಕೋಟ್ನಿಸರ ಜೀವನ ಚರಿತ್ರವು ಒಂದು ದುರಂತ. ಅವರು ಮುಂಬಯಿ ವಿಶ್ವವಿದ್ಯಾಲಯದ ಪದವೀಧರರು. ತೇರ್ಗಡೆಹೊಂದಿ ಬಂದವರೇ ಚೀನಾ ವೈದ್ಯ ಪಥಕವನ್ನು ಸೇರಿದರು. 1941ನೇ ನವಂಬರದಲ್ಲಿ ವಿವಾಹವಾದರು. 1942ನೇ ಜುಲೈಯಲ್ಲಿ ಪುತ್ರವಂತರಾದರು 1942ನೇ ದಶಂಬರ ತಾ. 9ರಲ್ಲಿ ದೇಹವಿಟ್ಟರು.

ಈ ಚಿತ್ರವನ್ನು 'ಅಧಿಕೃತ'ವಾಗಿಸಲು ಶಾಂತಾರಾಮರು, ಡಾ| ಬಿ. ಕೆ. ಬಸು(ವೈದ್ಯ ಪಥಕದ ಐವರು ಡಾಕ್ಟರರಲ್ಲಿ ಒಬ್ಬರು)ರವರು ಒದಗಿಸಿದ ನೂರಾರು ಫೊಟೋಗಳನ್ನು ಸಂಗ್ರಹಿಸಿರುವರು. ಬಸುರವರ ಸ್ಮರಣಾಶಕ್ತಿಯು ಅದ್ಭುತಕರವಿದೆ. ವಿಮಾನದಾಳಿಯಾಗುವಾಗ ಡಾಕ್ಟರರು ಯಾವ ಗವಿಯಲ್ಲಿ ಆಶ್ರಯ ಹೊಂದಿ, ಗಾಯಗೊಂಡು ಬಿದ್ದ ಸೈನಿಕರ ಚಿಕಿತ್ಸೆ ಮಾಡುತ್ತಿದ್ದರು ಎಂಬುದನ್ನು ಅವರು ಇದ್ದಕ್ಕಿದ್ದಂತೆ ಬಿಡಿಸಿ ತೋರಬಲ್ಲರು. ಶಾಂತಾರಾಮರು ಚೀನದ ಪ್ರಸಿದ್ಧ ಚಿತ್ರಲೇಖಕಿ ಮಿಸೆಸ್ ಫೆಂಗ್—ಇವಳನ್ನೂ ಕರೆಸಿರುವರು. ಈ ಚೀನೀ ಮಹಿಳೆ, ಸುಶಿಕ್ಷಿತೆ, (ಇವಳ ಒಂದು ಚೀನೀ ನಾಟಕವು ಕೆಲಕಾಲದ ಹಿಂದೆ ಮುಂಬಯಿಯಲ್ಲಿ ಪ್ರಯೋಗಿಸಲ್ಪಟ್ಟಿದೆ.)

ಶಾಂತಾರಾಮರು ಸ್ವತಃ ಡಾ| ಕೋಟ್ನಿಸನ ಪಾತ್ರ ವಹಿಸುವರು. ಅವರನ್ನು ಸ್ವತಃ ತೆರೆಯ ಮೇಲೆ ನೋಡುವ ಸುಸಂದರ್ಭವೊಂದು ಒದಗುವುದು. ಮಾನವ ಸ್ವಭಾವವರಿತು ಚಿತ್ರೀಕರಿಸುವ ಶಾಂತಾರಾಮರು. ಚಲಚ್ಚಿತ್ರ ವೀರರು, ಮಾನವ ಚಿಕಿತ್ಸಾ ವಿಶಾರದರ—ಚೀನೀ ವೈದ್ಯಪಥಕವೀರರ—ಜೀವನ ಚರಿತ್ರವನ್ನು ಪ್ರತಿಬಿಂಬಿಸುವುದು ಯಥಾಥ ಮತ್ತು ಜಯಶ್ರೀ—ಕಾಳಿದಾಸನ ಶಕುಂತಳೆಯನ್ನು ತಂದು ಪುನರ್ಜೀವ ಕೊಟ್ಟವಳು—ಕೋಟ್ನಿಸರ ಪತ್ನಿ ಅಭಿನಯಿಸುವಳು.

ಭಾರತಚಿತ್ರಗಳು ಇಂಗ್ಲಿಷ್ ಭಾಷೆಯಲ್ಲಿ ತ ಸಲ್ಪಡುವ ಸಾಹಸಕ್ಕೆ ತೊಡಗುವುದಿಲ್ಲ. ಹಿಂದಿನ ದೃಷ್ಟಾಂತಗಳು ಅಲ್ಲೇ ಇದ್ದು, ಎಚ್ಚರ ಕೊಡುತ್ತಿವೆ. ಮತಃ ಹಿಮಾಂಶುರೈಯವರ "ಕರ್ಮ". ಇಂಗ್ಲೆಂ ತಜ್ಞರ ನೇತೃತ್ವದಲ್ಲಿ ಆ ಚಿತ್ರದ ಹೆಚ್ಚಿನಂಶವು ತಯಾ ತಾದರೂ, ಚಿತ್ರವು ತನ್ನ ಉದ್ದೇಶದಲ್ಲಿ ಸೋತಿತು. ವ್ಯಯದ ಅನುಭವದ ನಂತರ ವಾಡಿಯಾ ಮೂವಿಟೊ ವರು "ರಾಜನರ್ತಕಿ"ಯ ಇಂಗ್ಲಿಷ್ ಪ್ರತಿ ತಯಾ ಸಾಹಸಕ್ಕೆ ಕೈಯಿಕ್ಕಿದರು. ಇದು ಕೂಡ, "ಕ ಗತಿಯನ್ನೆ ಹೊಂದಿತು. ಅಂತರ್ರಾಷ್ಟ್ರೀಯ ಪ್ರ ಕ್ಷೇತ್ರವು ದೊರೆಯಲಿಲ್ಲ.

ಮೂರನೆಯದಾಗಿ ಶಾಂತಾರಾಮರು ಯತ್ನಿಸ "ಡಾ| ಕೋಟ್ನಿಸ್" ಚಿತ್ರದ ಇಂಗ್ಲಿಷ್ ಪ್ರತಿಗಳು ರಾಗುತ್ತಿವೆ. ಬಹುಶಃ, ಭಾರತೀಯ ಚಿತ್ರದ ಆಂಗ್ಲ ಯತ್ನದಲ್ಲಿ ಪ್ರಥಮದ ಜಯವು ಶಾಂತಾರಾಮರಿಗೆ ಕ ತ್ತಿದೆಯೋ ಏನೋ! ಶಾಂತಾರಾಮರು ಆರಿಸಿಕೊಂ ಯವು ಅಂತರ್ರಾಷ್ಟ್ರೀಯವಿದೆ. "ಶಾಂತಾರಾಮ ಸ್ಪರ್ಶ ಅದು ಡೆನ್ಹಾಮ್, ಎಲ್‌ಸ್ಟ್ರೀ ಮಾತ್ರವಲ್ಲ ಹೋಲಿ ಕೃತಿಗಳಿಗೂ ಹೋಲಿಸ ಬರುವಷ್ಟು ಉತ್ಕೃಷ್ಟವಾಗುವ ಅನುಮಾನವಿಲ್ಲ.

AFTER SUCCESSIVE SUCCESSES LIKE

"DOCTOR"-"SOUGAND"-"WAPAS" ETC.

NEW THEATRES LTD., (CAL.)



—REPUTED AS INDIA'S PIONEERS OF MOTION PICTURE MAKING GIVE YET ANOTHER MAGNIFICIENT & THOROUGHLY ENTERTAINING PICTURE

"MY SISTER"



STARRING:

SAIGAL - NAWAB
CHANDRAVATI
DEVI MUKERJEE

AND THE
TRIO OF NEW TALENTS
SUMITRA DEVI — AKHTAR JEHAN
SUKTIDHARA

DIRECTION:
HEMCHANDER.

MUSIC:
PANKAJ MULLICK.

STORY:
BENOY CHATERJEE.

★

NOW ON N.T's SETS

"WASIYAT-NAMA"

ADAPTED FROM BANKIM CHANDRA CHATTERJEE'S

"KRISHNAKANT'S WILL"

AHIN CHOUDHURY
ASHIT BARAN
BHARTHI DEVI
SUMITRA DEVI

DIRECTION:
SAUMYEN MUKERJEE
MUSIC:
R. C. BORAL

"HAMRAHI"

HINDUSTANI VERSION OF BENGALI MARVEL "UDAYER PATH'S"

Starring:
BINOTA BOSE
RADHA MOHAN
B. S. KAPOOR

Direction:
BIMAL RAY
Music:
R. C. BORAL

CALCUTTA FILM EXCHANGE

BOMBAY - MADRAS - CALCUTTA.

ರಜತಪರಧೆಯು ಆಳುತನದಿಂದ

ರಜತಪರಧೆಯು ಅರಸುತನ



(ಲೇಖಕರು: **ಜಾನಕಿದಾಸ,** ಎಮ್. ಎ., ಅಂತರ್‍ರಾಷ್ಟ್ರೀಯ ಸೈಕಲ್ ಸವಾ


ಶ್ರೀ। ಜಾನಕಿದಾಸರವರು ಪ್ರಥಮತಃ ಅಂತರ್‍ರಾಷ್ಟ್ರೀಯ ಸೈಕಲ್ ಸವಾರರಾಗಿ ಜನರಿಗೆ ರಾಗಿದ್ದವರು, 'ಖಜಾಂಚಿ' ಚಿತ್ರದಲ್ಲಿ ಅಭಿನಯಿಸಿ, ಸುಪರಿಚಿತರಾಗಿರುವರು. ಜಾನಕಿದಾಸ ಪ್ರಸಿದ್ಧ ಲೇಖಕರು. ವಿದೇಶೀ ಪತ್ರಿಕೆಗಳಿಗೂ ಬರೆಯುತ್ತಿರುವರು. ಸುಪ್ರಸಿದ್ಧ ದಿಗ್ ಶಾಂತಾರಾಮರನ್ನು ಜಾನಕಿದಾಸರು ಚೆನ್ನಾಗಿ ಅರಿತುಕೊಂಡಿರುವರು.

ಭಾರತಾಂಬೆಯ ಉದರದಲ್ಲಿ ಆಗಾಗ್ಗೆ ಆದರ್ಶವಾದಿಗಳು ಜನಿಸಿ, ತಮ್ಮ ಪ್ರತಿಭೆಯಿಂದ ಲೋಕದ ಲಕ್ಷ್ಯವನ್ನು ಸೆಳೆದು, ಪ್ರಪಂಚದ ಸಾಂಸ್ಕೃತಿಕ ನಕಾಶೆಯಲ್ಲಿ ಭಾರತಕ್ಕೆ ಉಚ್ಚ ಸ್ಥಾನ ದೊರಕಿಸಿಕೊಟ್ಟಿರುವರು. ಕೃಷ್ಣ, ಬುದ್ಧ, ನಾನಕ, ಸ್ವಾಮಿ ದಯಾನಂದ, ಮಹಾತ್ಮಾ ಗಾಂಧಿಯಂಥ ಮಹಾ ಪುರುಷರು; ಮನು, ತುಳಸಿದಾಸ, ಘಲೀಬ್, ಠಾಕೂರರಂತಹ ಮಹಾ ಸಾಹಿತಿಗಳು, ತಾನಸೇನನಂತಹ ಸಂಗೀತರತ್ನಗಳು.... ಇತ್ಯಾದಿ. ಅದರಂತೇ, ಚಿತ್ರಪ್ರಪಂಚದಲ್ಲಿ ಆದರ್ಶಪ್ರಾಯರಾದವರು - ಶಾಂತಾರಾಮರವರು.

ಹಿಂದೂದೇಶದ ಪ್ರಸಿದ್ಧ ನಟೀನಟರು, — ಚಂದ್ರಮೋಹನ, ಶಾಂತಾ ಆಪ್ಟೆ, ದುರ್ಗಾ ಖೋಟೆ, ಕೇಶವರಾವ್ ದಾತೆ, ಬಾಬುರಾವ್ ಪೆಂಢಾರಕರ, ವಿನಾಯಕ, ಜಾಗೀರದಾರ ಮತ್ತು ಜಯಶ್ರೀ—ಇವರು ತಮ್ಮ ಕಲಾವಂತಿಕೆ ಹಾಗೂ ಪ್ರಸಿದ್ಧಿಯನ್ನು ಈ ಅದ್ವಿತೀಯ ದಿಗ್ದರ್ಶಕರಿಂದ ಹೊಂದಿದರು. ಗುಂಗುರು ಕೂದಲಿನ, ಅಗಲವಾದ ಹಣೆಯ, ವಿಚಾರಲೀನ ನೇತ್ರಗಳ ಈ ಪ್ರತಿಭಾವಂತನು, ಭಾರತದ ಸ್ತ್ರೀಪುರುಷರೆಲ್ಲರ ಹೃದಯಗಳಲ್ಲಿ ಸ್ಥಿರವಾದ ಸ್ಥಾನವನ್ನು ರಚಿಸಿಕೊಂಡಿರುವನು. ಶಾಂತಾರಾಮರ "ಅಮೃತ ಮಂಥನ", "ಅಮರ ಜ್ಯೋತಿ", "ಧರ್ಮಾತ್ಮಾ", "ದುನಿಯಾ-ನ-ಮಾನೆ", "ಸಂತ ಧ್ಯಾನೇಶ್ವರ", "ಆದ್ಮಿ", "ಪಡೋಸಿ", "ಶಕುಂತಳಾ" ಮತ್ತು "ಪರ್ವತ್ ಪೆ ಅಪ್ನಾ ಡೇರಾ" ಚಿತ್ರಗಳು, ಭಾರತೀಯ ಚಲಚ್ಚಿತ್ರಾಕಾಶದಲ್ಲಿ ಶಾಶ್ವತ ಸ್ಥಾನ ಪಡೆದುವು. ಕೊನೆಯ ಚಿತ್ರವಂತೂ ದೇಶದ ಮಹೋನ್ನತ ಸಾಮಾಜಿಕ ಕಲಾಕೃತಿಯೆಂದು ಹೆಸರಾಯಿತು; ಈ ಪ್ರತಿಭಾವಂತನಿಂದ ಮೂರೇ ತಿಂಗಳಲ್ಲಿ ಸಿದ್ಧವಾಯಿತು. ಚಿತ್ರ ಕಥೆ, ಅದನ್ನು ಬಳಸಿಕೊಂಡ ರೀತಿ ಇವುಗಳನ್ನು ನೋಡುವಾಗ, ಶಾಂತಾರಾಮರು ಚಿತ್ರಪ್ರಪಂಚದಲ್ಲಿ ಅದ್ಭುತವನ್ನೆ ತಂದಿರುವರೆನ್ನಬೇಕು.

ಜಗದ್ವಿಖ್ಯಾತ ವಿನೋದನಟ ಚಾರ್ಲಿ ಚಾಪ್ಲಿನನು "ಆದ್ಮಿ"ಯನ್ನು ನೋಡಿದಾಗ, ಅದರ ಸೌಂದರ್ಯಕ್ಕೆ ವಿಸ್ಮಯಗೊಂಡನು. ಆದರೆ, ಚಿತ್ರಪ್ರಪಂಚದಲ್ಲಿ, ಶಾ ರಾಮರ ಚಿತ್ರಗಳು ಹೊರಡಿಸುವಷ್ಟು ಉತ್ಸಾಹ ಚರ್ಚೆಯನ್ನು ಮತ್ತಾವ ಚಿತ್ರಗಳೂ ಹೊರಡಿಸು ಮಹನ್‌ವ್ಯಕ್ತಿಯ ಒಂದು ಚಿತ್ರದ ಮೇಲೆ ಜನರಲ್ಲಿ ತರ್ಕವಿತರ್ಕಗಳೇಕೆ? ಕಾರಣವು ಸ್ಪಷ್ಟವಿದೆ. ಮ ವ್ಯಕ್ತಿಯೊಂದು ತನ್ನ ವಿಶೇಷ ಕಾರ್ಯಗಳ ಮೂಲ ಜನರನ್ನು ಸೆಳೆವುದು. ಜನರು ಆತನ ಕಡೆಗೆ ಆಕ ರಾದಷ್ಟು ಹೆಚ್ಚು-ಆತನ ಮಹತ್ವಿಕೆಯೂ ಬೆಳೆವುದು. ಈ ಮನೋಭಾವವು, ಆತನ ಪ್ರತಿಯೊಂದು ಕೃತಿಯ ಉತ್ಸಾಹದಿಂದ ಕಾಯುವುದು ಮತ್ತು, ಅದು ಪ್ರಕ ದಾಗ ಸಹಜವಾಗಿ ಚರ್ಚೆಯೇಳುವುದು.

ಶಾಂತಾರಾಮರ ಕಲೆಯು, ಭಾರತದ ಓರ್ವ ಪ್ರ ಚಿತ್ರನಿರ್ಮಾಪಕರ ಮಾತುಗಳಲ್ಲಿ, "ಶಕುಂತಲಾ" ವಿಮರ್ಶೆಯಾಗುವಾಗ, ಈ ತೆರ ಪ್ರಕಟವಾಗಿದೆ: "ಶಾ ರಾಮರು, ಹೋರಾಡುವ ತನ್ನ ಸ್ತ್ರೀಯನ್ನು ("




ದಿಗ್ದರ್ಶಕ-ಉತ್ಪಾದಕ ಶಾಂತಾರಾಮರು, ಕೆಲವು ಉತ್ಸಾಹಿ ತನ್ನ 'ಸಹಿ' (ಆಟೊಗ್ರಾಫ್) ಕೊಡುವ ದೃಶ್ಯ.

ತ್ಯೇತಿ"ಯಲ್ಲಿ ಸೌದಾಮಿನಿ, "ದುನಿ
ಯಾ – ನ – ಮಾನೆ'ಯಲ್ಲಿ ನಿರ್ಮಲಾ,
ದಮ್ರಿ"ಯಲ್ಲಿ ಕೇಸರ್ ಮತ್ತು "ಶಕುಂ
ಲಾ"ದಲ್ಲಿ ಶಕುಂತಳೆ) ಯುಗ-ಪ್ರದೇಶ,
ರ್ಗ, ಧರ್ಮಗಳ ವಿಮೋಚನೆಯ ವಿಷ
ಯವನ್ನು ಮೀರಿ ಮಿರುಗಿಸಿ, ಕಲೆಯು
ಶ್ವವ್ಯಾಪಕವಾಗುವಂತೆ ಸಾಧಿಸಿರುವರು.
ಲಚ್ಚಿತ್ರ ಸಾಮ್ರಾಜ್ಯದಲ್ಲಿ ಇಂತಹ
ಯಶಸ್ಸು ಚಾಪ್ಲಿನ್ ಮತ್ತು ಡಿಸ್ನೇಗೆ
ಮಾತ್ರ ಸಾಧ್ಯ".

ಆ ವಿಮರ್ಶಕರು ಮತ್ತೂ ಹೇಳು
ತ್ತಾರೆ: "ಒಂದು ಚಿತ್ರದಲ್ಲಿ ಇಷ್ಟೊಂದು
ಸೌಂದರ್ಯ ಮತ್ತು ಕಲೆಯನ್ನು ಕೊಡ
ಬಲ್ಲ ಮತ್ತೋರ್ವ ದಿಗ್ದರ್ಶಕರನ್ನು
ಂದೂದೇಶದಲ್ಲಿ ನಾನರಿಯೆ; ಹೊಲಿ
ವುಡ್ಡಿನಲ್ಲಾದರೂ ಡಿಸ್ನೆ ಮತ್ತು ಮೆಕ್ಸ್
ನ್ಹಾಡ್ಟ್ಟ್ ರವರ ಹೊರಗೆ ಇಂತಹವರು
ಇತ್ತಾರಂತೆ?"

ಶಾಂತಾರಾಮರ ಉದ್ದೇಶವೂ,
ಯಾವತ್ಕಾಲವೂ ಮಹತ್ತಾದುದೇ. ಓರ್ವ
ಪ್ರಸಿದ್ಧ ದೇಶಮುಖಂಡರು, ಪ್ರಚಲಿತ
ಸಮಸ್ಯೆಯ ಕುರಿತು ಮಾತಾಡುತ್ತ,
ನಮ್ಮ ಸಾಮಾಜಿಕ ಹಾಗು ರಾಜಕೀಯ
ಮುಖಂಡರು ಕೆಲವು ದಶಕಗಳಲ್ಲಿ ಹಿಂ
ದೂ–ಮುಸ್ಲಿಂ ಐಕ್ಯಕ್ಕಾಗಿ ಸಾಧಿಸಿದುದ
ಕ್ಕಿಂತ ಎಷ್ಟೋ ಹೆಚ್ಚಾದುದನ್ನು ಶಾಂ
ತಾರಾಮರ ಒಂದು 'ಪಡೋಸಿ' ಚಿತ್ರ
ಸಾಧಿಸಿದೆ" ಎಂದರು. ಈ ಅಭಿ
ಪ್ರಾಯವು ಸಿಂಧದ ಮುಸ್ಲಿಂ ಲೀಗ್
ಮಂತ್ರಿಮಂಡಲವನ್ನೂ ಆಕರ್ಷಿಸಿತು;
ಸಿಂಧದಲ್ಲಿ ಈ ಚಿತ್ರದ ಮೇಲಿನ ನಿಷೇಧ
ವಾಗೆಯೂ ತೆಗೆದುಹಾಕಲ್ಪಟ್ಟಿತು.



ಶ್ರೀ। ವಿ. ಕಾಶಿನಾಥರು. (ಇವರು ರಾಜಕಮಲದವರ ಯಾವತ್ತೂ ಚಟುವಟಿಕೆಗಳ ಹಿಂದೆ ಇರುವ ಸೂತ್ರಧಾರರು. ರಾಜಕಮಲದ ಯಾವತ್ತೂ ಕಾರ್ಯರಂಗಗಳಲ್ಲಿ ಇವರು ಮೇಲ್ವಿಚಾರಕರು. ಸರ್ವರೂ ಇವರನ್ನು ಪೂಜ್ಯತೆ-ಗೌರವಗಳಿಂದ ಹಾಗೂ ಮಮತೆಯಿಂದ "ಕಾಶಿನಾಥ್ ದಾದಾ" ಎಂದು ಸಂಬೋಧಿಸುವರು.)

ಜಗತ್ತಿನ ಇತರ ಮಹಾಪುರುಷ
ರಂತೆ ಶಾಂತಾರಾಮರ ಜೀವನವಾದರೂ
ಅನೇಕ ಎಡರುತೊಡರುಗಳಿಂದ,ವೈವಿಧ್ಯ
ದಿಂದ, ಕೂಡಿದುದು. ಕೊಲ್ಲಾಪುರದಲ್ಲಿ ಬಡ ಕುಟುಂಬ
ವೊಂದರಲ್ಲಿ ಜನಿಸಿದರು; ಶಿಕ್ಷಣವನ್ನು ಮುಂದರಿಸಲಾಗಲಿಲ್ಲ.
ಚಿಕ್ಕ ಪ್ರಾಯದಲ್ಲಿ, ನಾಟಕ ಮಂಡಲಿ ಸೇರಿ, ಪರಧೆ ಎಳೆವ
ಮತ್ತು ಗಂಟೆ ಬಾರಿಸುವ ಕೆಲಸ ಮಾಡಿದರು. ಆಗ ಯಾರು
ತಿಳಿಸಿದ್ದರು,—ಈ ಪುಟ್ಟ "ಛೋಕ್ರಾ" ಮುಂದೆ ಚಲಚ್ಚಿತ್ರ
ರಂಗದಲ್ಲಿ ಅಗ್ರಸ್ಥಾನ ಪಡೆದು, ತನ್ನ ನಾಮಮಾತ್ರದಿಂದ
ಜನತಾಲಕ್ಷ್ಯ ಸೆಳೆವನೆಂದು!

ಗಂಧರ್ವ ನಾಟಕ ಮಂಡಲಿಯು ಶಾಂತಾರಾಮರ
ಪ್ರಥಮ "ಶಾಲೆ"ಯಾಯಿತು. ಅಲ್ಲಿ ಎಲ್ಲ ತರದ ಪಾತ್ರ
ಗಳನ್ನೂ ವಹಿಸಿದರು. ಮುಂದೆ ಎದುರಾಗುವ ಹಲವು ಪ್ರತಿ
ಸ್ಪರ್ಧಿಗಳನ್ನು ಸಮರ್ಥವಾಗಿ ಝಾಡಿಸಿ ಹೋಗುವ ಶಕ್ತಿ

ಯನ್ನು ಶಾಂತಾರಾಮರು ಅಲ್ಲಿಂದಲೇ ಗಳಿಸಿಕೊಂಡರು. ಕ್ರಮೇಣ ಅವರು ಬಾಬುರಾವ್ ಪೈಂಟರರ ಕೈಕೆಳಗೆ ಬಂದರು. ಬಾಬುರಾವ್ ಪೈಂಟರರು ಶಾಂತಾರಾಮರ ಯೋಗ್ಯತೆಯನ್ನು ಚೆನ್ನಾಗಿ ಗ್ರಹಿಸಿದರು. "ನೇತಾಜಿ ಫಾಲ್ಕರ್" — ಇದು ಶಾಂತಾರಾಮರು, ಮಹಾರಾಷ್ಟ್ರ ಫಿಲ್ಮ್ ಕಂಪೆನಿಯಲ್ಲಿ ದಿಗ್ದರ್ಶಿಸಿದ ಪ್ರಥಮ ಚಿತ್ರ. ಅಲ್ಲಿಂದ ಪ್ರಭಾತ ಫಿಲ್ಮ್ ಕಂಪೆನಿಯ ರಚನಾಕಾರ್ಯಕ್ಕೆ ಹೊರಟರು.

ಪುಣೆಯ ಪ್ರಭಾತ ಫಿಲ್ಮ್ ಕಂಪೆನಿಯ ಉದಯವು, ಶಾಂತಾರಾಮರ ನೈಪುಣ್ಯದ ಒಂದು ಉದಾಹರಣೆಯಾಗಿದೆ. ಶಾಂತಾರಾಮರು ತಮ್ಮ ಕಲಾಕೌಶಲ್ಯದಿಂದ, ಸುಲಭವಾಗಿ ತನ್ನ ನಾಡಿನವರ ಹೃದಯಗಳಲ್ಲಿ, ಅವರ ಬಗ್ಗೆ ಸಹಾನುಭೂತಿ ಪ್ರದರ್ಶಕರಾಗಿಯೂ ಜೀವನವನ್ನು ನೈಜವೆನಿಸುವಂತೆ ಪ್ರತಿಬಿಂಬಿಸುವ ದಿಗ್ದರ್ಶಕರಾಗಿಯೂ ಚಿರಸ್ಥಾಯಿಯಾದರು. ಶಾಂತಾರಾಮರು ಪ್ರಭಾತ ಫಿಲ್ಮ್ ಕಂಪೆನಿಯಲ್ಲಿ ಹನ್ನೆರಡು ವರ್ಷಗಳ ಕಾಲ ವಿಶ್ರಮಿಸಿ, ಆ ಕಂಪೆನಿಯ ಗೌರವವನ್ನು ಹೆಚ್ಚಿಸಲು ಕಾರಣರಾದರು. ತನ್ನದೊಂದು ಚಿತ್ರದಲ್ಲಿ ಶಿವಾಜಿಯ ಪಾತ್ರವನ್ನು ವಹಿಸಿ, ಕಲಾ ಪ್ರೌಢಿಮೆಯನ್ನೂ ರಾಷ್ಟ್ರೀಯ ಪ್ರೇಮವನ್ನೂ ವ್ಯಕ್ತಗೊಳಿಸಿದರು.

ಪ್ರಭಾತ್ ಫಿಲ್ಮ್ ಕಂಪೆನಿಯನ್ನು ಬಿಟ್ಟ ನಂತರ ಶಾಂತಾರಾಮರು, ಸರಕಾರದವರ ಇನ್‌ಫೊರ್ಮೇಶನ್ ಫಿಲ್ಮ್ ಇಲಾಖೆಯನ್ನು ಸೇರಿದರು. ಈ ಇಲಾಖೆಯನ್ನು ಸೇರುವಾಗ, ತಾನು ಜನತೆಯಲ್ಲಿ ರಾಷ್ಟ್ರೀಯ ಜಾಗೃತಿಯುಂಟುಮಾಡಲು ಸಹಾಯಕನಾಗುವೆನೆಂದು ಶಾಂತಾರಾಮರ ಭಾವನೆಯಿತ್ತು. ಆದರೆ, ತನ್ನ ಎಣಿಕೆ ತಪ್ಪೆಂದು ಶಾಂತಾರಾಮರಿಗೆ ಬೇಗನೆ ಸ್ಪಷ್ಟವಾಯಿತು. ಸರಕಾರದೊಡನೆ ಸಂಬಂಧ ಕಡಿವ ಮೊದಲು ಶಾಂತಾರಾಮರು ತನ್ನದೇ ಆದ ರೀತಿಯಲ್ಲಿ ಚಿತ್ರಗಳನ್ನು ತಯಾರಿಸಲೆತ್ನಿಸಿ, ಸಾಮಾನ್ಯ ಎಲ್ಲ ರಾಷ್ಟ್ರೀಯ ಧುರೀಣರನ್ನು ತೆರೆಗೆ ತಂದರು. ಇದಲ್ಲದೆ, "ಗೆಲೆಂಟ್ ಎಫರ್ಟ್" ಹೆಸರಿನಿಂದ "ಕ್ರಿಪ್ಸ್ ರಾಯಭಾರ"ದ ಚಿತ್ರವನ್ನೂ ತಯಾರಿಸಿರುವರು.

ಭಾರತೀಯ ಇತಿಹಾಸದಲ್ಲಿ ಚಿರಸ್ಮರಣೀಯವಾದ ಆ 1942ನೇ ಅಗೋಸ್ತು ಮುಂಚೆಯೇ ಶಾಂತಾರಾಮರು "ಇನ್‌ಫರ್ಮೇಶನ್ ಫಿಲ್ಮ್ಸ"ಗಳಿಗೆ ವಿದಾಯವಿತ್ತು, ತನ್ನ ಮಾತಾಪಿತೃರ ಹೆಸರಿನಲ್ಲಿ ರಾಜಕಮಲ ಕಲಾಮಂದಿರವನ್ನು ಸ್ಥಾಪಿಸಿದರು. ಇದರಿಂದ ಶಾಂತಾರಾಮರ ಉಚ್ಚ ಅಭಿರುಚಿಯೂ ಮಾತಾಪಿತೃಗಳ ಬಗ್ಗೆ ಅವರಿಗಿರುವ ಪೂಜ್ಯ ಭಾವವೂ ವ್ಯಕ್ತವಾಗುತ್ತಿದೆ. ರಾಜಕಮಲ ಕಲಾಮಂದಿರವಿಂದು ದೇಶದ ಸುಪ್ರಸಿದ್ಧ ಚಿತ್ರ ಸಂಸ್ಥೆ. ಶಾಂತಾರಾಮರ ಕಲೆಯು ಶಾಶ್ವತವಾದುದೆಂದು ಜನರನ್ನುತ್ತಿರುವುದಕ್ಕೆ ರಾಜಕಮಲದವರ ಕಳೆದೆರಡು ವರ್ಷಗಳ ಕೃತಿಗಳೇ ನಿದರ್ಶನವಾಗಿವೆ. ಆ ಎರಡು ವರ್ಷಗಳಲ್ಲಿ ಒಂದು ಕಲಾಮಂದಿರದ ಸ್ಥಾಪನೆ, ಮೂರು ರಜತೋತ್ಸವ ಚಿತ್ರಗಳು, ದೇಶವ್ಯಾಪೀ ಚಿತ್ರ ಪ್ರವರ್ತನಾ ಸಂಸ್ಥೆಗಳ ವ್ಯವಸ್ಥೆ, ಮತ್ತೆ ಆ ಅಂತರ್‌ರಾಷ್ಟ್ರೀಯ ಕಥೆ ... ಕೋಟ್ನಿಸ್"-ಅದರ ಚಿತ್ರೀಕರಣದ ಆರಂಭ-ಇದ ... ದಾಖಲೆಯಾಗಿವೆ.

ಡಾ। ಕೋಟ್ನಿಸರು, ಶಾಂತಾರಾಮರ ತಾಯ ... ಮಹನ್ ವ್ಯಕ್ತಿ; ಚೀನದಲ್ಲಿ ಮಾನವ ಸೇವೆಗಾಗಿ ... ಪ್ರಾಣಬಲಿಯಿತ್ತ ಜಗದ್ವಿಖ್ಯಾತ ಪುರುಷ. ಶಾಂತಾರಾ... ಈ ವಿಶೇಷವಾದ ವಿಷಯವನ್ನಾರಿಸಿಕೊಂಡುದು ಯು... ವಿದೆ. ಶಾಂತಾರಾಮರು ಸ್ವತಃ ಡಾ। ಕೋಟ್ನಿಸರ ... ವಹಿಸಿರುವರು. ಅಸಾಧಾರಣವಾದ ಒಂದು ಪಾತ್ರ ... ಬೇಕೆಂಬುದು ಅವರ ಒಂದು ಗುಪ್ತ ಬಯಕೆಯಾಗಿತ್ತು. ... ಈ ಸಂದರ್ಭವೊದಗಿದೆ.

ಈ ಲೇಖನವನ್ನು ಮುಗಿಸುವ ಮೊದಲು ಸು... ರೂಪವಾಗಿ ಇಷ್ಟನ್ನು ಬರೆಯಲಿಚ್ಛಿಸುತ್ತೇನೆ: ಶಾಂ... ಮರು ತಮ್ಮ ಚಟುವಟಿಕೆಗಳನ್ನು ಒಂದೇ ಕ್ಷೇತ್ರದ... ಮಿತಗೊಳಿಸಲಾಗದು. ದೇಶನಿರ್ಮಾಣ ಕಾರ್ಯ... ತೊಡಗಬೇಕು. ರಾಜಕಮಲದ ಆ "ಹುಡುಗಿ"ಯು... ನಿಯು ಭಾರತ ಯುವಕ ಜನಾಂಗದಲ್ಲಿ ಸಾಹಿತ್ಯ, ... ಕಲೆ, ಆಟಪಾಠಗಳನ್ನು ಪ್ರವರ್ಧಿಸುವಂತೆ — ಚಟ... ಗಳಾಗಬೇಕು.

ಶ್ಲೋ॥ ನಿತರಾಂನೀಚೋಽಸ್ಮೀತಿತ್ವಂ ಖೇದಂ ಕೂಪ ...
ಮಾಕದಾಪಿ ...
ಅತ್ಯಂತ ಸರಸಹೃದಯೋಯತಃ ಪರೇಷಾಂ ...
ಗುಣಗ್ರ...

ತಾತ್ಪರ್ಯ॥ ತಾನು ಬಹಳ ಕೆಳಗಿರುವೆನೆಂದು ... ಸಬಾರದು. ದಯಾರ್ದ್ರ ಹೃದಯನಾಗಿಯೂ ... ಗುಣಗಳನ್ನು ಗ್ರಹಿಸುವವನಾಗಿಯೂ ಇದ್ದರೆ, ಕೆಳ... ಗಣ್ಯನಾಗಿರುತ್ತಾನೆ. ಹೇಗೆಂದರೆ, ಬಾವಿಯು ಕೆಳ... ಒಳ್ಳೇ ನೀರುಂಟಾದ್ದರಿಂದ ಮೇಲಿನವರ ಹಗ್ಗವನ... ಮಾಡಿಕೊಂಡು ನೀರು ಕೊಟ್ಟು ಕಳುಹಿಸಿ, ಎಲ್ಲರಿಗ... ಕಾದ ಪ್ರಯೋಜಕವೆನಿಸಿಕೊಂಡಿರುವುದು.

HERALDING A NEW VENTURE IN THE FILM-WORLD!

film-fashion

FILM, DANCING & THEATRICAL COSTUMES SUPPLIERS.

THE FIRST OF ITS KIND IN INDIA

★

SUPERVISION

BY

MANILAL T. LADVA

one of the leading costumes designers of India.

★



★

who designed the famous costumes in

DRAUPADI

NAL-DAMAYANTI

VEER-ABHIMANYU

VEER-KUNAL

★

THESE AND SEVERAL OTHER LAVISH COSTUME PICTURES OF THIS DECADE— WHICH ARE THE DELIGHT OF THE NATION.

ENQUIRIES FROM STUDIOS & PRODUCERS FROM ANY PART OF INDIA WILL BE PROMPTLY ATTENDED TO

For terms and other particulars apply:

FILM FASHION, NEAR MAJESTIC CINEMA, GIRGOAN, BOMBAY 4.

OUR SWEETEST SONGS ARE THOSE
THAT TELL OF SADDEST THOUGHTS

DIRECTOR **S. F. HASNAIN, B. A.,**

WHO GAVE YOU PICTURES LIKE

"QAIDI", "MASOOM" And "FASHION"

NOW PRESENTS

★ DIL ★

WITH QUEEN OF MELODY

NOORJEHAN

ETHERIAL MUSIC AND DANCES, HEART-THROBBING
SCENES AND GLAMAROUS BEAUTY.

MASTERPIECE OF A MASTERMIND.

FAZLI BROS., LTD.

VINCENT SQUARE, : : DADAR, BOMBAY

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್, ಲಿಮಿಟೆಡ್.

(ತಾ. 26—2—1945ರಲ್ಲಿ ಜರಗಿದ ಈ ಬ್ಯಾಂಕಿನ ಪಾಲುಗಾರರ ಹತ್ತೊಂಭತ್ತನೆಯ ವಾರ್ಷಿಕ ಮಹಾಧಿವೇಶನದಂದು ಇದರ ಚೆಯರ್ಮ್ಯಾನರಾದ ಡಾ। ಟಿ. ಎಮ್. ಎ. ಪೈ, ಎಮ್. ಬಿ. ಬಿ. ಎಸ್., ಇವರಿತ್ತ ಭಾಷಣ.)

ಮಹಿಳೆಯರೆ ಮತ್ತು ಮಹನೀಯರೆ,

ಈ ಸಿಂಡಿಕೇಟಿನ ಬಗ್ಗೆ 1944ನೇ ಇಸವಿ ದಶಂಬರ ತಾ. 1ಕ್ಕೆ ಅಂತ್ಯವಾಗುವ ಒಂದು ವರುಷದ ಆದಾಯ ವೆಚ್ಚ ುಳಿತಾಯಗಳ ವಿವರಣಾಪತ್ರವು ಈ ಮೊದಲೇ ನಿಮ್ಮ ಕೈ ೇರಿದೆ. ಅದರಲ್ಲಿ ಪ್ರತಿಬಿಂಬಿತವಾದ ಕೆಲವು ಗಣನೀಯ ಿಷಯಗಳನ್ನು ನಿಮ್ಮ ಲಕ್ಷ್ಯಕ್ಕೆ ನಾನಿಂದು ತಂದರೆ ಅದು ಅಸಂಗತವೆನಿಸದು.

1943ನೇ ದಶಂಬರಾಂತ್ಯದಲ್ಲಿ ಈ ಬ್ಯಾಂಕಿನ ಮೂಲ ನವು ರೂ. 15,66,272|—ಇದ್ದುದು 1944ನೇ ವರ್ಷಾಂತ್ಯ ದಲ್ಲಿ ರೂ. 19,23,069ಕ್ಕೆ ಏರಿದೆ. ಪಾಲುಗಳ ಐಚ್ಛಿಕ ಪಾವತಿ ಗಳು ಬರುತ್ತಾ ಇರುವುದರಿಂದ ಮೂಲಧನವು ದಿನೇದಿನೇ ಪ್ರವರ್ಧಮಾನವಾಗುತ್ತ ಬರುತ್ತಿದೆ. ಗತ ವರ್ಷಾಂತ್ಯದಲ್ಲಿ ರೂ. 3,75,000|- ಇದ್ದ ಕ್ಷೇಮನಿಧಿಯು ವರದಿಯಲ್ಲಿ ಸೂಚಿ ಸಲ್ಪಟ್ಟ ವಿನಿಯೋಗದಿಂದೊಡಗೂಡಿದಾಗ ರೂ. 4,20,000|-ಕ್ಕೆ ಮುಟ್ಟುವುದು. ಈ ಮೂಲಧನ ಮತ್ತು ಕ್ಷೇಮನಿಧಿಯ ಮೊತ್ತವು ಈ ತಾರೀಕಿಗೆ ಬ್ಯಾಂಕಿನಲ್ಲಿರುವ ರೂ. 1,40,34,895ರ ೇವಣಾತಿಯ ಹೊಣೆಗಾರಿಕೆಯ ಸೇ. 16ರಷ್ಟಾಗುವುದು. ಬ್ಯಾಂಕರರುಗಳೊಡನೆ ಮತ್ತು ನಮ್ಮ ಕೈಯಲ್ಲಿರುವ ನಗದು ಹಣವೂ ಸರಕಾರಿ ಭದ್ರತಾಪತ್ರಗಳಲ್ಲಿ ನಿಕ್ಷೇಪಿಸಿದ ಮೊತ್ತವೂ ಒಟ್ಟಿಗೆ ಠೇವಣಾತಿಯ ಹೊಣೆಗಾರಿಕೆಯ ಸೇ. 75ರಷ್ಟಾಗು ತ್ತದೆ. ಇದು ಈ ಬ್ಯಾಂಕಿನ ಸೊತ್ತುಗಳ ಉತ್ಕೃಷ್ಟ ಸ್ಥಿರ ತೆಯ ವಿಶೇಷ ಲಕ್ಷಣ. ಬ್ಯಾಂಕಿಗಿರುವ ಠೇವಣಾತಿಗಳ ಹೊಣೆಯ ಸೇ. 47ರಷ್ಟನ್ನು ಮಾತ್ರ ಅದು ಹೊರಸಾಲವಾಗಿ ಕೊಟ್ಟದೆ. ಹೀಗೆ ಸಂದ ಹೊರಸಾಲದಲ್ಲಿ ಭದ್ರತೆ ಪಡೆಯದೆ ಕೊಟ್ಟದು ಬರೇ ಸೇ. 10|-ರಷ್ಟು ಮಾತ್ರ. ಬ್ಯಾಂಕಿನ ಶಾಶ್ವತ ಮೂಲವ್ಯಯವು ಅದರ ಮೂಲಧನ ಮತ್ತು ಕ್ಷೇಮನಿಧಿಯ ಮೊತ್ತದ ಸೇ. 4ಕ್ಕೆ ಮೀರಿಲ್ಲ. ಗತವರ್ಷದ ಲಾಭವು ರೂ. ,58,054|—ಇದೆ. ಈ ಲಾಭದಿಂದ ರೂ. 45,000|—ನ್ನು ಕ್ಷೇಮನಿಧಿಯನ್ನು ಪ್ರಬಲಗೊಳಿಸುವ ಉದ್ದೇಶದಿಂದ ಅದರ ಲೆಕ್ಕಕ್ಕೆ ಒಯ್ಯೋಣವೆಂದು ನಿಮ್ಮ ಡೈರೆಕ್ಟರರು ಸೂಚನೆ ುತ್ತಿದ್ದಾರೆ. ಈ ರೀತಿಯಲ್ಲಿ ಬ್ಯಾಂಕಿನ ಕ್ಷೇಮನಿಧಿಯನ್ನು ವೃದ್ಧಿಗೊಳಿಸುತ್ತ ಬರುವ ಧೋರಣೆಯು ಮುಂದುವರಿಯಲ್ಪ ಡುವುದು. ಬ್ಯಾಂಕಿನ ಒಟ್ಟು ಆರ್ಥಿಕ ಸಂಪತ್ತು ಎರಡು ಕೋಟಿ ರೂಪಾಯಿಗೆ ತುಂಬ ಮಿಕ್ಕಿಯೇ ಇದೆ.


ಈ ಸಂದರ್ಭದಲ್ಲಿ ಉಪಸಂಗತಿಯಾಗಿ, ನಮ್ಮ ಬ್ಯಾಂಕಿನ ಮೂಲಧನ ಸಂಘಟನೆಯಲ್ಲಿ ಪುನರ್ವ್ಯವಸ್ಥೆಯಾಗ ಬೇಕೆಂದು ಮದ್ರಾಸು ಹ್ಯಾಕೋರ್ಟಿನಿಂದ ಬಂದಿರುವ ನಿರ್ದೇ ಶಾನುಸಾರ ನಾವು ಕರೆಯಲಿಕ್ಕಿರುವ ವಿಶೇಷ ಮಹಾಧಿವೇಶ ನದ ಪ್ರಸ್ತಾಪಕ್ಕೆ ನಿಮ್ಮ ಗಮನವನ್ನು ಹರಿಯಿಸಲು ಬಯಸು ತ್ತೇನೆ. ನಮ್ಮ ಬ್ಯಾಂಕಿನ ಎಲ್ಲ ಡಿಫರ್ಡ್ ಶ್ಯಾರುಗಳನ್ನು ಮತ್ತು ಚಂದಾ ಅರ್ಪಿಸಲ್ಪಡದಿರುವ ಪ್ರಿಫರೆನ್ಸ್ ಶ್ಯಾರು ಗಳನ್ನು ಸಾಮಾನ್ಯ ಶ್ಯಾರುಗಳನ್ನಾಗಿ ಮಾರ್ಪಡಿಸಿ ನಮ್ಮ ಮೂಲಧನ ಸಂಘಟಣೆಯಲ್ಲಿ ಕೇವಲ ಸಾಮಾನ್ಯ ಶ್ಯಾರುಗಳು ಮತ್ತು ಪ್ರಿಫರೆನ್ಸ್ ಶ್ಯಾರುಗಳು ಮಾತ್ರ ಇರುವಂತೆ ಪುನರ್ವ್ಯ ವಸ್ಥೆಗೊಳಿಸಬೇಕೆಂದು ಸೂಚಿಸೋಣಾಗಿದೆ. 1944ನೇ ಇಸ ವಿಯ ಇಂಡಿಯನ್ ಕಂಪೆನೀಸ್ ಆಕ್ಟಿನ ತಿದ್ದುಪಡಿಯಲ್ಲಿ 1937ನೇ ಇಸವಿಯ ನಂತರ ಸ್ಥಾಪಿತವಾದ ಬ್ಯಾಂಕುಗಳ ಮೂಲಧನವು ಕೇವಲ ಸಾಮಾನ್ಯ ಶ್ಯಾರುಗಳಿಂದಲೂ ತಾ. 1—7—1944ಕ್ಕಿಂತ ಮುಂಚಿತವಾಗಿ ಚೆಂದಾ ತೆರಲ್ಪಟ್ಟ ಪ್ರಿಫರೆನ್ಸಿಯಲ್ ಶ್ಯಾರುಗಳಿಂದಲೂ ಕೂಡಿರತಕ್ಕುದೆಂದು ನಿಬಂಧನೆ ಇದ್ದು ಅದು 1937ನೇ ಇಸವಿಗಿಂತ ಮುಂಚೆ ಸ್ಥಾಪಿತವಾದ ಬ್ಯಾಂಕುಗಳಿಗೆ ಅನ್ವಯಿಸುವುದಿಲ್ಲವೆಂದಿದ್ದರೂ ಈ ವಿಶಿಷ್ಟ ಭಿನ್ನತೆಯೇಕೆ ಮಾಡಲಾಗಿದೆ ಎಂಬುದನ್ನು ತಿಳಿ ಯುವುದು ಕಷ್ಟವಾಗಿದೆ. ಈ ಕಾನೂನು ನಮ್ಮ ಬ್ಯಾಂಕಿಗೆ ಅನ್ವಯಿಸುವುದಿಲ್ಲ. ನಮ್ಮ ಡಿಫರ್ಡ್ ಶ್ಯಾರುಗಳು ಬೋನ ಸ್ಸಿನ ಬದಲಾಗಿ ಕೊಡಲ್ಪಟ್ಟವುಗಳಾಗಿದ್ದು ಠೇವಣಾತಿಯ ಕಡೆಗೆ ಮಿತ ಆಕರ್ಷಣೆಯುಳ್ಳವುಗಳಾಗಿಯೂ ಇತರ ಬಗೆಯ ಶ್ಯಾರುಗಳಂತೆ ಮತದಾನ ಹಕ್ಕುಳ್ಳವುಗಳಾಗಿಯೂ ಇರುವುದ ರಿಂದ ಅವು ಬೇರೆ ಬ್ಯಾಂಕುಗಳ ಡಿಫರ್ಡ್ ಶ್ಯಾರುಗಳಂತಿಲ್ಲ. ಆದರೂ ಆ ಕಾನೂನಿನ ಅಂತಃತತ್ವವನ್ನು ಪರಿಪೋಷಿಸುವುದ ಕ್ಕಾಗಿ ನಮ್ಮ ಬ್ಯಾಂಕಿನ ಮೂಲಧನ ಸಂಘಟಣೆಯಲ್ಲಿ ಪುನ ರ್ವ್ಯವಸ್ಥೆ ಮಾಡುವುದೊಳ್ಳಿತೆಂದು ನಾವು ತಿಳಿದಿದ್ದೇವೆ. ಶ್ಯಾರುಗಳ ಎಲ್ಲ ತರಗತಿಗಳಿಗೂ ಕೇವಲ ಅರ್ಪಿತವಾದ ಚಂದಾ ಮೊಬಲಗಿನ ಪ್ರಮಾಣದಲ್ಲಿ ಮತದಾನದ ಹಕ್ಕಿರು ವಂತೆ ಮಾರ್ಪಡಿಸುವುದು ಸೂಕ್ತವೆಂದು ನಾವು ಯೋಚಿಸಿ ದ್ದೇವೆ.

ಇರಲಿ, ಈಗ ಕಳೆದೊಂದು ವರುಷದಲ್ಲಿ ಏನಾಯಿತು? ಈ ವರುಷದಲ್ಲಿ ನಾವೇನು ನಿರೀಕ್ಷಿಸಬಹುದೆಂಬುದರ ಕಡೆಗೆ ವಿಚಾರ ಹರಿಯಿಸೋಣ. 1944ನೇ ಇಸವಿಯು ಇಂಡಿಯ



ಶ್ರೀ। ಟಿ. ಎ. ಪೈ, ಬಿ. ಕೊಮ್. (ಬೊಂಬಯಿ) ಎ. ಐ. ಐ. ಬಿ,
ಜನರಲ್ ಮೆನೇಜರ್.

ದಲ್ಲಿ ಶೆಡ್ಯೂಲ್ಡ್ ಬ್ಯಾಂಕುಗಳು 74ರಿಂದ 84ಕ್ಕೆ ಏರಿದುದನ್ನೂ ಈ ಶೆಡ್ಯೂಲ್ಡ್ ಬ್ಯಾಂಕುಗಳ ಶಾಖೆಗಳು 1725ರಿಂದ 2239ಕ್ಕೆ ವೃದ್ಧಿಗೊಂಡುದನ್ನೂ ಕಂಡಿದೆ. ಬ್ಯಾಂಕುಗಳ ಶಾಖಾ ನಿರ್ಮಾಣದ ಚಟುವಟಿಕೆಗಳಿಗೆ ನಿಯಂತ್ರಣ ಹಾಕುವುದು ಈಗಾಗಲೇ ವಿಳಂಬವಾಗಿ ಹೋಗಿದೆಯೆಂಬ ಅಭಿಪ್ರಾಯವು ಕೆಲವೆಡೆಗಳಲ್ಲಿ ತೋರಿಬರುತ್ತದೆ. ಈ ಅಭಿಪ್ರಾಯದಿಂದ ಬ್ಯಾಂಕಿಂಗ್ ಕ್ಷೇತ್ರಗಳಲ್ಲಿ ದಕ್ಕುವಷ್ಟು ಬ್ಯಾಂಕುಗಳು ಈಗಾಗಲೇ ಆಗಿವೆಯೆಂಬ ಅರ್ಥವುಸ್ಪಷ್ಟವಾಗುತ್ತದೆ. ಆದರೆ ಇದರಂತೆ ವಾಸ್ತವಿಕತೆಗೆ ದೂರಾದ ಸಂಗತಿಯು ಬೇರೊಂದಿರದು. ಇಂಡಿಯದಲ್ಲಿ ಬ್ಯಾಂಕಿಂಗ್ ವ್ಯವಹಾರವನ್ನು ಕ್ರಮಗೊಳಿಸುವ ಉದ್ದೇಶದಿಂದ ಕೇಂದ್ರ ಶಾಸನ ಸಭೆಯ ಮುಂದೆ ಬಂದಿರುವ ಮಸೂ



ಶ್ರೀ। ಎಚ್. ಎನ್. ಪೈ. (ಚೀಫ್
ಎಕೌಂಟಾಂಟರು.)



ಶ್ರೀ। ಬಿ. ಎಸ್. ನಾಯ್ಕರು. (ಆಫಿ
ಸುಪರಿಂಟೆಂಡೆಂಟ್.)

ದೆಯ ಮುಖ್ಯ ನಿಬಂಧನೆಗಳನ್ನು ನಿಮ್ಮಲ್ಲಿ ಅನೇಕರು ತಿಳಿದಿರಬಹುದು. ಬ್ಯಾಂಕುಗಳಿಗೆ ಸಂಬಂಧಪಟ್ಟ ಶಾಸನಗಳು ದಿನ ಹೋದಂತೆ ನಾಡಿನಲ್ಲಿ ಹೆಚ್ಚು ಹೆಚ್ಚಾಗಿ ತೋರಿಬರುತ್ತಿರುವ ಬ್ಯಾಂಕಿಂಗ್ ವ್ಯವಹಾರದ ಆವಶ್ಯಕತೆಯನ್ನು ಮಿತವ್ಯಯದಿಂದಲೂ ವಿಚಕ್ಷಣತೆಯಿಂದ ಪೂರೈಕೆಗೆ
ದೇಶದ ಆರ್ಥಿಕೋನ್ನತಿಯನ್ನು ಸಾಧಿಸುವ ಸ
ಸ್ವಭಾವವುಳ್ಳವುಗಳಾಗಿರಬೇಕು; ಆದರೆ ಈಗ ಮುಂದೆ
ರುವ ಈ ಬಿಲ್ಲು ಬಹುವ್ಯಾಪ್ತಿ ವಿಶಿಷ್ಟತೆಯುಳ್ಳ
ವರ್ಣಿಸಲ್ಪಟ್ಟಿರುವುದಾದರೂ ಠೇವಣಾತಿಗಾರರ ರಕ್ಷ
ಮಿತದೃಷ್ಟಿಯಿಂದಾಗಿ ಅದು ಬ್ಯಾಂಕಿಂಗ್ ಸಮ
ಹೊರವಲಯವನ್ನು ಮುಟ್ಟಿಲ್ಲವೆಂದೇ ನನ್ನ ಅಭಿಪ್ರಾ
ಈ ಮಸೂದೆಯು ಸೆಂಟ್ರಲ್ ಬೇಂಕಿಂಗ್ ಎನ್ಕ್ವ
ಕಮಿಟಿಯವರು ಮಾಡಿರುವ ಶಿಫಾರಸುಗಳಲ್ಲಿ ಕೆ
ಕಾಯಿದೆಯ ರೂಪದಲ್ಲಿಳಿಸುವುದೆಂದು ಅದರಲ್ಲಿ ಹೇಳಲ್ಪ
ವುದಾದರೂ ಅಂತಹ ಶಿಫಾರಸಾದ ಕಾಲದಿಂದ ಇ
ದೇಶದ ಆರ್ಥಿಕ ಪರಿಸ್ಥಿತಿಯು ತುಂಬ ಪರಿವರ್ತನ ಹ
ರುವ ಕಾರಣ ಅವನ್ನು ಇಂದಿನ ದೃಷ್ಟಿಯಿಂದ ಹೊಸ
ಪರಿಶೀಲಿಸಬೇಕಾಗಿದೆ. ಸರಕಾರವು ಈ ಮಸೂದೆಯ ಕುರಿತು ವರ್ತಕಸಂಘಸಂಸ್ಥೆಗಳಿಂದಲೂ ವ್ಯವಹಾರಾನುಭವಿಕರಾದ ತಜ್ಞ ಬ್ಯಾಂಕರರುಗಳಿಂದಲೂ ವಿಮರ್ಶೆಯನ್ನು ಆಹ್ವಾನಿಸಿರುವುದು ಒಳ್ಳೆಯ



ಶ್ರೀ। ಕೆ. ವಿ. ಶೆಣೈ, ಸೆಕ್ರೆಟರಿ.


ಾಯಿತು. ಈ ಮಸೂದೆಯ ಕುರಿತು ಬರುವ ಟೀಕೆಟಿಪ್ಪಣಿಗಳನ್ನು ಸರಕಾರವು ಉಪೇಕ್ಷೆಯಿಂದ ಬದಿಗೆ ತಳ್ಳದೆ ಪ್ರತಿಯೊಂದು ವಿಮರ್ಶೆಗೂ ತಕ್ಕ ಗಮನವನ್ನಿತ್ತೀತೆಂಬುದು ನನ್ನ ಮೆಚ್ಚಿನ ಹಾರೈಕೆ. ಆದರ್ಶದ ಕಡೆಗೆ ದೃಷ್ಟಿ ಹಾಯಿಸುವುದೊಂದಾದರೆ ಪರಿಸ್ಥಿತಿಯು ವಾಸ್ತವಿಕತೆಯ ಕಡೆಗೆ ಕಣ್ಣಿಟ್ಟು ತಿಳಿಯುಕೊಳ್ಳುವುದು ತೀರ ಬೇರೊಂದಾಗಿರುತ್ತದೆ. ಎರಡಕ್ಕೂ ಅಯಾ ವೈಶಿಷ್ಟ್ಯ ಮಹತ್ವವಿದೆ. ಉದಾಹರಣೆಗಾಗಿ, ಮಸೂದೆಯಲ್ಲಿ ಸೂಚಿತವಾದಂತೆ ಅಂತಪ್ರಾರ್ಂತವ್ಯಾಪ್ತಿಯುಳ್ಳ ಬ್ಯಾಂಕಿನ ಮೂಲಧನದ ಕನಿಷ್ಠ ಮಾನವು ಇಪ್ಪತ್ತು ಲಕ್ಷ ರೂಪ್ಯಾ ಎಂದು ನಿಷ್ಕರ್ಷಿಸಿರುವುದು ನ್ಯಾಯವಲ್ಲ ಮಾತ್ರವಲ್ಲದೆ ಹಿತಕರವೂ ಅಲ್ಲ. ಇಂಡಿಯದ ಎಲ್ಲ ಪ್ರಾಂತಗಳೂ ಪರಿಮಾಣದಲ್ಲಾಗಲೀ ಬ್ಯಾಂಕಿಂಗ್ ವ್ಯವಹಾರದ ಶಕ್ತಿ ವರ್ಚಸ್ಸಿನ ಮಾನದಲ್ಲಾಗಲೀ ಒಂದೇ ತೆರನಾಗಿಲ್ಲ. ತನ್ನ ಸ್ವತ್ತ ಮೂಲಧನವು ಇಪ್ಪತ್ತು ಲಕ್ಷವಿಲ್ಲದೆ ಒಂದು ಪ್ರಾಂತದ ಕಡಿನಾಡಿನಲ್ಲಿ ಸ್ಥಾಪಿತವಾದೊಂದು ಬ್ಯಾಂಕು ಅದೇ ಪ್ರಾಂತಕ್ಕೆ ಸೇರಿದ ನೂರಾರು ಮೈಲು ದೂರದಲ್ಲಿರುವ ಜಿಲ್ಲೆಗಳಲ್ಲಿ ವ್ಯವಹಾರವನ್ನು ನಡೆಯಿಸಬಹುದಾದರೂ, ವ್ಯಾಪಾರವ್ಯವಹಾರಗಳಲ್ಲಿಯೂ ಆರ್ಥಿಕ ಪರಿಸ್ಥಿತಿಯಲ್ಲಿಯೂ ತನಗೆ ನಿಕಟಸಂಬಂಧವಿದ್ದು ತನ್ನಿಂದ ಬರೀ ಕೆಲವು ಮೈಲುಗಳೊಳಗಿರುವ ನೆರೆಕರೆಯ ಜಿಲ್ಲೆಗಳು ಮತ್ತೊಂದು ಪ್ರಾಂತಕ್ಕೆ ಸೇರಿರುವವೆಂಬ ಕಾರಣದಿಂದ ಅವುಗಳೊಡನೆ ವ್ಯವಹಾರ ನಡೆಯಿಸಲವಕಾಶಕೊಡಕೂಡದೆಂಬುದು ತಿರುಳಿಲ್ಲದ ಸೂಚನೆ. ವಿಶೇಷತಃ ದಕ್ಷಿಣಕನ್ನಡ ಜಿಲ್ಲೆಯ ಬ್ಯಾಂಕುಗಳಿಗೆ ಇಂತಹ ಅಕ್ರಮವಿಧಿಯ ದುಷ್ಪರಿಣಾಮವು ತಟ್ಟುತ್ತದೆ. ಆ ಮಸೂದೆಯಲ್ಲಿ ಠೇವಣಾತಿಯ ಭದ್ರತೆಗೆ ಸಂಬಂಧಪಟ್ಟ ನಿಬಂಧನೆಗಳು ಎಷ್ಟರಮಟ್ಟಿಗೆ ಆ ಧ್ಯೇಯವನ್ನು ಸಾಧಿಸಲಾಪವು ಎಂಬುದು ಸಂದೇಹಾಸ್ಪದವಾದ ವಿಷಯ. ಹೀಗೆಯೇ ಆ ಮಸೂದೆಯು ಶಾಸನ ರೂಪಕ್ಕೆ ಬರುವ ಮುಂಚೆ ಪುನರ್ವಿಮರ್ಶಿಸಲ್ಪಡಬೇಕಾಗಿರುವ ನಿಬಂಧನೆಗಳು ಅದರಲ್ಲಿ ಹಲವು ಇವೆ. ಅವನ್ನೆಲ್ಲ ನಾನಿಲ್ಲಿ ಎತ್ತಿಕೊಳ್ಳುವುದಿಲ್ಲವಾದರೂ ಕೇಂದ್ರಸರಕಾರವು ತನ್ನ ವಿವೇಕ ಹಾಗೂ ಇಷ್ಟಾನುಸಾರ ರಿಜರ್ವ ಬ್ಯಾಂಕಿನ ಮೂಲಕ ಬ್ಯಾಂಕುಗಳ ಪರಿಶೋಧನೆಯನ್ನು ನಡೆಯಿಸಬಹುದೆಂಬ ನಿಬಂಧನೆಯನ್ನೆತ್ತಿ ಒಂದು ಮಾತು ಹೇಳಿ ಮುಂದುವರಿಯಬೇಕಾಗಿದೆ. ಬಹಳ ಹಿತಕಾರಿಯಾದ ನಿಬಂಧನೆಯೆಂದು ನಾನದನ್ನು ಸ್ವಾಗತಿಸುವೆನಾದರೂ ಈ ಪರಿಶೋಧನೆಯು ನಿಯತಕಾಲಿಕವಾಗಿ ಖಡ್ಡಾಯವಾಗಿರಬೇಕಾದುದು. ಕೇವಲ ಐಚ್ಛಿಕವಾಗಿರುವುದಕ್ಕೆ ನನ್ನ ಆಕ್ಷೇಪವಿದೆ. ಇಂತಹ ಐಚ್ಛಿಕ ಪರಿಶೋಧನೆಯೇ ಬ್ಯಾಂಕಿನ ವಿಷಯ ಸಂಶಯಕ್ಕೆಡೆಗೊಟ್ಟು ಅದರ ಕಡೆಗೆ ಗ್ರಾಹಕಲೋಕದಲ್ಲಿರುವ ವಿಶ್ವಾಸವನ್ನೇ ಕುಲುಕಿಸಿದಂತಾದೀತು. ಈ ಪರಿಶೋಧನೆಯ ಕಾರ್ಯವನ್ನು ಸಸೂತ್ರವಾಗಿ ನೆರವೇರಿಸಲಿಕ್ಕೆ ತಕ್ಕ ನೌಕರವರ್ಗವು ಈಗ ರಿಜರ್ವ ಬ್ಯಾಂಕಿಗಿಲ್ಲವೆಂಬುದನ್ನು ನಾನು ಒಪ್ಪುವೆನಾದರೂ ಎಗ್ರಿಕಲ್ಚರಲ್ ಕ್ರೆಡಿಟ್ ಡಿಪಾರ್ಟ್‌ಮೆಂಟಿಗಿಂತ ತೀರ ಭಿನ್ನವಾದೊಂದು ಖಾತೆಯನ್ನು ಏರ್ಪಡಿಸಿಕೊಂಡು ಪ್ರತಿಯೊಂದು ಬ್ಯಾಂಕನ್ನು ರಿಜರ್ವಬ್ಯಾಂಕಿನಿಂದ ನೇಮಿಸಲ್ಪಡುವ ಒಬ್ಬ ಲೆಕ್ಕಪರಿಶೋಧಕ(ಆಡಿಟರ್)ನಿಂದೊಡಗೂಡಿದ ಇಬ್ಬರು ಅಡಿಟರರು ವಾರ್ಷಿಕವಾಗಿ ಪರಿಶೋಧಿಸತಕ್ಕದೆಂದು ನಿಬಂಧನೆಯನ್ನು ಮಾಡುವುದು ಸೂಕ್ತವಾಗಿದೆ. ಇದಕ್ಕೆ ಬೇಕಾಗುವ ಬಹು ಸಂಖ್ಯಾಕರಾದ ಆಡಿಟರರುಗಳು ಕೂಡಲೇ ದೊರಕುವುದು ಅಸಾಧ್ಯವಾದರೆ ಎಕೌಂಟೆನ್ಸಿ ಮತ್ತು ಆಡಿಟಂಗ್ ವಿಷಯಗಳನ್ನು ಐಚ್ಛಿಕವಾಗಿ ಕಲಿತು ಅಂಗೀಕೃತವಾದ ವಿಶ್ವವಿದ್ಯಾಲಯದ ಬಿ. ಕೋಮ್. ಪದವಿಹೊಂದಿದವರಿಗೆ ಆಡಿಟರ್ ಸರ್ಟಿಫಿಕೇಟುಗಳನ್ನೇಕೆ ಕೊಟ್ಟು ಪೂರೈಸಿಕೊಳ್ಳಬಾರದೆಂಬುದಕ್ಕೆ ಕಾರಣ ತೋರುವುದಿಲ್ಲ. ಹೀಗಾಗುವುದಿಲ್ಲವಾದರೆ, ಎಲ್ಲ ಬ್ಯಾಂಕುಗಳ ಖಡ್ಡಾಯ ಪರಿಶೋಧನೆಯು ವ್ಯವಹಾರ್ಯವಾಗದಿದ್ದಲ್ಲಿ ಇಂಡಿಯನ್ ಜ್ಯೊಂಟ್ ಸ್ಟೋಕ್ ಬ್ಯಾಂಕಿಂಗ್ ಸಂಘಟಣೆಯಲ್ಲಿ ಅತಿಪ್ರಧಾನಾಂಗಗಳಾದ ಶೆಡ್ಯೂಲ್ಡ್ ಬ್ಯಾಂಕುಗಳ ಪರಿಶೋಧನೆಯನ್ನಾದರೂ ನಿಶ್ಚಯವಾಗಿಯೂ ಖಡ್ಡಾಯವಾಗಿ ಮಾಡಲಿಕ್ಕಾಗುತ್ತದೆ.

ಋಣ ಮಾರಿ ಸೋತು ಮುಳುಗಿದ ಬ್ಯಾಂಕುಗಳ ದ್ರವೀಕರಣವು ಸಸೂತ್ರವಾಗಿ ನೆರವೇರುವಂತೆ ವಿಸ್ತಾರವಾದ ನಿಬಂಧನೆಗಳು ಮಸೂದೆಯಲ್ಲಿವೆ. ಆದರೆ ಸಂಕಷ್ಟಕ್ಕೀಡಾದ ಬ್ಯಾಂಕುಗಳ ಪುನರುದ್ಧಾರದ ಕಡೆಗೆ ಏನೂ ಪರ್ಯಾಲೋಚನೆ ಕೊಟ್ಟಂತೆ ತೋರುವುದಿಲ್ಲ. ಬ್ಯಾಂಕಿಂಗ್ ವ್ಯವಹಾರ ಕ್ಷೇತ್ರದ ಕೇಂದ್ರ ಅಧಿಕಾರ ಶಕ್ತಿಯಾದ ರಿಜರ್ವ ಬ್ಯಾಂಕು ತನ್ನ ಸದಸ್ಯಬೇಂಕುಗಳಿಗೆ ಅವುಗಳ ಗಂಡಾಂತರ ಕಾಲದಲ್ಲಿ ಕೊಡಲಾಪ ಸಹಾಯದ ಪರಿಮಾಣವು ರಿಜರ್ವ ಬ್ಯಾಂಕ್ ಆಫ್ ಇಂಡಿಯಾ ಆಕ್ಟಿನ 17 (b) ಸೆಕ್ಶನಿನಿಂದ ಮಿತಗೊಳಿಸಲ್ಪಟ್ಟರೆ ಈ ದೇಶದ ಬ್ಯಾಂಕಿಂಗ್ ವ್ಯವಸ್ಥೆಯಲ್ಲಿ ಹಾನಿಕಾರಕವಾದೊಂದು ದೋಷವು ಇನ್ನು ಉಳಿದಂತಾಗುವುದು. ಬ್ಯಾಂಕುಗಳ ಮೇಲೆ ಇನ್ನು ಹೆಚ್ಚಿನ ನಿರ್ಬಂಧಗಳನ್ನು ಹೊರಿಸುವಾಗ ಮತ್ತು ಅವುಗಳ ಸೊತ್ತುಗಳ ವ್ಯಾಖ್ಯಾನವನ್ನು ಮಾಡುವಾಗ ಈ ಸೆಕ್ಶನಿನಲ್ಲಿ ಮತ್ತಷ್ಟು ತಿದ್ದುಪಡಿ ಮಾಡಿ ಬ್ಯಾಂಕುಗಳಿಗೆ ಬಿಕ್ಕಟ್ಟಿನ ಕಾಲದಲ್ಲಿ ವಿಶೇಷ ಪ್ರಯೋಜನಕಾರಿಯಾಗುವಂತಹ ಸಹಾಯವನ್ನೀಯಲಾಗುವಂತೆ ಅವಕಾಶ ವಿಸ್ತಾರಗೊಳಿಸುವುದೂ ಅವಶ್ಯವಿದೆ. ಕೇಂದ್ರ ಬೇಂಕಿಂಗ್ ಸಂಸ್ಥೆಯ ಈ ಉಪಕಾರ ಕೃತಿಯಿಂದ ಜನತೆಯಲ್ಲುಂಟಾಗುವ ವಿಶ್ವಾಸಕ್ಕಿಂತ ಹೆಚ್ಚಿನದನ್ನು ಮತ್ತಾವ ವ್ಯವಸ್ಥೆಯೂ ಮಾಡಲಾರದು.

ಇಂದು ನಾನು ಪ್ರಸ್ತಾಪಿಸಲು ಬಯಸುವ ಮತ್ತೊಂದು ವಿಷಯವೆಂದರೆ ಬ್ಯಾಂಕುಗಳ ಮೂಲಕ ಹಣರವಾನೆಗೆ ತೆರಬೇಕಾಗಿರುವ ವೆಚ್ಚವು ಈಗಿರುವಷ್ಟು ಹೆಚ್ಚಿನದ್ದಿರಬೇಕೇ ಎಂಬುದು. ರಿಜರ್ವಬ್ಯಾಂಕು ದೇಶದ ಒಂದು ಕಡೆಯಿಂದ

ಮತ್ತೊಂದು ಕಡೆಗೆ ಹಣವನ್ನು ರವಾನಿಸುವ ವೆಚ್ಚದ ದರವನ್ನು ಇನ್ನೂ ತಗ್ಗಿಸಬಹುದು. ಸಂಬಂಧಪಟ್ಟ ಅಧಿಕಾರಿಗಳು ಈ ವಿಷಯದಲ್ಲಿ ತಕ್ಕ ಪರ್ಯಾಲೋಚನೆ ಮಾಡಿಯಾರೆಂದೂ ಈಗಿರುವುದಕ್ಕಿಂತ ಅಗ್ಗದ ದರದಲ್ಲಿ ಹಣ ರವಾನೆಯಾಗುವ ಸೌಕರ್ಯ ದೊರೆಯುವಂತೆ ನಿಬಂಧನೆಗಳನ್ನು ಸೇರಿಸಿಯಾರೆಂದೂ ನಂಬುತ್ತೇನೆ.

ನಮಗಿಂದು ಅವಶ್ಯ ಬೇಕಾದುದೆಂದರೆ ಬ್ಯಾಂಕಿಂಗ್ ಇತಿಹಾಸವನ್ನು - ನಿರ್ದೋಷವಾಗಿ ಕಟ್ಟುತ್ತ ಬರುವುದೇ. ಏಕೆಂದರೆ ಕೊನೆಗೆ ಉತ್ಕೃಷ್ಟವಾದ ಬ್ಯಾಂಕಿಂಗ್ ಸೇವೆಯು ನೆಲೆಯಾಗುವುದು ಯೋಗ್ಯ ಬ್ಯಾಂಕರರುಗಳ ಪರಿಶ್ರಮದ ಫಲದಿಂದಲ್ಲದೆ ಒಳ್ಳೆಯ ಬ್ಯಾಂಕಿಂಗ್ ಕಾನೂನುಗಳಿಂದಲ್ಲ. ಬ್ಯಾಂಕುಗಳ ನೌಕರಿ ವರ್ಗಕ್ಕೆ ಬ್ಯಾಂಕಿಂಗ್ ನಿಯಮ ಪ್ರಯೋಗಗಳ ತಾತ್ವಿಕ ಹಾಗೂ ಪ್ರಯೋಗಿಕ ವಿಷಯುಗಳಲ್ಲಿ ತಕ್ಕ ಶಿಕ್ಷಣವು ಕೂಲಂಕಷವಾಗಿ ಬಹುಸಂಖ್ಯಾಕರಿಗೆ ದೊರಕುವ ಸೌಕರ್ಯಕ್ಕೆ ತಕ್ಕ ಅವಕಾಶವನ್ನು ಕಲ್ಪಿಸಿಕೊಟ್ಟು, ಬ್ಯಾಂಕಿಂಗ್ ಶಿಷ್ಟಾಚಾರದ ನೆಲಗಟ್ಟನ್ನು ಸ್ಥಿರವಾಗಿ ಹಾಕುವುದು ದೇಶದ ಬ್ಯಾಂಕಿಂಗ್ ಸಂಸ್ಥೆಗಳ ಕರ್ಣಧಾರಿಗಳಾದ ನಮ್ಮಲ್ಲಿ ಪ್ರತಿಯೊಬ್ಬರ ಕರ್ತವ್ಯವಾಗಿದೆ. ನಮ್ಮ ಬ್ಯಾಂಕಿನ ನೌಕರವರ್ಗಕ್ಕೆ ತಕ್ಕ ಶಿಕ್ಷಣ ದೊರಕುವ ಸೌಕರ್ಯದ ವಿಷ



ಯದಲ್ಲಿ ನಾವು ಈಗಾಗಲೇ ಬ್ಯಾಂಕಿಂಗ್ ತತ್ವಜೋ
ಕ್ಲಾಸುಗಳ ವ್ಯವಸ್ಥೆಮಾಡಿ ಎಕೆಡೆಮಿ ಆಫ್ ಜನರಲ್
ಕೇಶನಿನವರ ನೇತೃತ್ವದಲ್ಲಿ ಉಚಿತವಾಗಿ ಉಪನ್ಯಾಸಗ
ಕೊಡಿಸಿ, ಎಕೆಡೆಮಿಯ ಪರೀಕ್ಷೆಗೂ ಇಂಡಿಯನ್
ಟಿಟ್ಯೂಟ್ ಆಫ್ ಬ್ಯಾಂಕರ್ಸ್ ಇದರ ಪರೀಕ್ಷೆಗೂ ಸಿಲ್ಲ
ಪ್ರೋತ್ಸಾಹಿಸುತ್ತಲಿದ್ದೇವೆ.

ಕೊನೆಯದಾಗಿ, ದೇಶದ ಆರ್ಥಿಕ-ರಾಜಕೀಯ
ಗುತ್ತಿರುವ ಪರಿವರ್ತನದ ಸ್ಥಿತಿಗತಿಗಳ ಕುರಿತು ಪ್ರ
ಸಲು ಬಯಸುತ್ತೇನೆ. ವಿಶೇಷತಃ ಸ್ಟರ್ಲಿಂಗ್ ಸೆಕ್ಯುರ
ಮೇಲೆ 1943ನೇ ದಶಂಬರದಲ್ಲಿ ಚಲಾವಣೆಯಲ್ಲಿದ್ದ
ಕೋಟಿರೂಪಾಯಿ ಮೌಲ್ಯದ ನೋಟುಗಳು ಹೆಚ್ಚುತ್ತ 19
ಇಸವಿಯ ಅಂತ್ಯಕ್ಕೆ 1021·26 ಕೋಟಿರೂಪಾಯಿ ಮೌ
ಷ್ಟಾದ ವಿಷಯವು ಈ ಮೊದಲೇ ನಿಮಗೆ ತಿಳಿದಿರಬೇಕ
ಸ್ಟರ್ಲಿಂಗನ್ನು ಸಸೂತ್ರವಾಗಿ ದ್ರವೀಕರಿಸುವುದು ಹೆ
ಸಮಸ್ಯೆಯು ದೇಶದ ಮುಂದೆ ಅಸ್ಪಷ್ಟವಾಗಿಯೇ
ಯುದ್ಧವು ಮುಂದುವರಿವಷ್ಟು ಕಾಲ ಈ ನೋಟಿನ
ಳದ ಪರಿಸ್ಥಿತಿಯು ಛಲಗಟ್ಟಿ ನಿಂತೀತು. ಇದು ಅನಿವಾ
ವೆನಿಸಿದರೂ ಇದನ್ನು ನಮ್ಮ ಕೃತಿಗಳಿಂದ ಮತ್ತಷ್ಟು
ದಿರುವಂತೆ ಜಾಗರೂಕರಾಗಿರುವುದು ನಮ್ಮಲ್ಲಿ ಪ್ರತಿಯ
ನ್ನೈತಿಕ ಧರ್ಮವಾಗಿದೆ. ನಮ್ಮ ದೇಶದಲ್ಲಿ ಇನ್ನೂ
ಯೋಗಕ್ಕೆ ಮಾರ್ಪಡಿಸಿಕೊಳ್ಳದಿರುವ ವಿವಿಧ ಸ
ಮೂಲಗಳನ್ನು ನಾವು ವಿಚಾರಕ್ಕೆ ತಂದುಕೊಂಡು
ಕೃಷಿ ಕೈಗಾರಿಕೆ ಉದ್ಯಮಗಳ ಫಲದ ಮೊತ್ತವನ್ನು ಅ
ಅಭಿವೃದ್ಧಿಗೊಳಿಸಿ ಸಮತೋಲನೆ ತಪ್ಪದಂತೆ ನೋ
ಡರೆ ಚಲಾವಣೆಯಲ್ಲಿರುವ ನೋಟುಗಳನ್ನಾಗಲೀ
ಉಬ್ಬಳವನ್ನಾಗಲಿ ಕಂಡು ನಾವು ಗಾಬರಿಯಾಗಲು
ವಿಲ್ಲ. ನೋಟಿನ ಹೆಚ್ಚಳದಿಂದ ಹಾನಿ ತಟ್ಟದಂ
ಗಟ್ಟುವ ಹಲವು ಕಾರ್ಯಕ್ರಮಗಳನ್ನು ಸರಕಾರವು
ಸರಿಸುತ್ತದೆ. ಬಹಳ ಏರಿಕೆಯ ಆದಾಯ ತೆರಿಗೆಯ
ಣೆಯು ಈಗಾಗಲೇ ನಮ್ಮಲ್ಲಿದೆ. ಅದು ಇನ್ನೂ
ವಾದೀತೆಂದು ನಾನು ನಿರೀಕ್ಷಿಸುತ್ತೇನೆ.

ಮಹಿಳೆಯರೆ ಮತ್ತು ಮಹನೀಯರೆ, ನಾನು
ವಿಮರ್ಶೆಯ ಈ ಮಾತುಗಳನ್ನಾಡುತ್ತ ನಿಮ್ಮ ಸಮ
ಬಹಳ ಕಳೆದುದಾಯಿತು. ನಮ್ಮ ಬ್ಯಾಂಕಿನ ಪಾ
ರಾದ ನೀವೆಲ್ಲರೂ ನಮ್ಮ ನೌಕರಿ ವರ್ಗದವರೆಲ್ಲರೂ
ತರ ಪ್ರವರ್ಧಮಾನವಾಗುತ್ತಿರುವ ನಮ್ಮ ಗ್ರಾಹ
ಮವೂ ನಮ್ಮ ಈ ಸಂಸ್ಥೆಯು ಸ್ಥಿರವಾಗಿ ದೃಢವಾಗಿ
ಹೊಂದುವಂತೆ ಇತೋಪ್ಯತಿಶಯವಾದ ಸಹಕಾರವ
ಬೇಕೆಂಬ ವಿನಂತಿಯೊಡನೆ ಈ ಭಾಷಣವನ್ನು ಮು
ಗೊಳಿಸುವೆನು.

ಉತ್ಪಾದಕ—ದಿಗ್ದರ್ಶಕ

ಕಿಶೋರ ಸಾಹು

ಲೇಖಕ, ಚಿತ್ರಕಾರ, ನಟ, ದಿಗ್ದರ್ಶಕ, ಉತ್ಪಾದಕ—ಹೀಗೆ ಕಿಶೋರ್‌ಸಾಹುವು ವಿವಿಧ ಕಲೆಗಳಲ್ಲಿ ಸಿದ್ಧಹಸ್ತನು. ಅವನ ಎರಡು ಸುಂದರ ಕೃತಿಗಳಾದ 'ಕುಂವಾರಾ ಬಾಪ್' ಮತ್ತು 'ರಾಜಾ' ಇವು ಚಲಚ್ಚಿತ್ರಪ್ರೇಮಿಗಳ ಹೃದಯಗಳಲ್ಲಿ ಚಿರ ಸ್ಥಾಯಿಯಾದುವು. ಇಲ್ಲಿ, ಕಿಶೋರ್‌ಸಾಹುವಿನ ಜೀವನ ಚರಿತ್ರದ ಸಾರಾಂಶ ಕೊಟ್ಟಿರುವೆವು.



★

ಭಾರತೀಯ ಚಲಚ್ಚಿತ್ರ ಕೈಗಾರಿಕೆಯಲ್ಲಿ, ಸದ್ದಿಲ್ಲದೆ, ಆಡಂಬರವಿಲ್ಲದೆ, ಪ್ರಸಿದ್ಧಿಯ ಅಥವಾ ಸ್ವಪ್ರಶಂಸೆಯ ಆಸೆಯಿಲ್ಲದೆ, ಕೇವಲ ತನ್ನ ಕಾರ್ಯದಲ್ಲಿ ಮೌನವಾಗಿ ಮುಂದರಿವ ಓರ್ವ ಮಹನೀಯನು,–ತಾನು ಯತ್ನಿಸಿದರೂ ಸಾಧ್ಯವಾಗದೆ ಜನತೆಯ ಕಣ್ಣಲ್ಲಿ ಮಿನುಗುತ್ತ ಬಂದಿರುವನು. ಕಿಶೋರ್‌ಸಾಹು—ಇಂದು, ಚಲಚ್ಚಿತ್ರ ಕೈಗಾರಿಕೆಗೊಂದು ಭೂಷಣವಾಗಿದ್ದಾನೆ. ನಟನಾಗಿ ಎದ್ದು ದಿಗ್ದರ್ಶಕನಾಗಿ ಮೆರೆದು, ಉತ್ಪಾದಕನಾಗಿ ರಾರಾಜಿಸುತ್ತಿರುವನು. ಅವನನ್ನು ತೆರೆಯ ಮೇಲೆ ಕಂಡವರಲ್ಲಿ ಅನೇಕರು, ಬಹುಶಃ ಅವನ ಜೀವನಚರಿತ್ರವನ್ನು ತಿಳಿದಿಲ್ಲ.

ಕಿಶೋರ್‌ಸಾಹು, 1915ರಲ್ಲಿ ಸುಶಿಕ್ಷಿತ ಹಾಗೂ ಮಾನವಂತ ಕುಟುಂಬವೊಂದರಲ್ಲಿ, ಮಧ್ಯಪ್ರಾಂತದಲ್ಲಿ, ಜನಿಸಿದನು. ಅಜ್ಜನು ರಾಯುಗಡದ ದಿವಾನನಾಗಿದ್ದನು. ಕಿಶೋರನು ಅಜ್ಜನ ಬಳಿಯಲ್ಲೆ ಬಾಲ್ಯವನ್ನು ಕಳೆದನು.

ಕೇವಲ 20 ವರ್ಷ ಪ್ರಾಯದಲ್ಲಿ ಕಿಶೋರ್‌ಸಾಹುವು, ನಾಗಪುರದ ಮೋರಿಸ್‌ಕಾಲೇಜಿನಿಂದ ಗ್ರೇಜುವೇಟಾಗಿ ಹೊರಬಿದ್ದನು. ಶಾಲೆಯಲ್ಲಿರುವಾಗ ಬಹುವಿಧ ಚಟುವಟಿಕೆಯ ಯುವಕನೆನಿಸಿದ್ದನು; ಕ್ಲಾಸಿನಲ್ಲಿ ಚುರುಕುಬುದ್ಧಿಯವನು. ಸಾಹು, ಮೂರು ವಿಭಾಗದಲ್ಲಿ ಕಲಾಕಾರನೆನಿಸಿರುವನು. ಇಂಗ್ಲಿಷ್, ಪರ್ಸಿಯನ್, ಹಿಂದಿ ಮತ್ತು ಉರ್ದು ಈ ನಾಲ್ಕು ಭಾಷೆಗಳನ್ನು ಚೆನ್ನಾಗಿ ಬಲ್ಲನು; ಚಿತ್ರಲೇಖನ ಕಲೆಯಲ್ಲಿ ಪ್ರೌಢಹಸ್ತನು; ಹಿಂದಿಯಲ್ಲಿ ಸಣ್ಣ ಕಥೆಗಳನ್ನು ಬರೆದು ಹೆಸರುವಾಸಿಯಾದವನು.

ಸಾಹುವಿನ 'ಚಿತ್ರ ಜೀವನ'ವು, ಬೊಂಬೇ ಟೊಕಿಸಿನ 'ಜೀವನ ಪ್ರಭಾತ' ಚಿತ್ರದಿಂದಾರಂಭವಾಯಿತು. ಅಲ್ಲಿಂದ ಮುಂದೆ ತಾನೇ ಸ್ವತಃ ಮೆನೇಜಿಂಗ್ ಡೈರೆಕ್ಟರನಾಗಿರುವ ಇಂಡಿಯಾ ಆರ್ಟಿಸ್ಟ್ ಲಿಮಿಟೆಡ್ ಎಂಬ ಸಂಸ್ಥೆಯನ್ನು ಸ್ಥಾಪಿಸಿ, "ಬಹುರಾಣಿ" ಎಂಬ ತನ್ನ ಪ್ರಥಮ ಸ್ವತಂತ್ರ ಚಿತ್ರವನ್ನು ತಯಾರಿಸಿದನು. ಈ ಚಿತ್ರವು ಕಥಾದೃಷ್ಟಿಯಿಂದಲೂ ಕಲಾದೃಷ್ಟಿಯಿಂದಲೂ ಅಸಾಮಾನ್ಯವಾದುದೆಂದು, ಚಿತ್ರಪ್ರೇಮಿಗಳು ತಿಳಿದಿರುವರು. ಆ ಚಿತ್ರದಿಂದ ಕಿಶೋರ್‌ಸಾಹುವಿನ ಚಿತ್ರದಿಗ್ದರ್ಶನಶಕ್ತಿಯೆಂತಹುದೆಂದು ಲೋಕವು ತಿಳಿಯಿತು.

ಮುಂದೆ, 1942–1943ರಲ್ಲಿ, ಕಿಶೋರ್‌ಸಾಹುವು ತಯಾರಿಸಿದ ಎರಡು ಉತ್ಕೃಷ್ಟ ಚಿತ್ರಗಳು, ಆತನನ್ನು ಪ್ರಥಮ ಶ್ರೇಣಿಯ ಚಿತ್ರನಿರ್ಮಾತೃಗಳ ಇಯತ್ತೆಗೆ ತಂದುವು. "ಕುಂವಾರಾ ಬಾಪ್"—ಪ್ರಹಸನವೂ, "ರಾಜಾ" ಆದರ್ಶವಾದೀ ಚಿತ್ರವೂ ಎರಡು ಚಿತ್ರರತ್ನಗಳು. ಬಂಗಾಳ ಚಲಚ್ಚಿತ್ರ ಪತ್ರಿಕೋದ್ಯಮಿ ಸಂಘದವರು ಕಿಶೋರ್ ಸಾಹುವಿಗೆ ಸಂಭಾವನೆ ಸಲಿಸಿದರು.

ಭಾರತದಲ್ಲಿ, ಚಲಚ್ಚಿತ್ರ ಉದ್ಯಮದ ವಿವಿಧ ಅಂಗಗಳಲ್ಲಿ ಪರಿಜ್ಞಾನವುಳ್ಳ ಕೆಲವೇ ಮಂದಿಗಳೊಳಗೆ ಕಿಶೋರ್ ಸಾಹು ಒಬ್ಬನು; ಏಕಮಾತ್ರನೆನ್ನಲೂಬಹುದು. ಏಕೆಂದರೆ, ಕಥೆ, ಚಿತ್ರಕಥಾಲೇಖನ, ಸಂವಾದಗಳು, ಮೇಲ್ವಿಚಾರ, ದಿಗ್ದರ್ಶನ ಮತ್ತು ಉತ್ಪಾದನ ಇಷ್ಟು ಅಂಗಗಳಲ್ಲೂ ಪರಿಪೂರ್ಣರಾದವರು ಬಹುಶಃ ಯಾರೂ ಇರಲಾರರು.

ಮನೋಶಾಸ್ತ್ರವನ್ನರಿತ, ಮಾನವ ಸ್ವಭಾವದ ವೈವಿಧ್ಯಗಳನ್ನರಿತ, ಅನುಭವಿ ಲೇಖಕರು ವಿರಲ. ಕಿಶೋರ್‌ಸಾಹುವಿನ ಸಣ್ಣ ಕಥೆಗಳಲ್ಲಿ ಆಳವಾದ ಅನುಭವ, ಭಾಷಾ ಪ್ರೌಢಿಮೆ, ಕಥಾರಚನೆಯ ಸೌಂದರ್ಯ ಇವು, ಹಿಂದೀ ವಾಚಕರಿಂದ ಗುರುತಿಸಲ್ಪಟ್ಟಿವೆ. ಕಿಶೋರ್‌ಸಾಹುವಿನ ಪಾಂಡಿತ್ಯವು ಶಬ್ದಗಳ ಕಸರತ್ತಿನಲ್ಲಿ ಪ್ರದರ್ಶಿಸಲ್ಪಡುವುದಿಲ್ಲ; ಜನತೆಯ ಹೃದಯವನ್ನು ಸೂರೆಗೊಳ್ಳುವ ತಿಳಿಮಾತುಗಳಲ್ಲಿ ವ್ಯಕ್ತವಾಗುತ್ತಿದೆ. ಕಿಶೋರ್‌ಸಾಹುವಿನ ಸಣ್ಣ ಕಥೆಗಳಲ್ಲಿ

(150ನೇ ಪುಟಕ್ಕೆ ಮುಂದುವರಿದಿದೆ)

❁ ಕಿಶೋರನಿಗೆ ಕೆಲವು ಪ್ರಶ್ನೆಗಳು ❁

(ಮುಂಬಯಿಯ ನಮ್ಮ ಪ್ರತಿನಿಧಿಗಳು ಉತ್ಪಾದಕ–ದಿಗ್ದರ್ಶಕ ಕಿಶೋರ್ ಸಾಹುವನ್ನು ಕಂಡು, ಕೆಲವು ಮಹತ್ವದ ಪ್ರಶ್ನೆಗಳನ್ನು ಮುಂದೆ ಮಂಡಿಸಿದರು. ಆ ಪ್ರಶ್ನೆಗಳನ್ನೂ, ಕಿಶೋರ್ ಸಾಹು ಕೊಟ್ಟ ಉತ್ತರಗಳನ್ನೂ ಇಲ್ಲಿ ಕೊಡಲಾಗಿದೆ.)

ಅಂಧೇರಿಯಲ್ಲಿ, ರಮಣೀಕ ಪ್ರೊಡಕ್ಷನಿನವರ ಮೋಹನ ಸ್ಟುಡಿಯೋದಲ್ಲಿ, ಮಾವಿನ ಮರಗಳಡಿ ತಂಪಾದ ನೆಳಲಲ್ಲಿ ತನ್ನ ಚಿಕ್ಕ ಚೊಕ್ಕ ಕಚೇರಿಯಲ್ಲಿ ಕಿಶೋರ್ ಸಾಹು, 'ವೀರಕುನಾಲ'ನ ಚಿಂತನೆಯಲ್ಲಿ ತೊಡಗಿದ್ದಾಗ, ನಾನು ಅವರ ಸಮಾಧಿ ಭಂಗಮಾಡಿದೆ. ಕಿಶೋರ್‌ಸಾಹು, ಕುನಾಲನ ಬಗ್ಗೆ ತಯಾರಿಸಿದ್ದೊಂದು ಕಿರೀಟವನ್ನು ಕೈಯಲ್ಲಿ ಹಿಡಿದು, ಅದರ ರಚನೆಯ ಪರೀಕ್ಷೆಯಲ್ಲಿದ್ದರು. ವಯಸ್ಸು ನಲವತ್ತು ದಾಟಿದರೂ ನಲವನ್ನು ಇಪ್ಪತ್ತರ ಹುರುಪಿನಲ್ಲೆ ಇರಿಸಿ, ಚಲಚ್ಚಿತ್ರ ಜಗತ್ತಿನಿಂದ ವಿರಾಮ ಹೊಂದಲು ತಿರಸ್ಕರಿಸುವ ದುರ್ಗಾ ಖೋಟೆ, 'ಅಮರಜ್ಯೋತಿ'ಯ ಸೌದಾಮಿನಿಯ ಮುಖ ಮುದ್ರೆಯನ್ನೂ ಬದಲಾಯಿಸದೆ, — ಕಿಶೋರ್ ಸಾಹುವಿನೊಡನೆ ಆಗಲೇ 'ವೀರಕುನಾಲ' ಚಿತ್ರ ಸಂಬಂಧವಾದ ವಿಚಾರವಿನಿಮಯವನ್ನು ಮುಗಿಸಿ, ಹೊರಟಳು. ಕಿಶೋರ್ ಸಾಹು, ಬಹುಶಃ, ನನ್ನ ಆಗಮನಕ್ಕೆ ಸಿದ್ಧರಾಗಿರಲಿಲ್ಲ. ಆದರೂ, ನನ್ನ ಅವಸರವನ್ನು ತಿಳಿದು, ತನ್ನ ಕಾರ್ಯವನ್ನು ಅಲ್ಲೆ ಬಿಟ್ಟು ನನ್ನನ್ನು ಸ್ವಾಗತೀಕರಿಸಿ, ನನಗಾಗಿ ಕೊಂಚ ಸಮಯವನ್ನು ಕೊಡಲು ಸಿದ್ಧರಾದರು.

"ತಮ್ಮ ಅಮೌಲ್ಯ ಸಮಯ; ತೊಂದರೆ ಕೊಡುತಿದ್ದೇನೆ" ಎಂದೆ.

ನಗುತ್ತ, ಕಿಶೋರ್‌ಸಾಹು, "ದಿನದ ಇಪ್ಪತ್ತು ನಾಲ್ಕು ತಾಸುಗಳೂ ಅಮೂಲ್ಯ ಇರುತ್ತವೆ. ಆದರೆ, ಯಾವುದಕ್ಕೆ ಎಷ್ಟು ಸಮಯ ಕೊಡಬೇಕಾಗಿದೆಯೋ ಆದನ್ನು ಕೊಡಲೇಬೇಕಷ್ಟೆ?" ಎಂದರು.

ಎಂಥ ಕ್ಷೀಣ ಸ್ವರ! ಆದರೆ, ಅದರಲ್ಲೊಂದು ಮಾಧುರ್ಯವಿತ್ತು. ಅದು ಸ್ತ್ರೀಕಂಠದ ಕೋಮಲತೆಯಲ್ಲ— ಶಾಂತವಾತಾವರಣದಲ್ಲಿ ಬೆಳೆದು ಬಂದ ಮಮತೆಯ ಮುದ್ದು ಬಾಲಕನ ಕಂಠದಂತೆ. ತೆರೆಯ ಮೇಲೆ ಈ ಸ್ವರವು ನನಗೆ ಕೊಂಚ ಕರ್ಕಶವಾಗಿ ಕೇಳಿಸಿತ್ತು. ಇಲ್ಲಿ ತೀರ ಬೇರೊಬ್ಬ ಕಿಶೋರನಿರುವನು. ಗೌರಾಂಗ ತುಂಬಿದ ಗಲ್ಲಗಳು. ಆಳವಾದ ಚಿಂತನೆಯಲ್ಲಿರುವ ನೇತ್ರಗಳು. ವಿಶಾಲ ಹಣೆ. ಕಿಶೋರ್ ಸಾಹುವು ನನಗೆ, ತೆರೆಯ ಮೇಲೆ ನೋಡಿ ಉಂಟಾದ ಭಾವನೆಗಿಂತ ಈಗ ಭಿನ್ನವಾದ ಮತ್ತೊಂದು ಭಾವನೆ ಕೊಟ್ಟನು.

ಕಿಶೋರ್ ಸಾಹುವಿನ ಕಾರ್ಯಬಾಹುಳ್ಯ
ಮೊದಲೇ ಅರಿತ ನಾನು, ಅವರನ್ನು ಹೆಚ್ಚುಕಾಲ ಸಂಭ
ಯಲ್ಲಿರಿಸುವ ಇಚ್ಛೆಯಿಲ್ಲದೆ, "ಈ ಕೆಲವು ವಿಷಯಗ
ತಮ್ಮ ಅಭಿಪ್ರಾಯ ಕೇಳಬೇಕೆಂದು ಇಚ್ಛೆಯಿದೆ"–ಎ
ನೇರಾಗಿ, ನನ್ನ ಪ್ರಶ್ನೆಗಳನ್ನು ಅವರ ಮುಂದಿಟ್ಟೆ. ಕಿಶ
ಸಾಹು, ಹೆಚ್ಚು ಆಲೋಚಿಸುವ ಅವಶ್ಯವಿಲ್ಲದೆ, ಕು
ಉತ್ತರವಿತ್ತರು. ಅದನ್ನಿಲ್ಲಿ ಸಂಗ್ರಹಿಸಿ, ಕೊಟ್ಟಿರುವೆ

ಪ್ರಶ್ನೆ: 'ವೀರಕುನಾಲ್' ತಮ್ಮ ಪ್ರಥಮ ಐತಿ
ಚಿತ್ರವೇ?

ಉತ್ತರ: ಅಹುದು.

ಪ್ರಶ್ನೆ: ಐತಿಹಾಸಿಕ ಕಥೆಗಳು ಮತ್ತು ಸಾಮಾ
ಇವೆರಡರಲ್ಲಿ ಇಂದಿನ ಭಾರತಕ್ಕೆ ಯಾವುದು ಅತ್ಯಾವಶ್ಯ

ಉತ್ತರ: ಹಿಂದೂದೇಶಕ್ಕೆ ಒಳ್ಳೇ ಕಥೆಗಳೇ
ಅವು ಐತಿಹಾಸಿಕವಿರಲಿ ಸಾಮಾಜಿಕವಿರಲಿ, ಜನ
ಎರಡೂ ಅವಶ್ಯ ಇರುತ್ತವೆ. ಭಾರತದ ಮಹಾ ಪುರ
ಯೋದ್ಧರು, ತತ್ವಜ್ಞಾನಿಗಳು, ಸಮಾಜ ಧುರೀಣರು,
ಮೇಲೆ ಪರಿಣಾಮಕಾರಿಯಾಗಿ ಚಿತ್ರಿಸಲ್ಪಡಬೇಕು.

ಪ್ರಶ್ನೆ: "ರಾಜಾ" ಒಂದು ಉತ್ಕೃಷ್ಟ ಕಥೆ:
ರೀತಿಯಲ್ಲಿ ಚಿತ್ರಿತವಾಯಿತು. ತಾವು ಮುಂದೆ
ಕಥೆಗಳನ್ನೇಕೆ ತರುವ ಚಿಂತನೆಯಲ್ಲಿಲ್ಲ? (152ನೇ ಪುಟ

(149ನೇ ಪುಟದಿಂದ ಮುಂದರಿದುದು.)

'ಪುಷ್ಪಾ', 'ಪ್ರೊಫೆಸರ್' ಮತ್ತು 'ಅಬ್ದುಲ್'— ಈ ವ
ಕಥಾರತ್ನಗಳೆಂದು ವಿಮರ್ಶಕರಿಂದ ಹೊಗಳಲ್ಪ
ಸುಂದರ ವ್ಯಂಗ್ಯದಲ್ಲಿ ಕಿಶೋರ್‌ಸಾಹು ಸಿದ್ಧಹಸ್ತನು.

ಕಿಶೋರ್‌ಸಾಹು ಇಂದು, ಬಹುವ್ಯಯದ ಪೋ
ಚಿತ್ರ —"ವೀರ್ ಕುನಾಲ್" ತಯಾರಿಯಲ್ಲಿ ತೊಡಗಿರ
ಮೌರ್ಯ ರಾಜವಂಶದವನೊಬ್ಬನ ಚರಿತ್ರವಿದು. ಕಿಶ
ಸಾಹುವು ಸ್ವತಃ ಬರೆದು, ದಿಗ್ದರ್ಶಿಸುವನು; ಅಭಿನ
ತ್ತಿರುವನು. "ವೀರ ಕುನಾಲ್" ಚಿತ್ರದ ದೃಶ
ಪೋಷಾಕುಗಳು, ತಾರಾಗಣ — ಇವುಗಳಿಗೂ ಮ
ಸುಶಿಕ್ಷಿತ ಹಾಗು ಅನುಭವಿ ಕಿಶೋರ್ ಸಾಹುವಿನ
ನಯ ಮತ್ತು ದಿಗ್ದರ್ಶನ – ಇದರಿಂದ ಈ ಚಿತ್ರವು ಈ
ಷದ ಉತ್ತಮ ಚಿತ್ರವಾಗುವುದಾಗಿ ಭರವಸೆಯಿಂದ
ಬಹುದು.

ಉತ್ತರ: ನಾನು ಯಾವಾಗಲೂ, ಮೊದಲಿನ ಚಿತ್ರಗಳಿಗಿಂತ ಉತ್ಕೃಷ್ಟವಾದುವುಗಳನ್ನೆ ತಯಾರಿಸಬೇಕೆಂದಿದ್ದೇನೆ.

ಪ್ರಶ್ನೆ: 1943ರಿಂದ 1944ಕ್ಕೆ, ಹಿಂದೀ ಚಲಚ್ಚಿತ್ರಗಳು ಪ್ರಗತಿ ಹೊಂದುವ ಬದಲು ಅವನತಿ ಹೊಂದಿವೆ. ಇದು ಅಹುದಾದರೆ, ಕಾರಣವೇನು? ಈ ಶೋಚನೀಯ ಸ್ಥಿತಿಯನ್ನು ಸುಧಾರಿಸಲು ತಾವು ಯಾವ ಚಿಕಿತ್ಸೆಯನ್ನು ಸೂಚಿಸುವಿರಿ?

ಉತ್ತರ: 1943ರಿಂದ ಅನ್ನುವುದಕ್ಕಿಂತ 1942 ಅಥವಾ ಅದಕ್ಕೂ ಮುಂಚಿತವಾಗಿ ನಮ್ಮ ಚಿತ್ರಗಳ ಮಟ್ಟವು ಇಳಿಮುಖವಾಗಿದೆಯೆನ್ನಬೇಕು. ಕೆಲವೇ ಚಿತ್ರಗಳು ಮಾತ್ರ ಉತ್ಕೃಷ್ಟವಾಗಿ ತಯಾರಾದುವು. 'ರಜತೋತ್ಸವ' ಮರುಳು ನಮ್ಮ ಚಿತ್ರ ನಿರ್ಮಾತೃಗಳಲ್ಲಿ ಹರಡುತ್ತಿರುವುದೂ, ಕಲೆಗಿಂತ ಧನದ ಹುಚ್ಚು ವಿಪರೀತವಾಗಿರುವುದೂ ಮುಖ್ಯ ಕಾರಣವಾಗಿದೆ. ಕೀಳ್ತರಗತಿಯ—ಸಾಮಾನ್ಯ ಸ್ಟುಡಿಯೋ ಚಮತ್ಕಾರಗಳೂ ಚಿತ್ರದ ಇಯತ್ತೆಯನ್ನು ಕೆಳಗಿಳಿಸುವುವು.

ಪ್ರಶ್ನೆ: ಭಾರತೀಯ ಚಲಚ್ಚಿತ್ರ ಕೈಗಾರಿಕೆಯು ಕಲೆಯಲ್ಲಿ ಪೂರ್ಣತ್ವ ಹೊಂದುವ ಮುಂಚಿತವಾಗಿಯೇ ನಮ್ಮ ಚಿತ್ರಗಳ ಆಂಗ್ಲ ಪ್ರತಿಗಳನ್ನು ತೆಗೆಸಿ ಹೊರಕಳುಹುವುದು ಸರಿಯೆನಿಸುತ್ತದೆಯೇ?

ಉತ್ತರ: ಸರ್ವಥಾ ಕೂಡದು. ಅಂತಹ ಅವಸರದಿಂದ ಭಾರತೀಯ ಚಲಚ್ಚಿತ್ರ ಕೈಗಾರಿಕೆಯ ಶೈಶವಾವಸ್ಥೆಯನ್ನು ನಾವು, ಇತರರ ಮೇಲೆ ಬಲಾತ್ಕಾರದಿಂದೆಂಬಂತೆ ಹೇರಿಸಿ ತೋರಿಸಿದಂತಾಗುವುದು. ನಮಗದು ಭೂಷಣವೂ ಅಲ್ಲ; ಧನದೃಷ್ಟಿಯಲ್ಲಿಯೂ ನಾವು ಗೆಲ್ಲಲಾರೆವು. "ರಾಜಾ"ದಂತಹ ಚಿತ್ರಗಳನ್ನು—ಸ್ವಪ್ರಶಂಸೆಯೆಂದು ತಾವು ತಿಳಕೊಳ್ಳಲಾಗದು!—ಯತ್ನಿಸಬಹುದು. (ಇಲ್ಲಿ ಕಿಶೋರ್ ಸಾಹು, "ರಾಜಾ" ಚಿತ್ರದ ಆಂಗ್ಲಕರಣಕ್ಕೆ ತನಗೆ ಹೊಲಿವುಡ್ಡಿನಿಂದ ಕರೆ ಬಂದಿರುವುದಾಗಿ ತಿಳಿಸಿದರು; ಬಂಗಾಳ ಚಲಚ್ಚಿತ್ರ ಸಂಘದವರು ಈ ಚಿತ್ರವು 1943ನೇ ಉತ್ಕೃಷ್ಟ ಚಿತ್ರವೆಂದು ತೀರ್ಮಾನಿಸಿರುವರು.)

ಪ್ರಶ್ನೆ: ಹಿಂದಿಯಲ್ಲಿ ಒಳ್ಳೇ ಪ್ರಹಸನಗಳಿವೆಯೆ? ಹಿಂದೂದೇಶಕ್ಕೆ ಹೆಚ್ಚಾಗಿ ಪ್ರಹಸನಗಳು ಬೇಕೆ ಅಥವಾ ಗಂಭೀರ ವಿಷಯಗಳೆ?

ಉತ್ತರ: ನಾವು, ಕೆಲವು ಒಳ್ಳೇ ಪ್ರಹಸನಗಳನ್ನು ತಯಾರಿಸಬಹುದೆನಿಸುತ್ತದೆ "ಕುಂವಾರಾ ಬಾಪ್" ಚಿತ್ರದಂತಹ ಪ್ರಹಸನಗಳು ದೇಶಕ್ಕೆ ಮೆಚ್ಚುಗೆಯಾಗುವುವು. "ಕುಂವಾರಾ ಬಾಪ್" ಚಿತ್ರದ ನಂತರವೇ ಹಿಂದಿಯಲ್ಲಿ ಪ್ರಹಸನಗಳು ಹೆಚ್ಚೆಚ್ಚು ಬರಲಾರಂಭಿಸಿದುವು. ಆದರೆ, ಉತ್ಕೃಷ್ಟ ಪ್ರಹಸನಗಳೇ ನಮಗೆ ಬೇಕು. ದಣಿದ ಮನಸ್ಸಿಗೆ ಪ್ರಹಸನಗಳು ಬೇಕು; ಹಸಿದ ಮನಸ್ಸುಗಳಿಗೆ ಗಂಭೀರ ವಿಷಯಗಳು ಅವಶ್ಯ.

ಪ್ರಶ್ನೆ: ಹಿಂದೀ ಚಿತ್ರಗಳಲ್ಲಿ ಹೊಸ ಹೊಸ ನ[...]ರನ್ನು ಅಧಿಕ ಸಂಖ್ಯೆಯಲ್ಲಿ ತರುವುದಿಲ್ಲವೇಕೆ? ಚಿತ್ರ ನಿ[...]ತೃಗಳು ಹೊಸಬರನ್ನು ತಂದು ಪ್ರದರ್ಶಿಸುವ ಪ್ರ[...] ಮಾಡಲು ಅಂಜುವರೇ? ಅಹುದಾದರೆ, ಚಿತ್ರ ಸಂಸ್ಥೆಗಳ[...] ನಮ್ಮ ದಿಗ್ದರ್ಶಕರ ನಟೀನಟ ರಚನಾ ಸಾಮರ್ಥ್ಯದ [...] ವಿಶ್ವಾಸವಿಲ್ಲವೆಂದು ಹೇಳಬಹುದಲ್ಲವೆ?

ಉತ್ತರ: ಅದು ಉತ್ಪಾದಕ—ದಿಗ್ದರ್ಶಕರ [...] ಎಲ್ಲರಿಗೆ ನಟರಚನಾ ಸಾಮರ್ಥ್ಯವಿಲ್ಲ. ಮೊದಲ[...] ಶ್ರಮಿಸಿದುದರಿಂದ ಹೆಸರು ಪಡೆದ ನಟೀ ನಟರು, [...] ಪ್ರಧಾನವಾಗಿರುವವರಿಂದ ಆಹ್ವಾನಿಸಲ್ಪಡುವರು. [...] ಹೊಸ ಕಥೆಗಳನ್ನು, ಹೊಸ ನಟೀ ನಟರನ್ನೇ—ಕೇಳ[...] ಆದರೆ, ಇಂದಿನ ದಿನದಲ್ಲಿ 'ತಾರಾಮೌಲ್ಯ' ಮಾತ್ರ ಗ[...]ಡುತ್ತಿದೆ. ಹೊಸ ತಾರೆಗಳು ಮೂಡಿಬರಲೇ ಬೇಕು.

ಪ್ರಶ್ನೆ: ನಮ್ಮ ಮೇಲೆ, ಇತ್ತೀಚೆಗೆ ಪಂಜಾಬಿ[...]ಗಳ ದಾಳಿಯಾಗುತ್ತಿದೆ. ಈ ಅನುಕರಣೆಯನ್ನು [...]ರೆಂದೂ, ಹೊಸ ಹೊಸ ರಾಗಗಳನ್ನು ಕೊಡಿರೆಂದೂ [...]ಸುವುದು ಅವಶ್ಯವಷ್ಟೆ?

ಉತ್ತರ: ಮಿತಿಮೀರದಿದ್ದರೆ ಪ್ರತಿಯೊಂದೂ [...]ವಾಗಿರುವುದು. ಸಂಗೀತ ವೈಖರಿಯನ್ನು ಬದಲ[...] ಬೇಕಾದುದು ಅವಶ್ಯವಿದೆ.

ಪ್ರಶ್ನೆ: ಮುಂಬಯಿಯ ಅಥವಾ ಉತ್ತರ ಭಾ[...] ಚಿತ್ರ ನಿರ್ಮಾತೃಗಳು ದಕ್ಷಿಣ ಭಾರತದ ನಟೀನ[...] ಒಮ್ಮೆ ಯತ್ನಿಸಿ ನೋಡುವುದಿಲ್ಲವೇಕೆ?

ಉತ್ತರ: ಏಕೆಂದು ನನಗರಿಯದು. ನನ್ನ[...] ಯಾವ ದಕ್ಷಿಣ ಭಾರತದ ನಟೀನಟರೂ ಬಂದಿಲ್ಲ; [...] ಒಳ್ಳೇ ಹಿಂದೀಜ್ಞಾನ ಹಾಗೂ ಉಚ್ಚಾರ ತಿಳಿ[...] ಯೋಗ್ಯರಾದವರನ್ನು ನೇಮಿಸಲು ನಾನು ಸಿದ್ಧನಿದ್ದೆ[...]


ಪ್ರಶ್ನೆ: ರಂಗಭೂಮಿಯ ಅವನತಿಗೆ ರಜ[...]ಯೊಂದೇ ಕಾರಣವೆಂದು ತಮ್ಮ ಅಭಿಪ್ರಾಯವೇ?

ಉತ್ತರ: ಒಂದು ವಿಧದಲ್ಲಿ ಅಹುದು. ಏ[...] ಚಲಚ್ಚಿತ್ರ ಕಲೆಯು ವೃದ್ಧಿ ಹೊಂದುತ್ತಿರುವಾಗ, ರ[...]ಮಿಯ ಯಾವತ್ತು ವಿಷಯಗಳೂ ನಿಂತಲ್ಲೆ ನಿಂತವು; [...]ತುವು. ಜನತೆ ಜೀವನದ ಪ್ರತಿಬಿಂಬದಂತಿರುವ ಕಥೆ[...] ಅವುಗಳ ಕಲಾಪೂರ್ಣ ಪ್ರಯೋಗವನ್ನೂ ಕೇಳ[...] ಇಂಗ್ಲೆಂಡಿನಲ್ಲಿ ರಂಗಭೂಮಿಯು ಪ್ರಗತಿಹೊಂದಿದೆ; [...] ಶೇಕ್ಸ್‌ಪಿಯರನ ರಂಗಭೂಮಿ ಮಾತ್ರ ಅಳಿದುಹೆ[...] ಆಧುನಿಕ ನಾಟಕಕಾರರಾದ ನೊಯೆಲ್ ಕೊವ[...] ಜೋನ್ ಡ್ರಿಂಕ್ ವಾಟರ್ ಇವರೆಲ್ಲ ಪ್ರಗತಿಪರ [...]ಗಳನ್ನು ಬರೆದಿರುವರು.

(155ನೇ ಪುಟಕ್ಕೆ ಮುಂದುವರಿದಿದೆ)

...ಚತುರ ದಿಗ್ದರ್ಶಕ ಎಸ್. ಎಫ್. ಹಸ್ನೈನ್, ಬಿ.ಎ.

...ಮ್ಲಿ ಬ್ರದರ್ಸ್‌ರವರ ಪ್ರಖ್ಯಾತ ಚಿತ್ರಗಳೆಲ್ಲ ಹಸ್ನೈನ್‌ರವರ ಕೃತಿಗಳು. 'ಕೈದಿ', 'ಮಾಸೂಮ್' ಮತ್ತು 'ಫೆಶನ್' ಈ ಮೂರು ಚಿತ್ರಗಳ ಕಥೆಗಳನ್ನು ಲಿಖಿಸಿ, ಅವುಗಳಿಗೊಪ್ಪುವ ಪಾತ್ರಧಾರಿಗಳನ್ನಾರಿಸಿ ದಿಗ್ದರ್ಶಿಸಿ ಹಸ್ನೈನ್‌ರವರು ಭಾರತೀಯ ಚಲಚ್ಚಿತ್ರ ಪ್ರಪಂಚದಲ್ಲಿ ಉಚ್ಚ ಸ್ಥಾನವನ್ನು ರಚಿಸಿಕೊಂಡಿರುವರು.



ದಿಗ್ದರ್ಶಕ ಎಸ್. ಎಫ್. ಹಸ್ನೈನ್, ಬಿ. ಎ. ಇವರು, ...ಯುಕ್ತ ಪ್ರಾಂತ್ಯದ ಒಂದು ಗೌರವಾನ್ವಿತ ಮುಸ್ಲಿಂ ...ಸೆತನದವರು. ಇವರ ತಂದೆ 'ಖಾನ್‌ಬಹದ್ದೂರ್' ಬಿರು...ಂಕಿತರು; ಆ ಪ್ರಾಂತ್ಯದ ಓರ್ವ ಮೆಜಿಸ್ಟ್ರೇಟರು. ಹಸ್ನೈ...ರವರ ಸಮೀಪದ ಬಂಧುಬಳಗದವರೆಲ್ಲ, ಒಂದಲ್ಲ ಒಂದು ಸರಕಾರೀ ಹುದ್ದೆಯಲ್ಲಿದ್ದು, ವರ್ಚಸ್ಸುಳ್ಳವರಾಗಿರುವರು. ಇವರ ಹಿರೇಯಣ್ಣನು ಐ. ಸಿ. ಎಸ್. ಪದವೀಧರ; ಕಮಿಶನರ್ ಪದವಿಯಲ್ಲಿರುವರು.

ಹೀಗೆ ತನ್ನವರೆಲ್ಲ ಸರಕಾರೀ ಹುದ್ದೆಗಳಲ್ಲಿರುವರಾದರೂ, ಹಸ್ನೈನ್‌ರವರು ಅವರನ್ನನುಸರಿಸಲಿಚ್ಛಿಸಲಿಲ್ಲ. ಚಿಕ್ಕ ಪ್ರಾಯದಿಂದಲೂ ಸ್ವತಂತ್ರ ಮನೋವೃತ್ತಿ ಹಾಗೂ ಚಿತ್ರಕಲೆಯ ಕಡೆಗಿರುವ ಅಭಿರುಚಿ— ಇವು, ಅವರನ್ನು ತರುಣ ಪ್ರಾಯದಲ್ಲಿ ತೆರೆಯ ಕಡೆಗೆ ಸೆಳೆದುವು. ಅಲ್ಲಹಾಬಾದ್ ವಿಶ್ವವಿದ್ಯಾಲಯದಲ್ಲಿ ಗ್ರೇಜುವೇಟ್ ಆಗಿ ಹಸ್ನೈನ್‌ರವರು, ಮುಂದೇನು ಎಂಬ ಚಿಂತನೆಗೆ ತೊಡಗದೆ, ಬಹು ಕಾಲದಿಂದ ತನ್ನಲ್ಲಿ ಹುದುಗಿದ್ದ ಆ ವೊಂದು ಆಸೆಯ ಪೂರೈಕೆಗಾಗಿ–ನೇರಾಗಿ ಚಲಚ್ಚಿತ್ರ ಕೈಗಾರಿಕೆಯನ್ನು ಪ್ರವೇಶಿಸಿದರು.

ಅವರ ಪ್ರಥಮ ಚಿತ್ರ "ಕೈದಿ,"– ಚಲಚ್ಚಿತ್ರ ಪ್ರೇಮಿಗಳ ಲಕ್ಷ್ಯವನ್ನು ಸೆಳೆಯಿತು: ಅದನ್ನನುಸರಿಸಿ "ಮಾಸೂಮ್" ಬಂತು. ಅನಂತರ ಹಸ್ನೈನ್‌ರವರು, ಮತ್ತೂ ಹಿರಿದಾದ ಆ ಚಿತ್ರ —"ಫೆಶನ್" ಇದನ್ನು ಜನತೆಗೊಪ್ಪಿಸಿದರು.

ಖಾಸಗಿ ಜೀವನದಲ್ಲೂ ಹಸ್ನೈನ್‌ರವರು ದಯಾಭಾವವುಳ್ಳ, ವಿನಯ ಮೂರ್ತಿ. ಬಾಲ್ಯದಿಂದ ಶ್ರೀಮಂತರಾದರೂ, ತಮ್ಮ ಜೀವನದಲ್ಲಿ ಸರಳತೆಯಿದ್ದವರು. ಮಾನಸಿಕ ಶ್ರೇಷ್ಟತೆಯ ಅರಿವುಳ್ಳವರಾದರೂ, ಅನುಚಿತವಾದ, ಆಡಂಬರದ ದರ್ಪವುಳ್ಳವರಲ್ಲ. "ಸೋಗಿ"ನ ಚಿತ್ರಗಳನ್ನು ದಿಗ್ದರ್ಶಿಸುವ ಇವರಲ್ಲಿ ಸ್ವತಃ 'ಸೋಗು' ಇಲ್ಲ. ಇದ್ದುದನ್ನು ಇದ್ದಂತೇ ಆಡಿಬಿಡುವರು.

ಹಿಂದೂದೇಶದ ಚಲಚ್ಚಿತ್ರೋದ್ಯಮವು ಮೇಲ್ಪಟ್ಟಕ್ಕೇರಬೇಕೆಂಬ ಹಿರಿಯಾಸೆಯೊಂದು ಅವರಲ್ಲಿದೆ. ಅವರಿಗೆ ಧನಪ


ಕಡೆಗೆ ದೃಷ್ಟಿಯಿಲ್ಲ. ಕಲೆಗಾಗಿ ಏನನ್ನೂ ತ್ಯಾಗಮಾಡಲು ಸಿದ್ಧರಿರುವರು. ಈ ಬಗೆಯ ಉಚ್ಚ ಧ್ಯೇಯವುಳ್ಳ ದಿಗ್ದರ್ಶಕರು ಭಾರತದಲ್ಲಿ ಕೇವಲ ಬೆರಳೆಣಿಕೆಗೆ ಬರುವವರು.

ಹಸ್ನೈನ್‌ರವರ ಧಾರ್ಮಿಕ ಮನೋವೃತ್ತಿಯು ಸಂಕುಚಿತವಲ್ಲ. ಅವರ ಆಚಾರವಿಚಾರಗಳು, ಜ್ಞಾನದ ಮನೋಫಲವಾಗಿವೆ.

ಕುಟುಂಬ ಪ್ರೇಮವನ್ನು ಹಸ್ನೈನ್‌ರವರಿಂದ ಕಲಿಯಬೇಕು. ಸುಮಾರು ಐವತ್ತಕ್ಕೆ ಕಡಿಮೆಯಾಗದಷ್ಟು ಮಂದಿಯಿರುವ ಮಹಾಕುಟುಂಬದ ಪೋಷಣೆಯ ಭಾರ ಇವರ ಮೇಲಿದೆ. ಇದಲ್ಲದೆ, ಅನ್ನಕ್ಕಾಗಿ ಇವರ ಮೇಲೆ ಹೊಂದಿಕೊಂಡಿರುವ ಇತರ ಜನರೂ ಎಷ್ಟೋ ಮಂದಿ! ತಾನು ಅನ್ನದಾನಿ ಎಂಬುದನ್ನು ಅವರರಿಯರು. ಕರ್ತವ್ಯವೆಂದೋ ಧರ್ಮವೆಂದೋ ತನ್ನದನ್ನು ಹಂಚಿ ತಿನ್ನುವರು.

ಹಸ್ನೈನ್‌ರವರು ಆಶಾವಾದಿ. ಸ್ವಭಾವದಲ್ಲಿ ಶಾಂತರು. ಗದ್ದಲದ ಜೀವನವನ್ನು ಮೆಚ್ಚುವುದಿಲ್ಲ. ಆದರೆ, ಸದಾ ಹಸನ್ಮುಖಿಗಳು; ಸಂತೋಷಚಿತ್ತರು. ಅತಿ ವಿಷಮಯವಾದ ಟೀಕೆಯನ್ನಾದರೂ ನಗುಮುಖದಿಂದಲೇ ಸ್ವೀಕರಿಸುವರು.

ಫೋಟೋಗ್ರಾಫಿಯಲ್ಲಿ ಹಸ್ನೈನ್‌ರವರದು ಸಿದ್ಧಹಸ್ತ. ತಾವು ದಿಗ್ದರ್ಶಿಸುವ ಚಿತ್ರಗಳಲ್ಲಿ ಎಲ್ಲಿ ಎಷ್ಟು ಬೆಳಕು ಬೇಕು, ಯಾರ ಆಕಾರವು ಎಲ್ಲಿಂದ ಹೇಗೆ ಕಾಣುತ್ತಿದೆ,— ಎಲ್ಲವನ್ನೂ —ಅನುಭವದಿಂದ ವ್ಯವಸ್ಥಿತಗೊಳಿಸುವರು.



ಮಿ॥ ಖಾಖಾನ್ ಹುಸ್ಸೇನ್, ಎಮ್. ಎ.
ಸುಪ್ರಸಿದ್ಧ ಚಿತ್ರಸಂಸ್ಥೆ ಮೆಸರ್ಸ್ ಫಜ್ಲಿ ಬ್ರದರ್ಸ್‌ರವರ ಪ್ರಚಾರಾಧಿಕಾರಿ; ಸಾಹಿತಿ.

ಫೋಟೋಗ್ರಾಫಿಯ ಮರುಳಿನೊಂದಿಗೆ ಹಸ್ನೈನ್‌ರವರ ಮತ್ತೊಂದು ಮರುಳೂ ಇದೆ. — ಕುದುರೆ ಜೂಜು. ಇದನ್ನು ನೀವು ಕೆಟ್ಟದೆನ್ನಿ ಸರಿಯೆನ್ನಿ, ಮರುಳೆನ್ನಿ ಅಥವಾ ಚಟವೆನ್ನಿ, ಹಸ್ನೈನ್‌ರವರು ಈ ವಿಷಯವಾಗಿ ಮುಚ್ಚುಮರೆ ಮಾಡುವುದಿಲ್ಲ. ಮುಂಬಯಿಯಲ್ಲಿ ಹಸ್ನೈನ್‌ರವರು ... ರಿಲ್ಲದ 'ರೇಸು' ಇಲ್ಲವೇ ಇಲ್ಲ.

ದಾನಬುದ್ಧಿಯವರು; ಸಾಹಿತಿ; ಕಲಾಪ್ರೇಮಿ. ಪ್ರ... ಸೌಂದರ್ಯವನ್ನು, ಉಚ್ಚಕಲಾಕಾರನಂತೆ ಸವಿಯು... ಪ್ರಕೃತಿಯೇ ತನಗೆ ಗುರು ಎನ್ನುವರು.

ಚಿತ್ರ ದಿಗ್ದರ್ಶಕನಲ್ಲಿ, ನಟನಾ ದಿಗ್ದರ್ಶನಕ್ಕೆ ಮೊ... —ಯಾವ ಪಾತ್ರವನ್ನು ವಹಿಸಲು ಎಂಥವನು ಯೋಗ... ಎಂದು ನಿರ್ಣಯಿಸುವ ಶಕ್ತಿಯು ಚೆನ್ನಾಗಿರಬೇಕು. ಹ... ನ್‌ರವರು ಈ 'ಆಯ್ಕೆ'ಯಲ್ಲಿ ಅದ್ವಿತೀಯರು

ದಿಗ್ದರ್ಶಕರಾಗಿ ಹಸ್ನೈನ್‌ರವರು ಚಲಚ್ಚಿತ್ರ ಪ್ರೇ... ಗಳ ಗೌರವಕ್ಕೆ ಪಾತ್ರರಾಗಿರುವರು. ಮನೋಶಾಸ್ತ್ರ... ವನು-ಒಳ್ಳೆ ಕಲಾಕಾ... ಕಥಾಲೇಖಕನು — ಎ... ದನ್ನು, ಅವರ ಚಿತ್ರಗಳ... ಕಂಡು ಅರಿತ ಕಲಾಭ... ನು ಮಾತ್ರ ತಿಳಿಯಬಲ್ಲ... ಹಸ್ನೈನ್‌ರವರು, ತ... ದಿಗ್ದರ್ಶಿಸಿದ ಚಿತ್ರಗಳ... ಗಳನ್ನು ತಾನೇ ಬರೆ... ವರು. ಸಂವಾದ ಲೇ... ದಲ್ಲಿಯೂ ಹಸ್ನೈನ್‌ರ... ಇಂದಿನ ಹಲವು ಉ... ಹಾಗು ಹಿಂದೀ ಲೇಖ... ಗಿಂತ ಎಷ್ಟೋ ಮಿಗಿಲ... ರುವರು. ಸಾಹಿತ್ಯಪ್ರೆ... ಗಳು, "ಅಸ್ಮತ್" ... ದಲ್ಲಿ ಹಸ್ನೈನ್‌ರವರು ಬ... ಕೆಲವು ಸಂವಾದಗಳ ಸ... ದರ್ಯವನ್ನು ಅನ... ದಿಂದ ಸವಿಯದಿರಲಾ...

ಚಲಚ್ಚಿತ್ರಗಳ ಯ... ತ್ರಿಕ ವಿಷಯದಲ್ಲಿ... ಹಸ್ನೈನ್‌ರವರು ವಿಚ... ರಾಗಿರುವರು.

"ದಿಲ್" ಇದು, ಹ... ನ್‌ರವರು ಈಗ ದಿಗ್ದರ್ಶಿ... ತ್ತಿರುವ ಚಿತ್ರ. ಅವರ ಹಿಂದಿನ ಚಿತ್ರಗಳೆಲ್ಲಕ್ಕಿಂತ ... ಉತ್ಕೃಷ್ಟವಾಗಿಯೇ ಹೊರಡುವುದೆಂದು ಲೋಕವು ಭರ... ಯಿಂದ ಕಾಯುತ್ತಿದೆ.



ಮೂವತ್ತು ವರ್ಷಗಳ

ನನ್ನ ಪ್ರಚಾರ ಕಾರ್ಯಾನುಭವ

(ಲೇಖಕರು: ಶ್ರೀ ಅನಂತ ಹರಿಗದ್ರೆ, ಪ್ರಚಾರ ಕಾರ್ಯಾಧಿಕಾರಿ: ಮಿನೆರ್ವಾ ಮೂವಿಟೋನ್, ಮುಂಬಯಿ.)

ಶ್ರೀ ಗದ್ರೆಯವರು, ಮುಂಬಯಿಯ ಪ್ರಚಾರಕಾರ್ಯ ಪ್ರಪಂಚದಲ್ಲಿ ಹಿರಿಯವರು. ಇಂದು ಪ್ರಸಿದ್ಧಿಗೆ ಬಂದಿರುವ ಹಲವು ಪ್ರಕಟಣಾಪ್ರವೀಣರು ಶ್ರೀ ಗದ್ರೆಯವರ ಕೈಕೆಳಗೆ ಓನಾಮ ಕಲಿತು ಬೆಳೆದವರು. ಶ್ರೀ ಗದ್ರೆಯವರು ಇಂದು ಮಿನೆರ್ವಾ ಮೂವಿಟೋನಿನ ಪ್ರಧಾನ ಪ್ರಚಾರಾಧಿಕಾರಿ; "ನಿರ್ಭೀಡ್" ಪತ್ರಿಕಾ ಸಂಪಾದಕರು. ಇವರನ್ನು ಮುಂಬಯಿಯಲ್ಲಿ ಮಮತೆಯಿಂದ ಎಲ್ಲರೂ "ದಾದಾ" ಎಂದು ಸಂಬೋಧಿಸುವರು. ಶ್ರೀ ಗದ್ರೆಯವರ ಪ್ರಚಾರಕಾರ್ಯದ ಅನುಭವಗಳು ಮನೋಹರ ಕಥೆಯಂತಿವೆ.

"ಮನಮೋಹನ ಅಗರಬತ್ತಿ"—"ಕೊಹಿನೂರ್ ಗುಲ್ ಖಂದ್"–"ಆಖಾಅಂಜೀರ್"–ಲಕ್ಷ್ಮೀವಿಧ್ಯೂನಿಯಾ –ಈ ವಸ್ತುಗಳಿಗಾಗಿ, ನಾನು, ಮೂವತ್ತು ವರ್ಷಗಳ ಕೆಳಗೆ, ೧೯೧೮ರಲ್ಲಿ, ಪ್ರಕಟನಾ ಕಾರ್ಯವಾರಂಭಿಸಿದೆ. ಆ ಕಾಲದಲ್ಲಿ ನನಗೆ ಪುಣೆಯಲ್ಲೊಂದು ಸುಗಂಧ ದ್ರವ್ಯಗಳ ಅಂಗಡಿಯಿತ್ತು. ಆ ಅಂಗಡಿಯೊಳಗಿನ ವಸ್ತುಗಳನ್ನು ವಿಕ್ರಯಿಸಲು ನಾನು ಆ ಕಾಲದಲ್ಲಿ, ಎಲ್ಲ ಬಗೆಯ "ಪ್ರಕಟಣಾ ಕಸರತ್ತು"ಗಳನ್ನುಪಯೋಗಿಸಿದ್ದೆ. ಪುಣೆಯವರಲ್ಲಿ ಅನೇಕರು ಈಗಲೂ, ನಾನು ಆ ಕಾಲದಲ್ಲಿ ಕೈಕೊಂಡ ಪ್ರಚಾರ ಕಾರ್ಯವನ್ನು ಸ್ಮರಿಸಬಲ್ಲರು. ನನ್ನ ಈ ಪ್ರಚಾರ ಕಾರ್ಯವು ಒಳ್ಳೇ ಫಲವನ್ನು ತಂದಿತು. ಬಹು ಅಲ್ಪ ಕಾಲದಲ್ಲಿ ಪುಣೆಯಲ್ಲಿ ನೂರಾರು ಸುಗಂಧ ವ್ಯಾಪಾರಿಗಳು ತಲೆಯೆತ್ತಿದರು.

ಗುರುವಿಲ್ಲ

ಕಳೆದ ಮೂವತ್ತು ವರ್ಷಗಳಿಂದ ನಾನು ಪ್ರಚಾರ ಕಾರ್ಯವನ್ನು, ಒಂದಲ್ಲ ಒಂದು ವ್ಯಾಪಾರದಲ್ಲಿ ಯಾ ಉದ್ಯಮದಲ್ಲಿ ನಡೆಸಿರುವೆನು ನಿಜ. ಆದರೆ, ಶಾಸ್ತ್ರೋಕ್ತವಾಗಿ ನಾನು ನನ್ನನ್ನು 'ಪ್ರಚಾರ ಕಾರ್ಯಾಧಿಕಾರಿ' ಎಂದು ಕರೆದುಕೊಳ್ಳಲಾರೆ. ಏಕೆಂದರೆ, ನಾನು ಪ್ರಕಟಣಾ ಕಾರ್ಯದ ಶಾಸ್ತ್ರವನ್ನು ಕಲಿತಿಲ್ಲ; ನನಗೆ ಆ ಬಗ್ಗೆ ಗುರುವೂ ಇಲ್ಲ. ನಾನು ಪತ್ರಿಕೋದ್ಯಮಿ; ಮೊದಲೂ ಹಾಗೆ, ಇಂದೂ ಅಂತೇ. ಆದರೆ, ಜೀವನವನ್ನು ಮಾತ್ರ ಸುಗಂಧ ವ್ಯಾಪಾರದಿಂದ ಆರಂಭಿಸಿದೆ. ಆ ಕಾಲದಲ್ಲಿ ಯಾರೂ 'ಪ್ರಚಾರಾಧಿಕಾರಿ' ಎಂಬುದನ್ನು ಕೇಳಿರಲಿಲ್ಲ. ಈ ಮೃಗವು ಇತ್ತೀಚಿನದು.

ರಾಜಕೀಯ ಪ್ರಚಾರಕಾರ್ಯ

ವ್ಯಾಪಾರದೊಂದಿಗೇ ಪತ್ರಿಕೋದ್ಯಮವನ್ನೂ ಆರಂಭಿಸಿದೆ. ೧೯೧೬ರಲ್ಲಿ ನಾನು, ಮುಂಬಯಿಯ "ಸಂದೇಶ" ಪತ್ರಿಕೆಗೆ, ಪುಣೆಯ ಬಾತ್ಮೀದಾರನಾಗಿ ಕೆಲಸ ಮಾಡಲು ತೊಡಗಿದೆ. ಆ ಕಾಲದಲ್ಲಿ, ಲೋಕಮಾನ್ಯ ಟಿಳಕರು, ಮಂಡಲೇ ಕಾರಾಗ್ರಹದಿಂದ ಬಿಡುಗಡೆ ಹೊಂದಿ, ಪುಣೆಯ ಮುಖ್ಯ ಠಾಣ್ಯದಲ್ಲಿ ಪುನಃ ರಾಜಕೀಯ ಚಟುವಟಿಕೆಗಳನ್ನಾರಂಭಿಸಿದ್ದರು. ಪುಣೆಯು ಸಹಜವಾಗಿ ರಾಜಕೀಯ ಸಭೆ, ಮೆರೆ

[152ನೇ ಪುಟದಿಂದ ಮುಂದುವರಿದುದು]

ಪ್ರಶ್ನೆ: ಜನತೆಗೆ ಶಿಕ್ಷಣ ಕೊಡಲು ಪೌರಾಣಿಕ ಕಥೆಗಳೂ ಐತಿಹಾಸಿಕ ಅಥವಾ ಸಾಮಾಜಿಕ ಕಥೆಗಳಂತೆ ಪರಿಣಾಮಕಾರಿಯಾಗಿ ಪ್ರದರ್ಶಿಸಲ್ಪಡಬಹುದೇ?

ಉತ್ತರ: ನಿಸ್ಸಂದೇಹವಾಗಿ! ನಾವು ಚರಿತ್ರೆಯಿಂದ ಪ್ರೇರಣೆ ಹೊಂದುವೆವು; ಚರಿತ್ರೆಯೊಳಗಿನ ಮಹಾಪುರುಷರು ಪುರಾಣಗಳಿಂದ ಆ ಪ್ರೇರಣೆಹೊಂದಿದರು.

ಪ್ರಶ್ನೆ: ಚಲಚ್ಚಿತ್ರಗಳು, ಯುದ್ಧಾನಂತರದ ಪುನರ್ಯೋಜನೆಯಲ್ಲಿ ಶಿಕ್ಷಣದ ಮಾಧ್ಯಮವಾಗ ಬೇಕೆಂಬುದರಲ್ಲಿ ನಮ್ಮ ಶಾಲಾ ವಿದ್ಯಾರ್ಥಿಗಳ ಬಗ್ಗೆ, ಶಾಲೆಗಳಲ್ಲಿ ಚಿಕ್ಕ ಶೈಕ್ಷಣಿಕ ಚಿತ್ರಗಳ ಪ್ರದರ್ಶನವಾಗಬೇಕೆಂಬ ವಿಷಯದಲ್ಲಿ ತಮ್ಮ ಅಭಿಪ್ರಾಯವೇನು?

ಉತ್ತರ: ಅವಶ್ಯವಾಗಿ ನಮಗೆ ಆ ವ್ಯವಸ್ಥೆ ಬೇಕು. ಚಿತ್ರಗಳು ವೃತ್ತಪತ್ರಿಕೆಗಳಿಗಿಂತ ಮುಖ್ಯ ಇವೆ. ರಷ್ಯದಲ್ಲಿ ಚಲಚ್ಚಿತ್ರಗಳು ಶಿಕ್ಷಣ ಪ್ರಸಾರಕ್ಕಾಗಿ ಅತ್ಯಂತ ಯಶಸ್ವಿಯಾಗಿ ಉಪಯೋಗಿಸಲ್ಪಟ್ಟಿವೆ.

ಯು. ಎಸ್. ಶೆಣೈ.

ವಣಿಗೆ, ಪರಿಷತ್ತು, ಸಮಾಲೋಚನೆ ಮೊದಲಾದ ಕಾರ್ಯ ಚಟುವಟಿಕೆಗಳಿಂದ ತುಂಬಿತ್ತು. ಆಗ ನಾನು ಪುಣೆಯಿಂದ, ಮುಂಬಯಿಯ "ಸಂದೇಶ" ದೈನಿಕಕ್ಕೆ, ಈ ಎಲ್ಲ ಸಭೆಗಳ ವರದಿಗಳನ್ನು ನನ್ನದೇ ಆದ ಒಂದು ಪ್ರತ್ಯೇಕ ಶೈಲಿಯಲ್ಲಿ ಬರೆದು ಕಳಿಸುತಿದ್ದೆ. ಈ ವರದಿಗಳು ಮಹಾರಾಷ್ಟ್ರದಲ್ಲೆಲ್ಲ ಜನಪ್ರಿಯವಾದುವು. ೧೯೧೬ರಿಂದ, ಆ ಘಟನಾಪೂರ್ಣ ಲಕ್ನೋ ಕೊಂಗ್ರೆಸ್ ನಡೆವತನಕ ಲೋಕಮಾನ್ಯ ಟಿಳಕರು ಹೋಂ ರೂಲ್ ಚಳವಳ ಕೈಕೊಂಡು, ಮೂರು ವರ್ಷಗಳ ತನಕ ದೇಶದಾದ್ಯಂತ ಸಂಚಾರ ಮಾಡಿ ಪ್ರಚಾರಗೊಳಿಸ ಹತ್ತಿದರು. ನಾನು "ಸಂದೇಶ" ಪತ್ರಿಕೆಗೆ ಕಳಿಸುತ್ತಿರುವ ವರದಿಗಳು ಜನಪ್ರಿಯವಾದುದನ್ನು ಕಂಡು ಆ ಪತ್ರಿಕಾ ಸಂಪಾದಕರಾಗಿದ್ದ ಶ್ರೀ। ಅಚ್ಯುತರಾವ್ ಕೊಲ್ಹಟ್‌ಕರರು, ನನ್ನನ್ನು ವಿಶೇಷ "ಟಿಳಕ ಬಾತ್ಮಿದಾರ"ನನ್ನಾಗಿ ನೇಮಿಸಿ, ನನಗೆ, ಲೋಕಮಾನ್ಯರೊಂದಿಗೆ ದೇಶವೆಲ್ಲ ಸುತ್ತಿಬರುವ ಸಂದರ್ಭವೊದಗಿಸಿಕೊಟ್ಟರು. ನನ್ನ ಶೈಲಿ, ವರದಿಯ ಕ್ರಮ–ಇವು ಮತ್ತಷ್ಟು ಸುಧಾರಣೆಗೊಂಡು. ಸಾರ್ವತ್ರಿಕ ಜನಾದರ ಹೊಂದಿದುವು.

ಲೋಕಮಾನ್ಯರಿಂದ ಪ್ರಶಂಸೆ

ನಾನು ವಾರ್ತೆಗಳನ್ನು ವರದಿಮಾಡುತಿದ್ದಂತೆ, "ರಾಷ್ಟ್ರಪ್ರೇಮ ಮಾಲೆ" ಎಂಬ ಮರಾಠಿ ಪತ್ರಿಕೆಯನ್ನೂ ಸಂಪಾದಿಸುತಿದ್ದೆ. ಇದರಲ್ಲಿ, ಲೋಕಮಾನ್ಯ ಟಿಳಕರ ಹೋಂ ರೂಲ್ ಚಳವಳದ ಪ್ರಚಾರವು ಹೆಚ್ಚಾಗಿ ಬರುತಿತ್ತು. ಈ ಪತ್ರಿಕೆಯ ವಿಷಯದಲ್ಲೂ ನಾನು ಪ್ರಚಾರಕಸರತ್ತುಗಳನ್ನು ನಡೆಸಿದೆ. ರಾಜಕೀಯ ಮುಖಂಡರ ಭಾವಚಿತ್ರಗಳಿಂದಲೂ ವ್ಯಂಗ ಚಿತ್ರಗಳಿಂದಲೂ ಅನೇಕ ಪತ್ರಿಕೆಗಳನ್ನು ಪ್ರಕಟಿಸಿದೆ. ಹೋಂರೂಲ್ ಚಳವಳಕ್ಕೆ ಇದು ಬಲು ಸಹಾಯಕವಾಯಿತು. ಟಿಳಕರೂ ಇದನ್ನು ಮೆಚ್ಚಿ, ನನ್ನ ವರದಿಗಳೂ ಇತರ ವಿಧದ ಪ್ರಚಾರ ಕಾರ್ಯವೂ ತನ್ನ ಹೋಂರೂಲ್ ಚಳವಳಕ್ಕೆ ಅಸಾಮಾನ್ಯ ಸಹಾಯ ಮಾಡಿತಾಗಿ ಪ್ರಶಂಸಿಸಿದರು. ಹೀಗೆ, ನಾನು, ವ್ಯಾಪಾರವಾಗಲಿ ಪತ್ರಿಕೋದ್ಯಮವಾಗಲಿ, ಯಾವುದಕ್ಕೆ ಯಾವ ಬಗೆಯ ಪ್ರಚಾರ ಬೇಕೆಂಬುದನ್ನು ಆಲೋಚಿಸಿ, ಪ್ರಯೋಗಿಸಿ, ಯಶಸ್ವಿಯಾದೆ.

ಪತ್ರಿಕೋದ್ಯಮದಲ್ಲಿರುವ ಕಾರಣ ನಾನು ವಾಣಿಜ್ಯದ ಕಡೆಗೆ ಹೇಗೋ ಹಾಗೆ ನಾಟಕಗಳ ಕಡೆಗೂ ಆಕರ್ಷಿತನಾಗಿದ್ದೆ; ನನ್ನ ಸ್ನೇಹಿತವರ್ಗದಲ್ಲಿ ಹಲವರು ನನ್ನ ಬಳಿಗೆ ಆಗಾಗ್ಗೆ, ತಮ್ಮ ನಾಟಕಗಳ ಪ್ರಚಾರಕಾರ್ಯದ ಸಲುವಾಗಿ ನನ್ನ ಸಲಹೆ ಕೇಳಲು ಬರುತಿದ್ದರು. ಇವರಲ್ಲಿ, ಪೂಣೆಯ ಆರ್ಯನ್ ಸಿನೆಮದ ಮೆನೇಜರರಾಗಿದ್ದ ಶ್ರೀ। ಬಳವಂತರಾವ್ ನಾಫ್ಡೆ ಇವರು ಒಬ್ಬರು. ಅವರು ಆಗ ಪ್ರದರ್ಶಿಸುತಿದ್ದ ಚಿತ್ರಗಳಿಗೆ ಕೆಲವು ಜಾಹೀರಾತುಗಳನ್ನು ನಾನು ಬರೆದ ನೆನಪು ಈಗಲೂ ಇದೆ. ೧೯೧೬ ಮತ್ತು ೧೯೧೭ರಲ್ಲಿ,

ಇಂಗ್ಲಿಷ್ ಮೌನಚಿತ್ರಗಳಿಂದ ಇಲ್ಲಿ ಚಿತ್ರಪ್ರದ[ರ್ಶನ]
ಕಾರ್ಯವು ಚೆನ್ನಾಗಿ ಆರಂಭವಾಗಿತ್ತು. ದೇಶೀ[ಯ]
ಕೈಗಾರಿಕೆಯು ತೀರ ಶೈಶವದಲ್ಲಿತ್ತು. ಭಾರತ ಚಲ[ಚ್ಚಿತ್ರ]
ಕೈಗಾರಿಕೆಯ ತಾತ ಶ್ರೀ। ಫಾಲ್ಕೆಯವರು ಕೆಲವು ಚಿತ್ರ[ಗಳನ್ನು]
ತಯಾರಿಸಿದ್ದರು. ಚಲಚ್ಚಿತ್ರ ಕಲಾಕಾರರಲ್ಲಿ ಹೆಸರು[...]
ಯಾದ ಶ್ರೀ। ಬಾಬುರಾವ್ ಪೈಂಟರರು (ಕೊಲ್ಹಾ[ಪುರ])
ತಮ್ಮ ಕಲಾಗಾರಿಕೆಯ ಪ್ರದರ್ಶನಕ್ಕೆ ತೊಡಗಿದ್ದರು. [...]
ಕಾಲದಲ್ಲಿ ಚಿತ್ರಗಳ ಬಗ್ಗೆ ಅಲ್ಪ ಪ್ರಮಾಣದಲ್ಲಿ ಪ್ರ[ಚಾರ]
ಕಾರ್ಯವಾರಂಭವಾಗಿತ್ತು. ಯಾವ 'ಸ್ಟುಡಿಯೋ'ದಲ್ಲಿ
ಇಂದಿನಂತೆ ದೊಡ್ಡ ಪ್ರಚಾರಶಾಖೆಗಳಿರಲಿಲ್ಲ. ಅಥಾ[...]
ಇಂದಿನ ಕ್ರಮದಲ್ಲಿ ಆ ಕಾಲದಲ್ಲಿ (೧೯೧೬ ಮತ್ತು ೧೯೧[...]
ಪ್ರಚಂಡ ಪ್ರಮಾಣದಲ್ಲಿ ಪ್ರಚಾರವಿರಲಿಲ್ಲ.

ಚಲಚ್ಚಿತ್ರ ಪ್ರಕಟಣಾಕಾರ್ಯ.

ಇಪ್ಪತ್ತೈದು ವರ್ಷಗಳ ಕೆಳಗೆ, ಪುಣೆಯ ಆಯ[...]
ಸಿನೆಮದಲ್ಲಿ, ವಿಶೇಷ ಘಟನೆಯೊಂದು ನಡೆಯಿತು. ಬ[ಾಬು]
ರಾವ್ ಪೈಂಟರರು, ತಾವೇ ರಚಿಸಿದ ಒಂದು ಕೆಮರ[...]
ತೆಗೆದ "ಸೈರೇಂಧ್ರಿ" ಚಿತ್ರಕ್ಕಾಗಿ ಅವರಿಗೆ, ಲೋಕಮಾ[ನ್ಯ]
ಟಿಳಕರ ಪವಿತ್ರ ಹಸ್ತಗಳಿಂದ ಸ್ವರ್ಣಪದಕದ ಸಂಭಾ[ವನೆ]
ಯಾಯಿತು. ಆ ಸಂದರ್ಭದಲ್ಲಿ, ಶ್ರೀ। ವಾಘರವರ ಸ್ನೇ[ಹಿತ]
ನಾಗಿ ನಾನು, ಕೆಲವು ಜಾಹೀರಾತು ಪತ್ರಗಳನ್ನೂ, ವೃತ್ತ[ಪತ್ರಿ]
ಕೆಗಳಿಗೆ ಕೆಲವು ಜಾಹೀರಾತುಗಳನ್ನೂ "ಸಂದೇಶ"ಕ್ಕೆ ಕ[...]
ಸಿದ್ಧ ಬರಹಗಳನ್ನೂ ತಯಾರಿಸಿದೆ. ಅದು ಇಪ್ಪತ್ತೈದು ವ[ರ್ಷ]
ಗಳ ಕೆಳಗೆ ನಡೆದುದಾಗಿ,—ಇಂದಿನದು ನನ್ನ ಚಲ[ಚ್ಚಿತ್ರ]
ಪ್ರಕಟಣಾ ಕಾರ್ಯದ ರಜತೋತ್ಸವ ವರುಷವು ಎ[...]
ವಿನೀತನಾಗಿ ಪರಂತು ಗೌರವದಿಂದ ಹೇಳಬಲ್ಲೆ. ಅಂದಿ[ನಿಂದ]
ನಾನು ಚಲಚ್ಚಿತ್ರಗಳ ಬಗ್ಗೆ ಜಾಹೀರಾತು ಬರೆ[...]
ಮುಂತಾದ ಪ್ರಚಾರ ಕಾರ್ಯ ಮಾಡುತ್ತಿರುವೆನಾದರೂ
ಕಾರ್ಯವನ್ನೆ ವೃತ್ತಿಯಾಗಿ ಕೈಕೊಂಡುದು ಇತ್ತೀಚೆಗೆ[...]
ಮೋದಿ ಸಹೋದರರ ಕೃಪೆಯಿಂದ–ಎನ್ನುವೆನು.

ರಂಗಭೂಮಿಯ ಪ್ರಚಾರಕಾರ್ಯ.

ಕ್ರಿ. ಶ. ೧೯೧೮ರಲ್ಲಿ ನಾನು ಪುಣೆಯಲ್ಲಿ "ಹಿ[...]
ನಾಟಕ ಸಮಾಜ"ವೆಂಬ ಹೆಸರಿನಲ್ಲಿ ಒಂದು ಎಮೆಚ[ೂರ್]
ನಾಟಕ ಸಂಘವನ್ನು ಸ್ಥಾಪಿಸಿದೆನು. ಅದು ಸಾಮಾನ್ಯ[ವಾಗಿ]
ನಾನೇ ಬರೆದ ನಾಟಕಗಳನ್ನು ಪ್ರಯೋಗಿಸುತ್ತಿತ್ತು. ಮ[...]
ವರ್ಷಗಳ ವರೆಗೆ ನಾನು ಆ ಸಂಘವನ್ನು ನಡೆಸುತ್ತ, [...]
ಪ್ರಚಾರಕಾರ್ಯವನ್ನು ನಡೆಸಿದ್ದೆ. ಪ್ರಚಾರಬಲ[ದಿಂದ]
ನಾನು ಅನೇಕ ನಟರನ್ನು 'ತಾರೆ'ಗಳಾಗಿ ಮಾರ್ಪಡಿಸ[ಲು]
ಸಹಾಯಕನಾದೆ. ಇಂಥವರಲ್ಲೊಬ್ಬರು ನಾನಾ ಸಾ[...]
ಭಾಪೇಕರ, ಬಿ. ಎ. ಈ ಅದ್ಭುತ ನಟನನ್ನು ಮಹಾರಾ[ಷ್ಟ್ರ]
ಎಂದಿಗೂ ಮರೆಯಲಾರದು. ನನ್ನ ನಾಟಕಮಂಡಲಿ[...]
ಮತ್ತೆ ಕೆಲವು ಮಂಡಲಿಗಳ ಬಗ್ಗೆಯೂ ನಾನು ಪ್ರ[ಚಾರ]
ಕಾರ್ಯ ನಡೆಸುತ್ತಿದೆ; ವೃತ್ತಿಯಾಗಿ ಅಲ್ಲ; ಸ್ನೇಹಿತನಾ[ಗಿ]

★
★★

। ಸೊಹ್ರಾಬ್ ಮೋ
ಯುವರು. ಮುಂಬ
ಯ ಪ್ರಸಿದ್ಧ ಮೋದಿ
ಹೋದರರಲ್ಲೊಬ್ಬರು.
ಪ್ರಕಾರ್' — 'ಸಿಕಂ
ರ್' 'ಪೃಥ್ವಿವಲ್ಲಭ್'
ತಹ ಚಿತ್ರಗಳನ್ನು
ನತೆಗೆ ಒಪ್ಪಿಸಿ, ಕಲಾ
ಸೆ ಮಾಡಿದವರು.
ನೆರ್ವಾ ಮೂವಿ
ೋನಿನ ಸೂತ್ರಧಾರ.

★★
★



ಮೋದಿ ಸಹೋದರರೊಡನೆ.

ಶ್ರೀ। ರುಸ್ತುಮ್‌ಜಿ ಮೋದಿಯವರನ್ನು ನಾನು ೧೯೨೨
ಲ್ಲಿ ಭೇಟಿಯಾದೆ. ಆ ವರ್ಷ ನಾನು ಪುಣೆ ಬಿಟ್ಟು ಮುಂಬ
ಯಿಗೆ, ಪತ್ರಿಕೋದ್ಯಮ ಕೈಕೊಳ್ಳಲು ತೆರಳಿದ್ದೆ. ಆ ವರು
ವೇ ನನ್ನ ವಾರಪತ್ರಿಕೆ "ಮೌಜ್" ಹೊರಟಿತು. ಹೊರಟ
ಲ್ಪಕಾಲದಲ್ಲೇ ಜನಪ್ರೀತವಾಯಿತು. ನಾನು ಆ ಪತ್ರಿಕೆ
ಗ್ಗೆ ಪ್ರಯೋಗಿಸಿದ ಪ್ರಚಾರವಿಧಾನವೇ ಅದರ ಪ್ರಚಾರ
ನ್ನು ಹೆಚ್ಚಿಸಿತು. ಆ ವರುಷವೇ ರುಸ್ತುಮ್‌ಜಿ ಮೋದಿಯ
ರೂ ತಮ್ಮ "ಆರ್ಯಸುಬೋಧ ನಾಟಕ ಮಂಡಲಿ" ಯೊಂದಿಗೆ
ುಂಬಯಿಗೆ ಬಂದರು. ಅವರು, ತಮ್ಮ ನಾಟಕಮಂಡಲಿಯ
ಚಾರಕಾರ್ಯವನ್ನು ಪೂರ್ಣವಾಗಿ ನನಗೆ ವಹಿಸಿಕೊಟ್ಟರು.
ಕಂಪೆನಿಯ ಬಗ್ಗೆ ನಾನು ಮಾಡಿರುವ ಪ್ರಚಾರಕಾರ್ಯ—
ವರ "ಆಸುರೀ ಲಾಲಸಾ" ನಾಟಕವು ಜನಪ್ರೀತವಾಗಲು
ಕೊಂಡ ಪ್ರಕಟಣಾ ವೈಖರಿ ಇದನ್ನು ಜನರು ಇಂದಿಗೂ
ರಿಸಬಲ್ಲರು. ಆ ಕಂಪೆನಿಯೊಳಗಿನ ಇಜಿಪ್ಶಿಯನ್ ನರ್ತಕಿ
ಸ್. ಮೇರಿ ಮತ್ತು ನಟ ಬೆಂಜಾಮಿನ್-ಇವರೂ ಪ್ರಸಿ
ಗೆ ಬಂದರು. ಬೆಂಜಾಮಿನ್ ಒಬ್ಬ ಒಳ್ಳೇ ಶೇಕ್ಸ್‌ಪಿಯ
ನ್ ನಟ.

ಕೆಲಕಾಲಾನಂತರ ರುಸ್ತುಮ್‌ಜಿಯವರ ಕಿರಿಯ ಸಹೋ
ರ ಸೊಹ್ರಾಬ್ ಮೋದಿಯವರು "ಆರ್ಯ ಸುಬೋಧ"ದ
ನೇಜರರಾಗಿ ಬಂದರು. ಕೆಲಕಾಲದಲ್ಲಿ ನಟ ಬೆಂಜಾಮಿ
ನು ಆ ನಾಟಕ ಮಂಡಲಿ ಬಿಟ್ಟು ಹೋದನು. ಸೊಹ್ರಾಬ್
ಮೋದಿಯವರು ಮುಖ್ಯ ನಟರಾದರು. ಸೊಹ್ರಾಬ್ ಮೋದಿ
ಯವರು ನಟನಾಗಬೇಕೆಂದು ಅವರ ಹಿರಿಯರಾಗಲಿ ಅಣ್ಣ
ನಾಗಲಿ ಇಚ್ಛಿಸಿರಲಿಲ್ಲ. ಆದರೆ, ಮಾನವನ ಜೀವನದಲ್ಲಿ
ಯಾವಾಗಲೂ ಕಾಣದ ಕೈಯೊಂದು ವೈಚಿತ್ರ್ಯಗಳನ್ನು ತರು
ವುದು. ಸೊಹ್ರಾಬರು ರಂಗಭೂಮಿಗೆ ಬಂದುದೇ ತಡ,
ಅವರು ಸರಿಸಾಟಿಯಿಲ್ಲದ ನಟರೆಂದು ಜನತೆ ಕಂಡಿತು. ಅವರ
ಹೆಮ್ಲೆಟ್ ಮತ್ತು ಇತರ ಶೇಕ್ಸ್‌ಪಿಯರನ್ ಕಥಾನಾಯಕರ
ಪಾತ್ರಗಳು, ಅವರನ್ನು ಪ್ರಥಮ ಶ್ರೇಣಿಯ ನಟರನ್ನಾಗಿ
ಮಾಡಿದುವು.

ಈ ಮೋದಿ ಸಹೋದರರಿಬ್ಬರೂ,— ರುಸ್ತುಮ್‌ಜಿ
ಮತ್ತು ಸೊಹ್ರಾಬ್‌ಜಿ, ನನ್ನ ಮಿತ್ರರು. ಅವರಿಗೆ ಬೇಕಾ
ದಾಗ ನಾನು ಪ್ರಚಾರಕಾರ್ಯ ನಡೆಸುತಿದ್ದೆ. ೧೯೩೧ರ ವರೆಗೆ
ಇದೇ ರೀತಿ ನಡೆಯಿತು.

ನನ್ನ ನಾಟಕಗಳು

ಆ ಹತ್ತು ವರುಷಗಳಲ್ಲೂ ನಾನು ಮುಂಬಾಯಿ
ಹಾಗೂ ಹೊರಗೆ ನನ್ನ ಸ್ವತಂತ್ರ ಖಾಸಗಿ ಚಟುವಟಿಕೆಗಳನ್ನು
ನಡೆಸುತ್ತಲೇ ಇದ್ದೆ. ನನ್ನ ದುರಾದೃಷ್ಟದಿಂದ ಮತ್ತು ಇತರ
ಕೆಲವು ಕಾರಣಗಳಿಂದ ನಾನು ೧೯೩೧ರಲ್ಲಿ ಪತ್ರಿಕಾವೃತ್ತಿಯನ್ನು
ಬಿಟ್ಟುಬಿಡಬೇಕಾಯಿತು. ನಾನು, ನಾಟಕಕಾರನಾಗುವ
ಆಲೋಚನೆ ಮಾಡಿ, ಕೆಲವು ನಾಟಕಗಳನ್ನೂ ಏಕಾಂಕ
ಗಳನ್ನೂ ಬರೆದೆ. ಎರಡು ತಾಸಿನ ಈ ನಾಟಕಗಳನ್ನು
ಚೆನ್ನಾಗಿ ಪ್ರಚಾರಕ್ಕೆ ತರಲು ನಾನು "ಬೊಂಬೇ ನಾಟಕ
ಸಂಗೀತ ಕಂಪೆನಿ" ಎಂಬ ಹೆಸರಿನಿಂದ ಒಂದು ನಾಟಕ
ಕಂಪೆನಿಯನ್ನೂ ರಚಿಸಿದೆ. ಈ ನಾಟಕ ಕಂಪೆನಿ ಬಗ್ಗೆ
ನಾನು, ಮರಾಠಿ ರಂಗಭೂಮಿಯ ಇತಿಹಾಸದಲ್ಲಿ ಕಂಡೂ
ಕೇಳದಂತಹ ಪ್ರಚಂಡ ರೀತಿಯ ಪ್ರಚಾರಕಾರ್ಯವನ್ನು
ಆರಂಭಿಸಿದೆ. ನನಗೆ ನಾನೇ ಯಜಮಾನನಾದ ಕಾರಣ,
ನನ್ನ ಬುದ್ಧಿಶಕ್ತಿಯನ್ನುಪಯೋಗಿಸಿ, ನನಗೆ ಬೇಕಾದ ರೀತಿ
ಯಲ್ಲಿ, ಪ್ರಚಾರಕಾರ್ಯದ ಎಲ್ಲ ಕೌಶಲ್ಯವನ್ನು ಪ್ರಯೋ
ಗಿಸಿದೆ. ಸಂಸ್ಥೆಯು ಅದರ ಸುಫಲವನ್ನುಂಡಿತು. ಈ ಸಂ
ಸ್ಥೆಯ ಪ್ರಚಾರಕಾರ್ಯವನ್ನು ಸಾಗಿಸುವುದಕ್ಕಾಗಿ ನನ್ನ
ಸ್ನೇಹಿತ ಬಿ. ಪಿ. ಸಾಮಂತರವರು "ಬಿ. ಪಿ. ಸಾಮಂತ್
ಎಂಡ್ ಕಂಪೆನಿ" ಎಂಬ ಹೆಸರಿನಿಂದ ಒಂದು ಪ್ರಚಾರ ಸಂಸ್ಥೆ
ಯನ್ನು ತೆರೆದರು. ಈ ಸಂಸ್ಥೆಯಿಂದು, ಹಿಂದೂದೇಶದ
ಹೆಸರುವಾಸೀ ಪ್ರಕಟಣಾ ಸಂಸ್ಥೆಗಳಲ್ಲೊಂದಾಗಿದೆ.

ವೆಸ್ಟ್ ಇಂಡಿಯಾ ಥಿಯೇಟರ್ಸಿನೊಡನೆ

ನಾಟಕ ಕಂಪೆನಿಯನ್ನು ೧೯೩೭ರಲ್ಲಿ ಮುಚ್ಚಿ, ನಾನು
ಪುನಃ ೧೯೩೮ರಲ್ಲಿ ಪುನಃ ಪತ್ರಿಕೋದ್ಯಮವನ್ನು ಆರಂಭಿಸಿ,
"ಸಿರ್ಫಿಡ್" ವಾರಪತ್ರಿಕೆಯನ್ನು ಹೊರಡಿಸಿದೆ. ಆ ಕಾಲಕ್ಕೆ
ಸರಿಯಾಗಿ ಎಂಬಂತೆ, ಮೋದಿ ಸಹೋದರರು, ಮುಂಬಾಯಿ
ಹೊರಗೇ ನಡೆಸುತಿದ್ದ ತಮ್ಮ ಚಟುವಟಿಕೆಗಳನ್ನು ಮುಗಿಸಿ,
ಚಿತ್ರಪ್ರದರ್ಶನ ಕಾರ್ಯವಾರಂಭಿಸುವ ಸಲುವಾಗಿ ಮುಂಬಾ
ಯಿಗೆ ಬಂದರು. ವೆಸ್ಟರ್ನ್ ಇಂಡಿಯಾ ಥಿಯೇಟರ್ಸ್
ಸಂಸ್ಥೆಯವರು (ಶ್ರೀ। ಕೆ. ಎಂ. ಮೋದಿಯವರು ಮೆನೇಜ

ರರು) ಮುಂಬಾಯಿಯಲ್ಲಿ, ಚಿತ್ರ ಪ್ರದರ್ಶನದ ಬಗ್ಗೆ ಕೆಲವು ಥಿಯೇಟರುಗಳನ್ನು ಪಡೆದರು. ಸೊಹ್ರಾಬ್ ಮೋದಿಯವರು, ತಮ್ಮ ನಾಟಕ ಕಂಪೆನಿಯನ್ನು ಚಿತ್ರಸಂಸ್ಥೆಯಾಗಿ ಮಾರ್ಪಡಿಸಿ, "ಮಿನೆರ್ವಾ ಮೂವಿಟೋನ್" ಎಂದು ಹೆಸರಿಸಿದರು.

ವೆಸ್ಟರ್ನ್ ಇಂಡಿಯಾ ಥಿಯೇಟರ್ಸಿನವರು ಮುಂಬಾಯಿಯಲ್ಲಿ ತಮ್ಮ ಪ್ರಚಾರ ಶಾಖೆಯನ್ನು ತೆರೆಯುತ್ತಲೇ, ಅದರ ಆಡಳಿತ ನೋಡುವಂತೆ ನನ್ನನ್ನು ಕೇಳಿಕೊಂಡರು. ಈ ಸಂಸ್ಥೆಯು ಅನೇಕ ಚಿತ್ರಗಳಿಗೆ—"ಅಮೃತಮಂಥನ"—"ದೇವದಾಸ" ಮೊದಲಾದುವುಗಳಿಗೆ—ಪ್ರಚಾರ ನಡಿಸಿತು. ಮಿನೆರ್ವಾ ಮೂಸಿಟೋಸಿನ ಬಗ್ಗೆಯೂ ಆಗಾಗ್ಗೆ ಕೊಂಚ ಪ್ರಚಾರಕಾರ್ಯ ನಡೆಸುವಂತೆ ಶ್ರೀ। ಸೊಹ್ರಾಬ್ ಮೋದಿಯುವರು ನನ್ನನ್ನು ಕೇಳಿಕೊಂಡರು.

ಮಿನೆರ್ವಾ ಮೂವಿಟೋನಿನೊಂದಿಗೆ

ಹೀಗೆ ೧೯೪೦ರ ವರೆಗೆ ನಡೆದು, ಕೊನೆಗೆ, ಮಿನೆರ್ವಾ ಮೂವಿಟೋನಿನ ಪ್ರಚಾರಕಾರ್ಯದ ನೇತೃಗಳಾಗಿ ಶ್ರೀ। ಸೊಹ್ರಾಬ್ ಮೋದಿಯುವರು ನನ್ನನ್ನು ನೇಮಿಸಿದರು. ಅಂದಿನಿಂದ ನಾನು, ಆ ವೃತ್ತಿಯಲ್ಲಿ ಒಳ್ಳೇ ಪ್ರತಿಫಲ ಪಡೆಯುತ್ತಿದ್ದೇನೆ. ನಡುವೆ ಕೆಲಕಾಲ ನಾನು ಪತ್ರಿಕೋದ್ಯಮವನ್ನು ಬಿಟ್ಟುಬಿಟ್ಟಿದ್ದೆ. ಈಗ, ಪುನಃ "ನಿರ್ಭಿಡ್" ಪತ್ರಿಕೆಯನ್ನು ಪುನರುಜ್ಜೀವಿಸಿರುವೆನು.

ಕಳೆದ ಮೂವತ್ತು ವರ್ಷಗಳಲ್ಲಿ ನಾನು ವಾಣಿಜ್ಯ ಸಂಸ್ಥೆಗಳಿಗಾಗಿ, ನಾಟಕ ಕಂಪೆನಿಗಳಿಗಾಗಿ, ಸಿನೆಮಾಗಳಿಗಾಗಿ, ಅನೇಕ ಸಾರ್ವಜನಿಕಕಾರ್ಯಗಳಿಗಾಗಿ ರಾಜಕೀಯಗಳಲ್ಲಿ—ಸಾಮಾಜಿಕಗಳಲ್ಲಿ—ಪ್ರಚಾರಕಾರ್ಯ ನಡೆಸಿದ್ದೇನೆ. ನಾನೇನೂ ಪ್ರಚಾರ ವಿಚಕ್ಷಣನಲ್ಲ. ಮತಿಗೆಟಕಿದಂತೆ, ಕೆಲಸಮಾಡಿರುವೆನು. ನಾನು ... ಮಾಡುವಂತೆ ಪ್ರೋತ್ಸಾಹಿಸಿದ ಮತ್ತು ಸಹಕರಿಸಿ... ರಿಗೆ ನನ್ನ ಕೃತಜ್ಞತೆಗಳು ಸಲಲೇ ಬೇಕು. ಇಂ... ಬಾಯಿಯಲ್ಲಿ ಪ್ರಸಿದ್ಧರಾಗಿರುವ ಅನೇಕ ಪ್ರಚಾರ... ರೊಂದಿಗೆ ನಾನು ಕೆಲಸ ಮಾಡಿರುವೆನು. ಅವರೆಲ್ಲರಿ... ವಿಷಯುವಾಗಿ ಪೂಜ್ಯಭಾವವಿದೆ. ಇದೇ ಕಾರ... ಬೊಂಬೇ ಫಿಲ್ಮ್ ಪಬ್ಲಿಸಿಟಿ ಗ್ರೂಪಿನವರು ನನ್ನನ... ಪ್ರಥಮ ಅಧ್ಯಕ್ಷರನ್ನಾಗಿ ಆರಿಸಿರಬೇಕು.

ಮುಖ್ಯ ವಿಷಯ.

ನನ್ನ ಮೂವತ್ತು ವರ್ಷಗಳ ಅನುಭವದಿಂದ ... ಹೇಳಬಲ್ಲೆ. ಚಿತ್ರಕಲೆ ಮಾತ್ರವಲ್ಲ, ಸಾರ್ವಜನಿಕ ... ದಲ್ಲಿನ ಪ್ರತಿಯೊಂದು ಚಟುವಟಿಕೆಗೂ ಪ್ರಚಾರದ... ಯುವು ಅತ್ಯಾವಶ್ಯಕವಿದೆ. ವ್ಯಾಪಾರ ಸಾಪಾರಗಳು ... ಬಲವಿಲ್ಲದೆ ವರ್ಧಿಸಲಾರವು. ರಾಜಕೀಯಗಳಾಗಲಿ, ... ವಿಷಯುಗಳಾಗಲಿ, ಧಾರ್ಮಿಕ ವಿಷಯುಗಳೇ ಆಗಲಿ ... ಟಣೆಯ ಸಹಾಯ ಹೊಂದಲೇ ಬೇಕು. ಅದು ಪ್ರತಿ... ವಿಷಯದಲ್ಲಿ ಮುಖ್ಯಾಂಗವಾಗಿದೆ.

ಪ್ರಚಾರಕಾರ್ಯ ನಡೆಸುವವನೊಡನೆ ಕೌಶಲ್ಯ... ಇದ್ದರೆ ಸಾಲದು. ಪ್ರಾಮಾಣಿಕತೆ, ಗಾಂಭೀರ್ಯ... ಅವಶ್ಯ ಇವೆ. ಯೋಗ್ಯರೀತಿಯಲ್ಲಿ ಈ ಕಾರ್ಯವನ್ನ... ಸಿದರೆ, ಈ ವೃತ್ತಿಗೆ ಘನತೆಯಿದೆ. ಪ್ರಾಮಾಣಿ... ಗಾಂಭೀರ್ಯದಿಂದ ಪ್ರಚಾರಕಾರ್ಯ ನಡೆಸುವ ಪ್ರ... ಬ್ಬನೂ ಜಗತ್ತಿನ ಅಭಿವೃದ್ಧಿಯಲ್ಲಿ ಸಹಾಯಕನಾಗು...



ಪ್ರಭಾತದವರ "ರಾಮಶಾಸ್ತ್ರಿ" ಚಿತ್ರದಲ್ಲಿ ಅನಂತ ಮರಾಠೆ.



ಬೇಬಿ ಮಂಜುಳಾ (ಪ್ರಭಾತದವರ 'ರಾಮಶಾಸ್ತ್ರಿ' ಚಿತ್ರದಲ್ಲಿ.)



ಹಂಸಾವಾಡ್ಕರ್. (ಪ್ರಭಾತದ... 'ರಾಮಶಾಸ್ತ್ರಿ' ಚಿತ್ರದಲ್ಲಿ ದಾಸಿಯ...

ರ್ತವ್ಯದ ಪವಿತ್ರ ವೇದಿಕೆಯಲ್ಲಿ!



(ಲೇಖಕರು: ಶ್ರೀ. ಬಿ. ವಿ. ಬಾಳಿಗ)

ರು ಮತ್ತು ಕರ್ತವ್ಯ, ಇವೆರಡರಲ್ಲಿ ಶ್ರೇಷ್ಟವಾವುದು? ಶುದ್ಧ ಪ್ರೇಮವು ಎಲ್ಲವನ್ನೂ ಅಲಕ್ಷಿಸಿ ಗೆಲ್ಲು ು. ಆದರೆ ಕರ್ತವ್ಯದ ತೆರೆ ಬಂದಾಗ ಮಾತ್ರ ಹಿಂದೆ ಸರಿವುದು. ಪ್ರೇಮದಿಂದ ಪ್ರೇರಿತರಾದವರು ಧ್ಯವಾದುದನ್ನು ಸಾಧ್ಯವಾಗಿ ಮಾಡಿದುದನ್ನು ಓದಿರುವೆವು. ಇಲ್ಲಿ ಇಬ್ಬರು ಪ್ರೇಮಿಗಳು 'ಕರ್ತವ್ಯ'ದ ತ್ಯತೆಯನ್ನರಿತು ಪ್ರೇಮಕ್ಕೆ ತಿಲಾಂಜಲಿ ಕೊಡುವರು. ಕರ್ತವ್ಯದ ಹೆಸರಲ್ಲಿತ್ತ ಬಲಿದಾನವು ಆ ಪ್ರೇಮಕ್ಕೆ ನ ಕಳೆಗೊಡುತ್ತಿದೆ. ಶುದ್ಧ ಪ್ರೇಮವು ದೈಹಿಕಮೋಹವನ್ನು ಬಯಸುವುದಿಲ್ಲವೆಂದೂ ಈ ಕಥೆ ಧಿಸುತ್ತದೆ. ಲೇಖಕರು ಆಂಗ್ಲಭಾಷೆಯಲ್ಲೋದಿದ ಒಂದು ಕಥೆಯ ಆಧಾರದ ಮೇಲೆ ಇದನ್ನು ದಿರುವರು.

ಸಂಜೆ ಕಂತಿ ಕತ್ತಲಾಗಿತ್ತು. ಆಗಸದಲ್ಲಿ ಅದಾಗಲೇ ಯು ಉದಯಿಸಿದನು. ನಕ್ಷತ್ರಗಳು ಮಿನುಗುತ್ತಿದ್ದುವು. ಗಳು ತಮ್ಮ ಗೂಡುಗಳನ್ನು ಸೇರಿ ಹಾಯಾಗಿ ಮಲ ದ್ದುವು.

ರಮೀನದಿಯ ದಂಡೆಯಲ್ಲಿ ಇಬ್ಬರು ತರುಣರು ನಿಂತಿ ರು. ಇಬ್ಬರಿಗೂ ಸಮಪ್ರಾಯ; ಇಪ್ಪತ್ತೈದರೊಳಗೆ. ಹರಿಯುವ ದೃಶ್ಯದಲ್ಲೇ ಲೀನವಾಗಿತ್ತು ಅವರ ದೃಷ್ಟಿ.

ಒಬ್ಬನು ದೀರ್ಘ ಶ್ವಾಸ ಬಿಟ್ಟ. ಅವನ ಉಡುಪುಗಳನ್ನು ಡುವಾಗ ಅವನೊಬ್ಬ ಮಿಲಿಟರಿ ಆಫೀಸರನಂತೆ ತೋರು ತ್ತು. ಹೌದು, ನಿಜಕ್ಕೂ ಅವನೊಬ್ಬ ಮಿಲಿಟರಿ ಆಫೀ ರನಾಗಿದ್ದನು. ಅಫಘಾನಿಸ್ಥಾನದಲ್ಲಿ ಒಂದು ಅಶ್ವ ಸೇನೆ ಲ್ಲಿ ಕೆಲಸಮಾಡಿಕೊಂಡಿದ್ದನು. ಎರಡು ತಿಂಗಳ ರಜೆ ಲ್ಲಿ ಊರಿಗೆ ಬಂದಿದ್ದ. ಮತ್ತೊಬ್ಬನು ಅವನ ಮಿತ್ರ ಜೇಂದ್ರ. ಅಲ್ಲಿಯ ಒಂದು ಕೊಲೇಜಿನಲ್ಲಿ ಅಧ್ಯಾಪಕ ಮಾಡಿಕೊಂಡಿದ್ದ.

"ನೀನು ದೀರ್ಘಶ್ವಾಸ ಬಿಡಲು ಕಾರಣ?" ರಾಜೇಂ ತನ್ನ ಗೆಳೆಯನೊಡನೆ ಕೇಳಿದ.

"ರಾಜೂ, ವಿಶೇಷವೇನೂ ಇಲ್ಲ. ಅದೊಂದು ಮಾಸಿ ದ ಕಥೆ; ಸುದೀರ್ಘವಿದೆ. ಆ ಕರುಣ ಕಥೆ, ನಾನು ಘಾನಿಸ್ಥಾನಕ್ಕೆ ಹೋದಾಗ ಅದು ನಡೆದು ಹೋಗಿತ್ತು" ಲ್ ಉತ್ತರ ಕೊಟ್ಟ. ಮಿಲಿಟರಿ ಆಫೀಸರನ ಹೆಸರದು ಲ್. "ನಿನಗೆ ಆ ಕಥೆ ಕೇಳುವ ಹಂಬಲವಿದ್ದರೆ ಹೇಳು ನೆ. . . . ಕೇಳು" ಎಂದು ಜುಗಲನು ತನ್ನ ಕಥೆ ಆರಂಭಿ

★ ★ ★

"ಎರಡು ವರ್ಷಗಳ ಹಿಂದೆ ಅಫಘಾನಿಸ್ಥಾನದಲ್ಲಿ ಅಫ್ರಿ ಡನೆ ನಾನು ಸಂಗ್ರಾಮನಿರತನಾಗಿದ್ದೆ. ಯುದ್ಧದ ನಡುವೆ ವಿರಾಮ ದೊರೆತರೆ ಸಮೀಪವಿದ್ದ ವನಪ್ರದೇಶದಲ್ಲಿ ಅತ್ತಿತ್ತ ಅಲೆದು ಸಮಯ ಕಳೆಯುತ್ತಿದ್ದೆ. ಒಂದು ದಿನ ಈ ರೀತಿ ಅಲೆದುಕೊಂಡಿರುವಾಗ ಕಾಡಿನಲ್ಲಿ ನನಗೆ ದಾರಿತಪ್ಪಿತು. ಹಲಹೊತ್ತು ನಡೆದು ಕೊನೆಗೆ ಒಂದು ಸುಂದರವಾದ ಸರೋವರದ ತೀರದಲ್ಲಿ ಬಂದು ಮುಟ್ಟಿದೆ. ಆಗ ರಾತ್ರಿಕಾಲಕ್ಕೆ ಸಮೀಪವಾಗಿತ್ತು. ಕೈಕಾಲು ತೀರಾ ಸೋತುಹೋಗಿ ಬಸವಳಿದು ಬೆಂಡಾದ ನಾನು ಕೆಲ ಹೊತ್ತು ಆ ಸರೋವರದ ತೀರದಲ್ಲಿ ವಿಶ್ರಮಿಸಿದೆ. ನಾನು ಅಲ್ಲಿ ದಣಿವಾರಿಸುತ್ತಿದ್ದಾಗ ಸುಂದರ ರೂಪದ ಓರ್ವ ರಮಣಿಯು ಮಂದಗತಿಯಿಂದ ಆ ಪ್ರದೇಶಕ್ಕೆ ಬರುವವಳಾದಳು. ಅವಳ ಕಂಕುಳಲ್ಲಿ ಕೊಡವಿದ್ದುದನ್ನು ಕಂಡು ಅವಳು ಅಲ್ಲಿಗೆ ಬಂದ ಉದ್ದೇಶವನ್ನು ಅರಿತುಕೊಂಡೆ. ಅವಳನ್ನು ಕಂಡು ಒಮ್ಮೆ ನನ್ನ ಮನಸ್ಸಿನಲ್ಲಿ ಒಂದು ರೀತಿಯ ಭಯ ಉಂಟಾಯಿತು. ಎದೆಯ ನಡುಕ ವೇಗನಾಗತೊಡಗಿತು. ಆದರೆ ಅದು ಕೆಲವೇ ಕ್ಷಣ— ಮರುಕ್ಷಣದಲ್ಲೆ ನಾನು ಆಕೆಯ ಚೆಲುವನ್ನು ಮೋಹಿಸುವವನಾದೆ. ಅವಳೂ ನನ್ನನ್ನು ಕಂಡಾಕ್ಷಣ ಕೊಡವನ್ನು ಕೆಳಗಿರಿಸಿ ನನ್ನನ್ನೇ ಎವೆಯಿಕ್ಕದೆ ದಿಟ್ಟಿಸುತ್ತ ನಿಂತಳು.

"ಒಂದೆರಡು ಕ್ಷಣ ನಮ್ಮಿಬ್ಬರ ತುಟಿಗಳಡಿಯಿಂದ ಮಾತುಗಳು ಹೊರಡಲಿಲ್ಲ. ಕೊನೆಗೆ ನಾನೇ ಮೊದಲು ಮಾತನಾಡುವ ಸಾಹಸ ಕೈಕೊಂಡೆ. ನನ್ನ ಕಥೆ ಎಲ್ಲವನ್ನೂ ಆಕೆಯೊಡನೆ ಆದ್ಯಂತವಾಗಿ ವಿವರಿಸಿದೆ. ಅದನ್ನು ಕೇಳಿ ಅವಳ ತುಟಿಗಳೆಡೆಯಿಂದ ಒಂದು ಚಿಕ್ಕ ನಗು ಮಿಂಚಿತು. ಮುತ್ತಿನಂತಹ ಅವಳ ಹಲ್ಲುಗಳು ಆ ಕ್ಷಣ ಕಾಣಿಸಿಕೊಂಡುವು. ದಾರಿತಪ್ಪಿ ಅಲ್ಲಿಗೆ ಬಂದಿದ್ದ ನನ್ನನ್ನು ಅವಳು ಶಿಬಿರಕ್ಕೆ ಹೋಗುವ ದಾರಿಗೆ ತಂದು ಮುಟ್ಟಿಸಿದಳು. ನಾನು ಶಿಬಿರಕ್ಕೆ ಮರಳಲು ಕಾಲ್ತೆಗೆಯುವಾಗ, "ನನ್ನ ಗುಡಿಸಲು ಇಲ್ಲಿ ಸಮೀಪದಲ್ಲೇ ಇದೆ. ನನ್ನ ಅಜ್ಜಿಯ ಸಂಗಡ ಅಲ್ಲಿ

ವಾಸವಾಗಿದ್ದೇನೆ. ನನ್ನ ತಮ್ಮ ನಾಸೀಮನು ಅಮೀರರ ಸೈನ್ಯದಲ್ಲಿ ಸಿಪಾಯಿಯಾಗಿದ್ದಾನೆ. ನನ್ನ ಹೆಸರು ನಿಸ್ಸಾ. ಮತ್ತೊಮ್ಮೆ ಈ ಸರೋವರದ ತೀರದಲ್ಲಿ ಕಾಣುವ" ಎಂದು ತನ್ನ ಸಮಾಚಾರ ತಿಳಿಸಿ ಆಕೆ ಮನೆಯ ದಾರಿ ಹಿಡಿದಳು.

"ಆ ರಾತ್ರಿ ನನ್ನ ಮನಸ್ಸಿನೊಳಗೆ ಆದ ಆನಂದ ಅಷ್ಟಿಷ್ಟಲ್ಲ. ಮರುದಿನ ಹಾಸಿಗೆಯಿಂದೇಳುವಾಗ ಮೂಡಲಲ್ಲಿ ಹಿಂದೆಂದೂ ಕಾಣದ ಅಪೂರ್ವ ಕಾಂತಿಯನ್ನು ನಾ ಕಂಡೆ. ಯಾವುದೋ ಒಂದು ಅಜ್ಞಾತ ಶಕ್ತಿಯು ನನ್ನನ್ನು ಈ ಪ್ರಪಂಚದಿಂದ ಅತ್ಯಂತ ಉನ್ನತವಿರುವ ಆನಂದಸ್ವರ್ಗಕ್ಕೆ ನನ್ನನ್ನು ಕೊಂಡೊಯ್ದಂತೆ ನನ್ನ ಮನಸ್ಸು ಪುಳಕಿತವಾಗಿತ್ತು. ನಿಸ್ಸಾಳನ್ನು ಮತ್ತೊಮ್ಮೆ ಕಾಣುವ ದಿನವನ್ನು ನಾನು ನಿರೀಕ್ಷಿಸಿಕೊಂಡಿದ್ದೆ.

"ಆ ಶುಭ ದಿನ ಮೂಡಿತು. ಅವಳು ನಿರ್ಣೈಸಿದ್ದ ಸಮಯಕ್ಕೆ ಒಂದು ತಾಸು ಮುಂಚಿತವಾಗಿಯೇ ನಾನು ಸರೋವರದ ಬಳಿ ಬಂದು ಮುಟ್ಟಿದ್ದೆ. ಅವಳೂ ಸಮಯಕ್ಕೆ ಸರಿಯಾಗಿ ಅಲ್ಲಿ ಕಾಣಿಸಿಕೊಳ್ಳಲು ಮರೆಯಲಿಲ್ಲ. ಹಸನ್ಮುಖಿಯಾಗಿ ನಾನಿದ್ದೆಡೆಗೆ ಬಂದಿದ್ದಳಾಕೆ. ಅವಳಿಗೆ ನನ್ನ ಮೇಲೆ ಎಷ್ಟು ಮಮತೆ ಇದೆ ಎಂಬುದು ಅವಳ ಕಣ್ಣುಗಳಲ್ಲಿ ವ್ಯಕ್ತವಾಗುತ್ತಿತ್ತು. ನಡು ಇರುಳು ತನಕ ನಮ್ಮ ಮಾತುಕತೆ ಬೆಳೆಯಿತು. "ಇನ್ನೊಮ್ಮೆ ಕಾಣುವಾ" ಎಂದು ಮೊದಲ ಬಾರಿ ಹೇಳಿದಂತೆಯೇ ಹೇಳಿ ನಾವು ಅಗಲಿದೆವು. ರೀತಿ ನನ್ನ ಕೆಲವು ದಿನಗಳು ಸುಖದಲ್ಲಿ ಕಳೆದು ಹೋ

★ ★ ★

"ಅಂದು ಮಂಗಳವಾರ. ಸಮಯ ನಡುರಾತ್ರೆ. ಮಂದಿ ಸೈನಿಕರು ಶಿಬಿರದ ಹೊರಗೆ ನಿಂತು ನನ್ನನ್ನು ವುದು ಡೇರೆಯಲ್ಲಿ ಮಲಗಿದ್ದ ನನಗೆ ಕೇಳಿಸಿತು. ಎಚ್ಚರವಾದೆ. ಒಬ್ಬ ಸುಂದರ ತರುಣನನ್ನು ಕೈ ಕಾಲ ಬೇಡಿ ತೊಡಿಸಿ ನನ್ನ ಬಳಿಗೆ ಕರತಂದರು. "ಇವ ಶತ್ರು ಗೂಢಚಾರ; ನಮ್ಮ ಶಿಬಿರದ ಸಮಾಚಾರ ಅರಿ ರಹಸ್ಯವಾಗಿ ಇಲ್ಲಿಗೆ ಬಂದಿದ್ದ" ಎಂದು ನಮ್ಮ ಸೈ ಹೇಳಿಕೆಯಾಯಿತು.

"ಆ ತರುಣನು ನನ್ನ ಕಡೆಗೆ ದೀನದೃಷ್ಟಿ ನೋಡಿದ. ಕೊನೆಗೆ ಕಿಳಧ್ವನಿಯಲ್ಲಿ, "ನಿಮಗೆ ನಿ ಪರಿಚಯವಿದೆಯೇ?" ಎಂದು ಕೇಳಿದ. ನಾನು ತ ಲ್ಲಾಡಿಸಿ "ಹೌದೆ"ಂಬ ಮನೋಭಾವ ಸೂಚಿಸಿದೆ. " ಹೆಸರು ನಾಸೀಮ್; ನಿಸ್ಸಾಳ ತಮ್ಮ ನಾನು" ಮತ್ತೊಮ್ಮೆ ನುಡಿದ ಆ ಸುಂದರ ತರುಣ. ಕೆಲವು ನಾನು ಮಾತೆತ್ತಲಿಲ್ಲ. ಏನು ಹೇಳುವುದೆಂಬುದು ಹೋದ ನನ್ನ ಮನಸ್ಸಿಗೆ ತೋಚದೆ ಹೋಯಿತು. 'ತ

ನ್ನ ಬಂಧಮುಕ್ತಗೊಳಿಸು' ಎಂದಿತು ನಿಸ್ಸಾಳ ಮೇಲಿನ ನ್ನ ಅಸಾಧಾರಣ ಪ್ರೇಮ. ಆದರೆ, ಮರುಕ್ಷಣದಲ್ಲಿ ರ್ತವ್ಯ ಸ್ಮರಣೆಯು ಮೇಲೆದ್ದು ನಿಂತಿತು. ಸ್ವಾಮಿನಿಷ್ಠೆಗೂ ೇಮಕ್ಕೂ ನನ್ನ ಮನಸ್ಸಿನಲ್ಲಿ ಕೆಲ ಹೊತ್ತು ತುಮುಲ ಳಗ ನಡೆಯಿತು; ಆದರೆ ಕೊನೆಗೆ ಸ್ವಾಮಿನಿಷ್ಠೆಯೇ ದ್ದಿತು. ನಾನು ಸೈನಿಕರನ್ನುದ್ದೇಶಿಸಿ, "ಅವನನ್ನು ಗಲ್ಲಿ ರಿಸಿರಿ. (ಗೂಢಚಾರರಿಗೆ ಸಲ್ಲುವ ಶಿಕ್ಷೆ)" ಎಂದು ಆಜ್ಞಾ ಪಿದೆ. ಅವರು ಅವನನ್ನು ನನ್ನ ಬಳಿಯಿಂದ ಕರೆದೊ ದರು. ಕೆಲವು ಹಜ್ಜೆ ಮುಂದುವರಿದು ತರುಣನು ಒಮ್ಮೆಲೇ ತಿರುಗಿ, "ನನ್ನನ್ನು ಗಲ್ಲಗೇರಿಸಿದ ಬಳಿಕ ನನ್ನ ಶವದ ೇಲೆ ನಿಸ್ಸಾಳು ನಿಮಗಾಗಿ ಕೊಟ್ಟ ಒಂದು ಓಲೆ ನಿಮಗೆ ಗುವುದು" ಎಂದು ಹೇಳಿ ಪುನಃ ಮುಂದುವರಿದನು.

"ಆ ರಾತ್ರಿ ನನ್ನ ಕಣ್ಣುಗಳು ನಿದ್ದೆ ಕಂಡುದ್ದಿಲ್ಲ. ನವು ಚಂಚಲವಾಗಿತ್ತು. ಮರುದಿನ ಬೆಳಿಗ್ಗೆ ಸೈನಿಕರು ಂದು ಪತ್ರ ತಂದು ನನ್ನ ಕೈಯಲ್ಲಿರಿಸಿದರು. ಆ ಓಲೆಯ ಕ್ಕಣೆ ಈ ರೀತಿಯಾಗಿತ್ತು:


ಪ್ರಿಯಕರಾ,

ಈ ಪತ್ರವು ನಿಮ್ಮ ಕೈಗೆ ಸಿಕ್ಕುವಾಗ ನಾನು ಇಹದಲ್ಲಿರ ರೆ. ಈ ಲೋಕ ಬಿಟ್ಟು ಅಮರ ಸಂತೋಷ ಸಿಗುವ ತಾಣ ಸೇರುವೆ. ನಿಮ್ಮೆದುರು ಗೂಢಚಾರರ ವೇಷದಲ್ಲಿ ಕಾಣಿಸಿಕೊಂಡವಳು ನಾನೇ–ನಿಮ್ಮ ಪ್ರಿಯತಮೆ ನಿಸ್ಸಾ- ನನ್ನ ಕುಲದ ಗೌರವ ಉಳಿಸಲು ಬೇಕಾಗಿ ಈ ಧೀರಕಾರ್ಯದಲ್ಲಿ ಪ್ರವೃತ್ತಳಾದೆ. ನನ್ನ ತಮ್ಮ ನಾಸೀಮನು ಅಂಜುಬುರುಕನಂತೆ ರಣಕ್ಷೇತ್ರದಿಂದ ಪಲಾಯನಗೈದ. ಅವನು ಬಿಟ್ಟು ಹೋದ ಕರ್ತವ್ಯವನ್ನು ಪೂರೈಸಲು ಬೇಕಾಗಿ ನಾನು ಬಲಿದಾನನೀಡಲು ನಿಶ್ಚೈಸಿದೆ. ನಿಮ್ಮನ್ನು ಮತ್ತೊಮ್ಮೆ ಕಾಣುವ ಆಸೆಯಿದೆ. ಆದರೆ ಆ ಸಂದರ್ಶನ ಇಹದಲ್ಲಿಲ್ಲ. ಈ ಹತಭಾಗ್ಯೆಯನ್ನು ಮರೆಯಬೇಡಿ. ನಿಮ್ಮನ್ನೇ ಆ ವರೆಗೆ ಧ್ಯಾನಿಸುತ್ತ ಇರುತ್ತೇನೆ.

ನಿಮ್ಮ ಹತಭಾಗ್ಯೆ ಪ್ರೇಯಸಿ,

"ನಿಸ್ಸಾ".


